
ವಿಜಯನಗರ ಕಾಲದ ಕುಲಕಸುಬುಗಳು

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಾದರಪಡಿಸಿದ ಮಹಾಪ್ರಬಂಧ)



ಸಂಶೋಧನೆ

ಲತಾ. ಬಿ. ಕೆ.

ಮಾರ್ಗದರ್ಶನ

ಡಾ.ಎಸ್.ವೈ.ಸೋಮಶೇಖರ್

ಸಹ ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೯

ವಿಜಯನಗರ ಕಾಲದ ಕುಲಕಸುಬುಗಳು

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧನೆ
ಲತಾ ಬಿ. ಕೆ.

ಮಾರ್ಗದರ್ಶನ
ಡಾ.ಎಸ್.ವೈ.ಸೋಮಶೇಖರ್
ಸಹ ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬
೨೦೧೯

ದೃಢೀಕರಣ ಪತ್ರ

ಶ್ರೀಮತಿ ಲತಾ ಬಿ.ಕೆ. ಇವರು **ವಿಜಯನಗರ ಕಾಲದ ಕುಲಕಸುಬುಗಳು** ಎಂಬ ಶೀರ್ಷಿಕೆಯ ಮಹಾ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ. ಎಸ್. ವೈ. ಸೋಮಶೇಖರ್)
ಮಾರ್ಗದರ್ಶಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸ್ಥಳ : ವಿದ್ಯಾರಣ್ಯ
ದಿನಾಂಕ :

ಪ್ರಮಾಣ ಪತ್ರ

ವಿಜಯನಗರ ಕಾಲದ ಕುಲಕಸುಬುಗಳು ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ. ಎಸ್. ವೈ. ಸೋಮಶೇಖರ್ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Latha B.K.

(ಲತಾ ಬಿ. ಕೆ.)
ಸಂಶೋಧಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸ್ಥಳ : ವಿದ್ಯಾರಣ್ಯ
ದಿನಾಂಕ : 22.3.19.

ವಿಜಯನಗರ ಕಾಲದ ಕುಲಕಸುಬುಗಳು

ಪರಿವಿಡಿ

ಅಧ್ಯಾಯ-೧ : ಪ್ರಸ್ತಾವನೆ / ೧-೧೭

ಅಧ್ಯಾಯ-೨ : ಹಿನ್ನೆಲೆ / ೧೮-೩೩
೨.೧ ಕುಲಕಸುಬುಗಳ ಬೆಳವಣಿಗೆ

ಅಧ್ಯಾಯ-೩ : ವಿಜಯನಗರ ಕಾಲದ ಕುಲಕಸುಬುಗಳು / ೩೪-೧೩೭

ಅಧ್ಯಾಯ-೪ : ನಂಬಿಕೆ, ಆಚರಣೆ ವಿಧಿ-ನಿಷೇಧ, ಪಾರಂಪರಿಕ ಜ್ಞಾನ / ೧೩೮-೨೦೫

ಅಧ್ಯಾಯ-೫ : ಕಸುಬುಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರಗಳು / ೨೦೬-೨೩೩

ಅಧ್ಯಾಯ-೬
ಸಮಾರೋಪ / ೨೩೪-೨೩೯

ಅನುಬಂಧಗಳು / ೨೪೦-೨೫೬

ಗ್ರಂಥಸೂಚಿ

ಛಾಯಾಚಿತ್ರಗಳು

ಸಂಕ್ಷೇಪಸೂಚಿ

ಪಾರಿಭಾಷಿಕ ಪದಕೋಶ

ನಕ್ಷೆ

ಸಂಕ್ಷೇಪ ಸೂಚಿ

ಎ.ಕ.	ಎಫಿಗ್ರಾಫಿಯಾ ಕರ್ನಾಟಿಕ.
ಎ. ಆರ್.	ಆನ್ಯುಯಲ್ ರಿಪೋರ್ಟ್ ಆನ್ ಇಂಡಿಯನ್ ಎಫಿಗ್ರಾಫಿ.
ಇಂ. ಎ.	ಇಂಡಿಯನ್ ಎಫಿಗ್ರಾಫಿ.
ಐ. ಎ.	ಇಂಡಿಯನ್ ಆಂಟಿಕ್ವ್ಯುರಿ.
ಐ ಪಿ ಎಸ್.	ಕ್ರೋನಾಲಾಜಿಕಲ್ ಲಿಸ್ಟ್ ಆಫ್ ಇನ್‌ಸ್ಕ್ರೀಪ್ಸ್‌ನ್ಸ್. ಆಫ್ ದ ಪುದುಕೋಟ್ಟೈ ಸ್ಟೇಟ್
ಎ. ಆರ್. ಐ. ಇ.	ಆರ್ಕ್ಯಾಲಾಜಿಕಲ್ ರಿಪೋರ್ಟ್ ಆಫ್ ಇಂಡಿಯನ್ ಎಫಿಗ್ರಾಫಿ.
ಎಂ. ಎ. ಆರ್.	ಆರ್ಕ್ಯಾಲಾಜಿಕಲ್ ಸರ್ವೇ ಆಫ್ ಮೈಸೂರು ಆನ್ಯುಯಲ್ ರಿಪೋರ್ಟ್.
ಟಿ. ಡಿ. ಐ.	ತಿರುಪತಿ ತಿರುಮಲ ದೇವಸ್ಥಾನಂ ಇನ್‌ಸ್ಕ್ರೀಪ್ಸ್‌ನ್ಸ್.
ಕೆ. ಐ.	ಕರ್ನಾಟಕ ಇನ್‌ಸ್ಕ್ರೀಪ್ಸ್‌ನ್ಸ್.
ವಿ. ಪಿ. ಆರ್.	ವಿಜಯನಗರ ಪ್ರೋಗ್ರೇಸ್ ರಿಪೋರ್ಟ್.
ಎಸ್, ಐ. ಐ.	ಸೌತ್ ಇಂಡಿಯನ್ ಇನ್‌ಸ್ಕ್ರೀಪ್ಸ್‌ನ್ಸ್.
ಬಿ ಕೆ ಐ	ಬಾಂಬೆ ಕರ್ನಾಟಕ ಇನ್‌ಸ್ಕ್ರೀಪ್ಸ್‌ನ್ಸ್.
ಕ ವಿ ವಿ ಶಾ ಸಂ.	ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ
ಕ. ಸಾ. ಪ. ಪ.	ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ.
ಕ. ಸಾ. ಪ.	ಕನ್ನಡ ಸಾಹಿತ್ಯ ಪರಿಷತ್
ಕಂ. ನ. ವಿ.	ಕಂಠೀರವ ನರಸರಾಜ ವಿಜಯಂ.
ಪ್ರಾ ಕಂ. ಇ.	ಪ್ರಾವಾಸಿ ಕಂಡ ಇಂಡಿಯಾ.
ಇ. ದ.	ಇತಿಹಾಸ ದರ್ಶನ.
ಚ. ಪು.	ಚೆನ್ನಬಸವ ಪುರಾಣ.
ಪಂ. ಭಾ.	ಪಂಪ ಭಾರತ.
ಪು. ದಾ. ಕೀ.	ಪುರಂದರ ದಾಸರ ಕೀರ್ತನೇಗಳು.
ಭಿ. ಬ. ಪು.	ಭೀಮ ಕವಿಯ ಬಚ್ಚವ ಪುರಾಣ.
ಶಾ. ಪು.	ಶಾಂತಿನಾಥ ಪುರಾಣ.
ಜೈ. ಭಾ.	ಜೈಮಿನಿ ಭಾರತ.

ಕೋ ರಾ ಚ.	ಕೋಮಾರ ರಾಮನ ಚರಿತೆ.
ಹೋ ಕು ರಾ ಸಾ.	ಹೋಸ ಕುಮಾರರಾಮನ ಸಾಂಗತ್ಯ.
ಪು. ಸಾ. ದ.	ಪುರಂದರ ಸಾಹಿತ್ಯ ದರ್ಶನ.
ರಾ. ಚ.	ರಾಮನಾಥ ಚರಿತೆ.
ಭ. ವೈ.	ಭರತೇಶ ವೈಭವ.
ನೇ. ಪು.	ನೇಮಿನಾಥ ಪುರಾಣ.
ಮ. ಮ. ವಿ.	ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ.
ಮೋ. ತ.	ಮೋಹನ ತರಂಗಿಣಿ.
ಚಂ. ಸಾ.	ಚಂದ್ರಪ್ರಭಾ ಸಾಂಗತ್ಯ.
ನ. ಚ.	ನಳ ಚರಿತೆ.
ದ ಚ.	ದಶಕುಮಾರ ಚರಿತೆ

KEY TO ABBREVIATIONS

ARIE	-	Annual Report of Indian Epigraphy
BKI	–	Bombay Karnataka Inscriptions
EC	–	Epigraphia Carnatica
EC(old)	–	Epigraphia Carnatica (Rice B.L. Ed)
EI	–	Epigraphia Indica
KI	–	Karnatak Inscriptions
IA	–	Indian Antiquary
ICHR	–	Indian Council of Historical Research
MAR	–	Mysore Archaeological Report
QJMS	–	Quarterly Journal of the Mythic Society
SII.	–	South Indian Inscriptions
I A .	–	Indian Epigraphy
TDI .	–	Thirumala Devastanam Inscriptions
VPR .	–	Vijayanagara Progress Report.
BKI .	–	Bombay Karnataka Inscriptions

ಅಧ್ಯಾಯ-ಒಂದು

ಪ್ರಸ್ತಾವನೆ

ದಕ್ಷಿಣ ಭಾರತದಲ್ಲಿ ವಿಜಯನಗರ ಸಾಮ್ರಾಜ್ಯವು ಹಂಪೆಯನ್ನು ಸುಮಾರು ೨೫೦ ವರ್ಷಗಳ ಕಾಲ ರಾಜಧಾನಿ ಕೇಂದ್ರವಾಗಿಟ್ಟುಕೊಂಡು ಆಳ್ವಿಕೆ ಮಾಡಿತು. ಈ ಮನೆತನ ಕುರಿತು ಅಧ್ಯಯನಗಳಾದಷ್ಟು ಬೇರೆ ಯಾವ ಅರಸು ಮನೆತನದ ಮೇಲೂ ನಡೆದಿರುವುದಿಲ್ಲ. ವಿಜಯನಗರ ಸಾಮ್ರಾಜ್ಯದ ವಿವಿಧ ಆಯಾಮಗಳನ್ನು ಪರಿಚಯಿಸುವ ಹಲವು ಕೃತಿಗಳು ಸಾವಿರಾರು ಲೇಖನಗಳನ್ನು ವಿದ್ವಾಂಸರು, ಸಂಶೋಧಕರು, ಹವ್ಯಾಸಿಗರು ಪ್ರಕಟಿಸಿದ್ದಾರೆ. ಕ್ರಿ.ಶ. ೧೩೩೬ರಲ್ಲಿ ಸ್ಥಾಪನೆಗೊಂಡ ಈ ಸಾಮ್ರಾಜ್ಯವನ್ನು ಸಂಗಮ, ಸಾಳುವ, ತುಳುವ ಮತ್ತು ಅರವೀಡು ಎಂಬ ನಾಲ್ಕು ಮನೆತನಗಳು ಆಳ್ವಿಕೆ ಮಾಡಿವೆ. ಈ ಸಾಮ್ರಾಜ್ಯದ ಆಳ್ವಿಕೆ ಕಾಲದಲ್ಲಿ ವಿದೇಶಿ ಪ್ರವಾಸಿಗರಾದ ಅಬ್ದುಲ್ ರಜಾಕ್, ಡೊಮಿಂಗೊ ಪೆಯಾಸ್. ನಿಕೋಲೊ ಕೊಂಟಿ, ನ್ಯೂನಿಜ್, ಬಾರ್ಬೊಸಾ ಇನ್ನು ಅನೇಕರು ಭೇಟಿ ನೀಡಿ ಅಂದಿನ ಸಾಮ್ರಾಜ್ಯದ ವೈಭವವನ್ನು ಕಣ್ಣಾರೆ ವರ್ಣಿಸಿದ್ದಾರೆ ಕ್ರಿ.ಶ. ೧೫೬೫ರವರೆಗೆ ವಿಸ್ತಾರಗೊಂಡ ಸಾಮ್ರಾಜ್ಯವು ರಕ್ಕಸಗಿ-ತಂಗಡಗಿ ಯುದ್ಧದಿಂದ ಅವಸಾನದತ್ತ ಸಾಗಿತು.

ಸುಮಾರು ೨೫೦ ವರ್ಷಗಳಷ್ಟು ದೀರ್ಘಕಾಲ ಆಳ್ವಿಕೆ ಮಾಡಿದ ವಿಜಯನಗರವು ತುಂಬಾ ವಿಶಾಲವಾದ ಸಾಮ್ರಾಜ್ಯವಾಗಿದ್ದಿತು ಇಲ್ಲಿ ಅನೇಕ ಬಗೆಯ ಸಮುದಾಯಗಳಿದ್ದವು, ಅವರು ತಮ್ಮದೇ ಆದಂತಹ ಕಸುಬುಗಳನ್ನು ಹೊಂದಿದ್ದರು. ಇದಕ್ಕೆ ವಿದೇಶಿ ಪ್ರವಾಸಿಗರ ವರದಿ, ಶಾಸನ, ಪುರಾತತ್ವೀಯ ಆಕರಗಳು ವಿಪುಲ ಮಾಹಿತಿ ಒದಗಿಸುತ್ತವೆ. ಅಂದು ಕೃಷಿ, ಪಶುಪಾಲನೆ, ನೇಕಾರ, ಪುರೋಹಿತ, ನೀರುಗಂಟಿ, ಮೀನುಗಾರಿಕೆ, ಕುಂಬಾರಿಕೆ, ಕಮ್ಮಾರಿಕೆ, ಮರಗೆಲಸ, ಕ್ಷೌರಿಕ, ಬಳೆಗಾರ, ಕಂಚುಗಾರ, ಅಕ್ಕಸಾಲಿಗ, ಕಸೂತಿ ಇನ್ನು ಹಲವಾರು ಕಸುಬುದಾರ ಸಮುದಾಯಗಳಿಂದ ವಿಜಯನಗರ ಸಾಮ್ರಾಜ್ಯ ವರ್ಣಮಯವಾಗಿತ್ತು. ಇವು ಅಂದಿನ ಪ್ರಮುಖ ಕುಲಕಸುಬುಗಳಾಗಿದ್ದು ಇವುಗಳ ಅಧ್ಯಯನ ಅತ್ಯಂತ ಅಗತ್ಯವಾಗಿದೆ. ಇವುಗಳ ಅಧ್ಯಯನದಿಂದ ವಿಜಯನಗರ ಕಾಲದ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ನೈಜಸಂಗತಿಗಳು ಬೆಳಕಿಗೆ ಬರುತ್ತವೆ. ಈ ಹಿನ್ನೆಲೆಯಲ್ಲಿ **ವಿಜಯನಗರ ಕಾಲದ ಕುಲಕಸುಬುಗಳು** ಎಂಬ ಶೀರ್ಷಿಕೆಯ ಅಡಿಯಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ.

ಭಾರತೀಯ ಸಮಾಜದ ಸಾಂಪ್ರದಾಯಿಕ ಮತ್ತು ಪೂರ್ವಚಾರಿತ್ರಿಕ ಮನೋಭಾವದೊಂದಿಗೆ ಅತಿನಿಷ್ಠೆಯ ಆಚಾರ ವಿಚಾರ ಮತ್ತು ರೂಢಿಗಳನ್ನು ಆಧಾರವಾಗಿಟ್ಟುಕೊಂಡು, ಯಾವುದೇ

ಬದಲಾವಣೆಯನ್ನೂ ಮಾಡಿಕೊಳ್ಳದೆ ವಿಜಯನಗರ ಕಾಲದಲ್ಲೂ ಮುಂದುವರಿಯಿತು. ಅಂದು ಪ್ರಚಲಿತವಿದ್ದ ಜಾತಿವ್ಯವಸ್ಥೆಯು ನಾಲ್ಕು ಶತಮಾನಗಳಲ್ಲಿ ಮತ್ತು ಸಾಮ್ರಾಜ್ಯದ ಪತನಾನಂತರವೂ ಅನೇಕ ಉಪಜಾತಿಗಳ ಸೇರ್ಪಡೆಯೊಡನೆ ಮುಂದುವರಿದಿದೆ. ಪ್ರಮುಖ ಹದಿನೆಂಟು ಜಾತಿಗಳನ್ನು ಎಡಗೈ ಮತ್ತು ಬಲಗೈ ಗುಂಪುಗಳೆಂದು ವಿಂಗಡಿಸಿದ್ದು ಅದು ಇಂದಿಗೂ ಮುಂದುವರಿದುಕೊಂಡು ಬಂದಿದೆ. ವಿಜಯನಗರ ಕಾಲದ ಗಿರಿಜನ ವರ್ಗಗಳು ಮತ್ತು ಮೂಲನಿವಾಸಿ ಪಂಗಡಗಳನ್ನು ಸ್ವತಂತ್ರ ಭಾರತದಲ್ಲಿ ಬಹುಮಟ್ಟಿಗೆ ಪರಿಶಿಷ್ಟ ಜಾತಿ ಮತ್ತು ವರ್ಗಗಳೆಂದು ವರ್ಗೀಕರಿಸಲಾಗಿದೆ.

ಜನಾಂಗೀಯ ಅಧ್ಯಯನಗಳು ಕೇವಲ ಮಾನವಶಾಸ್ತ್ರಜ್ಞನಿಗೆ ಮಾತ್ರ ಮೀಸಲು ಅನ್ನುವಂತಹ ಕಾಲವೊಂದಿತ್ತು. ಆದರೆ ಇವತ್ತಿನ ಹೊಸ ಆಲೋಚನಾ ಕ್ರಮ ಹೊಸ ಹೊಸ ಶಿಸ್ತುಗಳಿಂದಾಗಿ ಈ ಭಾವನೆಗಳು ಬದಲಾಗುತ್ತಿವೆ. ಸಮಾಜ ಸಮುದಾಯ ಹೀಗೆ ಯಾವುದೇ ಒಂದರ ಬಗ್ಗೆ ಸಂಶೋಧನೆ ನಡೆಸಬೇಕಾದರೆ ಅಂತರ್‌ಶಿಸ್ತೀಯ ಅಧ್ಯಯನದ ಮನೋಭಾವನೆ ಇಂದು ಸಂಶೋಧಕರಲ್ಲಿ ಅವಶ್ಯಕವೆನಿಸಿದೆ. ಪ್ರಾಯಶಃ ಇಂದು ವಿಭಿನ್ನ ಬುಡಕಟ್ಟು, ಕಸುಬು, ಸಮುದಾಯ, ಸಂಸ್ಕೃತಿಗಳ ಅಭ್ಯಾಸದ ಅಧ್ಯಯನವೇ ಸರಿ ಅನಿಸುತ್ತದೆ. ಒಂದು ಕಸುಬಿನ ರೀತಿ ನೀತಿ ಸಂಸ್ಕೃತಿ ಸಮಾಜವನ್ನು ಅರಿಯಬೇಕಾದಲ್ಲಿ ಅಂದಿನ ಕಸುಬುಗಳು ಹಾಗೂ ಅವರು ಅನುಸರಿಸುವ ನಂಬಿಕೆ ಸಂಪ್ರದಾಯ, ಆಚರಣೆ, ವಿಧಿ, ನಿಷೇಧ, ಸಮಸ್ಯೆ, ಸವಾಲು, ವೃತ್ತಿಗೆ ಅನುಗುಣವಾಗಿ ಹುಟ್ಟಿಕೊಂಡಿರುವ ಕುಲಗಳು ಜೀವಂತವಾಗಿಟ್ಟಿರುವ ಆ ಸಮುದಾಯದ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕ.

ಪ್ರಸ್ತುತ ಅಧ್ಯಯನದಲ್ಲಿ ವೃತ್ತಿಯಾಧಾರಿತ ಬದುಕನ್ನು 'ಕುಲಕಸುಬು' ಎಂಬುದಾಗಿ ಸಂಬೋಧಿಸಲಾಗಿದೆ. 'ಕುಲಕಸುಬು' ಎಂಬ ಪದಕ್ಕೆ ಇಂಗ್ಲೀಷ್‌ನಲ್ಲಿ Hereditary Profession, Family Profession, ಎಂಬ ಅರ್ಥಗಳಿವೆ. ಮನೆತನದ ವೃತ್ತಿ ವಂಶಪರಂಪರಾಗತ ಎನ್ನುವ ಅರ್ಥವನ್ನು ಸೂಚಿಸುತ್ತದೆ. ವೃತ್ತಿಗೆ ಅನುಗುಣವಾಗಿ ಅಂದಿನ ಜೀವನ ಕ್ರಮ ಬಳಕೆಗೆ ಬಂದಿದೆಯೆನ್ನುವುದು ಸ್ಪಷ್ಟ

ಇನ್ನೊಂದು ಅರ್ಥವೆಂದರೆ vocation ಎಂದರೆ ಅರ್ಹತಾಭಾವನೆ, ನಿರ್ದಿಷ್ಟ ಉದ್ಯೋಗ, ವೃತ್ತಿ, ಕಸುಬು, ಉಪಕಸುಬು ಎಂದು vocation, profession regularly followed ವೃತ್ತಿ, ಕಸುಬು ಎನ್ನುವ ಅರ್ಥವನ್ನು ನೀಡಿದರೆ avocation minor occupation hobby pursued in addition to ones regular work ಎಂದು ಉಪವೃತ್ತಿ, ಹವ್ಯಾಸ ಎಂದು ತಿಳಿದುಬರುತ್ತದೆ.

Hereditary ವಂಶಪಾರಂಪರ್ಯವಾಗಿ ಬರುವ, ಪರಂಪರಾಗತ ಆನುವಂಶಿಕ [passed on form parent to child or form one generation to another: coming form one's ancestors]

ಈ ಮೇಲೆ ತಿಳಿಸಿರುವ ಅರ್ಥಗಳಿಂದ ಕುಲಕಸುಬು ಎಂದರೆ ಮನೆತನದ ವೃತ್ತಿ, ವಂಶಪರಂಪರೆಯ ವೃತ್ತಿಯಾಗಿದೆ. [Hereditary profession family profession].

ಕುಲ (Clan–ಕುಲ) ಎಂಬುದು ಬಂಧುತ್ವ ವ್ಯವಸ್ಥೆಗೆ ಸಂಬಂಧಿಸಿದ ಮುಖ್ಯ ಪರಿಕಲ್ಪನೆಗಳಲ್ಲೊಂದು. ಇದು ಆದಿವಾಸಿ ಸಮುದಾಯದ ಅವಿಭಾಜ್ಯ ಅಂಗ. ಆದಿವಾಸಿ ಸಮುದಾಯವನ್ನು ವಿಭಿನ್ನ ಕುಲಗಳ ಒಂದು ಸಮುಚ್ಚಯ ಎಂದು ಕರೆಯುವುದಿದೆ. ಕುಲ ಎಂಬುದು ತಾಯಿ ಇಲ್ಲವೆ ತಂದೆ ಕಡೆಯ ಬಂಧುಗಳ ಆಧಾರದ ಮೇಲೆ ರಚಿತವಾಗಿರುವ ಒಂದು ಏಕಪಕ್ಷೀಯ ಬಂಧುತ್ವ ಸಮೂಹ; ಕುಲ ಎಂದರೆ ಸಮೂಹ ಎಂದರ್ಥ. ಯಾವುದೇ ಒಂದು ಸಾಮಾನ್ಯ ಲಕ್ಷಣವುಳ್ಳ ಸಮೂಹವನ್ನು ಕುಲವೆಂದು ಕರೆಯಬಹುದು. ಭಾರತದಲ್ಲಿ ಒಂದೇ ಕಸುಬನ್ನೇ ಆಧಾರವಾಗಿಟ್ಟುಕೊಂಡು ಒಂದೇ ಕಸುಬನ್ನು ಮಾಡುವವರಿಗೆಲ್ಲ ಒಂದು ಕುಲದವರು ಎಂದೇ ಪರಿಗಣಿಸಲಾಗಿದೆ. ಇದರಿಂದಲೇ ಕುಲಕಸುಬು ಎನ್ನುವ ಶಬ್ದ ಬಂದಿದೆ.

ಕುಲಕ್ಕೆ ಒಂದು ಕಸುಬು ನಿರ್ದಿಷ್ಟವಾದಾಗ, ಯಾರೂ ತಮ್ಮ ಕಸುಬುಗಳನ್ನು ಬದಲಾಯಿಸಬಾರದು ಎಂಬ ನಂಬಿಕೆಯು ಬೆಳೆದುಬಂದಿದೆ. ಅಂದರೆ ಪ್ರತಿಯೊಬ್ಬರೂ ತಮ್ಮ ಕಸುಬುಗಳನ್ನೇ ಮಾಡಬೇಕು ಎಂದು ನಿರ್ಧರಿಸಿದಾಗ ಆಯಾ ಕುಲದಲ್ಲಿ ಹುಟ್ಟಿದವರೆಲ್ಲರೂ ತಮ್ಮ ಕಸುಬನ್ನೇ ಮಾಡಬೇಕಾಗುತ್ತದೆ. ಇಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜನರಿಂದಲೇ ಕಸುಬುಗಳು ಬೆಳೆದುಬಂದಿತು. ಕುಲ, ಜಾತಿ, ಶಬ್ದಗಳನ್ನು ಒಂದೇ ಅರ್ಥದಲ್ಲಿ ಉಪಯೋಗಿಸುವುದಕ್ಕೂ ಇದೇ ಕಾರಣ. ಆದುದರಿಂದ ಇಲ್ಲಿ ನಾವು ಕುಲಕಸುಬು ಎಂದರೆ ಮನೆತನದ ಉದ್ಯೋಗ, ಪಾರಂಪರಗತ ವೃತ್ತಿ, ಜಾತಿವೃತ್ತಿ, ಎಂದೆಲ್ಲ ಅರ್ಥೈಸಬಹುದು. ಕಸುಬು, ಕಲೆಗಾರಿಕೆ, ವೃತ್ತಿಗಾರಿಕೆ, ಗುಡಿಕೈಗಾರಿಕೆ, ಗೃಹಕೈಗಾರಿಕೆ ಎಂಬ ಪ್ರಯೋಗಗಳು ಈ ಕಸುಬಿನ ವಿವಿದಾರ್ಥವನ್ನು ಬಿಂಬಿಸುತ್ತವೆ.

ಭಾರತೀಯ ಸಮಾಜದಲ್ಲಿ ಕುಲದ ಬಗ್ಗೆ ಈ ರೀತಿ ತಿಳಿಸುತ್ತಾರೆ. ರಕ್ತ ಸಂಬಂಧಿಗಳು ಜೊತೆಗೂಡಿ ಕೆಲಸ ಮಾಡುವುದರೊಂದಿಗೆ ಎಲ್ಲರೂ ಜಂಟಿಯಾಗಿ ಆಸ್ತಿಯನ್ನು ಹೊಂದಿ ಅನುಭವಿಸುವವರಿಗೆ ಕುಲದವರು ಅಥವಾ ಕುಲಸಮುದಾಯದವರೆಂದು ಕರೆಯಬಹುದು. ಕುಲವಿಭಜನೆಗೆ ಕಸುಬುಗಳು ಮುಖ್ಯವಾದ ಆಧಾರ. ಒಂದೇ ಕಸುಬನ್ನು ಮಾಡುವವರು ಒಂದೇ ಕುಲದವರು. ಕಸುಬುಗಳ ಆಧಾರದ ಮೇಲೆ ವಿಭಾಗವಾಗಿರುವ ಸಮುದಾಯಗಳು ಕುಲಗಳಾಗಿ ಬೆಳೆದವು. ಬೇರೆ ಬೇರೆ ವೃತ್ತಿಗಳ ಆಧಾರದ ಮೇಲೆ ಕುಲಗಳಿಗೆ ಕೊಟ್ಟಿರುವ ಹೆಸರುಗಳೆಂದರೆ ಕುಲಕಸುಬುಗಳು ಏನೆಂಬುದನ್ನು ಅರ್ಥಮಾಡಿಕೊಳ್ಳಬಹುದು.

ಜಾತಿ ಎಂಬುದು ಭಾರತದ ಒಂದು ವಿಶಿಷ್ಟ ಸಾಮಾಜಿಕ ವ್ಯವಸ್ಥೆ. ಅದು ಎಲ್ಲಿಯೂ ಇಲ್ಲದ ಒಂದು ವ್ಯವಸ್ಥೆಯೆಂದು ಕೆಲವರು ಹೇಳುತ್ತಾರೆ. ಈ ವಿಚಾರದಲ್ಲಿ ಡಿ.ಡಿ. ಕೊಸಾಂಬಿಯವರು ಮಾನವನ ವಿಕಾಸಶಾಸ್ತ್ರ ಹಾಗೂ ಇತಿಹಾಸ, ಎರಡನ್ನೂ ಸಮಯನ್ವಯಗೊಳಿಸಿ ಭಾರತದ ಸಾಮಾಜಿಕ ಜೀವನದಲ್ಲಿ ಬಹಳ ಪ್ರಾಚೀನ ಕಾಲದಿಂದ ಈ ಜಾತಿ ಪದ್ಧತಿ ಹರಿದುಬಂದಿರುವ ರೀತಿಯನ್ನು ವಿಶ್ಲೇಷಣೆ ಮಾಡಿದ್ದಾರೆ.

ಮನುಷ್ಯನ ಜೀವನಾಧಾರವೇ ವೃತ್ತಿ, ವೃತ್ತಿಯಿಲ್ಲದೆ ಜೀವಿಸಲು ಕಷ್ಟಸಾಧ್ಯ. ಹೀಗಾಗಿ ಮನುಕುಲದ ಚರಿತ್ರೆಯ ಆರಂಭದಿಂದಲೂ ಒಂದಿಲ್ಲೊಂದು ವೃತ್ತಿಯನ್ನು ಕೈಗೊಳ್ಳುವುದು

ಅವಶ್ಯವಾಗಿದ್ದಿತು. ಇದರಲ್ಲಿ ಪ್ರಧಾನ ವೃತ್ತಿಗಳು ಅನೇಕ ಉಪವೃತ್ತಿಗಳಿಗೆ ದಾರಿ ಮಾಡಿಕೊಟ್ಟಿರಬಹುದು. ಮುಂದೆ ಈ ಉಪವೃತ್ತಿಗಳಲ್ಲಿಯೇ ಮತ್ತೆ ಒಳವೃತ್ತಿಗಳು ಹುಟ್ಟಿಕೊಂಡಿರುವ ಸಾಧ್ಯತೆಯಿದೆ. ಇದರಿಂದಲೇ ಕುಲ, ಉಪಕುಲಗಳು ಇರುವುದನ್ನು ಕಾಣಬಹುದು. ಇದು ಅವರನ್ನು ಗುರುತಿಸಲು ಸಹಾಯಕಾರಿಯಾಗಿದೆ. ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದ ಹಾಗೆ ನಾಲ್ಕು ಮನೆತನಗಳಲ್ಲಿ ತುಳುವ ಸಂತತಿಗೆ ಸಂಬಂಧಿಸಿದ ಹಾಗೆ ಕೃಷ್ಣದೇವರಾಯ ತನ್ನ ಹೆಂಡತಿಯನ್ನು ಅವಳು ಮಾಡುತ್ತಿರುವ ಕಸುಬಿನ ಆಧಾರದ ಮೇಲೆ, ಅವಳನ್ನು ಗುರುತಿಸಿರುವುದು ಕಾಣಬಹುದು. ಹಾಗೆ ಇಲ್ಲಿ ಅನೇಕ ಅರಸರು, ಬೇಡಕುಲದವರು, ಕಾವಲುಗಾರರು, ಮೀನುಗಾರರು, ಅಂಬಿಗ, ಚಕ್ರರು, ಜ್ಯಾಜಗಾರರು, ಕುರುಬರು ಇನ್ನು ಮುಂತಾದ ವೃತ್ತಿಗಳಿಂದ ಅವರನ್ನು ಇಂದಿನ ದಿನಗಳವರೆಗೆ ಗುರುತಿಸಿರುವುದನ್ನು ಕಾಣಬಹುದು.

ಕರ್ನಾಟಕ ಶಾಸನ ಮತ್ತು ಸಾಹಿತ್ಯ ಕೃತಿಗಳಲ್ಲಿ ಹದಿನೆಂಟು ಜಾತಿಗಳ ವಿಪುಲ ಉಲ್ಲೇಖಗಳನ್ನು ಗಮನಿಸಿದರೆ ಆ ಕಾಲದಲ್ಲಿ ಹದಿನೆಂಟು ಕುಲಗಳನ್ನು ಸಾಮಾಜಿಕವಾಗಿ ಒಪ್ಪಿಕೊಂಡಿದ್ದರೆಂದು ಭಾವಿಸಬೇಕಾಗುತ್ತದೆ. ಕೆಳಹಂತದವೆಂದು ಪರಿಗಣಿತವಾದ ಅನೇಕ ಕುಲ ಮತ್ತು ವೃತ್ತಿಗಳು ಒಂದೇ ಎಂಬಂತೆ ಭಾವಿಸಲ್ಪಟ್ಟಿವೆ. ಶಾಸನಗಳಲ್ಲಿ ಕಂಡುಬರುವ ಅಂತಹ ಕೆಲವು ವೃತ್ತಿಗಳು ಹೀಗಿವೆ: ಕಂಚುಗಾರ, ಅಕ್ಕಸಾಲೆ, ಕಮ್ಮಾರ, ಬಡಗಿ, ಕುಂಬಾರ, ಬಳೆಗಾರ, ಮೇದರ, ದೀವರ, ಕುರುಬ, ತೆಲ್ಲಿಗ, ನಾವಿಂದ ಇನ್ನೂ ಮುಂತಾದ ವೃತ್ತಿಕಾರಕ ಉಲ್ಲೇಖಗಳು ಶಾಸನಗಳಲ್ಲಿ ದೊರೆಯುತ್ತವೆ. ಹಲವಾರು ವೃತ್ತಿಗಳನ್ನು ಅನುಸರಿಸುತ್ತಿದ್ದ ವಿವಿಧ ವೃತ್ತಿಕಾರರನ್ನು ಕುರಿತು ಅನೇಕ ವಿದ್ವಾಂಸರು ಚರ್ಚಿಸಿರುವುದನ್ನು ಕಾಣಬಹುದು. ದಕ್ಷಿಣ ಭಾರತವು ಒಂದು ವಿಶಿಷ್ಟ ರೀತಿಯ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಸಂಪ್ರದಾಯದ ಪ್ರತೀಕವಾಗಿದೆ.

ಮಾನವ ಒಬ್ಬ ಸಾಮಾಜಿಕ ಪ್ರಾಣಿ, ಸಾಮಾಜಿಕ ಕ್ರಮಗಳು ಆತನ ಜೀವನ ವಿಧಾನವನ್ನು ನಿರ್ಧರಿಸುತ್ತವೆ. ಮೂಲಭೂತ ಅಗತ್ಯ ಹಾಗೂ ಆಸೆಗಳಿಂದಾಗಿ ಬೇರೊಬ್ಬ ಮಾನವನೊಂದಿಗೆ ಹಾಗೂ ಬೇರೊಂದು ವೃತ್ತಿ, ಉಪವೃತ್ತಿಯನ್ನು ಅನುಸರಿಸುತ್ತಿರುವುದನ್ನು ಕಾಣಬಹುದು. ಹಿಂದಿನಿಂದಲೂ ಒಂದು ವೃತ್ತಿಯು ಮನೆತನದಿಂದ ಹಾಗೂ ವಂಶಪಾರಂಪರ್ಯವಾಗಿ ಬಂದಿದೆ. ಆದರೆ ಪ್ರಸ್ತುತ ಸಂದರ್ಭದಲ್ಲಿ ಸಮಾಜಕ್ಕೆ ಬದಲಾವಣೆಯನ್ನು ತರುವ ನೆಪದಲ್ಲಿ ಹಾಗೂ ಪರಸ್ಪರ ನೆರವು, ಅಧಿಕಾರ ಉಪಯೋಗ ಮತ್ತು ವಿಧಾನಗಳ ವ್ಯವಸ್ಥೆಯೇ ಆಗಿದೆ ಎಂದು ಹೇಳಬಹುದು.

ಆಹಾರವನ್ನು ಸಂಗ್ರಹಿಸಲು ಕಷ್ಟಪಡುತ್ತಿದ್ದ ಆದಿಮಾನವ ಅನೇಕ ಪ್ರಾಣಿಗಳನ್ನು ಸಾಕತೊಡಗಿದ. ಹಾಲು, ಹಾಲಿನ ಉತ್ಪನ್ನಗಳಾದ ಮೊಸರು, ಬೆಣ್ಣೆ, ತುಪ್ಪ ನೀಡುತ್ತಿದ್ದ, ಇತರ ಉತ್ಪನ್ನಗಳಾದ ಉಣ್ಣೆಯನ್ನು ನೀಡುತ್ತಿದ್ದ ಕುರಿಗಳನ್ನು ಸಾಕತೊಡಗಿದ. ಈ ವೃತ್ತಿಯು ಭಾರತದಾದ್ಯಂತ ಕಂಡುಬರುತ್ತದೆ. ಕಾಲಕ್ರಮೇಣ ಅದರ ಉಣ್ಣೆಯನ್ನು ಉಪಯೋಗಿಸತೊಡಗಿದ ಇದರಿಂದ ಅನೇಕ ರೀತಿಯ ಕಸುಬು ವೃತ್ತಿಗಳು ಹುಟ್ಟಿಕೊಂಡವು. ಉದಾ: ನೇಯ್ಗೆ, ಬಡಗಿ, ಮಡಕೆ, ಕಸೂತಿ. ಈ ರೀತಿಯ ಅನೇಕ ಕೆಲಸಗಳು ರೂಪುಗೊಂಡಿರುವುದನ್ನು ಕಾಣಬಹುದು.

ಕುಲಕ್ಕೆ ಮಾರ್ಗದರ್ಶಕರಿದ್ದರೂ ಕುಲದ ಹಿರಿಯರಿಗೆ 'ಕುಲ ಪಂಚರು' ಎಂದು ಕರೆಯುವರು. ಕುಲದ ಪಂಚರು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಪ್ರಮುಖರಾಗುತ್ತಾರೆ. ಬೇಟೆ, ಪಶುಪಾಲನೆ ಕೃಷಿಯನ್ನು ಯಾರು, ಯಾವ ಕೆಲಸ ಮಾಡಬೇಕು, ಯಾವ ಕುಲದವರು ಕೆಲಸಗಳನ್ನು ನಿರ್ವಹಿಸಬೇಕು ಎಂದು ನಿರ್ಧರಿಸುವರು. ರಕ್ತಸಂಬಂಧಿಗಳ ಒಳಜಗಳಗಳನ್ನು ಇವರೇ ಪರಿಹರಿಸುವರು ಸಾಮಾನ್ಯವಾಗಿ ಹಿರಿಯರು ವಿಶೇಷ ಗೌರವ ಹೊಂದಿರುತ್ತಿದ್ದರು.

ಪ್ರಾಚೀನ ಕಾಲದಲ್ಲಿ ಯಾವುದೇ ರೀತಿಯ ಜಾತಿ ಪದ್ಧತಿಗಳು ಇರಲಿಲ್ಲ. ಅವರು ಮಾಡುವ ಕಾಯಕದಿಂದ ಅವರ ಸಮೂಹವನ್ನು ಗುರುತಿಸಲಾಗುತ್ತಿತ್ತು. ನಂತರ ದಿನಗಳಲ್ಲೂ ಕಾಯಕದಿಂದಲೇ ಅವರನ್ನು ಗುರುತಿಸುವುದನ್ನು ಕಾಣಬಹುದು. ಬೇಟೆಯಾಡುವವನನ್ನು ಬೇಡ, ಕುರಿಕಾಯುವವನು ಕುರುಬ, ದನಗಳನ್ನು ಕಾಯುವವನು ಗೊಲ್ಲರು, ಚಪ್ಪಲಿ ಕೆಲಸ ಮಾಡುವವನು ಮಾದಿಗ, ಕ್ಷೌರ ಮಾಡುವವನನ್ನು ನಾಯಿಂದ, ಮಡಕೆ ಕುಡಿಕೆ ಮಾಡುವನನ್ನು ಕುಂಬಾರ, ಕಬ್ಬಿಣದ ಕೆಲಸ ಮಾಡುವವನು ಕಮ್ಮಾರ, ಮರದ ಕೆಲಸ ಮಾಡುವವನು ಬಡಗಿ–ಹೀಗೆ ಹತ್ತಾರು ಕಾಯಕ ಮಾಡುವವರನ್ನು ಅವರ ಕಾಯಕದಿಂದಲೇ ಗುರುತಿಸಿ ಅದು ಅವರ ಸಮೂಹದ ಮುಂದೆ ನಾಮದೇಯಗಳಾಗಿ, ಮತ್ತೆ ಜಾತಿ ಸೂಚಕವಾಗಿ ಬೆಳೆದು ಬಂದಿರಬಹುದು.

ವೃತ್ತಿಗಳ ಬಗೆಗೆ ಬೆಳಕು ಚೆಲ್ಲುವ ವಿವರಗಳು ಹಂಪಿಯಲ್ಲಿನ ಜಾನಪದದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಸಿಗುತ್ತವೆ. ತಳವಾರನ ಕಲ್ಲು, ಸಾಸುವೆಕಾಳು, ಕಡಲೆಕಾಳಿನ ಗಣಪತಿಗಳು ಮತ್ತು ತೆನಾಲಿರಾಮನ ಮಂಟಪ ಇತ್ಯಾದಿ, ತಳವಾರ ವೃತ್ತಿಯಲ್ಲಿ ಅಗಸ ಅವನು ಪಂಪಾಪತಿ ಹಾಗೂ ಪಂಪಮ್ಮನ ಶಯನ ಗೃಹವನ್ನು ಸ್ವಚ್ಛಗೊಳಿಸುವ ಕೆಲಸಗಾರ ಶಿವನನ್ನು ನೋಡಿ ಇನ್ನೊಮ್ಮೆ ಬೇಡವೆಂದರೂ ನೋಡಿ ಕಲ್ಲಾದ ಈಗಲೂ ಈ ಕಲ್ಲು ವಿರೂಪಾಕ್ಷ ದೇವಾಲಯದ ಪ್ರವೇಶದ್ವಾರದಲ್ಲಿದೆ. ಈ ರೀತಿಯ ಅನೇಕ ಕಸುಬುಗಳು ವಿಜಯನಗರ ಸಾಮ್ರಾಜ್ಯದಲ್ಲಿ ಅವರ ಜಾತಿಗೆ ಅನುಸಾರವಾಗಿ ವೃತ್ತಿಗಳನ್ನು ನಡೆಸಿಕೊಂಡು ಬಂದಿರುವುದನ್ನು ಕಾಣಬಹುದು.

ವೃತ್ತಿ ಅಥವಾ ಕಸುಬುಗಳ ಉಗಮವನ್ನು ಕುರಿತು ನಿರ್ಧಾರಿತ ಹಾಗೂ ನಿಖರವಾಗಿ ಹೇಳುವುದು ಕಷ್ಟಸಾಧ್ಯ. ವೃತ್ತಿ ಹಾಗೂ ಕಲೆಗಳ ವಿಕಾಸಕ್ಕೂ ಮಾನವನ ಬುದ್ಧಿಭಾವಗಳ ಬೆಳವಣಿಗೆಗೂ ನೇರ ಸಂಬಂಧವಿದೆ. ಇವೆಲ್ಲವುಗಳನ್ನು **ವಿಜಯನಗರ ಕಾಲದ ಕುಲಕಸುಬುಗಳು** ಎಂಬ ಶೀರ್ಷಿಕೆಯಡಿಯಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ.

ವ್ಯಾಪ್ತಿ

ಯಾವುದೇ ಒಂದು ವಿಷಯ ವಸ್ತುವಿನ ಅಧ್ಯಯನಕ್ಕೆ ವ್ಯಾಪ್ತಿ ಇರಬೇಕು. ಪ್ರಸ್ತುತ ಅಧ್ಯಯನವನ್ನು ವಿಜಯನಗರ ಕಾಲದ ಕುಲಕಸುಬುಗಳು ಎಂಬ ಶೀರ್ಷಿಕೆಯಡಿಯಲ್ಲಿ ಕರ್ನಾಟಕಕ್ಕೆ ಸೀಮಿತಗೊಳಿಸಲಾಗಿದೆ. ಪ್ರಸ್ತುತ ಪ್ರಬಂಧವನ್ನು ವಿಜಯನಗರ ಕಾಲದ ಆಳ್ವಿಕೆಯ ಅವಧಿಯೆಂದು ಗುರುತಿಸಲಾದ ಕ್ರಿ.ಶ. ೧೩೩೬–೧೫೬೫ವರೆಗಿನ ಕಾಲಘಟ್ಟಕ್ಕೆ ಸೀಮಿತಗೊಳಿಸಲಾಗಿದೆ. ಹಾಗೂ ಸಂದರ್ಭಕ್ಕೆ ಅನುಗುಣವಾಗಿ ನೆರೆ ರಾಜ್ಯಗಳಾದ ಆಂಧ್ರ, ತಮಿಳುನಾಡಿನಲ್ಲಿ ಇರುವ ಕಸುಬುಗಳನ್ನು ಅಧ್ಯಯನಕೊಳ್ಳಪಡಿಸಲಾಗಿದೆ. ವಿಜಯನಗರದ ಅರಸರು

೨೫೦ ವರ್ಷಗಳಷ್ಟು ಹಂಪೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು ಅಲ್ಲಿ ವೈವಿಧ್ಯಮಯವಾದ ವೃತ್ತಿಗಳು ಇದ್ದವು ಎಂಬುದು ಶಾಸನ, ಸಾಹಿತ್ಯ, ಶಿಲ್ಪ ಜನಪದ, ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ಅಂದು ನೀರಾವರಿ ವ್ಯವಸ್ಥಿತವಾಗಿತ್ತು. ಕೃಷಿ ಚಟುವಟಿಕೆಗಳು ಹಾಗೂ ಕೃಷಿಯನ್ನು ಅವಲಂಬಿಸಿ ವಿವಿಧ ವೃತ್ತಿಗಳು ವ್ಯಾಪಕವಾಗಿ ಬೆಳೆದು ನಿಂತಿದ್ದವು. ಈ ಹಿನ್ನೆಲೆಯಲ್ಲಿ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಅವುಗಳ ಸಮಸ್ಯೆ ಹಾಗೂ ಸವಾಲುಗಳು, ಸುಧಾರಣಾ ಕ್ರಮ ಮಾರುಕಟ್ಟೆ ವ್ಯವಸ್ಥೆಯ ಕುರಿತು ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ. ಹಾಗೆಯೇ ಕುಲಕಸುಬುಗಳಲ್ಲಿನ ಸೂಕ್ಷ್ಮ ಅಂಶಗಳನ್ನು ಅಧ್ಯಯನಕ್ಕೆ ಅಳವಡಿಸಿಕೊಳ್ಳಲು ಹೆಚ್ಚಿನ ಮಹತ್ವ ಕೊಡಲಾಗಿದೆ. ಒಟ್ಟಿನಲ್ಲಿ ಸಮಕಾಲೀನ ಸಂದರ್ಭದಲ್ಲಿ ಕುಲಕಸುಬುಗಳ ಪಾತ್ರ ಮತ್ತು ಮಹತ್ವವನ್ನು ವಿವರಿಸಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಉದ್ದೇಶ

ಇತಿಹಾಸ ಅಧ್ಯಯನವು ಇಂದು ಹಲವು ಮಜಲುಗಳಿಂದ ಹಾಗೂ ವೈಜ್ಞಾನಿಕ ದೃಷ್ಟಿಕೋನದತ್ತ ಸಾಗಿದೆ. ಕ್ರಿ.ಶ. ೧೩೩೬ರಲ್ಲಿ ಸ್ಥಾಪನೆಯಾದ ವಿಜಯನಗರ ಸಾಮ್ರಾಜ್ಯ ದಕ್ಷಿಣ ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಹಂಪಿಯನ್ನು ರಾಜಧಾನಿಯಾಗಿ ಮಾಡಿಕೊಂಡು ಒಂದು ಪ್ರಬಲ ಅರಸು ಮನೆತನವಾಗಿ ಆಳ್ವಿಕೆ ಮಾಡಿತು. ಇಂತಹ ಸಾಮ್ರಾಜ್ಯದ ಕುರಿತು ಅನೇಕ ಬಗೆಯ ಅಧ್ಯಯನಗಳು ನಡೆದಿವೆ ಮತ್ತು ನಡೆಯುತ್ತಲೇ ಸಾಗಿವೆ. ವಿಜಯನಗರ ಸಾಮ್ರಾಜ್ಯದ ಕುರಿತು ಅವರ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಕಲೆ ಮತ್ತು ವಾಸ್ತುಶಿಲ್ಪ, ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ ಅಂದಿನ ಸಾಮಾಜಿಕ ವ್ಯವಸ್ಥೆ ಬಗ್ಗೆ ಅಧ್ಯಯನಗಳಾಗಿವೆ. ಆದರೆ ಅದರಲ್ಲಿ ಬದುಕಿನ ಮೂಲಭೂತ ಅಂಗವಾಗಿರುವ ಕಸುಬುಗಳ ಕುರಿತು ಕೆಲವು ಬಿಡಿ ಲೇಖನಗಳು ಪ್ರಕಟಗೊಂಡಿವೆ. ಕಸುಬುಗಳು ಪ್ರಮುಖವಾಗಿ ವಿಜಯನಗರ ಸಾಮ್ರಾಜ್ಯದ ಬೆಳವಣಿಗೆಗೆ ಹೇಗೆ ಕಾರಣವಾಗಿದ್ದವು. ಅಂದು ಯಾವ ಕಸುಬುಗಳಿದ್ದವು ಅವರ ತಂತ್ರಗಾರಿಕೆ, ಪಾರಂಪರಿಕ ಜ್ಞಾನ, ನಂಬಿಕೆ, ಆಚರಣೆ, ವಿಧಿ ನಿಷೇಧಗಳ ಮೊದಲಾದವುಗಳ ಕುರಿತು **ವಿಜಯನಗರ ಕಾಲದ ಕುಲಕಸುಬುಗಳು** ಎಂಬ ಶೀರ್ಷಿಕೆಯಡಿಯಲ್ಲಿ ಸಮಗ್ರ ಅಧ್ಯಯನ ಕೈಗೊಳ್ಳಲಾಗಿದೆ.

ಕುಲಕಸುಬುಗಳು ಅಳವಡಿಸಿಕೊಂಡಿದ್ದ ತಂತ್ರಗಾರಿಕೆ, ಕೌಶಲ್ಯ, ಕಟ್ಟುಪಾಡುಗಳು ಸಾಮಾನ್ಯ ಜನರ ಸ್ಥಿತಿಗತಿ, ಅಂದು ಅವರ ಜೀವನ ಕ್ರಮ ಉಪಯೋಗಿಸುತ್ತಿದ್ದ ಉಪಕರಣಗಳು– ಇವೇ ಮುಂತಾದ ಅಂಶಗಳನ್ನು ಆಕರಗಳ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಯನಕ್ಕೆ ಪ್ರಾಥಮಿಕ ಆಕರಗಳಾದ ಪ್ರಾಕ್ತನ ಆಕರಗಳು ಪ್ರಮುಖ ಪಾತ್ರವಹಿಸುತ್ತವೆ. ಅವುಗಳಲ್ಲಿ ಶಾಸನ, ಸ್ಮಾರಕ, ಶಿಲ್ಪ, ಉತ್ಖನನ ವರದಿಗಳು ಮುಖ್ಯವಾಗಿವೆ. ಶಾಸನಗಳಲ್ಲಿ ಹದಿನೆಂಟು ಜಾತಿ, ಉಪಜಾತಿಗಳ, ಉಲ್ಲೇಖ, ಅವರ ಕಸುಬುಗಳ ಉಲ್ಲೇಖಗಳಿವೆ. ಇದುವರೆಗೂ ವಿಜಯನಗರ ಕಾಲದ ಕಸುಬುಗಳ ಕುರಿತು ಕೆಲವು ವಿದ್ವಾಂಸರು, ತಮ್ಮ ಕೃತಿಗಳಲ್ಲಿ ಸಂದರ್ಭಕ್ಕೆ ಅನುಸಾರವಾಗಿ ದಾಖಲಿಸಿದ್ದಾರೆ. ಈ ಎಲ್ಲಾ ಅಂಶಗಳನ್ನಿಟ್ಟುಕೊಂಡು ಸೂಕ್ಷ್ಮ ಮತ್ತು ಸಮಗ್ರ ಅಧ್ಯಯನದ ಉದ್ದೇಶದಿಂದ ಈ ಶೀರ್ಷಿಕೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಅಧ್ಯಯನಗಳ ಸಮೀಕ್ಷೆ

ಕನ್ನಡ ಕೃತಿಗಳು

ಕಸುಬುಗಳ ಬಗ್ಗೆ ಕುರಿತು ಭಾರತದ ಮಟ್ಟಿಗೆ ಸಾಕಷ್ಟು ಕೆಲಸ ನಡೆದಿರುವುದನ್ನು ಕಾಣಬಹುದು. ಕರ್ನಾಟಕದ ಮಟ್ಟಿಗೆ ವಿಜಯನಗರ ಇತಿಹಾಸವನ್ನು ಕಾಲಾನುಕ್ರಮವಾಗಿ ನಾವು ಮೂರು ಸ್ಥೂಲ ವಿಭಾಗಗಳನ್ನು ಗಮನಿಸಬಹುದು. ೧೯೦೦-೧೯೩೬, ೧೯೩೬, ೧೯೩೬-೧೯೪೭ ಮತ್ತು ೧೯೪೭ರಿಂದ ಇತ್ತೀಚಿನವರೆಗೆ ಈ ಅಧ್ಯಯನಗಳಲ್ಲಿ ವಿದೇಶಿ ಮತ್ತು ದೇಶಿ ವಿದ್ವಾಂಸರು ಹಲವು ಮಗ್ಗಲುಗಳಲ್ಲಿ ಅಧ್ಯಯನ ಮಾಡಿದ್ದಾರೆ.

ಅಮೇರಿಕಾದ ಬರ್ಟನ್ ಸ್ಟೈನ್, ಜಪಾನಿನ ನೊಬುರು ಕರಾಶಿಮ ಅವರನ್ನು ವಿಶೇಷವಾಗಿ ಉಲ್ಲೇಖಿಸಬೇಕು. ಬರ್ಟನ್‌ಸ್ಟೀನ್ ಅವರು ವಿಜಯುನಗರದ ಕೇಂದ್ರಾಡಳಿತವು, ಧಾರ್ಮಿಕವಾಗಿರಲಿಲ್ಲ. ಸಂಪ್ರದಾಯ ಪಾಲನೆಯಾಗಿರಲಿಲ್ಲ. ನಿಜವಾದ ಅಧಿಕಾರ ಅಲ್ಲಿರಲಿಲ್ಲ ಎಂದು ನಂಬುತ್ತಾರೆ. ಕರಾಶಿಮ ಕಂಪ್ಯೂಟರ್‌ನ್ನು ಉಪಯೋಗಿಸಿ ತಮಿಳುನಾಡು ಮತ್ತು ಕರ್ನಾಟಕಗಳಲ್ಲಿ ದೊರಕುವ ವಿಜಯನಗರ ಶಾಸನಗಳಲ್ಲಿ ತೆರಿಗೆಗೆ ಸಂಬಂಧಿಸಿದ ಪದಗಳನ್ನು ವಿಶ್ಲೇಷಣೆ ಮಾಡಿದ್ದಾರೆ. ಆ ಕಾಲದ ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳನ್ನು ಅರ್ಥಮಾಡಿಕೊಳ್ಳಲು ಕರಾಶಿಮರ ಕೃತಿಗಳು ಬಹುಮುಖ್ಯವಾಗುತ್ತವೆ.

ಈಚೆಗೆ ಕರ್ನಾಟಕ ಸರಕಾರದ ಪುರಾತತ್ವ ಹಾಗೂ ವಸ್ತುಸಂಗ್ರಹಾಲಯಗಳ ಇಲಾಖೆಯು ಎಂ.ಎಸ್. ನಾಗರಾಜರಾವ್, ಅ.ಸುಂದರ, ಮತ್ತು ಡಿ.ವಿ. ದೇವರಾಜ್ ಇವರ ನೇತೃತ್ವದಲ್ಲಿ ಹಂಪಿಯಲ್ಲಿ ಉತ್ಖನನಗಳನ್ನು ನಡೆಸಲಾಗಿದೆ. ಅದರಲ್ಲಿ ಜಾರ್ಜ್ ಮಿಚೆಲ್, ಜಾನ್ ಎಂ. ಫ್ರಿಜ್ ಮತ್ತು ಕಾರ್ಲಾ ಸಿನೇಪೊಲಿ ಮೊದಲಾದ ವಿದೇಶಿ ವಿದ್ವಾಂಸರೂ ಭಾಗವಹಿಸಿದ್ದರು. ವಿಜಯನಗರ ಪಟ್ಟಣದ ಮುಖ್ಯ ಭಾಗವನ್ನು ಸಮಗ್ರ ಸಂಶೋಧನೆಗೆ ಒಳಪಡಿಸಿದ ನಂತರ ಇವು ವಾಸ್ತುಶಿಲ್ಪ ಮತ್ತು ಸಾಂಸ್ಕೃತಿಕ ಅವಶೇಷಗಳನ್ನು ವಿದ್ವತ್ ಪೂರ್ಣವಾದ ರೀತಿಯಲ್ಲಿ ದಾಖಲಿಸಿವೆ.

ಶ್ರೀಕಂಠಯ್ಯ ಕೆ., ಅವರು ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಎಂಬ ಕೃತಿಯು ಅಂದಿನ ಕನ್ನಡ ಸಾಹಿತ್ಯದಲ್ಲಿ ಬರುವ ಆಡಳಿತ, ವರ್ಣಶ್ರಮ, ಧರ್ಮ, ಸಾಮಾಜಿಕ ಪದ್ಧತಿಗಳು, ಆರ್ಥಿಕ ವ್ಯವಸ್ಥೆಯನ್ನು ಗೃಹಜೀವನವನ್ನು ಕುರಿತಿದೆ. ಇವುಗಳಲ್ಲಿ ಕುಟುಂಬದ ಯಾಜಮಾನಿಕೆ, ಉತ್ತಮ ಕುಲ, ಹೀನಕುಲದವರ ಬಗ್ಗೆ, ಸಾಮಾಜಿಕವಾಗಿ ಸಮಾಜದಲ್ಲಿ ಕಸುಬುದಾರರ ಸ್ಥಾನಮಾನವನ್ನು ಸೋದಾಹರಣವಾಗಿ ವಿಶ್ಲೇಷಿಸಿದ್ದಾರೆ.

ಶಿವಾನಂದ ವಿರಕ್ತಮಠ, ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ, ಎಂಬ ಗ್ರಂಥದಲ್ಲಿ ಸಾಮಾಜಿಕ ವರ್ಗಗಳು, ಕುಲಭೇದಗಳು ಧಾರ್ಮಿಕ, ರಾಜಕೀಯ, ಆರ್ಥಿಕ, ಸಾಮಾಜಿಕ ಪಂಗಡಗಳು ಅವರ ಸಾಂಘಿಕ ಜೀವನ ಎಲ್ಲ ಸಮುದಾಯದವರು ಸೇರಿ ಆಚರಣೆ, ನಂಬಿಕೆ, ಸಮಭಾಗಿಗಳಾಗಿ ವರ್ತಿಸುವುದರ ಬಗ್ಗೆ ಅರಸರಾದಿಗಳು ಹಾಕಿಸಿಕೊಟ್ಟಿರುವ ದಾನ ಶಾಸನಗಳನ್ನು ಇಟ್ಟುಕೊಂಡು ವಿದೇಶಿ ಪ್ರವಾಸಿಗರ ವರದಿಗಳನ್ನು ದಾಖಲಿಸಿದ್ದಾರೆ.

ನಾಗರಾಜು, ಎಚ್.ಎಂ., ವಿಜಯನಗರದ ಇಮ್ಮಡಿ ದೇವರಾಯ ಎಂಬ ಗ್ರಂಥದಲ್ಲಿ ಆಡಳಿತ, ಧಾರ್ಮಿಕ, ಸಾಮಾಜಿಕ, ಜೀವನ ಕುರಿತು ಉದ್ಯಮಗಳ ತಯಾರಿಕ ಉಪಕರಣಗಳು, ಕೃಷಿ ಉಪಕರಣ ಬಗ್ಗೆ ವರ್ಣಾಶ್ರಮ ಧರ್ಮ ಕುರಿತು ಹಾಗೂ ಸಾಮಾಜಿಕ ಶ್ರೇಣಿಯಲ್ಲಿ ಬ್ರಾಹ್ಮಣರು, ಸೆಟ್ಟಿಗರು, ವೀರಪಾಂಚಾಳರು, ಕೈಕ್ಕೋಲರು, ಒಕ್ಕಲಿಗರು, ಕುರುಬರು, ದೊಂಬರು, ಹೊಲೆಯರು ಈ ರೀತಿ ಇನ್ನು ಅನೇಕ ಕುಲಕಸುಬಿನ ಬಗೆ ಹಾಗೂ ಎಡಗೈ ಮತ್ತು ಬಲಗೈ ವಿಭಾಗಗಳ ಕಸುಬುದಾರರ ರೀತಿ ನೀತಿ ಪದ್ಧತಿಗಳನ್ನು ಕುರಿತು ಶಾಸನಗಳನ್ನು ಮತ್ತು ವಿದೇಶಿಯರ ವರದಿಗಳನ್ನು ದಾಖಲಿಸುವ ಮೂಲಕ ಸ್ಥಾನಮಾನಗಳನ್ನು ಮತ್ತು ವಿವಿಧ ವೃತ್ತಿ ನಿರಂತರ ಬಗ್ಗೆ ಚರ್ಚಿಸಿದ್ದಾರೆ.

ಚಿದಾನಂದಮೂರ್ತಿ, ಎಂ., ಅವರು ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಎಂಬ ಗ್ರಂಥದಲ್ಲಿ ಆರ್ಥಿಕ, ಸಾಮಾಜಿಕ, ವ್ಯವಸ್ಥೆಯನ್ನು ಶಾಸನೋಕ್ತವಾಗಿ ವೃತ್ತಿಗಳನ್ನು ಉಲ್ಲೇಖಿಸುತ್ತಾ, ನೇಕಾರರು, ಚಿಪ್ಪಿಗರು, ಕುಂಬಾರರು, ತೈಲಿಗರು, ಕಂಚುಗಾರರು, ಶಿಲ್ಪಗಳು, ಅಕ್ಕಸಾಲಿಗರ ಬಗ್ಗೆ ತಿಳಿಸುತ್ತಾ ಸಮಾಜದಲ್ಲಿ ಮಹತ್ವದ ಸ್ಥಾನವನ್ನು ಕಸುಬುದಾರರು ಹೊಂದಿದ್ದರು ಎಂದು ಶಾಸನಾಧಾರಿತವಾಗಿ ಚರ್ಚಿಸುತ್ತಾರೆ. ಮಧ್ಯಕಾಲೀನ ಕರ್ನಾಟಕ ಮತ್ತು ಅಸ್ಪೃಶ್ಯತೆ, ಎಂಬ ಗ್ರಂಥದಲ್ಲಿ ಶಾಸನಗಳನ್ನು ವಚನಗಳನ್ನು ಆಧಾರವಾಗಿ ಇಟ್ಟುಕೊಂಡು ವರ್ಣ ಬಗ್ಗೆ ಆಧುನಿಕ ಕಾಲದಲ್ಲಿ ಜಾತಿಗಳು, ಹದಿನೆಂಟು ಜಾತಿಗಳು, ಅತಿಹೆಚ್ಚು ಹೊಲೆಯರ ಬಗ್ಗೆ ಅವರ ಕಸುಬು, ಅವರ ಸಾಮಾಜಿಕ ಸ್ಥಾನಮಾನ ಅವರ ವಿಧಿನಿಷೇಧ ಹಾಗೂ ಅವರಲ್ಲಿಯ ನಂಬಿಕೆ ಆಚರಣೆ ಕುರಿತು ಲಿಂಗಾಯತ ಚಳುವಳಿ, ನಾಥ ಪಂಥ, ಬ್ರಾಹ್ಮಣರು ಮತ್ತು ಮಾಂಸ ಭಕ್ಷಣೆ ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ಹರಿಹರ, ಮಾದರ ಚೆನ್ನಯ್ಯ ಕತೆಯ ಮೂಲಕ ಕಸುಬುದಾರರ ಸ್ಥಾನಮಾನವನ್ನು ಹಿರಿಯ ಕುಲ ಮತ್ತು ತಿರುಕುಲ ಮಡಿ, ಮೈಲಿಗೆ, ಮುಂತಾದರ ಬಗ್ಗೆ ಕುರಿತು ಪ್ರಸ್ಥಾಪಿಸಿದ್ದಾರೆ.

ಹಿರೇಮಠ, ಬಿ.ಆರ್., ಅವರು, ಶಾಸನಗಳಲ್ಲಿ ಕರ್ನಾಟಕದ ವರ್ತಕರು ಎಂಬ ಗ್ರಂಥದಲ್ಲಿ ಪ್ರಥಮ ಶಾಸನ ಹಲ್ಮಿಡಿ ಶಾಸನದಿಂದ ವಿಜಯನಗರ ಸಾಮ್ರಾಜ್ಯ ಪತನದವರೆಗೆ ಅನೇಕ ರೀತಿಯ ವರ್ತಕರನ್ನು ವಿನಿಮಯ, ವೃತ್ತಿಯವರು, ಉತ್ಪಾದನಾ ವಿನಿಮಯ ವೃತ್ತಿಯವರು ಎಂದು ಕರ್ನಾಟಕದಲ್ಲಿ ಅನೇಕ ರೀತಿಯ ಕಸುಬುದಾರರು, ಶ್ರೇಣಿಗಳು, ನಕರ, ಸೆಟ್ಟಿಗುತ್ತ, ವಡ್ಡ ವ್ಯವಹಾರಿ, ಗವರೆ, ಗಾತ್ರಿಗ, ಕುಂಬಾರ, ಅಕ್ಕಸಾಲಿ, ಮಾದಿಗ, ಸಮಗಾರ, ಮೇದಾರ, ಮೊದಲಾದ ಅನೇಕ ಕಸುಬುದಾರರನ್ನು ಅವರ ಸಂಘಗಳು ಅವರು ನೀಡುತ್ತಿದ್ದ ತೆರಿಗೆಗಳ ಬಗ್ಗೆ ಅವರು ನಾಡಿನಲ್ಲಿ ನಡೆಸಿದ ವ್ಯಾಪಾರ ಚಟುವಟಿಕೆ ಅಂಶಗಳನ್ನು ತಿಳಿಸುತ್ತಾರೆ.

ಮಲ್ಲಿಕಾರ್ಜುನ, ಕೆ., ಮಾಳಿ, ವಿ.ಎಸ್., ಬಿರಾದಾರ, ಬಿ.ಎಸ್., ಅಶೋಕ ನರೋಡೆ, (ಸಂ), ಬಿ.ಆರ್., ಹಿರೇಮಠರ ಶಾಸನ ಅಧ್ಯಯನ, ಎಂಬ ಕೃತಿಯಲ್ಲಿ ಪ್ರಾಚೀನ ಕರ್ನಾಟಕದ ವರ್ತಕರ ಬಗ್ಗೆ ವರ್ತಕರು/ ಕಸುಬುದಾರರ ಧಾರ್ಮಿಕ ಕಾರ್ಯಗಳು, ಮಾರಾಟ, ಸುಂಕ, ಶಾಸನೋಕ್ತ ಸಂಘಗಳು ಆರ್ಥಿಕ ಚಟುವಟಿಕೆ, ದಾನ ಕಾರ್ಯ, ವಿಜಾಪುರ, ಬಾಗಲಕೋಟೆ, ಧಾರವಾಡ ಜಿಲ್ಲೆಗಳಿಗೆ ಸಂಬಂಧಿಸಿದ ಶಾಸನಗಳನ್ನು ಒಳಗೊಂಡ, ಕಸುಬುದಾರರು ಅವರ

ಸ್ಥಿತಿಗತಿ, ವಿಧಿನಿಷೇಧಗಳನ್ನು ಸಹ ತುಂಬ ವರ್ತಕರು, ಸಂಘಗಳು ಹದಿನೆಂಟು ಸಂತತಿಗಳ ಬಗೆ ಅನೇಕ ಅಂಶಗಳನ್ನು ಒಳಗೊಂಡು ಚರ್ಚಿಸಿದ್ದಾರೆ.

ಪರಮಶಿವಮೂರ್ತಿ, ಡಿ.ವಿ., ಅವರು ಕೃಷ್ಣದೇವರಾಯನ ಶಾಸನಗಳು ಸಂಪುಟ–೧ರಲ್ಲಿ ಕನ್ನಡ–ಸಂಸ್ಕೃತ ಶಾಸನಗಳನ್ನು ಒಳಗೊಂಡಂತೆ ಅನೇಕ ಕಸುಬುದಾರರು ಕುಂಬಾರ, ಕಮ್ಮಾರ, ಬಡಗಿ, ನೇಕಾರ, ಗಾಣಿಗ ಇನ್ನು ಮುಂತಾದ ಕಸುಬುದಾರರು ನೀಡುವ ತೆರಿಗೆ, ಸುಂಕ, ಅವರು ನಿರ್ವಹಿಸುವ ಕಾರ್ಯ, ಆಯಾಗಾರಿಕೆ ಅವರ ಸ್ಥಾನಮಾನ ಸಮಾಜದಲ್ಲಿ ಅವರ ವ್ಯಾಪಾರ ವಹಿವಾಟು ವಿಜಯನಗರ ಸಾಮ್ರಾಜ್ಯಕ್ಕೆ ಕೊಡುತ್ತಿದ್ದ ಸುಂಕವನ್ನು ಹಲವಾರು ಶಾಸನಗಳನ್ನು ಒಳಗೊಂಡಿದೆ.

ವಿರೂಪಾಕ್ಷಿ ಪೂಜಾರಹಳ್ಳಿ, ಅವರು ಬೇಟೆ ಮತ್ತು ಬೇಡರು ಎಂಬ ಕೃತಿಯು ಹೆಚ್ಚು ಮಧ್ಯಕಾಲೀನ ವಿಜಯನಗರ ಒಳಗೊಂಡಂತೆ ಕನ್ನಡ ಕಾವ್ಯಗಳನ್ನು ಹೆಚ್ಚು ಬಳಸಿ ಹಂಪಿಯಲ್ಲಿ ಇರುವ ಶಿಲ್ಪಗಳಲ್ಲಿ ಬೇಟೆ ಬೇಡರ ಕಸುಬುಗಳನ್ನು ಗುರುತಿಸಿ ಸ್ಥಳೀಯವಾಗಿ ಹಂಪಿ ಕಮಲಾಪುರ, ತಳವಾರಘಟ್ಟ, ಆನೆಗುಂದಿ ಇನ್ನು ಸುತ್ತಮುತ್ತ ಪರಿಸರಗಳನ್ನು ಒಳಗೊಂಡಂತೆ ಅಲ್ಲಿಯ ಕಾವ್ಯ, ಮೌಖಿಕ ಸಾಹಿತ್ಯ, ನಂಬಿಕೆ, ಆಚರಣೆ, ಆಯುಧೋಪಕರಣ, ಬೇಟೆಯ ವಿಧಾನ ಸ್ವರೂಪ, ವಿಧಿನಿಷೇದ ಸಹ ಒಳಗೊಂಡು ಸಾಮಾಜಿಕ ಸ್ಥಿತ್ಯಂತರವನ್ನು ವಿಶ್ಲೇಷಿಸಿದ್ದಾರೆ.

ಕಲಬುರ್ಗಿ, ಎಂ.ಎಂ., ಅವರು ಸಂಶೋಧನ ಪ್ರಬಂಧಗಳ ಮಾರ್ಗ ಸಂಪುಟ–೩, ಮತ್ತು ಸಂಪುಟ–೪ರಲ್ಲಿ ಸುಮಾರು ೫೦ಕ್ಕೂ ಹೆಚ್ಚು ಲೇಖನಗಳು ಶಾಸನಗಳನ್ನು ಒಳಗೊಂಡು, ವ್ಯಾಕರಣ, ಛಂದಸ್ಸು, ಹಳೆಗನ್ನಡ, ಶಾಸನ, ವಚನ, ಜನಪದ, ಸಂಸ್ಕೃತಿ, ಇತಿಹಾಸ ಗ್ರಂಥ ಸಂಪಾದನೆ ಅದರಲ್ಲಿನ ಶಾಸನ ಕವಿಗಳು, ಶಾಸನ ಲಿಪಿಕಾರರು ಹಾಗೂ ಶಾಸನ ರೂವಾರಿಗಳ ಕುರಿತು ಕಂಡರಣೆ, ರಚಿಸಿದ, ಬರೆದ ಕಡಿದ, ಕೆತ್ತಿದ ಶಿಲ್ಪಗಳ ಕುರಿತಾಗಿದ್ದು ಶಿಲ್ಪಿಗಳ ಕಸುಬು ಶ್ರಮ ವಿಭಜನೆಯನ್ನು ಇವರ ಕೌರ್ಯ ತುಂಬ ಮೌಲ್ಯವಾದುದು ಎಂದು ತಿಳಿಸುತ್ತಾರೆ.

ಪಿ.ವಿ. ನಾರಾಯಣ, ಅವರು ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ಗ್ರಂಥದಲ್ಲಿ ೧೨ನೆಯ ಶತಮಾನದಲ್ಲಿ ಆರ್ಥಿಕ ವ್ಯವಸ್ಥೆಯನ್ನು ವಿವರಿಸುತ್ತಾ ಅಲ್ಲಿ ಸಾಮಾಜಿಕವಾಗಿ ವಚನಕಾರರು ಬಟ್ಟೆ ತಯಾರಿಕೆ ಮಡಿಕೆಗಳ ತಯಾರಿಕೆ, ಗಾಣ, ಚರ್ಮದ ಕೆಲಸ, ಮರಗೆಲಸ, ಇತ್ಯಾದಿ ಕಸುಬುದಾರರ ಕುಲಕಸುಬು ಅವರ ಸ್ಥಾನಮಾನ ಚರ್ಚಿಸಿದ್ದಾರೆ.

ಕೆ.ಎಸ್., ಕುಮಾರಸ್ವಾಮಿ, ಅವರು ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರಿಯರು ಎಂಬ ಕೃತಿಯಲ್ಲಿ ವಿಶ್ವಕರ್ಮ ಅಥವಾ ಪಾಂಚಾಳರೆಂದು ಕರೆದುಕೊಂಡ ಶಿಲಾಕರ್ಮಿ, ಅಕ್ಕಸಾಲಿ, ಕಮ್ಮಾರ, ಬಡಗಿ ಮತ್ತು ಕಂಚುಗಾರ ಎಂಬ ಐದು ಕಸುಬುದಾರರನ್ನು ಕಾಲದ ಮಿತಿ ಇಲ್ಲದೆ. ಬಹುಪಾಲು ಶಾಸನ ಸಂಪುಟಗಳನ್ನು ಆಕರವಾಗಿ ಕಾವ್ಯ, ಜಾನಪದ ಕಥೆ, ಹಾಗೂ ಶಿಲ್ಪಶಾಸ್ತ್ರಗಳನ್ನು ಅವರ ವೃತ್ತಿಯ ಹಿನ್ನೆಲೆ ಆರ್ಥಿಕ ಸ್ಥಿತಿಗತಿ, ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆ ಕಸುಬುದಾರರು ಕಾರ್ಯನಿರ್ವಹಿಸುತ್ತಿದ್ದ ಬಗೆ ಈ ಐದು ವೃತ್ತಿಗಳು ಒಂದಕ್ಕೊಂದು

ಹತ್ತಿರದ ಸಂಬಂಧವಿರುವುದರಿಂದ ಶಿಲ್ಪಗಳನ್ನೇ ಕೇಂದ್ರಿಕರಣ ಮಾಡಿಕೊಂಡು ವಿವರಣಾತ್ಮಕವಾಗಿ ಅಧ್ಯಯನ ನಡೆಸಿರುವುದು ಕಂಡುಬರುತ್ತದೆ.

ನಾವಲಗಿ, ಸಿ. ಕೆ., ಅವರು ತಮ್ಮ ವಚನ ಸಾಹಿತ್ಯದಲ್ಲಿ ಜಾನಪದ ಅಂಶಗಳು ಎಂಬ ಗ್ರಂಥದಲ್ಲಿ ಗ್ರಾಮೀಣ ಕಸುಬುಗಳು ಎಂಬ ಉಪಶೀರ್ಷಿಕೆಯಡಿ ಒಕ್ಕಲುತನ, ಕುರಿ ಸಾಕಾಣಿ, ನೇಕಾರಿಕೆ, ಸಿಂಪಿಗಾರಿಕೆ, ಕುಂಬಾರಿಕೆ, ಕಮ್ಮಾರಿಕೆ, ಅಗಸ, ಕ್ಷೌರಿಕ, ತಳವಾರಿಕೆ ಮೊದಲಾದ ಕಸುಬುಗಳನ್ನು ಇಲ್ಲಿ ವಚನಗಳ ಮೂಲಕ ಮತ್ತು ಗ್ರಾಮೀಣ ಭಾಗದ ಮೂಲಕ ಗುರುತಿಸುವ ಕಾರ್ಯಮಾಡಿದ್ದಾರೆ.

ಬಸವರಾಜು, ಎಲ್., ಅವರು ವಚನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಬಸವಣ್ಣನವರ ವಚನಗಳು ಅಕ್ಕನ ವಚನಗಳು, ದೇವರ ದಾಸಿಮಯ್ಯನ ವಚನಗಳು, ಅಲ್ಲಮನ ವಚನಗಳು, ಅಲ್ಲಮನ ವಚನ ಚಂದ್ರಿಕೆ, ಶಿವದಾಸ ಗೀತಾಂಜಲಿ, ಶೂನ್ಯ ಸಂಪಾದನೆ, ಮೊದಲಾದ ಗ್ರಂಥಗಳಲ್ಲಿ ಕಸುಬುದಾರರ ಸಾಮಾಜಿಕ, ಧಾರ್ಮಿಕತೆ ಬಗ್ಗೆ ಅವರ ಸ್ಥಾನಮಾನಗಳನ್ನು ಕುರಿತು ಅನೇಕ ವಚನಗಳು ಇರುವುದು ಕಾಣುತ್ತೇವೆ.

ಬಸವರಾಜ ಕಲ್ಗುಡಿ, ಅವರು ಅನುಭಾವ, ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ ಎಂಬ ಗ್ರಂಥದಲ್ಲಿ ಮಧ್ಯಕಾಲೀನ ಸಾಹಿತ್ಯದಲ್ಲಿ ಅಭಿವ್ಯಕ್ತವಾಗಿರುವ ಸಂಸ್ಕೃತಿ, ಭಕ್ತಿ, ಅನುಭಾವ ಮುಂತಾದವುಗಳನ್ನು ಅಂದು ಚಾರಿತ್ರಿಕ ಪ್ರಜ್ಞೆಯೊಡನೆ, ಮುಖಾಮುಖಿಯಾಗಿಸಿ ವಿವೇಚಿಸಿದ್ದಾರೆ. ಸಂಸ್ಕೃತಿಯ ಬದುಕನ್ನು ಕುರಿತಂತೆ ವ್ಯಕ್ತಿತ್ವದ ಸ್ಥಿತ್ಯಂತರದ ನೆಲೆಯಲ್ಲಿ ಬದುಕಿನ ಮೌಲ್ಯವನ್ನು ವಚನಕಾರರ ಅನುಭಾವವನ್ನು ಸಾಂಸ್ಕೃತಿಕ ಕಾಳಜಿಯೇ ಪ್ರಧಾನವೆನ್ನುವುದನ್ನು ಗುರುತಿಸಿದ್ದಾರೆ.

ಸ.ಚಿ. ರಮೇಶ್. ಅವರು ಸಂಪಾದಿಸಿರುವ ಜಾನಪದ ವಸ್ತುಕೋಶ ಎಂಬ ಗ್ರಂಥವು ಕಸುಬುದಾರರು ಅಂದರೆ ಬೇಸಾಯ ಉಪಕರಣಗಳು ಕಮ್ಮಾರರು, ಮನೆಬಳಕೆ, ಬಡಗಿ ಆರಾಧನೆ–ಕಂಚುಗಾರರು, ಅಲಂಕಾರಿಕ ಅಕ್ಕಸಾಲಿಗ, ವೈದ್ಯಕೀಯ ಆಡಿಕೆಯ ವಸ್ತುಗಳು ಕಲೆಗಾರಿಕೆ ಕುರಿತು ಸಮಾಜದಲ್ಲಿ ಎಲ್ಲ ಸಮುದಾಯದವರ ಜ್ಞಾನ ಸಂಗ್ರಹಣೆ, ಸಂಪಾದನೆ, ಕಲೆ, ಪ್ರದರ್ಶನ ಕಾರ್ಯವನ್ನು ಜನರ ಜೀವನ ಸಮೃದ್ಧತೆಯಿಂದ ಕೂಡಿದ ಕಸುಬುದಾರರ ವಿವಿಧ ಮಗ್ಗಲುಗಳನ್ನು ಅಂತರ್‌ಶಿಸ್ತೀಯ ಜ್ಞಾನ ಶಾಖೆಯನ್ನು ಗುರುತಿಸುವ ಪ್ರಯತ್ನಮಾಡಿದ್ದಾರೆ.

ಎಂ.ಎಂ. ಕಲಬುರ್ಗಿಯವರು *ಶಾಸನಗಳಲ್ಲಿ ಶಿವಶರಣರು* ಇವರು ಶಾಸನಗಳಲ್ಲಿ ಸಾಲೆಸಾಸಿರ್ವರು ನೇಕಾರರ ಕುರಿತು, ತೆರಿಗೆ, ಸುಂಕಗಳ ಕುರಿತು ಸಮಗ್ರವಾಗಿ ಅಧ್ಯಯನ ಮಾಡಿದ್ದಾರೆ.

ಬಿ.ಆರ್. ಹಿರೇಮಠ ಅವರು *ಶಾಸನಗಳಲ್ಲಿ ಕರ್ನಾಟಕ ವರ್ತಕರು* ಕೃತಿಯಲ್ಲಿ ಮಧ್ಯಕಾಲೀನ ಯುಗದಲ್ಲಿ ವ್ಯಾಪಾರ, ವಾಣಿಜ್ಯ, ಸಂಘ, ಶ್ರೇಣಿಗಳ ಬಗ್ಗೆ ಅವರ ವೃತ್ತಿ ಆಡಳಿತದ ಬಗ್ಗೆ ತಿಳಿಸಿದ್ದಾರೆ. ಆರ್. ಶೇಷಶಾಸ್ತ್ರಿ ಅವರು *ಕರ್ನಾಟಕದ ವೀರಗಲ್ಲುಗಳು* ಕೃತಿಯಲ್ಲಿ ಸಣ್ಣ ಸಣ್ಣ ವ್ಯಾಪಾರಿಗಳು ತಮ್ಮ ನಂಬಿಕಸ್ಥ ವೀರರನ್ನು ನೇಮಿಸಿಕೊಳ್ಳುತ್ತಿದ್ದರು ಎಂಬುದರ ಬಗ್ಗೆ ತಿಳಿಸಿದ್ದಾರೆ.

ಬಿ.ಎಸ್. ಕುಲಕರ್ಣಿ ಕವಿ ರಾಘವಾಂಕನ ಸೋಮನಾಥ ಚರಿತ್ರೆಯಲ್ಲಿ ಮೂಡಿದ ಸಮಾಜ ಚಿತ್ರದಲ್ಲಿ ಸಮಾಜದಲ್ಲಿ ಬೇರೆ ಬೇರೆ ಮತಗಳಲ್ಲಿ ಸೌಹಾರ್ದತೆ ಇಲ್ಲವೆಂಬುದು ತಿಳಿಸಿದ್ದಾರೆ. ಪಿ.ವಿ. ನಾರಾಯಣರವರು *ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ* ಕೃತಿಯಲ್ಲಿ ಹದಿನೆಂಟು ಜಾತಿಗಳು, ಮುಂದೆ ಜಾತಿಗಳಲ್ಲಿ ಹಲವು ವ್ಯತ್ಯಾಸಗಳಾಗಿರುವುದನ್ನು ಹಾಗೂ ಜಾತಿಗಳ ಕುರಿತು ವಿಶ್ಲೇಷಿಸಿದ್ದಾರೆ.

ಬಿ.ವಿ. ವೀರಭದ್ರಪ್ಪ ಅವರು *ವೇದಗಳಲ್ಲಿ ಜನಸಾಮಾನ್ಯರು* ಕೃತಿಯಲ್ಲಿ ಉಡುಪಿನ ಕುರಿತು ಯಾವ ಕುಲದವರು ಯಾವ ರೀತಿಯ ಉಡುಪು ತೊಡುತ್ತಿದ್ದರು ಎಂಬುದನ್ನು ತಿಳಿಸಿದ್ದಾರೆ ಹಾಗೂ ಕೆಲವು ಬುಡಕಟ್ಟುಗಳ ಬಗ್ಗೆ ತಿಳಿಸಲು ಪ್ರಯತ್ನಿಸಿದ್ದಾರೆ. ಕೆ.ಎಂ. ಮೇತ್ರಿಯವರು *ಬುಡಕಟ್ಟುಗಳ ಕುಲಕಸುಬುಗಳು* ಎಂಬ ಕೃತಿಯಲ್ಲಿ ಬುಡಕಟ್ಟುಗಳಲ್ಲಿ ಬರುವ ಜಾತಿ ಅವರ ವೃತ್ತಿಗಳ ಬಗ್ಗೆ ಆಹಾರ, ಉಡುಪು, ಹಬ್ಬಗಳ ಬಗ್ಗೆ ತಿಳಿಸಿದ್ದಾರೆ. ಎಸ್.ವೈ ತಿಮ್ಮಾರೆಡ್ಡಿ ಅವರು ತಮ್ಮ ಪಿಎಚ್.ಡಿ ಅಪ್ರಕಟಿತ ಪ್ರಬಂಧದಲ್ಲಿ ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ ಕುಲಕಸುಬುಗಳ ಅಧ್ಯಯನದಲ್ಲಿ ಕಸುಬುದಾರರ ಆರ್ಥಿಕತೆಯ ಕುರಿತು ಅಧ್ಯಯನ ಮಾಡಿದ್ದಾರೆ. ಅದರಲ್ಲಿ ಅವರು ಕೆಲವು ಕುಲಗಳ ಬಗ್ಗೆ ಅವರ ಕಸುಬುಗಳ ಬಗ್ಗೆ ವಿಶ್ಲೇಷಿಸಿದ್ದಾರೆ.

ವಿಮಲ ಅವರು ತಮ್ಮ ಪಿಎಚ್.ಡಿ ಅಪ್ರಕಟಿತ ಪ್ರಬಂಧದಲ್ಲಿ ಕಾಡುಗೊಲ್ಲರ ಆರ್ಥಿಕ ಸ್ಥಿತಿಗಳು ಬಗ್ಗೆ, ಅವರ ಆಚಾರ ಸಂಪ್ರದಾಯ ಸಾಮಾಜಿಕ ಸ್ಥಿತಿಗತಿಯ ಬಗ್ಗೆ ತಿಳಿಸಿದ್ದಾರೆ. ಬಸವರಾಜಯ್ಯ ಮಠದ ಅವರು ಎಂ.ಫಿಲ್ ನಿಬಂಧದಲ್ಲಿ ವಿಜಯನಗರ ಕಾಲದ ಸಮಾಜ ಕೆಲವು ಅನಿಷ್ಟ ಪದ್ಧತಿ ಬಗ್ಗೆ ಅಂದಿನ ಸಮಾಜದಲ್ಲಿ ವಿಜಯನಗರದ ಜನಗಳ ಬಗ್ಗೆ ಹಾಗೂ ಆಚಾರ ನಂಬಿಕೆ ದೇವದಾಸಿಯರ ಬಗ್ಗೆ ವಿಶ್ಲೇಷಿಸಿದ್ದಾರೆ. ಅಂಗಡಿ ಎಸ್.ಎಸ್. ಅವರು ಕುಂಬಾರರು ಮತ್ತು ಅವರ ವೃತ್ತಿ ಪದಕೋಶ ಎಂ.ಫಿಲ್ ನಿಬಂದದಲ್ಲಿ ಕುಂಬಾರರ ಬಗ್ಗೆ ಅವರ ಪದದ ಅರ್ಥ ಬಗ್ಗೆ ತಿಳಿದ್ದಾರೆ. ಕೊಟ್ರೇಶ್ ಪಿ. ಅವರು ಸಾಮಾಜಿಕ ಬದಲಾವಣೆಯ ಹಾದಿಯಲ್ಲಿ ಬೇಡರು ಬಗ್ಗೆ ಎಂ.ಫಿಲ್ ನಿಬಂಧದಲ್ಲಿ ಬೇಡ ಜನಾಂಗದ ಬಗ್ಗೆ ತಿಳಿಸಿದ್ದಾರೆ. ಮರೆಪ್ಪ ಅವರು ಹಂಪಿ ಪರಿಸರದ ಬುಡಕಟ್ಟು ಸಮುದಾಯಗಳ ಸಾಮಾಜಿಕ ಸ್ಥಿತಿಗತಿ ಬಗ್ಗೆ ಎಂ.ಫಿಲ್ ನಿಬಂಧದಲ್ಲಿ ವಿಜಯನಗರದ ಕಾಲದಲ್ಲಿ ಹಂಪಿ ಪರಿಸರದ ಕೆಲವು ಬುಡಕಟ್ಟು ಬಗ್ಗೆ ಅವರ ಸ್ಥಿತಿಗತಿಯ ಬಗ್ಗೆ ತಿಳಿಸಿದ್ದಾರೆ.

ರಘುಶಂಖ ಭಾತಂಬ್ರಾ ಅವರ ಸಂಶೋಧನಾ ಪ್ರಬಂಧವಾದ *ವಚನಕಾರರ ವೃತ್ತಿ ಮೌಲ್ಯಗಳು* ಎಂಬ ಕೃತಿಯ ಅಧ್ಯಾಯ ಎರಡರಲ್ಲಿ ಪ್ರಾಚೀನ ಕಾಲದ ಕಸುಬುಗಳನ್ನು ವಿವರಿಸಿದ್ದಾರೆ. ಹಾಗೆ ಅಧ್ಯಾಯ ಮೂರು ಮತ್ತು ನಾಲ್ಕರಲ್ಲಿ ವಚನಕಾರರ ಕಾಲದಲ್ಲಿ ಯಾವ ವೃತ್ತಿಗಳಿದ್ದವು ಎಂಬುದನ್ನು ಅಂದಿನ ವಚನಗಳಲ್ಲಿ ವ್ಯಕ್ತವಾದ ಅಂಶಗಳ ಸಹಿತ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಅವುಗಳನ್ನು ಕೃಷಿ, ಒಕ್ಕಲಿಗ, ಆಯಗಾರ, ಸಂಕೀರ್ಣ ವೃತ್ತಿ, ಕಲಾ ವೃತ್ತಿ, ಮಹಿಳಾ ವೃತ್ತಿ ಎಂದು ವಿಭಾಗಿಸಿ ಕೊಂಡಿದ್ದಾರೆ.

ಲೇಖನಗಳು

ವಿಜಯನಗರ ಅಧ್ಯಯನ ಸಂಪುಟ–೩ರಲ್ಲಿ ಶ್ರೀನಿವಾಸ ಪಾಡಿಗಾರ ಅವರು ನಾಂವಿದ ಕಲೆಗೊಂದು ಸಯಾನ ಎಂಬ ಲೇಖನದಲ್ಲಿ ಸಮಾಜದ ಕೆಳಸ್ತರದಲ್ಲಿ ಇರುವ ಕ್ಷೌರಿಕ/ನಾವಿಂದ ವಿಧಿ, ಸಂಸ್ಕಾರ, ಸಾಮಾಜಿಕ ಸ್ಥಾನಮಾನ ನಾವಿಂದನ ವೃತ್ತಿಯ ಬಗ್ಗೆ ಇತ್ಯಾದಿ ಅಂಶಗಳನ್ನು ತಿಳಿಸಿದ್ದಾರೆ. ವಾಸುದೇವ ಬಡಿಗೇರ ಅವರು ಹಂಪಿ ಪ್ರದೇಶದ ಲೋಹಶಾಸ್ತ್ರ ಕಲೆ ಎಂಬ ಲೇಖನದಲ್ಲಿ ಕಬ್ಬಿಣದ ಉತ್ಪಾದನೆ, ಅದರ ಪ್ರಾಚೀನತೆ ಹಂಪಿ ಪ್ರದೇಶಗಳಲ್ಲಿ ಕಬ್ಬಿಣ ಬಳಕೆಯನ್ನು ಅದನ್ನು ಉತ್ಪಾದಿಸಿ ಕಮ್ಮಾರರ ವೃತ್ತಿ ಬಗ್ಗೆ ಅವರ ಕುಲುಮೆಗಳ ಹಿನ್ನೆಲೆ ಅವುಗಳ ಬಳಕೆ ಬಗ್ಗೆ ವಿವರಿಸಲಾಗಿದೆ.

ಗೋಪಾಲ್, ಆರ್., ಇತಿಹಾಸ ದರ್ಶನ ಸಂಪುಟ–೬ರಲ್ಲಿ, ಹೊಯ್ಸಳ ಕಾಲದ ಕೈಗಾರಿಕೆಗಳು ಕರ್ನಾಟಕ ಭಾರತೀಯ ಸಂಪುಟ–೩ ಸಂಚಿಕೆ–೩ರ ಆರ್.ಎನ್., ಗುರುವ ಅವರ ಎಂಟುಹಿಟ್ಟು ಹಾಗೂ ಸಂಪುಟ–೧೦ ಸಂಚಿಕೆ–೩ರಲ್ಲಿ ಶಾಸನಗಳಲ್ಲಿ ಸಂಘ, ಸಂಸ್ಥೆಗಳು ಹಾಗೂ ಆಯಾಗಾರಿಕೆ ಕುರಿತು ಅವರ ವೃತ್ತಿ ಸ್ಥಿತಿಗತಿ, ಆರ್ಥಿಕ, ಸಾಮಾಜಿಕ, ಧಾರ್ಮಿಕತೆಯ ಬಗ್ಗೆ ತಿಳಿಸಿದ್ದಾರೆ.

ಚೆನ್ನಕ್ಕ ಎಲಿಗಾರು ಕರ್ನಾಟಕ ಭಾರತಿ ಸಂಪುಟ–೬, ಸಂಚಿಕೆ–೩, ಅಯ್ಯಾವಳೆ ಐನೂವ್ರು ಎಂಬ ಲೇಖನವು ಸುಮಾರು ೧೬ನೆಯ ಶತಮಾನದ ಪಶ್ಚಿಮಾರ್ಧದವರೆಗಿದ್ದ ವ್ಯಾಪಾರ ಸಂಘವಾದ ಅಯ್ಯಾವೊಳೆ ಐನೂರ್ವ ಬಗ್ಗೆ ಅವರ ವ್ಯಾಪಾರ, ಕಸುಬುಗಾರಿಕೆ, ಉತ್ಪಾದನೆ, ವಿನಿಮಯ ಬಗ್ಗೆ ಪ್ರಸ್ತಾಪಿಸಿದ್ದಾರೆ.

ಗುರುರಾಜಾಚಾರ್, ಎಸ್., ಮಾನವಿಕ ಕರ್ಣಾಟಕ, ಸಂಪುಟ–೪, ಸಂಚಿಕೆ–೨ರಲ್ಲಿ ಕರ್ನಾಟಕದ ಕೆಲವು ಕೈಗಾರಿಕೆಗಳು (೧೬೦೦ವರೆಗೆ) ಲೇಖನ, ಮಾನವಿಕ ಕರ್ನಾಟಕ, ಸಂಪುಟ–೬, ಸಂಚಿಕೆ–೧ರ ಕರ್ನಾಟಕದ ಕೆಲವು ಖ್ಯಾತ ವರ್ತಕರು, ಕ್ರಿ.ಶ. ೧೩೦೦ರವರೆಗೆ ಲೇಖನ ಹಾಗೂ ಮಾನವಿಕ ಕರ್ನಾಟಕ, ಸಂಪುಟ–೪, ಸಂಚಿಕೆ, ಮಾಧ್ಯಕಾಲೀನ ಕರ್ನಾಟಕದ ವಿದೇಶಿ ವ್ಯಾಪಾರ ಲೇಖನಗಳು ಮಧ್ಯಕಾಲೀನ ಕರ್ನಾಟಕದ ಬಗ್ಗೆ ಹೊಸ ಬೆಳಕನ್ನು ಚೆಲ್ಲಿವೆ.

ವಿರೂಪಾಕ್ಷಿ ಪೂಜಾರಹಳ್ಳಿ ಅವರು ವಿಜಯನಗರ ಕಾಲದ ತಳವಾರಿಕೆ ಎಂಬ ಲೇಖನದಲ್ಲಿ ತಳವಾರಿಕೆ ಎನ್ನುವುದು ಒಂದು ಕುಲಕ್ಕೆ ಸಂಬಂಧಿಸಿದವರ ಬಗ್ಗೆ ಹಾಗೂ ಅವರ ಕಸುಬುಗಾರಿಕೆ ತಳವಾರರಿಗೆ ಸಂಬಂಧಿಸಿದ ಹಾಗೆ ವಿಜಯನಗರ ಕಾಲದಲ್ಲಿ ತುಂಬ ವ್ಯಾಪಕ ಆಗಿರುವುದು ಹುದ್ದೆಯ ನಿರ್ಣಾಯಕ ಬಗ್ಗೆ ಶಾಸನಗಳಲ್ಲಿ ತಿಳಿಸಿರುವುದರ ಬಗ್ಗೆ ಚರ್ಚಿಸಿದ್ದಾರೆ. ಮತ್ತು ಇವರು ವಿಜಯನಗರ ಕಾಲದಲ್ಲಿ ಮತ್ತೊಂದು ಕಸುಬಾದ ಬೇಟೆ ಹಾಗೂ ಬೇಡರ ಬಗ್ಗೆ ಬೇಡ ಪಡೆ, ಮೀಸಲು ಪಡೆ, ಅವರ ವಾಸನೆಲೆ ಬಗೆ, ಹಾಗೂ ಮೀನುಗಾರಿಕೆ, ಅವರು ಬಳಸುವ ಬಲೆ, ಕೊಳೆ, ಗಾಣ, ಅವರ ನಾಯಕತನವನ್ನು ಚರ್ಚಿಸಿದ್ದಾರೆ.

ಆಂಗ್ಲ ಕೃತಿಗಳು

ಕುಲಕಸುಬುಗಳು ಕುರಿತು ಪ್ರತ್ಯೇಕ ಅಧ್ಯಯನ ನಡೆದಿಲ್ಲವೆಂದೇ ಹೇಳಬಹುದು. ಆದರೆ

ಅಧ್ಯಯನದ ಒಂದು ವಿಭಾಗವಾಗಿ ಕೆಲವು ವಿದ್ವಾಂಸರು ತಮ್ಮ ಕೃತಿಗಳಲ್ಲಿ ಸಂದರ್ಭೋಚಿತವಾಗಿ ಅಭ್ಯಸಿಸಿರುವರು ಅಂತಹವರಲ್ಲಿ ಸಾಲೇತೊರೆ ಬಿ.ಎ., ಅವರು *ಸೋಷಿಯಲ್ ಅಂಡ್ ಪೊಲಿಟಿಕಲ್ ಲೈಫ್ ಇನ್ ದ ವಿಜಯನಗರ ಎಂಪಾಯಿರ್*, ಎಂಬ ಕೃತಿಯಲ್ಲಿ ವಿಜಯನಗರ ಕಾಲದಲ್ಲಿ ಸಾಮಾಜಿಕವಾಗಿ ಆಚರಣೆಗಳು ನಂಬಿಕೆ ಬಗ್ಗೆ ಮತ್ತು ಅಂದು ಅರಸರಾಧಿಯಾಗಿ ಸಾಮಂತರು ದೇವಾಲಯಗಳಿಗೆ ನೀಡಿರುವ ದಾನದತ್ತಿ ಬಿಟ್ಟ ವಿವರ ಸಾಮಾನ್ಯರಾಧಿಯಾಗಿ ಅರಸರು ಕೆಲವು ಕಸುಬುದಾರರಿಗೆ ಆಶ್ರಯನೀಡಿ ಅವರ ಮೇಲೆ ಸುಂಕ, ತೆರಿಗೆಗಳನ್ನು ವಿಧಿಸುವುದು ಇತ್ಯಾದಿ ಅಂಶವನ್ನು ಶಾಸನ, ಸಾಹಿತ್ಯ ವಿದೇಶಿ ಪ್ರವಾಸಿಗರ ವರದಿಗಳನ್ನು ಕೊಡುತ್ತಾ ಚರ್ಚಿಸಿದ್ದಾರೆ.

ಸಾಲೆತೊರೆ, ಆರ್.ಎನ್., ಅವರು *ವಿಜಯನಗರ ಆರ್ಟ್* ಎಂಬ ಕೃತಿಯಲ್ಲಿ ಅಂದಿನ ಅರಸರು ಸಾಮಾನ್ಯ ವರ್ಗದ ಕಸುಬುದಾರರು ಜನರ ಜೀವನ ಅವರ ಸ್ಥಾನಮಾನ ಅವರ ನಿರ್ಣಯಗಳ ಕುರಿತು ಪಾಂಚಾಳರಲ್ಲಿ ಒಬ್ಬರಾದ ಶಿಲ್ಪಗಳು ಮತ್ತು ಕಂಡರಣೆಕಾರರ ಕುರಿತು ಶಾಸನಗಳ ಹಿನ್ನೆಲೆಯಲ್ಲಿ ಅವರ ನಂಬಿಕೆ ಆಚರಣೆಯನ್ನು ಶಿಲ್ಪಗಳನ್ನು ಕೆತ್ತುವ ಮೂಲಕ ಆ ಶಿಲ್ಪಿಗಳಲ್ಲಿ ಕೆಲವು ಬೇಟೆಗಾರರು ಬೇಟೆಯಾಡುವ ಚಿತ್ರಣ, ನೃತ್ಯ, ಸಂಗೀತದ ಪರಿಕಗಳು, ವಿದೇಶಿಯ ಪ್ರವಾಸಿಗರ ಬೇಟೆಯ ಚಿತ್ರಣ ಅಲ್ಲಿಯ ಒಂದು ಸ್ಥಾನಮಾನವನ್ನು ಇನ್ನೂ ಅನೇಕ ಅಂಶಗಳನ್ನು ವಿಶ್ಲೇಷಿಸಿದ್ದಾರೆ.

ಮಹಾಲಿಂಗಂ, ಟಿ.ವಿ., ಅವರು *ಅಡ್ಮಿನಿಸ್ಟ್ರೇಷನ್ ಅಂಡ್ ಸೋಷಿಯಲ್ ಲೈಫ್ ಅಂಡರ್ ವಿಜಯ್ಯನಗರ ಸೋಷಿಯಲ್ ಲೈಫ್ ಪಾರ್ಟ್-೨* ಎಂಬ ಕೃತಿಯಲ್ಲಿ ಅಂದಿನ ಸಾಮಾಜಿಕ ಜೀವನದ ಚಿತ್ರಣವಿದೆ. ಜನರು ಸಮಾಜದಲ್ಲಿ ತಮ್ಮ ಸ್ಥಾನ ಮಾನಗಳನ್ನು ಯಾವ ರೀತಿ ಗುರುತಿಸಿಕೊಂಡಿದ್ದರು ಹಾಗೂ ಅವರು ಅಂದಿನ ಕಾಲದಲ್ಲಿ ಸಂಘ, ಸಂಸ್ಥೆ, ಶ್ರೇಣಿಗಳ ಮೂಲಕ ಅನೇಕ ಕಸುಬುದಾರರ ಸಾಮಾಜಿಕ ಧಾರ್ಮಿಕತೆ, ಆರ್ಥಿಕತೆಯ ಪ್ರಭಾವವು ಕುರಿತು ಚರ್ಚಿಸಿದ್ದಾರೆ.

ಹನುಮನಾಯಕ, ಅವರು *ಅಡಿಸಿನೋ ಅಂಡ್ ಟ್ರೇಡಿಂಗ್ ಅಕ್ಟವೇರಿಸ್ ಇನ್ ಮಿಡಿವಲ್ ಕರ್ನಾಟಕ (ಎ.ಡಿ. ೯೭೩-೧೩೩೬)* ಎಂಬ ಮಹಾಪ್ರಬಂಧದಲ್ಲಿ ಮಧ್ಯಕಾಲೀನ ಕರ್ನಾಟಕದ ಬಟ್ಟೆ ತಯಾರಿಕೆ, ಉಣ್ಣೆ ಉತ್ಪಾದನೆ, ಬೆಲ್ಲ ಉತ್ಪಾದನೆ, ಲೋಹದ (ಚಿನ್ನ, ಬೆಳ್ಳಿ, ತಾಮ್ರ, ಕಂಚು ಮತ್ತು ಕಬ್ಬಿಣ) ಕೆಲಸ ಮಡಿಕೆ ತಯಾರಿಕೆ, ಮರಗೆಲಸ, ಚರ್ಮ ಹದಮಾಡುವುದು, ಉಪ್ಪುತಯಾರಿಕೆ ಮುಂತಾದ ಕಸುಬುದಾರರ ವ್ಯಾಪಾರ ಚಟುವಟಿಕೆ, ಕುರಿತಾಗಿಯೂ ಶ್ರೇಣಿಗಳಾದ ಅಯ್ಯಾವೊಳೆ, ಅಯ್ನೂರ್ವರು, ನಾನಾದೇಸಿಗಳು, ಮುಮ್ಮರಿದಂಡಗಳು, ಉಭಯನಾನಾದೇಸಿಗಳು, ಮಹಾವಡ್ಡ ವ್ಯವಹಾರಿಗಳು, ದೇಸಿ, ಸೆಟ್ಟಿ ಮತ್ತು ಸೆಟ್ಟಿಗುತ್ತರು, ಗವರೆ, ಗಾತ್ರಗರು, ಹಂಜಮಾನ್ ಮೊದಲಾದ ಕಸುಬುಗಾರರ ಸಾಮಾಜಿಕತೆ, ಆರ್ಥಿಕತೆ ಬಗೆ ಹಾಗೂ ೧೧, ೧೨, ೧೩, ಮತ್ತು ೧೪ನೆಯ ಶತಮಾನದಲ್ಲಿ ಉತ್ಪಾದನೆ ವಿನಿಮಯ ಕೇಂದ್ರಗಳನ್ನು ಅಂಕಿ ಅಂಶಗಳ ಮೂಲಕ ಚರ್ಚಿಸಿದ್ದಾರೆ.

ಕುಪ್ಪುಸ್ವಾಮಿ, ಜಿ.ಆರ್., ಅವರು *ಎಕಾನಾಮಿಕ್ ಕಂಡಿಷನ್ ಇನ್ ಕರ್ನಾಟಕ (೯೭೩-೧೩೩೬ ಎ.ಡಿ.)* ಗ್ರಂಥದಲ್ಲಿ ವ್ಯಾಪಾರಿ ಸಂಘಗಳು ವೃತ್ತಿ ಶ್ರೇಣಿಗಳು ಮಧ್ಯಕಾಲದ ಕೈಗಾರಿಕೆ ಬೆಳವಣಿಗೆಯಲ್ಲಿ ಉದ್ಯಮ ಸಕ್ಕರೆ, ಅಡಕೆ, ಉಪ್ಪು, ಬೊಂಬು ತಯಾರಿಕೆ, ಲೋಹತಯಾರಿಕೆ, ಬಟ್ಟೆ ಉದ್ಯಮ, ಸುಗಂಧ ತಯಾರಿಕೆ, ಧರ್ಮ ಉದ್ಯಮ ಮೊದಲಾದವುಗಳ ಕಸುಬುದಾರರು ತಮ್ಮ ಕಸುಬಿನಲ್ಲಿ ತೊಡಗಿಸಿಕೊಂಡಿರುವುದನ್ನು ಶಾಸನಗಳಲ್ಲಿ ಉಕ್ತವಾಗಿರುವ ದಾಖಲೆಗಳನ್ನು ನೀಡುತ್ತ ಚರ್ಚಿಸಿದ್ದಾರೆ.

ವೆಂಕಟರಾಮಣಯ್ಯ, ಅವರು *ಸ್ಟಡೀಸ್ ಇನ್ ದ ಹಿಸ್ಟರಿ ಆಫ್ ದ ಥರ್ಡ್ ಡೈನಾಸ್ಟಿ ಆಫ್ ವಿಜಯನಗರ* ಎಂಬ ಕೃತಿಯು ವಿಜಯನಗರದ ಅರಸರು ಹಾಗೂ ಅಲ್ಲಿಯ ಕಸುಬುದಾರರ ಸಾಮಾಜಿಕ ಜೀವನ ಅವರು ಅಂದು ಸಮಾಜದಲ್ಲಿ ಕೆಲವು ಕಸುಬುದಾರರು ಉನ್ನತ ವರ್ಗದವರು ಕೆಳವರ್ಗದವರು ಸಾಮಾಜದಲ್ಲಿ ಯಾವ ರೀತಿಯ ಪ್ರಭಾವ ಬೀರಿದ್ದರು ಅವರ ಸ್ಥಾನಮಾನ ಕುರಿತು ಈ ರೀತಿ ಅನೇಕ ಸಂಗತಿಗಳನ್ನು ಚರ್ಚಿಸಿದ್ದಾರೆ.

ರಮೇಂದ್ರ ನಾಥ್, ಅವರು *ಸ್ಟೇಟ್ ಪಾರ್ಮೇಷನ್ ಅಗ್ರೇನ್ ಗ್ರೋಥ್ ಅಂಡ್ ಸೋಷಿಯಲ್ ಚೇಂಜ್ ಇನ್ ಫ್ಯೂಡಲ್ ಸೌತ್ ಇಂಡಿಯಾ (ಎ.ಡಿ.೬೦೦-೧೨೦೦)* ಕೃತಿಯಲ್ಲಿ ಆರ್ಥಿಕತೆಯ ಕುರಿತು ಕಸುಬುದಾರರು ತಮ್ಮ ವಸ್ತುಗಳನ್ನು ಉತ್ಪಾದಿಸಿ ಅವುಗಳನ್ನು ಮಾರಾಟ ತಯಾರಿಕೆ ಕೃಷಿಯ ಬಗ್ಗೆ ಸಾಮಾಜಿಕತೆಯ ಅಂಶಗಳನ್ನು ವಿವರವಾಗಿ ತಿಳಿಸಿದ್ದಾರೆ. ಇವರು ೧೦ ಮತ್ತು ೧೧ನೆಯ ಶತಮಾನದಲ್ಲಿ ಶಾಸನಗಳಲ್ಲಿ ಕಸುಬುದಾರರ ಕುಟುಂಬ ಬಗ್ಗೆ ಎಣ್ಣೆಯನ್ನು ಗಾಣಗಳು ಹಾಗೂ ಮಗ್ಗಗಳಿಂದ ಆಗುತ್ತಿದ್ದ ಉತ್ಪಾದನೆಯ ವಿಧಾನ ಕಡಿಮೆಯಾಯಿತೆಂದು ಹೇಳುತ್ತಾರೆ. ಮತ್ತು ೧೧ನೆಯ ಶತಮಾನದಲ್ಲಿ ವಿವಿಧ ವೃತ್ತಿಪರರ ಮೇಲೆ ಉಳಿಗಮಾನ್ಯ ವ್ಯವಸ್ಥೆ ವೃತ್ತಿಗಳು ಮತ್ತು ವೃತ್ತಿಪರರ ಮೇಲೆ ಒತ್ತಡ ಉಂಟಾಗುತ್ತಿದ್ದುದು ಅಂದರೆ ಅಲ್ಲಿ ವಿಧಿ ನಿಷೇಧಗಳನ್ನು ಚರ್ಚಿಸಿದ್ದಾರೆ.

ಕೆಲ್ಲಿಸನ್ ಕೊಲ್ಹ್ಯಯರ್, ಅವರು *ದ ಹೊಯ್ಸಳ ಆರ್ಟ್ಸ್ ದೇರ್ ಐಡೇಂಟಿಟಿ ಅಂಡ್ ಸ್ಟೈಲ್* ಎಂಬ ಗ್ರಂಥದಲ್ಲಿ ಹೊಯ್ಸಳರ ಕಾಲದ ಶಿಲ್ಪಿಗಳ ಕುರಿತು ಹಾಗೂ ೧೨, ೧೩ನೆಯ ಶತಮಾನ ಎಂದು ವಿಂಗಡಿಸಿಕೊಂಡು ದೇವಾಲಯ ಮತ್ತು ಶಿಲ್ಪ ರಚನೆಗೆ ಶಿಲ್ಪಿಯ ಕಸುಬು ಎಷ್ಟು ಮುಖ್ಯ ಮತ್ತು ಒಬ್ಬೊಬ್ಬ ಶಿಲ್ಪಿಯೂ ಪ್ರತ್ಯೇಕವಾಗಿ ಶಿಲ್ಪ ಶೈಲಿಯನ್ನು ಹೊಂದಿರುವುದು ವಿಭಾಗಿಸಿ ಚರ್ಚಿಸಿದ್ದಾರೆ.

ಗುರುರಾಜಾಚಾರ್, ಎಸ್., ಅವರು *ಸಮ್ ಅಸ್ಪೆಕ್ಟ್ಸ್ ಆಫ್ ಎಕಾನಾಮಿಕ್ ಅಂಡ್ ಸೋಶಿಯಲ್ ಲೈಫ್ ಇನ್ ಕರ್ನಾಟಕ (೧೦೦೦-೧೩೦೦ ಎ.ಡಿ.)* ಗ್ರಂಥದಲ್ಲಿ ಕರ್ನಾಟಕದ ಕೆಲವು ಕೈಗಾರಿಕೆ ಗುರುತಿಸುತ್ತಾನೆ. ಅನೇಕ ಕಸುಬುದಾರರ ತಯಾರಿಕೆ ಅಂದರೆ ನೇಯ್ಗೆ, ಬೆಲ್ಲ ಹಾಗೂ ಸಕ್ಕರೆ ಎಣ್ಣೆ, ಉಪ್ಪು, ಮರಗೆಲಸ ಮಡಿಕೆ ತಯಾರಿಕೆ, ಬಳೆ ಮತ್ತು ಮಣಿಗಳ ತಯಾರಿಕೆ, ಚರ್ಮ ಕೆಲಸ, ಹಾಗೂ ಲೋಹದ ಕೆಲಸ ಆಭರಣ ತಯಾರಿ ಮೊದಲಾದವುಗಳನ್ನು ಶಾಸನಗಳ ಹಿನ್ನೆಲೆಯಲ್ಲಿ ಚರ್ಚಿಸುವ ಪ್ರಯತ್ನ ನಡೆದಿದೆ.

ವಿಜಯ ರಾಮಸ್ವಾಮಿ, ಅವರು *ಸಮ್ ಎನ್‌ಕ್ವೈರಿಸ್ ಇನ್ ಟು ದ ಕಂಡಿಷನ್ ಆಫ್ ವೇವರ್ಸ್ ಇನ್ ಮಿಡಿವಲ್ ಸೌತ್ ಇಂಡಿಯಾ* ಎಂಬ ಲೇಖನವು ಮಧ್ಯಯುಗಿನ ದಕ್ಷಿಣ ಭಾರತದ ನೇಕಾರ ಸಮುದಾಯವೊಂದನ್ನು ಕುರಿತು ಕರ್ನಾಟಕ ಮತ್ತು ಆಂಧ್ರದಲ್ಲಿ ವಿಜಯನಗರ ಕಾಲದಲ್ಲಿ ಪ್ರಭಾವಯುತವಾದ ಎರಡು ನೇಕಾರ ಸಮುದಾಯಗಳೆಂದರೆ ದೇವಾಂಗ ಮತ್ತು ಸಾಲೆ ಅಲ್ಪಸಂಖ್ಯಾತ ನೇಕಾರ ಜಾತಿಗಳಾಗಿ ಜೇಡರ ಸೆನಿಯಾರ್ ಎಂದು ಗುರುತಿಸಿದ್ದಾರೆ.

ಪ್ರಸ್ತುತ ಮೇಲೆ ಹೇಳಿದ ಕೃತಿಗಳಲ್ಲಿ ವಿಜಯನಗರ ಕಾಲದ ಕುಲಕಸುಬುಗಳ ಕುರಿತು ತಕ್ಕ ಮಟ್ಟಿಗೆ ದಾಖಲಿಸಲು ಪ್ರಯತ್ನಿಸಿವೆ. ಆದರೆ ಸಮಗ್ರವಾದ ವಿಶ್ಲೇಷಣಾತ್ಮಕವಾದ ಅಧ್ಯಯನವಾಗಿಲ್ಲ. ಕುಲಕಸುಬುಗಳಿಗೆ ಸಂಬಂಧಿಸಿದಂತೆ ಇನ್ನಷ್ಟು ಆಳವಾದ ಬಹು ಆಯಾಮದ ಪರಿಕಲ್ಪನೆಗಳ ಚೌಕಟ್ಟಿನಲ್ಲಿ ಅಧ್ಯಯನದ ಅವಶ್ಯಕತೆ ಇದ್ದೇ ಇದೆ. ಆ ದೃಷ್ಟಿಕೋನದಲ್ಲಿ ಮೇಲಿನ ಶೀರ್ಷಿಕೆಯನ್ನಿಟ್ಟುಕೊಂಡು ಸಮಗ್ರ ಅಧ್ಯಯನ ಮಾಡಲು ಪ್ರಯತ್ನಿಸಿದ್ದೇನೆ.

ಕಸುಬುಗಳ ಬಗ್ಗೆ ಕುರಿತು ಭಾರತದ ಮಟ್ಟಿಗೆ ಸಾಕಷ್ಟು ಕೆಲಸ ನಡೆದಿರುವುದನ್ನು ಕಾಣಬಹುದು. ಕರ್ನಾಟಕದ ಮಟ್ಟಿಗೆ ಡಾ.ಸಿ.ಯು. ಮಂಜುನಾಥ 'ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ' ಎನ್ನುವ ಕೃತಿಯಲ್ಲಿ ಕೆಲವು ಕುಲ/ಜಾತಿಗಳ ಬಗ್ಗೆ ಹಾಗೂ ಅವರ ವೃತ್ತಿ, ಆರ್ಥಿಕತೆ, ಸಾಮಾಜಿಕ ಸ್ಥಿತಿಗತಿಯ ಬಗ್ಗೆ ತಿಳಿಸಿದ್ದಾರೆ.

ಎ.ಎಸ್. ಅಲ್ಟೆಕರ್ ಅವರು 'ದ ಪೊಜಿಶಿಯನ್ ಆಫ್ ಉಮೇನ್ ಇನ್ ಹಿಂದೂ ಸಿವಿಲ್‌ಜೇಷನ್ಸ್' ಕೃತಿಯಲ್ಲಿ ಕುಲಗಳ ವಿವಾಹ, ಸಂಪ್ರದಾಯ, ಆಚರಣೆ, ನಂಬಿಕೆಯ ಬಗ್ಗೆ ವಿಶ್ಲೇಷಿಸಿದ್ದಾರೆ. ಮತ್ತೊಂದು ಕೃತಿಯಾದ 'ಸ್ಟೇಟ್ ಅಂಡ್ ಗೌರ್‍ನಮೆಂಟ್ ಇನ್ ಏನ್ಸೆಟ್ ಇಂಡಿಯಾ' ಕೃತಿಯಲ್ಲಿ ಪುರೋಹಿತ ಜನಾಂಗದ ಬಗ್ಗೆ ಅವರ ಸ್ಥಾನಮಾನಗಳ ಬಗ್ಗೆ ಚರ್ಚಿಸಿದ್ದಾರೆ. ಬಿ.ಎ. ಸಾಲೆತೋರೆ 'ಸೋಶಿಯಲ್ ಅಂಡ್ ಪೊಲಿಟಿಕಲ್ ಲೈಫ್ ಇನ್ ದಿ ವಿಜಯನಗರ ಎಂಫೈರ್ ಕೃತಿಯಲ್ಲಿ ಕ್ಷತ್ರಿಯ ಹಾಗೂ ಪುರೋಹಿತರ ನಡುವಿನ ಸಂಬಂಧವು ವಿಜಯನಗರ ಸಾಮ್ರಾಜ್ಯದಲ್ಲಿ ಯಾವ ರೀತಿ ಇತ್ತು ಅವರ ಸ್ಥಾನಮಾನ ಶಾಸನ ಬದ್ಧವಾಗಿಗೊಳಿಸಿರುವು ಇತ್ಯಾಧಿ ಅಂಶಗಳನ್ನು ತಿಳಿಸಿದ್ದಾರೆ.

ಟಿ.ವಿ. ಮಹಲಿಂಗಂ ಅವರು 'ಸೌತ್ ಇಂಡಿಯನ್ ಪೊಲೀಟಿ' ಮತ್ತು 'ಅಡ್ಮಿನಿಸ್ಟ್ರೇಶನ್ ಅಂಡ್ ಸೋಶಿಯಲ್ ಲೈಫ್ ಅಂಡರ್ ವಿಜಯನಗರ' ಕೃತಿಗಳಲ್ಲಿ ಮಧ್ಯಕಾಲದಲ್ಲಿ ಯಾವ ರೀತಿಯ ಧಾರ್ಮಿಕ, ಆಡಳಿತ, ಸಾಮಾಜಿಕ, ವ್ಯವಸ್ಥೆಗಳು ಮತ್ತು ಕುಲಕಸುಬುಗಳ ಬಗ್ಗೆ ಕುರಿತು ಅಧ್ಯಯದಲ್ಲಿ ಹಲವಾರು ಮಾಹಿತಿಗಳನ್ನು ವಿಶ್ಲೇಷಿಸಿದ್ದಾರೆ.

ಆದರೆ ಇಲ್ಲಿ ಬಳಸಿಕೊಂಡ ಅಕರಗಳು ಹೆಚ್ಚಾಗಿ ಕಾವ್ಯಗಳು, ವಚನಗಳೇ ಆಗಿವೆ ಕಾವ್ಯ ವಚನಗಳನ್ನಾಧರಿಸಿ ತಮ್ಮ ಅಧ್ಯಯನವನ್ನು ಕೈಗೊಂಡಿರುವುದು ಜಾತಿ, ವೃತ್ತಿಯನ್ನು ಒಂದುಗೂಡಿಸುವಲ್ಲಿ ಕಾವ್ಯಗಳು ವಚನಗಳೇ ಅವರ ಪ್ರಮುಖ ವಸ್ತುಗಳಾಗಿವೆ ವಿಜಯನಗರ ಕಾಲದ ಕುಲಕಸುಬುಗಳ ವ್ಯವಸ್ಥೆಯನ್ನು ಕುರಿತು ಅಧ್ಯಯನಕ್ಕೆ ಮಾರ್ಗದರ್ಶಿಯಾಗಿ ಮುನ್ನಡೆಸಿವೆ. ಈ ಮೇಲಿನ ಸಮೀಕ್ಷೆಗಳ ಹಿನ್ನೆಲೆಯಲ್ಲಿ ವಿಜಯನಗರ ಕಾಲದ ಕುಲಕಸುಬುಗಳು ಎಂಬ

ವಿಷಯದ ಮೇಲೆ ಪ್ರತ್ಯೇಕವಾದ ಅಧ್ಯಯನ ಅಗತ್ಯವೆಂದು ಅರಿತು ಆಯ್ದುಕೊಳ್ಳಲಾಗಿದೆ. ಈ ರೀತಿಯ ಮಹಾಪ್ರಬಂಧಗಳು, ನಿಬಂಧಗಳು ಬಿಡಿ ಬಿಡಿ ಲೇಖನಗಳಲ್ಲಿ, ಕೆಲವು ಜನಾಂಗದ ಬಗ್ಗೆ ಹೇಳಿದ್ದಾರೆ. ಅದರೆ ವಿಜಯನಗರ ಸಾಮ್ರಾಜ್ಯದಲ್ಲಿ ಇನ್ನೂ ಕೆಲವೊಂದು ಕುಲಗಳ ಬಗ್ಗೆ ಅವರ ಕಸುಬು ಹಾಗೂ ಉಪಕಸುಬುಗಳ ಬಗ್ಗೆ ಒಂದೆಡೆ ಅಧ್ಯಯನ ನಡೆದಿಲ್ಲ ಅವುಗಳನ್ನು ಒಂದೆಡೆ ಚಾರಿತ್ರಿಕವಾಗಿ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ.

ವಿಧಾನ

ಪ್ರಸ್ತುತ ಅಧ್ಯಯನ ವಿಧಾನದಲ್ಲಿ ವಿಜಯನಗರ ಕಾಲದ ಕಸುಬುಗಳ ಕುರಿತು ಇದುವರೆಗೆ ನಡೆಸಿದ ಅಂಕಿ–ಅಂಶ, ವರದಿ. ಸಾಹಿತ್ಯಿಕ ಗ್ರಂಥಗಳು, ಸರಕಾರ ಹಾಗೂ ಸಂಘ ಸಂಸ್ಥೆಗಳ ಸಮೀಕ್ಷಾ ವರದಿಗಳು ವಿವಿಧ ಪತ್ರಿಕೆ ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟವಾದ ಲೇಖನಗಳು, ಪ್ರಕಟಿತ ಮತ್ತು ಅಪ್ರಕಟಿತ ಎಂಫಿಲ್, ಪಿಎಚ್.ಡಿ ಪ್ರಬಂಧಗಳನ್ನು ಬಳಸಿಕೊಂಡು ಅಧ್ಯಯನಕ್ಕೆ ವಿಧಾನವನ್ನು ರೂಪಿಸಿಕೊಳ್ಳಲಾಗಿದೆ.

ಪ್ರಸ್ತುತ ಸಂಶೋಧನೆಗೆ ಅಧ್ಯಯನ ಕ್ರಮ, ವಿಧಾನ ಅತಿಮುಖ್ಯ ಅಧ್ಯಯನವನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲು ಉಪಯುಕ್ತವಾದ ಅಧ್ಯಯನ ವಿಧಾನವಿರಬೇಕಾಗುತ್ತದೆ. ಪ್ರಸ್ತುತ ಅಧ್ಯಯನ ಆರಂಭಿಸುವ ಮುನ್ನ ವಿಜಯನಗರ ಸಾಮ್ರಾಜ್ಯವನ್ನು ಕುರಿತ ಗ್ರಂಥಗಳ ಸೂಚಿಯನ್ನು ತಯಾರಿಸಿ, ಅಧ್ಯಯನ ವಿಷಯಗಳ ಸಮೀಕ್ಷೆ ನಡೆಸಿ ಇದುವರೆಗೆ ನಡೆದಿರುವ ಹಾಗೂ ನಡೆಯಬೇಕಾದ ಅಧ್ಯಯನಗಳನ್ನು ಹಲವು ವಿದ್ವಾಂಸರೊಂದಿಗೆ ಚರ್ಚಿಸಿ ಅಧ್ಯಯನ ಮಾಡಲಾಗಿದೆ. ಕ್ಷೇತ್ರಕಾರ್ಯ ಪ್ರಾಥಮಿಕ, ಮಾಧ್ಯಮಿಕ ಆಕರಗಳನ್ನು ಬಳಸಿಕೊಂಡು ಅಧ್ಯಯನ ಮಾಡಿ ವಿಶ್ಲೇಷಿಸಲಾಗಿದೆ. ಪ್ರಮುಖವಾಗಿ ಸಮೀಕ್ಷಾ ವಿಧಾನದಿಂದ ಗುರುತಿಸಿ ಕಸಬುದಾರರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳ ಮಾಹಿತಿ ಸಂಗ್ರಹಿಸಿ ಅಧ್ಯಯನ ಮಾಡಲಾಗಿದೆ.

ಸ್ವರೂಪ

ಅಧ್ಯಯನದ ಅನುಕೂಲಕ್ಕಾಗಿ ಆರು ಅಧ್ಯಾಯಗಳನ್ನು ಮಾಡಿಕೊಳ್ಳಲಾಗಿದೆ, ಮೊದಲನೆಯ ಅಧ್ಯಾಯನವು ಪ್ರಸ್ತಾವನೆ, ವ್ಯಾಪ್ತಿ, ವಿಧಾನ, ಉದ್ದೇಶ, ಈವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆಯನ್ನು ಒಳಗೊಂಡಿದೆ. ಇಲ್ಲಿ ವಿಜಯನಗರಕ್ಕೆ ಸಂಬಂಧಿಸಿದ ಪೀಠಿಕೆ ತಿಳಿಸಿ, ಅಧ್ಯಯನದ ವ್ಯಾಪ್ತಿಯನ್ನು ಮತ್ತು ಉದ್ದೇಶ ವಿಧಾನ ತಿಳಿಸಲಾಗಿದೆ.

ಎರಡನೆಯ ಅಧ್ಯಾಯವು ಕುಲಕಸುಬುಗಳ ಚಾರಿತ್ರಿಕ ಹಿನ್ನೆಲೆ ಇದರಲ್ಲಿ ಕುಲಕಸುಬುಗಳ ಬಗ್ಗೆ ಸಮಗ್ರವಾಗಿ ತಿಳಿಸಲಾಗಿದೆ. ಕುಲಕಸಬು ಅರ್ಥ ಸ್ವರೂಪ ಹಾಗು ಅವುಗಳ ಪ್ರಾಚೀನತೆ ಜೊತೆಗೆ ಅವುಗಳು ಬೆಳೆದು ಬಂದ ಬಗೆಯನ್ನು ಅರ್ಥೈಸಲಾಗಿದೆ, ಅದರಲ್ಲಿ ಹದಿನೆಂಟು

ಕುಲಗಳ ಬಗ್ಗೆ ಅದರ ಚಾರಿತ್ರಿಕ ಹಿನ್ನೆಲೆ ಬಗ್ಗೆ ತಿಳಿಸಿಕೊಡಲಾಗಿದೆ. ಉಪಕುಲಗಳನ್ನು ವರ್ಗೀಕರಿಸಿ ಅವುಗಳ ವೃತ್ತಿ, ಆದಾಯ, ಹೀಗೆ ಅನೇಕ ಅಂಶಗಳನ್ನು ಗುರುತಿಸಿ ವಿಶ್ಲೇಷಿಸಲಾಗುವುದು. ಕುಲಗಳಿಂದ ಜಾತಿಗಳು ಹೇಗೆ ಉಗಮಗೊಂಡವು ಎಂಬುದನ್ನು ಮನನ ಮಾಡಿಕೊಡಲಾಗಿದೆ.

ಅಧ್ಯಾಯ ಮೂರರಲ್ಲಿ ವಿಜಯನಗರ ಕಾಲದ ಕುಲಕಸುಬುಗಳು. ಅಂದು ಯಾರು ಕಸುಬುಗಳನ್ನು ಮಾಡುತ್ತಿದ್ದರು ಶಾಸನೋಕ್ತ ಹದಿನೆಂಟು ವೃತ್ತಿಗಳು, ಅದರಲ್ಲಿ ಉಪವೃತ್ತಿಗಳು ಎಷ್ಟು ವಿಧಗಳಿವೆ ಎಂದು ಗುರುತಿಸಲಾಗಿದೆ. ಕುಲಕಸುಬುದಾರರ ಸಾಮಾಜಿಕ ಬದುಕು ಹೇಗಿತ್ತು ಅವರ ನಂಬಿಕೆ, ಐತಿಹ್ಯ, ಆಚರಣೆ, ಹಬ್ಬ, ಜಾತ್ರೆ, ಉತ್ಸವ ಇತ್ಯಾದಿ ಅಂಶಗಳನ್ನು ತಿಳಿಸಲಾಗುವುದು. ಆ ಕುಲಕಸುಬುದಾರರ ಧಾರ್ಮಿಕ ಸಂಗತಿಗಳನ್ನು ಮತ್ತು ಕಸುಬುಗಳ ಸ್ವರೂಪ ತಿಳಿಸಿ ಕಸುಬುಗಳಿಂದ ತಯಾರಾದ ವಸ್ತುಗಳಿಗೆ ಯಾವ ರೀತಿಯ ಮಾರುಕಟ್ಟೆ ವ್ಯವಸ್ಥೆ ಇತ್ತು ಅದನ್ನು ಹೇಗೆ ನಿರ್ವಹಿಸುತ್ತಿದ್ದರು ಅವರು ವ್ಯಾಪಾರ, ವ್ಯವಹಾರ, ನಡೆಸಿರುವುದನ್ನು ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ನಂಬಿಕೆ, ಆಚರಣೆ, ವಿಧಿ–ನಿಷೇದ,ಜ್ಞಾನ ಕುರಿತು ವಿವರಿಸಿದೆ. ವಿಜಯನಗರ ಕಾಲದಲ್ಲಿ ಅನೇಕ ಕಸುಬುಗಳಿದ್ದವು, ಅವುಗಳಿಗೆ ಸಂಬಂದಿಸಿದ ನಂಬಿಕೆ, ಆಚರಣೆ, ಐತಿಹ್ಯಗಳಿವೆ ಅವುಗಳನ್ನು ಸ್ಥೂಲವಾಗಿ ವಿವರಿಸಲಾಗಿದೆ. ಪ್ರತಿ ಕಸುಬುಗಳಿಗೆ ಪಾರಂಪರಿಕ ಜ್ಞಾನವಿದೆ. ವಿಜಯನಗರ ಕಾಲದಲ್ಲಿ ಒಂದು ವಸ್ತುವನ್ನು ತಯಾರಿಸಬೇಕಾದರೆ ಉದಾ: ಕುಂಬಾರ, ಅಕ್ಕಸಾಲಿ, ಕಂಬಾರ, ಮೇದಾರ, ಚಮ್ಮಾರ, ನೇಕಾರ, ತಮ್ಮ ವಸ್ತುಗಳನ್ನು ತಯಾರಿಸಬೇಕಾದರೆ ತಮ್ಮದೆ ಆದ ಜ್ಞಾನ ಶಿಸ್ತನ್ನು ಅಳವಡಿಕೊಂಡಿದ್ದರು ಈ ರೀತಿಯಾಗಿ ಅಂದಿನ ಕಸುಬುಗಳ ಪಾರಂಪರಿಕ ಜ್ಞಾನದ ಬಗ್ಗೆ ತಿಳಿಸಲಾಗಿದೆ

ಅಧ್ಯಾಯ ಐದರಲ್ಲಿ ಪ್ರಸ್ತುತ ಕಸುಬುಗಳ ಸ್ಥಿತ್ಯಂತರ. ಹಿಂದೆ ಕುಲಕಸುಬುಗಳು ಯಾವ ರೀತಿಯ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದವು. ಅವು ಇತ್ತಿಚಿನ ದಿನಗಳಲ್ಲಿ ಎಷ್ಟರ ಮಟ್ಟಿಗೆ ಉಳಿದುಕೊಂಡು ಬಂದಿವೆ ಅವುಗಳ ಮೇಲೆ ಇಂದಿನ ಜಾಗತಿಕರಣ, ಖಾಸಗಿಕರಣ, ವಿದೇಶಿ ವ್ಯಾಪಾರ ನೀತಿಗಳು ಯಾವ ರೀತಿ ಪ್ರಭಾವ ಬೀರಿದೆ ಹೇಗೆ ಸ್ಥಿತ್ಯಂತರಗೊಂಡಿವೆ ಎಂಬುದನ್ನು ವಿವರಿಸಲಾಗಿದೆ.

ಆರನೆಯ ಅಧ್ಯಾಯವು ಸಮಾರೋಪವಾಗಿದ್ದು ಒಟ್ಟಾರೆ ಅಧ್ಯಯನದ ಫಲಿತಗಳ ಜೊತೆಗೆ ಅನುಬಂಧಗಳು, ಆಧಾರಗ್ರಂಥಗಳು, ಛಾಯಾಚಿತ್ರ, ಸಂಕ್ಷೇಪ, ಸೂಚಿಗಳನ್ನು ನೀಡಲಾಗಿದೆ.

ಅಧ್ಯಾಯ-೨

ಚಾರಿತ್ರಿಕ ಹಿನ್ನೆಲೆ

ಪ್ರತಿಯೊಂದು ಕಸುಬಿಗೆ ತನ್ನದೇ ಆದ ಇತಿಹಾಸವಿದೆ. ಆದರೆ ಲಿಖಿತ ಪರಂಪರೆಯಿಲ್ಲದ ಕಸುಬುಗಳ ಪ್ರಾಚೀನತೆಯನ್ನು ತಿಳಿಯುವುದು ಕಷ್ಟದ ಕೆಲಸವಾಗಿರುತ್ತದೆ. ಬೇಟೆಗಾರಿಕೆಯನ್ನು ತನ್ನ ಮೂಲ ಕಸುಬನ್ನಾಗಿಸಿಕೊಂಡಿದ್ದ ಆದಿ ಮಾನವ ಪ್ರಾಣಿಗಳನ್ನು ಆಹಾರಕ್ಕಾಗಿ ಬೇಟೆಯಡುತ್ತಾ ಸಲಹುತ್ತಾ, ತಿನ್ನುತ್ತಾ ಅವುಗಳೊಂದಿಗೆ ಕ್ರಮೇಣ ಪಶುಪಾಲನೆಯನ್ನು ತನ್ನ ಕಸುಬನ್ನಾಗಿಸಿಕೊಂಡ. ನಂತರ ಅದರ ವಿಸ್ತಾರಗೊಂಡ ಮುಂದಿನ ಹಂತವೇ ಕೃಷಿ. ಈ ಹಂತದಲ್ಲಿ ಮಾನವನ ಅಲೆಮಾರಿತನವು ಕೊನೆಗೊಂಡು ಒಂದು ಕಡೆ ನೆಲೆಗೊಂಡನು. ಹೀಗೆ ಅವನು ನೆಲೆಯೂರಿದ ಸ್ಥಳ ಗ್ರಾಮಗಳಾದವು. ಕೃಷಿಗೆ ಬೇಕಾದ ಸಾಧನ ಸಲಕರಣೆಗಳನ್ನು ಪೂರೈಸಲು ಕಸುಬುದಾರರು ಬೇಕಾದರು. ತಮಗೆ ಯೋಗ್ಯವೆನಿಸಿದ ಸಾಧನಗಳನ್ನು ತಯಾರಿಸಲಾರಂಭಿಸಿದರು. ಮುಂದೆ ಅವರ ಕುಟುಂಬ ಅದೇ ಕಸುಬನ್ನು ಮುಂದುವರೆಸಿ ಅದರಲ್ಲಿ ಕುಶಲತೆ ಕಂಡುಕೊಂಡರು. ಕಾಲಾಂತರದಲ್ಲಿ ಅವರನ್ನು ಕಸುಬಿನ ಹೆಸರಿನಲ್ಲೆ ಕರೆಯಲಾರಂಭಿಸಿ ಅವು ಮುಂದೆ ಕುಲಗಳಾಗಿ ರೂಪುಗೊಂಡವು.[೧]

೨.೧ ಕುಲಕಸುಬುಗಳ ಬೆಳವಣಿಗೆ

ಕುಲಕಸುಬುದಾರರು ಪ್ರಾಚೀನ ಕಾಲದಿಂದಲೂ ವಂಶಪಾರಂಪರ್ಯ ವೃತ್ತಿಗಳನ್ನೆ ರೂಢಿಸಿಕೊಂಡು ಬಂದಿರುವರು. ಕಸುಬುಗಳು ಮೂಲಭೂತ ಜೀವನಾವಶ್ಯಕತೆಗಳನ್ನು ಪೂರೈಸಲಿಕ್ಕೆ ಉದಯವಾಗಿವೆ. ಸಾಮಾಜಿಕ ಜೀವನದಲ್ಲಿ ತಮಗೆ ಇಷ್ಟವಾದ ಶಕ್ತಿ ಸಾಮರ್ಥ್ಯಕ್ಕನುಗುಣವಾಗಿ ಕಸುಬನ್ನು ಆಯ್ಕೆಮಾಡಿಕೊಂಡು ಅದರಲ್ಲಿ ಪರಿಣಿತಿಯನ್ನು ಗಳಿಸಿಕೊಂಡು ತನ್ನ ಉಪಜೀವನ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ತಮ್ಮ ಉಪಜೀವನ ವೃತ್ತಿಯನ್ನಾಗಿಸಿಕೊಂಡ ಒಂದು ವರ್ಗವೇ ಸಾಮಾಜಿಕ ಜೀವನದಲ್ಲಿ ರೂಪುಗೊಂಡಿತು. ಕಸಬುಗಳು ಕೃಷಿ ಅವಲಂಬಿತವಾಗಿರುವುದರಿಂದ ಕೃಷಿ ಬೆಳವಣಿಗೆಗೆ ನೆರವಾಗುತ್ತವೆ. ಗ್ರಾಮೀಣ ಜನರಿಗೆ ಉದ್ಯೋಗ ಒದಗಿಸುವುದು ಈ ಕಸುಬುಗಳೇ. ಅವರು ಅವಲಂಬಿತವಾಗಿರುವ ಈ ಕಸುಬುಗಳು ಅವರ ಅಭಿವೃದ್ಧಿಗೆ ನೆರವಾಗುವುದರ ಜೊತೆಗೆ ಪೂರಕವಾಗಿ ಕಾರ್ಯನಿರ್ವಹಣೆ ಮಾಡುತ್ತವೆ. ನೇಕಾರಿಕೆ, ಕಮ್ಮಾರಿಕೆ, ಬಡಗಿತನ, ಗಾಣಗಾರಿಕೆ, ಚಮ್ಮಾರಿಕೆ ಮುಂತಾದ ಕಸುಬುಗಳು ಕೃಷಿ ಉತ್ಪನ್ನಗಳಿಗೆ ಸಾಮಗ್ರಿಗಳನ್ನು ಒದಗಿಸುತ್ತವೆ.

ಕಸುಬುಗಳು ಹೇಗೆ ಬೆಳವಣಿಗೆ ಹೊಂದಿದವು ಎಂಬುದನ್ನು ಅವುಗಳ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ಅಧ್ಯಯನ ಮಾಡಲಾಗಿದೆ. ಪ್ರಾಚೀನ ಕಾಲದಿಂದಲೂ ಭಾರತ ದೇಶವು

ಬಹು ಅರ್ಥಗಳಲ್ಲಿ ಗ್ರಾಮೀಣ ಭಾರತ ಎಂಬ ಹೆಸರಿಗೆ ಅನ್ವರ್ಥವಾಗಿದೆ. ಈ ನಾಡಿನ ಗ್ರಾಮ ಜೀವನದಲ್ಲಿ ಪರಂಪರಾಗತವಾದ ಸಂಪ್ರದಾಯ, ಜ್ಞಾನ, ವೈಚಾರಿಕತೆಗಳು ಮನೆ ಮಾಡಿಕೊಂಡಿವೆ. ಆದಿಮ ಕಾಲದ ಗ್ರಾಮೀಣ ಜೀವನ ಪರಿಸ್ಥಿತಿಯನ್ನು ಚರಿತ್ರೆಯ ಹಾದಿಯಲ್ಲಿ ಅವಲೋಕಿಸಿದಾಗ ಅವರ ಜೀವನ ಸಂಪೂರ್ಣವಾಗಿ ಸ್ವತಂತ್ರವೂ, ಸ್ವಾವಲಂಬನೆಯಿಂದ ನಿಸರ್ಗಾಧಾರಿತವೂ ಆಗಿತ್ತೆಂಬುದು ಮನವರಿಕೆಯಾಗುತ್ತದೆ.

ಬಹುಮಟ್ಟಿಗೆ ಸ್ವತಂತ್ರ ಘಟಕಗಳೇ ಆಗಿದ್ದ ಗ್ರಾಮಗಳಲ್ಲಿ ತಮಗೆ ಅಗತ್ಯಕ್ಕನುಗುಣವಾಗಿ ಆಹಾರ ಬೆಳೆಯಲು ಭೂಮಿ, ನೀರು ದೊರೆಯುವ ನೆಲೆ, ವಾಸಿಸಲು ಅನುಕೂಲಕರವಾದ ಸ್ಥಳ, ಅಲ್ಲಿನ ನೀರು ಗಾಳಿಗೆ ಅನುಸಾರವಾಗಿ ಆಹಾರ ಬೆಳೆಯುವ ಹಾಗೂ ತಮಗೆ ವಾಸಿಸಲು ಅಗತ್ಯವಾದ ವಸತಿಗಳನ್ನು ನಿರ್ಮಿಸಿಕೊಂಡು ತಮ್ಮದೇ ಆದ ಕೌಟುಂಬಿಕ ಸಂಬಂಧಗಳನ್ನು ವೃದ್ಧಿಸಿಕೊಳ್ಳುತ್ತಾ ಸಮಾನ ವೃತ್ತಿ, ಸಮಾನ ಅಭಿರುಚಿಗಳಿಂದ ಬದುಕುತ್ತಿದ್ದರು. ನಿಸರ್ಗ ಶಕ್ತಿಗಳನ್ನು ದೈವಗಳೆಂದು ಆರಾಧಿಸುತ್ತಾ ಅವುಗಳ ಪ್ರತೀಕಗಳನ್ನು ಕಲ್ಪಿಸಿಕೊಂಡರು. ಅವುಗಳನ್ನು ಪೂಜಿಸಲು ವಿಧಿ ವಿಧಾನಗಳನ್ನು ಅನುಭವದ ಆಧಾರದ ಮೇಲೆ ಸ್ಪಷ್ಟವಾಗಿಸಿಕೊಂಡರು.

ಆಹಾರ ಮತ್ತು ಕೃಷಿಗೆ ಸಂಬಂಧಿಸಿದ ಅಗತ್ಯವಾದ ಸಾಧನಗಳನ್ನು ಹಂತ ಹಂತವಾಗಿ ನಿರ್ಮಿಸಿಕೊಂಡರು. ಮುಖ್ಯವಾಗಿ ಮಾಂಸವೇ ಆಹಾರದ ಪ್ರಮುಖ ಭಾಗವಾಗಿದ್ದ ಕಾಲದಲ್ಲಿ ಪ್ರಾಣಿಗಳ ಬೇಟೆಗೆ ಅಗತ್ಯವಾದ ಉಪಕರಣಗಳನ್ನು ಪ್ರಾಯೋಗಿಕ ಆಧಾರದಲ್ಲಿ ರೂಢಿಸಿಕೊಂಡರು. ಒಂದೆಡೆ ಸಂಸಾರದಲ್ಲಿ ಹೆಣ್ಣು ಮತ್ತು ಗಂಡುಮಕ್ಕಳು ಕಾರಣಾಂತರದಿಂದ ಅಂತಃಕಲಹ ಆರಂಭವಾಗದಂತೆ ತಮ್ಮಲ್ಲೆ ಕೆಲವು ಒಡಂಬಡಿಕೆ ಮಾಡಿಕೊಂಡರು. ಮಳೆ, ಗಾಳಿ, ಬಿಸಿಲು ಮುಂತಾದ ಪ್ರಕೃತಿ ವಿಕೋಪಗಳಿಂದ ರಕ್ಷಿಸಿಕೊಳ್ಳಲು ವಾತಾವರಣಕ್ಕನುಗುಣವಾದ ವಸತಿ ನಿರ್ಮಾಣ ಆರಂಭವಾಗಿ ಕಾಲಕ್ರಮೇಣ ಅವುಗಳ ಸೌಂದರ್ಯ ದೃಷ್ಟಿಯೂ ನೆಲೆಗೊಂಡಿತು. ಹಾಗೆಯೇ ಕಸುಬುಗಳು ಹುಟ್ಟಿಕೊಂಡವು ಕಸುಬಿನ ವಿವಿಧ ಮಗ್ಗಲುಗಳ ಮೂಲ ಸ್ವರೂಪ ಮತ್ತು ವ್ಯಾಪ್ತಿಗೆ ಆ ಜನಾಂಗದ ನಂಬಿಕೆ ಸಂಪ್ರದಾಯಗಳೂ ಬೆಳೆದುಬಂದವು. ಅವರಲ್ಲಿ ನೇಕಾರ, ಬಡಗಿ, ಕಮ್ಮಾರ, ಕುಂಬಾರ, ಅಕ್ಕಸಾಲಿ, ಕಂಚುಗಾರ, ಚಮ್ಮಾರ, ಮೇದಾರ, ಗಾಣಿಗ ಇತ್ಯಾದಿ ಕಸುಬುದಾರರು ತಮ್ಮ ತಮ್ಮ ಕಸುಬುಗಳಲ್ಲಿ ನೈಪುಣ್ಯತೆಯನ್ನು ಸಾಧಿಸಿಕೊಂಡರು. ಕಸುಬಿನ ಹಿನ್ನೆಲೆಯಲ್ಲಿ ಅವರನ್ನು ಜಾತಿಯಾಧಾರಿತವಾಗಿ ಕರೆಯುವ ಸಂಪ್ರದಾಯ ರೂಢಿಗತವಾಯಿತು.

ಆರ್ಯರು ಭಾರತಕ್ಕೆ ಬರುವ ಪೂರ್ವದಲ್ಲಿ ಹಿಂದುಳಿದ ಅಲೆಮಾರಿ ಜನಾಂಗಗಳು ಹಾಗೂ ಕಾಡಿನಲ್ಲಿ ಬೇಟೆಯಾಡಿ ಜೀವಿಸುವ ಕೆಲವು ಜನಾಂಗಗಳು ಪ್ರಾಚೀನ ಕಾಲದಿಂದಲೂ ಇದ್ದವು. ಸಂಸ್ಕೃತಿಯ ವಿವಿಧ ಭಾಗವಾಗಿ ಕುಲಾಚಾರವುಳ್ಳ ವೃತ್ತಿಗಳು ಮೊದಲಿನಿಂದ ಇದ್ದವು. ಋಗ್ವೇದದಲ್ಲಿ ಈ ಆದಿವಾಸಿ ಜನಾಂಗಗಳ ಹೆಸರು ಅನೇಕ ಕಡೆ ನಾಜೂಕಾಗಿವೆ. ಭರತ, ಪುರು, ಕುರು, ಕಿರಾತ, ಕೀಚಕ, ಚಂಡಾಲ ಪರ್ಣಕ ಸಿಮ್ಯು, ದಸ್ಯು, ಮತ್ಸ್ಯ, ಅಸುರ

ನಿಷಾದ ಮುಂತಾದ ದಾಸ ಜನಾಂಗದವರು ಗಂಗಾನದಿ ಕಣಿವೆಯ ಹತ್ತಿರ ವಾಸ ಮಾಡುತ್ತಿದ್ದರು. ಇವರು ಭರತ ಜನಾಂಗದವರ ಕೂಡ ಕಾದಾಡಿ ದಕ್ಷಿಣ ಮತ್ತು ಅಗ್ನೇಯ ಭಾಗಗಳಿಗೆ ಹೋಗದಂತೆ ತಡೆಗಟ್ಟಿದರು.[೨] ಸಂಸ್ಕೃತಿಯ ಜನರು ಜಲಪ್ರದೇಶಗಳ ಹತ್ತಿರ ಮನೆಗಳನ್ನು ಕಟ್ಟಿಕೊಂಡು, ಇತರರು ಗುಡ್ಡಗಳ ಗಡಿಭಾಗಗಳಲ್ಲಿ ಹೊರಗಡೆ ತಡಿಕೆಯ ಮನೆಗಳನ್ನು ಕಟ್ಟಿಕೊಂಡು ಜೀವಿಸುತ್ತಿದ್ದರು. ಫಲವತ್ತಾದ ಮೈದಾನ ಪ್ರದೇಶಗಳಲ್ಲಿ ಸಣ್ಣ ಗ್ರಾಮಗಳನ್ನು ನಿರ್ಮಿಸಿಕೊಂಡು ವ್ಯವಸಾಯದಿಂದ ಜೀವನ ಸಾಗಿಸುತ್ತಿದ್ದರು. ನದಿ ಮತ್ತು ಸಮುದ್ರ ತೀರಗಳಲ್ಲಿ ಕಟ್ಟುಮರನಾ (catmarana) ಎನ್ನುವ ಮರದ ದೋಣಿಗಳ(Canoe) ಸಹಾಯದಿಂದ ಮೀನು ಹಿಡಿದು ಮತ್ತೆ ಕೆಲವರು ಅರಣ್ಯ ಪ್ರಾಂತ್ಯಗಳಲ್ಲಿ ಮೃಗಗಳ ಬೇಟೆಯಿಂದಲೂ ವ್ಯವಸಾಯದಿಂದಲೂ ಜೀವನ ನಿರ್ವಹಣೆ ಮಾಡುತ್ತಿದ್ದರು. ಇವರು ಬೃಹತ್‌ಶಿಲಾ ಗೋರಿಗಳು, (Megalithics) ವೃತ್ತಾಕಾರವಾಗಿ ಕಲ್ಲು ಹೂಡಿ ಸಮಾಧಿ ಮಾಡುವುದರಲ್ಲಿ ನಿಪುಣರಾಗಿದ್ದರು. ಕಬ್ಬಿಣ ಬಳಕೆ, ಸತ್ತವರನ್ನು ಹೂಳುವ ಪದ್ಧತಿ, ಮಣ್ಣು, ಕಲ್ಲು ಲೋಹಗಳಿಂದ ಮಾಡಿದ ಹಾರ, ಮೂಗುತಿ, ಓಲೆ, ಬಳೆ ಮುಂತಾದ ಆಭರಣಗಳನ್ನು ಧರಿಸುತ್ತಿದ್ದ ದಾಖಲೆಗಳಿವೆ. ನಂತರದಲ್ಲಿ ಈ ಜನರು ಹಲವು ಗುಂಪುಗಳಾಗಿ ವಿಭಾಗವಾದರು.

ಪ್ರಾಗೈತಿಹಾಸ ಕಾಲದಲ್ಲಿ ಬರ್ಮಾದೇಶದ ಐರಾವತಿ ನದಿ ತೀರದಲ್ಲಿ ಪಳೆಯುಳಿಕೆಗಳೊಡನೆ ಕೆಲವು ಶಿಲೆಗಳು ದೊರಕಿವೆ. ಮರಳು ಕಲ್ಲಿನಿಂದ ಮಾಡಿದ ಆಯುಧಗಳು, ಘೇಂಡಾಮೃಗ, ಎತ್ತು ಮತ್ತಿತರ ಪ್ರಾಣಿಗಳ ಅವಶೇಷಗಳು ನರ್ಮದಾ ನದಿಯ ತೀರದ ಭೃತ ಎಂಬ ಸ್ಥಳದಲ್ಲಿ ಸಿಕ್ಕಿವೆ.[೩] ಈ ಕಾಲದ ಜನರು ಮೃಗಗಳನ್ನು ಕಲ್ಲಿನಿಂದ ಮಾಡಿದ ಆಯುಧಗಳಿಂದ ಕೊಂದು ಹಸಿಯ ಮಾಂಸವನ್ನು ಭಕ್ಷಿಸುತ್ತಿದ್ದರು. ಬೇಟೆಗಾಗಿ ಒಂದು ಕಡೆಯಿಂದ ಮತ್ತೊಂದೆಡೆಗೆ ಚಲಿಸುತ್ತ ಮೃಗಗಳಂತೆ ಜೀವಿಸುತ್ತಿದ್ದರೆಂದು ಹೇಳಲಾಗಿದೆ. ಇವರಿಗೆ ವ್ಯವಸಾಯ ಕ್ರಮವಾಗಲಿ, ಬೆಂಕಿಯ ಉಪಯೋಗವಾಗಲಿ ತಿಳಿದಿರಲಿಲ್ಲ. ಕಲ್ಲುಗಳಿಂದ ಕೊಡಲಿ, ಬಾಣದ ಮೊನೆ, ಭರ್ಜಿ, ಕವಣೆಕಲ್ಲು, ಚಾಕು, ಕಬ್ಬಿಣ ಕಲ್ಲು, ಚಕಮಕಿ ಕಲ್ಲು ಮುಂತಾದವುಗಳಿಂದ ಮರದ ಬಾಚಣಿಕೆಗಳನ್ನು ಮಾಡುತ್ತಿದ್ದರು. ಇವು ದಕ್ಷಿಣದ ಗುಂತಕಲ್ಲು, ಕಡೂರು, ನ್ಯಾಮತಿ, ತಾಳ್ಯ, ಸೇಲಂ, ಬಳ್ಳಾರಿ, ಚಿತ್ತೂರು, ಕಡಪ, ಗುಂಟೂರು ಗೋದಾವರಿ ಮತ್ತು ಮಲಪ್ರಭ ತೀರ ಮೊದಲಾದ ಸ್ಥಳಗಳು ಸಿಕ್ಕಿವೆ ಕರ್ನೋಲ್ ಬಳಿ ಅನೇಕ ರೀತಿಯ ಕಪಿ, ಕಿರುಬ, ಕುದುರೆ ಘಂಡಾಮೃಗ ಮುಂತಾದ ಪ್ರಮುಖ ಅವಶೇಷಗಳು ಇವೆ.[೪] ಈ ಕಾಲಘಟ್ಟದಲ್ಲಿ ವಿವಿಧ ರೀತಿಯ ಉಪಕರಣಗಳನ್ನು ಮಾಡುವ ಕಲೆ ರೂಪಿಸಿಕೊಂಡರು. ನಂತರ ಸೂಕ್ಷ್ಮ ಶಿಲಾಯುಗದಲ್ಲಿ ಈ ಜನರು ಶಿಲೆಗಳನ್ನು ಬಹಳ ನಯವಾಗಿ ಕೆತ್ತಿ ಆಕಾರದಲ್ಲಿ ಸಣ್ಣದಾಗಿರುವ ಅನೇಕ ವಿಧವಾದ ಸಲಕರಣೆಗಳು ಮತ್ತು ಮಡಕೆಗಳ ಮೇಲೆ ಅಲಂಕಾರ ಮಾಡುವುದನ್ನು ಕಲಿತರು.

ನವ ಶಿಲಾಯುಗದಲ್ಲಿ ಜನರು ವ್ಯವಸಾಯ ಮಾಡುವುದು, ಒಂದೆಡೆ ನಿಂತು ಜೀವಿಸುವ ಕ್ರಮ, ಗ್ರಾಮಗಳ ರಚನೆಯ ಕುರುಹು ಕಂಡುಬರುತ್ತವೆ. ತಿರುನ್ನಲವೆಲಿ, ಮಧುರೈ, ಸೇಲಂ, ಹೈದರಾಬಾದ್, ಮಲಬಾರ್, ಬ್ರಹ್ಮಗಿರಿ, ಚಂದ್ರವಳ್ಳಿ ಆನೇಕಲ್, ಬಳ್ಳಾರಿ, ರಾಯಚೂರು, ಮಸ್ಕಿ, ವಿಜಯಪುರ ಇತ್ಯಾದಿ ಸ್ಥಳಗಳಲ್ಲಿ ಇವರ ಸಂಸ್ಕೃತಿಯ ಕಂಡುಬರುತ್ತವೆ. ಬಳ್ಳಾರಿಯ

ಸುತ್ತಮುತ್ತಲಿನ ಗುಡ್ಡಗಳಲ್ಲಿ ಕಬ್ಬಿಣದ ಕೈಗಾರಿಕೆಯ ಗುರುತುಗಳಿವೆ.[೫] ಈ ಕಾಲದ ಜನರ ಗುಹಾ ಚಿತ್ರಗಳು ಅವರ ಜೀವನ ಕ್ರಮದ ಕಲಾ ಕೌಶಲ್ಯಕ್ಕೆ ಹಿಡಿದ ಕೈಗನ್ನಡಿಗಳಾಗಿವೆ. ಸುಮಾರು ಕ್ರಿ.ಪೂ. ಮೂರು ಸಾವಿರ ವರ್ಷಗಳ ಹಿಂದೆಯೇ ಭಾರತದಲ್ಲಿ ನಾಗರಿಕ ಸಮಾಜ ಬೆಳೆದಿತ್ತು ಎಂಬುದಕ್ಕೆ ಸಿಂಧೂಬಯಲಿನ ಹರಪ್ಪ, ಮಹೆಂಜೋದಾರೊ ಮತ್ತಿತರ ಸಂಸ್ಕೃತಿಗಳೇ ನಿದರ್ಶನಗಳಾಗಿವೆ. ಪ್ರಾಚ್ಯ ಸಂಶೋಧಕರು ಇಲ್ಲಿ ದೊರೆತ ಅವಶೇಷಗಳ ಆಧಾರದ ಮೇಲೆ ಭಾರತದ ನಾಗರೀಕತೆಯ ರೂಪರೇಷೆಗಳನ್ನು ವಿವರಿಸಿದ್ದಾರೆ. ಪ್ರಾಚೀನ ನಾಗರೀಕತೆಯು ವ್ಯವಸಾಯ, ಪಶುಪಾಲನೆ, ಕೈಗಾರಿಕೆ, ವಾಣಿಜ್ಯಕ್ಷೇತ್ರಗಳಲ್ಲಿ ಮುಂದುವರೆದಿತ್ತು ಎಂಬುದಕ್ಕೆ ಅಲ್ಲಿ ದೊರೆತ ಅವಶೇಷಗಳು ಸಾಕ್ಷಿಯಾಗಿವೆ.

ಹರಪ್ಪ, ಮಹೆಂಜೋದಾರೊ ನಗರಗಳ ಬೀದಿಯ ಎರಡು ಕಡೆಗಳಲ್ಲಿ ಅಂಗಡಿ ಸಾಲು, ವಿಶಾಲವಾಗಿರುವ ದೊಡ್ಡ ಮನೆಗಳಲ್ಲಿ ಉಗ್ರಾಣಗಳಿದ್ದವು. ಅಲ್ಲಿನ ಉತ್ಖನನಗಳಲ್ಲಿ ಚಿನ್ನದ ಒಡವೆ, ಬೆಳ್ಳಿ, ರತ್ನ, ಮಣ್ಣಿನ ಸಾಮಾನು, ತಾಮ್ರ ಮತ್ತು ಇತರೆ ಲೋಹದ ಆಯುಧಗಳು ಮತ್ತಿತರ ಅವಶೇಷಗಳು ಹೇರಳವಾಗಿ ದೊರೆತಿವೆ. ಪ್ರಾಚೀನ ಕಾಲದಲ್ಲಿಯೇ ಹತ್ತಿಯಿಂದ ಬಟ್ಟೆ ತಯಾರಿಸುತ್ತಿದ್ದುದು ಹಸು, ಎಮ್ಮೆ, ಹೋರಿ, ಕೋಣ, ಕುರಿ, ಹಂದಿ, ಆನೆ, ಒಂಟೆ ಮುಂತಾದ ಪ್ರಾಣಿಗಳನ್ನು ಸಾಕಿ ಬಳಸುತ್ತಿದ್ದರೆಂಬುದಕ್ಕೆ ಅಲ್ಲಿ ದೊರೆತಿರುವ ಅಸ್ಥಿಪಂಜರಗಳಿಂದ ತಿಳಿಯಬಹುದಾಗಿದೆ. ಸ್ತ್ರೀಯರು ಚಿನ್ನ, ಬೆಳ್ಳಿ, ತಾಮ್ರ ಮತ್ತು ಹಿತ್ತಾಳೆಯ ಆಭರಣಗಳನ್ನು ತೊಡುತ್ತಿದ್ದರು.[೬] ಅಂದಿನ ಅಕ್ಕಸಾಲಿಗರು ಒಡವೆಗಳನ್ನು ಮಾಡುವುದರಲ್ಲಿ ಅತಿ ಚತುರರಾಗಿದ್ದರು. ಅನೇಕ ಬಗೆಯ ಪಾತ್ರೆ, ಸೂಜಿ, ಅಲಗು, ಚಾಕು, ಕೊಡಲಿ, ಕುಡುಗೋಲು, ಊಳಿ ಕಾಲುಮಣೆ, ಮಂಚ ಚಾಲಗ, ಮೊಹರು, ನರ್ತಕಿಯರ ಬೊಂಬೆಗಳು ಬಟ್ಟೆ, ಕರಿಮಣಿ ಮಾಂಗಲ್ಯಗಳು ಉತ್ಖನನದ ವೇಳೆ ದೊರೆತಿವೆ. ಇದರಿಂದ ಅಂದಿನ ವಿವಿಧ ಕಸುಬುದಾರರ ಕುರಿತು ಸ್ಪಷ್ಟವಾಗಿ ತಿಳಿದುಕೊಳ್ಳಬಹುದಾಗಿದೆ.

ಅಧ್ಯಯನದ ಅನುಕೂಲಕ್ಕಾಗಿ ಪ್ರಾಚೀನ ಸಮಾಜದ ವರ್ಗಗಳನ್ನ ಬೇಟೆಗಾರ ಸಂಗ್ರಾಹಕ, ಕುರಿಗಾಹಿಗಳು, ರೈತರು ಮತ್ತು ಪಟ್ಟಣವಾಸಿಗರು ಎಂದು ಪಟ್ಟಿ ಮಾಡಲಾಗಿದೆ. ಹೆಸರೇ ಹೇಳುವಂತೆ ಬೇಟೆಗಾರ ಸಂಗ್ರಾಹಕರು ಆಹಾರ ಮತ್ತಿತರ ಅವಶ್ಯಕತೆಗಳಿಗಾಗಿ ಪ್ರಾಣಿಗಳನ್ನು ಬೇಟೆಯಾಡುತ್ತಾ ಜೀವನ ನಡೆಸುತ್ತಿದ್ದರು. ಬೆಳೆ ಬೆಳೆಯುವುದು ಅವರ ಚಟುವಟಿಕೆಗಳ ಭಾಗವಾಗಿರಲಿಲ್ಲವಾದ್ದರಿಂದ ಕುರಿ ಕಾಯುವ ಮತ್ತು ಕೃಷಿಕರಿಗಿಂತ ಭಿನ್ನವಾಗಿದ್ದರು. ಅವರು ಸಣ್ಣ ಸಣ್ಣ ಗುಂಪುಗಳಾಗಿ ವ್ಯವಸ್ಥಿತವಾಗಿದ್ದರು. ಕೆಲವೊಮ್ಮೆ ಸಣ್ಣ ಕುಟುಂಬಗಳನ್ನು ಹೊಂದಿದ ಅಸ್ತಿತ್ವ, ತಾರತಮ್ಯ ಅಥವಾ ರಕ್ತ ಸಂಬಂಧದ ಮೂಲಕ ಬರುವ ಕುಟುಂಬದಾಚೆಗಿನ ಸಾಮಾಜಿಕ ವ್ಯವಸ್ಥೆಯಂತಹ ವಿಷಯಗಳ ಬಗ್ಗೆ ತಿಳಿದಿರಲಿಲ್ಲ. ಕಾಡು ಮತ್ತು ಅಲ್ಲಿರುವ ವಸ್ತುಗಳನ್ನು ತಮ್ಮ ಸಂಪನ್ಮೂಲಗಳಾಗಿ ಬಳಸುತ್ತಿದ್ದರು. ಅವರು ಬೇಟೆಯಾಡುವ ಪ್ರದೇಶದ ಮೇಲೆ ಯಾವ ಬೇಡಿಕೆಯೂ ಇಲ್ಲದಂತಹ ಪಕ್ಷದಲ್ಲಿ ಪ್ರತ್ಯೇಕವಾಗಿ ವಾಸಮಾಡಿರುವ ಸಾಕ್ಷ್ಯವಿದೆ.

ಪ್ರಾಚೀನ ಶಿಲಾಯುಗದ ಬೇಟೆಗಾರ ಸಂಗ್ರಾಹಕರಿಗೆ ಸಾಕ್ಷ್ಯಧಾರವಾಗಿ ಉಪಖಂಡದ ಹಲವಾರು ಭಾಗಗಳಿಂದ ಕುರುಹುಗಳು ದೊರೆಯುತ್ತದೆ. ಆರಂಭಿಕ ಅಧ್ಯಯನಗಳು ವಾಯುವ್ಯದ

ಸೋಹ ನದಿ ಮತ್ತು ಪೊಟ್ವಾರ್ ಪ್ರಸ್ಥಭೂಮಿಯ ಜಗಲಿ ದಂಡೆಗಳ ಮೇಲೆ ಕೇಂದ್ರೀಕರಿಸಿದ್ದವು. ಅಂದಿನಿಂದಲೂ ಉಪಖಂಡದೆಲ್ಲೆಡೆ ಆ ಪ್ರದೇಶಗಳು ಚದುರಿ ಹೋಗಿರುವುದನ್ನು ಕಾಣಬಹುದು. ವಾಸ ಸ್ಥಳಗಳು ಮಧ್ಯಪ್ರದೇಶದ ಭಿಂಬೆಟ್ಕದಂತಹ ಜಾಗಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿದ್ದು ಕಲ್ಲು ಬೆಟ್ಟಗಳೇ ಇವರ ಆಶ್ರಯ ತಾಣಗಳಾಗಿದ್ದವು[೭] ಇವರು ಪ್ರಾಣಿಗಳನ್ನು ಬೇಟೆಯಾಡುವುದು, ತಿನ್ನಲು ಯೋಗ್ಯವಾದ ಸಸ್ಯಗಳು ಹಾಗೂ ಗೆಡ್ಡೆಗೆಣಸುಗಳನ್ನು ಕೂಡಿ ಹಾಕುವ ಮೂಲಕ ಆಹಾರವನ್ನು ಪಡೆಯುತ್ತಿದ್ದರು. ಕಲ್ಲಿನ ಮತ್ತು ಮರದ ಆಯುಧಗಳ ಮೂಲಕ ಬೇಟೆಯಾಡುತ್ತಿದ್ದರು. ನಂತರ ಅವರ ಜೀವನದ ರೀತಿಯು ಕ್ರಮೇಣವಾಗಿ ಪ್ರಾಣಿಗಳು ಹಾಗೂ ಸಸ್ಯಗಳನ್ನು ಬಗ್ಗಿಸುವಡೆಗೆ ಒರಟಾದ ಮಡಿಕೆಗಳನ್ನು ಮಾಡುವಕಡೆಗೆ ಮುಂದುವರೆಯಿತು. ಇಲ್ಲಿಂದ ಕಸುಬುಗಳ ಆರಂಭವಾದವು ಎಂದು ವಿವರಿಸಲಾಗಿದೆ.

ಆಹಾರ ಗಳಿಸಿಕೊಳ್ಳುವ ನಿಟ್ಟಿನಲ್ಲಿ ಸುಧಾರಿಸಿದ ತಂತ್ರಜ್ಞಾನವು ಬೇಟೆಗಾರ ಸಂಗ್ರಾಹಕರಿಗೆ ನೆಲೆಗೊಳ್ಳಲು ಅನುಕೂಲ ಒದಗಿಸಿಕೊಟ್ಟಿತು. ಅಂತ್ಯಶಿಲಾಯುಗ, ಸೂಕ್ಷ್ಮದಲ್ಲಿನ ನಿವೇಶನಗಳು ಬೇರೆ ಬಗೆಯ ಕಲ್ಲಿನ ಸಾಧನದ ಬಳಕೆಯನ್ನು ತೋರಿಸುತ್ತವೆ. ಇವು ಸಣ್ಣ ಕಲ್ಲಿನ ಅವಶೇಷಗಳಾಗಿದ್ದು ಸೂಕ್ಷ್ಮಶಿಲೆಯೆಂದು ಕರೆಯಲ್ಪಡುತ್ತಿದ್ದವು. ಅವುಗಳೆಂದರೆ ಕಲ್ಲಿನ ಚೆಕ್ಕೆ, ಉಳಿ, ಕಲ್ಲುಳಿ, ಮೊನಚು ಕಲ್ಲುಗಳು, ಹಾಗೂ ಅನೇಕ ಜ್ಯಾಮಿತಿಯ ರೂಪಗಳು. ಇವುಗಳನ್ನು ಮಾಡುವ ತಂತ್ರಜ್ಞಾನ ಕೂಡ ದೊಡ್ಡ ಕಲ್ಲನ್ನು ಸೂಕ್ಷ್ಮವಾದ ಕೋನದಲ್ಲಿ ಕತ್ತರಿಸುವ ಮೂಲಕ ಚೂರುಗಳನ್ನು ಮಾಡಿಕೊಳ್ಳುವುದೇ ಆಗಿತ್ತು. ಚಾಕುಗಳು ಮತ್ತು ಕುಡುಗೋಲುಗಳ ಸಣ್ಣ ಬಾಣ ಮೊನೆಗಳು ಹೆಚ್ಚಾಗಿ ಬಿಲ್ಲು ಮತ್ತು ಬಾಣಗಳ ಬಳಕೆಯನ್ನು ಸೂಚಿಸುತ್ತದೆ.[೮] ಇದು ಕಸುಬುಗಳ ಉಗಮವನ್ನು ತೋರಿಸುತ್ತದೆ. ಅಂದರೆ ಇಲ್ಲಿ ಪ್ರತ್ಯೇಕವಾದ ಒಂದು ಗುಂಪು ಆಯುಧಗಳ ತಯಾರಿಕೆಯಲ್ಲಿ ತೊಡಗಿಕೊಂಡು ಅದನ್ನೆ ಮುಂದುವರೆಸಿಕೊಂಡು ಬಂದಿದೆ.

ಮಧ್ಯಶಿಲಾಯುಗದ ಪಳೆಯುಳಿಕೆಗಳು ಲಾಂಘನಾಚ(ಗುಜರಾತ್), ಅದಮ್‌ಘಡ(ಮಧ್ಯಪ್ರದೇಶ), ರಾಜಸ್ಥಾನ, ಸರೈಫ್ ನಹಾಡ್ ರೈ ಮತ್ತು ಮಹಾದಾಹ(ಉತ್ತರಪ್ರದೇಶ) ಹಾಗೂ ಬಿಹಾರದಲ್ಲಿ ಕಾಣಬಹುದಾಗಿದೆ. ಇಲ್ಲಿನ ನಿವೇಶನಗಳು ಬೀಸುವ ಕಲ್ಲು ಉಜ್ಜುವಕಲ್ಲುಗಳು, ಆಹಾರವಾಗಿ ಕಾಡಿನ ದವಸ–ಧಾನ್ಯಗಳು ಹಾಗೂ ಸಸ್ಯಗಳು ಹೆಚ್ಚು ವ್ಯತ್ಯಾಸಗೊಳ್ಳುವ ಹಾಗೆ ತಯಾರಿಕೆಯನ್ನು ಸೂಚಿಸುತ್ತದೆ.[೯]

ಒಂದು ನಿವೇಶನದಲ್ಲಿ ಕೈಯಿಂದ ತಯಾರಿಸಲಾದ ಒರಟು ಮಡಿಕೆ–ಕುಡಿಕೆ ಒಕ್ಕರೆಗಳೆಂದು ಹೇಳಲಾಗಿದ್ದು, ಜೊತೆಗೆ ಕಣಜವೆಂದು ಗುರುತಿಸಲಾಗಿರುವ ವಸ್ತುವಿನ ಇರುವಿಕೆಯಿಂದ ದೃಢಪಟ್ಟಿದೆ. ಇಲ್ಲಿನ ಸಮಾಧಿಗಳಲ್ಲಿ ಸೂಕ್ಷ್ಮಶಿಲೆ, ಕಪ್ಪೆಚಿಪ್ಪು ಹಾಗೂ ಆನೆದಂತದ ಲೋಲಕದಂತಹ ವಸ್ತುಗಳನ್ನು ಸಮಾಧಿಯಲ್ಲಿಡಲಾಗಿದೆ.[೧೦] ಇದರಿಂದ ಸ್ಪಷ್ಟವಾಗುವ ಒಂದು ಸಂಗತಿಯೆಂದರೆ ಈ ಕಾಲಘಟಕ್ಕಾಗಲೇ ಒಂದೊಂದು ಗುಂಪು ವಸ್ತುಗಳ ತಯಾರಿಕೆಯಲ್ಲಿ ತೊಡಗಿದ್ದಿರಬೇಕು. ನಂತರ ಅದರಲ್ಲಿ ಪರಿಣಿತಿಯನ್ನು ಸಾಧಿಸುತ್ತಾ ಹೋದರು. ಕೃಷಿ ಮತ್ತು ಪ್ರಾಣಿಗಳ

ಸಾಕಣಿಕೆಯ ಆರಂಭ ನಿರ್ಣಾಯಕವಾಗಿರುವ ನವಶಿಲಾಯುಗದಲ್ಲಿ ಗೊರ್ಡನ್ ಚಿಲ್ಡ್ ಅವರ ಪ್ರಕಾರ ಕೃಷಿ ಕ್ರಾಂತಿಯು ತಕ್ಷಣ ಆದ ಬದಲಾವಣೆಯಲ್ಲಿ ಪ್ರಾಚೀನ ಕಾಲದ ಕೆಲವೊಂದು ಚಟುವಟಿಕೆಗಳು ಈ ಬೆಳವಣಿಗೆಯನ್ನು ನಿರೀಕ್ಷಿಸಿದ್ದವು. ನವಶಿಲಾಯುಗದ ನಿವೇಶನಗಳಾದ ಸ್ವಾಟ್ ಕಣಿವೆಯ ಗಾಲಿಘಯ್, ದಕ್ಷಿಣದ ಸರೈಖೋಲ, ಚೊಪನಿ ಮಂಡೊ ಮತ್ತು ಕೊಲ್ಡಿವ, ಬಿಹಾರ್‌ನ ಚಿರಂಡ್, ಉತ್ತರಪ್ರದೇಶದ ಬೆಲನ್ ಕಣಿವೆ, ರಾಯಚೂರು ದೋಹಬ್, ಗೋದಾವರಿ ಮತ್ತು ಕೃಷ್ಣಾ ಕಣಿವೆ ಈ ನಿವೇಶನಗಳಿಂದ ಉತ್ನೂರು, ಪಿಕ್ಲಿಹಾಳ್, ಮಸ್ಕಿ, ತೆಕ್ಕಲಕೋಟೆ ಬ್ರಹ್ಮಗಿರಿ, ಹಲ್ಲೂರು, ಪೆಯ್ಯಂಡಲ್ಲಿ ಹಾಗೂ ಟಿ.ನರಸಿಪುರ ಹಾಗೆಯೆ ಕೆಲವೊಂದು ನಗರೀಕರಣದ ಅಂಶಗಳನ್ನು ಹೊಂದಿದ್ದ ಚಾರಿತ್ರಿಕ ಅವಧಿಯಲ್ಲಿ ಸಕ್ರಿಯವಾಗಿದ್ದವು.[೧೧] ಈ ಅವಧಿಯಲ್ಲಿ ತಂತ್ರಜ್ಞಾನಿಕವಾಗಿ ಸಲಕರಣೆಗಳಲ್ಲಿ ಗಣನೀಯವಾದ ಸುಧಾರಣೆಯಾಯಿತು. ಮುಂಚಿನ ಕಾಲಘಟಕ್ಕೆ ಹೋಲಿಸಿದರೆ ಕಲ್ಲಿನ ಕೊಡಲಿಗಳ ನಯಗಾರಿಕೆಯ ಸುಧಾರಣೆಯಾಯಿತು. ಕೈ ಕುಂಬಾರಿಕೆಯು ಅನಂತರದಲ್ಲಿ ಚಕ್ರ ಕುಂಬಾರಿಕೆಗೆ, ಕೆಲವು ಒಡವೆಗಳ ತಯಾರಿಕೆಗೆ ಎಡೆಮಾಡಿಕೊಟ್ಟಿತು.[೨]

ಮೆಹ್ರಘಡ್‌ನ ಕಾಲವು ಸುಮಾರು ಕ್ರಿಪೂ. ೭೦೦೦ನೆಯ ಇಸವಿಯಷ್ಟು ಹಿಂದಕ್ಕೆ ಸರಿಯುತ್ತದೆ. ಈ ನಿವೇಶನದಲ್ಲಿ ಜನರು ವೈಯಕ್ತಿಕ ಆಸ್ತಿಗಳೊಂದಿಗೆ ಗುಂಡಿ ಶವಸಂಸ್ಕಾರಗಳು, ಒಂದು ಬಗೆಯ ವೈಢೂರ್ಯ ಹಾಗೂ ರತ್ನದ ಮಣಿಹಾರ, ಜೇಡಿ ಮಣ್ಣಿನ ಚಿಕ್ಕಬೊಂಬೆಗಳು, ಒಂದು ರೀತಿಯ ಸಾಂಸ್ಕೃತಿಕ ಮಾದರಿಯಾಗಿ ಆರನೆಯ ಸಹಸ್ರಮಾನದ ವೇಳೆಗೆ ನೆಲೆಗೊಂಡಿತ್ತು. ನಾಲ್ಕನೆಯ ಸಹಸ್ರಮಾನದ ವೇಳೆಗೆ ರಾಟಿ ಕುಂಬಾರಿಕೆಯು ಬಳಕೆಗೆ ಬಂದಿತ್ತು.[೩] ಈ ಕಾಲಘಟ್ಟದಲ್ಲಿ ನಗರಿಕರಣದ ಜೊತೆಗೆ ಸಾಂಸ್ಕೃತಿಕ ಮತ್ತು ಸಾಮಾಜಿಕವಾಗಿ ಬೆಳವಣಿಗೆ ಹೊಂದಿದ ಕಾಲವಾಗಿತ್ತು. ಅಂದರೆ ಈ ಅವಧಿಯಲ್ಲಿ ಕಸುಬುಗಳು ಸ್ಪಷ್ಟವಾಗಿ ಗೋಚರಿಸತೊಡಗಿದವು ಎಂದು ಹೇಳಲಾಗಿದೆ.

ಕಂಚಿನ ಯುಗದ ಸಂಸ್ಕೃತಿಯಲ್ಲಿ ಹೊಸ ಪರಿಪಾಠವೆಂದರೆ ಕಂಚು ಮತ್ತು ತಾಮ್ರದ ಬಳಕೆ. ಇದು ಲೋಹದ ಅದಿರನ್ನು ಕರಗಿಸಿ ಲೋಹದ ವಸ್ತುಗಳನ್ನು ಮಾಡುವ ಕುಲುಮೆಯ ಹೊಸ ತಂತ್ರಜ್ಞಾನವನ್ನು ಪರಿಚಯಿಸಿತು. ಇದು ಲೋಹ ತಯಾರಿಕೆ ಹೆಚ್ಚಿನ ಮಹತ್ವ ಕೊಟ್ಟಿತು. ಆದರೂ ಕಲ್ಲಿನ ಸಲಕರಣೆಗಳ ಬಳಕೆ ಮಾಡುವುದನ್ನು ಕೈ ಬಿಡಲಿಲ್ಲ. ಇಲ್ಲಿ ಕಸುಬುದಾರರು ಸೇರುವಂತಹ ಸ್ಥಳಗಳಲ್ಲಿ ಕರಕುಶಲತೆಗಳಲ್ಲಿನ ಪರಿಣತಿಯನ್ನು ಉತ್ತೇಜಿಸಿತು. ಲೋಹ ತಂತ್ರಜ್ಞಾನವು ಜೀವನ ವಿಧಾನಗಳಲ್ಲಿ ಕೆಲವೊಂದು ಸಂಕೀರ್ಣತೆಗಳನ್ನು ಪರಿಚಯಿಸಿತು. ಉದಾ: ಹೊಸ ತಂತ್ರಜ್ಞಾನವನ್ನು ಯಾರು ನಿಯಂತ್ರಿಸಬೇಕು ಎಂಬುದನ್ನು ನಿರ್ಧರಿಸುವುದು. ಏಕೆಂದರೆ ಈ ಅವಧಿಯಲ್ಲಿ ಕೈ ವಸ್ತುಗಳನ್ನು ತಯಾರಿಸುತ್ತಿದ್ದವರು ಹಾಗೂ ಅದರಲ್ಲಿ ಪರಿಣಿತರಾಗಿದ್ದವರು ಒಂದೇ ಆಗಿರಲಿಲ್ಲ, ವಸ್ತುಗಳನ್ನು ತಯಾರಿಸುವ ಕಸುಬುದಾರರು ಪ್ರತ್ಯೇಕ ಪಂಗಡಗಳಾಗಿ ಅದರಲ್ಲೆ ಮುಂದುವರೆದರು. ಮೂರನೆಯ ಸಹಸ್ರಮಾನದ ಹೊತ್ತಿಗೆ ಲೋಹವನ್ನು ಹಲವಾರು ಬಗೆಯಲ್ಲಿ ನಯಗೊಳಿಸುವ, ಅರೆಯಲು ಬಳಸುವ ಚೂಪು ಮೊನೆಯ ಶಿಲಾವಸ್ತುಗಳಿಗೆ ಸೀಮಿತವಾಗಿದ್ದವು. ಕುಂಬಾರಿಕೆಯನ್ನು ಕ್ರಮೇಣವಾಗಿ ಕೈಯಿಂದ ಹೋಗಿ ಗಾಲಿಯಿಂದ ತಯಾರಿಸಲು ಕಲಿತರು.

ಎರಡನೆಯ ಸಹಸ್ರಮಾನದ ಹೊತ್ತಿಗೆ ಮಣಿಗಳು, ಮಡಕೆ, ಕುಡಿಕೆ, ವಿಶಿಷ್ಟವಾದ ತಾಮ್ರ ಮತ್ತು ಕಂಚಿನವಸ್ತುಗಳು ಪೈಯಂಪಲ್ಲಿ(ತಮಿಳುನಾಡು), ಹಲ್ಲೂರು ಮತ್ತು ಟಿ.ನರಸೀಪುರ (ಕರ್ನಾಟಕ) ಕಾಣಸಿಗುತ್ತವೆ. ಈ ಬೆಳವಣಿಗೆಯನ್ನು ಕರ್ನಾಟಕದ ಸಂಘನಕಲ್ಲು ಮತ್ತಿತರ ತಾಣಗಳಲ್ಲಿ ಗಮನಿಸಲಾಗಿದೆ. ಕಬ್ಬಿಣದ ಬಳಕೆಯ ಪ್ರಾಚೀನತೆಗೆ ಹಳ್ಳೂರು ಮತ್ತು ಕೊಮಾರನಹಳ್ಳಿ ತಾಣಗಳು ಪುರಾವೆಯೊದಗಿಸುತ್ತವೆ.[೧೪] ಈ ರೀತಿಯ ನೆಲೆಗಳು ಹಳ್ಳಿಯೊಂದರ ವ್ಯವಸ್ಥೆ, ತದನಂತರದಲ್ಲಿ ಹಳ್ಳಿಗಳ ಶ್ರೇಣೀಕರಣದ ಪ್ರಕ್ರಿಯನ್ನು ಒಂದು ಬಗೆಯ ಅಧಿಕಾರ ಸತ್ತೆಯನ್ನು ಮತ್ತು ನಿಯಮ ಕಟ್ಟಳೆಗಳ ಅಗತ್ಯವನ್ನು ಹುಟ್ಟುಹಾಕುತ್ತದೆ. ಈ ಅಗತ್ಯವು ಕುಟುಂಬಗಳು ತಮ್ಮ ಹಿರಿಮೆಯ ಶ್ರೇಣಿಗಳೊಂದಿಗೆ ಬಣಕಟ್ಟುಗಳಾಗಿ ಮಿಳಿತವಾಗುವ ಪ್ರಕ್ರಿಯಯೊಂದಿಗೆ ಜೊತೆಗೂಡಿ ಪ್ರಭುತ್ವವನ್ನು ಹೋಲುವ ನಾಯಕ ಇಲ್ಲವೇ ಹಿರಿಯರ ಮೂಲಕ ಸಾಮಾಜಿಕ ಶ್ರೇಣೀಕರಣಕ್ಕೆ ಬುನಾದಿಯನ್ನಿತ್ತವು.

ಪ್ರಾಚೀನ ಕಾಲದಲ್ಲಿ ಬೇಟೆಗಾರಿಕೆಯಿಂದ ಪ್ರಾರಂಭವಾದ ಈ ಕಸುಬು ನಂತರದ ಕಾಲದಲ್ಲಿ ಬೆಳವಣಿಗೆ ಹೊಂದುತ್ತಾ ಕಂಚು, ತಾಮ್ರ, ಕಬ್ಬಿಣ, ಮಡಕೆ, ವಸ್ತ್ರ ಹೀಗೆ ಅವರ ಕಸುಬುಗಳಲ್ಲಿ ಪ್ರಾವಿಣ್ಯತೆಯನ್ನು ಸಾಧಿಸಿದ್ದರು ನಂತರ ಅವುಗಳೆಲ್ಲೆ ಮುಂದುವರೆದು ಆ ಕಸುಬಿನ ಹೆಸರಿನಿಂದಲೇ ಅವರನ್ನು ಗುರುತಿಸುವಂತಾಯಿತು.

ಭಾರತಿಯ ಧಾರ್ಮಿಕ ಹಾಗೂ ಸಾಂಸ್ಕೃತಿಕ ಚರಿತ್ರೆಯ ಸಾಮಾನ್ಯ ಕಾಲ ವಿಭಜನೆಯನ್ವಯ ವೇದ, ಉಪನಿಷತ್ತುಗಳ ಕಾಲಾವಧಿಯನ್ನು ಕ್ರಿ.ಪೂ. ೨೦೦೦–ಕ್ರಿ.ಶ. ೫೦೦ ಎಂದು ಇತಿಹಾಸತಜ್ಞರು ಗುರುತಿಸಿದ್ದಾರೆ. ಆ ವೇದಗಳಲ್ಲೇ ಅತ್ಯಂತ ಪ್ರಾಚೀನವಾದ ಮತ್ತು ಲಿಖಿತ ದಾಖಲೆಯಾದ ಋಗ್ವೇದದಲ್ಲಿ ಭಾರತೀಯ ಜನಾಂಗಿಕ ಅಧ್ಯಯನದ ಎಳೆಗಳು, ಆರ್ಯ ಹಾಗೂ ದ್ರಾವಿಡರ ನಡುವಣ ಸಮರದ ಉಲ್ಲೇಖಗಳು ಸಿಗುತ್ತವೆ.[೧೫] ಎರಡೂ ಜನಾಂಗದವರು ಮೂಲತಃ ಪರಿಶ್ರಮ ಜೀವಿಗಳು, ಅವರು ಬುದ್ಧಿ ಬಲಗಳು ಸಾಮರ್ಥ್ಯವನ್ನು ಪಡೆದಿದ್ದರೆಂಬ ಮಾತಿನಲ್ಲಿ ಸಂಶಯವಿಲ್ಲ. ದೈನಂದಿನ ಜೀವನ ನಿರ್ವಹಣೆಗಾಗಿ ಶ್ರಮಜೀವಿಗಳಾಗಿದ್ದ ಅವರು ಅನೇಕ ಹಳ್ಳಿಗಳ ಸಂಕುಲಕ್ಕೆ ಭದ್ರಬುನಾದಿ ಹಾಕಿ. ಗ್ರಾಮೀಣ ಅಭ್ಯುದಯವೇ ನಾಡಿನ ಏಳಿಗೆಗೆ ಅಡಿಪಾಯವೆಂಬುದನ್ನು ಕಂಡುಕೊಂಡಿದ್ದರು. ಏಕೆಂದರೆ ಗ್ರಾಮ ವಿಕಾಸವನ್ನು ಋಗ್ವೇದವು ಅರ್ಥವತ್ತಾಗಿ ತಿಳಿಸುತ್ತದೆ. ವಿಶ್ವಂ ಪುಷ್ಯಂಗ್ರಾಮೇ ಅಶ್ಮನ್ನನಾತುರಾಮ್[೧೬]

ಈ ಗ್ರಾಮದವರೆಲ್ಲರೂ ಆರೋಗ್ಯವಂತ ದೃಢಕಾಯದವರಾಗಲೆಂಬ ಬಯಕೆಯ ಹಿಂದೆ ಶ್ರಮದ ಬಳಕೆ, ಗ್ರಾಮ ನಿರ್ಮಾಣ ಪ್ರಕ್ರಿಯೆ ಹಾಗೂ ಅದರ ವಿಕಾಸವನ್ನು ಸೂಚಿಸುತ್ತದೆ.

ಋಗ್ವೇದ ಕಾಲದಲ್ಲಿ ಕೇವಲ ಧಾರ್ಮಿಕ ಆಚರಣೆ ಮತ್ತು ತಾತ್ವಿಕ ಚಿಂತನೆಗಳಲ್ಲಿ ಆಸಕ್ತರಾಗಿದ್ದರು ಎಂದರೆ ತಪ್ಪಾಗುತ್ತದೆ. ಅಂದು ವೈವಿಧ್ಯಮಯ ಕಸುಬುಗಳು ಬಳಕೆಯಲ್ಲಿದ್ದವು. ಕೃಷಿ, ಪಶುಪಾಲನೆ ವೇದಕಾಲೀನ ಜನರ ಮುಖ್ಯ ಕಸುಬುಗಳಾಗಿದ್ದವು ಅಂದು ಜೀವನೋಪಾಯಕ್ಕಾಗಿ ಭಿನ್ನ ಕಸುಬುಗಳನ್ನು ಅವಲಂಬಿಸಿದ್ದರೂ ಅವರಲ್ಲಿ ಭೇದಭಾವಗಳಿರಲಿಲ್ಲ. ಅಂದಿನ ಸಮಾಜದಲ್ಲಿ ಕಸುಬು ವಿಭಜನೆಯ ನಿಯಮಗಳು ಕಡ್ಡಾಯವಾಗಿರಲಿಲ್ಲ.

ಅಂದರೆ ಅಂದು ಕಸುಬುಗಳು ಜಾತಿಯಾಧಾರಿತವಾಗಲಿ, ಅನುವಂಶಿಕವಾಗಿ ಬರುವ ನಿಯಮವಿರಲಿಲ್ಲ. ಯಾರೇ ಆಗಲಿ ಯಾವುದೆ ಕಸುಬನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವಿತ್ತು. ಸಾಮಾಜಿಕ ಅವಶ್ಯಕತೆಗಳನ್ನು ಪೂರೈಸಲು ಎಲ್ಲ ಕಸುಬುಗಳೂ ಸಮಾನರಂಬ ಧೋರಣೆ ಅಂದು ಪ್ರಚಲಿತದಲ್ಲಿತ್ತು.

ಕಾರುರಹಂ ತತೋಃಭಿಷಗುಪಲ ಪ್ರಕ್ಷಿಣೇನನಾ!
ನಾನಾಧಿಯೋಃ ವಸೂಯವೋಃನುಗಾ ಇವ
ತಸ್ಥಿಮೇಂದ್ರಾಯೆಂದೋಃ ಪರಿಸ್ರವ[೧೭]

ಇದರರ್ಥ ನಾನು ಕವಿ, ನನ್ನ ತಂಗಿ ವೈದ್ಯ, ನನ್ನ ತಾಯಿ ಕಾಳುಗಳನ್ನು ಕಲ್ಲಿನಲ್ಲಿ ಬೀಸುವಳು. ಒಂದೇ ಕುಂಟುಬಕ್ಕೆ ಸೇರಿದ ನಾವು ಬೇರೆ ಬೇರೆ ಕಸುಬುಗಳನ್ನು ಮಾಡುತ್ತಾ ಹಸುಗಳು ಹುಲ್ಲುಗಾವಲಿನಲ್ಲಿ ಆಹಾರವನ್ನು ಪಡೆಯುವ ಐಶ್ವರ್ಯ ಮತ್ತು ನೆಮ್ಮದಿಯನ್ನು ಪಡೆಯುತ್ತ ನಾವೆಲ್ಲರೂ ಒಟ್ಟಿಗೆ ವಾಸವಾಗಿದ್ದೇವೆ ಎಂಬ ಸಂಗತಿಯನ್ನು ಗಮನಿಸಿದರೆ ಅಂದು ಯಾರು ಯಾವುದೇ ಕಸುಬುಗಳನ್ನು ಅನುಸರಿಸಬಹುದಿತ್ತು.

ನಾನನಂ ವಾ ವಿನೋಃಧಿಯೋಃ ವಿವ್ರತಾನಿ ಜನಾನಾಮ್
ತಕ್ಷಾರಿಷ್ಟಂ ರುತಂಭಿಷ[೧೮]
ಅಜ್ಯೇಷ್ಠಾಸೋಃ ಅಕನಿಷ್ಠಾಸ ಏತೇ
ಸಂಭ್ರಾತರೋಃ ವಾವೃಧುಃ ಸೌಭಗಾಯ[೧೯]

ಯಾವುದೇ ರೀತಿಯ ದುಡಿಮೆಯಾಗಲಿ, ದುಡಿಮಗಾರನಿರಲಿ ಅವರಲ್ಲಿ ಯಾರೂ ಮೇಲಲ್ಲ ಯಾರೂ ಕೀಳಲ್ಲ ನಾವೆಲ್ಲ ಸಕಲರ ಒಳತಿಗಾಗಿ ಒಟ್ಟಿಗೆ ದುಡಿಯುವ ಸಹೋದರರು ಎಂಬ ಭಾವನೆಯಿತ್ತು. ಋಗ್ವೇದದ ತರುವಾಯ ಬರುವ ಯಜುರ್ವೇದದ ರುದ್ರ ಸೂಕ್ತದಲ್ಲಿನ ನೆಮಕದಲ್ಲಿ ವಿವಿಧ ಕಸುಬುದಾರರ ಬಗೆಗೆ ಉಲ್ಲೇಖವಿದೆ. ಆಯಾ ಕಸುಬುಗಳ ಬಗ್ಗೆ ಅವರಿಗಿರುವ ಪೂಜ್ಯ ಭಾವನೆಯೂ ಅಲ್ಲಿ ಅಡಕವಾಗಿದೆ.

ನಮಸ್ತಕ್ಷಭ್ಯೋಃ ರಥಕಾರೇಭ್ಯಶ್ವವೋಃ ನಮೋಃ ನಮಃ
ಕುಲಾಲೇಭ್ಯಃ ಕರ್ಮಾರೇಭ್ಯಶ್ವವೋಃನಮಃ[೨೦]

ಬಡವರಿಗೆ ನಮಸ್ಕಾರವಿರಲಿ, ರಥಕಾರರಿಗೆ ನಮಸ್ಕಾರವಿರಲಿ, ಕುಂಬಾರರಿಗೆ ನಮ್ಮಸ್ಕಾರವಿರಲಿ, ಕಮ್ಮಾರರಿಗೆ ನಮ್ಮಸ್ಕಾರವಿಲಿ ಎಂದು ತೈತ್ತಿರೀಯ ಸಂಹಿತಾ ಹೇಳುತ್ತದೆ.

ಯೇನಕೇನಾಪಿ ಮಾರ್ಗೇಣ! ಯೇಕೇನವ ಚ ಕರ್ಮಣಃ!!
ಶಿವೈ ಕನಿಷ್ಠ ಮನಸಃ! ಭಕ್ತಾಸ್ತೇ ಜೋತ್ತಮೋತ್ತಮಾಃ[೨೧]

ಕಸುಬುಗಳೂ ಬೇರೆ ಬೇರೆಯಾಗಿದ್ದರೂ, ಅವುಗಳನ್ನು ದೈವ ಸಾಕ್ಷಿಯಾಗಿ ಸತ್ಯಶುದ್ಧ ಮನಸ್ಸಿನಿಂದ ಮಾಡಬೇಕು ಹಾಗೆ ನಿಷ್ಠೆಯಿಂದ ಉದ್ಯೋಗ ಮಾಡುವವರೇ ಉತ್ತಮೋತ್ತಮ ಭಕ್ತರೆಂದು ಹೇಳಿ ವೃತ್ತಿ ಗೌರವವನ್ನು ಎತ್ತಿಹಿಡಿಯುತ್ತದೆ.

ವೇದ ಪೂರ್ವ ಹಾಗೂ ವೇದೋತ್ತರ ಕಾಲಾವಧಿಯಲ್ಲಿ ದೈಹಿಕ ಬೌದ್ಧಿಕ ದುಡಿಮೆಗಳನ್ನು ಪ್ರತ್ಯೇಕವಾಗಿ ಗುರುತಿಸುವ ಸಂಪ್ರದಾಯ ಬೆಳೆದು ಬಂದಿತು. ಪ್ರಾರಂಭದಲ್ಲಿದ್ದ ಕೃಷಿ,

ಪಶುಪಾಲನೆಗಳಿಂದ ಗುಡಿ ಕೈಗಾರಿಕೆಗಳು ಬೇರ್ಪಟ್ಟವು ಕೃಷಿಯೇ ಕುಶಲ ಕೈಗಾರಿಕೆಗಳ ಶೋಧನೆಗೆ ಪ್ರೇರಣೆ ನೀಡಿದ್ದನ್ನು ನಾವು ಮರೆಯುವಂತಿಲ್ಲ. ಹಾಗಾಗಿ ಸಾಮಾಜಿ ಬೆಳವಣಿಗೆಯ ಕ್ರಮದಲ್ಲಿ ಕರಕುಶಲಕರ್ಮಿ ವರ್ಗವು ಕೃಷಿಕರ ನಂತರ ಕಾಣಿಸಿಕೊಂಡಿತು. ಹಲವು ಬಗೆಯ ಪೂರ್ಣಕಾಲದ ಕಸುಬುದಾರರು ತಲೆದೋರಿದರು ತಕ್ಷನ್ (ಬಡಗಿ) ಕರ್ಮಾರ (ಕಮ್ಮಾರ) (ಕರ್ಮಕಾರ) ತಂತುವಾಯ (ನೇಕಾರ) ಚರ್ಮಕಾರ (ಚಮ್ಮಾರ) ಪೇಶಕಾರ (ಅಕ್ಕಸಾಲಿಗ) ರುಜ್ಜುಕಾರ (ಹಗ್ಗತಯಾರಕ) ಅಯಸ್ಕಾರ (ಕಂಚುಗಾರ) ಉದಲಕಾರ (ಬುಟ್ಟಿ ಹೆಣೆಯುವವಳು) ಧೀವರ (ಬೆಸ್ತ) ಕೈವರ್ತ (ಅಂಬಿಗ) ಅವಿಪಾಲ (ಕುರಿಗಾಹಿ) ಗೋಪಾಲ (ದನಗಾಹಿ) ವಪ್ತ್ರ (ಕ್ಷೌರಿಕ) ಇತ್ಯಾದಿ[೨೨] ಅಂದಿನ ಜನರು ತಮ್ಮ ತಮ್ಮ ಕಸುಬುಗಳಲ್ಲಿ ನಿರತರಾಗಿದ್ದರು. ಪ್ರತಿಯೊಂದು ಕಸುಬಿಗೂ ಸಮಾಜದಲ್ಲಿ ಮನ್ನಣೆಯಿತ್ತು.

ಚರಿತ್ರೆಯ ಕಾಲಕ್ಕೆ ಬಂದರೆ ನಮಗೆ ಶಾಸನೋಕ್ತವಾಗಿ ವಿವಿಧ ಕಸುಬುದಾರರ ದಾಖಲೆಗಳು ದೊರೆಯುತ್ತವೆ. ಕ್ರಿ.ಶ. ೮ರಿಂದ ೧೨ನೆಯ ಶತಮಾನಗಳ ಅವಧಿಯಲ್ಲಿ ಹಲವು ರೀತಿಯ ಕಸುಬುದಾರರು ಅಸ್ತಿತ್ವಕ್ಕೆ ಬಂದರು ಅದಕ್ಕೆ ಶಾಸನಗಳು ಮತ್ತು ಸಾಹಿತ್ಯ ಕೃತಿಗಳು ಈ ಅಧ್ಯಯನಕ್ಕೆ ಪ್ರಮುಖ ಆಧಾರಗಳಾಗಿವೆ. ಕ್ರಿ.ಶ. ೭ರಿಂದ ೧೦ನೆಯ ಶತಮಾನದವರೆಗಿನ ಹೆಚ್ಚಿನ ಶಾಸನಗಳಲ್ಲಿ ಧಾರ್ಮಿಕ ಪಟ್ಟಣ, ವಾಣಿಜ್ಯ ಪಟ್ಟಣ, ಶೈಕ್ಷಣಿಕ ಪಟ್ಟಣಗಳು ಮುಂತಾದ ವಿವಿಧ ನೂರಾರುಪಟ್ಟಣ ನಗರ ಕೇಂದ್ರಗಳ ಉಲ್ಲೇಖಗಳು ಸಿಗುತ್ತವೆ.[೧೩] ಒಂದು ಪಟ್ಟಣ ವಿವಿಧ ಬಗೆಯ ಕಸುಬುದಾರರು ಇರುತ್ತಿದ್ದರು ಎಂಬುದನ್ನು ಇದರಿಂದ ಮನವರಿಕೆಯಾಗುತ್ತದೆ.

ಕ್ರಿ.ಶ. ೮ರಿಂದ ೧೨ನೆಯ ಶತಮಾನಗಳ ಅವಧಿಯಲ್ಲಿದ್ದ ಕೆಲವು ಪ್ರಮುಖ ಪೇಟೆ ಪಟ್ಟಣಗಳೆಂದರೆ ಬನವಾಸಿ, ಬಾದಾಮಿ, ತಲಕಾಡು, ಶ್ರವಣಬೆಳಗೊಳ, ಹೊಂಬುಜ, ಮುಳಗುಂದ, ಪುಲಿಗೆರೆ, ಬಂಕಾಪುರ ಮಾನ್ಯಖೇಟ, ಅಣ್ಣಿಗೆರೆ, ಕಲ್ಯಾಣ, ಮಂಗಳೂರು, ಗುತ್ತಿ, ಉಚ್ಚಂಗಿ, ಐಹೊಳೆ, ಲಕ್ಕುಂಡಿ, ದೋರಸಮುದ್ರ, ಬಳ್ಳಿಗಾವೆ, ಕುಡಿತಿನಿ, ಸೂಡಿ, ಸೊಸೆವೂರು, ಕೋಲಾರ, ಅರಸಿಕೆರೆ, ಬೆಳಗಾವಿ, ರೋಣ, ಭಟ್ಕಳ, ಬಾರಕೂರು, ಬಸರೂರು, ಕೊಪ್ಪಳ, ಕುರುಗೋಡು, ಹಾನ್ಗಲ್, ಕುರುವತ್ತಿ, ಹೊನ್ನಾವರ, ಗದಗ ಮುಂತಾದವು.[೧೪] ಇವುಗಳು ರಾಜಧಾನಿ, ವಾಣಿಜ್ಯ, ಧಾರ್ಮಿಕ, ಶೈಕ್ಷಣಿಕ ಬಂದರು ಪಟ್ಟಣಗಳಾಗಿ ಅಸ್ತಿತ್ವದಲ್ಲಿ ಇದ್ದುದನ್ನು ಸೂಚಿಸುತ್ತವೆ. ಅಂದರೆ ಇಲ್ಲಿ ಅನೇಕ ಕಸುಬುದಾರರು ಇರುವುದನ್ನು ಗುರುತಿಸಲಾಗಿದೆ.

೧೧ನೆಯ ಶತಮಾನದ ನಂತರ ಕಲ್ಯಾಣ ಚಾಲುಕ್ಯರು ಮತ್ತು ಹೊಯ್ಸಳರು ಪ್ರಮುಖ ಅರಸು ಮನೆತನಗಳಾಗಿ ಆಳ್ವಿಕೆ ಮಾಡುತ್ತಿದ್ದರು. ಭೂ ಆಧಾರಿತ ಅರ್ಥವ್ಯವಸ್ಥೆ ಹೆಚ್ಚುವರಿ ಉತ್ಪಾದನೆಗೆ ಎಡೆಮಾಡಿ ಕೊಟ್ಟಿರುವುದು ಹಲವು ಕಸುಬುಗಳು ಉದಯಿಸಲು ಪ್ರಮುಖ ಕಾರಣ ಈ ಹೆಚ್ಚುವರಿ ಉತ್ಪಾದೆಯು ವ್ಯಾಪಾರ, ವಾಣಿಜ್ಯ, ಮಾರುಕಟ್ಟೆ, ವರ್ತಕರ ಸಂಘಗಳು ಸಾರಿಗೆ ಮುಂತಾದವುಗಳು ಹುಟ್ಟಿಕೊಳ್ಳವುದಕ್ಕೆ ಕಾರಣವಾಯಿತು.[೧೫]

ರಾಷ್ಟ್ರಕೂಟರಿಂದ ಹೊಯ್ಸಳರ ಅವನತಿಯವರೆಗಿನ ಅವಧಿಯಲ್ಲಿ ಕಸುಬುಗಳು ರೂಪುಗೊಳ್ಳುವುದಕ್ಕೆ ಕೈಗಾರಿಕೆಗಳು ಮತ್ತು ಅವುಗಳಲ್ಲಿ ತೊಡಗಿಕೊಂಡಿದ್ದ ಕಸುಬುದಾರರು

ಹೆಚ್ಚಿನ ಮಟ್ಟಿಗೆ ಕಾರಣವಾಗಿ ಕಂಡುಬರುತ್ತಾರೆ. ಉದ್ದಿಮೆಗಳು ಎಣ್ಣೆ ತಯಾರಿಕೆ, ಬೆಲ್ಲ ಮತ್ತು ಸಕ್ಕರೆ ಉತ್ಪಾದನೆ, ಬಟ್ಟೆಗಳ ನೇಯ್ಗೆ, ಮುಂತಾದವು ಕೃಷಿ ಆಧಾರಿತ ಕಸುಬುಗಳಾಗಿದ್ದವು. ಇವುಗಳಲ್ಲದೆ ಮರದ ಕೆಲಸ, ಮಡಕೆ ತಯಾರಿಕೆ, ಆಭರಣಗಳ ತಯಾರಿಕೆ, ಗಣಿಗಾರಿಕೆ, ಯುದ್ಧೋಪಕರಣಗಳ ತಯಾರಿಕೆ, ಮನೆ ಬಳಕೆ ಸಾಮಗ್ರಿಗಳ ತಯಾರಿಸುವಂತಹ ಮೊದಲಾದ ಕಸುಬುದಾರರಿದ್ದರು.

ಎಣ್ಣೆ ಉತ್ಪಾದಿಸುವವರನ್ನು ತೈಲಿಗ, ತೆಲ್ಲಿಗಾರ, ಗಾಣಿಗ ಎಂಬ ಹೆಸರುಗಳಿಂದ ಕರೆಯಲಾಗುತ್ತಿತ್ತು.[೧೮] ಅಂದು ಎಣ್ಣೆ ಉತ್ಪಾದನೆ ಮತ್ತು ಮಾರಾಟಗಳೆರಡೂ ಒಂದೇ ಕಡೆ ನಡೆಯುತ್ತಿತ್ತು. ಎತ್ತುಗಾಣ,[೧೯] ಕೈಗಾಣ,[೨೦] ಮೆಟ್ಟುಗಾಣವು ತುಳಿತದ ಮೂಲಕ ಕಾರ್ಯನಿರ್ವಹಿಸುವ ಗಾಣವೆಂದು ಅದರ ಹೆಸರಿನಿಂದ ಊಹಿಸಬಹುದು, ಗಾಣಂ ಮೆಟ್ಟುವರಲ್ಲು ಎಂದು ಶಾಸನೋಕ್ತವಾಗಿದೆ.[೨೧] ಎಣ್ಣೆಬೀಜಗಳನ್ನು ಹಾಕಿ ಎಣ್ಣೆ ಉತ್ಪಾದಿಸುತ್ತಿದ್ದರು.[೨೨] ಗಾಣಗಳ ಮೇಲೆ ವಿಧಿಸುತ್ತಿದ್ದ ತೆರಿಗೆಯನ್ನು ಗಾಣದೆರೆ, ಗಾಣಾಯ, ಗಾಣದ ಸುಂಕ ಮುಂತಾದ ಹೆಸರುಗಳಿಂದ ಕರೆಯುತ್ತಿರುವುದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.[೨೩] ಎಣ್ಣೆ ತೆಗೆಯುವುದು ಬಹುದೊಡ್ಡ ಕಸುಬುಗಳಲ್ಲಿ ಒಂದಾಗಿತ್ತು. ಈ ಕಸುಬು ಬಹು ವ್ಯಾಪಕವಾಗಿ ಹರಡಿರುವುದು ವಿಪುಲವಾದ ಶಾಸನಗಳ ಉಲ್ಲೇಖಗಳಿಂದ ಸ್ಪಷ್ಟವಾಗುವುದು.

ಗಾಣಗಳನ್ನು ಕಲ್ಲಿನಿಂದಲೂ ಕೆಲವನ್ನು ಮರದಿಂದಲೂ ನಿರ್ಮಿಸುತ್ತಿದ್ದರು. ಕಲ್ಲುಗಾಣದ ಉಲ್ಲೇಖ ಹಲವು ಶಾಸನಗಳಲ್ಲಿ ಕಂಡುಬಂದಿದೆ.[೨೪] ಬೆಲ್ಲ ಮತ್ತು ಸಕ್ಕರೆ ಉತ್ಪಾದನೆಯ ಕಸುಬು ಪ್ರಮುಖವಾಗಿತ್ತು. ಕಬ್ಬು ವಾಣಿಜ್ಯಕ್ಷೇತ್ರದ ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದ ಬೆಳೆಯಾಗಿತ್ತು. ಈ ಕಸುಬಿಗೆ ವಿಧಿಸುತ್ತಿದ್ದ ತೆರಿಗೆಯನ್ನು ಅಲೆದರೆ ಎಂದು ಕರೆಯಲಾಗಿದೆ.[೨೫]

ಬಟ್ಟೆಯನ್ನು ನೇಯುವ ಕಸುಬುದಾರರ ಉಲ್ಲೇಖಗಳು ಶಾಸನಗಳಲ್ಲಿ ಸಿಗುತ್ತವೆ. ಅಂದು ಬಟ್ಟೆ ತಯಾರಿಸಲು ಬೇಕಾದ ಕಚ್ಚಾವಸ್ತುಗಳನ್ನು ಉತ್ಪಾದಿಸುವ, ನೇಯುವ, ಮಾರಾಟ ಮಾಡುವ ಕೆಲಸ ಒಂದು ಬೃಹತ್ ಉದ್ದಿಮೆಯಂತೆಯೇ ಸಾಗಿತ್ತು. ಬಟ್ಟೆ ನೇಯುವ ಕಸುಬುದಾರರಿಗೆ ಅರಸರ ಮತ್ತು ಅಧಿಕಾರಿ ವರ್ಗದವರ ಪ್ರೋತ್ಸಾಹ ದೊರಕಿತ್ತು. ನೇಕಾರರ ಮೇಲೆ ವಿಧಿಸುತ್ತಿದ್ದ ತೆರಿಗೆಯನ್ನು ನೂಲುದೆರೆ, ಮಗ್ಗದೆರೆ, ಮುಂತಾದ ಹೆಸರುಗಳಿಂದ ಕರೆಯಲಾಗಿದೆ.[೨೬]

ಕೃಷಿ ಮತ್ತು ಕೃಷಿಯೇತರ ಕೆಲಸಗಳಿಗೆ ಕಬ್ಬಿಣದಿಂದ ತಯಾರಿಸಿದ ಉಪಕರಣಗಳು ಬೇಕಾಗುತ್ತಿತ್ತು. ಅಲ್ಲದೆ ಚಿನ್ನ, ಬೆಳ್ಳಿ, ಮರ, ಮಡಕೆ ಇನ್ನಿತರ ವಸ್ತುಗಳಿಂದ ಮಾಡುವ ಕಸುಬುದಾರರು ವಿಜಯನಗರ ಪೂರ್ವದಲ್ಲಿ ಇದ್ದರು ಎಂಬುದಕ್ಕೆ ಅನೇಕ ಶಾಸನಗಳಲ್ಲಿ ಉಲ್ಲೇಖಿತಗೊಂಡಿರುವುದು ಗಮನಾರ್ಹ.

ಕಂಚುಗಾರ[೨೭] ಇವರು ತಳಿಗೆ, ಕನ್ನಡಿ, ಸಿಪ್ಪು, ಸೌಟು ಇತ್ಯಾದಿಗಳನ್ನು ಮಾಡುತ್ತಿದ್ದರೆಂದು ನಯಸೇನ ಹೇಳುತ್ತಾನೆ.[೨೮] ಕಂಚುಗಾರರು ತಯಾರಿಸಿದ ಪಾತ್ರೆಗಳನ್ನು ಭಂಡಸಾಲೆಯವರು ಮಾರುತ್ತಿದ್ದರೆಂದು ಕಾಣುತ್ತದೆ. ಮೇರೆಯನ್ನು ಹೇಳುವಾಗ ಭಂಡಸಾಲೆಯವರ ಮೇರೆ ಎಂದು

ಶಾಸನವೊಂದು ಹೇಳುತ್ತದೆ.[೨೯] ಆ ಕಾಲದಲ್ಲಿ ಗಾಜಿನ ಕನ್ನಡಿಗಳು ಬಳಕೆಯಲ್ಲಿರಲಿಲ್ಲ ಕಂಚನ್ನು ಹೆಚ್ಚು ಹೊಳಪು ಕೊಟ್ಟು ಕನ್ನಡಿಯಂತೆ ಬಳಸುತ್ತಿದ್ದರು.[೩೦] ಅಕ್ಕಸಾಲೆ,[೩೧] ಕಮ್ಮಾರ[೩೨] ಬಡಗಿ,[೩೩] ಬಳೆಗಾರ,[೩೪] ಬೆಳಗಾಂ ತಾಲ್ಲೂಕಿನ ಸಂಸ್ಕೃತ ಶಾಸನವೊಂದರಲ್ಲಿ ಸೇನಹಳ್ಳಿ, ಕಲ್ಲಕುಂದರಗೆ ಮತ್ತು ನಿಟ್ಟೂರುಗಳನ್ನು ಬಳೆಗಾರ ಸ್ಥಳಗಳೆಂದು ಪ್ರಸ್ಥಾಪಿಸಲಾಗಿದೆ.[೩೫] ಮೇದಾರ,[೩೬] ದೀವರ ಮೀನು ಹಿಡಿಯುವ ವೃತ್ತಿಯವರಾದ ಇವರ ವಿಷಯ ಶಾಸನಗಳಲ್ಲಿ ಅಷ್ಟಾಗಿ ಕಂಡು ಬರುವುದಿಲ್ಲ. ಒಂದು ಶಾಸನ ದೀವರ ಲೋಕ್ಕೈಕ ನಾಯಕನ ಮಗ ತುರು ರಕ್ಷಣೆಗಾಗಿ ಹೋರಾಡಿ ಮಡಿದ ವಿಷಯವನ್ನು ತಿಳಿಸುತ್ತದೆ.[೩೭] ಈ ರೀತಿಯಾಗಿ ಅನೇಕ ಕಸುಬುದಾರರು ವಿಜಯನಗರ ಪೂರ್ವದಲ್ಲಿ ಇದ್ದರು ಎಂಬುದಕ್ಕೆ ಶಾಸನೋಕ್ತ ದಾಖಲೆಗಳು ದೃಢಪಡಿಸುತ್ತವೆ.

ಪ್ರಾಚೀನ ಶಾಸನಗಳಲ್ಲಿ ಅಕ್ಕಸಾಲಿ, ಕಂಚುಗಾರ, ಕಮ್ಮಾರ ಮುಂತಾದ ಕಸುಬುದಾರರ ಉಲ್ಲೇಖಗಳನ್ನು ಗಮನಿಸಿದ್ದೇವೆ. ಇವರಿಗೆ ದೊರೆಯುತ್ತಿದ್ದ ಲೋಹಗಳನ್ನು ಹೇಗೆ ತೆಗೆಯುತ್ತಿದ್ದರು ಎನ್ನುವುದು ಮತ್ತು ಆ ಗಣಿ ಕೈಗಾರಿಕೆಗೆ ಸಂಬಂಧಿಸಿದ ವಿವರಗಳು ಅಂದಿನ ಸಂದರ್ಭದಲ್ಲಿ ಒಂದು ಉದ್ದಿಮೆಯಾಗಿ ರೂಪುಗೊಳ್ಳಲಾರಂಭಿಸಿತ್ತು ಎಂಬುದನ್ನು ಕೆಲವು ಶಾಸನಗಳಲ್ಲಿ ಚಿನ್ನ ಮತ್ತು ಕಬ್ಬಿಣದ ಗಣಿ, ತಾಮ್ರದ ಗಣಿ ಇದ್ದವು ಎಂಬುದಕ್ಕೆ ಉಲ್ಲೇಖಗಳು ಸಿಗುತ್ತವೆ.[೩೮] ಕಸುಬುದಾರರು ಸ್ವತಂತ್ರವಾಗಿ ಗಣಿಗಳನ್ನು ನಡೆಸಬಹುದಾಗಿತ್ತು.[೩೯] ಗುಬ್ಬಿ, ಚಿಕ್ಕನಾಯಕನಹಳ್ಳಿ, ಮಾಗಡಿ, ಚೆನ್ನಪಟ್ಟಣ, ಬಳ್ಳಾರಿ, ಬಿಜಾಪುರ, ಧಾರವಾಡ ಗಣಿಗಾರಿಕೆ ನಡೆಯುತ್ತಿದ್ದ ಪ್ರಮುಖ ಸ್ಥಳಗಳಾಗಿದ್ದವು[೪೦] ಕಬ್ಬಿಣದ ಕಸುಬುದಾರಿಕೆ ಮೊದಲ ಸ್ಥಾನವನ್ನು ಪಡೆದುಕೊಂಡಿತ್ತು. ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ಕಬ್ಬಿಣದಿಂದ ತಯಾರಿಸಿದ ಉಪಕರಣಗಳು ಬೇಕಾಗುತ್ತಿತ್ತು. ಈ ಉಪಕರಣಗಳನ್ನು ಉತ್ಪಾದಿಸುವವರನ್ನು ಕಮ್ಮಾರರು ಎಂಬ ಹೆಸರಿನಿಂದ ಕರೆಯಲಾಗಿದೆ. ಹಾರೆ, ಗುದ್ದಲಿ, ಕುಡಗೋಲು ಮೊದಲಾದ ಕೃಷಿಗೆ ಬಳಸುವ ಉಪಕರಣಗಳು ಅತ್ಯಂತ ಹೆಚ್ಚಿನ ಬೇಡಿಕೆಯನ್ನು ಹೊಂದಿರುತ್ತಿದ್ದವು ಇದರೊಂದಿಗೆ ಯುದ್ಧೋಪಕರಣಗಳೂ ಅಷ್ಟೇ ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದವು. ರಾಜಪ್ರಭುತ್ವಕ್ಕೆ ಯುದ್ಧಗಳು ಅನಿವಾರ್ಯವಾಗಿದ್ದರಿಂದಾಗಿ ಯುದ್ಧಕ್ಕೆ ಒಳಪಟ್ಟ ಖಡ್ಗ, ಕವಚ, ಈಟಿ, ಶೂಲ, ಸಬಳ, ಕೊಂತ, ಶಲ್ಯ, ಭಲ್ಯ, ಕರ್ಕಡೆ, ಸುರಿಗೆ, ಮುಸಲ, ಭಿಂಡವಾಳ, ಮುಸುಂಡಿ ಮೊದಲಾದ ಆಯುಧಗಳು, ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನೆಗೊಳ್ಳುತ್ತಿದ್ದವು.[೪೧] ಈ ಎಲ್ಲಾ ವಿಧವಾದ ಆಯುಧಗಳನ್ನು ಉತ್ಪಾದಿಸಲು ನುರಿತ ಕಸುಬುದಾರರಾದ ಕಮ್ಮಾರರು, ಲೋಹಕಾರರು ಅವಶ್ಯವಾಗಿ ಬೇಕಾಗಿದ್ದರೆಂದು ತಿಳಿಯುತ್ತದೆ.

ಹೊಯ್ಸಳರ ಆಳ್ವಿಕೆಯ ಸಂದರ್ಭದಲ್ಲಿ ನಿರ್ಮಾಣಗೊಂಡ ಕೇದಾರೇಶ್ವರ ಗುಡಿಯ ಮೇಲಿನ ಶಿಲ್ಪದಲ್ಲಿ ಉಕ್ಕಿನ ಹುರುಪಗಳಿಂದ ಕೂಡಿದ ಕಬ್ಬಣದ ಕವಚವು ಯುದ್ಧದ ಕುದುರೆಯ ದೇಹ ಆವರಿಸಿರುವುದನ್ನು ಸವಾರನೂ ಕೂಡ ತನ್ನ ಕಾಲಿನವರೆಗೂ ಮುಚ್ಚಿರುವ ಲೋಹದ ಕವಚ ತೊಟ್ಟಿರುವುದನ್ನು ತಲೆಗೆ ಶಿರಸ್ತ್ರಾಣ ಹಾಕಿರುವುದನ್ನು ಕಾಣಬಹುದಾಗಿದೆ.[೪೨] ಹಾಗೆಯೇ ವಿಜಯನಗರ ಕಾಲದ ಪೂರ್ವದಲ್ಲಿನ ಆಳ್ವಿಕೆಗಳ ದೇವಸ್ಥಾನಗಳಲ್ಲಿನ ಶಿಲ್ಪಗಳನ್ನು ಗಮನಿಸಿದರೆ ಅವುಗಳಿಂದ ಅಂದು ಲೋಹಗಳ ಬಳಕೆಯ ಬಗ್ಗೆ ತಿಳಿಯುತ್ತದೆ. ತಾಮ್ರ, ಹಿತ್ತಾಳೆ, ಕಂಚುಗಳಿಂದ ವಿವಿಧ ರೀತಿಯ ವಸ್ತುಗಳನ್ನು ತಯಾರಿಸುವ ಕಸುಬುದಾರರು ಬೇರೆಯೇ

ಇದ್ದರು, ಅದಕ್ಕೆ ಅನೇಕ ಶಾಸನೋಕ್ತ ದಾಖಲೆಗಳಿವೆ. ಕಂಚುಗಾರರು ದಿನನಿತ್ಯದ ಬಳಕೆಯ ಪಾತ್ರೆಗಳನ್ನಷ್ಟೇ ಅಲ್ಲದೆ ಲೋಹದ ಮೂರ್ತಿಗಳನ್ನು ತಯಾರಿಸುತ್ತಿದ್ದರು.[೪೩] ಕ್ರಿ.ಶ. ೧೧೧೬ರ ಮೈಸೂರಿನ ಶಾಸನ ಕಂಚುಗಾರರು ಬಂಗಾರ, ಕಬ್ಬಿಣ, ತಾಮ್ರ ಮೊದಲಾದ ಲೋಹ ಕರ್ಮಗಳಲ್ಲಿಯೂ, ವಜ್ರ ಮತ್ತು ರತ್ನ ಮೊದಲಾದ ರತ್ನಕರ್ಮಗಳಲ್ಲಿಯೂ ಪರಿಣತರಾಗಿದ್ದರು. ಅಲ್ಲದೆ ತೀರ್ಥಂಕರ, ವಿಷ್ಣು ಮೊದಲಾದ ದೇವತೆಗಳ ಮೂರ್ತಿಗಳನ್ನು ಕೂಡ ಎರಕ ಹೊಯ್ದು ತಯಾರಿಸುತ್ತಿದ್ದರೆಂದು ಹೇಳುತ್ತದೆ.[೪೪] ಕಂಚುವಿನಿಂದ ವಸ್ತುಗಳನ್ನು ತಯಾರಿಸುತ್ತಿದ್ದ ಕೆಲವು ಕಸುಬುದಾರರ ಹೆಸರುಗಳು ಶಾಸನಗಳಲ್ಲಿ ಸಿಗುತ್ತದೆ. ಕೆ.ಎಸ್. ಕುಮಾರಸ್ವಾಮಿ ಅವರು ತಮ್ಮ ಕೃತಿಯಲ್ಲಿ ನಾಚೋಜಿ, ಕಾಳೋಜಿ ಮತ್ತು ಅವಕೋಜಿ[೪೫] ಎನ್ನುವ ಕಂಚುಗಾರರ ಶಾಸನಗಳನ್ನು ಆಧಾರಿಸಿ ಉಲ್ಲೇಖಿಸಿದ್ದಾರೆ.

ಮರದಿಂದ ವಿವಿಧ ರೀತಿಯ ವಸ್ತುಗಳನ್ನು ತಯಾರಿಸುವವರನ್ನು ಬಡಗಿಗಳು ಎಂದು ಹೆಸರಿಸಲಾಗಿದೆ. ಜನರು ವಾಸಿಸುವ ಮನೆಗಳನ್ನು ಹಾಗೂ ಬಳಸುವ ಪೀಠೋಪಕರಣಗಳು, ವಸ್ತುಗಳನ್ನು ಸಾಗಿಸಲು ಗಾಡಿ ಅಥವಾ ಬಂಡಿಗಳನ್ನು, ರಥಗಳನ್ನು ಮರದಿಂದ ಕೆತ್ತನೆ ಮಾಡಿ ನಿರ್ಮಿಸುತ್ತಿದ್ದರು. ಜನ ಸಾಮಾನ್ಯರು ಉಪಯೋಗಿಸುವ ಪೀಠೋಪಕರಣ, ಗಾಡಿ, ನೇಗಿಲು, ಮುಂತಾದವುಗಳನ್ನು ಮಾಡುವವರನ್ನು ಅರೆಕುಶಲ ಬಡಗಿಗಳೆಂದು, ಮೇಲ್ವರ್ಗದ ಜನರ ಅಭಿರುಚಿಗನುಗುಣವಾಗಿ ಸೂಕ್ಷ್ಮ ಕೆತ್ತನೆಯಿಂದ ವಿಶಿಷ್ಟವಾದ ಪಿಠೋಪಕರಣಗಳನ್ನು, ದೇವಾಲಯಗಳಲ್ಲಿ ಕೆತ್ತನೆ ಕೆಲಸ ಮತ್ತು ರಥಗಳನ್ನು ನಿರ್ಮಾಣ ಮಾಡುವವರನ್ನು ಕುಶಲ ಬಡಗಿಗಳು ಎಂಬುದಾಗಿ ಕರೆಯಲಾಗಿದೆ.[೪೬] ಬಡಗಿಗಳು ಹಡಗುಗಳನ್ನು ನಿರ್ಮಿಸುತ್ತಿದ್ದರು ಎನ್ನುವ ಮಾಹಿತಿ ಶಾಸನ ಮತ್ತು ಜನಪದ ಸಾಹಿತ್ಯಗಳಲ್ಲಿ ಸಿಗುತ್ತದೆ. ಹೊಯ್ಸಳ ಅರಸ ಎರಡನೆಯ ಬಲ್ಲಾಳನ ಆಳ್ವಿಕೆಯ ಅವಧಿಯಲ್ಲಿದ್ದ ಕಮ್ಮಸೆಟ್ಟಿ ಮತ್ತು ದಾಸೆಯ ಸೆಟ್ಟಿ ಎನ್ನುವವರು ಹಡಗಿನ ಮೂಲಕ ಹೊರನಾಡಿನೊಡನೆ ವ್ಯಾಪಾರ ಸಂಪರ್ಕವನ್ನು ಇಟ್ಟುಕೊಂಡಿದ್ದರು[೪೭] ಎಂದು ಎಸ್. ಗುರುರಾಜಚಾರ್ ಅವರು ಅಭಿಪ್ರಾಯಪಟ್ಟಿದ್ದಾರೆ. ಬಡಗಿಗಳು ಮರದ ಆಯುಧಗಳನ್ನು ತಯಾರಿಸುತ್ತಿದ್ದರು ಎನ್ನುವ ಉಲ್ಲೇಖಗಳು ಜನಪದ ಸಾಹಿತ್ಯದಲ್ಲಿ ಸಿಗುತ್ತವೆ. ಇವರಿಗೆ ಭೂಮಿಯನ್ನು ದಾನ ನೀಡಲಾಗುತ್ತಿತ್ತು ಎನ್ನುವ ಉಲ್ಲೇಖಗಳು ಶಾಸನಗಳಲ್ಲಿ ಸಿಗುತ್ತವೆ. ಚಂಪೋಜ ಎನ್ನುವ ಹೆಸರಿನ ಬಡಗಿಗೆ ಅವರ ಸೇವೆಯನ್ನು ಪರಿಗಣಿಸಿ ಭೂಮಿಯನ್ನು ದಾನ ನೀಡಲಾಗಿತ್ತು.[೪೮] ಅಂದು ಬಡಗಿಗಳು ಸಮಾಜದಲ್ಲಿ ಪ್ರಧಾನ ಪಾತ್ರವಹಿಸುತ್ತಿದ್ದರು. ಇವರಿಲ್ಲದೆ ಕೃಷಿ, ಮನೆ ಚಟುವಟಿಕೆಗಳು ನಡೆಯುತ್ತಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಅರಸರು ವಿವಿಧ ಸಂದರ್ಭದಲ್ಲಿ ಲೋಹ ಮಾದರಿಯ ನಾಣ್ಯಗಳನ್ನು ಹೊರಡಿಸಿದ ಉಲ್ಲೇಖಗಳ ಶಾಸನ, ಸಾಹಿತ್ಯ ಕೃತಿ, ಉತ್ಖನನಗಳಲ್ಲಿ ದೊರೆತ ಆಧಾರಗಳಿಂದ ತಿಳಿಯಲಾಗಿದೆ. ಆದರೆ ಆ ನಾಣ್ಯಗಳನ್ನು ತಯಾರಿಸುವ ಕಸುಬುದಾರರ ಕುರಿತು ಹೆಚ್ಚಿನ ಮಾಹಿತಿಗಳು ದೊರಕುವುದಿಲ್ಲ. ಇದು ಅರಸಕೇಂದ್ರಿತ ಚರಿತ್ರೆಯ ಮಿತಿಯಾಗಿ ಕಂಡುಬರುತ್ತದೆ.[೪೯] ನಾಣ್ಯಗಳನ್ನು ಟಂಕಿಸುತ್ತಿದ್ದ ಕಾರ್ಯಗಾರಗಳನ್ನು ಕಮ್ಮಟಗಳೆಂದು ಅಥವಾ ಅಚ್ಚಿನ ಟಂಕಸಾಲೆಗಳೆಂದು

ಕರೆಯಲಾಗುತ್ತಿತ್ತು. ಸರಕಾರ ಕಮ್ಮಟಗಳ ಮೇಲೆ ಹತೋಟಿಯನ್ನು ಇಟ್ಟುಕೊಂಡಿತ್ತು. ಖಾಸಗಿ ವ್ಯಕ್ತಿಗಳು, ಸಂಸ್ಥೆಗಳು ಸರಕಾರದ ಪರವಾನಿಗಿ ಪಡೆದುಕೊಂಡು ಕಮ್ಮಟಗಳನ್ನು ಹೊಂದಬೇಕಿತ್ತು. ಚಿನ್ನ, ಬೆಳ್ಳಿ, ತಾಮ್ರದ ನಾಣ್ಯಗಳು ಕಮ್ಮಟಗಳಲ್ಲಿ ಟಂಕಿಸಲಾಗುತ್ತಿತ್ತು. ನಾಣ್ಯವನ್ನು ಟಂಕಿಸುವ ವ್ಯಕ್ತಿಗಳ ಮತ್ತು ಅದರ ಒಟ್ಟು ಜವಬ್ದಾರಿಯನ್ನು ಹೊತ್ತಿರುವ ಅಧಿಕಾರಿಗಳ ಕುರಿತು ಶಾಸನೋಕ್ತ ಮಾಹಿತಿ ಸಿಗುತ್ತದೆ.[೩೦] ಸೆಟ್ಟಿಗಳು ಮತ್ತು ಅಕ್ಕಸಾಲಿಗರು ಪರಸ್ಪರ ಒಪ್ಪಂದ ಮಾಡಿಕೊಂಡು ಕಮ್ಮಟದ ಒಡೆಯರಾಗುತ್ತಿದ್ದರು. ಕಮ್ಮಟವು ಚೆನ್ನಾಗಿ ಬೆಳೆದು ಒಂದು ಸಂಸ್ಥೆಯಾಗಿ, ಪ್ರತಿಯೊಂದು ಕಮ್ಮಟಕ್ಕೂ ಒಬ್ಬ ಮುಖ್ಯಸ್ಥನಿರುತ್ತಿದ್ದನು. ಅವನ ಜೊತೆಯಲ್ಲಿ ಓಜುರು ಅಥವಾ ಆಚಾರಿಗಳು ಸಂಸ್ಥಾನಿಕವಾಗಿ ದುಡಿಯುತ್ತಿದ್ದರು. ಅಕ್ಕಸಾಲಿಗರು ಅಥವಾ ಕಮ್ಮಟದ ಓಜರುಗಳು ತಾವೇ ಪ್ರತ್ಯೇಕವಾಗಿ ಶ್ರೇಣಿಗಳು ಸ್ಥಾಪಿಸಿಕೊಳ್ಳುತ್ತಿದ್ದರು.[೩೧] ವಿಶ್ವಕರ್ಮರೆಂದು ಕರೆದುಕೊಳ್ಳುವ ಅಕ್ಕಸಾಲಿಗರನ್ನು ರಾಜನು ಕಮ್ಮಟಗಳಲ್ಲಿ ನೇಮಿಸಿಕೊಳ್ಳುತ್ತಿದ್ದನು.[೩೨] ಅವರು ತಮ್ಮದೇ ಆದ ಕಸುಬುಗಳಲ್ಲಿ ತೊಡಗಿಕೊಂಡು ತಮ್ಮ ಮನೆಮಂದಿಯೆಲ್ಲಾ ಅ ಕಸುಬುಗಳಲ್ಲೆ ಮುಂದುವರೆಯುತ್ತಿದ್ದರು. ಹೀಗೆ ಅವರನ್ನು ಅಕ್ಕಸಾಲಿಗ, ಕಂಚುಗಾರ ಎಂದು ಅವರ ಕಸುಬುಗಳ ಆಧಾರದ ಮೇಲೆ ಕರೆಯುವ ರೂಢಿಯಿತ್ತು.

ಜಿ.ಆರ್. ಕುಪ್ಪುಸ್ವಾಮಿ ಅವರ ಪ್ರಕಾರ ಕಮ್ಮಟಗಳಲ್ಲಿ ಯಾವ ರೀತಿಯ ಕಸುಬುದಾರರು ಕೆಲಸ ಮಾಡುತ್ತಿದ್ದರೆಂದರೆ, ಚಿನ್ನಕ್ಕೆ ಗೊತ್ತಾದ ಆಕರವನ್ನು ಕೊಡುವ ಬಿಡಿಗಮ್ಮಟ್ಟ, ನಾಣ್ಯದ ಮೇಲೆ ಮುದ್ರೆಯನ್ನು ಒತ್ತುವ ಉಂಡಿಗೆಯ ಕಮ್ಮಟ ಹಾಗೂ ನಾಣ್ಯಗಳ ಅಂಚನ್ನು ಕತ್ತರಿಸಿ ಅರದಿಂದ ಉಜ್ಜಿ ಸಮನಾದ ಆಕಾರವನ್ನು ನೀಡುವ ಸೌಕಟ್ಟುಕಾರರು, ಕಮ್ಮಟಗಳ ಒಡೆಯರಾಗಿದ್ದ ಕೆಲವು ವ್ಯಕ್ತಿಗಳ ಹೆಸರುಗಳು ಶಾಸನಗಳಲ್ಲಿ ಉಲ್ಲೇಖಿತವಾಗಿವೆ.[೩೩] ಸಾವಿಮೋಜ, ಚಿಕ್ಕಮೊದೋಜ, ದಾಮೋಜ, ಕೇತೋಜ, ರುದ್ರೋಜ, ರಾಮೊಜ, ಉತ್ತಮೋಜ ಇವರು ಕಮ್ಮಟಗಳ ಒಡೆಯರು ಅಥವಾ ಹಿರಿಯಾರಾಗಿದ್ದರು.[೩೪] ಇವರು ದಾನ ನೀಡುವ ಅಧಿಕಾರವನ್ನು ಹೊಂದಿದ್ದರು. ಆಭರಣಗಳನ್ನು ತಯಾರಿಸುವ ಕುಶಲ ಕಸುಬುದಾರರನ್ನು ಅಕ್ಕಸಾಲಿಗರೆಂದು ಕರೆಯಲಾಗುತ್ತಿತ್ತು. ಆಭರಣ ತಯಾರಿಕೆಯು ಅತ್ಯಂತ ಸೂಕ್ಷ್ಮ ಕೆಲಸವಾಗಿದ್ದು ಇದಕ್ಕಾಗಿ ಅಕ್ಕಸಾಲಿಗರು ತಾಂತ್ರಿಕ ಜ್ಞಾನವನ್ನು ಪಡೆದುಕೊಂಡಿದ್ದರು ಎನ್ನುವುದನ್ನು ಸೂಚಿಸುತ್ತದೆ. ಹೊಯ್ಸಳ ಅರಸ ನರಸಿಂಹನು ಅಕ್ಕಸಾಲಿ ಕಾಳಜಿ ಎನ್ನುವವನಿಗೆ ಬಂಗಾರದ ಕೆಲಸ ಮಾಡಿದ್ದಕ್ಕೆ ಭೂಮಿಯನ್ನು ದಾನ ನೀಡಿದ ವಿವರ ಶಾಸನದಲ್ಲಿದೆ.[೩೫] ಆಭರಣಗಳನ್ನು ತಯಾರಿಸುತ್ತಿದ್ದ ಬಳೆಗಾರ ಮಾರಸೆಟ್ಟಿ ಬಳೆವ್ಯಾಪಾರಿ ಮಲ್ಲಿಸೆಟ್ಟಿ, ಮುಂತಾದ ಅಕ್ಕಸಾಲಿಗರ ಹೆಸರುಗಳು ಶಾಸನಗಳಲ್ಲಿ ಕಂಡುಬರುತ್ತವೆ.[೩೬]

ಟಿಪ್ಪಣಿಗಳು

೧. ಕೆ.ಎಂ., ಮೈತ್ರಿ, ಬುಡಕಟ್ಟು ಕುಲಕಸುಬುಗಳು, ಪು-೧೫

೨. ವೇದಿಕ್ ಇಂಡಿಯಾ, ಕೆ.ಎಮ್. ಮುನ್ಷಿ, ದ ಹಿಸ್ಟರಿ ಅಂಡ್ ಕಲ್ಚರ್ ಆಫ್ ಇಂಡಿಯಾನ್ ಪಿಪಲ್ ದ ವೇದ ಎಜ್, ೧೯೫೧, ಭಾರತೀಯ ವಿದ್ಯಾಭವನ, ಪು-೨೪೮-೨೪೯

೩. ನಂಜಮ್ಮಣ್ಣಿ ಎಂ., ಭಾರತೀಯ ಸಾಮಾಜಿಕ ಸಂಸ್ಥೆಗಳು, ೨೦೦೩, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪು-೩

೪. ಅದೇ, ಪು-೪

೫. ಅದೇ, ಪು-೪

೬ ಅದೇ, ಪು-೭

೭ ರೊಮಿಲ ಥಾಪರ್, ಪ್ರಾಚೀನ ಭಾರತ, ಕನ್ನಡಕ್ಕೆ ಹೆಚ್.ಎಸ್. ಉಮೇಶ್, ಶಶಿಕುಮಾರ್ ಜೀ. ಮತ್ತು ದೀಪ, ೨೦೧೦, ವಿಸ್ಮಯ ಪ್ರಕಾಶನ ಮೈಸೂರು, ಪು. ೮೪

೮. ಅದೇ, ಪು-೮೬.

೯. ಅದೇ, ಪು-೮೭

೧೦. ಅದೇ, ಪು-೮೭

೧೧. ಅದೇ, ಪು-೮೯

೧೨. ಅದೇ, ಪು-೯೦

೧೩. ರೊಮಿಲಾ ಥಾಪರ್, ಪು-೯೨

೧೪. ಅದೇ, ಪು-೧೦೫

೧೫. ರಘುಶಂಖ ಭಾತಂತ್ರ, ವಚನಕಾರ ವೃತ್ತಿ ಮೌಲ್ಯಗಳ, ೨೦೧೦, ಪು-೧೩೪

೧೫. ಪ್ರಸಾದ್ ಓ.ಪಿ. ಡಕೇ ಅಂಡ್ ರಿವೈಟಲ್ ಆಫ್ ಅರ್ಬನ್ ಸೆಂಟ್ ಇನ್ ಮೆಡಿವಲ್ ಸೌಥ್ ಇಂಡಿಯಾ, ಪಾಟ್ನ, ಪು-೩೪

೧೬. ಅದೇ, ಪು-೩೫-೫೯

೧೭. ಬ್ರೂಸ್ ಟ್ರೆಗರ್ ಡಿ.ಟಿ. ಮಿರ್ನೆಂಟ್ಸ್ ಆಫ್ ಅರ್ಬನ್ ಗ್ರೋಥ್ ಇನ್ ಪ್ರಿ ಇಂಡಸ್ಟ್ರಿಯಲ್ ಸೊಸೈಟಿ, ಲಂಡನ್, ೧೯೭೩, ಪು-

೧೮. ಬಿ.ಆರ್. ಹಿರೆಮಠ, ೧೯೬೮, ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಧಾರವಾಡ ಪು-೧೦೩

೧೯. ಎ.ಕ.೬, ಕಡೂರು, ૩೬, ಕ್ರಿಪು. ೧೨೦೩

೨೦. ಎ.ಕ. ೧೨, ತಿಪಟೂರು, ೬೬, ಕ್ರಿ.ಶ. ೧೧೬೩,

೨೧. ಎ.ಇ. ರೋಣ, ೧೨ ಎ, ಕ್ರಿ.ಶ. ೧೧೬೭

೨೨. ಅದೇ, ಪು-೧೦೫

೨೩. ಅದೇ, ಪು-೧೦೫

೨೪. ಎ.ಕ. ೪, ಚಾಮರಾಜನಗರ, ೧೦೫, ಕ್ರಿ.ಶ. ೧೨ನೆಯ ಶತಮಾನ

೨೫. ಕೆ.ಎಸ್. ಶಿವಣ್ಣ, ಹೊಯ್ಸಳ ಯುಗದಲ್ಲಿ ನಗರ ಕೇಂದ್ರಗಳ ಹುಟ್ಟು ಬೆಳವಣಿಗೆ ಹಿಂದಿನ ಶಿಕ್ತೆಗಳಾಗಿ ವಾಣಿಜ್ಯ, ಸಂಸ್ಕೃತಿ ಮತ್ತು ರಾಜ್ಯತಂತ್ರ ಕರ್ನಾಟಕ ಚರಿತ್ರೆ, ಸಂ.೨, (ಸಂ) ಬಿ. ಸುರೇದ್ರರಾವ್, ಪ್ರಸಾರಾಂಗ, ಕ.ವಿ.ವಿ. ಹಂಪಿ, ಪು- ೨೦೦-೨೧೧

೨೬. ಮೋಹನ್ ಕೃಷ್ಣ ರೈ ಕೆ., ಪ್ರಭುತ್ವ ಮತ್ತು ಜನತೆ, ೨೦೦೪, ಪ್ರಸಾರಾಂಗ ಕ.ವಿ.ವಿ. ಹಂಪಿ, ಪು-೯೫

೨೭. ಎ.ಇ. ೧೨, ಶೋರಾಪುರ, ೩೭ ಡಿ, ಕ್ರಿಶ. ೧೧೧೦

೨೮. ಧರ್ಮಾಮೃತ, ೨.೨೦

೨೯. ಎಸ್.ಐ.ಐ. ೧೫, ಮುಂಡರಗಿ, ೫೭೨, ಕ್ರಿಶ. ೧೨ನೆಯ ಶತಮಾನ

೩೦. ಸಿ.ಯು. ಮಂಜುನಾಥ, ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ, ಪು-೨೨೨

೩೧. ಎ.ಕ. ೫, ತಿ.ನರಸಿಪುರ, ೮೮ ಕ್ರಿಶ. ೧೨೭೬

೩೨. ಎ.ಇ. ೧೨, ಶೋರಾಪುರ, ೩೭ಡಿ, ಕ್ರಿಶ.೧೧೧೦

೩೩. ಎ.ಕ. ೯, ಮಾಗಡಿ, ೧೫, ಕ್ರಿಶ. ೧೩೧೫

೩೪. ಎ.ಕ. ೭, ಮಳವಳ್ಳಿ, ೧೩೬, ಕ್ರಿಶ. ೧೨೯೭

೩೫. ಕ.ಇ. ೧೧, ಬೆಳಗಾಂ, ೪೦ ಕ್ರಿಶ. ೧೨೬೧

೩೬. ಎ.ಕ., ೫, ಬೇಲೂರು, ೫೦, ಕ್ರಿಶ. ೧೨೨೭

೩೭. ಕ.ಇ. ೫, ಹಾನಗಲ್ಲು, ೬೧, ಕ್ರಿಶ. ೧೩೫೮

೩೮. ಅಲ್ಟೇಕರ್ ಎ.ಎಸ್. ದಿ ರಾಷ್ಟ್ರಕೂಟಾಸ್ ಅಂಡ್ ದೇಯೊರ್ ಟೈಮ್ಸ್, ೧೯೬೭, ಪೂಣಾ, ಪು-೩೫೫, ಎಸ್.ಐ.ಐ. ೯೧-೨೪೯, ಕ್ರಿಶ. ೧೧೪೭

೩೯. ಚಿದಾನಂದಮೂರ್ತಿ ಎಂ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ೧೯೭೯, ಪು-೩೭೪

೪೦. ಗುರುರಾಜಚಾರ್ ಎಸ್., ಸಮ್, ಆಸ್ಪಕ್ಟ್ಸ್ ಆಫ್ ಎಕನಾಮಿಕ್ ಅಂಡ್ ಸೋಶ್ಯಲ್ ಲೈಫ಼ ಇನ್ ಕರ್ನಾಟಕ, ೧೯೭೪, ಮೈಸೂರು, ವಿ.ವಿ. ಪು-೮೫

೪೧. ಚಿಂದಾನಂದಮೂರ್ತಿ ಎಂ., ಪೂರ್ವೋಕ್ತ, ಪು-೨೫೭

೪೨. ವಿಲಿಯಂ ಕೊಯಲೋ, ದಿ ಹೊಯ್ಸಳ ವಂಶ, ೧೯೫೦, ಮುಂಬಾಯಿ, ಪು-೨೫೪

೪೩. ಎಸ್. ಗುರುರಾಜಚಾರ್, ಪೂರ್ವೋಕ್ತ, ಪು-೮೬

೪೪. ಅದೇ, ಪು-೮೬

೪೫. ಕೆ.ಎಸ್. ಕುಮಾರಸ್ವಾಮಿ, ೧೯೯೬, ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಚಾರಿಯರು, ಬೆಂಗಳೂರು, ಪು-೭೨

೪೬. ಎಸ್. ಗುರುರಾಜಚಾರ್, ಪೂರ್ವೋಕ್ತ, ಪು-೭೭

೪೭. ಅದೇ, ಪು-೭೮

೪೮. ಎ.ಕ. ಚನ್ನರಾಯಪಟ್ಟಣ, ೨೪೪, ಕಿ.ಶ. ೧೨೧೦

೪೯. ಮೋಹನ್‌ಕೃಷ್ಣ ರೈ, ಪೂರ್ವೋಕ್ತ, ಪು-೯೭

೫೦. ಎಸ್.ಐ.ಐ., ೧೫, ಪು-೮೭, ನಂ.೬೭, ಕ್ರಿಶ. ೧೧೮೪

೫೧. ಮೋಹನ್‌ಕೃಷ್ಣರೈ, ಪೂರ್ವೋಕ್ತ, ಪು–೯೭

೫೨. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು–೩೮೯

೫೩. ಜಿ.ಆರ್. ಕುಪ್ಪುಸ್ವಾಮಿ, ಪೂರ್ವೋಕ್ತ, ಪು–೧೦೯

೫೪. ಎ.ವಿ. ನರಸಿಂಹಮೂರ್ತಿ, ದಿ ಕಾಯಿನ್ಸ್ ಆಫ್ ಕರ್ನಾಟಕ, ೧೯೭೫, ಮೈಸೂರು, ಪು–೭೮–೯೦

೫೫. ಎ.ಕ. ೭, ಮಳವಳ್ಳಿ, ೬೪, (ಪರಿಷ್ಕೃತ) ಕ್ರಿ.ಶ. ೧೨೫೯–೬೦

೫೬. ಎಂ.ಎ.ಆರ್. ೧೯೧೨, ಪು–೪೪, ಎ.ಕ. ಬೇಲೂರು, ೮೬, ಕ್ರಿ.ಶ. ೧೧೭೭

ಅಧ್ಯಾಯ-೩

ವಿಜಯನಗರ ಕಾಲದ ಕುಲಕಸುಬುಗಳು

ಕುಲಕಸುಬು ಅಂದರೆ ಮನೆತನದ ಉದ್ಯೋಗ, ಪಾರಂಪಾರಾಗತ ವೃತ್ತಿ, ಗುಂಪು, ಎಂದೆಲ್ಲಾ ಅರ್ಥೈಸಲಾಗಿದೆ. ಕೈ+ಕಸುಬು, ಕಲೆಗಾರಿಕೆ, ವೃತ್ತಿಕಲೆಗಾರಿಕೆ, ಗುಡಿ ಕೈಗಾರಿಕೆ ಎಂಬ ಇತರ ಪ್ರಯೋಗಗಳು ಈ ಕಸುಬಿನ ವಿವಿಧಾರ್ಥವನ್ನು ಬಿಂಬಿಸುತ್ತವೆ. ತಲೆತಲಾಂತರದಿಂದ ಕೈಕೊಂಡು ಬಂದ ಅನುವಂಶಿಕ ವೃತ್ತಿಗಳನ್ನೆ ಕುಲಕಸಬುಗಳನ್ನೆಬಹುದಾಗಿದೆ. ಈ ಕಸುಬುಗಳಿಗೆ ಪರಂಪರೆ ಇದೆಯೇ ಹೊರತು, ನಿರ್ದಿಷ್ಟ ತರಬೇತಿಯಿಲ್ಲ, ಹೆಚ್ಚಾಗಿ ಇವು ಕೃಷಿಕನ ಆಶ್ರಯದಲ್ಲಿಯೆ ಆಸರೆ ಪಡೆದಂತಹವುಗಳು. ಮೂಲಭೂತ ಜೀವನಾವಶ್ಯಕತೆಗಳನ್ನು ಪೂರೈಸುವುದಕ್ಕೊಸ್ಕರವಾಗಿಯೆ ಇವು ಉದಯವಾದವು.

ಸಾಮಾಜಿಕ ಜೀವನದಲ್ಲಿ ಜಮೀನು ಇಲ್ಲದವ, ತನಗೆ ಇಷ್ಟವಾದ, ತನ್ನ ಶಕ್ತಿ ಸಾಮರ್ಥ್ಯಕ್ಕನುಗುಣವಾಗಿ ಕಸುಬನ್ನು ಆಯ್ಕೆಮಾಡಿಕೊಂಡು, ಅದರಲ್ಲಿ ತನ್ನ ಪರಿಣತಿಯನ್ನು ತೋರ್ಪಡಿಸುತ್ತಾ, ಅದನ್ನೆ ತನ್ನ ಉಪಜೀವನ ಕಸುಬನ್ನಾಗಿಸಿಕೊಂಡ. ಹೀಗೆ ಬರುಬರುತ್ತಾ ವಿವಿಧ ಕಸುಬುಗಳನ್ನು ತಮ್ಮ ಉಪಜೀವನ ವೃತ್ತಿಯನ್ನಾಗಿಸಿಕೊಂಡ ಒಂದು ವರ್ಗವೇ ಸಾಮಾಜಿಕ ಜೀವನದಲ್ಲಿ ರೂಪುಗೊಂಡಿತು. ಕೃಷಿ ಕೇಂದ್ರವಾದ ಆ ವರ್ಗ ಬಹು ವಿಸ್ತೃತವಾದುದು. ಪಶುಸಂಗೋಪನೆ ಮತ್ತು ವ್ಯವಸಾಯ ಮಾಡುವ ಒಕ್ಕಲಿಗ, ಬಟ್ಟೆ ಶುಭ್ರಗೊಳಿಸುವ ಅಗಸ, ತಲೆಬೋಳಿಸುವ ಕ್ಷೌರಿಕ, ಬಟ್ಟೆ ನೇಯುವ ನೇಕಾರ, ಬಟ್ಟೆ ಹೊಲೆಯುವ ಸಿಂಪಿಗ, ಕೌದಿ ಹೊಲೆಯುವ ದೋಶಿಗ, ಮನೆಕಟ್ಟುವ ಉಪ್ಪಾರ, ಹೊಳೆದಾಟಿಸುವ ಅಂಬಿಗ, ಬುಟ್ಟಿ ಹೇಣೆಯುವ ಮೇದಾರ, ಹಾಲು ಮಾರುವ ಗೌಳಿಗ, ಕುರಿ ಸಾಕುವ ಕುರುಬ, ಮೊದಲಾದವರು ಮಾಡುವ ಕಸುಬುಗಳೆಲ್ಲವೂ ಕುಲಕಸುಬುಗಳಾಗಿವೆ. ವಿಜಯನಗರ ಕಾಲದ ಕುಲಕಸುಬುಗಳನ್ನು ಅಧ್ಯಯನ ಮಾಡಲು ನಮಗೆ ಸಾಕಷ್ಟು ಸಾಹಿತ್ಯ ಶಾಸನ, ವಿದೇಶಿ ಪ್ರವಾಸಿಗರ ವರದಿ, ಪ್ರಾಕ್ತನ ಆಕರಗಳು ನೆರವಾಗುತ್ತವೆ. ಈ ಆಕರಗಳನ್ನು ಇಟ್ಟುಕೊಂಡು ಅಂದಿನ ಕುಲಕಸುಬುಗಳನ್ನು ವಿಶ್ಲೇಷಿಸಲಾಗಿದೆ.

ಕರ್ನಾಟಕದ ಶಾಸನಗಳಲ್ಲಿ ಮತ್ತು ಸಾಹಿತ್ಯ ಕೃತಿಗಳಲ್ಲಿ ವಿಪುಲ ಉಲ್ಲೇಖಗಳನ್ನು ಗಮನಿಸಿದರೆ ಆ ಕಾಲದಲ್ಲಿ ಹದಿನೆಂಟು ಕುಲಗಳನ್ನು ಸಾಮಾಜಿಕವಾಗಿ ಒಪಿಕೊಂಡಿದ್ದಾರೆಂದು ಭಾವಿಸಬೇಕಾಗುತ್ತದೆ. ಈ ಹದಿನೆಂಟು ಕುಲ ಆರ್ಯರ ಚಾತುರ್ವರ್ಣ ಪದ್ಧತಿಗಿಂತಲೂ

ಪ್ರತ್ಯೇಕವಾದ ವ್ಯವಸ್ಥೆಯಾಗಿರಬೇಕು. ಬಹುಶಃ ನಾಗರಿಕ ಜೀವನ ಆರಂಭ ಆದಾಗ ಇದ್ದ ಮುಖ್ಯ ಕಸುಬುಗಳನ್ನು ಗಮನಿಸಿ ಸಮಾಜವನ್ನು ಹದಿನೆಂಟು ಕುಲಗಳಾಗಿ ವಿಭಜಿಸಿದ್ದಿರಬೇಕು.[೧] ಹದಿನೆಂಟು ಕಸುಬುಗಳೆಂದು ಸಾಂಪ್ರದಾಯಿಕವಾಗಿ ಹೇಳಿದ್ದರೂ ಕೆಲವು ಹೆಚ್ಚಿನ ಕಸುಬುಗಳು ಉಪಕಸುಬುಗಳಾಗಿ ಇದ್ದುದು ಅಸಂಭವವಲ್ಲ. ಶಾಸನಗಳಲ್ಲಿ ಹದಿನೆಂಟು ಕುಲಗಳನ್ನು ಹದಿನೆಂಟು ಸಮಯಗಳೆಂದು ಕರೆಲಾಗಿದೆ. ಶಾಪಾಶಯದ ಭಾಗದಲ್ಲಿ ಒಂದು ಶಾಸನ ಹದಿನೆಂಟು ಸಮಯಕ್ಕೆ ಹೊರಗು ಎಂದಿದೆ.[೨]

ಕರ್ನಾಟಕದಲ್ಲಿ ಹಿಂದೆ ಅಷ್ಟಾದಶ ಜಾತಿ ಅಥವಾ ಹದಿನೆಂಟು ಜಾತಿ ಎಂಬುದು ಒಂದು ಅಂಗೀಕೃತ ಮಾತಾಗಿದ್ದಿತು. ಹದಿನೆಂಟು ಜಾತಿಗಳನ್ನು ಹೇಳುವುದರಲ್ಲಿ ಲಕ್ಷ್ಮೇಶ್ವರನ ಕ್ರಿ.ಶ. ೭೨೫ರ ಶಾಸನ ಬಹುಶಃ ಮೊಟ್ಟಮೊದಲನೆಯದು. ಅದರಲ್ಲಿ "ಓಂ ಸ್ವಸ್ತಿ ಶ್ರೀ ವಿಕ್ರಮಾದಿತ್ಯ ಯುವರಾಜರ್ ಪೊರಿಗೆರೆಯಾ ಮಹಾಜನಕ್ಕುಂ ನಗರಕ್ಕುಂ ಪ್ರಕೃತಿಗಳ್ಗುಂ ಕೊಟ್ಟ ಆಚಾರ ವ್ಯವಸ್ಥೆ.[೩] ನಮಗೆ ಈ ಶಾಸನದಲ್ಲಿ ಪ್ರಸ್ತುತವೆಂದರೆ ಪ್ರಕೃತಿ ಎಂಬ ಶಬ್ದ ಅಂದರೆ ಪ್ರಜೆ, ಜಾತಿ ಎಂಬರ್ಥದಲ್ಲಿ ಬಳಕೆಯಾಗಿರುವುದು ಕಂಡುಬರುತ್ತದೆ. ಹದಿನೆಂಟು ಜಾತಿಗಳಲ್ಲಿ ಬ್ರಾಹ್ಮಣ ಮೊದಲನೆಯದು ಹೊಲೆಯ ಅಥವಾ ಅಂತ್ಯಜ ಕೊನೆಯದು. ಸಾಹಿತ್ಯ ಕೃತಿಗಳಲ್ಲೂ ಈ ಹದಿನೆಂಟು ಕಸುಬುದಾರರ ಕುರಿತು ದಾಖಲೆಯನ್ನು ನೋಡಬಹುದಾಗಿದೆ. ವಿಭಯವನಿರಿದು ಕಾಯಕವನ್ನೊಡಗೊಡಿ ಮಾಡಬೇಕು. ಹದಿನೆಂಟು ಕಾಯಕದೊಳಗಾದ ನಾಲ್ಕು ಕಾಯಕ ಹೊರಗಿನದೆ. ಮೂರುಕಾಯಕ ಮುಂತಾದ ಕಾಯಕದೆಂದಿವೆ ತಿಳಿದುಬರುತ್ತದೆ.[೪] ಹದಿನೆಂಟು ಜಾತಿ ಜನರ ಕಸುಬುಗಳನ್ನು ಹದಿನೆಂಟು ಕಾಯಕವೆಂದಿದ್ದಾನೆ ಕನ್ನಡಿ ಕಾಯಕದ ಅಮ್ಮಿದೇವ.

೧. ನೇಕಾರಿಕೆ

ನೇಕಾರರ ಪ್ರಮುಖ ಕಸುಬು ನೇಯ್ಗೆ. ಇದು ಪ್ರಾಚೀನ ಕಾಲದಿಂದಲೂ ಇರುವಂತಹ ಒಂದು ಪ್ರಮುಖ ಕಸುಬು. ಇದನ್ನು ಮಾಡುವವರು ಸಾಮಾನ್ಯವಾಗಿ ದೇವಾಂಗ ಮತದವರು ಅಥವಾ ಜಾಡರು.[೫] ಕೈಕ್ಕೋಲರು[೬] ಎಂದು ಸಹ ಕರೆಯುವರು. ಅವರು ನೇಯ್ಗೆಯಲ್ಲಿ ಬಳಸುವ ದಾರ ಹಿಡಿಕೆ ಸಲಕರಣೆಯಿಂದಾಗಿ ಅವರಿಗೆ ಈ ಹೆಸರು ಬಂದಿದೆ. ವಿಜಯನಗರ ಕಾಲದಲ್ಲಿ ಜನರಿಗೆ ಅವಶ್ಯವಾಗಿ ಬಟ್ಟೆ ಸರಬರಾಜನ್ನು ಮಾಡುತ್ತಿದ್ದರಿಂದ ಅದೊಂದು ಪ್ರಭಾವಶಾಲಿಯಾದ ಕಸುಬಾಗಿತ್ತು. ಇವರನ್ನು 'ಸೇಂಗುತ್ತರ್' ಎಂದು ತಮಿಳಿನಲ್ಲಿ ಕರೆಯುತ್ತಿದ್ದರು.[೭] ಶ್ರೀಲಂಕಾದ ಉತ್ತರ ಭಾಗದಲ್ಲಿ ರಾಮಸೇತು ಪ್ರದೇಶದಲ್ಲಿ ಇವರು ವಾಸಿಸುತ್ತಿದ್ದರು ಎಂದು ಪ್ರವಾಸಿಗರ ದಾಖಲೆಗಳಿಂದ ದೃಢಪಟ್ಟಿದೆ.[೮] ಬಟ್ಟೆಯನ್ನು ನೇಯುವ ಕಾರ್ಖಾನೆಗಳ ಉಲ್ಲೇಖಗಳೂ ಅನೇಕ ಶಾಸನಗಳಲ್ಲಿ ಸಿಗುತ್ತವೆ.[೯] ಬಟ್ಟೆಗಳನ್ನು ತಯಾರಿಸಲು ಬೇಕಾದ ಕಚ್ಚಾವಸ್ತುಗಳನ್ನು ಉತ್ಪಾದಿಸುವ, ನೇಯುವ, ಮಾರಾಟ ಮಾಡುವ ಕೆಲಸ ಒಂದು ಬೃಹತ್ ಕಸುಬಾಗಿ ಬೆಳೆದಿತ್ತು. ಈ ಕಸುಬಿಗೆ ಅರಸರ ಮತ್ತು ಅಧಿಕಾರಿ ವರ್ಗಗಳ ಪ್ರೋತ್ಸಾಹವು ದೊರಕುತ್ತಿತ್ತು. ಅಂದು ಬಟ್ಟೆಗಳನ್ನು ಕೈ ಮಗ್ಗದಿಂದ ನೇಯುತ್ತಿದ್ದರು. ಅದರ ಚಿತ್ರಣ ಜೇಡರ ದಾಸಿಮಯ್ಯನ ವಚನದಲ್ಲಿದೆ.

ಉಂಕೆಯ ನಗುಚಿ ಸರಿಗೆಯ ಸಮಗೊಳಿಸಿ
ಸಮಗಾಲನಿಕ್ಕೆ ಅಣಿಯೇಳ ಮಟ್ಟಿದೆ
ಹಿಡಿದ ಲಾಳಿಯ ಮುಳ್ಳು ಕಂಡಿಕೆಯ ನುಂಗಿತ್ತು.
ಈ ಸೀರೆಯ ನೆಯ್ದುವ ನಾನೂ ನೀನೊ? ರಾಮನಾಥ?[೧೦]

ಈ ವಚನ ಕೈ ಮಗ್ಗದ ವಿವಿಧ ಭಾಗಗಳನ್ನು ಅದರ ಕಾರ್ಯವಿಧಾನವನ್ನು ಸ್ಥೂಲವಾಗಿ ಪರಿಚಯಿಸುತ್ತದೆ. ಮಗ್ಗಗಳನ್ನು ದಾನ ಮಾಡುವ, ಮಗ್ಗಳಲ್ಲಿ ಕೆಲಸ ಮಾಡುತ್ತಿದ್ದ ಜನರನ್ನು ಶಾಸನಗಳು ಉಲ್ಲೇಖಿಸಿವೆ. ಸಾಲಿಗ,[೧೧] ಜೇಡ,[೧೨] ದೊಸಿಗ,[೧೩] ಪಟ್ಟಗಾರ,[೧೪] ಪಟ್ಟಸಾಲಿಗರು,[೧೫] ದಿಂಕಸಾಲಿಗ,[೧೬] ಸಾಲಿಗರಯ್ವದಿಂಬರುಂ[೧೭] ಇತ್ಯಾದಿ ಹೆಸರುಗಳಿಂದ ಕರೆಯಾಲಾಗಿದೆ.

ಅಂದು ಮಗ್ಗಗಳಿಂದ ಬಟ್ಟೆ ನೇಯುತ್ತಿದ್ದರು ಆ ಮಗ್ಗಗಳಿಗೆ ತೆರಿಗೆಯನ್ನು ಹಾಕುತ್ತಿದ್ದ ಸಂಗತಿ ಶಾಸನಗಳಿಂದ ತಿಳಿಯುತ್ತದೆ. ಮಗ್ಗದ ಕರಣಂಗಳು ಮಗ್ಗದಲ್ಲಿ ಪಂನಾಯವನ್ನು ಕೇಣಿಯಾಗಿ ಪಡೆದು ದೇವರಿಗೆ ಬಿಟ್ಟಸಂಗತಿ ರೋಣ ಶಾಸನದಲ್ಲಿ ಉಕ್ತವಾಗಿದೆ.[೧೮] ದೇಡ ಮಗ್ಗದ ಬಣ್ಣಿಗೆ ಸುಂಕವನ್ನು ದೇವಕಾರ್ಯಕ್ಕೆ ಬಿಟ್ಟ ಸಂಗತಿ ಒಂದು ಶಾಸನದಲ್ಲಿ ಬಂದಿದೆ.[೧೯] ದೇವಾಲಯಗಳಿಗೆ ನಿವೇಶನ ಸಹಿತ ಮಗ್ಗ ಬಿಟ್ಟ ಉದಾಹರಣೆಗಳು ಇವೆ.[೨೦] ಮತ್ತೊಂದು ಶಾಸನದಲ್ಲಿ ತೋರೆಮಗ್ಗ, ಹೊಲೆಮಗ್ಗಗಳನ್ನು ಧಾರಾಪೂರ್ವಕವಾಗಿ ಮಾಡಿ ಬಸದಿಗೆ ದತ್ತಿ ಬಿಟ್ಟ ವಿಷಯ ತಿಳಿದು ಬರುತ್ತದೆ.[೨೧] ನೇಕಾರರು ಹತ್ತಿಯ ವಸ್ತ್ರಗಳನ್ನಲ್ಲದೆ. ರೇಷ್ಮೆಯ ವಸ್ತ್ರಗಳನ್ನು ನೇಯುತ್ತಿದ್ದರು.[೨೨] ಈ ರೀತಿಯಾಗಿ ವಿಜಯನಗರ ಕಾಲದಗಟ್ಟದ ಪೂರ್ವದಲ್ಲಿ ನೇಕಾರರು ಇದ್ದರು ಎಂಬುದಕ್ಕೆ ಸಾಕಷ್ಟು ದಾಖಲೆಗಳು ದೊರೆತಿವೆ. ಇದೇ ರೀತಿಯ ಕಸುಬು ನಂತರವೂ ಮುಂದುವರೆದಿತ್ತು. ವಿಜಯನಗರ ಕಾಲದಲ್ಲಿ ಇವರು ದಾನಧರ್ಮಗಳನ್ನು ಮಾಡುವಷ್ಟು ಮತ್ತು ದೇವಾಲಯಗಳನ್ನು ಕಟ್ಟಿಸುವಷ್ಟು ಶ್ರೀಮಂತರಾಗಿದ್ದರು.

ಕ್ರಿ.ಶ. ೧೩೭೦ರ ಶಾಸನವೊಂದರಲ್ಲಿ ದಾಖಲಿಸಿರುವಂತೆ ಅವರಿಗೆ ವಿಧಿಸಿದ ತೆರಿಗೆ ರಿಯಾಯಿತಿಗಳು ಆಗಾಗ್ಗೆ ದೊರೆಯುತ್ತಿದ್ದುದುಂಟು.[೨೪] ಕೆಲವೊಮ್ಮೆ ಅವರಿಗೆ ಕಟ್ಟುನಿಟ್ಟಾದ ತೆರಿಗೆಗಳನ್ನು ವಿಧಿಸಲಾಗುತ್ತಿತ್ತು.[೨೫] ಕ್ರಿ.ಶ. ೧೪೪೫ರಲ್ಲಿ ಮಹಾಪ್ರಧಾನ ಅಣ್ಣಪ್ಪಯ್ಯಂಗಳ ಆದೇಶದ ಮೇರೆಗೆ ತಿರುಕ್ಕೊವಲಂನ ದೇವಾಲಯದ ಸ್ಥಳದ ಕೈಕ್ಕೋಲರಿಂದ ಸಲ್ಲಬೇಕಾದ ತೆರಿಗೆಗಳನ್ನು ಮಾನ್ಯ ಮಾಡಲಾಯಿತು.[೨೬] ಒಂದು ಶಾಸನದ ಪ್ರಕಾರ ಪುಲಿವನ ನಾಡಿನ ತಿರುಪ್ಪಲಿವನಂ ಗ್ರಾಮದ ಕೈಕ್ಕೋಲರು(ನೇಕಾರರು) ಮತ್ತು ಇತರೆ ಕಸುಬುದಾರರಿಗೆ ಸಲ್ಲಬೇಕಾದ ವೃತ್ತಿ ತೆರಿಗೆಯನ್ನು ಮಾನ್ಯ ಮಾಡಲಾಯಿತು. ಕೈಕ್ಕೋಲರಿಂದ ಸಲ್ಲಬೇಕಾದ ತೆರಿಗೆಗಳನ್ನು ಮಹಾಪ್ರಧಾನಿ ಮಲ್ಲರಸ ವಿಡೈಯರ ಕಾರ್ಯಕರ್ತನಾದ ಸಲ್ಲಕ್ಕೆಯ ನಾಯಕ್ಕರೆ ಆದೇಶದ ಮೇರೆಗೆ ನಿಗಧಿಗೊಳಿಸಲಾಯಿತು.[೨೭] ಕ್ರಿ.ಶ. ೧೪೨೮ರಲ್ಲಿ ಯಡಗರೈ ತಾಯನೂರು ಗ್ರಾಮದ ಕಾಣಿಯಾಚೆಯ ಹಕ್ಕನ್ನು ಕೈಕ್ಕೋಲರಿಗೆ ಅವರು ಅಲ್ಲಿಯೂರಿನ ಊರವರಿಗೆ ಮತ್ತು ವಯಿರಭೋಜನ ಚತುರ್ವೇದಿ ಮಂಗಲವಾಡೆ ನೆರುಕ್ಕರಂ ಗ್ರಾಮದ ಸಭಾಕ್ಕೆ ಮೂವತ್ತು ಪಣಂ ಮೊತ್ತವನ್ನು ನೀಡಿದುದಕ್ಕೆ ಪ್ರತಿಯಾಗಿ ನೀಡಲಾಯಿತು.[೨೮] ಕ್ರಿ.ಶ. ೧೪೩೯ರ ಶಾಸನವೊಂದು ತಿರುಮಾಡೈವಿಳಿಗೆರ್ರೆ ಗ್ರಾಮದಲ್ಲಿ ನೆಲಸಿದ ಕೈಕ್ಕೋಲರ್ ಮತ್ತಿತರ ಕಸುಬುದಾರರ ಮೇಲೆ

ವಿಧಿಸಿದ ತೆರಿಗೆಗಳನ್ನು ಉಲ್ಲೇಖಿಸುತ್ತದೆ.[೨೯] ನೇಕಾರರು ಅಂದು ಗ್ರಾಮಗಳಲ್ಲಿ ಸಂಘಗಳನ್ನು ರಚಿಸಿಕೊಳ್ಳುತ್ತಿದ್ದರು. ಅದಕ್ಕೆ ಅನೇಕ ದಾಖಲೆಗಳಿವೆ. ಸಾಲೆಸಾಸಿರ್ವರ್[೩೦] ಯೆಲಿಯಾರು ಅಥವಾ ಸಮಯ, ಸಾಸಿರ್ವರು, ಸಮಯ ಸಾಲಿಗರು. ಜೆಡಗೊತ್ತಳಿ[೩೧] ಪಟ್ಟಗಾರಸೇಣಿ[೩೨] ಎಂಬುವುಗಳು ಈ ಸಂಘದ ವಿವಿಧ ಹೆಸರುಗಳಾಗಿವೆ. ಈ ರೀತಿಯಾಗಿ ಸಂಘಗಳನ್ನು ಕಟ್ಟಿಕೊಂಡು ವ್ಯವಹರಿಸುತ್ತಿದ್ದರು.

ವಸ್ತ್ರ ತಯಾರಿಕೆಯಲ್ಲಿ ವಿಜಯನಗರ ಕಾಲದಲ್ಲಿ ತಮ್ಮದೇ ಆದ ವೈಶಿಷ್ಟ್ಯವನ್ನು ರೂಢಿಸಿಕೊಂಡಿದ್ದರು. ವಿದೇಶಿ ಪ್ರವಾಸಿಗರ ವರದಿಗಳು, ಸಾಹಿತ್ಯ ಕೃತಿಗಳು ಆ ಕಾಲದ ನೇಕಾರಿಕೆ ಬಟ್ಟೆಯ ಕುರಿತು ಹೇಳಿವೆ. ಅದರಲ್ಲಿ ಸಾಹಿತ್ಯ ಕೃತಿಗಳ ಕೊಡುಗೆ ದೊಡ್ಡದಿದೆ. ಅಂದಿನ ಸಾಮಾನ್ಯ ಜನರು ಯಾವ ರೀತಿಯ ಬಟ್ಟೆಗಳನ್ನು ಧರಿಸುತ್ತಿದ್ದರು ಎಂದರೆ ಗಂಡಸರಾದರೆ ಅಂಗಿ[೩೩] ಪಂಚೆ ಅಥವಾ ದಟ್ಟ (ಧಟ್ಟ) ಅಥವಾ ಚಲ್ಲಣ[೩೪] ಇವುಗಳನ್ನು ಉಪಯೋಗಿಸುವರು. ಸೊಂಟದ ಮೇಲೆ ತೋಡುವ ಅಂಗಿಯನ್ನು ಸುಕ್ಕುಗುಪ್ಪಸ[೩೫] ಎಂದೂ, ಕೆಳಗೆ ತೊಡುವ ಚಲ್ಲಣವನ್ನು ಕೌಲುಕುಪ್ಪಸ[೩೬] ಎಂದು ನಂಜುಡ ಕವಿ ಹೇಳುತ್ತಾನೆ. ಪುರಂದರ ದಾಸರ ಕೀರ್ತನೆಯು ಗಂಡಸರ ವಸ್ತ್ರದ ಕುರಿತು ಮತ್ತೊಂದು ಚಿತ್ರಣವನ್ನು ನೀಡುತ್ತದೆ. ಹರಿಕರುಣವೆ ಅಂಗಿ, ಗುರುಕರುಣವೇ ಮುಂಡಾಸು ಹರಿದಾಸರ ದಯೆವೆಂಬೂವಲ್ಲಿ.[೩೭] ಅಂಗಿಯನ್ನು ತೊಟ್ಟು ಮೇಲೆ ವಲ್ಲಿಯನ್ನು ಬಿಟ್ಟು ಅಥವಾ ಹೊದ್ದು ತಲೆಗೆ ಮುಂಡಾಸ(ರುಮಾಲು) ಧರಿಸಿರುವ ಒಬ್ಬನ ಚಿತ್ರವಿದು. ರುಮಾಲನ್ನು (ಮುಂಡಾಸು) ತಾತಾ ತಲೆತೊಗಿದರೆ ಪಗಡಿ ಬಿತ್ತು[೩೮] ಎಂದು ಕರೆಯುವರು. ರುಮಾಲನ್ನು ಸುತ್ತುವಾಗ ಹಿಂದುಗಡೆ ಚುಂಗುಬಿಟ್ಟು ಸುತ್ತುವುದಿದೆ.[೩೯] ಇಂದಿಗೂ ಉತ್ತರ ಕರ್ನಾಟಕದ ಕಡೆ ಚೆಂಗು ಬಿಟ್ಟು ರುಮಾಲು ಸುತ್ತುವುದಿದೆ. ಪುರುಷರ ವಲ್ಲಿಯ ಹೆಸರು ಬಹಳ ಹಿಂದಿನಿಂದಲೂ ಕೇಳಿಬರುತ್ತದೆ. ವಲ್ಲಿಯನ್ನು ಉತ್ತರೀಯ, ಶಲ್ಯ ಎಂಬ ಹೆಸರುಗಳಿಂದ ಕರೆಯುವುದು ಇಂದಿಗೂ ವಾಡಿಕೆ. ಹೇಗಲ ಮೇಲೆ ಹಾಕಿಕೊಳ್ಳುವ ಅಥವಾ ಹೊದೆಯುವ ಒಂದು ತೆಳುವಾದ ವಸ್ತ್ರ, ಒಟ್ಟಿನಲ್ಲಿ ವಲ್ಲಿಯು ಗಂಡಸರ ವಸ್ತ್ರಾಲಂಕಾರದ ಒಂದು ಮುಖ್ಯ ಭಾಗವಾಗಿ ಬಹಳ ದಿನಗಳಿಂದಲೂ ಬಳಕೆಯಲ್ಲಿದೆ.

ವಲ್ಲಿಯನ್ನು ನಾನಾ ರೀತಿಯಲ್ಲಿ ಹೊದ್ದಿರುವ ಒಂದೆರಡು ಸಂಗತಿಗಳನ್ನು ನೋಡಬಹುದಾಗಿದೆ.

ತುರುಬು ಚಿಮ್ಮುರಿ ಚಿಂದಿಕಾಸೆಯ ಸೆರಗು ನಸುಹೊದೆದೊಲ್ಲಿ[೪೦] ಸುತ್ತಿದ ಚಿಮ್ಮುರಿಕೊರಲ.[೪೧] ಇಲ್ಲಿ ವಲ್ಲಿಯಿಂದ ಕೊರಳನ್ನು ಸುತ್ತಿಕೊಳ್ಳುವುದಾಗಿದೆ. ಕನಕದಾಸರ ಕಾಲದ ಜನಜೀವನವನ್ನು ಅವರ ಸಮಗ್ರ ಕೃತಿಗಳಿಂದ ಸಮಿಕ್ಷಿಸಿ ನೇಕಾರ ಕಸುಬುದಾರರು ಯಾವ ರೀತಿಯ ಬಟ್ಟೆಗಳನ್ನು ತಯಾರಿಸುತ್ತಿದ್ದರು ಎಂದು ನೋಡಬಹುದು. ಹಾರುವರು ಕಚ್ಚೆಹಾಕಿ[೪೨] ಧೋತ್ರ ಉಡುವರು, ಮೈಮೇಲೆ ಬಹಿರ್ವಾಸ[೪೩] ಬಟ್ಟೆಯನ್ನು ವಲ್ಲಿ, ಉತ್ತರೀಯ, ಶಲ್ಯ, ಹಚ್ಚಡ, ಎಂದು ಅನೇಕ ಹೆಸರುಗಳಿಂದ ಕರೆಯುವರು. ಇನ್ನೂ ಕೆಲವು ಸಂದರ್ಭಗಳಲ್ಲಿ ಅರಮನೆ ಮುಂತಾದ ಸ್ಥಳಗಳಲ್ಲಿ ಬೇಟಿ ವ್ಯಕ್ತಿಗಳ ಮುಖ್ಯ ಹೋಗುವಾಗ ಬೆಲೆಬಾಳುವ ವೈಭವದ ಶಾಲುಗಳನ್ನು ಹೊದ್ದುಕೊಂಡು ಹೋಗುವುದುಂಟು. ಪಿಯಟ್ರೊದಲ್ಲಾವಾಲೆ ಎಂಬ ಪ್ರವಾಸಿ ಬಿದನೂರಿನ

ರಾಯಭಾರಿಯ ಜೊತೆ ಬಂದ ಗೌರವಾನ್ವಿತರ ವಸ್ತ್ರವನ್ನು ಹೀಗೆ ಬಣ್ಣಿಸುತ್ತಾನೆ. And upon these they had such coloured cloths as in Persia they call social (showl) and use fore gridles, but the Indians wear them across the shoulders covered with a piece of very fine white silk, so that the colour underneath appears; or else white silk alone.[44]

ಹೆಣ್ಣುಮಕ್ಕಳು ರೇಶಿಮೆಯ ಪೀತಾಂಬರವನ್ನಾಗಿ,[೪೫] ನೂಲಿನ ಸೀರೆಗಳನ್ನಾಗಲಿ ನಿರುಕೆ ಹಾಕಿ ಉಡುವರು. ತಿದಿ ನಿರಿವಿಡಿದುಡಿಸಿದ ಸುಕ್ಕ ನಂಬರದೊಳೆಸೆದರು.[೪೬] ವಿದೇಶಿ ಪ್ರವಾಸಿಯೊಬ್ಬರು ಹೆಂಗಸರು ಉಡುವ ಸೀರೆಯ ವಿಚಾರವನ್ನು ಹೇಳಿದ್ದಾನೆ. ಸ್ತ್ರೀಯರು ಆರು ಗಜ ಉದ್ದದ ನವುರಾದ ರೇಷ್ಮೆ ಅಥವಾ ಹತ್ತಿ ಬಟ್ಟೆಯ ಬಣ್ಣ ಬಣ್ಣದ ಸೀರೆಗಳನ್ನು ಉಡುತ್ತಾರೆ. ಸೀರೆಯ ಒಂದು ಭಾಗವನ್ನು ಸೊಂಟದಿಂದ ಕೆಳಕ್ಕೆ ಉಟ್ಟು, ಮತ್ತೊಂದು ಭಾಗವನ್ನು ಎದೆಯ ಮೇಲೂ, ಭಜದಮೇಲೂ ಬರುವಂತೆ ಹಾಕಿಕೊಳ್ಳುತ್ತಾರೆ.[೪೭] ಇಬ್–ನ–ಬತೊತಾ ಎಂಬ ಮತ್ತೊಬ್ಬ ಪ್ರವಾಸಿ ಹೊನ್ನಾವರದ ಹೆಂಗಸರ ವಿಚಾರವಾಗಿ ಹೇಳುತ್ತಾ. ಸೀರೆಯ ಇನ್ನೊಂದು ಭಾಗವನ್ನು ಭುಜದ ಮೇಲು, ತಲೆಯ ಮೇಲೂ ಹೊದೆಯುವರೆಂದು ಹೇಳುತ್ತಾರೆ. ಹೆಂಗಸರು ತಲೆಯ ಮೇಲೆ ಸೆರಗು ಹೊದ್ದುಕೊಳ್ಳುವ ಒಂದು ಪದ್ಧತಿ ಹಿಂದೆಯೂ ಇದ್ದಿತು, ಈಗಲೂ ಇದೇ ಪದ್ಧತಿಯಿದೆ. ಈ ರೀತಿಯಾಗಿ ವಿಜಯನಗರ ಕಾಲದ ನೇಕಾರಿಕೆ ಕಸುಬಿನಿಂದ ಹೇಗೆ ಬಟ್ಟೆಗಳನ್ನ ನೇಯುತ್ತಿದ್ದರು ಎಂಬುದು ತಿಳಿಯುತ್ತದೆ. ವಿಜಯನಗರ ಸಾಮ್ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಸಂಬಂಧಪಟ್ಟ ಜನಜೀವನ ಕುರಿತು ವಿದೇಶಿಯರು ತಾವು ಕಂಡ ಜನರ ವಿವಿಧ ರೀತಿಯ ಉಡುಗೆತೊಡಿಗೆಗಳ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಅದರಲ್ಲಿ ಲಂಗೋಟಿಯು ಒಂದು. ವೇರ್ಥಮ ಎಂಬ ಪ್ರವಾಸಿ ಹೊನ್ನಾವರ ಮತ್ತು ಮಂಗಳೂರು ಜನರ ಉಡುಪಿನ ವಿಚಾರವಾಗಿ ಹೇಳುತ್ತಾ ಈ ವಿಚಾರವನ್ನು ಹೇಳುತ್ತಾನೆ As to his dress he goes quite Naked with the exception at a cloth about his middle.[48]

ಕ್ರಿ.ಶ. ೧೪೪೩ರಲ್ಲಿ ವಿಜಯನಗರಕ್ಕೆ ಭೇಟಿ ಇತ್ತ ಅಬ್ದುಲ್ ರಜಾಕನು ಕಲ್ಲಿಕೋಟೆಯ ಜನರ ವಿಚಾರವಾಗಿ ಹೇಳುತ್ತಾ ವಸ್ತ್ರದ ವಿಚಾರವನ್ನು ಪ್ರಸ್ತಾಪಿಸುವನು. ಈ ದೇಶದ ಬೆತ್ತಲೆ ಕರಿಯರನ್ನು ಕಂಡ ಇವರ ಲಂಗ್‌ಕೋಟಿ(ಲಂಗೋಟಿ) ಎಂಬ ಎರಡು ಚೂರು ಬಟ್ಟೆಯನ್ನು ಬಿಟ್ಟು ಮತ್ತೆ ಯಾವ ಉಡುಪನ್ನು ಧರಿಸುವುದಿಲ್ಲ. ಇದು ಹೊಕ್ಕುಳಿಂದ ಹಿಡಿದು ಮಂಡಿಯವರೆವಿಗೂ ನೇತಾಡುತ್ತಿರುತ್ತದೆ. ಹೀಗೆ ವಿದೇಶೀಯರು ಲಂಗೋಟಿಧಾರಿಗಳ ಬಗೆಗೆ ಅನೇಕ ವಿವರಣೆಗಳನ್ನು ಕೊಟ್ಟಿರುವರು.

ಮಗ್ಗಗಳ ಮೂಲಕ ಬಟ್ಟೆ ತಯಾರಿಕೆ, ಬಟ್ಟೆಗಳನ್ನು ಹೊಲಿದು ಸಿದ್ದಪಡಿಸುವುದು ಅವುಗಳ ಮಾರಾಟ, ನಾನಾವಿಧದ ಚಿತ್ತಾರದ ಬಟ್ಟೆ ಕೆಲಸ ವಿವರಗಳು ಸಾಹಿತ್ಯ ಕೃತಿಗಳಲ್ಲಿ ಕಂಡುಬರುತ್ತದೆ. ನೇಕಾರರು ಬಟ್ಟೆಯನ್ನು ನೇಯ್ದು ಮಾರಿ ಜೀವನ ಹೊರೆಯುತ್ತಿದ್ದರು.[೪೯] ಪಟ್ಟಾವಳಿಯ ಬಹುಚಿತ್ರದಿಂದ ನೇಯ್ದು ಬಟ್ಟೆಗಳ ಪಂಡೆ,[೫೦] ಬಟ್ಟೆಗಳಿಗೆ ಬಣ್ಣ ಹಾಕುವ,

ಅಚ್ಚು ಹಾಕುವವರೂ ಇದ್ದು ಅಂತಹ ಕಸುಬುಗಳ ಕೇರಿಗಳೇ ಇದ್ದವು. ಅಚ್ಚುಗಾರರ ಬಣ್ಣಗಾರರ ಕೇರಿಗಳ್[೫೧] ಜವಳಿ ಅಥವಾ ನೇಯ್ಗೆ ಕಸುಬಿನಿಂದ ಜೀವನ ಸಾಗಿಸುತ್ತಿದ್ದಂತೆಯೇ 'ಕೌದಿಗಳಂ' (ಹೊದಿಯುವ ಹಚ್ಚಡ) ಹೊಲಿಯುವ ಕಸುಬನ್ನು ಕೈಗೊಂಡು ಅದರ ವಿಕ್ರಯದಿಂದ ಜೀವನ ನಡೆಸುವವರೂ ಇದ್ದರು. ಕನಕದಾಸರು ದ್ವಾರಕಾನಗರಿಯ ವರ್ಣನೆಯಲ್ಲಿ ಚಿತ್ರಗಳನ್ನೆಲ್ಲಾ, ಬಟ್ಟೆಗಳಿಗೆ ಚಿತ್ರದ ಅಚ್ಚುಗಳನ್ನು ಒತ್ತುವ, ಚಿಪ್ಪಿಗರ ಕೇರಿಗಳಿದ್ದವೆಂದು ಹೇಳುವರು.[೫೨] ಹರಿದ ಅರಿವೆಗಳನ್ನು ಒಟ್ಟುಗೂಡಿಸಿ ಕೈಯಿಂದ ಹೊಲೆದು ಕೌದಿ ತಯಾರಿಸುವ ಕಸುಬಿದು. ಈ ಕಸುಬು ಮಾಡುವವರಿಗೆ ದೋಶಿಗರು, ದೋಸಗ್ಯಾರು[೫೩] ಎನ್ನುವರು. ಸೂಜಿ, ಕೌದಿದಾರ, ದೊಡ್ಡ ಕತ್ತರಿ ಇವಿಷ್ಟು ದೋಶಿಗರ ಸಲಕರಣೆಗಳಾಗಿವೆ. ಕವಲು ಸೂಜಿಯ ನಾಂತೆ ಸಿಂಪಿಗನನುವನ್[೫೪] ಎಂಬ ಪ್ರಯೊಗ ಚಿಪ್ಪಿಗರು ಅವರ ಕಸುಬಿನ ಮುಖ್ಯ ಆಧಾರವಾದ ಸೂಜಿ ಇವುಗಳ ಸಂಬಂಧವನ್ನು ಸೂಚಿಸುತ್ತದೆ. ಸೂಜಿಗೆ ಸೂತ್ರವೇರಿಸುವಂತೆ[೫೫] ಎನ್ನುವ ಪ್ರಯೋಗ ಸೂಜಿದಾರಗಳ ಬಳಕೆಯನ್ನು ಸೂಚಿಸುತ್ತದೆ. ಹಾಗೆಯೇ ನೂಲಂಡೆಯಂದದಿಸುತ್ತಿ[೫೬] ದಾರವನ್ನು ಸುತ್ತಿದ ನೂಲುಂಡೆಯು ಬಳಕೆಯಲ್ಲಿರಬೇಕು.

ತೊಡುವ ವೇಷಭೂಷಣ ಆಟಕ್ಕೆ ತೊಡಕಾಗದೆ ಅನುಕೂಲಕರವಾಗಿರಬೇಕು. ಪ್ರತಿ ಆಟಕ್ಕೂ ಅದರ ಸ್ವರೂಪಕ್ಕನುಗುಣವಾಗಿ ಬಟ್ಟೆಯ ಪ್ರಯಾಣ, ಅದರ ಬಿಗುವು, ಸಡಿಲತೆಗಳಲ್ಲಿ ವ್ಯತ್ಯಾಸವಿರುತ್ತದೆ. ಉದಾಹರಣೆಗೆ ಕುಸ್ತಿ ಆಡುವುದಕ್ಕೆ ಕನಿಷ್ಠ ಬಟ್ಟೆಬೇಕು. ಕುಮಾರರಾಮನು ಬಿಗಿದ ಗಂಡುಡುಗೆಯನ್ನು ಬಿಗಿದು ಕಟ್ಟಿದ ಕಚ್ಚೆ ಉಟ್ಟು, ಬರುವಿನ ಕಡೆಯವನ್ನು ಕಟ್ಟಿಕೊಂಡು ರನ್ನದ ವಂಕಿಯನ್ನು ಧರಿಸಿ, ಬಾವನ್ನವನ್ನ ಮೈಗೆಪೂಸಿ[೫೭]ಬಿಗಿದು ಕಟ್ಟಿದ ಗಂಡುಡುಗೆ ಚೆಂಡಾಟದ ಚಲನವಲನಕ್ಕೆ ಅನುಕೂಲಕರವಾಗಿರುತ್ತಿದ್ದುದು ಗಮನಾರ್ಹ. ಹೀಗೆ ವಿಜಯನಗರ ಕಾಲದಲ್ಲಿ ನೇಕಾರಿಕೆ ಕಸುಬಿನಿಂದ ಉಪಕಸುಬುಗಳಾದ ಬಟ್ಟೆಗೆ ಬಣ್ಣ ಹಾಕುವಿಕೆ, ಹೊಲೆಯುವ ಕಸುಬುಗಳು ಇದ್ದವು. ಹೀಗೆ ಅಂದು ವಿವಿಧ ವರ್ಣದ ಬಟ್ಟೆ ತಯಾರಿಕೆ ನೇಕಾರರ ಪ್ರಮುಖ ಕಸುಬಾಗಿದ್ದಿತು. ಅದರಿಂದ ಉಪಕಸುಬುದಾರು ಹುಟ್ಟಿಕೊಂಡು ಜೀವನ ಸಾಗಿಸುತ್ತಿದ್ದುದನ್ನು ಗಮನಿಸಬಹುದು.

೨. ಕುಂಬಾರಿಕೆ

ಕುಲಕಸುಬುಗಳಲ್ಲಿ ಕುಂಬಾರಿಕೆಗೆ ತುಂಬಾ ಮಹತ್ವದ ಸ್ಥಾನವಿದೆ. ಕೌಟುಂಬಿಕ ಜೀವನದಲ್ಲಿ ಕುಂಬಾರಿಕೆಯ ಪಾತ್ರ ಅತ್ಯಂತ ಹಿರಿದಾದುದು. ಎಲ್ಲಾ ಕಸುಬುಗಳಂತೆ ಮಾನವನ ಬದುಕಿನ ಅವಿಭಾಜ್ಯ ಅಂಗವಾಗಿ ಅರಳಿದ ಈ ಕುಂಬಾರಿಕೆಯನ್ನು ಪೂರೈಸುವವ ಕುಂಬಾರ. ಈ ಕಸುಬು ಆದಿಮಾನವನ ಕಾಲದಿಂದ ಇಂದಿನವರೆಗೆ ಎಲ್ಲಾ ಸಂಸ್ಕೃತಿ ಮತ್ತು ಜನಾಂಗಗಳಲ್ಲಿ ಅತ್ಯಂತ ಪ್ರಚಲಿತವಾಗಿರುವ ಗ್ರಾಮೀಣ ಮೂಲದ ಕುಂಬಾರಿಕೆಯನ್ನು ಜನಪದ ಕಸುಬು ಎಂದು ಕರೆಯುವರು. ಲಲಿತೇತರ ಕಲೆಗಳಲ್ಲಿ ಕುಂಭಕಲೆಯನ್ನು ಗುರುತಿಸಲಾಗಿದೆ. ಬಹುಪ್ರಾಚೀನದಿಂದಲೂ ಮಾನವನ ಸಾಮಾಜಿಕ, ಧಾರ್ಮಿಕ ಹಾಗೂ ಲೌಕಿಕ ಬದುಕಿಗೆ ನೆರವಾಗುತ್ತವೆ ಕುಂಭಕಲೆ ಮೃತ್ ಶಿಲ್ಪವಾಗಿಯೂ ಇತಿಹಾಸದುದ್ದಕ್ಕು ವಿಜೃಂಭಿಸಿದೆ. Shilpa

denotes both a sculpture in stone and work in clay[57] ಎನ್ನುವ ಮಾತು ಕುಂಭಕಲೆಗಿರುವ ಮಹತ್ವವನ್ನು ಸೂಚಿಸುತ್ತದೆ.

ಕುಂಬಾರ ಎನ್ನುವ ಶಬ್ದಕ್ಕೆ ಕುಲಾಲ, ಚಕ್ರಿ, ದಂಡಧರ, ಕುಂಭಕರ ಮುಂತಾದ ಅರ್ಥಗಳಿವೆ. ಕುಂಭ ಎಂದರೆ ಸಂಸ್ಕೃತದಲ್ಲಿ ನೀರಿನ ಗಡಿಗೆ ಎಂದರ್ಥ. ಅಂದರೆ ಕುಂಬಾರರು ಜಲಸಂಸ್ಕೃತಿಯ ಜನಾಂಗ ಎಂದು ಅರ್ಥೈಸಲಾಗಿದೆ. ಕುಂಬಾರರು ಮಾತೃ ಪ್ರಧಾನ ಸಂಸ್ಕೃತಿಯವರು, ಇನ್ನೊಂದು ರೀತಿಯಲ್ಲಿ ಕುಂಬಾರರು ಅಗ್ನಿ ಸಂಸ್ಕೃತಿಗೆ ಹತ್ತಿರದವರೆಂದು ಹೇಳಲಾಗಿದೆ.[೫೮] 'ಮಾಡಿದ ಬದುಕಿಗೆ ಬೆಂಕಿ ಕೊಡುವ ಜನ' ಎಂದು ಕುಂಬಾರರ ಬಗೆಗೆ ಗಾದೆ ಇದೆ. ಹಸಿ ಮಣ್ಣಿನ ಮಡಕೆಗಳನ್ನು ಅವಿಗೆಯಲ್ಲಿಟ್ಟು ಸುಡುವುದರಿಂದ ಸಹಜವಾಗಿಯೇ ಆ ಮಾತು ಬಂದಿದೆ. ಹೀಗೆ ಕುಂಬಾರರು ಜಲ ಮತ್ತು ಅಗ್ನಿ ಸಂಸ್ಕೃತಿಯ ಸಮನ್ವಯ ಜನಾಂಗದವರೆಂದು ಹೇಳುವುದು ಸೂಕ್ತ.

ಬೇಟೆಗಾರಿಕೆ, ಗೆಡ್ಡೆ-ಗೆಣಸು ಸಂಗ್ರಹದಿಂದ ನಿರಂತರ ಅಲೆಮಾರಿತನ ಕಡಿಮೆಯಾಗಿ ಗೋಧಿ ಮತ್ತು ಬಾರ್ಲಿಗಳನ್ನು ಆದಿಮಾನವ ಬೆಳೆದ ಕಾಲ ಕ್ರಿ.ಪೂ. ೧೦,೦೦೦ ಮತ್ತು ೮೦೦೦ ಎಂದು ದಿ ಡ್ವಾನ್ ಆಫ್ ಮ್ಯಾಸ್ ಕೃತಿಯ ಜೋಸೆಪ್ ಪೋಲ್ಡ್ ಅವರ ಅಭಿಪ್ರಾಯ. ಈ ಕಾಲದ ಆದಿಮ ಗುಂಪುಗಳನ್ನೇ ಪ್ರಪಂಚದ ಪ್ರಥಮ ಕೃಷಿಕರೆಂದು ಗುರುತಿಸಲಾಗಿದೆ.[೫೯] ಅಂತಹ ಸಂದರ್ಭದಲ್ಲಿ ತಮಗೆ ಅನುಕೂಲಕರವಾದ ಭೂ ಪ್ರದೇಶಗಳಲ್ಲಿ ನೆಲೆ ನಿಂತಾಗ ಬದುಕಿನಲ್ಲಿ ಪಾತ್ರೆ, ಪಗಡೆ, ಮಡಿಕೆ, ಕುಡಿಕೆಗಳು ಬೇಕಾದವು. ಪೂರ್ವಶಿಲಾಯುಗ, ಶಿಲಾಯುಗ, ನವಶಿಲಾಯುಗ, ನಿಕ್ಷೇಪ, ಪಳಿಯುಳಿಕೆಗಳನ್ನು ಪರಿವೀಕ್ಷಿಸಿದ ಪ್ರಾಚ್ಯ ಸಂಶೋಧಕರು ಮಣ್ಣಿನ ಸುಟ್ಟ ಮಡಕೆ ತಯಾರಿಸುವ ವಿಧಾನ ಕ್ರಿ.ಪೂ.೭೦೦೦ ಕಾಲಕ್ಕೆ ರೂಪುಗೊಂಡಿತ್ತೆಂದು ಹೇಳುತ್ತಾರೆ. ದಕ್ಷಿಣದ ಇತಾನದ ಜಾಗ್ರೋಸ್ ಬೆಟ್ಟಗಳ ಪ್ರದೇಶದಲ್ಲಿ ಸುಟ್ಟ ಮಡಕೆಗಳ ಖಚಿತ ಕುರುಹನ್ನು ಕಂಡುಹಿಡಿಯಲಾಗಿದೆ.[೬೦] ಕುಂಬಾರಿಕೆ ವಿಶೇಷತಃ ಕುಶಲಕಲಾ ಕಸುಬು. ಇರಾನ್ ಮುಂತಾದ ಪ್ರದೇಶಗಳಿಂದ ಭಾರತದ ವಿವಿಧ ಪ್ರದೇಶಗಳಿಗೆ ಹರಡಿತೆಂದು ಹೆಚ್.ಡಿ. ಸಾಂಕಾಲಿಯ ಊಹಿಸುತ್ತಾರೆ.[೬೧] ಇಂಡಸ್ ನಾಗರಿಕತೆಯ ಅಧ್ಯಯನ ನಡೆಸಿದ ವಿದ್ವಾಸರು ಕುಂಬಾರಿಕೆ ಭಾರತದ ಪ್ರಾಚೀನ ಕಲೆಯಾಗಿತ್ತು. ಕುಂಬಾರಿಕೆಯು ಒಂದು ವರ್ಣಮಯ ಕುಶಲ ಕಲೆಯಾಗಿ ರೂಪುಗೊಂಡ ಸಂದರ್ಭವನ್ನು ಕುರಿತು ಹೇಳುವಾಗ ಮಾತ್ರ ಅಂತಹ ಕಲಾತ್ಮಕ ನೈಪುಣ್ಯ ಇರಾನ್, ಅಫಘನಿಸ್ಥಾನ, ಬಲೂಚಿಸ್ಥಾನ ಮೊದಲಾದ ದೇಶಗಳ ನಯಗಾರಿಕೆಯಿಂದ ಪ್ರಭಾವವಾಯಿತೆಂದು ಹೇಳುತ್ತಾರೆ. ಇದರಿಂದ ಕುಂಬಾರರು ಹೇಗೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ತಮ್ಮ ಕುಶಲತೆಯನ್ನು ಪ್ರಸಾರ ಮಾಡಿದರು ಎಂಬುದನ್ನು ತಿಳಿಯಬಹುದಾಗಿದೆ.

ಕುಂಬಾರಿಕೆಯ ಉಗಮದ ಕುರಿತು ಐತಿಹ್ಯವೊಂದನ್ನು ಈ ರೀತಿ ನೋಡಬಹುದಾಗಿದೆ. ಸಮುದ್ರ ಮಂಥನ ನಡೆದಾಗ ಅದರಿಂದ ಉದಿಸಿ ಬಂದ ಅಮೃತವನ್ನು ಸಂಗ್ರಹಿಸಿಡಲು ಪಾತ್ರೆ ಬೇಕಾಯಿತು. ಆಗ ದೇವಶಿಲ್ಪಿ ವಿಶ್ವಕರ್ಮನು ಮಣ್ಣಿನ ಬಿಂದಿಗೆಯೊಂದನ್ನು ತಯಾರಿಕೆಗೆ ಕೊಟ್ಟನು. ಅಂದಿನಿಂದ ನೀರು ತುಂಬಿದ ಕೊಡವನ್ನು ಮಂಗಳಘಟ್ಟವೆಂದು ಪರಿಭಾವಿಸಲಾಯಿತಲ್ಲದೆ, ಅದು ಧಾರ್ಮಿಕ ಅಚರಣೆಯ ಅವಿಭಾಜ್ಯ ಅಂಗವೆಂದು

ಪರಿಗಣಿಸಲಾಯಿತು. ಆ ಸಮಯದಲ್ಲಿ ಪೂಜಿಸಬೇಕಾದ ದೇವರ ವಿಗ್ರಹವು ದೊರೆಯದಿದ್ದಲ್ಲಿ ಈ ಕಲಶವನ್ನೇ(ನೀರು ತುಂಬಿದ ಬಿಂದಿಗೆ) ದೇವರೆಂದು ಪೂಜಿಸುವ ಸಂಪ್ರದಾಯ ಆರಂಭವಾಯಿತು. ಅದರಂತೆ ದೀಪ ಉರಿಸಲು ಬೇಕಾದ ಮಣ್ಣಿನ ಪ್ರಣತಿಯು ಕೂಡಾ ಧಾರ್ಮಿಕ ಆಚರಣೆಗಳ ಅವಿಭಾಜ್ಯ ಅಂಗವಾಯಿತು.[೬೨] ಇಂತಹ ಕುಂಬಾರಿಕೆ ಕಸುಬಿನ ಕುರಿತು ಅನೇಕ ಸಾಹಿತ್ಯ ದಾಖಲೆಗಳಿವೆ.

ಗಡಿಗೆ–ಮಡಿಕೆಯ ಕೊಂಡ
ಬಿಡದೆ ಮಳೆ ಮೋಡ ಹಿಡಯಲವ–ದಿಬ್ಬರಿಗು
ತಡೆ ಬಿಡಲಾಯ್ತು ಸರ್ವಜ್ಞ[೬೩]

ಅಡಗಟ, ಮಡಕೆಯದು
ಅಡಗ ತಿಂಬಾತ ಕೈಲಾಸಕ್ಕೆ–ಹೋಹರೆ
ಮಡಕೆಯ ಸಾಕ್ಷಿ ಸರ್ವಜ್ಞ[೬೪]

ಇಲ್ಲಿ ಮಡಕೆ ಹೇಗೆ ಜೀವನದಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಎಂದು ವಿವೇಚಿಸಲಾಗಿದೆ.

ಐರಾವತ ಗಜಕುಂಭ
ಸ್ತಾರಣ ವಿಶ್ಲಥ ವಿಕಾಸಿ ಕೇಯಾಹ ಕೇ
ಯೂರದೊಳೊರಸೆ ಸುರೇಂದ್ರರ ನೊ
ಳೋರಾಸನೆವಿರ್ಪನರ್ಹದಾ ಸ್ಥಾಯಿಕಯೋಳ್.[೬೫]

ಅಂದರೆ ಕುಂಬಗಳಲ್ಲಿ ಗಜ ಅಂದರೆ ಆನೆ, ಇದು ದೊಡ್ಡದಾದಾ ಪ್ರಾಣಿ. ಹಾಗೆ ಕುಂಬಗಳಲ್ಲಿಯೂ ಸಹ ದೊಡ್ಡ ಗಾತ್ರದ ಕುಂಬಗಳನ್ನು ಮಾಡುತ್ತಿದ್ದರೆಂದು ಎಂಬುದನ್ನು ತಿಳಿದುಬರುತ್ತದೆ.

ಅಡಕೆ ಮಡಕೆಗಳುಂಟು
ಬೆಡಗು ನಿಲೆ ನೆಲವುಪಿಡಿದು ನಿಲ್ವಂತೆಂಟು
ಪೊಡವಿಗಳು ತಾಳ್ವದುವೋ
ಗಡಿಸದೆ ಮೂರು ಮಹಾನಿಲುಗಳ ಕ್ರಮದಿಂ[೬೬]

ಅಂದರೆ ಮಡಕೆಗಳನ್ನು ನೆಲಮಟ್ಟದಿಂದ ಒಂದರ ಮೇಲೊಂದು ಹೇಗೆ ಕೂಡಿಸಲಾಗುತ್ತಿತ್ತು ಎಂಬುದನ್ನು ತಿಳಿಸಲಾಗಿದೆ. ಈಗಲೂ ಸಹ ಗ್ರಾಮೀಣ ಭಾಗದಲ್ಲಿ ಅಡಕಲು ಅಂದರೆ ಸೂರೆಗಳಲ್ಲಿ ಧವಸ ಧಾನ್ಯಗಳನ್ನು ಹಾಕಿ ಒಂದರ ಮೇಲೊಂದರಂತೆ ಏರಿಪಟ್ಟಿರುವುದನ್ನು ಕಾಣಬಹುದಾಗಿದೆ.

ಪ್ರಾಚೀನ ಕಾಲದಿಂದಲೂ ವಿವಿಧ ಬಣ್ಣದ ಮಡಕೆ ಕುಡಿಕೆಗಳಿರುವುದನ್ನು ಪ್ರಾಕ್ತನ ಆಕರಗಳಿಂದ ದೃಢಪಡಿಸಲಾಗಿದೆ. ಅದೇ ರೀತಿ ವಿಜಯನಗರ ಕಾಲದಲ್ಲೂ ಸಹ ವಿವಿಧ ಆಕಾರದ ಮಡಕೆಗಳನ್ನು ತಯಾರಿಸುತ್ತಿದ್ದರು.

ಕರಿಕುಂಭದ ಮುತ್ತಂಕ
ತ್ತುರಿಮಿಗಮಂ ಸಿಂಹಶಾಬಮಂ ದರ್ಶನಮಿ
ತ್ತುರವಣಿಸಿ ಕಂದನಾಧಿ

ವರನಾಯಕ ನಿಭ್ಯಕೇತು ಭೂ ನಾಯಕಸಂ.[೬೭]

ಕುಂಬಾರರು ಮಡಕೆಗಳನ್ನು ಚಕ್ರದ ಸಹಾಯದಿಂದ ತಯಾರಿಸುತ್ತಿದ್ದರು.

ಆಲಧಿಯೊಳಿರ್ದಡಿಂಟಿ ಕುಲಶ್ವಲದೊಳಿರ್ದಪೆ ನುಗ್ಗುಗುಬ್ಬಿಭೂ
ಚ್ಚಳಿಸಿ ವಿವೋಧಿಯಷ್ಣ ರುಧಿರಾಂಬುವಿನಿಂ ಸೊತೆ ನಿನ್ನ ಕೇಶಮಂ
ತೊಳೆಯದೊಡೆನ್ನ ಚಕ್ರವಿಂದು ಚಕ್ರಮ ಕೋವರ ಚಕ್ರಮಲ್ಲದೇ
ಎಂದಾಕ್ಷೇಪಿಸುತ್ತುಂ ಸಿಂಹಾಸನದಿನೆರ್ದುದಂ ಕಂಡು.[೬೮]

ಎಲ್ಲೆಡೆಯೊಳು ಸುಖಮಿಲ್ಲ ಕೈವಲ್ಯದೋಳಲ್ಲದೆನ್ನಗೆ ಜೀವಗಳುಂಟು
ಎಲ್ಲೂ ಭವದೊಳು ತಿರುರಿಯಂದದಿ ಕರ್ಮ ನೊಲ್ಲದೆ ತಿರುಗಿಪುದಕಟು.[೬೯]

ಅಂದು ಅಡುಗೆಯನ್ನು ಮಡಕೆಯಲ್ಲಿ ತಯಾರಿಸುತ್ತಿದ್ದರು ಎಂಬುದಾಗಿರುವುದು.

ನಿರ್ಜರಾಲಯದಮೃತದಿಂ ನೆನಹಿ ಗೋಧಿಯಂ
ಪಜ್ಜುಳಿಸು ತೊಣಗಿಸುತ ಕುಮ್ಮುತೊಡೆವುತ ಬೇಗ
ಲುಜ್ಜಗಿಗೆ ಕೇರಿ ಸೋಧಿಸಿ ಪಚನಿಸುತ ಜವದಿ ಮಜ್ಜುಣು ಮುದ್ದೆಗೈದು
ವಜ್ಜಘಟದಲ್ಲಿರಿಸಿ ಪಾಕಿಸುತ ಪುನರಪಿಸು
ರಜ್ಜಿ ತನವಾತಮಂ ನೀಡಿ ಚೆಲಿಪಾಲ್ಲುಗಿಂಡಿ
ಸೂಜ್ಜಿಗೆಯ ಕಡುಬನೀಡಲು ಶಿವಾರ್ಪಣಗೈದು ವರ್ಜಸೆದರಖಳ ಸುಖವ.[೭೦]

ಇಲ್ಲಿ ಕಡುಬನ್ನು ಮಡಕೆಯಲ್ಲಿ ತಯಾರಿಸುವ ವಿಧಾನವನ್ನು ವಿವರಿಸಲಾಗಿದೆ. ಅಂದು ಕೆಲವೊಂದು ಆಹಾರ ತಯಾರಿಕೆಗೆ ಮಡಕೆ ಅಗತ್ಯವಾಗಿ ಬೇಕಾಗುತ್ತಿತ್ತು, ಸಾಮಾನ್ಯಾವಾಗಿ ಮಡಕೆಯ ಪಾತ್ರೆಗಳಿಂದ ಆಹಾರವನ್ನು ತಯಾರಿಸುತ್ತಿದ್ದರು. ಕುಂಬಾರರು ಚಕ್ರದಿಂದ ಮಡಕೆಯನ್ನು ತಯಾರಿಸಿ ಹಾಗೂ ಅಡುಗೆಯನ್ನು ಮಾಡುತ್ತಿದ್ದರು. ಎಂಬುದನ್ನು ಮೇಲಿನ ದಾಖಲೆಗಳು ದೃಢಪಡಿಸುತ್ತವೆ. ಕುಂಬಾರರು ಪ್ರತ್ಯೇಕ ಕೇರಿಗಳಲ್ಲಿ ವಾಸವಿರುತ್ತಿದ್ದರು ಎಂಬುದಕ್ಕೆ ಅನೇಕ ಶಾಸನೋಕ್ತ ದಾಖಲೆಗಳಿವೆ. ಸದಾಶಿವಪುರ ಅಗ್ರಹಾರವನ್ನು ನಿರ್ಮಿಸಿ ಅಲ್ಲಿ ವೃತ್ತಿಗನುಸಾರವಾಗಿ ಬ್ರಾಹ್ಮಣರಿಗೆ ದಾನದತ್ತಿಗಳನ್ನು ಬಿಟ್ಟ ವಿವರ ಕುಂಬಾರಗೇರಿ ೩೦ ೧೪ ವಿಭಿಯಂ ತೃಟಿತಗೊಂಡಿದೆ.[೭೧] ಕುಂಬಾರಗೇರಿ[೭೨] ದೇವಸ್ಥಾನ ವೆಚ್ಚದ ಬಾಬತ್ತಿನಲ್ಲಿ ಅಕ್ಕಸಾಲೆಗೆ, ಕುಂಬಾರಗೇರಿ ಅಗಸಗೆರಿ ಮತ್ತು ನಾವಿಂದನಿಗೆ ನಿಶ್ಚಿತ ಗದ್ಯಾಣಗಳನ್ನು ನೀಡಬೇಕೆಂದು ಶಾಸನವೊಂದು ತಿಳಿಸುತ್ತದೆ.[೭೩] ಕುಂಬಾರರ ಮದುವೆ ಸಮಯದಲ್ಲಿ ಅಗಸರು ಚಪ್ಪರಕ್ಕೆ ಮೇಲುಕಟ್ಟು ಕಟ್ಟಲು ಮತ್ತು ನಾಯಿಂದರು ಕಾಲುಂಗರು ತೆಗೆಯಲು ನಿರಾಕರಿಸಿದಾಗ ಕುಂಬಾರರು ಹರದನ ಹಳ್ಳಿಯ ದಿವ್ಯಲಿಂಗೇಶ್ವರನ ಮುಂದೆ ಕಾದ ತುಪ್ಪದಲ್ಲಿ ಕೈಯಿಕ್ಕಿ ದಿವ್ಯವನ್ನು ಗೆದ್ದು ಅವರ ಬೇಡಿಕೆ ಈಡೇರಿಸಿಕೊಂಡ[೭೪] ಎಂಬ ವಿಷಯವನ್ನು ಶಾಸನವೊಂದು ತಿಳಿಸುತ್ತದೆ.

ವಿಜಯನಗರ ಪೂರ್ವದಲ್ಲಿಯೂ ಕಸುಬುದಾರರಿಗೆ ಪ್ರತ್ಯೇಕ ಕೇರಿಗಳಿದ್ದವು ಎಂಬುದಕ್ಕೆ ಸೂರ್ಯಗ್ರಹಣದ ದಿನ ನಾಯಕನೊಬ್ಬನು ಭೂಮಿದಾನ ಮಾಡಿರುವುದನ್ನು ದಾಖಲಿಸಿದೆ. ಕುಂಬಾರಗೇರಿ ಪೊಳಗಣ ಮೂಲಗವಾನ್ಪುದ ಮೇಲ್ಕೆ ಮತ್ತರು ಮೊರಡಗಟ್ಟಿದ ಕೆಳಗೆ.[೭೫] ಅಲ್ಲಾ ಭೀಮ ಹೇಳಿಕೇಳಿ ನಾವು ಭಿಕ್ಷಾಚರಿತರು ಅರಸರುಗಳಲ್ಲ ಕುಂಬಾರರ ಓಣಿಗೆ ಹೋಗೋಣ ಅಲ್ಲಿ ಮಡಕೆಗಳ ಸಂಗ್ರಹಣ ಭಿಕ್ಷೆ ಬೇಡೊಣ. ಅಂದರೆ ಅಂದು ಕುಂಬಾರ ಸಮುದಾಯದವರು ಪ್ರತ್ಯೇಕ ಜನಾಂಗಳಲ್ಲಿ ವಾಸಿಸುತ್ತಿದ್ದರು ಎಂದು ತಿಳಿಯುತ್ತದೆ.

ಕುಂಬಾರರು ಕೇವಲ ಕುಂಬಾರಿಕೆ ಮಾಡುತ್ತಿರಲಿಲ್ಲ ಸಮಾಜದಲ್ಲಿ ಬೇರೆ ಬೇರೆ ಸ್ಥಾನಮಾನಗಳ ಹೊಂದಿದ್ದರು. ಕ್ರೀಡೆ ಮತ್ತು ವಿನೋದಾವಳಿಗಳಲ್ಲಿ ಭಾಗವಹಿಸಿ ಜಟ್ಟಿಗಳ ಸ್ಥಾನಮಾನಗಳಿಸಿ ಕೊಂಡಿದ್ದರು ಎಂಬುದಕ್ಕೆ,

ಹಟ್ಟಿಕಾರರು, ಹಳ್ಳಿಕಾರರು ಕೆಲದಲಿ
ದಿಟ್ಟ ಗಾಣಿಗ ಬೊಮ್ಮನವರು
ಕಟ್ಟಾಳು ಕುಂಬಾರ ಸೋಮನು ವಿರುಪನು
ಜಟ್ಟಿಗಳಿಂದ ಒದಗಿದರು.[೨೬]

ಅಂದರೆ ಅಂದು ಕುಂಬಾರ ಸಮುದಾಯದವರು ಪ್ರತ್ಯೇಕ ಜನಾಂಗವಾಗಿ ವಾಸಿಸುತ್ತಿದ್ದರು ಎಂದು ತಿಳಿಯುತ್ತದೆ. ಕುಂಬಾರರು ಬರೀ ಮಡಕೆ ಕುಡಿಕೆಗಳನ್ನು ಮಾಡುತ್ತಿರಲಿಲ್ಲ ಹಣತೆಗಳನ್ನು ಮಾಡುತ್ತಿದ್ದರು. ಹಬ್ಬ ಉತ್ಸವಗಳ ಸಂದರ್ಭದಲ್ಲೂ ಈ ದೀಪದ ಹಣತೆಗಳನ್ನು ಹಚ್ಚುತ್ತಿದ್ದರು. ವಿದೇಶಿ ಪ್ರವಾಸಿಗರ ವರ್ಣನೆಯಂತೆ ದೀಪಗಳ ಹಬ್ಬ ಅಥವಾ ದೀಪಾವಳಿ ಮತ್ತು ಹೋಳಿ ಉತ್ಸವಗಳು ಕೂಡ ವಿದೇಶಿ ಪ್ರವಾಸಿಗರನ್ನು ಆಕರ್ಷಿಸಿದ್ದವು ದೀಪಾವಳಿ ಹಬ್ಬ ಕಾರ್ತೀಕ ಮಾಸದಲ್ಲಿ ನಡೆಯುತ್ತಿತ್ತು. ಕೊಂಟಿಯ ಪ್ರಕಾರ ಈ ಉತ್ಸವದಲ್ಲಿ ಅವರು ತಮ್ಮ ದೇವಾಲಯಗಳ ಒಳಗೆ ಮತ್ತು ಮಾಳಿಗೆಯ ಮೇಲೆ ಸೂಸಿಮಣ್ಣಿನ ಎಣ್ಣೆಯ ಅಸಂಖ್ಯಾ ದೀಪಗಳನ್ನು ಹಚ್ಚಿ ಹಗಲು ರಾತ್ರಿ ಉರಿಸುತ್ತಾರೆ.[೨೭] ದೀಪಾವಳಿ ಹಬ್ಬದ ಸಂದರ್ಭದಲ್ಲಿ ಇಂದಿಗೂ ಸಹ ಮಣ್ಣಿನ ದೀಪಗಳನ್ನು ಹಚ್ಚುವ ಪದ್ಧತಿ ರೂಢಿಯಲ್ಲಿದೆ.

ಕುಂಬಾರ[೨೮] ತಯಾರಿಸಿದ ಮಡಕೆಗಳನ್ನು ಸಂತೆಗಳಲ್ಲಿ ಮಾರುತ್ತಿದ್ದರು. ಶಾಸನಗಳು ತಿಳಿಸುವಂತೆ ಕುಂಬಾರರು ಕಂಬಿಗೆ ಮಡಕೆ,[೨೯] ಕುಂಬಾರರಲ್ಲಿ ಹೆಸರಕ್ಕೆ ಮಡಕೆ ಪೊನ್ನು[೩೦] ಹೀಗೆ ವರ್ತಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದರು. ವಿಜಯನಗರ ಕಾಲದಲ್ಲಿ ಕುಂಬಾರರ ಮೇಲೆ ತೆರಿಗೆ ವಿಧಿಸುತ್ತಿದ್ದರು. ಅಚುತ್ಯರಾಯನ ಕಾಲದಲ್ಲಿ ಕುಂಭೀನರಕೆರೆ,[೩೧] ಕೃಷ್ಣದೇವರಾಯನ ಕಾಲದಲ್ಲಿ ಗಾಣಿಗೆರೆ ಸುಂಕ, ಕುಂಬಾರರ ಕಾಣಿ, ಅವನ ಪಟ್ಟಮಹಾದೇವಿಯಾದ ತಿರುಮಲದೇವಿ ಅಮ್ಮನವರು ವಿಜಯನಗರದ ಬಳಿ ಇದ್ದ ಕುಂಬಾರಗುಂಟೆ ಎಂಬ ಭೂಮಿಯನ್ನು ಅಂಜನಗಿರಿಯ ಕರಿಯ ತಿರುವೆಂಗಳನಾಥನಿಗೆ ಭೂದಾನ ನೀಡಿದ್ದು ತಿಳಿಯುತ್ತದೆ.[೩೨] ಕ್ರಿ.ಶ. ೧೫೧೩ರಲ್ಲಿ ರಾಯರು ಕುಂಬಾರರ ಕಾಣಿ, ಕುಂಬಾರರ ತೆರಿಗೆ ವಿಧಿಸಲಾಗಿತ್ತು.[೩೩] ಹರಿಹರ ಮಹಾಕವಿಯು ಕುಂಬಾರ ಗುಂಡಯ್ಯನ ರಗಳೆಯಲ್ಲಿ[೩೪] ಗುಂಡಯ್ಯನ ಅನನ್ಯ ಭಕ್ತಿಗೆ ಮೆಚ್ಚಿ ಸಾಕ್ಷಾತ್ ಶಿವನೇ ಒಂದು ಕುಣಿದು ಭಕ್ತಿ ಪರವಶತೆಯ ಸನ್ನೀವೇಶ ಸುಪ್ರಸಿದ್ಧವಾಗಿದೆ.

ಆಡಿದನಾಡಿದ ನಾಹಾ ಶಂಕರ ಎಂದು ಹರಿಹರ ಉದ್ಗರಿಸಿದರೆ ಕುಂಬಾರರಲ್ಲಿಯ ಗುಂಡಯ್ಯನಾಗಬಲ್ಲರೆ? ಮಡಿವಾಳರೆಲ್ಲರು ಮಾಚಯ್ಯನಾಗಬಲ್ಲರೆ? ಎಂದು ಶಿವಯೊಗಿ ಸಿದ್ಧರಾಮೇಶ್ವರ ಪ್ರಶ್ನಿಸುತ್ತಾನೆ.[೩೫] ಕುಂಬಾರ ಗುಂಡಯ್ಯ ಚಾರಿತ್ರಿಕ ವ್ಯಕ್ತಿಯಾಗಿದ್ದ ಎಂದು ಶಾಸನಗಳಲ್ಲಿ[೩೬] ನಮೂದಿತನಾಗಿರುವುದನ್ನು ಡಾ.ಕಲಬುರ್ಗಿಯವರು ಗುರುತಿಸಿದ್ದಾರೆ.

ಅಂಬು ಬಿಲ್ಲಿಗೆ ಲೇಸು ಇಂಬು ಕೋಣೆಗೆ ಲೇಸು
ಸಂಬಾರ ಲೇಸು ಸಾರಿಗಂ ಊರಿಂಗೆ
ಕುಂಬಾರ ಲೇಸು ಸರ್ವಜ್ಞ

ಸರ್ವಜ್ಞನ ಈ ಮಾತು ಊರಿಗೆ ಕುಂಬಾರನ ಅಗತ್ಯತೆಯನ್ನು ಚೆನ್ನಾಗಿ ಬಿಂಬಿಸುತ್ತಿದೆ. ಬಿಲ್ಲಿಗೆ ಅಂಬು, ಕೋಣೆಗೆ ಇಂಬು, ಸಾರಿಗೆ ಸಂಬಾರ ಎಷ್ಟು ಮುಖ್ಯ ಅವಶ್ಯಕತೆ. ಒಂದು ಊರಿಗೆ ಕುಂಬಾರನ ಅವಶ್ಯಕತೆಯಿದೆ ಎನ್ನುವುದು ಸರ್ವಜ್ಞನ ಸ್ಪಷ್ಟವಾದ ಅಭಿಮತ ಕುಲಕಸುಬುಗಳಲ್ಲಿ ಕುಂಬಾರಿಕೆಗೆ ತುಂಬ ಮಹತ್ವದ ಸ್ಥಾನವಿದೆ. ಕೌಟುಂಬಿಕ ಜೀವನದಲ್ಲಿ ಕುಂಬಾರಿಕೆಯ ಪಾತ್ರ ಅತ್ಯಂತ ಹಿರಿದಾದುದು. ಎಲ್ಲಾ ಕಸುಬುಗಳಂತೆ ಮಾನವ ಬದುಕಿನ ಅವಿಭಾಜ್ಯ ಅಂಗವಾಗಿ ಬೆಳೆದ ಈ ಕುಂಬಾರಿಕೆಯನ್ನು ಪೂರೈಸುವವ ನನ್ನು ಕುಂಬಾರ ಎಂದು ಕರೆಯಲಾಗಿದೆ.

೩. ಬಡಗಿ

ಬಡಗಿಯು ಮರ ಕಡಿದು ಕೆತ್ತಿ ರೈತೋಪಯೋಗಿ ಉಪಕರಣಗಳನ್ನು ಪಾರಂಪರಿಕವಾಗಿ ಮಾಡುತ್ತಾ ಬಂದಿರುವ ಕಸುಬಿಗೆ 'ಬಡಗಿತನ' ಎನ್ನುವರು. ಈತ ಮರದಿಂದ ತಯಾರಾಗುವ ಎಲ್ಲ ಬಗೆಯ ಉಪಕರಣಗಳನ್ನು ತಯಾರಿಸುತ್ತಾನೆ. ಬಡಗಿತನದ ಅಗತ್ಯ ಹಳ್ಳಿಗೆ ಇದ್ದೆ ಇದೆ. ಈತನಿಲ್ಲದೆ ಹಳ್ಳಿ ಪರಿಪೂರ್ಣವಾಗಲಾರದೇನೋ! ಭಾರತ ಕೃಷಿ ಪ್ರಧಾನವಾದ ದೇಶ, ಇಲ್ಲಿ ಭೂಮಿಗೆ ಹೆಚ್ಚು ಮಹತ್ವವಿದ್ದು, ಈ ಭೂಮಿಯ ಒಡೆಯನಾದ ರೈತನನ್ನು ಕೇಂದ್ರವಾಗಿಟ್ಟುಕೊಂಡು ಕೆಲವು ಕಸುಬುಗಳು ರೂಪುಗೊಂಡಿವೆ. ಅವುಗಳಲ್ಲಿ ಬಡಗಿತನವು ಪ್ರಮುಖವಾದುದಾಗಿದೆ.

ಬಡಿಗ–ಬಡಗಿ–ಬಡಿಗೇರ, ಬಡಿಗ್ಯಾರ, ಬಡಗಿಯವನು, ಮರಗೆಲಸ ಮಾಡುವವನು ಎಂದರ್ಥ. ವರ್ಧಕಿ(ಸಂ). ಪದ್ಧತಿ ಒಡ್ಡತಿಯಿಂದ ಬಡಗಿ ಪದ ಬೆಳೆದು ಬಂದಿರಬೇಕು. ತಮಿಳು ಮತ್ತು ಮಲೆಯಾಳಂನಲ್ಲಿ ತಚ್ಚಾನ್, ಆಷಾರಿ, ಮರಾಶಾರಿ ತೆಲುಗಿನಲ್ಲಿ ಆಚಾರಿ, ವಡ್ರಂಗಿ ಎಂಬ ಪದ ಬಳಕೆಯಲ್ಲಿದೆ.[೮೭] ರೈತ ಎಲ್ಲರಿಗೂ ಬೇಕಾದ ಆಹಾರ ಧಾನ್ಯಗಳನ್ನು ಉತ್ಪಾದಿಸಿದರೆ, ಈ ರೈತ ಕುಟುಂಬಕ್ಕೆ ಸರ್ಕಾರ ಮತ್ತು ಉಳಿದ ಕುಟುಂಬಗಳು ಸೇವೆಯನ್ನು ಸಲ್ಲಿಸುತ್ತವೆ. ಇವರು ಸಲ್ಲಿಸುವ ಸೇವೆಗೆ ಸಂಪ್ರದಾಯದಂತೆ ರೈತ ಕುಟುಂಬವು ತಾವು ಬೆಳೆದುದರಲ್ಲಿ ಒಂದು ಪಾಲನ್ನು ಸಂಭಾವನೆಯಾಗಿ ಕೊಡಲಾಗುತ್ತದೆ. ಇದಕ್ಕೆ ಆಯಾ ಎಂದು ಹೆಸರು.[೮೮] ಆಯಾ ಪದ್ಧತಿಯು ಜಜಮಾನಿ, ಬಲೂತಾ ಅಥವಾ ಬೇರೆ ಹೆಸರಿನಿಂದ ಗ್ರಾಮೀಣ ಭಾಗದಲ್ಲಿ ಪ್ರಾಚೀನ ಕಾಲದಿಂದಲೂ ಇದ್ದಿರಬೇಕು. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಕ್ರಿ.ಶ. ೧೧ನೆಯ ಶತಮಾನದಿಂದೀಚೆಗೆ ಶಾಸನಗಳಲ್ಲಿ ಆಯಾಗಾರರ ಪ್ರಸ್ತಾಪಗಳು ಬರುತ್ತವೆ. ಚಾಲುಕ್ಯ, ಹೊಯ್ಸಳರ ಕಾಲದ ಶಾಸನಗಳಲ್ಲಿ ಗವುಂಡ, ಶಾನುಭೋಗ, ತಳಾರ, ಅಂಬಿಗ, ಬಾರಿಕಾರ, ತೋಟಿಗ, ಕಲ್ಲುಕುಟಿಗ, ಕಮ್ಮಾರ. ಅಕ್ಕಸಾಲಿ, ಬಡಿಗ, ಜ್ಯೋತಿಷಿಗಳ ಹೆಸರುಗಳಿವೆ.[೮೯] ಗ್ರಾಮ ಸಂಸ್ಕೃತಿಯ ಅಂಗವಾಗಿ ಬೆಳೆದು ಬಂದ ಇವರು ಆಯಾಗಾರರೆಂದು ಪ್ರಸಿದ್ಧರಾಗಿರುವ ಗ್ರಾಮೀಣ ಕಸುಬುದಾರರಲ್ಲಿ ಬಡಿಗೇರರು ಮುಖ್ಯರಾಗಿದ್ದರೆ.

ಬಡಗಿತನ ಮಾಡುವ ಬಡಗಿಗಳನ್ನು ಅರೆಕುಶಲ ಕುಶಲ ಬಡಗಿಗಳು ಎಂದು ಎರಡು ಭಾಗ ಮಾಡಬಹುದಾಗಿದೆ.[೯೦] ಸಾಮಾನ್ಯ ಜನರು ಉಪಯೋಗಿಸುವ ಪೀಠೋಪಕರಣಗಳಾದ,

ನೇಗಿಲು, ಎತ್ತಿನಗಾಡಿ ಮೊದಲಾದ ವ್ಯವಸಾಯೋಪಯೋಗಿ ವಸ್ತುಗಳು ಮನೆಮುಟ್ಟುಗಳು ಮಾಡುವವರನ್ನು ಅರೆ ಕುಶಲ ಬಡಗಿಗಳೆಂದು, ಸೂಕ್ಷ್ಮವಾದ ಕೆತ್ತನೆ ಕೆಲಸದ ಪರಿಕರಗಳನ್ನು, ಮಠದ ದೇವಸ್ಥಾನ ಮತ್ತು ರಥಗಳನ್ನು ಮಾಡುವವರ ಕುಶಲ ಬಡಗಿಗಳು ಎಂದು ಕರೆಯಲಾಗಿದೆ.

ಪ್ರಾಚೀನ ಕಾಲದಿಂದಲೂ ಈ ಕಸುಬು ಇತ್ತು ಎಂಬುದಾಗಿ ನಮಗೆ ಮನುಸ್ಮೃತಿ, ವಿಷ್ಣುಪುರಾಣ ಹಾಗೂ ಕೌಟಲ್ಯನ ಅರ್ಥಶಾಸ್ತ್ರದಿಂದ ತಿಳಿದುಬರುತ್ತದೆ ಎಂದು ಎ.ಎಸ್. ಅಲ್ಟೇಕರ್ ಅವರು ಅಭಿಪ್ರಾಯಪಡುತ್ತಾರೆ.[೯೧] ವಿಜಯನಗರ ಕಾಲಕ್ಕೆ ಈ ಕಸುಬು ತುಂಬಾ ಪ್ರಾಧಾನ್ಯತೆ ಪಡೆದುಕೊಂಡಿತ್ತು. ವೀರಪಾಂಚಾಳರೆಂದು ಕರೆಯುವ ಅಕ್ಕಸಾಲೆ, ಕಮ್ಮಾಟ ಆಚಾರಿ ಅಥವಾ ನಾಣ್ಯ ಟಂಕಿಸುವವ, ಕಮ್ಮಾರ, ಬಡಗಿ ಹಾಗೂ ಕಲ್ಲುಕುಟ್ಟಿಗರಿದ್ದರು.[೯೨] ಅದರಲ್ಲಿ ಬಡಗಿತನದ ಕಸುಬು ಸಮಾಜದಲ್ಲಿ ತುಂಬಾ ಅವಶ್ಯಕತೆಯಿತ್ತೆಂಬುದು ನಮಗೆ ಶಾಸನ, ವಿದೇಶಿ ಪ್ರವಾಸಿಗರ ವರದಿ, ಸಾಹಿತ್ಯ ಕೃತಿಗಳ ದಾಖಲೆಗಳು ಸ್ಪಷ್ಟಪಡಿಸುತ್ತವೆ.

ವಿಜಯನಗರ ಕಾಲದ ವ್ಯವಸಾಯದಲ್ಲಿ ಉಪಕರಣಗಳನ್ನು ಬಳಸಿದ ಒಂದು ಚಿತ್ರಣ ಸಾಹಿತ್ಯ ಕೃತಿಗಳಲ್ಲಿ ಈ ರೀತಿಯಿದೆ. ಹರಗುವುದು ಕುಂಟೆ ಹೊಡೆಯುವುದು ವ್ಯವಸಾಯದಲ್ಲಿ ಬಹಳ ಮುಖ್ಯ ಕೆಲಸಗಳಾಗಿವೆ. ಹೊಲವನ್ನು ನೇಗಿಲಿನಿಂದ ಮತ್ತು ಆಗ ಎದ್ದ ದೊಡ್ಡ ಹೆಂಟೆಗಳನ್ನು ಒಡೆದು ಕಲ್ಮಶಗಳನ್ನೆಲ್ಲ ನೆಲದಿಂದ ತಳ್ಳಿ ಹಾಕುವುದಕ್ಕೆ ಕುಂಟೆ ಹೊಡೆಯುವುದು ಎನ್ನುತ್ತಾರೆ. ಕನಕದಾಸರು ಹೊಲದಲ್ಲಿ ಕುಂಟೆ ಹೊಡೆಯುವ ಒಂದು ಚಿತ್ರವನ್ನು ಕೊಟ್ಟಿದ್ದಾರೆ. ಕುಂಟೆ ತುದಿಗೆ ಕೊರಡು ಹಾಕಿ ಹೆಂಟೆ ಮೆಟ್ಲು ಸಮಮಾಡಿ ರೆಂಟೆ ಹೊಡೆದು ಬೆಳೆಸುವುದು[೯೩] ವ್ಯವಸಾಯದ ಉಪಕರಣಗಳು ಅಪಾರ, ಅವುಗಳು ಇಂದಿಗೂ ಹಿಂದೆಯೂ ಮತ್ತು ಬಳಕೆಯಲ್ಲಿದ್ದವು ಎಂಬುದನ್ನು ಕುಮಾರ ವಾಲ್ಮೀಕಿಯಲ್ಲಿ ಕೊಡುವ ಈ ಚಿತ್ರದಲ್ಲಿ ಕಾಣಬಹುದು. ಆಂಜನೇಯನ ಉಪಉಳಿವನ್ನು ತಾಳಲಾರದೇ ಜನ ದಿಕ್ಕುಗೆಟ್ಟು, ದಿಕ್ಕುದಿಕ್ಕಿಗೆ ಚೆದುರುವಾಗ ಒಕ್ಕಲಿಗರ ಕೇರಿಯಲ್ಲಿ ಈ ಮಾತುಗಳು ಕೇಳಬಹುದು. ಕೊಡಲಿ ಮೀಣಿ ಕುಡನತೆಗೆ ಕೂರಿಗೆಯ,[೯೪] ಬಿಸುಡೀ ಕಡೆಗೆ ಬಿಡುದನ ಕರುವ ಗುದ್ದಲಿ,[೯೫] ನೊಗ ಬಂಡಿ ಇಲ್ಲದೆ ಬೇಸಾಯ ತಲೆಹೋದ ಮುಂಡದಂತಿಕ್ಕು[೯೬] ಬಂಡಿ ಒಂದು ಉತ್ತಮ ಸಂಚಾರಿ ವಾಹನ ಹಾಗೂ ಹೇರು ಹೊರುವ ಸಾಧನ. ಚಕ್ಕಡಿ ಅಥವಾ ಬಂಡಿ ಪ್ರಾಚೀನ ಕಾಲದಲ್ಲೂ ಜನಸಾಮಾನ್ಯರ ಪ್ರಯಾಣ ಮತ್ತು ಸರಕು ಸಾಗಿಸುವ ಬಹು ಮುಖ್ಯ ಸಾರಿಗೆ ಸೌಕರ್ಯವಾಗಿತ್ತು. ಪಾಯೋಸನು ಅರಮನೆಯ ಮುಂದಿನ ಮೈದಾನದಲ್ಲಿ ದವಸಧಾನ್ಯಗಳನ್ನು ತುಂಬಿದ್ದ ಲೆಕ್ಕವಿಲ್ಲದಷ್ಟು ಬಂಡಿಗಳು ಸಂಚರಿಸುವುದನ್ನು ತಾನು ಕಂಡಿದ್ದಾಗಿ ಹೇಳುತ್ತಾನೆ.[೯೭] ಗದುಗಿನ ಭಾರತದಲ್ಲಿ ಮತ್ತು ಜೈಮಿನ ಭಾರತದಲ್ಲಿ ಬಂಡಿಯನ್ನು ಹೇರು ಹೋರುವ ಸಾಧನವಾಗಿ ಬಳಸಿರುವುದಾಗಿ ಹೇಳಲಾಗಿದೆ.

ಬಂಡಿಯನ್ನು ಕುರಿತು ಅನೇಕ ರೀತಿಯ ಮಾಹಿತಿಯನ್ನು ಸಾಹಿತ್ಯ ಕೃತಿಗಳು ಅಲ್ಲಲ್ಲಿ ಒದಗಿಸಿವೆ. ಗಾಡಿಯ ಮೂಕಿನ ಮೇಲೆ ಏರಿ ಕುಳಿತ, ಎತ್ತುಗಳು ಹಗ್ಗವನ್ನು ಎಳೆದು ಗಾಡಿಯನ್ನು ನಡೆಸುವ ಒಂದು ಚಿತ್ರ ನೀಡಿದೆ.[೯೮] ಭಾರ ಹೊತ್ತು ಚಲಿಸುವ ಗಾಡಿ ಮತ್ತು

ಅದರ ಭಾಗಗಳ ಒಂದು ಚಿತ್ರವನ್ನು ತೊರವೆರಾಮಾಯಣ ಕೃತಿ ನೀಡುತ್ತದೆ.[೯೬] ಈ ರೀತಿಯ ವಸ್ತುಗಳನ್ನು ಮಾಡಲು ಬಡಗಿಯು ಬೇಕೆ ಬೇಕು. ಬಡಗಿ ಕಸುಬಿನ ಕುರಿತು ಅನೇಕ ಶಾಸನೋಕ್ತ ದಾಖಲೆಗಳಿವೆ.[೯೭] ದೇವಸ್ಥಾನಕ್ಕೆ ಸಂಬಂಧಿಸಿದ ಮರಗೆಲಸಗಳನೆಲ್ಲ ಮಾಡಲು ಮುರಿದು ಹೋದ ಸಾಮಾನುಗಳನ್ನು ಸರಿಪಡಿಸಲು ಈ ಕಸುಬಿನವರಿಗೆ ಶಾಶ್ವತವಾದ ದತ್ತಿಗಳನ್ನು ಬಿಟ್ಟು ಕೊಡುತ್ತಿದ್ದರು.[೯೮] ಕ್ರಿ.ಶ. ೧೧೮೭ರ ಗದಗ ತಾಲೂಕಿನ ಹೊಸೂರಿನ ಶಾಸನವೊಂದು ಬಡಗಿ ಕಲೋಜ ವೋರಕೇಶ್ವರ ದೇವರ ತೋಟಕೆಯಿ ವುನೆಯು ಗೆಯಿದೆ ಕೂಲಿಯನಿತುಂಟನಿತುಮಂ ದೇವರ ನೈವೇದ್ಯಕೊಂಮಾನಕ್ಕೆಯ ನಡವಂತಾಗಿ ತಂನಪುತ್ರ ಪೌತ್ರರಾದಿಯಾಗಿಯಲ್ಲಿಯಾಚಾರ್ಯ್ಯರಗಸ್ತ(ಸ್ತ್ಯ) ಮುನೀಶ್ವರ ದೇವರ ಕಾಲಂ ಕರ್ಚ್ಚಿ ಧಾರಾಪೂರ್ವ್ವಕಂ ಮಾಡಿ ಕೊಟ್ಟಯಲ್ಲಿ ಬಡಗಿತನಕ್ಕಾರು ನಿಂನ್ದವರು ಹಿಟ್ಟುಕಾರ ಬಡಗಿ ಕಲ್ಲೋಜ ಬಿಟ್ಟ ಧರ್ಮ್ಮಮಂ.[೯೯] ಏಳುನೂರ್ವ್ವರುಂ ಪ್ರಜೆ ಮಹಾಬಳಗಾವುಂಡನು ಪ್ರತಿಪಾಲಿಸುವಲ್ಲಿ ದಂಡಾಧಿಪನೊಬ್ಬನು ಕ್ರಿ.ಶ. ೧೧೫೯ರಲ್ಲಿ ವಿರುಪಾಕ್ಷಪುರ ಎಂಬ ನಗರವನ್ನು ಕಟ್ಟಿ ಅದನ್ನು ಬ್ರಾಹ್ಮಣರಿಗೆ ದಾನ ಕೊಡುವ ಸಂದರ್ಭದಲ್ಲಿ ಒಬ್ಬೊಬ್ಬ ಬ್ರಾಹ್ಮಣನಿಗೆ ಒಂದೊಂದರಂತೆ ಅನೇಕ ಮರದ ಮಂಚಗಳನ್ನು ಬಡಗಿಗಳಿಂದ ಮಾಡಿಸಿ ದಾನಮಾಡಿ ಕೊಡುತ್ತಾನೆ.[೧೦೦] ಕ್ರಿ.ಶ. ೧೨೨೫ರ ಒಂದು ಶಾಸನವು ಬಡಗಿ ಚಂಪೋಜ ಎನ್ನುವವನಿಗೆ ಅವನ ಸೇವೆಯನ್ನು ಪರಿಗಣಿಸಿ ಭೂಮಿಯನ್ನು ದಾನ ಮಾಡಿದ ವಿಷಯವನ್ನು ಪ್ರಸ್ತಾಪಿಸುತ್ತದೆ.[೧೦೧]

ಬಯಿರು ಎನ್ನುವವನು ಸಿಮ್ಮೋಜನ ಮಗ ಕ್ರಿ.ಶ. ೧೫೦೦ರಲ್ಲಿ ನಂದಿ ಗ್ರಾಮದ ನಂದಿ ಬೆಟ್ಟದ ಯೋಗ ನಂದೀಶ್ವರ ಗುಡಿಯ ದಕ್ಷಿಣದ ಕಡೆಯ ಬಾಗಿಲ ಕದವನ್ನು[೧೦೨] ತಾನು ಮಾಡಿರುವುದಾಗಿ ಹೇಳಿಕೊಂಡಿದ್ದಾನೆ. ಇದರಿಂದ ಬಡಗಿಗಳು ಮನೆಯ ಉಪಕರಣಗಳನ್ನು ಮಾಡುತ್ತಿದ್ದರು ಎಂಬುದಾಗಿ ತಿಳಿಯುತ್ತದೆ. ಕ್ರಿ.ಶ. ೧೫೪೪ರ ಒಂದು ಶಾಸನದ ಪ್ರಕಾರ ಒಬ್ಬ ಜಿನಭಕ್ತನು ದಾರು(ಮರ) ಮಯ ಬಸದಿಯನ್ನು ಕಟ್ಟಿಸುತ್ತಾನೆ. ಅದನ್ನು ನೋಡಿದ ಆಚಾರ್ಯರು ಅವನನ್ನು ಕರೆದು ಶಿಲಾಮಯ ಬಸದಿಯನ್ನು ಕಟ್ಟಿಸಬೇಕೆಂದು ಬುದ್ಧಿವಾದ ಹೇಳುತ್ತಾರೆ.[೧೦೩] ಇದನ್ನು ಗಮನಿಸಿದರೆ ಮಧ್ಯಮ ವರ್ಗದವರು ಹಾಗೂ ಸಾಮಾನ್ಯ ಜನತೆಯು ಮರದ ದೇವಸ್ಥಾನಗಳನ್ನು ಕಟ್ಟಿಸುತ್ತಿದ್ದರು ಮತ್ತು ಇಂಥ ಮರದ ದೇವಾಲಯಗಳು ಕಲ್ಲಿನ ದೇವಾಲಯಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಿದ್ದವು ಎಂದು ತಿಳಿಯಬಹುದಾಗಿದೆ. ಕ್ರಿ.ಶ. ೧೪೩೧ರ ಮಾಲೂರು ತಾಲ್ಲೂಕು ತೇಕಲ್ಲು ಗ್ರಾಮದ ವರದರಾಜಸ್ವಾಮಿ ದೇವಸ್ಥಾನದಲ್ಲಿ ಅದೇ ಗ್ರಾಮದ ವಾಸಿಯಾಗಿದ್ದ ದೇವೋಜ ಎಂಬ ಬಡಗಿಯು ಗುಡಿಗೆ ಸಂಬಂಧಿಸಿದ ಮರಗೆಲಸವನ್ನು ಮಾಡಿಕೊಡುತ್ತಾನೆ.[೧೦೪] ಈ ಕೆಲಸಕ್ಕಾಗಿ ಈತನಿಗೆ ಗದ್ದೆಯ ಹೊಲವನ್ನೂ ಕೊಡಲಾಗಿದೆ. ಕ್ರಿ.ಶ. ೧೪೮೦ರಲ್ಲಿ ಬಡಗಿ ಲಿಂಗೋಜನು ಜಗಲೂರು ತಾಲ್ಲೂಕು ನಿಬಗೂರಿನಲ್ಲಿ ಆಂಜನೇಯನ ಗುಡಿಯನ್ನು ಕಟ್ಟಿಸುತ್ತಾನೆ. ಇದಕ್ಕಾಗಿ ಗೌಡನು ಇವನಿಗೆ ಅರವತ್ತು ಒಕ್ಕಲು ಮಾನ್ಯವನ್ನು ಕೊಡುತ್ತಾನೆ.[೧೦೫] ಇದು ಮರದ ದೇವಸ್ಥಾನವಾಗಿದೆ.

ಕುಶಲಿಗಳಾದ ಬಡಗಿಗಳು ಸುಂದರವಾದ ಮರದ ರಥಗಳನ್ನು ಮಾಡುತ್ತಿದ್ದರು. ಇಂಥ ಹಲವಾರು, ರಥಗಳು ಇವೆಯಾದರೂ ಅವುಗಳನ್ನು ಕಟ್ಟಿದ ಬಡಗಿಗಳ ಹೆಸರು ದೊರೆಯುವುದಿಲ್ಲ.

ವಿಜಯನಗರ ಕಾಲದಲ್ಲಿ ರಥೋತ್ಸವದ ಬಗ್ಗೆ ವಿದೇಶಿ ಪ್ರವಾಸಿಗರ ವರದಿ ಮತ್ತು ಸಾಹಿತ್ಯ ಕೃತಿಗಳಲ್ಲಿ ದಾಖಲೆಗಳಿವೆ. ಹಂಪಿಯಲ್ಲಿನ ವಿರೂಪಾಕ್ಷ ಬಜಾರನ್ನು ವಿರೂಪಾಕ್ಷಪುರ, ಪಂಪಾರಥ, ರಥಬೀದಿ ಹಂಪೆ ಬಜಾರು, ತೇರುಬೀದಿ ಇತ್ಯಾದಿಯಾಗಿ ಕರೆಯಲಾಗಿದೆ. ಇಲ್ಲಿಯ ಬಜಾರುಗಳು ಈ ದೇವಾಲಯದಷ್ಟೇ ಹಳೆಯದು. ಆದರೆ ಆರಂಭದಲ್ಲಿ ಕಾರ್ಯ ನಿರ್ವಹಿಸುತ್ತಿದ್ದುದು ಕೇವಲ ತೇರು ಬೀದಿಯಾಗಿ ಮಾತ್ರ.[೧೦೬] ಈ ಬೀದಿಯನ್ನು ಯಾವ ಉದ್ದೇಶಕ್ಕಾಗಿ ನಿರ್ಮಿಸಲಾಯಿತೆಂದು ಸಾಹಿತ್ಯ ಕೃತಿಯಲ್ಲಿ ಉಲ್ಲೇಖವಿದೆ.

ಪಂಪಾಪತಿಯ, ಮನೋರಥರೂಪ ತಾನಾದ
ಪೆಂಪಂ ಜಗಕ್ಕರುವೆ ತೋರಿದನೋ ಎಂಬಂತೆ
ಸೋಂಪೇರಿ ಮೇರೆಸುವ ವಿರೂಪಾಕ್ಷನತುಳರಥ ಪಂಪಾಂಬಿಕೆ ರಥವನು
ಝುಂಪಳಿಪ ನಾನಾ ರಸದ ಗಣಾಧಿಪ ರಥವ
ಗುಂಪರಿವರಳವಲ್ಲವನೆ ರೂಢಿವಡಿಸಿದನ
ದೇಂ ಪ್ರತಾಪನೂ ದೇವರಾಜೇಂದ್ರನರುವವರ ಚರಣಾಂಬುಜಕ್ಕೆ ಶರಣು.[೧೦೭]

ಇಲ್ಲಿ ದೇವರಿಗೆ ನಡೆಯುತ್ತಿದ್ದ ರಥೋತ್ಸವದ ಕುರಿತು ಹೇಳಲಾಗಿದೆ. ಇಲ್ಲಿ ವಿರೂಪಾಕ್ಷ, ಪಂಪಾಬಿಕೆ ಮತ್ತು ಗಣಾಧಿಪ(ಗಣೇಶ) ಎಂಬ ಮೂರು ರಥಗಳನ್ನು ಎಳೆಯುತ್ತಿದ್ದುದನ್ನು[೧೦೮] ಲಕ್ಕಣದಂಡೇಶನು ಹೇಳಿದ್ದಾನೆ.

ಲಿನ್‌ಸ್ಕೊಟೀನ್ ಕ್ರಿ.ಶ. ೧೫೮೩ರಲ್ಲಿ ನರಸಿಂಗ ಸಾಮ್ರಾಜ್ಯದ ಕೋರಮಂಡಲ ಕರಾವಳಿ ಪ್ರದೇಶದಲ್ಲಿ ಒಂದು ಪಗೋಡವಿದ್ದು ಅದು ವೈಭವಯುತ ಹಾಗೂ ಯಾತ್ರಿಕಾ ಸ್ಥಳವಾಗಿದೆ. ಅಲ್ಲಿ ದೊಡ್ಡ ಬಂಡಿ ಅಥವಾ ಗಾಡಿ (ರಥ)ಯಿದೆ. ಅತೀ ದೊಡ್ಡದಾಗಿರುವ ಮತ್ತು ಭಾರವಿರುವ ಅದನ್ನು ಎಳೆಯಲು ೩-೪ ಆನೆಗಳಿಗೂ ಕಠಿಣದ ಅದರೂ ಜಾತ್ರೆಯಲ್ಲಿ ಅದನ್ನು ತರುತ್ತಿದ್ದರು. ಅದಕ್ಕೆ ಹಲವು ಹಗ್ಗಗಳನ್ನು ಕಟ್ಟಿ ಊರ ಜನರೆಲ್ಲರೂ ಭಕ್ತಿಯಿಂದ ಬಲವಾಗಿ ಎಳೆಯುತ್ತಿದ್ದರು. ಆ ರಥದ ಮೇಲೆ ಒಂದು ಪುಟ್ಟ ಗುಡಿಯಿದ್ದು ಅಲ್ಲಿ ದೇವರ ಮೂರ್ತಿಯಿರುತ್ತದೆ. ಅದರ ಬಳಿ ರಾಜನ ಪತ್ನಿಯರು ವಾದ್ಯಗಳನ್ನು ಮಧುರವಾಗಿ ನುಡಿಸುತ್ತಿದ್ದರು.[೧೦೯] ಕೊಂತಿಯೊಂದಿಗೆ ಕೊಡ ಊರಿನ ಜನರೆಲ್ಲರೂ ಗಂಡು ಹೆಣ್ಣು ಬೇದವಿಲ್ಲದೆ ರಥದ ಹಗ್ಗಗಳನ್ನು ಎಳೆದರು ಎಂದು ಹೇಳುತ್ತಾನೆ. ಪಾಯೇಸ್ ಹೇಳುವಂತೆ ನರ್ತಕಿಯರು ರಥಗಳ ಮುಂದೆ ಹೋಗುತ್ತಿದ್ದರು ಎಂದು ಹೇಳುತ್ತಾನೆ. ಮತ್ತೊಬ್ಬ ಕ್ರೈಸ್ತ ಮತಸ್ಥ ಎಮ್ಯುನ್ಯುಯಲ್-ಡಿ-ವೇಗಾ ತಾನು ಚಂದ್ರಗಿರಿಯಿಂದ ಬರೆದ ಪತ್ರದಲ್ಲಿ ಕರಾವಳಿ ಭಾಗದಲ್ಲಿ ಹೇಗೆ ರಥೋತ್ಸವಗಳು ನಡೆಯುತ್ತಿತ್ತು, ಎಂದು ಸ್ತ್ರೀಯರು ಸರ್ವಾಲಂಕೃತವಾಗಿ ಕೈಗಳಲ್ಲಿ ದೀಪ ಹಿಡಿದಿದ್ದರು, ಸಾಮಾನ್ಯ ಜನ ದೀಪಹಿಡಿದು ರಥ ಹಿಂಬಾಲಿಸುತ್ತಿದ್ದರು.[೧೧೦] ಎಂದು ಹೇಳಿದ್ದಾನೆ. ಪಿಯಟ್ರೊಡೆಲ್ಲಾ ವಾಲೆ ಇಕ್ಕೇರಿಯಲ್ಲಿ ರಥೋತ್ಸವ ಕಂಡು ಹೀಗೆ ಬರೆದಿದ್ದಾನೆ. ದೇವಾಲಯದ ಎದುರುಗಡೆ ನಾನು ದೊಡ್ಡ ರಥವನ್ನು ನೋಡಿದೆ. ಅದರಲ್ಲಿ ದೇವರ ವಿಗ್ರಹಗಳನ್ನಿಟ್ಟು ಹಬ್ಬಗಳ ಸಂದರ್ಭದಲ್ಲಿ ಮೆರವಣಿಗೆ ಮಾಡುತ್ತಾರೆ. ಅಲ್ಲಿ ಹಲವು ಜನ ನರ್ತಕಿಯರಿದ್ದರು. ನನ್ನ ಕೈಗೇಣೆನ ೧೪ರಷ್ಟು ದೊಡ್ಡ ಚಕ್ರಗಳಿದ್ದವು. ಸಂಕ್ಷಿಪ್ತವಾಗಿ

ಹೇಳಬೇಕೆಂದರೆ ಇಂಥ ಅಪೂರ್ವ ದೊಡ್ಡ ರಥ ಚಲಿಸಬೇಕಾದರೆ ರೋಮ್‌ನ ಸಿರದಗಿಲಿಯಾ ಅಥವಾ ಬಾಬ್ಯುನೋದ ಅತಿ ಅಗಲದ ರಸ್ತೆಗಳು ಬೇಕಾಗುತ್ತವೆ.[೧೧೧]

ಬಡಗಿಗಳು ರಥಗಳನ್ನು ನಿರ್ಮಿಸುತ್ತಿದ್ದು, ಅವುಗಳು ಸಾಮ್ರಾಜ್ಯದ ವಿವಿಧ ಭಾಗಗಳಲ್ಲಿ ಇರುತ್ತಿದ್ದವು. ಅವನ್ನು ದೇವರ ಉತ್ಸವದ ಸಂದರ್ಭದಲ್ಲಿ ಎಳೆಯುತ್ತಿದ್ದರು. ಕುರಿತು ಹಲವು ಶಾಸನೋಕ್ತ ದಾಖಲೆಗಳಿವೆ. ಕ್ರಿ.ಶ. ೧೪೯೫ರ ಮಹಾಮಂಡಳೇಶ್ವರ ತಿಮ್ಮಯ್ಯದೇವ ಮಹಾ ಅರಸನ ಮಗ ನರಸಯ್ಯದೇವ ಮಹಾ ಅರಸನು ೨೮ ಗದ್ಯಾಣವನ್ನು ಸಿಂಹಟಿಯ ಭೈರವ ದೇವರ ಸೇವಾರ್ಥ ಮತ್ತು ೯ ದಿನದ ರಥೋತ್ಸವಕ್ಕಾಗಿ ನೀಡಿದ.[೧೧೨] ಕ್ರಿ.ಶ. ೧೫೬೨ರ ದಾಖಲೆಯು ತಿಳಿಸುವಂತೆ ಕೃಷ್ಣಪ್ಪ ನಾಯಕನ ದಲ್ಲಾಳಿಯಾದ ಬೇಲೂರು ಕಾಳಪ್ಪನ ಮಗ ಮಾರ್ಗ ಸಹಾಯ ನಾಯಕನು ಹರಿಹರ ದೇವರ ಆಲಯದ ೧೫ ದಿನದ ಚೈತ್ರ ಶುದ್ಧ ರಥೋತ್ಸವಕ್ಕಾಗಿ ಅಗತ್ಯವಾದುದೆಲ್ಲವನ್ನೂ ಉಚಿತವಾಗಿ ಕೊಟ್ಟು ಎಲ್ಲ ಸುಂಕಗಳಿಂದ ಮುಕ್ತಗೊಳಿಸಿದ.[೧೧೩] ಎಂದು ತಿಳಿದುಬರುತ್ತದೆ.

ಕ್ರಿ.ಶ. ೧೫೧೮ರ ದಾಖಲೆ ಪ್ರಕಾರ ಕೃಷ್ಣದೇವರಾಯನ ಕಾಲದಲ್ಲಿ ಎರ್ರೆಮಾಂಚಿ ತುಎಲುಕಣ್ಣ ನಾಯಕನು ಸೇಲೆಂ ಜಿಲ್ಲೆಯ ಅರ್ರಗಲ್‌ನ ರಾಮೇಶ್ವರ ದೇವಾಲಯಕ್ಕೆ ರಥ ನಿರ್ಮಿಸಿಕೊಟ್ಟ. ಇವನ ಬಿರುದುಗಳಲ್ಲೊಂದಾಗಿದ್ದ 'ನರಲೋಕಗಂಡನ್' ಎಂದು ಆ ರಥಕ್ಕೆ ಹೆಸರು ಇಡಲಾಗಿತ್ತು.[೧೧೪] ಅಂದು ಅರಸರುಗಳು ಸಾಮಂತರಷ್ಟೆ ರಥಗಳನ್ನು ನಿರ್ಮಿಸುತ್ತಿರಲಿಲ್ಲ. ತಿನ್ನವೆಲ್ಲಿ ಜಿಲ್ಲೆಯ ಶಾಸಬ ಶ್ರೀ ವೈಕುಂಟಂ ತಾಲ್ಲೂಕಿನ ಕಕೋಳಿನಾಥ ದೇವಾಲಯದ ಪವಿತ್ರ ರಥವು ಹಾಳಾದ ಸ್ಥಿತಿಯಲ್ಲಿದ್ದಾಗ ಹೊಸ ರಥ ಹೈಯಾಟುಕ್ಕುಡಿಯ ವ್ಯಾಪಾರಿಗಳು ಮಾಡಿಸಿಕೊಟ್ಟರು ಮತ್ತು ಪೆರನಲ್ಲೂರಿನ ಹಳ್ಳಿಯ ಆದಾಯ ಅಂದರೆ ೫೦ ಪಣಂ ಮತ್ತು ಭತ್ತ ೫೦೦ ಕೊಳಗ ವಾರ್ಷಿಕ ರಥೋತ್ಸವ ಖರ್ಚು ನಿರ್ವಹಣೆಗೆ ನೀಡಿದರು.[೧೧೫] ಎಂಬ ಮಾಹಿತಿಯಿದೆ.

ಕುಹೈಯಾರ್‌ನ ಕೈಕೋಳರ್ ಆದ ಕಣ್ಣನ್‌ನು ಸೇಲಂ ಜಿಲ್ಲೆಯ ಆರಗಳೊರ್‌ನ ಕಾಮೇಶ್ವರ ದೇವಾಲಯದಲ್ಲಿ ರಥೋತ್ಸವ ಜಾರಿಗೆ ತಂದಾಗ ದೇವಾಲಯದ ನಿರ್ವಾಹಕರು ಸೋಪಾನ ಮಂಟಪದಲ್ಲಿ ಸೇರಿ ಅವನಿಗೆ ಕಾಣಿಕೆಯಾಗಿ ಕೊಡಲು ನಿರ್ಧರಿಸಿದರು.[೧೧೬] ಕ್ರಿ.ಶ. ೧೫೪೫ರಲ್ಲಿ ರಾಜ ಮಹಾಮಂತ್ರಿಯು ವಾರಣಾಸಿಯ ವರದಪ್ಪಣ್ಣನ ಕಾರ್ಯನಿರ್ವಹಣೆಗೆ ಪ್ರತಿನಿಧಿಯಾಗಿದ್ದನು. ಅಚ್ಯುತರಾಯನ ಮಂತ್ರಿ ವರದಪ್ಪು ಅವನ ಪ್ರತಿನಿಧಿ ಕಣ್ಣಪ್ಪನಾಯಕ ಇವನ ಮಗ ತಮ್ಮನಾಯಕನು ರಥ ಮಾಡಿಸಿದ. ವಹ್ನಿಪುರದ ದೇವಹನುಮಂತೇಶ್ವರ ಉಮಾ ಸಂಕಂಡೇಶ್ವರ, ವಿಘ್ನೇಶ್ವರ ಮತ್ತು ಇತರ ಸಹದೇವರುಗಳಿಗಾಗಿ ೯೦೦ ಅಡಿಕೆ ಮರ ಮತ್ತು ಭತ್ತದ ಗದ್ದೆಗಳನ್ನು ದಾನ ಮಾಡಿದ. ಈ ಶಾಸನ ಹೇಳುವಂತೆ ತಿಪ್ಪಮ್ಮ ಎಂಬಾಕೆ ದಾನ ಮಾಡಿದ್ದಳು.[೧೧೭] ಹಂಪಿಯ ವಿರೂಪಾಕ್ಷ ದೇವಾಲಯದ ಮುಂದೆ ಸಂಪ್ರಸಿದ್ಧ ವಿರೂಪಾಕ್ಷ ಬಜಾರ ಇದೆ. ಇಲ್ಲಿ ಪಂಪಾ ವಿರೂಪಾಕ್ಷರನ್ನು ಹೊತ್ತ ರಥ ಮತ್ತು ವಿದ್ಯಾರಣ್ಯರ ಗುರುಗಳದೆಂದು ಹೇಳುವ ಚಂದ್ರಮೌಳೇಶ್ವರ ರಥ ನೆರವೇರುತ್ತವೆ. ವರ್ಷಕ್ಕೊಂದು ಬಾರಿ

ನಡೆಯುವ ಇದು ದವನದ ಹುಣ್ಣಿಮೆಯೆಂದೇ ಪ್ರಸಿದ್ಧವಾಗಿದೆ.[೧೧೮] ಅಂದರೆ ಈ ಬೀದಿಯು ನಿರ್ಮಾಣವಾದುದು ರಥೋತ್ಸವಗಳಿಗೆಂದೇ, ಹಿಂದೆ ಈ ಬೀದಿಯಲ್ಲಿ ರಥೋತ್ಸವಗಳ ಜೊತೆಗೆ ಹಬ್ಬದಾಚರಣೆಯ ಸಂದರ್ಭದಲ್ಲಿ ಇನ್ನಿತರ ಉತ್ಸವಗಳು ಮೆರವಣಿಗೆಗಳು ನಡೆಯುತ್ತಿದ್ದವು.[೧೧೯]

ಪ್ರೌಢದೇವರಾಯನು ತನ್ನ ಕಾಲಕ್ಕೆ ರಥ ಎಳೆಯುತ್ತಿದ್ದ ಮುಖ್ಯ ಬೀದಿಯನ್ನು ಅಗಲ ಮಾಡಿಸಿ ರಥೋತ್ಸವದ ಕಾಲಕ್ಕೆ ಗದ್ದಲಗಳಾಗದಂತೆ ನೋಡಿಕೊಂಡನು.[೧೨೦] ಶ್ರೀ ಕೃಷ್ಣದೇವರಾಯನ ಬಾಲಕೃಷ್ಣ ದೇವರ ಮೂರ್ತಿಯನ್ನು ಪ್ರತಿಷ್ಠಾಪಿಸುವ ಕಾಲದಲ್ಲಿ ರಥೋತ್ಸವಕ್ಕೆ ಅಲ್ಲಿ ವಾಸಿಸುವ ಬ್ರಾಹ್ಮಣರಿಗೆ ಹೊಸೂರು, ಮುದಲಾಪುರ, ದೇವಲಾಪುರ, ಕಳಸಾಪುರ ಮುಂತಾದ ಗ್ರಾಮಗಳನ್ನು ಉಂಬಳಿಯಾಗಿ ಕೊಡಲಾಯಿತು.[೧೨೧] ಅದೇ ರೀತಿಯಾಗಿ ರಾಜಧಾನಿಯಲ್ಲಿರುವ ವಿಠಲೇಶ್ವರ ದೇವರಿಗೆ ಪಾಲ್ಗುಣ ಮಾಸದ ರಥೋತ್ಸವ, ವೈಶಾಖ ಮಾಸದ ರಥೋತ್ಸವ ಮೊದಲಾದ ಕಾರ್ಯಗಳಿಗೆ ಹರಿಹರಪುರ, ವಿರೂಪಾಕ್ಷಪುರ ಮುಂತಾದ ಹಳ್ಳಿಗಳನ್ನು ಉಂಬಳಿಯಾಗಿ ಕೊಟ್ಟಿರುವನು.

ಕೃಷ್ಣದೇವರಾಯನ ಕಾಲದಲ್ಲಿ ರಾಯಸ ಅಪ್ಪಯ್ಯರಸಯ್ಯನವರು ಕಂಬದೂರು ಶ್ರೀ ಮಲ್ಲಿಕಾರ್ಜುನ ದೇವರ ರಥೋತ್ಸವಕ್ಕೆ ರಾಯಸ ಕುಂದುರೆಪೆಯ ರಾಜ್ಯದ ಕಂಬದೂರು ಪಡುವಣದ ಸ್ಥಳ ಪಾಲುವಟಿ ಎಂಬ ಗ್ರಾಮವನ್ನು ಕ್ರಿ.ಶ. ೧೫೨೫ರಲ್ಲಿ ಉಂಬಳಿಯಾಗಿ ಕೊಡಲಾಯಿತು.[೧೨೧ಅ] ಹಾಗೆಯೆ ಲೇಪಾಕ್ಷಿಯ ನಂದಿಲಕೆಶೆಟ್ಟಿ ಮುದ್ದಮಾಂಬಾವರ ಕುಮಾರನಾದ ಪೆನುಗೊಂಡದ ವಿರುಪಣ್ಣಯ್ಯನವರ ತಮ್ಮಂದಿರೂ ವಿರಣ್ಣನಾಯಕರೂ ಈ ಪೆನುಗೊಂಡ ರಾಜ್ಯದಲ್ಲಿ ಬರುವ ಲಕ್ಕಣ್ಣಾಪುರದ ಮಹಾಲಕ್ಷ್ಮೀ ದೇವಾಲಯಕ್ಕೆ ಪ್ರತಿವರ್ಷ ಭಕ್ತರು ಕೊಡುವ ದೇವರ ಕಾಣಿಕೆಯಲ್ಲಿ ಅರ್ಧಭಾಗವನ್ನು ರಥೋತ್ಸವ ಆಚರಿಸಲು ಕೊಡಲಾಗುತ್ತಿತ್ತು. ರಥ ತಯಾರಿಕೆ ಬಗ್ಗೆ ಕ್ರಿ.ಶ. ೧೮೫೯ರಲ್ಲಿ ಪಾಂಡವಪುರ ಕನ್ನಂಬಾಡಿ ಗ್ರಾಮದಲ್ಲಿರುವ ಮಹಾಲಕ್ಷ್ಮಿ ಗುಡಿಗೆ ಸೇರಿದ ರಥವನ್ನು ಧರ್ಮಲಿಂಗಾಚಾರಿ ಎನ್ನುವವನು ರಚನೆ ಮಾಡಿದ್ದಾನೆ. ಶಾಸನವು ಧರ್ಮಲಂಗಾಚಾರಿ[೧೨೨] ನಿರ್ಮಿತ ಎಂದು ಮಾತ್ರ ಹೇಳಿದೆ. ಇದನ್ನು ಭೋಗೇಗೌಡನ ಪತ್ನಿಯು ಮಹಾಲಕ್ಷ್ಮಿ ಶ್ರೀ ಮಹಾಕಾಳಿ ಅಮ್ಮನವರ ಸೇವಾರ್ಥ ಎಂಬುದಾಗಿ ಮಾಡಿಸುತ್ತಾಳೆ. ರಥಕಾರ ಧರ್ಮಲಂಗಾಚಾರಿಯು ತನ್ನ ಅಪರೂಪದ ಕೃತಿಯನ್ನು ಬೊಂಬೆರಥ ಎಂದು ಕರೆದಿದ್ದಾನೆ. ಬೆಂಗಳೂರಿನ ರಥ ಶಿಲ್ಪಿ ಶ್ರೀ ಮನೋಹರ ಶಂಕ್ರಪ್ಪ ಬಡಿಗೇರ ಅವರು ಹಂಪೆಯ ಪಂಪಾಂಬಿಕಾ ದೇವಿಯ ರಥ ತಯಾರಿಸಲು ಅವರ ಕಲೆಯನ್ನು ಮೆಚ್ಚಿ ಲಲಿತಾಕಲಾ ಅಕಾಡೆಮಿಯು ಪ್ರಶಸ್ತಿ ನೀಡಿ ಗೌರವಿಸಿದುದು ಗಮನಾರ್ಹ.

ವಿಜಯನಗರ ಕಾಲದ ರಥೋತ್ಸವಗಳನ್ನು ಗಮನಿಸಿದರೆ ಕುಶಲ ಬಡಗಿಗಳು ತುಂಬಾ ಸಂಖ್ಯೆಯಲ್ಲಿರಬೇಕು. ಇವರು ದೇವಸ್ಥಾನ, ಅರಮನೆ, ಶ್ರೀಮಂತರ ಅಧಿಕಾರಿಗಳ ಪೀಠೋಪಕರಣಗಳನ್ನು ಮಾಡುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಅರಮನೆಯ ಪೀಠೋಪಕರಣಗಳು ಎಂದರೆ ಸಾಮಾನ್ಯವಾಗಿ ಅಧಿಕ ಸಂಖ್ಯೆಯಲ್ಲಿರುತ್ತವೆ. ಅದಕ್ಕಾಗಿಯೆ ಪ್ರತ್ಯೇಕ ಬಡಗಿಗಳನ್ನು ನೇಮಿಸಿಕೊಂಡಿರುವ ಸಾಧ್ಯತೆಯೂ ಇತ್ತು. ಹಾಗೆಯೇ ದೇವಸ್ಥಾನಕ್ಕೆ

ಸಂಬಂಧಿಸಿದ ವಸ್ತುಗಳನ್ನು ತಯಾರಿಸಲು ಇವರೇ ನೇಮಕಗೊಂಡಿರಬಹುದು. ಹೀಗೆ ಕುಶಲ ಬಡಗಿಗಳು ಅಂದು ಸಾಮ್ರಾಜ್ಯಕ್ಕೆ ಅವಶ್ಯಕವಾಗಿ ಬೇಕಾದವರಾಗಿದ್ದರು. ಅರೆಕುಶಲ ಬಡಗಿಗಳು ಸಾಮಾನ್ಯರ ಮನೆಯ ಉಪಕರಣಗಳನ್ನು ತಯಾರಿಸುವುದರಲ್ಲಿ ನಿರತರಾಗಿದ್ದರು, ಅದರಲ್ಲೂ ಮುಖ್ಯವಾಗಿ ಕೃಷಿ ಉಪಕರಣಗಳಾಗಿದ್ದವು. ಬಡಗಿಗಳು ಯುದ್ಧದಲ್ಲಿ ಉಪಯೋಗಿಸುತ್ತಿದ್ದ ಮರದ ಆಯುಧಗಳನ್ನು ತಯಾರು ಮಾಡುತ್ತಿದ್ದ ವಿಷಯವನ್ನ ನಂಜುಂಡನ ಕುಮಾರ ರಾಮನ ಚರಿತ್ರೆಯು ಪ್ರಸ್ತಾಪಿಸಿದೆ. ಸಂಶೋಧನೆ ಬಲಿನ ಪೆಟಲ ಬೆಣೆ, ಡೆಂಕಣಿಗ್ಯೆ, ಪಂದಿದತೆ, ತಿರುಗಣಿ, ಭೀಮಗದೆ[೧೨೩] ಮೊದಲಾದ ಮರದ ಆಯುಧಗಳನ್ನು ಬಡಗಿಗಳು ಕೆತ್ತಿದರು ಎಂದು ಹೇಳುತ್ತದೆ. "ಕೆತ್ತುವಾ ಬಡಗಿಗಳಿಂದಾ ದುರ್ಗ ಸಲೆ ಮೆರೆದುದು" ಎಂಬ ಉಕ್ತಿಯು ಬಹುಶಃ ಯುದ್ಧದ ಆಯುಧಗಳನ್ನು ಶತೃಗಳಿಂದ ರಕ್ಷಿತವಾದ ರಹಸ್ಯವಾಗಿ ದುರ್ಗದ ಒಳಗೆ ಇದ್ದುಕೊಂಡು ನಿರ್ಮಾಣ ಮಾಡುತ್ತಿದ್ದರು ಎಂಬ ಅಂಶವನ್ನು ಹೇಳುತ್ತಿದೆ. ಬಡಗಿ ಕಸುಬು ಸಾಮ್ರಾಜ್ಯದ ಕೆಲಸಕಾರ್ಯಗಳಿಗೆ ಅಗತ್ಯವಾದುದಕ್ಕಿಂತ ಕೃಷಿ ಕಾರ್ಯಗಳಿಗೆ ತುಂಬಾ ಅವಶ್ಯವಾಗಿತ್ತು. ಇವರು ಆಯಾಗಾರ ಗುಂಪಿಗೆ ಸೇರಿದ್ದರು. ನಿಗಧಿ ಪ್ರಕಾರ ಸುಗ್ಗಿಯಲ್ಲಿ ರೈತರು ತಮ್ಮ ಕಣದಲ್ಲಿಯೇ ರಾಶಿಯಿಂದ ಕಾಳುಕಡಿಯನ್ನು ಸಲ್ಲಿಸುವುದು ವಾಡಿಕೆ. ಆಯಾಪದ್ಧತಿಯು ವಿಜಯನಗರ ಕಾಲದಲ್ಲಿ ಪ್ರಮುಖವಾಗಿತ್ತು. ಗ್ರಾಮ ಸಂಸ್ಕೃತಿಯ ಅಂಗವಾಗಿ ಬೆಳೆದು ಬಂದ ಆಯಾಗಾರರೆಂದು ಪ್ರಸಿದ್ಧರಾಗಿರುವ ಗ್ರಾಮೀಣ ಕಸುಬುದಾರರಲ್ಲಿ ಬಡಿಗೇರರು ಮುಖ್ಯವಾಗಿ ಕಾಣಬರುತ್ತಾರೆ.

೪. ಅಕ್ಕಸಾಲೆ

ಕರ್ನಾಟಕದಲ್ಲಿ ಬಹು ವ್ಯಾಪಕವಾಗಿ ರೂಢಿಯಲ್ಲಿರುವ, ಸಾಮಾನ್ಯವಾಗಿ ಚಿನ್ನದ ಕೆಲಸ ಮಾಡುವ ಕೆಲಸಗಾರರನ್ನು ಅಕ್ಕಸಾಲೆ ಎಂದು ಕರೆಯುತ್ತಾರೆ. ಅಗಸಾಲೆ, ಅರ್ಕಸಾಲೆ, ಅಕ್ಷಶಾಲಿನ್, ಅಕ್ಷಸಾಲಿನ್, ಅಖ(ಕ್ಷ)ಸಾಲಿನ್ ಸಮಾನಾರ್ಥಕ ನಾಮಪದಗಳು. ಇತರ ಭಾಷೆಗಳಲ್ಲಿ ಅಕ್ಕಚಾಲ್ಯೆ(ತಮಿಳು), ಅಗಸಾಲಿ ಅಥವಾ ಅಗಸಾಲೆ(ತೆಲಗು), ಅಕಸಾಳೇ(ಮರಾಠಿ) ಎಂದು ಗುರುತಿಸಲಾಗಿದೆ.

ಕನ್ನಡದಲ್ಲಿ ಈ ಪದದ ಬಳಕೆಯು ಕ್ರಿ.ಶ. ೧೧ನೆಯ ಶತಮಾನದಿಂದಲೂ ಶಾಸನಗಳಲ್ಲಿ ಹಾಗೂ ಕನ್ನಡ ಸಾಹಿತ್ಯ ಕೃತಿಗಳಲ್ಲಿ ಲಭಿಸುತ್ತದೆ. ಈ ಶಬ್ದದ ಮೊದಲ ಅರ್ಥ ಚಿನ್ನ ಮತ್ತು ಬೆಳ್ಳಿ ಕೆಲಸಮಾಡುವವನು ಎಂದು. ಸಂಸ್ಕೃತ ಶಾಸನಗಳಲ್ಲಿ ಕ್ರಿ.ಶ. ೮–೯ನೆಯ ಶತಮಾನದಿಂದಲೇ ಅಕ್ಷಶಾಲಿನ, ಅಕ್ಷಸಾಲಿನ್ ಮತ್ತು ಅಖ(ಕ್ಷ)ಸಾಲಿನ್[೧೨೪] ಎಂಬ ಪದಗಳು ಬಳಕೆಯಲ್ಲಿವೆ.

ಚಿನ್ನ ಮತ್ತು ಬೆಳ್ಳಿಯ ಆಭರಣಗಳನ್ನು ತಯಾರಿಸುವ ಕಸುಬಿಗೆ ಸಾಮಾನ್ಯವಾಗಿ ಅಕ್ಕಸಾಲೆ ಕಸುಬು ಎನ್ನುವರು. ಇದಕ್ಕೆ ಗ್ರಾಮೀಣರು ಪತ್ತಾರಿಕೆ ಎಂದು ಕರೆಯುವುದು ವಾಡಿಕೆ. ಇವರು ವಿಶ್ವಕರ್ಮ ವಂಶದವರಾಗಿದ್ದಾರೆ. ಈ ವಂಶದಲ್ಲಿ ಕಮ್ಮಾರ, ಬಡಿಗ, ಕಂಚುಗಾರ, ಶಿಲ್ಪಿಗಳು ಬರುತ್ತಾರೆ. ಅಕ್ಕಸಾಲಿ, ಅರ್ಕಸಾಲೆಯ ಮೂಲಪದ ಅರ್ಕ ಎಂದರೆ ಅರಗು

ಅರಗು ಕೂಡಿಸುವ ಕರಗಿಸುವ ಅಥವಾ ಭಟ್ಟಿ ಇಳಿಸಿ ಆಭರಣಗಳಿಗೆ ತುಂಬುವ ಸಾಲೆಯೇ ಅರ್ಕಸಾಲೆಯಾಗಿ ಕೌಟಿಲ್ಯನು ಬಂಗಾರದ ಒಡವೆ ಮಾಡುವ ಶಾಲೆಗೆ ಅಕ್ಷಶಾಲೆ[೧೫] ಎಂದಿದ್ದಾನೆ. ಅದನ್ನೆ ಈಗ ಪ್ರತ್ಯೆಯ ಸೇರಿ ಅಕ್ಕಸಾಲೆಯಾಗಿರಬೇಕೆಂದು ಊಹಿಸುತ್ತಾರೆ. ಈ ಕಸುಬುದಾರರಿಗೆ ಅಕ್ಕಸಾಲಿಗ, ಓಜರು, ಚಿನಿವಾರರು, ರಥಕಾರರು, ಸೊನೆಗಾರರು, ಚಿನ್ನಾಚಾರಿ, ಆಚಾರಿ, ಆಚಾರ್ರು, ಅರ್ಕಸಾಲಿಗ, ಪತ್ತಾರ, ವಿಶ್ವಕರ್ಮ[೧೬] ಮುಂತಾದ ಹೆಸರುಗಳಿಂದ ಕರೆಯಲ್ಪಡುತ್ತಾರೆ.

ಬಂಗಾರ, ಬೆಳ್ಳಿ ಜೊತೆಗೆ ವಜ್ರ, ರತ್ನ, ಮಣಿ, ಮುತ್ತು ಮೊದಲಾದ ಅಮೂಲ್ಯ ಅಭರಣಗಳನ್ನು ಸಿದ್ಧಪಡಿಸುವ ಮತ್ತು ಸೂಕ್ಷ್ಮ ಕೆಲಸ ಮಾಡುವುದರಲ್ಲಿ ಇವರು ನಿಪುಣರು. ಚಿನಿವಾರರ ಬಗೆಗೆ ಕನ್ನಡ ನಿಘಂಟುಗಳಲ್ಲಿ ಚಿನಿವರ, ಚಿನಿವಲ, ಚಿನಿವಾರ, ಚೆನಿವಾಲ, ಚಿನ್ನವಾರ, ಚಿನ್ನವಾಲ, ಚಿನ್ನಿವಾರ, ಚಿನ್ನದ ವ್ಯಾಪಾರಿ ನಾಣ್ಯಗಳ ವಿನಿಮಯ ಮಾಡಿಕೊಡುವವನು, ಸರಾಫ, ರತ್ನ ವ್ಯಾಪಾರಿ, ಚಿನವಾರ, ಚಿನವರ, ಚಿನವಲ, ಚಿನಿವಾಲ, ಚೆನ್ನವಾರ, ಚಿನ್ನವಾಲ[೧೭] ಚಿನ್ನಿವಾರ ಎಂದರೆ ಅಕ್ಕಸಾಲೆ, ಅಕಸಾಲ, ಅಕ್ಕಸಾಲಿ, ಅಗಸಾಲ, ಆಗಸಾಲೆ, ಅರ್ಕಸಾಲೆ, ಅಕ್ಕಸಾಲಿಗ, ಚಿನ್ನಬೆಳ್ಳಿ ಮುಂತಾದವುಗಳ ಕೆಲಸ ಮಾಡುವವನು[೧೮] ಎಂದು ಕನ್ನಡ ನಿಘಂಟು ಮೊದಲ ಸಂಪುಟದಲ್ಲಿ ಅರ್ಥೈಸಲಾಗಿದೆ.

ಪ್ರಾಚೀನ ಕಾಲದ ನಾಗರಿಕತೆಯನ್ನು ಗುರುತಿಸುವಾಗ ಅಕ್ಕಸಾಲಿಗರು ರಚಿಸಿರುವ ಆಭರಣ ವಿನ್ಯಾಸಗಳ ಪರಿಗಣಿಸಲ್ಪಡುತ್ತದೆ. ಪ್ರಾಚೀನ ಶಿಲ್ಪಗಳಲ್ಲಿ, ಚಿತ್ರಗಳಲ್ಲಿ ಅವರ ರಚನಾ ಕೌಶಲ್ಯ ವ್ಯಕ್ತವಾಗಿದೆ. ಅನೇಕ ವೇಳೆ ಶಿಲ್ಪಗಳಲ್ಲಿ ವಸ್ತ್ರಕ್ಕಿಂತಲೂ ಹೆಚ್ಚಾಗಿ ಧರಿಸಲಾಗಿರುವ ಆಭರಣಗಳನ್ನು ಕಾಣಬಹುದಲ್ಲದೆ. ಅವುಗಳ ವಿನ್ಯಾಸವೂ ಕಾಲಕಾಲಕ್ಕೆ ಬದಲಾಗಿರುವುದನ್ನು ಗಮನಿಸಲಾಗಿದೆ.

ಕ್ರಿ.ಪೂ. ೨೫೦೦ರ ಹಿಂದೂ ಕಣಿವೆ ನಾಗರಿಕತೆಯ ಸಮಯದಲ್ಲಿ ಈ ಕಸುಬಿನವರು ಬೆಳ್ಳಿ-ಬಂಗಾರ ಮತ್ತು ತಾಮ್ರದ ಆಭರಣಗಳನ್ನು ತಯಾರಿಸಿದ್ದಾರೆ. ಇದು ಅವರ ಪ್ರಾಚೀನತೆಗೆ ಸಾಕ್ಷಿ. ಕ್ರಿ.ಪೂ. ೧೫೦೦ನೆಯ ಶತಮಾನದ ಕಾಲದಲ್ಲಿ ಭಾರತಕ್ಕೆ ಬಂದ ಆರ್ಯರೂ ಕೂಡ ಬೆಳ್ಳಿ ಬಂಗಾರದ ಕಸುಬಿನಲ್ಲಿ ನಿಷ್ಣಾತರಾಗಿದ್ದರು.[೧೯] ಅಕ್ಕಸಾಲಿಗರು ಹಾಗೂ ಅವರ ಕಸುಬಿಗೆ ವಿಧಿಸಿದ ನಿಯಂತ್ರಣಗಳ ಬಗೆಗೆ ಮಾಹಿತಿ ಲಭಿಸುತ್ತದೆ.

ವಿಜಯನಗರ ಕಾಲದಲ್ಲಿ ಅಕ್ಕಸಾಲಿಗರ ಕಸುಬು ಪ್ರಮುಖವಾಗಿತ್ತು. ವೀರಪಾಂಚಾಳರೆಂದು ಕರೆದುಕೊಳ್ಳುವ ಐವರಲ್ಲಿ ಇವರು ಒಬ್ಬರಾಗಿದ್ದಾರೆ. ವಿಜಯನಗರ ಪೂರ್ವದಲ್ಲಿ ಈ ಕಸುಬು ಇದ್ದುದರ ಕುರಿತು ಅನೇಕ ಶಾಸನಗಳುಂಟು. ಅವುಗಳು ವಿಜಯನಗರ ಕಾಲದಲ್ಲಿ ಮುಂದುವರೆದುಕೊಂಡುಬಂದಿವೆ.[೨೦] ಅಕ್ಕಸಾಲಿಗರು ತಯಾರಿಸಿದ ಆಭರಣಗಳನ್ನು ಸಂತೆಗಳಿಗೆ ಒಯ್ದು ಮಾರಾಟ ಮಾಡುತ್ತಿದ್ದರು ಎಂಬುದಕ್ಕೆ ಅಕ್ಕಸಾಲಿಗಂ ಹೊಂಗೆ ಹಣಂ.[೨೧] ಸಂತೆಗೆ ಆಯಾ ಕೊಡಬೇಕೆಂದು ಹೇಳುವುದರಿಂದ ಸಂತೆಗಳಿಗೆ ಒಯ್ದು ಮಾರುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ವಿಶ್ವಕರ್ಮರೆಂದು ಕರೆದುಕೊಳ್ಳುವ ಇವರನ್ನು ರಾಜ ಕಮ್ಮಟಗಳಲ್ಲಿ ನೇಮಿಸಿಕೊಳ್ಳುತ್ತಿದ್ದನು.[೨೨] ಅಕ್ಕಸಾಲಿಗರು ತಾವೇ ಪ್ರತ್ಯೇಕವಾಗಿ ಶ್ರೇಣಿಗಳನ್ನು ಸ್ಥಾಪಿಸಿಕೊಂಡಿದ್ದರು. ಉದಾಹರಣೆಗೆ ಅಂತಹ ಶ್ರೇಣಿಯೊಂದು ಕಮ್ಮಟೇಶ್ವರ ದೇವಾಸ್ಥಾನಕ್ಕೆ ಆಯಾ ಕಮ್ಮಟಗಳಲ್ಲಿ ಕೊಡಬೇಕಾದ ಭಾಗವನ್ನು ನಿರ್ಧರಿಸಿದ ವಿಷಯವು ಶಾಸನವೊಂದರಲ್ಲಿದೆ.[೨೩]

ಅಶೇಷ ಕೊತ್ತಳೆಯುವಿಂದ್ದು ಕಮ್ಮಟೇಶ್ವರ ದೇವರ ನಂದಾದೀವಿಗೆ ಬಿಟ್ಟ ದತ್ತಿ ಉಂಡಿಗೆಯ ಕಮ್ಮಟದಲು ತಿಂಗಳಿಗೆ(ಗ) ಒಂದು ಬಿಡಿಗಟ್ಟುಟದಲು ತಿಂಗಳಿಗೆ ಹ ಒಂದು ಪ್ರಾಚೀನ ಲೊಕ್ಕಿಗುಂಡಿ.[೧೩೪] ಒಂದನೆಯ ದೇವರಾಯನ ಕಾಲದಲ್ಲಿ ವೀರಪಾಂಚಾಳರು ರಾಜಾಶ್ರಯವನ್ನು ಪಡೆದವರೆಂದು ತೋರುತ್ತದೆ. ರಾಜಾಸ್ಥಾನದಲ್ಲಿ ಸಿಂಹಾಸನವನ್ನು ತಯಾರಿಸಿದುದಕ್ಕೆ ಪ್ರತಿಫಲವಾಗಿ ಹರಿಹರ ಮಹಾರಾಯನು ಎತ್ತು, ಎಮ್ಮೆ, ಬಂಡಿ, ರತ್ನಾಭರಣ ಇತ್ಯಾದಿಗಳ ಮೇಲಿನ ತೆರಿಗೆಯನ್ನು ಮಾನ್ಯಮಾಡಿದ್ದುದನ್ನು ಒಂದನೆಯ ದೇವರಾಯನು ಸ್ವೀಕರಿಸಿದ ವಿಷಯವನ್ನು ಕ್ರಿ.ಶ. ೧೪೧೮ರ ಶಾಸನ[೧೩೫] ದಾಖಲಿಸುತ್ತದೆ.

ವೀರಪಾಂಚಾಳರಲ್ಲಿ ಒಬ್ಬರಾದ ಅಕ್ಕಸಾಲೆಯವರಿಗೆ ಕ್ರಿ.ಶ. ೧೪೩೦ರ ಒಂದು ಶಾಸನದಲ್ಲಿ ಸಂತೆಯಲ್ಲಿ ಕೊತ್ತು, ಯತ್ತು, ತೊತ್ತು ಕುದುರೆಯನ್ನ ಕೊಂಡಾಗ, ಮಾರಿದಾಗ ಕಬ್ಬಿಣ, ಮರ ಕೆಲಸದವರು ಅಕ್ಕಸಾಲೆ, ಅಗಸ, ನಾವಿಂದ ಹೊಲೆಯ ಮುಂತಾದವರೂ ಮಾನ್ಯವನ್ನು ಸಲ್ಲಿಸಬೇಕು[೧೩೬] ಎಂದು ಶಾಸನದಲ್ಲಿ ಕಟ್ಟಳೆ ವಿಧಿಸಿದ. ಸಂತೆಯ ನಿರ್ಮಾಣ, ನಿರ್ವಹಣೆಯ ಬಗೆಗೆ ತಿಳಿಸುವ ಅಪರೂಪದ ಶಾಸನಗಳಲ್ಲಿ ಇದು ಪ್ರಮುಖವಾಗಿದೆ. ಅಕ್ಕಸಾಲಿಗರ ಕುರಿತು ಅನೇಕ ಸಾಹಿತ್ಯ ಕೃತಿಗಳಲ್ಲಿ ನೊಡುವುದಾದರೆ.

ಅಕ್ಕಸಾಲೆಗಳ ಕಮ್ಮಾಟ
ವಿಕ್ಕಲದಿಹ ಕರ್ಮಗಾರ ಕಲ್ಕುಡಿಗರ್ ಸಾ
ಲಿಕ್ಕಿಹ ಬಡಗಿಗಳಿಂದ
ಸಿಕ್ಕ ಜದತಿ ಕುಶಲರಿರ್ವರಾ ವುರಡಡೆಯೋಳ.[೧೩೭]

ಅಕ್ಕಸಾಲಿಗರು ಪ್ರತ್ಯೇಕ ಕಮ್ಮಟಗಳನ್ನು ನಡೆಸುತ್ತಿದ್ದರು ಎಂದು ತಿಳಿಯುತ್ತದೆ.

ಅಕ್ಕಸಾಲೆಯ ಮಗ ಚಿಕ್ಕವನೆಂದೆನಬೇಡ
ಬೆಕ್ಕು ಬಂದಿಲಿಯ ಹಿಡಿವಂತೆ ಕಮ್ಮಟವ
ಸಿಕ್ಕುತಲೆ ಕಲಿ(ದಿ)ವ ಸರ್ವಜ್ಞ[೧೩೮]

ಈ ಹಿಂದೆ ನೋಡಿದಂತೆ ಕಮ್ಮಟ ಎಂದರೆ ಟಂಕಸಾಲೆ ಎಂದು ಇದರ ನೇತೃತ್ವವನ್ನು ಅಕ್ಕಸಾಲಿಗ ನೋಡಿಕೊಳ್ಳುತ್ತಾನೆ. ಈ ಟಂಕಸಾಲೆಯಲ್ಲಿ ವಿವಿಧ ರೀತಿಯ ನಾಣ್ಯಗಳನ್ನು ಮುದ್ರಿಸುತ್ತಿದ್ದರು. ವಿಜಯನಗರದ ಅರಸರು ಹಂಪಿಯಲ್ಲಿ ಪ್ರಧಾನ ಟಂಕಶಾಲೆಯನ್ನು ಸ್ಥಾಪಿಸಿದ್ದರು. ರಾಜ್ಯದ ಇತರ ಭಾಗಗಳಲ್ಲಿ ಪ್ರಾದೇಶಿಕ ಟಂಕಶಾಲೆಗಳನ್ನು ಅಳವಡಿಸಿದ್ದರು. ಹೀಗಾಗಿ ಬಾರಕೂರು, ಮಂಗಳೂರು, ಪೆನುಗೊಂಡ, ಗಂಡಿಕೋಟೆ, ಗುತ್ತಿ, ತಾಡಪತ್ರಿ, ತಿರುಪತಿ, ಆದೋನಿ, ನೆಲ್ಲೂರು ಮುಂತಾದ ಕಡೆ ಟಂಕಶಾಲೆಗಳು ಕಾರ್ಯನಿರ್ವಹಿಸುತ್ತಿದ್ದವು.[೧೩೯] ಇವುಗಳನ್ನು ಕೆಲವು ಪ್ರಮುಖ ಸಾಮಂತ ಮತ್ತು ಆಯ್ದ ಸ್ಥಳೀಯ ಸಂಸ್ಥೆಗಳಿಗೂ ನಾಣ್ಯಗಳನ್ನು ಟಂಕಿಸುವ, ಗುರುತಿಸುವ ಜವಬ್ದಾರಿಯನ್ನು ವಹಿಸಲಾಗುತ್ತಿತ್ತು. ಇದರಲ್ಲಿ ಅಕ್ಕಸಾಲಿಗರ ಕಸುಬು ಪ್ರಮುಖವಾಗಿತ್ತು.

ವಿಜಯನಗರದ ಅರಸರು ಚಿನ್ನ, ಬೆಳ್ಳಿ, ತಾಮ್ರಗಳಿಂದ ರೂಪಿತವಾದ ಗದ್ಯಾಣ, ವರಾಹ, ಪೊನ್, ಪಗೋಡ, ಪ್ರತಾಪ, ಕಾಟ, ಪಣ, ಚಿನ್ನ, ಮಾಡ, ಹಾಗ, ವೀಸ, ಬೇಳೆ, ರೂಕ, ತಾರ ಮತ್ತು ಕಾಸು ಎಂಬ ವಿವಿಧ ನಾಣ್ಯಗಳನ್ನು ಟಂಕಿಸಿದರು.

ಚಿನ್ನದ ನಾಣ್ಯಗಳ ಶುದ್ಧತೆ ಶೇಕಡಾ ೮೦ ರಿಂದ ೯೦ರವರೆಗೆ ಇರುವುದು ಚಿನ್ನದ ನಾಣ್ಯವೇ ಗದ್ಯಾಣ ಅಥವಾ ವರಹಾ. ಇದರ ತೂಕ ೫೨ ಗ್ರೇನ್. ನಾಣ್ಯಗಳ ಮೇಲೆ ಇರುವ ದೇವ–ದೇವಿಯರ ಚಿತ್ರಗಳು ಆಸಕ್ತಿಕರವಾಗಿವೆ. ಇದರಲ್ಲಿ ಹನುಮಾನ್, ಗರುಡ, ಆನೆ, ನಂದಿ, ಕುದುರೆ, ಶಂಖ, ಚಕ್ರ, ವರಾಹ, ಗಂಡಬೇರುಂಡ, ಅಂಕುಶ, ವೆಂಕಟೇಶ್ವರ, ಶಿವಪಾರ್ವತಿ, ಲಕ್ಷ್ಮೀ–ನಾರಾಯಣ, ಲಕ್ಷ್ಮೀ ನರಸಿಂಹ, ಲಕ್ಷ್ಮೀ ಶ್ರೀರಾಮನೀತಿ, ಬ್ರಹ್ಮ, ಸರಸ್ವತಿ, ಗಣಪತಿ ಮತ್ತು ಸಿಂಹಗಳು ಇರುವುದು ಈ ಕಾಲದ ನಾಣ್ಯಗಳ ವೈಶಿಷ್ಟ್ಯ.[೧೪೦] ಜೊತೆಗೆ ಕನ್ನಡ ಮತ್ತು ನಾಗರಿ ಲಿಪಿಗಳ ಬರಹಗಳು ಕಂಡುಬರುತ್ತವೆ. ಒಂದು ನಾಣ್ಯದಲ್ಲಿ ಇಷ್ಟೆಲ್ಲಾ ಸೂಕ್ಷ್ಮ ಚಿತ್ರಗಳನ್ನು ಕುಶಲಿಗಳಾದ ಅಕ್ಕಸಾಲಿಗರೆ ಅಚ್ಚು ಹಾಕಬೇಕು. ನಮ್ಮ ಚರಿತ್ರೆಯು ಅರಸ ಕೇಂದ್ರಿತವಾಗಿರುವುದರಿಂದ ಕೇವಲ ನಾಣ್ಯಗಳ ಅಧ್ಯಯನ ಮಾತ್ರವೇ ಆಗಿದೆ. ಆದರೆ ನಾಣ್ಯಗಳನ್ನು ಟಂಕಿಸಲು ಬೇಕಾದ ಕುಶಲಗಾರರ ಅಧ್ಯಯನ ನಡೆದಿಲ್ಲವೆಂದೇ ಹೇಳಬಹುದಾಗಿದೆ.

ವಿಜಯನಗರ ಸಾಮ್ರಾಜ್ಯಕ್ಕೆ ಹಲವು ವಿದೇಶಿ ವಿದ್ವಾಂಸರ ಭೇಟಿ ನೀಡಿದ್ದು, ಅದರಲ್ಲಿ ನಿಕೊಲೊ ಕೊಂಟಿ, ಅಬ್ದುಲ್ ರಜಾಕ್, ಬಾರ್ಬೋಸಾ, ನ್ಯೂನಿಜ್, ಪೆಯಾಸ್ ಪ್ರಮುಖರಾಗಿದ್ದಾರೆ. ಇವರಲ್ಲಿ ಪರ್ಶಿಯಾದ ರಾಯಭಾರಿಯಾದ ಅಬ್ದುಲ್ ರಜಾಕನು ಬೆಳ್ಳಿಯ ನಾಣ್ಯಗಳ ಮೇಲ 'ಈ ಕಾಲದ ಹಲವು ಪ್ರಮುಖ ಮಾಹಿತಿಗಳನ್ನು ನೀಡಿದ್ದಾನೆ. ತಾರಾ ಎಂಬುದು ಬೆಳ್ಳಿಯ ನಾಣ್ಯ ಎಂದು ಈತನ ಬರವಣಿಗೆಯಿಂದ ತಿಳಿದುಬರುತ್ತದೆ. ತಾರಾದ ಮೌಲ್ಯವನ್ನು ಈ ೧ ಫಣಂ=೬ ತಾರ, ತಾರ್, ಮತ್ತು ತಾರೆ ಎಂದು ಬೆಳ್ಳಿಯ ನಾಣ್ಯವನ್ನು ವಿದೇಶಿ ವಿದ್ವಾಂಸರು ಕರೆದಿದ್ದಾರೆ.[೧೪೧] ತಾರಾ ನಾಣ್ಯವನ್ನು ವಿಜಯನಗರದ ಹಲವು ಶಾಸನಗಳು ಉಲ್ಲೇಖಿಸುತ್ತವೆ. ಕ್ರಿಶ. ೧೩೬೭ರ ಒಂದನೇ ಬುಕ್ಕನ ಅರಸೀಕೆರೆಯ ಶಾಸನವೊಂದು[೧೪೨] ತಾರಾ ನಾಣ್ಯವನ್ನು ದತ್ತಿಯಾಗಿ ನೀಡುವ ಕುರಿತು ಹೇಳುತ್ತದೆ. ಇಮ್ಮಡಿ ದೇವರಾಯನ ಕ್ರಿಶ. ೧೪೨೪ರ ಶಾಸನವೊಂದು[೧೪೩] ಒಂದು ತಾರಾ ನಾಣ್ಯಕ್ಕೆ ಭೂಮಿಯನ್ನು ಮಾರಿದ ಬಗ್ಗೆ ಮಾಹಿತಿ ನೀಡುತ್ತದೆ. ಕ್ರಿಶ. ೧೫೪೨ರ ಕೃಷ್ಣದೇವರಾಯನ ಶಾಸನವೊಂದು[೧೪೪] ಬೆಳ್ಳಿಯ ನಾಣ್ಯವನ್ನು ಬೆಳ್ಳಿಯ ಹೊನ್ನು ಎಂದು ಹೆಸರಿಸಿದೆ. ಒಟ್ಟಾರೆ ವಿಜಯನಗರ ಕಾಲದ ನಾಣ್ಯಗಳ ತಯಾರಿಕೆಯಲ್ಲಿ ಅಕ್ಕಸಾಲಿಗರು ಪ್ರಮುಖ ಪಾತ್ರವಹಿಸಿದ್ದಾರೆ. ಒಂದು ಚಿಕ್ಕನಾಣ್ಯದಲ್ಲಿ ದೇವದೇವಿಯರ ಚಿತ್ರ ಹಿಮ್ಮುಖ ಮತ್ತು ಮುಮ್ಮುಖದಲ್ಲಿ, ಅರಸ ಬಿರುದು ಮತ್ತು ಅವರ ಹೆಸರುಗಳನ್ನು ಟಂಕಿಸಿರುವುದು ಶ್ಲಾಘನೀಯ. ಅಂದು ಟಂಕಸಾಲೆಗಳಲ್ಲಿ ಅಕ್ಕಸಾಲಿಗರು ಪ್ರಮುಖ ಪಾತ್ರವಹಿಸುತ್ತಿದ್ದರು ಎಂಬುದು ಗಮನಾರ್ಹ ಅಂಶವಾಗಿದೆ. ಅರಸರು ವಿವಿಧ ಸಂದರ್ಭಗಳಲ್ಲಿ ವಿಭಿನ್ನ ಮಾದರಿಯ ನಾಣ್ಯಗಳನ್ನು ಹೊರಡಿಸಿದ್ದರ ಉಲ್ಲೇಖಗಳು ಶಾಸನ, ಸಾಹಿತ್ಯ ಕೃತಿ ಮತ್ತು ಉತ್ಖನನ ವರದಿಗಳಲ್ಲಿ ಸಿಗುತ್ತವೆ. ಆದರೆ ಆ ನಾಣ್ಯಗಳನ್ನು ಮುದ್ರಿಸುವ ಕಸುಬುದಾರರ ಕುರಿತು ಹೆಚ್ಚಿನ ಮಾಹಿತಿ ದೊರೆಯುವುದಿಲ್ಲ.

ನಾಣ್ಯಗಳನ್ನು ಟಂಕಿಸುತ್ತಿದ್ದ ಕಾರ್ಯಗಾರಗಳನ್ನು ಕಮ್ಮಟ ಅಥವಾ ಅಚ್ಚಿನ ಟಂಕಸಾಲೆಗಳೆಂದು ಕರೆಯಲಾಗುತ್ತಿತ್ತು. ಸರಕಾರ ಇವುಗಳ ಮೇಲೆ ಹತೋಟಿಯನ್ನು ಇಟ್ಟುಕೊಂಡಿತ್ತು. ಖಾಸಗಿ

ವ್ಯಕ್ತಿಗಳು, ಸಂಸ್ಥೆಗಳು ಸರಕಾರದ ಪರವಾನಿಗಿಯನ್ನು ಪಡೆದುಕೊಂಡು ಕಮ್ಮಟಗಳನ್ನು ಹೊಂದಬೇಕಿತ್ತು.[೧೪೫] ಚಿನ್ನ, ಬೆಳ್ಳಿ, ತಾಮ್ರದ ನಾಣ್ಯಗಳನ್ನು ಕಮ್ಮಟಗಳಲ್ಲಿ ಟಂಕಿಸಲಾಗುತ್ತಿತ್ತು. ನಾಣ್ಯವನ್ನು ಟಂಕಿಸುವ ವ್ಯಕ್ತಿಗಳ ಮತ್ತು ಅವರ ಒಟ್ಟು ಜವಬ್ದಾರಿಯನ್ನು ಹೊತ್ತಿರುವ ಅಧಿಕಾರಿಗಳ ಕುರಿತು ಶಾಸನಗಳಲ್ಲಿ ಮಾಹಿತಿ ಸಿಗುತ್ತದೆ.[೧೪೬] ಸೆಟ್ಟಿಗರು ಮತ್ತು ಅಕ್ಕಸಾಲಿಗರು ಪರಸ್ಪರ ಒಪ್ಪಂದ ಮಾಡಿಕೊಂಡು ಕಮ್ಮಟದ ಒಡೆಯರಾಗುತ್ತಿದ್ದರು. ವಿಶ್ವಕರ್ಮರೆಂದು ಕರೆದುಕೊಳ್ಳುವ ಅಕ್ಕಸಾಲಿಗರನ್ನು ರಾಜನು ಕಮ್ಮಟಗಳಲ್ಲಿ ನೇಮಿಸಿಕೊಳ್ಳುತ್ತಿದ್ದನು.[೧೪೭] ಜಿ.ಆರ್. ಕುಪ್ಪುಸ್ವಾಮಿ ಅವರ ಪ್ರಕಾರ ಟಂಕಸಾಲೆಗಳಲ್ಲಿ ಮೂರು ರೀತಿಯ ಕಸುಬುದಾರರು ಕೆಲಸ ಮಾಡುತ್ತಿದ್ದರು. ಅವರುಗಳೆಂದರೆ ಚಿನ್ನಕ್ಕೆ ಗೊತ್ತಾದ ಆಕಾರವನ್ನು ಕೊಡುವ ಬಿಡಿಗಮ್ಮಟ, ನಾಣ್ಯದ ಮೇಲೆ ಮುದ್ರೆಯನ್ನು ಒತ್ತುವ ಉಂಡಿಗೆಯ ಕಮ್ಮಟ ಹಾಗೂ ನಾಣ್ಯಗಳ ಅಂಚನ್ನು ಕತ್ತರಿಸಿ ಅರದಿಂದ ಉಜ್ಜಿ ಸಮನಾದ ಆಕಾರವನ್ನು ನೀಡುವ ಸೌಕಟ್ಟುಕಾರರು.[೧೪೮] ಕಮ್ಮಟಗಳ ಒಡೆಯರಾಗಿದ್ದ ಕೆಲವು ವ್ಯಕ್ತಿಗಳ ಹೆಸರುಗಳು ಶಾಸನಗಳಲ್ಲಿ ಉಲ್ಲೇಖಿತವಾಗಿವೆ. ಸಾವಿಮೋಜ, ಚಿಕ್ಕಮಾಮೋಜ, ದಾಮೋಜ, ಕೇತೋಜ, ರುದ್ರೋಜ, ರಾಮೋಜ, ಉತ್ತಮೋಜ[೧೪೯] ಇವರು ಕಮ್ಮಟಗಳ ಒಡೆಯರು ಅಥವಾ ಹಿರಿಯರಾಗಿದ್ದರು. ಹೀಗೆ ಅಂದು ಅಕ್ಕಸಾಲಿಗರ ಕಸುಬು ಸೂಕ್ಷ್ಮ ಕೆಲಸವಾಗಿದ್ದು ಅವರು ತಾಂತ್ರಿಕ ಜ್ಞಾನವನ್ನು ಪಡೆದುಕೊಂಡಿದ್ದರು.

ಅಕ್ಕಸಾಲಿಗರು ಅಂದು ಯಾವ ವಿಧವಾದ ಆಭರಣಗಳನ್ನು ತಯಾರಿಸುತ್ತಿದ್ದರು ಎಂಬುದಕ್ಕೆ ನಾವು ಅಂದಿನ ಶಿಲ್ಪ, ಸಾಹಿತ್ಯ ಕೃತಿ, ಶಾಸನ, ವಿದೇಶಿ ಪ್ರವಾಸಿಗರ ವರದಿಗಳಿಂದ ದೃಢಪಡಿಸಬಹುದಾಗಿದೆ. ಅಬ್ದುಲ್ ರಜಾಕನು ಸಾಮ್ರಾಜ್ಯದ ಸುವರ್ಣ ಸಂಪತ್ತನ್ನು ಕುರಿತು ರಾಜನ ಅರಮನೆಯ ನೆಲಮಾಳಿಗೆಯಲ್ಲಿ ಚಿನ್ನದ ಗಟ್ಟಿಗಳನ್ನು ರಾಶಿ ಹಾಕಿದ್ದಾರೆ. ಈ ದೇಶದ ಪ್ರತಿಯೊಬ್ಬ ನಿವಾಸಿಯೂ, ಅವನು ಮೇಲ್ತರಗತಿಯವನಾಗಿರಲಿ ಅಥವಾ ಸಾಮಾನ್ಯನಾಗಿರಲಿ ಕೊನೆಗೆ ಅಂಗಡಿ ಬೀದಿಯಲ್ಲಿ ಕೆಲಸ ಮಾಡುವವರು ಸಹ ಕೊರಳು, ಕೈತೋಳು ಮತ್ತು ಬೆರಳುಗಳಲ್ಲಿ ಮುತ್ತುಗಳನ್ನೋ ರತ್ನಖಚಿತವಾದ ಬೆಲೆಯುಳ್ಳ ಒಡವೆಗಳನ್ನು ಧರಿಸುತ್ತಾರೆ.[೧೫೦] ಎಂದು ಹೇಳುವನು.

ಕೃಷ್ಣದೇವರಾಯನು ವಿದೇಶಿ ರಾಯಭಾರಿಗಳನ್ನು ಸತ್ಕರಿಸುವಾಗ ಅಮೂಲ್ಯವಾದ ವಜ್ರದ ಆಭರಣವೊಂದು (ಪದಕ) ಅವನ ಕುತ್ತಿಗೆಯಲ್ಲಿ ಶೋಭಿಸುತ್ತಿತ್ತೆಂದು[೧೫೧] ಪಾಯೇಸನು ಹೇಳುವನು. ಗಂಡಸರೂ ಹಾಗೂ ಹೆಂಗಸರು ಧರಿಸುತ್ತಿದ್ದ ಆಭರಣಗಳನ್ನು ಕುರಿತು ಬಾರ್ಬೋಸ ಕೊಡುವ ವಿವರಣೆ ಗಮನಾರ್ಹವಾಗಿದೆ. ಗಂಡಸರು ಕೊರಳಿಗೆ ಚಿನ್ನದ ಸರ ಮತ್ತು ಮತ್ತಿತರ ಆಭರಣಗಳನ್ನು ಧರಿಸುತ್ತಾರೆ. ತೋಳಿಗೆ ಹರಳಿಗೆ ತೋಳಬಂದಿ, ಬೆರಳುಗಳಿಗೆ ಉಂಗುರ, ಕಿವಿಗೆ ಮತ್ತು ವಜ್ರದೋಲೆಗಳನ್ನು ಧರಿಸುವರು. ಹಾಗೆಯೇ ಹೆಂಗಸರು ವಜ್ರವೈಡೂರ್ಯ ಹವಳ ಮುಂತಾದವುಗಳಿಂದ ಮಾಡಿದ ಕೊರಳಸರ, ಪದಕ, ತೋಳಬಂದಿ, ಕೈಬಳೆಗಳನ್ನು ತೊಡುವರು, ಬೆರಳಿಗೆ ವಜ್ರ ವೈಡೂರ್ಯದ ಉಂಗುರಗಳು, ಸೊಂಟಕ್ಕೆ ಡಾಬು, ಕಾಲಿಗೆ ಚಿನ್ನದ ಬಳೆ, ಕಾಲುಂಗುರವನ್ನು ಹಾಕಿಕೊಳ್ಳುವರು.[೧೫೨] ಒಟ್ಟಿನಲ್ಲಿ ಇವರು ಬಹು ಶ್ರೀಮಂತ ಒಡವೆ ವಸ್ತುಗಳನ್ನು ಧರಿಸುವಂತಾಗಿರುತ್ತಾರೆ.

ಸ್ತ್ರೀಯರು ಕೇಶಾಲಂಕಾರಕ್ಕೆ ಹೆಚ್ಚು ಮಹತ್ವ ಕೊಟ್ಟಿದ್ದರು ಕೇಶಕ್ಕೆ ಪ್ರತ್ಯೇಕವಾದ ಆಭರಣಗಳಿದ್ದವು ಎಂದು ಸಾಹಿತ್ಯ ಕೃತಿಗಳ ಉಲ್ಲೇಖಗಳಿಂದ ನೋಡಬಹುದು. ರತ್ನಾಕರ ಕೊಡುವ ಈ ಒಂದು ವರ್ಣನೆಯಲ್ಲಿ ಹೆಂಗಸರು ಕೇಶಾಲಂಕಾರದಲ್ಲಿ ತೋರುತ್ತಿದ್ದ ವಿವಿಧ ವೈವಿಧ್ಯಗಳ ಚಿತ್ರವಿದೆ. ಅಡ್ಡಮುಡಿಯ ಸೋರುಮುಡಿಯ ಸೊನ್ನಾರದ ದೊಡ್ಡ ಮುಡಿಯ... ಆಲರು ಚವಲಿ ಬೈತಲೆ ವಣಿ ಮುತ್ತಿನ ಬಲೆ.[೧೫೩] ಹಾಗೆಯೇ ಮಧುಕೇಶ್ವರಾಲಯಕ್ಕೆ ಹೊರಟ ಮಾಯೆಗೆ ಮಾಡಿದ ಅನೇಕ ವಿಧವಾದ ಅಲಂಕಾರಗಳಲ್ಲಿ ಕೇಶಾಲಂಕಾರದ ವರ್ಣನೆ ಮನಮೋಹಕವಾಗಿದೆ.[೧೫೪] ಕೇಶಾಭರಣಗಳಲ್ಲಿ ಚಿನ್ನಗೇದಗೆಗರಗಳಿಂ ಸಿಂಗರಿಸಿದಳು.[೧೫೫] ಚಿನ್ನಹೂ ಮೊದಲಾದ ಸಿಂಗವೆಣ್ಣುಗಳು.[೧೫೬] ಶೃಂಗಾರವಾದ ಜಡೆ ಬಂಗಾರ, ಹೊಂಗ್ಯಾದಿಗ.[೧೫೭] ಮುಡಿದ ಬಂಗಾರದ ಹೆರಳಿಸಿ ರಾಗಟೆ.[೧೫೮] ತರುಣಿ ತೊಂಡಿಲ ಮುಡಿಗಿಡಲೊಪ್ಪಿತು.[೧೫೯] ಮುತ್ತಿನ ಮುಡಿಕಟ್ಟು ಚೊಳೆಯ ತುರುಬಿನ ಮುತ್ತಿನ ಬಲೆ.[೧೬೦] ಮಕ್ಕಳ ಮುಂದಲೆಯ ಮೇಲೆ ಹಾಕುವ ಆಭರಣಕ್ಕೆ ಅರಳಲೆ[೧೬೧] ಎಂದು ಹೇಳುವರು. ಕರ್ಣಾಭರಣಗಳು ನಾನಾ ಹೆಸರುಗಳಿಂದ ರೂಢಿಯಲ್ಲಿವೆ. ವಜ್ರದೋಲೆ.[೧೬೨] ಹರಳೋಲೆ,[೧೬೩] ಶಂಖದೋಲೆ.[೧೬೪] ಮುತ್ತಿನೋಲೆ,[೧೬೫] ವಿಂಸುನಿಯೋಲೆಯ ಥಾಳ ಕದಪಿನೊಳಸೆಯ[೧೬೬] ಇನ್ನು ಅನೇಕ ವಿಧವಿಧವಾದ ಆಭರಣಗಳು ಅಂದು ಬಳಕೆಯಲ್ಲಿದ್ದವು.

ಮೂಗುಬೊಟ್ಟು ಅನಾರ್ಯರಲ್ಲಿ, ವಿದೇಶಿಯರ ಮತ್ತು ಹರಪ್ಪ ಸಂಸ್ಕೃತಿಯಲ್ಲಿ ಕಂಡುಬಂದರೂ, ಶಂಕರಾಚಾರ್ಯರ ಕೆಲವು ಸ್ತೋತ್ರಗಳಲ್ಲಿ ಮಂಕುರದ ಉಲ್ಲೇಖವಿದ್ದೂ, ಹನ್ನೆರಡನೆಯ ಶತಾಬ್ದದಿಂದೀಚೆಗೆ ಅದು ಸುಮಂಗಲಿಯರ ಲಕ್ಷಣವೆಂದು ಪರಿಗಣಿಸಲ್ಪಟ್ಟಿತು.[೧೬೭] ವಿಜಯನಗರ ಕಾಲದಲ್ಲಿ ಈ ಆಭರಣವಿತ್ತು ಎಂದು ವಿದೇಶಿ ಪ್ರವಾಸಿ ಜನರ ತೊಡೆಗಳನ್ನು ಕುರಿತು ಹೇಳುವಾಗ ಸ್ತ್ರೀಯರು ಮೂಗಿಗೆ ಒಂದು ಕಡೆ ತೊತು ಮಾಡಿ ಮುತ್ತಿನ ಅಥವಾ ಹರಳಿನ ತೊಗು ಮೂಗುತಿಯನ್ನು ಧರಿಸುತ್ತಾರೆ.[೧೬೮] ಎಂದು ಹೇಳಿರುವನು. ಮೂಗಿನ ಈ ಆಭರಣವನ್ನು ಮೂಕುತಿ,[೧೬೯] ನಾಸಾಭರಣ[೧೭೦] ಎಂಬ ಹೆಸರುಗಳಿಂದ ಕರೆಯಲಾಗಿದೆ. ಬಾಹು ಮತ್ತು ಭುಜಗಳಿಗೆ ಆಭರಣಗಳನ್ನು ತೊಡುವುದು ಹಿಂದಿನಿಂದ ಬಂದ ಪದ್ಧತಿ ಬಾರ್ಬೋಸ ಹೆಂಗಸರ ಆಭರಣಗಳನ್ನು ಕುರಿತು ಹೇಳುವಾಗ ತೋಳ ಬಂದಿಗಳನ್ನು ತೊಟ್ಟು, ತೋಳುಗಳಿಗೆ ಪೋಣಿಸಿದ ಹವಳಗಳನ್ನು ಕಟ್ಟಿಕೊಳ್ಳುತ್ತಾರೆ.[೧೭೧] ತೋಳ ಮೇಲೆ ಭುಜಕ್ಕೆ ತೊಡುವ ಆಭರಣವನ್ನು ಭುಜ ಕೀರ್ತಿ[೧೭೨] ಎಂದು ಕರೆಯಲಾಗಿದೆ.

ಗಣಿಸಲಿರುಟು ಸಾವಿರ ಹೆಂಗಳೊಳುರು
ಕ್ಮಿಣಿ ಸತ್ಯಭಾಮಯರುಗಳು
ಫಣಿತಲ್ಪ ಕೃಷ್ಣರಾಯನ ಭುಜಕೀರ್ತಿಯ
ಮಣಿಗಳುತಿರ್ದರಿಕ್ಕೆಲವೆ.[೧೭೩]

ಭುಜಬಂಧವನ್ನು ಸ್ತ್ರೀ ಮತ್ತು ಪುರುಷರಿಬ್ಬರೂ ಧರಿಸುತ್ತಿದ್ದರು. ಕಂಠಾಭರಣವನ್ನು ಸರ,[೧೭೪] ಹಾರ,[೧೭೫] ಸರಿಗೆ,[೧೭೬] ಎಂಬ ಹೆಸರುಗಳಿಂದ ಕರೆಯಲಾಗಿದೆ. ಸರದಲ್ಲಿ ಮುತ್ತಿನ ಸರದ ಹೆಸರು ಕನ್ನಡ ಕಾವ್ಯಗಳಲ್ಲಿ ಪ್ರಧಾನವಾಗಿ ಕೇಳಿಬರುತ್ತದೆ. ಮುತ್ತಿನ ಸರದಂತೆಯೇ ಚಿನ್ನದ

ಸರವೂ ಬಳಕೆಯಲ್ಲಿತ್ತು. ಎರಡೂ ಸರಗಳನ್ನು ಉಪಯೋಗಿಸಿದ ಒಂದು ಚಿತ್ರವನ್ನು ದಾಸರು ಹೀಗೆ ಹೇಳುತ್ತಾರೆ ಮುತ್ತಿನ ಕೊರಳಹಾರ ಉದ್ದಂಡ ಮನೋಹರ ಹೊನ್ನಿನಸರ.[೧೭೭] ಸರದಲ್ಲಿ ಕೊರಲೇಕಸರ, ಪಂಚಸರ, ತ್ರಿಸರ[೧೭೮] ಎಂದು ಅನೇಕ ವಿಧಗಳುಂಟು. ರಾಮನಾಥ ಚರಿತವು ನಡುವಿನ ಚಿಂತಾಕು[೧೭೯] ಎಂದು ಹೇಳಿದರೆ ಭರತೇಶ ವೈಭವದಲ್ಲಿ ನಡುವಿನ ಚಿಂತಾರು ಕೊರಳ ಚಿಂತಾಕು ಎಂದು ಎರಡು ಬಗೆಯ ಚಿಂತಾಕುಗಳನ್ನು ಹೇಳಲಾಗಿದೆ.[೧೮೦] ವಿಜಯನಗರ ಆಭರಣಗಳನ್ನು ಅಧ್ಯಯನ ಮಾಡಲು ಮತ್ತೊಂದು ಪ್ರಮುಖ ಆಕರ ಎಂದರೆ ಶಿಲ್ಪಗಳು. ಪ್ರತಿಯೊಂದು ಸ್ತ್ರೀ-ಪುರುಷರ ಶಿಲ್ಪಗಳಲ್ಲಿ ಮತ್ತು ದೇವ, ದೇವಿಯರ ಶಿಲ್ಪಗಳಲ್ಲಿಯ ಆಭರಣಗಳನ್ನು ಗಮನಿಸಲಾಗಿದೆ. ಇಷ್ಟೆಲ್ಲಾ ವಿವಿಧ ಬಗೆಯ ಅಭರಣಗಳು ಇದ್ದವು ಎಂದರೆ ಅಲ್ಲಿ ಅಕ್ಕಸಾಲಿಗರ ಕಸುಬು ಎಷ್ಟು ಪ್ರಾಮುಖ್ಯತೆ ಪಡೆದಿತ್ತು ಎಂಬುದು ಗಮನಾರ್ಹ ಅಂದು ಅಕ್ಕಸಾಲಿಗಳಲ್ಲಿ ಪ್ರಮುಖವಾಗಿ ಅರಮನೆ, ದೇವರ ಅಭರಣಗಳು ಮಾಡುವ ಕಸುಬಿನವರು ಒಂದು ಬಗೆಯವರಾದರೆ, ಜನಸಾಮಾನ್ಯರ ಅಭರಣಗಳನ್ನು ತಯಾರಿಸುವವರು ಮತ್ತೊಂದು ಬಗೆಯವರಾಗಿದ್ದಾರೆ. ಅರಸರು ದೇವಾಲಯಗಳಿಗೆ ದಾನ ಕೊಡಲು, ತಮ್ಮ ರಾಯರು ಕುಟುಂಬದವರು ಹಾಕಿಕೊಳ್ಳಲು ಅಭರಣಗಳನ್ನು ಮಾಡಿಸಲು ಪ್ರತ್ಯೇಕವಾದ ಅಕ್ಕಸಾಲಿಗರನ್ನು ನೇಮಿಸಿಕೊಳ್ಳುತ್ತಿದ್ದರು. ಒಟ್ಟಾರೆ ಅಕ್ಕಸಾಲೆ ಕಸುಬು ಅಂದಿನ ಸಮಾಜದಲ್ಲಿ ಒಂದು ಪ್ರಮುಖ ಕಸುಬಾಗಿತ್ತು. ಅವರು ಪ್ರತ್ಯೇಕವಾದ ಸಂಘಗಳನ್ನು ಸ್ಥಾಪಿಸಿಕೊಂಡು ಒಂದು ರೀತಿಯ ಬ್ಯಾಂಕಿಂಗ್ ಉದ್ಯಮದ ರೀತಿಯಲ್ಲಿ ವ್ಯವಹಾರ ಮಾಡುತ್ತಿದ್ದರು.

೫. ಕಮ್ಮಾರ

ಆಂಗ್ಲ ಭಾಷಾ ರೀತ್ಯಾ ಲೋಹಕಾರ ಪದವು ಕಮ್ಮಾರನಿಗೆ ಅನ್ವಯವಾಗುತ್ತದೆ. ಅರ್ಥಕೋಶ ರೀತ್ಯಾ ಲೋಹಕಾರ ಎಂದರೆ ಕಬ್ಬಿಣ ಇತ್ಯಾದಿ ಲೋಹಗಳನ್ನು ಕಾಯಿಸಿ ಬಡಿದು ಬೇಡಿಕೆಯ ಉಪಕರಣ ಮತ್ತು ಸಲಕರಣೆಗಳನ್ನು ತಯಾರಿಸಿ ಕೊಡುವವನು ಎಂದರ್ಥ.[೧೮೧]

ಸಂಸ್ಕೃತ ಭಾಷೆಯಲ್ಲಿ ಕಮ್ಮಾರ ಪದವನ್ನು ಲೋಹಕರು ಎಂಬ ಪದಕ್ಕೆ ತತ್ಸಮಾನವಾಗಿ ಬಳಸಲಾಗಿದೆ. ಪಾಳಿ ಭಾಷೆಯಲ್ಲಿ ಲೋಹಗಳ ಕೆಲಸ ಮಾಡುವವರನ್ನು ಉದ್ದೇಶಿಸಿ ಬಳಸಲಾಗಿದೆ. ಈ ಕುಶಲಕರ್ಮಿಗಳು ವಿಶ್ವಕರ್ಮ ಪ್ರಭುವಿನ ಹಿರಿಯ ಮಗನಾದ ಮನುವಿನ ಸಂತತಿಯವರೆಂದೂ, ಇವರದು 'ಸಾನಗ' ಗೋತ್ರವೆಂದೂ ಹೇಳಲಾಗಿದೆ. ಮನುವನ್ನು 'ಕರ್ಮಹರ'ನೆಂದೂ, 'ಕರ್ಮಹರ' ಪದವು 'ಕರ್ಮಾನ್' ಎಂಬ ಪದದ ನಿಷ್ಪತ್ತಿಯೆಂದೂ, ಲೋಹಶಿಲ್ಪಶಾಸ್ತ್ರದ ಆದರ್ಶ ಲೋಹಕಾರರನ್ನು ಸಂಕೇತಿಸುತ್ತದೆಂದು ಪುರಾಣಗಳು ಹೇಳುತ್ತವೆ. ಕುಶಲಕರ್ಮಿಗಳ ಗೋತ್ರಾಧ್ಯಯನವು 'ಕಮ್ಮಾರ' 'ಕರ್ಮಹರ'[೧೮೨] ಎಂದಿದೆ.

ಒಕ್ಕಲುತನದ ದೃಷ್ಟಿಯಿಂದ ಕಮ್ಮಾರಿಕೆ ಮಿಕ್ಕ ಕಸಬುಗಳಂತೆಯೆ ಪ್ರಾಮುಖ್ಯತೆಯನ್ನು ಪಡೆದಿದೆ. ಪಾಂಚಾಳರಲ್ಲಿ ಇವರು ಕೂಡ ಒಬ್ಬರು. ಕಮ್ಮಾರ ಕೆಲಸ ಮಾಡುವ ಸ್ಥಳಕ್ಕೆ ಕಂಬಾರ ಸಾಲೆ ಅಥವಾ ಕುಲುಕಟ್ಟೆ ಎನ್ನುವರು. ಪ್ರಸ್ತುತ ಈ ಕಸುಬನ್ನು ಸೂಚಿಸುವ ಉಲ್ಲೇಖಗಳು ಶಾಸನ, ಸಾಹಿತ್ಯ ಕೃತಿ, ವಿದೇಶಿ ಪ್ರವಾಸಿ ವರ್ಣನೆಗಳಲ್ಲಿ ಸಿಗುತ್ತವೆ.

ಕನ್ನಡ ಕಾವ್ಯಗಳಲ್ಲಿ ಕಬ್ಬಿಣ ಹಾಗೂ ಕಬ್ಬಿಣದ ಕೆಲಸ ಮಾಡುವ ಕಮ್ಮಾರನ ಉಲ್ಲೇಖಗಳಿವೆ. ವ್ಯವಸಾಯದ ಉಪಕರಣಗಳನ್ನು ಕುರಿತ ಮಾಹಿತಿಗಳೂ ದೊರೆಯುತ್ತವೆ. ವಿಕ್ರಮಾರ್ಜುನ ವಿಜಯ, ಆದಿಪುರಾಣ ಮತ್ತು ಗದಾಯುದ್ಧದಲ್ಲಿ 'ಕಮ್ಮಾರೆಯೋಜ'[೧೮೩] ಎಂಬ ಪದ ಪ್ರಯೋಗಗಳಿವೆ. ಬಸವಣ್ಣನವರು ಕಬ್ಬಿಣದ ಕೆಲಸ ಮಾಡಿದಾಕ್ಷಣ ಅದು ಕೀಳು ಕೆಲಸವಲ್ಲ ಎಂದು ಶೃತ ಪಡಿಸಲು 'ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ'. ಸಾಕ್ಷಾತ್ ಅಗಸ್ತ್ಯಕುಲ(ಬೆಸ್ತ). ದುರ್ವಾಸ ಮುಚ್ಚಿಗ(ತರಗಾರ, ಚಮ್ಮಾರ), ಕಶ್ಯಪ ಕಮ್ಮಾರ, ಶಿವಭಕ್ತನು ಕುಲಂಬೋಜ ಕುಂಬಳ ಕಾಯಿಗೆ ಕಬ್ಬುನದ ಕಟ್ಟುಕೊಟರ[೧೮೪] ಎಂಬ ಪ್ರಯೋಗಗಳನ್ನು ಮಾಡಿದ್ದಾರೆ. ನಯಸೇನನು ತನ್ನ ಧರ್ಮಾಮೃತದಲ್ಲಿ "ಕಮ್ಮರನಂತೆ ಕಾಸಿ ಬಡಿವರ್, ಬಡಗಿಯಂತೆ ಕೆತ್ತುವರ್",[೧೮೫] ಅಂದರೆ ಕನ್ನಡ ಸಾಹಿತ್ಯದ ಪ್ರಾರಂಭದ ವೇಳೆಗಾಗಲೇ ಕರ್ನಾಟಕದ ಗ್ರಾಮೀಣದ ಬದುಕಿನಲ್ಲಿ ಕಬ್ಬಿಣದ ಕೆಲಸ ಮಾಡುವ ಕಮ್ಮಾರ ಕಸುಬು ಅವರ ಜೀವನದ ಅವಿಭಾಜ್ಯ ಅಂಗವಾಗಿತ್ತು.

ವಿಜಯನಗರ ಕಾಲದಲ್ಲಿ ಕಮ್ಮಾರಿಕೆ ಎಲ್ಲಾ ಕಸುಬುಗಳಲ್ಲಿ ಮೊದಲ ಸ್ಥಾನವನ್ನು ಪಡೆದುಕೊಂಡಿತ್ತು. ಕೃಷಿ ಮತ್ತು ಕೃಷಿಯೇತರ ಕೆಲಸಗಳಿಗೆ ಕಬ್ಬಿಣದಿಂದ ತಯಾರಿಸಿದ ಉಪಕರಣಗಳು ಅವಶ್ಯವಾಗಿ ಬೇಕಾಗುತ್ತಿತ್ತು. ಈ ಉಪಕರಣಗಳನ್ನು ಉತ್ಪಾದಿಸುವವರನ್ನು ಕಮ್ಮಾರರು ಎಂಬ ಹೆಸರಿನಿಂದ ಕರೆಯುತ್ತಿದ್ದರೆ. ಹಾರೆ, ಗುದ್ದಲಿ, ಕುಡಗೋಲು, ಪಿಕಾಸಿ, ಕುಳ ಮೊದಲಾದ ಕೃಷಿಗೆ ಬಳಸುವ ಉಪಕರಣಗಳು ಅತ್ಯಂತ ಹೆಚ್ಚಿನ ಬೇಡಿಕೆಯನ್ನು ಹೊಂದಿರುತ್ತಿದ್ದವು. ರಾಜಪ್ರಭುತ್ವಕ್ಕೆ ಯುದ್ಧಗಳು ಅನಿವಾರ್ಯ ಅದರಲ್ಲೂ ವಿಜಯನಗರ ಮತ್ತು ಬಹುಮನಿ ಸುಲ್ತಾನರಿಗೆ ಸಾಕಷ್ಟು ಯುದ್ಧಗಳಾಗಿರುವುದು ಈಗಾಗಲೇ ತಿಳಿದಿರುವ ಅಂಶವೇ. ಕಮ್ಮಾರರು ವ್ಯವಸಾಯ, ಯುದ್ಧ ಮತ್ತು ನಿತ್ಯ ಜೀವನಕ್ಕೆ ಅನಿವಾರ್ಯವಾದ ಕಬ್ಬಿಣದ ಉಪಕರಣಗಳನ್ನು ತಯಾರಿಸಿಕೊಡುವ ಕಸುಬುದಾರರಾಗಿದ್ದರು. ಗ್ರಾಮದ ಆಯಗಾರರಲ್ಲಿ ಇವರೂ ಒಬ್ಬರು ಮಾನವನ ಮೂಲಭೂತ ಅವಶ್ಯಕತೆಗಳನ್ನು ಈಡೇರಿಸಬಲ್ಲ ವ್ಯವಸಾಯದ ದೃಷ್ಟಿಯಿಂದ ಈ ಕಮ್ಮಾರ ಕಸುಬು ಮಿಕ್ಕ ಕಸುಬುಗಳಲ್ಲೆಲ್ಲ ಅತ್ಯಂತ ಉಪಯುಕ್ತವಾದುದು. ಆದ್ದರಿಂದ ಆಯವನ್ನು ಕೊಡುವ ಒಕ್ಕಲಿಗನ ದೃಷ್ಟಿಯಲ್ಲಿ ಕಮ್ಮಾರ ಮುಖ್ಯ ಆಯಗಾರನಾಗಿದ್ದಾನೆ. ಕಮ್ಮಾರ ಎನ್ನುವುದು ಕರ್ಮಕಾರ ಎಂಬ ಪದದ ತದ್ಭವ. ಕರ್ಮ+ಕಾರ=ಕಮ್ಮಾರ ಎಂಬ ಶಬ್ದದಿಂದ ಕಮ್ಮಾರ ಅಥವಾ ಕಂಬಾರ ಎಂಬ ಶಬ್ದ ಹುಟ್ಟಿಕೊಂಡಿದೆ. ಇಂದು ಕಮ್ಮಾರ ಹಾಗೂ ಕಂಬಾರ ಎರಡೂ ಶಬ್ದಗಳು ಸಾಮಾನ್ಯವಾಗಿ ಬಳಕೆಯಲ್ಲಿವೆ. ಕುಂಬಾರ ಎಂಬ ಶಬ್ಧದ ಪ್ರಭಾವದಿಂದ ಕಮ್ಮಾರ ಎನ್ನುವುದು ಕಂಬಾರ ಎಂದು ಮಾರ್ಪಟು ಹೊಂದಿದಂತಿದೆ. ಮರಾಠಿಯ ಪ್ರಭಾವದಿಂದಾಗಿ ಬೆಳಗಾವಿ ಹಾಗೂ ಕಾರವಾರ ಜಿಲ್ಲೆಗಳಲ್ಲಿ ಲೋಹರ ಎಂದು ಕರೆಯಲಾಗುತ್ತದೆ. ಕಮ್ಮಾರ, ಕಂಬಾರ, ಕರ್ಮಹರ, ಕಂಮರ, ಕಂಮರನ್,[೧೮೬] ಎಂಬ ಹೆಸರುಗಳು ಪ್ರಾಚೀನ ಶಾಸನ. ಕಾವ್ಯ, ವ್ಯಾಕರಣಗಳಲ್ಲಿ ಕಂಡುಬರುತ್ತವೆ. ಯುದ್ಧದಲ್ಲಿ ಬಳಸುವ ಖಡ್ಗ, ಕವಚ, ಈಟಿ, ಶೂಲ, ಸಬಳ, ಕೊಂತಿ, ಶಲ್ಯ, ಭಲ್ಯ, ಕರ್ಕಡೆ, ಸುರಿಗೆ, ಮುಸಲ, ಭಂಡಿವಾಳ ಮೊದಲಾದ ಆಯುಧಗಳು ಹೆಚ್ಚಿನ ಪ್ರಮಾಣದಲ್ಲಿ

ಉತ್ಪಾದನೆಗೊಳ್ಳುತ್ತಿದ್ದವು.[೧೮೬] ಈ ಎಲ್ಲಾ ವಿಧವಾದ ಆಯುಧಗಳನ್ನು ಉತ್ಪಾದಿಸಲು ನುರಿತ ಕಸುಬುದಾರರು ಇದ್ದರೆಂದು ತಿಳಿಯುತ್ತದೆ. ವಿಜಯನಗರ ಪೂರ್ವದ ಹೊಯ್ಸಳರ ಆಳ್ವಿಕೆಯ ಸಂದರ್ಭದಲ್ಲಿ ನಿರ್ಮಾಣಗೊಂಡ ಕೇದಾರೇಶ್ವರ ಗುಡಿಯ ಮೇಲಿನ ಶಿಲ್ಪದಲ್ಲಿ ಉಕ್ಕಿನ ಹುರುಪುಗಳಿಂದ ಕೂಡಿದ ಕಬ್ಬಿಣದ ಕವಚವು ಯುದ್ಧದ ಕುದುರೆಯ ದೇಹ ಆವರಿಸಿರುವುದನ್ನು, ಸವಾರನು ಕೂಡ ತಲೆಗೆ ಶಿರಸ್ತ್ರಾಣ[೧೮೭] ಹಾಕಿರುವುದನ್ನೂ ಕಾಣಬಹುದಾಗಿದೆ. ಇದು ಕಬ್ಬಿಣದ ಬಳಕೆ ಎಷ್ಟರ ಮಟ್ಟಿಗೆ ಇತ್ತು ಎನ್ನುವುದನ್ನು ಸೂಚಿಸುತ್ತದೆ. ವಿಜಯನಗರ ಪೂರ್ವದ ಶಾಸನಗಳಲ್ಲಿ ಇವರನ್ನು ಕಮ್ಮಾರ,[೧೮೮] ಕಮ್ಮರ,[೧೮೯] ಕಲಮಾಕಾರ,[೧೯೦] ಕಮ್ಮಾರರೊಕ್ಕಲು[೧೯೧] ಎಂದು ಕರೆಯಲಾಗಿದೆ.

ಕಮ್ಮಾರರು ದೇವಸ್ಥಾನದ ಕೆಲಸ ಕಾರ್ಯಗಳಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದರು. ದೇವಾಲಯ ನಿರ್ಮಿಸಬೇಕಾದರೆ ಬಡಗಿ ಮತ್ತು ಕಮ್ಮಾರನನ್ನು ನೇಮಿಸಿಕೊಂಡಿರುವುದು ಶಾಸನವೊಂದು ತಿಳಿಸುತ್ತದೆ.[೧೯೨] ಇದಕ್ಕೆ ಪೂರಕವೆಂಬಂತೆ ಗೋಪುರದ ಬಾಗಿಲುನ್ನು ನಿರ್ಮಿಸಲು ಮೊದನಹಳ್ಳಿಯ ಪಶ್ಚಿಮದಲ್ಲಿದ್ದ ಮಾರನಗೌಡನ ಕಟ್ಟೆ ಮೇಲಿದ್ದ ಗಂಡಬೇರುಂಡವೆಂಬ ಮಾವಿನ ಮರವನ್ನು ತರಿಸುತ್ತಾರೆ. ತಂದ ಮರವನ್ನು ತೆಕಲ್ಲಿನ ಬಡಗಿಯಾದ ಬೋಜದೇವೋಜನ ಕೈಯಲ್ಲಿ ಬಾಗಿಲನ್ನು ಮಾಡಿಸಿ, ಅದಕ್ಕೆ ಕಮ್ಮಾರನಾದ ಅಂಗೋಜನ ಕೈಯಲ್ಲಿ ಕಬ್ಬಿಣದ ಕೆಲಸವನ್ನು ಮಾಡಿಸುತ್ತಾರೆ. ಇದರ ಕೆಲಸ ಮಾಡಿದ ಬಡಗಿ ಬೋಜದೇವನಿಗೆ ಹೊಲವನ್ನು ದಾನವಾಗಿ ನೀಡಲಾಗಿದೆ. ಭೂಮಿ ಮಾತ್ರವಲ್ಲದೆ, ಒಂದು ಕುದುರೆ, ಸುತ್ತಿಗೆ ಮತ್ತು ಲಾಂಛನಗಳನ್ನು ಕೊಡಲಾಗಿದೆ. ಕಬ್ಬಿಣ ಕೆಲಸ ಮಾಡಿದ ಅಂಗೋಜನಿಗೂ ಸಹ ಗದ್ದೆ ದಾನ[೧೯೩] ನೀಡಿರುವುದನ್ನು ತಿಳಿಸಲಾಗಿದೆ.

ಕೃಷ್ಣದೇವರಾಯನ ಕಾಲದಲ್ಲಿ ಅವನ ಪಟ್ಟದ ಮಹಾದೇವಿಯಾದ ತಿರುಮಲದೇವಿ ಅಮ್ಮನವರು ವಿಜಯನಗರ ಬಳಿ ಇದ್ದ ಕಮ್ಮಾರಗುಂಟೆ ಎಂಬ ಭೂಮಿಯನ್ನು ವಿಜಯನಗರ ಅಂಜನಗಿರಿಯ ಕರಿಯ ತಿರುವೆಂಗಳನಾಥನಿಗೆ ದಾನ ನೀಡುತ್ತಾರೆ.[೧೯೪] ಕಮ್ಮಾರರು ದೇವಾಲಯಗಳನ್ನು ಕಟ್ಟಿಸುವಾಗ ಪ್ರಮುಖವಾದ ಪಾತ್ರವಹಿಸುತ್ತಿದ್ದರು ಎಂದು ತಿಳಿಯುತ್ತದೆ.

ಕ್ರಿ.ಶ. ೧೩೯೮ರಲ್ಲಿ ರಚನೆಯಾದ ಅಭಿನವಾಭಿದಾನಂ ಎಂಬ ಕೃತಿಯಲ್ಲಿ ಕಮ್ಮಾರರು ಬಾಣಗಳನ್ನು ತಯಾರಿಸುತ್ತಿದ್ದರು. ಈ ಬಾಣಗಳನ್ನು ತಯಾರಿಸಲಿಕ್ಕೆ ಪ್ರತ್ಯೇಕವಾದ ಕಾರಗೃಹ ಅಥವಾ ಶರ ಶಾಲೆಗಳಿದ್ದವು. ಆಯುಧಗಳನ್ನು ಮಾಡುತ್ತಿದ್ದ ಕಾರ್ಯಗಾರಗಳನ್ನು ಕಮ್ಮಾಟಿಗಳೆಂದು ಕರೆಯುತ್ತಿದ್ದರು.[೧೯೫]

ಯುದ್ಧದ ಆಯುಧಗಳೆಂದರೆ ನಾವು ಸಾಮಾನ್ಯವಾಗಿ ಕತ್ತಿ, ಗುರಾಣಿ, ಭರ್ಜಿ, ಈಟಿ, ಕವಚ, ಬಿಲ್ಲು, ಬಾಣ, ಗಡಿ ಇವಿಷ್ಟೇ ಎಂದು ಭಾವಿಸುವಂತಿಲ್ಲ. ಆಯುಧಗಳನ್ನು ಅವುಗಳ ಸ್ವರೂಪ, ಗುಣಲಕ್ಷಣಗಳನ್ನು ಆಧಾರಿಸಿ ಜನ್ನ ಕವಿಯು ಇಸುವ(ಚಿಲ್ಲ ಬಾಣಗಳು), ಇಡುವ(ಕೈಯಿಂದ ಎಸೆಯುವ), ಇರೆವ(ಕತ್ತಿ ಮುಂತಾದವು), ಪೊಯ್ವ(ಗದೆ ಮುಂತಾದ ಕೈಯಲ್ಲಿ ಹಿಡಿದು ಹೊಡೆಯುವ) ಆಯುಧಗಳು ಎಂದು ನಾಲ್ಕು ವಿಭಾಗಗಳನ್ನು ಕುರಿತು

ಹೇಳುತ್ತಾನೆ.[೧೯೬] ನಂಜುಂಡ ಕವಿಯು ಕೆಲವು ಆಯುಧಗಳ ಕಾರ್ಯ ವಿಧಾನವನ್ನು ಮತ್ತೊಂದು ರೀತಿಯಲ್ಲಿ ವರ್ಣಿಸಿದ್ದಾನೆ ಎಸೆವ ಬಿಲ್ಲಿಡುವ ಸಲ್ಲೆಹ, ಪೊಯ್ವು ಕೂರಸಿ, ಪೋದುವ ಗದೆ, ತಿವಿವ ಮುಸಲ ಕಡಿವ ಖಂಡೆಯ[೧೯೭] ಹಾಗೆಯೇ ಇನ್ನೊಂದು ವರ್ಣನೆ 'ಪೊಡೆವ ಲೌಡಿಗೆ ಪೂರ್ವಕತ್ತಿಗೆ ಸೀಳಿಡುವ ಖಡ್ಗಕೆ, ಕರಾವಾಳ್ಗ, ನ(ನೆ)ಡುವ ಕೊಂತಕೆ, ಶಲ್ಲೆಹಕೆ, ಪಿಂಡಿವಾಳಕೆ'[೧೯೮] ಈ ಆಯುಧಗಳ ವಿವರಗಳಲ್ಲಿ ಬಹುತೇಕ ಕಬ್ಬಿಣದ ಆಯುಧಗಳಾಗಿದ್ದು ಅವುಗಳನ್ನು ಕಮ್ಮಾರರೇ ಮಾಡುತ್ತಿದ್ದರು ಎಂಬುದು ಸ್ಪಷ್ಟ.

ಅಂಕಕ್ಕೆ ಬರ್ಪ ರಾಯರ ಗಂಡನೆಂದೆಂಬ
ಡೆಂಕಣಿ ಮರುಳ್ಗೆಯ್ಯುಳೊಡನೆ
ಭೋಂಕನೆ ಮಿಡಿವ ಲಾಳಿಯ ಬಿಲ್ಲು ಪಟಲ್ಗಳ
ಕ ಸಂಕು ಲವಿರ್ದುದಲ್ಲ.[೧೯೯]

ಇದರಲ್ಲಿ ಯಾವ ರೀತಿಯ ಆಯುಧಗಳನ್ನು ಬಳಸುತ್ತಿದ್ದರು ಎಂಬುದನ್ನು ತಿಳಿಯಬಹುದಾಗಿದೆ.

ಬೆಟಗೇರಿಯವರು ಕಬ್ಬಿಣದ ಕತ್ತಿಗಿರುವ ಬೇರೆ ನಾಮರೂಪಗಳನ್ನು ಕೈಗತ್ತಿ, ಖಂಡಯ, ಸೊರಟಿಯ ಕತ್ತಿ, ಬಾಳಗತ್ತಿ, ಕರಾಚೂರಿ, ಸುರಗಿ, ಕೈಸುರಗಿ, ಬಾಕು, ಕೊಂಬುಗತ್ತಿ(ಆನೆಯ ಕೊರಳಿಗೆ ಕಟ್ಟುವ ಕತ್ತಿ) ಎಂದು ಒಂಬತ್ತು ಹೆಸರುಗಳನ್ನು ಹೇಳುತ್ತಾರೆ.[೨೦೦] ಬಿ.ಎಲ್. ರೈಸ್ ಅವರು ವಿಜಯನಗರದ ಸೈನಿಕರು ಬಳಸುತ್ತಿದ್ದ ಕೆಲವು ಆಯುಧಗಳನ್ನು ಹೇಳುತ್ತ ಅವುಗಳೆಲ್ಲ ವಿಶೇಷವಾಗಿ ಪಾಂಡವಪುರ ಮತ್ತು ಮಂಡ್ಯ ತಾಲ್ಲೂಕುಗಳಲ್ಲಿ ದೊರಕಿದ ಮೀನಿನ ಬಾಲವಿರುವಂತಹ ಹಗುರವಾದ ಕತ್ತಿ ಮತ್ತು ಮಡಚಿ ಸೊಂಟದಲ್ಲಿ ಬಿಲ್ವನಂತೆ ಸಿಕ್ಕಿಸಿಕೊಳ್ಳುವಂತಹ ಕತ್ತಿಗಳನ್ನು[೨೦೧] ಕುರಿತು ಹೇಳುತ್ತಾರೆ. ವಿಜಯನಗರ ಕಾಲದ ಅಂದಿನ ಸಾಹಿತ್ಯ ಕೃತಿಗಳಲ್ಲಿ ಅನೇಕ ಆಯುಧಗಳ ಬಗ್ಗೆ ಉಲ್ಲೇಖಗಳಿವೆ. ಕಡುಗತ್ತಿ,[೨೦೨] ದೊಹತ್ತಿ[೨೦೩] ಎರಡೂ ಕೈಗಳಿಂದ ಎತ್ತಿ ಯುದ್ಧ ಮಾಡುವ ಕತ್ತಿ, ಕೈಕತ್ತಿ,[೨೦೪] ಬಂಕಿನೊಳು ಕಾಯ್ದಿರದಳಿಯಲು,[೨೦೫] ಪಟ್ಟಸ[೨೦೬] ಒಂದು ಬಗೆಯ ಹರಿತ ಬಾಯಿನ ಬರ್ಚಿ, ಈಟಿ, ಲೌಡಿ, ಮರುಳು ಕೈಗಳ ತೊಂತರ,[೨೦೭] ಕಂಡುಗೋಲು ಮರುಳು ಕೈಗಳನು ಕಡಿಕೆಯ್ದು ಮಾಡುವ ಕಮ್ಮರರಿಂ,[೨೦೮] ಸೈನಿಕರು ಯುದ್ಧದ ಸಂದರ್ಭದಲ್ಲಿ ಇಂತಹ ಆಯುಧಗಳನ್ನು ಬಳಸುತ್ತಿದ್ದರು. ಈ ರೀತಿಯ ಆಯುಧಗಳನ್ನು ರಚನೆ ಮಾಡುವ ಕಮ್ಮಾರ ಕಸುಬಿನವರು ಪ್ರಮುಖರಾಗಿದ್ದರು.[೨೦೯] ವಿದೇಶಿ ಪ್ರವಾಸಿಗರು ಶಸ್ತ್ರಾಸ್ತ್ರಗಳ ಕುರಿತು ಎಂದು ಖಡ್ಗ, ಬಿಲ್ಲುಬಾಣ, ಕಠಾರಿ, ದಂಡಸಹಿತವಾದ ಗಂಡಗೊಡಲಿ ಮತ್ತು ಭಲ್ಲೆಗಳನ್ನು ತಯಾರಿಸಲಾಗುತ್ತಿತ್ತು.[೨೧೦]

ಕತ್ತಿ ಕಠಾರಿಗಳನ್ನು ಬಳಸುತ್ತಿದ್ದುದಕ್ಕೆ ನಿದರ್ಶನವಾಗಿ,

ಎತ್ತ ನೋಡಿದೊಡೆ ಭೇದಿಸಲಳವಲ್ಲ ಕಾ
ಗ‍ರ್ತ್ತಲೆ ಕವಿದುದಾಹವದೆ
ಕತ್ತಿ ಕಠಾರಿಯ ಭಟರೊಪ್ಪಿದರು ಪುರು
ಷೋತ್ತಮನಂಗರಕ್ಷೆಯಲಿ.[೨೧೧]

ಈ ರೀತಿಯ ಕಬ್ಬಿಣದ ಆಯುಧಗಳನ್ನು ತಯಾರಿಸಲು ಕಬ್ಬಿಣ ಬೇಕು. ಹಂಪಿ ಪರಿಸರದಲ್ಲಿ ಹೊಸಪೇಟೆ, ಸಂಡೂರು, ಬಳ್ಳಾರಿಯವರೆಗೆ ಹರಡಿರುವ ಕಬ್ಬಿಣದ ಅದಿರನ್ನು ಹೊಂದಿದೆ.

ಬೆಟ್ಟದ ಆಶ್ರಯದಲ್ಲಿ ಬೃಹತ್ ಪ್ರಮಾಣದ ಕಬ್ಬಿಣದ ಕಾರ್ಯಗಾರವೆ ಬೆಳೆದು ಬಂದಿತ್ತು. ಇಲ್ಲಿ ತಯಾರಾದ ಕಬ್ಬಿಣದ ಉಪಕರಣಗಳು ಸುತ್ತಮುತ್ತಲಿನ ಸ್ಥಳಗಳಿಗೆ ರಫ್ತಾಗುತ್ತಿದ್ದವು. ವಿಜಯನಗರ ಪೂರ್ವದಲ್ಲಿ ಹಿರೇಬೆಣಕಲ್, ಹಂಪಿ ಪ್ರದೇಶದ ಬೃಹತ್ ಶಿಲಾಗೋರಿಗಳಲ್ಲಿ ಕಬ್ಬಿಣದ ಉಪಕರಣಗಳು ದೊರಕಿವೆ. ಇಲ್ಲಿಯ ಬೆಟ್ಟಗಳ ಕಲ್ಲಾಶ್ರಯದಲ್ಲಿ ಹೇರಳವಾಗಿರುವ ಗವಿವರ್ಣ ಚಿತ್ರಗಳು ಈಟಿ, ಭರ್ಚಿ, ಬಾಣ ಮುಂತಾದ ಆಯುಧಗಳನ್ನು ತಯಾರಿಸುತ್ತಿದ್ದುದಕ್ಕೆ ಸಾಕ್ಷಿಯಾಗಿವೆ. ಇಲ್ಲಿಯ ಬೃಹತ್ ಶಿಲಾಗೋರಿಗಳಲ್ಲಿ ದೊರೆತ ಕಬ್ಬಿಣ ಉಪಕರಣಗಳ ವೈಜ್ಞಾನಿಕ ಅಧ್ಯಯನದಿಂದ ಅವುಗಳನ್ನು ಕುಡಿತಿನಿ, ಸಂಡೂರು ಬೆಟ್ಟಗಳ ಅದಿರಿನಿಂದ ಕ್ರಿ.ಪೂ. ೧೦೦೦ದಲ್ಲಿ ತಯಾರಿಸಿರುವುದೆಂದು ತಿಳಿದುಬಂದಿದೆ.[೨೧೨]

ಕೊಪ್ಪಳ ತಾಲ್ಲೂಕು ಲಿಂಗನಬಂಡಿಯ ಪರಿಸರದಲ್ಲಿ ಸೂಕ್ಷ್ಮಶಿಲಾಯುಗದ ಆಯುಧಗಳು, ಕಬ್ಬಿಣ ಬೃಹತ್ ಶಿಲಾಯುಗದ ಕಪ್ಪು, ಕೆಂಪು ಮಡಿಕೆಗಳು, ಕಬ್ಬಿಣದ ಕಿಟ್ಟ, ಕಬ್ಬಿಣ ತಯಾರಿಸುವ ಕ್ರಿಯೆಯಲ್ಲಿ ಅದರ ರಸ ಸೋರಿ ಮಣ್ಣಿನಲ್ಲಿ ಗಟ್ಟಿಗೊಂಡೆಯ ಅವಶೇಷಗಳಿವೆ. ಇವುಗಳನ್ನು ಗಮನಿಸಿದರೆ ಕಬ್ಬಿಣಯುಗದ ಆರಂಭ ಕಾಲದಲ್ಲಿಯೇ ಅದಿರನ್ನು ಕರಗಿಸುವ ಕಲೆ ಇಲ್ಲಿ ನಡೆಯುತ್ತಿತ್ತೆಂದು ತಿಳಿಯುತ್ತದೆ. ವಿಜಯನಗರ, ಅವರ ನಂತರದ ಕಾಲದಲ್ಲಿ ಕಮ್ಮಾರಿಕೆ ಲಿಂಗನಬಂಡಿಯಲ್ಲಿ ಬೆಳೆದುಬಂದಿತು. ಆ ವೇಳೆಯಲ್ಲಿ ಕಮ್ಮಾರಿಕೆಯಲ್ಲಿ ಪರಿಣಿತನಾದ ಮಾನಪ್ಪಯ್ಯ ಈ ಗ್ರಾಮಕ್ಕೆ ಬಂದು ಬೆಟ್ಟದ ಮೇಲಿದೆ. ಇಂದಿಗೂ ಗುಡಿಯಲ್ಲಿರುವ ಅವಶೇಷಗಳು ಜನರಿಂದ ಪೂಜೆಗೊಳ್ಳುತ್ತವೆ.[೨೧೩] ಕುಡಿತಿನಿ ಎಪ್ಪತ್ತು ಹಳ್ಳಿಗಳ ಆಡಳಿತ ಕೇಂದ್ರವಾದ ಈಗ್ರಾಮ 'ಸಬಾಳ ಎಳ್ತತ್ತು' ಎಂದು ಹೆಸರುವಾಸಿಯಗಿತ್ತು. ಈ ಪ್ರದೇಶದಲ್ಲಿ ಹೇರಳವಾಗಿರುವ ಕಬ್ಬಿಣದ ಅದಿರನ್ನು ಬಳಸಿ ಕಬ್ಬಿಣದ ಉತ್ಪಾದನೆಯಲ್ಲಿ ತೊಡಗಿಸಲಾಯಿತು. ಇಲ್ಲಿ ಪ್ರಾರಂಭವಾದ ಕಬ್ಬಿಣದ ಕಾರ್ಯಗಾರ ವಿಜಯನಗರದಲ್ಲಿ ಮುಂದುವರೆದು ಶಸ್ತ್ರಾಸ್ತ್ರ ಮತ್ತು ಕೃಷಿ ಉಪಕರಣಗಳನ್ನು ಕಮ್ಮಾರ ಕಸುಬಿನವರು ಮಾಡಿ ಪೇಟೆಗಳಲ್ಲಿ ಮಾರಾಟ ಮಾಡುತ್ತಿದ್ದುದಲ್ಲದೆ, ಸುತ್ತಮುತ್ತಲಿನ ಪ್ರದೇಶಗಳಿಗೂ ರಪ್ತು ಮಾಡುತ್ತಿದ್ದರು ಗೊಲ್ಲರಹಳ್ಳಿಯಲ್ಲಿ(ಹೊಸಪೇಟೆ ತಾ) ಸುಮಾರು ೧೫ ಅಡಿ ಎತ್ತರದ ಕಬ್ಬಿಣ ಕರಗಿಸಿದ ಅವಶೇಷಗಳ ದಿಬ್ಬವಿದೆ. ವಿಜಯನಗರ ಕಾಲದಲ್ಲಿರುವ ಕಮ್ಮಾರ ಕಸುಬಿನವರಿಗೆ ಕಾಳಿಕಾ ದೇವಾಲಯವನ್ನು ಕಟ್ಟಿಸಿ ದತ್ತಿ ಬಿಡಲಾಯಿತು.[೨೧೪] ದಿಬ್ಬದಲ್ಲಿ ದೊರಕಿರುವ ಕೊಳವೆ, ಕಬ್ಬಿಣದ ಕಿಟ್ಟ, ಕುಲುಮೆ ತಯಾರಿಕೆಯಲ್ಲಿ ಬಳಸಿದ ಇಟ್ಟಿಗೆ ಮುಂತಾದ ವಸ್ತುಗಳನ್ನು ಗಮನಿಸಿದರೆ ಕುಲುಮೆಗಳನ್ನು ಸುಮಾರು ಐದು ಅಡಿ ಎತ್ತರವಾಗಿ ವೃತ್ತಾಕಾರದಲ್ಲಿ ನಿರ್ಮಿಸಿ ಗಾಳಿ ಹಾಕಲು ಎರಡು ತಿದಿಗಳನ್ನು ಕೂಡಿಸುತ್ತಿದ್ದರು. ಆಗ ಬಳಸಿದ ಇಕ್ಕಳು ಭರ್ಚಿ, ಅಡಿಗಲ್ಲು ಈ ದಿಬ್ಬದಲ್ಲಿ ಕಂಡುಬಂದಿವೆ. ಅಡಿಗಲ್ಲನ್ನು ಕಾಳಿಕಾ ದೇವಾಲಯದಲ್ಲಿಟ್ಟು ತಮ್ಮಟೇಶ್ವರನೆಂದು ಆರಾಧಿಸಲಾಗುತ್ತದೆ.

ಹಂಪಿ ಪರಿಸರದಲ್ಲಿ ನಂದಿ ಬೆಟ್ಟ, ಚಿಲಕನಹಟ್ಟಿ, ಗೊಲ್ಲರಹಳ್ಳಿ ಮುಂತಾದ ಪ್ರದೇಶಗಳಲ್ಲಿ ಕಬ್ಬಿಣ ಉತ್ಪಾದನೆಯ ನೆಲೆಗಳು ಹೇರಳವಾಗಿ ದೊರೆತಿವೆ. ಈ ನೆಲೆಗಳ ಬಗೆಗಿರುವ ವರದಿಗಳ ಆಧಾರದ ಮೇಲೆ ಹಾಗೂ ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖಗೊಂಡ ಆಯುಧಗಳನ್ನು ಗಮನಿಸಿದರೆ ಅಂದು ಕಮ್ಮಾರ ಕಸುಬಿನವರು ಹೇಗೆ ತಮ್ಮ ಪ್ರೌಢತೆಯನ್ನು ಸಾಧಿಸಿದ್ದರು

ಎಂದು ತಿಳಿಯುತ್ತದೆ. ವಿಜಯನಗರ ಸಾಮ್ರಾಜ್ಯದಲ್ಲಿ ಉತ್ಪಾದಿತವಾಗುತ್ತಿದ್ದ ಕಬ್ಬಿಣವು ತನ್ನ ಆಂತರಿಕ ಮತ್ತು ಬಾಹ್ಯ ಬೇಡಿಕೆಗಳೆರಡನ್ನೂ ಈಡೇರಿಸಿಕೊಳ್ಳಲು ಸಾಕಾಗುವಷ್ಟು ಪ್ರಮಾಣದ್ದಾಗಿತ್ತು. ಹಾಗೂ ಭಾರತದ ಸಮುದ್ರ ತೀರಗಳಿಂದ ಕಬ್ಬಿಣ ತುಂಬಿದ ಅನೇಕ ಹಡಗುಗಳು ಹೋಗುತ್ತಿದ್ದವು.[೨೦೫]

೬. ಕಂಚುಗಾರರು

ಮಾನವನು ತಾಮ್ರ ಮತ್ತು ಕಂಚುಗಳನ್ನು ತನ್ನ ಉಪಕರಣಗಳ ತಯಾರಿಕೆಗೆ ಬಳಸಿದ ಲೋಹಗಳಲ್ಲಿ ಅತ್ಯಂತ ಪ್ರಾಚೀನ ವಾದವುಗಳಾಗಿವೆ. ಕಂಚುಗಾರರು ಅಂದರೆ ತಾಮ್ರ, ಹಿತ್ತಾಳೆ, ಕಂಚು ಈ ಮೂರು ಲೋಹಗಳಿಂದ ಕೆಲಸ ಮಾಡುವವರನ್ನು ಕಂಚುಗಾರರು ಎಂದು ಕರೆಯಬಹುದು. ಪಾಂಚಾಳರಲ್ಲಿ ಒಂದು ಬಣಕ್ಕೆ ಸೇರಿದವರು ಈ ಕಸುಬನ್ನು ಮಾಡುವರು. ತಾಮ್ರ ಮತ್ತು ತವರಗಳನ್ನು ಮಿಶ್ರಮಾಡಿ ಹೊಸ ಸಂಯುಕ್ತ ಲೋಹ ಕಂಚನ್ನು ಅವಿಷ್ಕರಿಸಲಾಯಿತು. ಕ್ರಿಸ್ತಪೂರ್ವದ ಮತ್ಸ್ಯಪುರಾಣದಲ್ಲಿ ಕಂಚಿನ ವಿಗ್ರಹಗಳನ್ನು ಎರಕಹೊಯ್ಯುವ ತಂತ್ರಜ್ಞಾನದ ಬಗ್ಗೆ ವಿವರಣೆಯಿದೆ. ತಕ್ಷಶಿಲೆಯಲ್ಲಿ ಕೈಗೊಳ್ಳಲಾಗಿದ್ದ ಉತ್ಖನನದಲ್ಲಿ ಲೋಹಶಿಲ್ಪಕರ್ಮದ ಆಧುನಿಕತೆಯನ್ನು ತೋರಿಸುವ ವಸ್ತುಗಳು ದೊರೆತಿದ್ದು, ಅದು ಬಹುಶಃ ಮುಂದಿನ ಲೋಹಕರ್ಮಕ್ಕೆ ಬುನಾದಿಯಾಯಿತೆಂದು ಹೇಳಲಾಗಿದೆ. ನೃತ್ಯಗಾರ್ತಿ ತರಣಿ ಮೂರ್ತಿಯು ಗಮನಾರ್ಹವಾದ ಶಿಲ್ಪವಾಗಿದೆ.[೨೦೬]

ಭಾರತದಲ್ಲಿ ಲೋಹಶಿಲ್ಪವನ್ನು ಧಾರ್ಮಿಕ, ಪೂಜಾರ್ಹ ಮತ್ತು ಇನ್ನಿತರ ಉಪಯೋಗದ ಮೂರ್ತಿಗಳೆಂದು ವಿಭಜಿಸಲಾಗಿದೆ. ಇದಕ್ಕಾಗಿ ಹಿತ್ತಾಳೆ, ತಾಮ್ರ, ಕಂಚು ಇವುಗಳನ್ನು ಅಡುಗೆ ಪಾತ್ರೆ, ಊಟದ ತಟ್ಟೆಗಳಿಗಾಗಿ ಬಳಸುವರು. ಸಾಹಿತ್ಯ ಕೃತಿಗಳಲ್ಲಿ ಕಂಚುಗಾರರ ಕುರಿತು ಅನೇಕ ಉಲ್ಲೇಖಗಳಿವೆ. ಅವರು ಯಾವ ರೀತಿಯ ಉಪಕರಣಗಳನ್ನು ತಯರಿಸುತ್ತಿದ್ದರು. ಎಂಬುದನ್ನು ನೋಡಬಹುದು. ಕಂಚುಗಾರನು ಊಟದ ತಟ್ಟೆ, ಕನ್ನಡಿ, ಸಿಪ್ಪು (?) ಸೌಟು, ಬಟ್ಟಲು, ತಾಳ, ಗಿಣ್ಣಿಲು ಮೊದಲಾದವುಗಳನ್ನು ತಯಾರಿಸುತ್ತಿದ್ದನೆಂದು ನಯಸೇನನು ಹೇಳುತ್ತಾನೆ.[೨೦೭] ಊಟ ಮಾಡುವ ಕಂಚಿನ ತಟ್ಟೆಯ ಉಲ್ಲೇಖ ವಚನದಲ್ಲಿದೆ. ಲಿಂಗ ಬೀಳಲು ಬಲ್ಲುದೆ? ಭೂಮಿ ತಾಳಲು ಬಲ್ಲುದೆ? ಕಮ್ಮಾರ ಕಡೆದು ಮಾರೆದ, ಬೋಗಾರ ತಂದು ಮಾರೆದ.[೨೦೮] ಊಟ ಮಾಡುವ ತಟ್ಟೆಯನ್ನು ಕಂಚು ಎಂದು ಕರೆಯುತ್ತಿದ್ದರು. ಕನ್ನಡಿಯನ್ನೂ ಕಂಚಿನಿಂದಲೇ ತಯಾರಿಸುತ್ತಿದ್ದರು. ಪ್ರಾಚೀನ ಕರ್ನಾಟಕದಲ್ಲಿ ಗಾಜಿನ ಕನ್ನಡಿಯು ಬಳಕೆಯಲಿರಲ್ಲ ಕಂಚಿನ ಅಥವಾ ಬೇರೆಯ ಲೋಹದ ತಟ್ಟೆಗಳನ್ನು ಚೆನ್ನಾಗಿ ಬೆಳಗಿ ಅದನ್ನೇ ಕನ್ನಡಿಯಂತೆ ಬಳಸುತ್ತಿದ್ದರು.[೨೦೯] ಇಂದಿಗೂ ತಿರುವಾಂಕೂರು ಮುಂತಾದ ಪ್ರದೇಶಗಳಲ್ಲಿ ಲೋಹದ ತಗಡುಗಳಿದ್ದ ಕನ್ನಡಿಯನ್ನು ತಯಾರಿಸುವ ರೂಢಿಯಿದೆ[೨೧೦]ಎಂದು ಗೋಪಿನಾಥರಾವ್ ಹೇಳುತ್ತಾರೆ. ಹಿತ್ತಾಳೆ ಎಂಬ ಮಿಶ್ರ ಲೋಹದ ಹೆಸರು ಮಾತ್ರ ವಚನಗಳಲ್ಲಿ ದೊರೆಯುತ್ತದೆ. ಹಾಗೆಯೆ ತವರ, ತಾಮ್ರಗಳ ಹೆಸರೂ ಉಕ್ತವಾಗಿದೆ. ಆದಯ್ಯ ಸೀಸವನ್ನು ಹೆಸರಿಸುತ್ತಾನೆ. ಅವನ ಮಾತಿನಿಂದ ಸೀಸವನ್ನು ಚಿನ್ನಕ್ಕೆ ಬೆರೆಸುತ್ತಿದ್ದರೆಂದು ಹೇಳಬಹುದಾಗಿದೆ.[೨೧೧] ಲೋಹದ

ಪಾತ್ರೆಗಳನ್ನು ಮಾರುವವರಿಗೆ ಬೋಗಾರರು ಎಂದು ಕರೆಯುತ್ತಿದ್ದರು. ಮಲಹರ ಕಾಯಕದ ಚಿಕ್ಕದೇವಯ್ಯ ಎಂಬ ವಚನಕಾರನು ವಚನದ ಮೂಲಕ ತುಂಬ ಸ್ವಾರಸ್ಯಕರವಾದ ವಿಷಯವನ್ನು ಹೇಳುತ್ತಾನೆ. ಮುರಿಗಂಚು, ತವರ, ಹಿತ್ತಾಳೆ, ತಾಮ್ರ ಮೊದಲಾದ ಲೋಹವ ತನ್ನಿ, ಕಳ್ಳವಣ, ಕಂದುವಳ್ಳಿ ಮೊದಲಾದ ರೊಕ್ಕವ ತನ್ನಿ ನಿಮಗಲ್ಲದೊಡವೆಯ ನಗ, ನಿಮಗೊಳ್ಳೆಯೊಡವೆಯಂ ಕೊಡುವೆ ಎನ್ನ ಕಂಬಿಯ ಚೀಲವಂ ಬಿಡುವೆ ಅಲ್ಲಿರ್ದ ಸಂಭಾರದ್ರವ್ಯವ ಕೊಡುವೆನೆಂಬುದ ಕೈಯನ್ನ ನಂಬಿ ಬನ್ನಿ[೨೨] ಈ ವಚನದಲ್ಲಿ ಒಡೆದು ಹೋದ ಪಾತ್ರೆ, ಖೋಟಾನಾಣ್ಯ, ಶುದ್ಧವಲ್ಲದ ಬೆಳ್ಳಿಯ ನಾಣ್ಯಗಳನ್ನು ತೆಗೆದುಕೊಂಡು ತಾನು ತನ್ನ ಕಂಬಳಿಯ ಚೀಲದಲ್ಲಿ ತಂದ ಸಾಂಬಾರ ದ್ರವ್ಯಗಳನ್ನು ನೀಡುತ್ತಿದ್ದ. ಈ ವಚನಕಾರನ ಹೆಸರನ್ನು ಗಮನಿಸಿದರೆ ಇದಕ್ಕೆ ಮಲಹರ ಕಾಯಕವೆಂಬ ಹೆಸರಿತ್ತೆಂದು ತಿಳಿಯುವುದು, ಹಳೆಯ ಲೋಹಗಳನ್ನು ಪ್ರಾಯಶಃ ಇವನು ಆಯಾ ಲೋಹದ ಕೆಲಸಗಾರರಿಗೆ ಮಾರುತ್ತಿದ್ದ ಇಂದಿಗೂ ಗುಜರಿಯವರು ಹಳೆಯ ಪಾತ್ರೆ ಸಾಮಾನುಗಳನ್ನು ತೆಗೆದುಕೊಂಡು ಅದಕ್ಕೆ ಪ್ರತಿಯಾಗಿ ಹಣವನ್ನು ಅಥವಾ ಹೊಸ ಪಾತ್ರೆಗಳನ್ನು ಕೊಡುವುದಿದೆ.

ಕಂಚುಗಾರರ ಬಗ್ಗೆ ಅನೇಕ ಶಾಸನಗಳಲ್ಲಿ ಉಲ್ಲೇಖಗಳಿವೆ. ಕಂಚುಗಾರರು[೨೩] ತಯಾರಿಸಿದ ಪಾತ್ರೆಗಳನ್ನು ಭಂಡಸಾಲೆಯವರು ಮಾರುತ್ತಿದ್ದರೆಂದು ಕಾಣುತ್ತದೆ. ಮೇರೆಯನ್ನು ಹೇಳುವಾಗ 'ಭಂಡಸಾಲೆಯವರ ಮೇರೆ'[೨೪] ಎಂದು ಒಂದು ಶಾಸನ ಹೇಳುತ್ತದೆ. ಕ್ರಿ.ಶ. ೯೮೪ ರ ಬಳ್ಳಾರಿ ಶಾಸನವು ಶ್ರೀಮತ್ ಗಜಾಧರಯ್ಯ ಕೊಳ್ಗಲ್ಲಾಳ ಲೋಹಾಸನಮಸ್ತಕಸ್ಥಿತನಾಗಿ ರಾಜ್ಯಂಗೆಯುತ್ತುಂ ಚಂಗಗಾವುಡ್ಡನ[೨೫] ಎಂದು ಮುಂದುವರೆಯುತ್ತದೆ. ಇಲ್ಲಿನ ಕಂಚುಗಾರರು ಲೋಹಾಸನಗಳನ್ನು ತಯಾರಿಸುತ್ತಿದ್ದರು. ಕ್ರಿ.ಶ. ೧೧ನೆಯ ಶತಮಾನಕ್ಕೆ ಸೇರಿದ ನಟರಾಜ, ಶಿವ, ಪಾರ್ವತಿ ಮೊದಲಾದ ಲೋಹದಿಂದ ಎರಕ ಹೊಯ್ದು ವಿಗ್ರಹಗಳು ಚೆನ್ನಪಟ್ಟಣದ ಹತ್ತಿರದ ಕೂಡಲೂರು ಗ್ರಾಮದಲ್ಲಿ ಸಿಕ್ಕಿರುವುದನ್ನು ಗಮನಿಸಿದರೆ ಇದರ ಆಧಾರದ ಮೇಲೆ ಆಗಿನ ಕಾಲಕ್ಕಾಗಲೇ ಕಂಚುಗಾರರು ಮಿಶ್ರಲೋಹವನ್ನು ಎರಕ ಹೊಯ್ದು ವಿಗ್ರಹಗಳನ್ನು ತಯಾರಿಸುವುದರಲ್ಲಿ ಪರಿಣತರಾಗಿದ್ದರು[೨೬] ಎಂದು ಹೇಳಬಹುದು. ಕ್ರಿ.ಶ. ೧೧೧೬ರ ಮೈಸೂರಿನ ಶಾಸನವು ಬಂಗಾರ, ಕಬ್ಬಿಣ, ತಾಮ್ರ ಮೊದಲಾದ ಲೋಹಕಮ್ಮಟಗಳಲ್ಲಿ ಮತ್ತು ವಜ್ರ, ಮುತ್ತು, ರತ್ನ ಮೊದಲಾದ ರತ್ನಕರ್ಮಗಳಲ್ಲಿ ಪರಿಣಿತರಾಗಿದ್ದುದು ಅಲ್ಲದೆ, ತೀರ್ಥಂಕರ, ವಿಷ್ಣು ಮೊದಲಾದ ದೇವತೆಗಳ ಮೂರ್ತಿಗಳನ್ನು ಎರಕ ಹೊಯ್ದು[೨೭] ತಯಾರಿಸುತ್ತಿದ್ದರೆಂದು ಹೇಳಲಾಗಿದೆ. ಕ್ರಿ.ಶ. ೧೦೫೪ರ ಒಂದು ಶಾಸನ ಕಂಚುಗಾರನಾದ ನಾಚೋಜ[೨೮] ಎಂಬ ಕಾಸಿಂಗನನ್ನು ಗುರುತಿಸಲಾಗುತ್ತಿದೆ. ಈ ಮೇಲಿನ ಎಲ್ಲ ಶಾಸನೋಕ್ತ ದಾಖಲೆಗಳು ವಿಜಯನಗರ ಪೂರ್ವದಲ್ಲಿದ್ದರೂ, ಅದೇ ರೀತಿಯ ಕಸುಬನ್ನು ಕಂಚುಗಾರರು ತಮ್ಮ ಕಸುನಬ್ಬು ವಿಜಯನಗರ ಕಾಲದಲ್ಲಿಯೂ ಮುಂದುವರೆಸಿಕೊಂಡು ಬಂದಿದ್ದಾರೆ.

ವಿಜಯನಗರ ಕಾಲದಲ್ಲಿ ಕಂಚುಗಾರರ ಹೆಸರುಗಳಿರುವ ಉಲ್ಲೇಖಗಳಲ್ಲಿ ಕಾಳೋಜ ಮತ್ತು ಅವಕೋಜ ಎಂಬಿಬ್ಬರು ಕಂಚಿನ ಕೈಗಾರಿಕೋದ್ಯಮಿಗಳಾಗಿದ್ದ ಇವರು ಕ್ರಿ.ಶ.೧೩೯೫ರಲ್ಲಿ-ಬೇಲೂರಿನ-ಚೆನ್ನಕೇಶವನ ದೇವಾಲಯದಲ್ಲಿರುವ ಕಂಚಿನ ದೀಪಸ್ತಂಭವನ್ನು ತಯಾರು

ಮಾಡಿದ್ದಾರೆ. ಇವರು ಕಂಚುಗಾರ ಮಾರಾಳ ನಿಂದೋಜನ ಮಕ್ಕಳಾದ ತಮ್ಮನ್ನು ಪಟ್ಟಣದ ಕಂಚುಗಾರರು ಎಂದು ಹೇಳಿಕೊಂಡಿದ್ದಾರೆ.[೨೯] ಕೆ.ಎಸ್. ಕುಮಾರಸ್ವಾಮಿ ಅವರು ತಮ್ಮ ಕೃತಿಯಲ್ಲಿ ನಾಚೋಜ, ಕಾಳೋಜ ಮತ್ತು ಅವಕೋಜ[೩೦] ಎನ್ನುವ ಕಂಚುಗಾರರ ಹೆಸರುಗಳನ್ನು ಉಲ್ಲೇಖಿಸಿದ್ದಾರೆ.

ದಿವ್ಯ ರೂಪಿಣಿ ನುಡಿವಳಿಂತು ಕೇಳೆ ಸಿರನಾಥ
ಪೂರ್ವದಳಿ ದೇವಾದಿಗಳಿ ಕೈದುಗಳನು
ಕರಗಿಸುತ ವಿರಚಿಸಿದ ವಿಶ್ವಕರ್ಮನು ಅಸುರ
ಸಂಹಾರ ಕಾರ್ಯಕೇಶನಿಗಿತ್ತನದನು.[೩೧]

ವಿಜಯನಗರ ಕಾಲದಲ್ಲಿ ಕಂಚುಗಾರರು ದೇವತಾ ಮೂರ್ತಿಗಳನ್ನು ಮಾಡುತ್ತಿದ್ದರು ಎಂಬುದು ಸ್ಪಷ್ಟ. ಈ ಸಾಮ್ರಾಜ್ಯದಲ್ಲಿ ಒಂದು ಪ್ರಮುಖ ಕಸುಬಾಗಿತ್ತು. ಅವರು ಅರಮನೆಯ ಪಾತ್ರೆ ಪಡಗಗಳು, ಶ್ರೀಮಂತರು, ಆಡಳಿತಾಧಿಕಾರಿಗಳು, ಜನಸಾಮಾನ್ಯರು ಉಪಯೋಗಿಸುತ್ತಿದ್ದ ವಸ್ತುಗಳನ್ನು ತಯಾರು ಮಾಡುತ್ತಿದ್ದರು. ಅಂದು ಎರಡು ರೀತಿಯ ಕಂಚುಗಾರರಿದ್ದರು. ಅರಸು ಮನೆತನಕ್ಕೆ ಹಾಗೂ ದೇವಸ್ಥಾನಗಳಿಗೆ ಸಂಬಂಧಿಸಿದ ಕೆಲಸಗಳನ್ನು ಮಾಡುವ ಕಂಚುಗಾರರು ಹಾಗೂ ಸಾಮಾನ್ಯ ಜನರು ಉಪಯೋಗಿಸುತ್ತಿದ್ದ ವಸ್ತುಗಳನ್ನು ಮಾಡುತ್ತಿದ್ದ ಕಂಚುಗಾರರಿದ್ದರು. ಪರದರರ ಕರಣಿಕರ, ಮಡಿವಾಳ, ಮಾಲೆಕಾರ, ಕಂಚುಗಾರ, ಕಲ್ಲುಕುಟಿಗ, ಬಡಗಿ, ಕಮ್ಮರರು, ಅಂಚುಗಾರರು, ಸಮ್ಮಗಾರರು ಅಚ್ಚುಗಾರ, ಬಣ್ಣಗಾರ ಮಣಿಹಗಾರರ ಕೇರಿಗಳೆಸೆದವುದ್ದದೊಳು.[೩೨] ಪ್ರತ್ಯೇಕ ಕೇರಿಗಳಲ್ಲಿ ವಾಸಮಾಡುತ್ತಿದ್ದರು.

ವ್ಯಾಪಾರಸ್ಥರು ತೂಕಕ್ಕೆ ತ್ರಾಸನ್ನೂ, ಅಳತೆಗೆ ಬಳ್ಳ, ಕೊಳಗಗಳನ್ನು ಉಪಯೋಗಿಸುತ್ತಿದ್ದರು ಎಂಬುದಕ್ಕೆ ಸಾಹಿತ್ಯಾಧಾರಗಳಿವೆ. ತ್ರಾಸಿನಲ್ಲಿ ಕಪ್ಪಡದ ದಿಂಡುಗಳನ್ನಿಟ್ಟು ತೂಗಿದ ಒಂದು ಸೊಗಸಾದ ಚಿತ್ರ ಪ್ರೌಢರಾಯನ ಕಾವ್ಯದಲ್ಲಿ ದೊರೆಯುತ್ತದೆ. ತ್ರಾಸಿನ ಕೊಡನೊಂದು ಬಿರ್ದೊಡೂಂದುರುಪುದೆ.[೩೩] ಧಾನ್ಯಗಳನ್ನು ಅಳೆದುಕೊಡುವ ಪದ್ಧತಿ ಅಂದರೆ ಮೆಟ್ರಿಕ್ ಪದ್ಧತಿ ಬಳಕೆಗೆ ಬರುವವರೆಗೆ ನಮ್ಮಲ್ಲಿ ರೂಢಿಯಲ್ಲಿತ್ತು. ಹಿಂದಿನ ಕಾಲದಲ್ಲೂ ಧಾನ್ಯಗಳನ್ನು ಅಳೆಯಲು ಸೇರು, ಬಳ್ಳ, ಕೊಳಗಗಳನ್ನು ಉಪಯೋಗಿಸುತ್ತಿದ್ದರು. ಸೇರು, ಬಳ್ಳ, ಕೊಳಗಗಳನ್ನು ಮಾಡುವವರು ಕಂಚುಗಾರರೆ ಆಗಿದ್ದರು. ಹಳ್ಳಿಗಳಲ್ಲಿ ಅಳತೆಯ ಸಂಪ್ರದಾಯವನ್ನು ಇಟ್ಟುಕೊಂಡಿರುವ ಮನೆಯಲ್ಲಿ ಸೇರು, ಬಳ್ಳ ಮುಂತಾದ ಅಳೆಯುವ ಸಾಧನಗಳನ್ನು ಇಂದಿಗೂ ಕಂಡು ಬರುತ್ತವೆ.

ಕಂಚುಗಾರರು ಅಡುಗೆ ಮನೆಯ ಸಾಮಾನುಗಳನ್ನು ಮಾಡುತ್ತಿದ್ದರು ಎಂಬುದಕ್ಕೆ

ರತ್ನಾಕರವರ್ಣಿ ಹೀಗೆ ಹೇಳುತ್ತಾನೆ.

ಬೆಳಗಿದಡ್ಡಣಿಗೆ ಬಟ್ಟಲು ಗಿಂಡಿ ಹರಿವಾಣಗಳ ರನ್ನ ಚಿನ್ನ
ಮಾಟಗಳ ಬಳಗಣಿಂ ತಂದಿಡುತಿರ್ದರರಸಗೆ[೩೪]
ಹಾಗೆಯೇ ಊಟದ ಪರಿಕರಗಳನ್ನು ಇಟ್ಟಿರುವ ಚಿತ್ರ
ಎಡದ ಭಾಗದಿ ಗಿಂಡಿ ಬಲದ ಭಾಗದಿ ಹೊನ್ನ ಪಡಿಗೆ ಮುಂದಡ್ಡಣಿ
ಗೆಯೊಳು ಎಡೆಗೊಂಡ ಹರಿವಾಣ.[೩೫]

ಹೀಗೆ ಕಂಚುಗಾರಿಕೆ ಕಸುಬು ಅಂದು ಸಾಮಾಜೀಕ ಜೀವನದಲ್ಲಿ ಪ್ರಮುಖ ಪಾತ್ರವನ್ನು ವಹೀಸಿತ್ತು, ದೇವಸ್ಥಾನದ ಮೂರ್ತಿಗಳು, ಅಂದು ಬಳಸಿದ ಕಂಚಿನ ಸಾಮಗ್ರಿಗಳನ್ನು ಕಮಲಾಪುರ ಮ್ಯೂಸಿಯಂನಲ್ಲಿ ಇಂದಿಗೂ ನೊಡಬಹುದು.

೭. ತೆಲ್ಲಿಗರು

ಎಣ್ಣೆಯ ಉತ್ಪಾದನೆ ಅಂದು ಪ್ರಮುಖ ಕಸುಬಾಗಿತ್ತು. ಎಣ್ಣೆ ಉತ್ಪಾದಿಸುವವರನ್ನು ತೈಲಿಕ, ತೆಲ್ಲಿಗಾರ, ಗಾಣಿಗ, ಎಂಬ ಹೆಸರುಗಳಿಂದ ಕರೆಯಲಾಗುತ್ತಿತ್ತು. ಇವರ ಬಗ್ಗೆ ಇರುವ ಶಾಸನಗಳನ್ನು ಗಮನಿಸಿದರೆ ಕರ್ನಾಟಕದಲ್ಲಿ ಎಣ್ಣೆಯ ಉತ್ಪಾದನೆ ಅತ್ಯಂತ ವ್ಯಾಪಕವಾಗಿ ನಡೆಯುತ್ತಿದ್ದುದು ಮನದಟ್ಟಾಗುತ್ತದೆ. ಎಣ್ಣೆಯ ಉತ್ಪಾದನೆ ಮತ್ತು ವಿತರಣೆಯನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದರು. ತಮ್ಮದೆ ಆದ ಪ್ರತ್ಯೇಕ ಸಂಘಗಳನ್ನು ರಚಿಸಿಕೊಂಡಿದ್ದರು. ಅವುಗಳನ್ನು ತೆಲ್ಲಿಗರ ಕೊತ್ತಳಿ,[೨೩೬] ಗಾಣಿಗರೊಕ್ಕಲು,[೨೩೭] ತೆಲಿಗ ಕೊತ್ತಳಿ,[೨೩೮] ತೆಲ್ಲಿಗರ ಅಯ್ವತ್ತೊಕ್ಕಲು[೨೩೯] ಎಂದು ಕರೆಯುತ್ತಿದ್ದರು. ಎಣ್ಣೆಯ ಉತ್ಪಾದನೆ ಮತ್ತು ಮಾರಾಟ ಒಂದೇ ಕಡೆ ನಡೆಯುತ್ತಿತ್ತು. ಎಣ್ಣೆಯನ್ನು ಹೇಗೆ ತಯಾರಿಸುತ್ತಿದ್ದರು ಎಂಬುದಕ್ಕೆ ಅನೇಕ ದಾಖಲೆಗಳಿವೆ. ಎತ್ತುಗಾಣ ಕೈಗಾಣ, ಮೆಟ್ಟುಗಾಣಗಳಲ್ಲಿ ಎಣ್ಣೆ ಬೀಜಗಳನ್ನು ಹಾಕಿ ಉತ್ಪಾದಿಸುತ್ತಿದ್ದರು.[೨೪೦] ಇವರು ಉಪಯೋಗಿಸುತ್ತಿದ್ದ ಗಾಣಗಳ ಮೇಲೆ ತೆರಿಗೆಯನ್ನು ಹಾಕಲಾಗುತ್ತಿತ್ತು. ಅವುಗಳನ್ನು ಗಾಣದೆರೆ, ಗಾಣಾಯ, ಗಾಣದ ಸುಂಕ ಮುಂತಾದ ಹೆಸರುಗಳಿಂದ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.[೨೪೧] ಕ್ರಿ.ಶ. ೧೫೧೩ರ ಕೃಷ್ಣದೇವರಾಯನ ಒಂದು ಶಾಸನದಲ್ಲಿ ಕೃಷ್ಣದೇವ ಮಹಾರಾಯನ ಆಳ್ವಿಕೆಯ ಕಾಲದಲ್ಲಿ ತೆರಕಣಾಂಬಿ ಸೀಮೆಯನ್ನು ಆಳುತ್ತಿದ್ದ ಸಾಳುವ ಗೋವಿಂದ ರಾಜನು ತ್ರಿಯಂಬಕದೇವರ ಸೇವೆಗಾಗಿ ಅನೇಕ ಗ್ರಾಮಗಳನ್ನು ವಿವಿಧ ತೆರಿಗೆಗಳನ್ನು ದಾನಕೊಡುತ್ತಾನೆ.[೨೪೨] ಅದರಲ್ಲಿ ಗಾಣದ ಸುಂಕವು ಸೇರಿದೆ. ಕ್ರಿ.ಶ. ೧೫೨೧ರ ಶಾಸನದಲ್ಲಿ ಕೃಷ್ಣದೇವರಾಯನು ರಾಜ್ಯವಾಳುತ್ತಿದ್ದಾಗ. ಇವನಿಗೆ ಪುಣ್ಯವಾಗಬೇಕು, ಸೇನೆ ಸಮೃದ್ಧವಾಗಬೇಕು, ದಿಗ್ವಿಜಯವಾಗಬೇಕೆಂದು ರಾಚಿ ರಾಜರಳ ಮಗನಾದ ಸಾಳುವ ಗೋವಿಂದ ರಾಜನು[೨೪೩] ತ್ರಿಯಂಬಕದೇವರ ಸೇವೆಗಾಗಿ ತೆರಕಣಾಂಬಿ ಸ್ಥಳದ ಕೆಲವು ಗ್ರಾಮಗಳ ತೆರಿಗೆ ಜೊತೆಗೆ ಗಾಣಸುಂಕವನ್ನು ಬಿಟ್ಟ ವಿವರವಿದೆ.

ಪ್ರತಿಯೊಂದು ದೇವಾಲಯಗಳ ನಂದಾದೀವಿಗೆಗೆ ಎಣ್ಣೆಯನ್ನು ಹಾಕುತ್ತಿದ್ದರು. ಅನೇಕ ದೇವಾಲಯಗಳಿಗೆ ಗಾಣಗಳನ್ನು ದಾನ ನೀಡುತ್ತಿದ್ದರು. ಆ ಕಾಲದ ದೇವಾಲಯದ ಆವರಣದಲ್ಲಿ ಗಾಣವನ್ನು ಹಾಕಿಸುವುದು ಪುಣ್ಯ ಕಾರ್ಯವೆಂದು ನಂಬಲಾಗಿತ್ತು.[೨೪೪] ಕ್ರಿ.ಶ. ೩ನೆಯ ಶತಮಾನದಲ್ಲಿಯೇ ಎಣ್ಣೆಯವರ ಸಂಘ ಅಸ್ತಿತ್ವದಲ್ಲಿದ್ದುದು ನಾಸಿಕದ ಶಾಸನದಿಂದ ತಿಳಿಯುತ್ತದೆ. ಅದೇ ಶಾಸನ ದಾನಿಗಳು ಆ ಸಂಘಕ್ಕೆ ಹಣವನ್ನು ನೀಡಿ, ಅದನ್ನೆ ರೋಗಿಗಳಿಗೆ, ಸನ್ಯಾಸಿಗಳಿಗೆ ಉಳಿದಕೊಳ್ಳುವ ವ್ಯವಸ್ಥೆಗಾಗಿ ವ್ಯಯ ಮಾಡಬೇಕೆಂದು ತಿಳಿಸುತ್ತದೆ.[೨೪೫] ವಿಜಯನಗರ ಪೂರ್ವಾಕಾಲದಿಂದಲೇ ಆ ಸಂಘವು ಧಾರ್ಮಿಕ, ಸಾಮಾಜಿಕ ಕಾರ್ಯವನ್ನು ನಿರ್ವಹಿಸುತ್ತಿದ್ದುದು ಗಮನಾರ್ಹವಾಗಿದೆ.

ತೆಲ್ಲಿಗರು ಎಲ್ಲಾ ಧರ್ಮದ ದೇವಾಲಯಗಳ ನಂದಾದೀಪಕ್ಕೆ ಎಣ್ಣೆಯನ್ನು ನೀಡುತ್ತಿದ್ದುದರಿಂದ ಅವರನ್ನು ಕುರಿತು ಬೆಣಚಮಟ್ಟಿಯ ಶಾಸನ ಹೀಗೆ ಹೇಳಿದೆ.

ಎಲ್ಲಾ ಧರ್ಮಗಳುಮಂ
ತೆಲ್ಲಿಗರಾರಯ್ವರವರೆವೊಲು ಮತ್ತೋರ್ವರು
ಬಲ್ಲರೆ ಪುಣ್ಯಮನಾರ್ಜಿಪ
ಲೆಲ್ಲಾ ನಾಡೊಳಗೆ ಅವರ ಧರ್ಮಮೇ ಧರ್ಮಂ.[೨೪೬]

ಹೀಗೆ ತೆಲ್ಲಿಗರು ಮಾಡುತ್ತಿದ್ದ ಕಾರ್ಯ ವ್ಯಾವಹಾರಿಕವಾಗಿ ಕಸುಬು ಆಗಿದ್ದರೂ ಅವರ ಸಾಮಾಜಿಕ ಉಪಕಾರ ದೊಡ್ಡದೇ ಆಗಿದೆ. ವಿಜಯನಗರ ಕಾಲದಲ್ಲಿ ಅನೇಕ ಶಾಸನಗಳು ದೀಪ ಆರಾಧನೆಗೆ ದಾನಕೊಟ್ಟ ದಾಖಲೆಗಳಿವೆ. ವಿಜಯ ಬುಕ್ಕರಾಯರ ಕುಮಾರನಾದ ಪ್ರತಾಪದೇವರಾಯರು ರಾಜ್ಯವಾಳುತ್ತಿದ್ದಾಗ ಹನಿವೊರನಾಡ ಮಹಾಪ್ರಭು ರಾಮದೇವನ ಮಗನಾದ ದೇವಪ್ಪನು ಮಡಿದಾಗ ಅದರ ನೆನಪಿಗೆ ಸೋಮನಾಥ ದೇವರ ದೀಪಾರಾಧನೆಗೆ ಕಂಬವನ್ನು ಪ್ರತಿಷ್ಠಾಪನೆ ಮಾಡಿದ ವಿಷಯವಿದೆ.[೨೪೭] ಪ್ರತಾಪದೇವರಾಯವೊಡೆಯರು ರಾಜ್ಯವಾಳುವಾಗ ಹೊಯ್ಸಳನಾಡಿನ ಸೋಮರಸನು ಕಿರುನಾಗರದೆ ಅರ್ಕ್ಕನಾಥ ದೇವರಿಗೆ ನಂದಾದೀಪಕ್ಕಾಗಿ ಹಾಳಿ ಹೊಲೆ ಕೊಂಕೆಸಿಕುಳ ಮಗ್ಗ೧, ಕರಟಗೆ೧,[೨೪೮] ಹೊನ್ನಗಳನ್ನು ದಾನಬಿಟ್ಟ ವಿಷಯವಿದೆ. ಬಾರಕೂರು ರಾಜ್ಯವನ್ನು ಆಳುತ್ತಿದ್ದ ನರಸಿಂಹದೇವೊಡೆಯರ ಕಾಲದಲ್ಲಿ ದೇವರ ನಂದಾದೀಪಕ್ಕಾಗಿ ಎಣ್ಣೆಯನ್ನು ದಾನ ನೀಡಿದ.[೨೪೯] ವೀರಪ್ರತಾಪದೇವರಾಯರ ಮಹಾಮಾತ್ಯನಾದ ದೇವ ದಂಣ್ಣಾಯಕರ ಕಾಲದಲ್ಲಿ ಹರದನಹಳ್ಳಿಯ ದಿಬ್ಬಲಿಂಗೇಶ್ವರ ಶ್ರೀ ಅಣಿಲೇಶ್ವರ ದೇವರಿಗೆ ನಂದಾದೀವಿಗೆಗೆ ಕೆಲವು ಗ್ರಾಮಗಳನ್ನು ದಾನ ನೀಡಿದ.[೨೫೦] ಹೀಗೆ ಪ್ರೌಢದೇವರಾಯರ ಕಾಲದಲ್ಲಿ ದೇವಸ್ಥಾನದ ದೀಪಗಳಿಗಾಗಿ ಎಣ್ಣೆಯನ್ನು ದಾನ ನೀಡಿದ ನೂರಾರು ಶಾಸನಗಳಿವೆ. ಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿ ತನ್ನ ಪಟ್ಟಾಭಿಷೇಕದ ವೇಳೆ ಸಿಂಗೆನಾಯಕನಹಳ್ಳಿ ಎಂಬ ಗ್ರಾಮವನ್ನು ವಿರೂಪಾಕ್ಷ ದೇವರ ನಿತ್ಯ ದೀಪರಾಧನೆಗೆ ದಾನ ನೀಡಿದ.[೨೫೧] ಕೃಷ್ಣದೇವರಾಯನಿಗೆ ಪುಣ್ಯವಾಗಲಿ ಎಂದು ಅವನ ಕೈಕೆಳಗಿನ ಅಧಿಕಾರಿ ಯಲ್ಲಪ್ಪನಾಯ್ಕರು ಹರದಾಳು ಗ್ರಾಮವನ್ನು ಅದೇ ಊರಿನ ತಿರುಮಲದೇವರಿಗೆ[೨೫೨] ನಂದಾದೀಪಕ್ಕಾಗಿ ದಾನ ನೀಡಿದ ವಿಷಯವಿದೆ.

ವಿಜಯನರ ಕಾಲದಲ್ಲಿ ಎಣ್ಣೆಯ ಅವಶ್ಯಕತೆ ತುಂಬಾ ಇತ್ತು. ದೇವಾಲಯಗಳಿಗೆ ಅಲ್ಲದೆ ಸಾಮ್ರಾಜ್ಯದ ಸಂರಕ್ಷಣೆಗೆ ಬೇಕಾಗಿತ್ತು. ಕ್ರಿ.ಶ. ೧೫೮೫ರ ವಿರೂಪಾಕ್ಷ ಪಂಡಿತನು ತನ್ನ ಚೆನ್ನಬಸವ ಪುರಾಣದಲ್ಲಿ ಕೋಟೆ ಸಂರಕ್ಷಣೆಗೆ ಎಣ್ಣೆ ಹೇಗೆ ಬೇಕಾಗುತ್ತಿತ್ತು ಎಂದು ವಿವರಿಸಿರುವರು.

ಬಿಡದೆ ಕೊಗುವ ಪಹರೆ, ತಿರುಗುತಿಹ ಪಂಜುಗಳು
ಗಡಿಬಡಿಪ ಕೋಂಟಿವರೆ ದನಿಗೆಯ್ವ ಪೆಟಿಲುಗಳ
ಒಡನೊಡನೆ ಸುಳಿವ ಮೇಲೆ ಪಹರಿಯೊಳ್ಗಳಿ, ಚಿರುತಿಹ
ಕಹಳೆಗಲ್ ಭರದೊಳ್[೨೫೩]

ಈ ಉಲ್ಲೇಖದಿಂದ ಕೋಟೆ ಸಂರಕ್ಷಣೆಗೆ ಎಣ್ಣೆ ಅವಶ್ಯಕತೆಯಿದ್ದೂ ಅದನ್ನು ತೆಲ್ಲಿಗರು ಪೂರೈಸುತ್ತಿದ್ದರು ಎಂದು ತಿಳಿಯುತ್ತದೆ. ಹೀಗೆ ವಿಜಯನಗರ ಕಾಲದಲ್ಲಿ ಆಹಾರದಿಂದ ಹಿಡಿದು ಸಾಮ್ರಾಜ್ಯ ಸಂರಕ್ಷಣೆಯವರೆಗೂ ಎಣ್ಣೆಯ ಅವಶ್ಯಕತೆಯಿತ್ತು. ಅವರು ವಿವಿಧ ಬಗೆಯ ಬೀಜಗಳಿಂದ ಎಣ್ಣೆಯಳನ್ನು ಉತ್ಪಾದಿಸುತ್ತಿದ್ದರು.

ಯುದ್ಧಗಳಲ್ಲೂ ಎಣ್ಣೆ ಉಪಯೋಗವಾಗುತ್ತಿತ್ತು ಎಂದು ಅಗ್ಗಳ ಕವಿಯ ಚಂದ್ರಪ್ರಭ ಪುರಾಣದಿಂದ ತಿಳಿಯುತ್ತದೆ. ಡುವುರಿಯೆಣ್ಣೆ, ಸೋಸುವ ಕವಲ್ಲಡಿ, ಬೀಸುವ ಪಾಶಮೋರೆಯಿಂ,[೨೫೪] ಕೋಟೆಕಾಳಗವು ಹೇಗಿತ್ತು ಎಂದು ವಿವರಿಸುತ್ತದೆ. ಅಂದರೆ ಸುರಿಯುತ್ತಿರುವ ಉರಿಯೇಣ್ಣೆಯಿದಲೂ ಸೂಸುತ್ತಿರುವ ಬೆಂಕಿಯ ಕಿಡಿಗಳಿಂದಲೂ, ನಡೆಯುತ್ತಿತ್ತೆಂದು ವಿವರಿಸಿದ್ದಾನೆ. ವೈರಿಗಳು ಕೋಟೆ ಹತ್ತದಂತೆ ಮೇಲಿನಿಂದ ಎಣ್ಣೆ ಸುರಿಯುತ್ತಿದ್ದರು. ತೆಲಿಗ ಕಸುಬುದಾರರು ವಿಜಯನಗರ ಸಾಮ್ರಾಜ್ಯದ ಸಂರಕ್ಷಕರಾಗಿದ್ದರು ಎಂದು ತಿಳಯಬಹುದು. ಆಹಾರಕ್ಕೆ ಜನರು ಬಿತ್ತಿದ ಬೀಜಗಳಿಂದ ತೆಗೆದ ಎಣ್ಣೆಯನ್ನು ಧಾರಾಳವಾಗಿ ಬಳಸುತ್ತಿದ್ದರು.[೨೫೫]

ಗಾಣದಿಂದ ಎಣ್ಣೆಯನ್ನು ತಯಾರಿಸುತ್ತಿದ್ದರು ಎಂಬುದನ್ನು ಮೇಲಿನ ಶಾಸನಗಳು ದೃಢಪಡಿಸುತ್ತವೆ. ಹಳೆ ಮೈಸೂರು ಭಾಗದಲ್ಲಿ ಕೆಲವು ಶಾಸನಗಳು ಕಲ್ಲುಗಾಣವನ್ನು ಮಾಡಿಸಿದ ವ್ಯಕ್ತಿಗಳ ಹೆಸರುಗಳಿವೆ.[೨೫೬] ಚಾಮರಾಜನಗರದಲ್ಲಿ ಐದು, ಗುಂಡ್ಲುಪೇಟೆ ಮೂರು, ಹುಣಸೂರು, ಟಿ.ನರಸಿಪುರ ಮೈಸೂರು ತಲಾ ಎರಡು ನಂಜನಗೂಡು, ಹೆಗ್ಗಡದೇವನ ಕೋಟೆ ಕೊಳ್ಳೇಗಾಲ, ಪಿರಿಯಾಪಟ್ಟಣ ತಮ್ಮ ಒಂದೊಂದು ಶಾಸನಗಳು[೨೫೭] ಕಲ್ಲಿನ ಗಾಣದ ಮೇಲಿವೆ. ಕ್ರಿ.ಶ. ೧೨೭೭ರ ಒಂದು ಶಾಸನದಲ್ಲಿ ವೀರನಾರಸಿಂಗ ದೇವ ಆಳುತ್ತಿದ್ದಾಗ ಒಂಮುಗ ದ ರಾಜಮಂಣಗೌಡನ ದಂಗೆ ಮೆರುಗೌಡನ ಮಗ ಅಂಕಗೌಡನ ಮಗ ಮುದ್ದಗೌಡನ ಮಕ್ಕಳು ಬೀರಗೌಡ, ಮಾದಿಗೌಡ ಈ ಮೂವರು ಮಾಡಿಸಿದ ಗಾಣ ಎಂಬ ಉಲ್ಲೇಖವಿದೆ.

೮. ಕಲ್ಲುಟಿಗ(ಶಿಲ್ಪಿಗಳು)

ಕಲ್ಲನ್ನು ಒಡೆದು, ಕಟೆದು ಜನರು ಉಪಯೊಗಿಸುವ ಸಾಮಾನುಗಳನ್ನು ತಯಾರಿಸುವವರನ್ನು ಕಲ್ಲುಕುಟಿಕರು ಎಂದು ಕರೆಯುವರು. ಕಲ್ಕುಟಿಗರು ಕೇವಲ ಕಲ್ಲನು ಒಡೆದು ಕೆಲಸ ಮಾಡುತ್ತಿರಲಿಲ್ಲ ಒಡೆದ ಕಲ್ಲಿಗೆ ಒಂದು ರೂಪ ಕೊಟ್ಟು ಸುಂದರ ಶಿಲ್ಪವನ್ನಾಗಿ ಮಾಡುತ್ತಿದ್ದರು. ಹಾಗಾಗಿ ಅವರನ್ನು ಶಿಲ್ಪಿಗಳು ಎಂದು ಕರೆಯಲಾಯಿತು. ಶಾಸನಗಳನ್ನು ಕೆತ್ತುತ್ತಿದ್ದ ಶಿಲ್ಪಗಳನ್ನು ಕೆಲವು ಶಾಸನಗಳಲ್ಲಿ ಕಲ್ಕುಟಿಗರೆಂದು ಕರೆದಿರುವುದುಂಟು.

ಕಲ್ಕುಟಿಕ ಮಲ್ಲೋಜಂಗ ಬಿಟ್ಟ ಯಿಕಲುವೆಸನವ.[೨೫೮] ಶಾಸನವ ಹೊಯಿದಾತನು ಕಲ್ಕುಟಿಗ ಜಡೆಯ ರಾಮೋಜನು,[೨೫೯] ಕಲ್ಲುಕುಟಿಗ ಸಿಗ್ಗೋಜ ಮಾಡಿದ ರೂವಾರಿ ಮಂಗಳ ಮಹಾಶ್ರೀ,[೨೬೦] ಕಲ್ಕುಟಿಗ ಕ್ಷೇಮೋಜನ ಮಗ ಎವೋಜ ಕಣ್ಣರಿಸಿದ ದೇಗುಲಮಂ ಮಾಡಿದ ಕಾಮೋಜಶ್ರೀ.[೨೬೧] ಇದರಿಂದ ಕಲ್ಕುಟಿಗರು ದೇವಸ್ಥಾನದ ರಚನಾ ಕಾರ್ಯದಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದರು ಎಂದು ತಿಳಿಯುತ್ತದೆ. ಯಿ ಕಲ್ಲು ಕಡೆದಾತ ಸಂತೋಜ[೨೬೨] ಕಲ್ಲುಕುಟಿಗ ನಜ್ಜಮ ಅಕ್ಕರಮಂ ಕಣ್ಣರಿಸಿದಂ[೨೬೩] ಕಲ್ಲುಕಡಿದವ ಕಲ್ಲುಕುಟಿಗ ಸಿಂಗೋಜ ಮಗ ಭೀರೂಜ ಮಂಗಳ ಮಹಾ[೨೬೪] ಯಿ ಕಲ್ಲ ಮಾಡಿದಾತ ಕಲ್ಲುಕುಟಿಗ ಸಿಂಗೋಜ ಮಗ ಬೀರೋಜ, ಆತನ ಬಿರುದು ಮಂಠಣಿಸುವರ ಗಂಟರಗಾಳಿ ಮತ್ಸ ಮತ್ಸ... ರಿಸುವರ ಮಂಕಣಸೊಲ.[೨೬೫] ಈ ಎಲ್ಲಾ ಶಾಸನಗಳನ್ನು ಗಮನಿಸಿದರೆ ಕಲ್ಲನು ಕಡೆಯುವ ಕೆಲಸದಲ್ಲಿ ಇವರು ನೈಪುಣ್ಯತೆಯನ್ನು ಪಡೆದಿರುವಂತೆ ತಿಳಿಯುತ್ತದೆ. ಆದ್ದರಿಂದಲೇ ಇವರಿಗೆ ಕಲ್ಕುಟಿಗ ಅಥವಾ ಕಲ್ಕುಟಿ ಎಂದು ಕರೆಯಲಾಗಿದೆ.

ಶಿಲ್ಪಿಗಳಲ್ಲಿ ಮತ್ತೊಂದು ರೀತಿಯ ಕುಶಲತೆ ಪಡೆದವರೆಂದರೆ ಬಿನ್ನಾಣಿಗಳು ಇವರು ಚಿತ್ರಗಳನ್ನು ಅಥವಾ ಶಿಲ್ಪಗಳನ್ನು ಕೊರೆಯುವುದರಲ್ಲಿ ನೈಪುಣ್ಯತೆ ಪಡೆದವರು ಎಂದು ಈ ಕೆಳಗಿನ ಶಾಸನಾಧಾರಗಳ ಮೂಲಕ ಬಿನ್ನಾಣಿಗಳಾದ ಶಿಲ್ಪಿಗಳನ್ನು ಗುರುತಿಸಲಾಗಿದೆ.

'ಯಿ ಕಲ್ಲಂ ಕಡಿದ ಬಿಂನಾಣಿ ಮಾರೋಜನ ತನೂಜ
ಯದೋಜನು.

ಸಾಳಬಂದಿಕೆ ಮಾಡಿದ ಬಿನ್ನಾಣಿ! ಶ್ರೀ ಮಾತು ತ್ರಿಭುವನಮಲ್ಲದೇವರ ಬಿಂನ್ನಾಣಿ
ಚಿನ್ನೋಜನ ಪುತ್ರ ಚಿಕ್ಕಹಂಪ್ಪ ಮಾಡಿದ ಮದನ ಮಚ್ಛರಿಪರೂವಾರಿಗಳ.[೨೭]

ಇವರು ಶಿಲ್ಪಗಳನ್ನು ಕೆತ್ತುವುದರಲ್ಲಿ ವಿಶೇಷವಾದ ಪರಿಣತಿಯನ್ನು ಪಡೆದವರಾಗಿದ್ದರು. ವಿಜಯನಗರ ಕಾಲದ ಶಿಲ್ಪಿಗಳು, ದೇವಾಲಯಗಳ ನಿರ್ಮಾಣ ಮತ್ತು ಶಿಲ್ಪಗಳನ್ನು ಕೆತ್ತುವುದು ಒಂದು ಪವಿತ್ರ ಕೆಲಸವೆಂದು ತಿಳಿದಿದ್ದರು. ತಾವು ನಿರ್ಮಾಣ ಮಾಡಿದ ದೇವಾಲಯ ಅಥವಾ ಶಿಲ್ಪಗಳ ಮೇಲಾಗಲಿ ತಮ್ಮ ಹೆಸರುಗಳನ್ನು ನಮೂದಿಸುವ ಆಸಕ್ತಿ ಅವರಿಗೆ ಇರಲಿಲ್ಲವೆಂದು ತೋರುತ್ತದೆ. ಆದರೂ ಕರ್ನಾಟಕದಲ್ಲಿ ಬಾದಾಮಿ ಚಾಲುಕ್ಯ, ಕಲ್ಯಾಣ ಚಾಲುಕ್ಯ, ಹೊಯ್ಸಳರ ಕಾಲಗದಲ್ಲಿ ಕೆಲವರು ತಮ್ಮ ಹೆಸರುಗಳನ್ನು ಶಿಲ್ಪಗಳ ಮೇಲೆ ನಮೂದಿಸಿರುವುದು ಕಂಡುಬರುತ್ತದೆ.

ವಿಜಯನಗರ ಕಾಲದ ಅನೇಕ ಶಾಸನ, ಶಿಲ್ಪ, ವಿಗ್ರಹ, ನಿಸಿದಿ, ವೀರಗಲ್ಲುಗಳನ್ನು ಕೆತ್ತಿರುವುದನ್ನು ಉಲ್ಲೇಖಿಸುತ್ತವೆ. ಎರಡನೆಯ ದೇವಾರಾಯನ ಕಾಲದಲ್ಲಿ ಧಾರವಾಡ ಜಿಲ್ಲೆಯ ಕುಂದಗೋಳದಲ್ಲಿಯ ಹನುಮಂತ ದೇವರ ವಿಗ್ರಹವನ್ನು ಕಲ್ಲೋಜನ ಮಗ ಬಮ್ಮೋಜ[೨೮] ಕೆತ್ತಿದನು. ಉತ್ತರ ಕನ್ನಡ ಜಿಲ್ಲೆಯ ಹಾಡುವಳ್ಳಿಯಲ್ಲಿ ಈಸರಾಚಾರಿ ಎರಡು ವೀರಗಲ್ಲುಗಳನ್ನು ಹಾಗೂ ಒಂದು ನಿಸಿದಿಯನ್ನು ಕೆತ್ತಿದನು[೨೯] ಮತ್ತು ಅದೇ ಜಿಲ್ಲೆಯ ಕೈಕಿಣಿ ಎಂಬಲ್ಲಿ ಕೋಟೆವೋಜನ ಮಗ ಬೈಜಾಚಾರಿ ವೀರಗಲ್ಲನ್ನು[೩೦] ಕೆತ್ತಿದನು. ಮಂಡ್ಯ ಜಿಲ್ಲೆಯ ಅರುವನಹಳ್ಳಿಯಲ್ಲಿ ಬೆಲತೂರಿನ ಮಲಿಯೋಜನು[೩೧] ವೀರಗಲ್ಲಿನ ಶಿಲ್ಪವನ್ನು ಮಾಡಿರುವುದು ಗೋಚರಿಸುತ್ತದೆ. ಮದ್ದೂರು ಶಿವಮೊಗ್ಗ ಜಿಲ್ಲೆಯ ಕೊಲವಳ್ಳಿಯಲ್ಲಿಯ ವೀರಗಲ್ಲನ್ನು ವೀರಯೊಜನು ಮತ್ತು ಸೌಳಂಗದಲ್ಲಿಯ ವೀರಗಲ್ಲನ್ನು ದೇವೋಜನು ಕೆತ್ತಿರುವುದು ತಿಳಿಯುತ್ತದೆ.[೩೨] ಊರಪೂರ್ವಿಕನ ಮಗನಾದ ಬನದೋಜನು ಮತ್ತು ಮದೋಜ-ನಾಗೋಜ[೩೩] ಹಿರೇಅವಲಿಯಲ್ಲಿ ನಿಸಿದಿಗಳನ್ನು ಮಾಡಿರುವುದು ತಿಳಿಯುತ್ತದೆ. ಬಳ್ಳಾರಿ ಜಿಲ್ಲೆಯ ರಾಜಬಾವನಹಳ್ಳಿಯ ಶಾಸನವು ರಾಯೋಜ[೩೪] ಎಂಬ ಶಿಲ್ಪಿಯ ಹೆಸರನ್ನು ಸೂಚಿಸುತ್ತದೆ. ಚಿಕ್ಕಮಗಳೂರು ಜಿಲ್ಲೆಯ ಕರುವಾಗಿ ಶಾಸನವು ಮಲ್ಲೋಜನ[೩೫] ಹೆಸರನ್ನು ಪ್ರತಿಬಿಂಬಿಸುತ್ತದೆ. ಅದೇ ರೀತಿಯಾಗಿ ಬೆಂಗಳೂರು ಜಿಲ್ಲೆಯ ಚಿಕ್ಕಮಾರಲವಾಡಿಯ ಶಾಸನವನ್ನು ಬಸವಯ್ಯ[೩೬] ಎಂಬ ಶಿಲ್ಪಿಯು ಶಾಸನವನ್ನು ಬರೆದ ಬಗ್ಗೆ ತಿಳಿಸುವುದು. ಲಕ್ಕಣಾಚಾರಿಯ ಮಗ ಆಚಾರ್ಯ ಕಲ್ಲಯ್ಯನು ಶಿಲ್ಪಿಯಾಗಿದ್ದು, ಹಾಸನದಲ್ಲಿಯ ಶಾಸನವನ್ನು ಬರೆದದ್ದು ಎಂದು ತಿಳಿಯುತ್ತದೆ.[೩೭] ಪ್ರೌಢದೇವರಾಯನ ಶಾಸನಗಳಲ್ಲಿ ದೊರಕುವ ಮೊದಲ ಶಾಸನ ಬರಹಗಾರ ಮುದ್ದಣಾಚಾರ್ಯನೆಂಬುವನು ಕ್ರಿ.ಶ. ೧೪೨೨ರ ಪೆದ್ದ ಚಿಪ್ಪಲಿ ಶಾಸನವನ್ನು ಬರದಿರುವನು. ಅದೇ ರೀತಿ ಸಿರಿಯಾಲಿಯ

ನಾಡ ಸೇನಬೋವ ಗಣಂಪಣ್ಣನ ಮಗನಾದ ಕೇಶವ ಎರಡು ಶಾಸನಗಳನ್ನು ರಚಿಸಿದ್ದಾನೆ. ದೇವರಸ, ತಿಮ್ಮರಸ, ಪಿರದೋಜ, ನಾಗಂಣ, ಮಲ್ಲಪ್ಪ, ಪೆರುಮಾಳನ ಬರಹ, ಶಂಕರಸ[೨೭೮] ಹೀಗೆ ಇನ್ನೂ ಅನೇಕ ಹೆಸರುಗಳನ್ನು ಶಾಸನಗಳಲ್ಲಿ ದೊರಕುತ್ತವೆ.

ಶಿಲ್ಪಿಗಳು ತಾಮ್ರ ಶಾಸನಗಳನ್ನು ಬರೆಯುವುದರಲ್ಲಿಯೂ ಪರಿಣಿತಿ ಹೊಂದಿದ್ದರು. ಕೋಲಾರ ಜಿಲ್ಲೆಯ ಬೆಸ್ತರಹಳ್ಳಿಯ ತಾಮ್ರ ಶಾಸನವನ್ನು ನಾಗಿದೇವನು[೨೭೯] ಕ್ರಿ.ಶ. ೧೩೩೬ರಲ್ಲಿ ಬರೆದನು ಹಾಗೂ ಅದೇ ಜಿಲ್ಲೆಯ ಬೊಮ್ಮಸಂದ್ರ ಮತ್ತು ಮುದಿಯನೂರುಗಳಲ್ಲಿ ಎರಡು ತಾಮ್ರ ಶಾಸನಗಳನ್ನು ಬರೆದನು.[೨೮೦] ವಿಜಯನಗರ ಕಾಲದಲ್ಲಿ ಶಿಲ್ಪಿಗಳು ಪ್ರಮುಖವಾಗಿ ದೇವಾಲಯಗಳ ನಿರ್ಮಾಣ, ಅಣೆಕಟ್ಟಿಗಳನ್ನು ಕಟ್ಟಿರುವುದು, ದೇವರ ವಿಗ್ರಹಗಳ ಕೆತ್ತನೆ, ವೀರಗಲ್ಲು, ಸತಿಗಲ್ಲು, ನಿಸಿದಿಗಲ್ಲು ಮತ್ತು ಶಾಸನಗಳ ಕೆತ್ತನೆ ಕಾರ್ಯಗಳನ್ನು ಮಾಡುತ್ತಿದ್ದರು.

ವಿಜಯನಗರದಲ್ಲಿನ ಕಟ್ಟಡಗಳು ಹೆಚ್ಚಾಗಿ ಸ್ಥಳಿಯವಾಗಿ ದೊರೆಯುತ್ತಿದ್ದ ಕಲ್ಲುಗಳಿಂದ ನಿರ್ಮಿತಗೊಂಡಿವೆ. ಅಂದಿನ ಶಿಲ್ಪಿಗಳು ಕಲ್ಲಿನ ಬಗೆಗಿದ್ದ ತಿಳುವಳಿಕೆ, ಮಾಹಿತಿ ಅದನ್ನು ಬೇಕಾದ ಅಳತೆಗೆ ಕಂಡರಿಸುವ ಪರಿಣತಿ ಅವಶ್ಯಕ, ಅಳತೆಗೆ ತಕ್ಕಂತೆ ಅವುಗಳನ್ನು ಬೇರ್ಪಡಿಸಿಟ್ಟುಕೊಳ್ಳುವ ಬಗೆಗೆ ಸಾಕಷ್ಟು ಮಾಹಿತಿಗಳು ರಾಜವಾಡಿಯ ಅಸುಪಾಸಿನ ಗುಡ್ಡಗಳಲ್ಲಿ ನೆಲಸ್ತರದ ಶಿವಾಲಯ, ಪ್ರಸನ್ನ ವಿರೂಪಾಕ್ಷ ದೇವಾಲಯ, ಹೇಮಕೂಟ,[೨೮೧] ರಾಜಪ್ರಮುಖ ವಸತಿ ಸಮುಚ್ಚಯದ ಬಳಿ ಹೇರಳವಾಗಿ ಕಾಣಸಿಗುತ್ತದೆ.

ವಿಜಯನಗರ ರಾಜಧಾನಿ ಸಮುಚ್ಚಯದಲ್ಲಿ ರಕ್ಕಸಗಾತ್ರದ ವಿವಿಧ ಕಣಶಿಲೆಯ ಬೆಟ್ಟ ಸಾಲುಗಳಿವೆ. ಸಹಜವಾಗಿ ಈ ಪರಿಸರದಲ್ಲಿ ಕಟ್ಟಡ ನಿರ್ಮಾಣಕ್ಕೆ ಹಾಗೂ ಜಲಸಂಗ್ರಹಣೆಗೆ ಅನುಕೂಲತೆ ಇರುವ ಸಮತಟ್ಟಾದ ಪ್ರದೇಶವಿದೆ. ಈ ಸ್ಥಳದಲ್ಲಿ ನಡೆದಿರುವ ಬೃಹತ್ ಕಾಮಗಾರಿಗಳಿಗೆ ಅಗತ್ಯವಾದ ವಸ್ತುಸಾಮಗ್ರಿಯನ್ನು ನಿರ್ಮಾಣ ಸ್ಥಳಕ್ಕೆ ದೂರದಿಂದ ಸಾಗಿಸುವುದು ದುಸ್ಸಾಧ್ಯವಾದುದರಿಂದ ಅವುಗಳನ್ನು ಅನತಿ ದೂರದಲ್ಲಿಯೇ ಪಡೆದುಕೊಳ್ಳಬೇಕಾದ ಅನಿವಾರ್ಯತೆಗೆ ಸ್ಥಪತಿಗಳು ಹೊಂದಿಕೊಳ್ಳಬೇಕಾಯಿತು. ಬಹುತೇಕ ಕಲ್ಲುಗಣಿಗಳು ಆಯಾ ಕಟ್ಟಡಗಳ ಸಮುಚ್ಚಯದ ಸನಿಹದಲ್ಲೇ ಇವೆ. ಇಂತಹ ನೆಲೆಗಳಲ್ಲಿ ನಿರಂತರ ಗಣಿಗಾರಿಕೆ ನಡೆದಿದ್ದ ಕೆಲವು ಕುರುಹುಗಳನ್ನು ಸಂರಕ್ಷಿತ ಸ್ಮಾರಕಗಳ ಬಳಕೆಯಲ್ಲಿ ಈಗಲೂ ಕಾಣಬಹುದಾಗಿದೆ. ಹೇಮಕೂಟದ ದೇಗುಲಗಳ ಬಳಿ, ದಕ್ಷಿಣ ಭಾಗದಲ್ಲಿರುವ ಸಾಸಿವೆಕಾಳು ಗಣೇಶನ ಪೂರ್ವ ಹಾಸು ಬಂಡೆ ಬಳಿ, ಇರುವ ಕಲ್ಲೊಡ್ಡರ ಹಾಜರಾತಿ, ತಯಾರಿಸಬೇಕಾದ ಮತ್ತು ತಯಾರಿಸಲಾದ ಕಲ್ಲುಗಳ ಮಾಹಿತಿ, ಕೋಟೆಯ ಆವರಣದಲ್ಲಿರುವ ನೆಲಸ್ತರದಲ್ಲಿನ ಶಿವಾಲಯದ ಉತ್ತರದಿಕ್ಕಿನಲ್ಲಿ ರಾಜಮಾನ್ಯರ ಪ್ರಮುಖ ವಸತಿ ಸಂಕೀರ್ಣದ ರಾಜಪ್ರಾಂಗಣದಲ್ಲಿ ಜನಾನ(ಅಂತಃಪುರದ) ಉತ್ತರ ದಿಕ್ಕಿನಲ್ಲಿಯ ಗುಡ್ಡದಲ್ಲಿವೆ.[೨೮೨] ಈ ಕೆಳಗಿನ ಲಕ್ಷಣಗಳನ್ನು ಆಧಾರಿಸಿ ಕಲ್ಲುಗಣಿಗಳನ್ನು ಗುರುತಿಸಲಾಗಿದೆ. ಹಂತಹಂತವಾಗಿ ಕಲ್ಲು ಚಪ್ಪಡಿಗಳನ್ನು ಹೊರತೆಗೆದ, ಸಮಾನಾಂತರದಲ್ಲಿರುವ ವಿವಿಧ ಗಾತ್ರದ ಕುಣಿಗಳು ಮತ್ತು ಅವುಗಳನ್ನು ತೆಗೆದ ನಂತರ ಸಮತಟ್ಟಾದ ನೆಲಕ್ಕೆ ಅತೀ ಸೂಕ್ಷ್ಮವಾಗಿ ಇಳಿಸಲು ಉಪಯೋಗಿಸಿದ ಮೂಲ ಬಂಡೆಯಲ್ಲಿ ರೂಪಿಸಿದ ಕಲ್ಲೊಕ್ಕೆಗಳು ಉದ್ದೇಶಪೂರ್ವಕವಾಗಿ ಗಣಿಗಾರಿಕೆಗೆ ಆಯ್ದುಕೊಂಡ ಉಳಿಯ ಗುರುತಿರುವ ಬಂಡೆಯ

ಸಮೂಹ, ಬೃಹತ್ ಬಂಡೆಗಳನ್ನು ಅವಶ್ಯಕ ಗಾತ್ರಗಳಿಗೆ ಕತ್ತರಿಸಿ ಸಾಗಾಣಿಕೆಗೆ ಅನುವುಗೊಳಿಸಿ ಅಲ್ಲಿಯೇ ಉಳಿಸಿರುವ ಕುರುಹುಗಳಿರುವ ಸ್ಥಳ ಕತ್ತರಿಸಲು ಸಜ್ಜುಗೊಳಿಸಿದ ಅರೆಬರೆ ಕಂಡರಿಸಿದ ಹೆಬ್ಬಂಡೆಗಳು, ಸಜ್ಜುಗೊಳಿಸಿ ಅಲ್ಲಿಯೇ ಉಳಿಸಿರುವ ಕಲ್ಲುಗಳು, ಕಲ್ಲೊಡ್ಡರ ಹಾಜರಾತಿ ಹಾಗೂ ಪೂರೈಸಿದ (ಸರಬರಾಜುಮಾಡಿದ) ಕಲ್ಲುಗಳ ಲೆಕ್ಕಾಚಾರವನ್ನು ಸೂಚಿಸುವ ಗುರುತುಗಳು ಇವೆ.

ಹಂಪಿಯ ಸುತ್ತಮುತ್ತಲಿನ ಕಲ್ಲುಬಂಡೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಅವುಗಳನ್ನು ಒಡೆದು ಕಲ್ಲನ್ನು ಕತ್ತರಿಸಿರುವುದು, ಕತ್ತರಿಸಲು ಸಜ್ಜುಗೊಳಿಸಿರುವುದು ಹೀಗೆ ಅನೇಕ ಕುರುಹುಗಳು ಕಾಣಸಿಗುತ್ತವೆ. ಕಮಾಲಾಪುರ ವಸ್ತು ಸಂಗ್ರಹಾಲಯದಲ್ಲಿ ಕಲ್ಲನ್ನು ಕತ್ತರಿಸಲು ಬಳಸಿದ ಉಳಿಗಳನ್ನು ಇಂದಿಗೂ ನೋಡಬಹುದಾಗಿದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ವಿಜಯನಗರ ಕಾಲದಲ್ಲಿ ಕಲ್ಕುಟಿಗರು ಕಲ್ಲನು ಕತ್ತಿರಿಸಿ ಕೊಡುತ್ತಿದ್ದ ಒಂದು ವರ್ಗ ಇದ್ದರೆ, ಆ ಕಲ್ಲನ್ನು ಸುಂದರವಾಗಿ ಕಡೆದು, ಕೊರೆದು ಶಿಲ್ಪಗಳನ್ನು ಮಾಡುವ ಒಂದು ವರ್ಗ ಅದು ಶಿಲ್ಪಿಗಳೆಂದು ಕರೆಸಿಕೊಂಡಿತು. ಕಲ್ಲಿನಿಂದ ದೇವಸ್ಥಾನ, ಕೋಟೆ, ವೀರಗಲ್ಲು, ಮಹಾಸತಿಗಲ್ಲು, ಶಾಸನಗಳ ಅನೇಕ ವಿವಿಧ ಸಾಮಗ್ರಿಗಳನ್ನು ಮಾಡುತ್ತಿದ್ದರು. ಕಲ್ಕುಟಿಗ, ಶಿಲ್ಪಿಗಳ ಕಸಬು ಸಮಾಜದಲ್ಲಿ ತುಂಬಾ ಪ್ರಾಮುಖ್ಯತೆ ಪಡೆದುಕೊಂಡಿತ್ತು. ಇವರು ಒಂದು ರೀತಿಯಲ್ಲಿ ಸಾಮ್ರಾಜ್ಯದ ಶ್ರಮಜೀವಿಗಳಾಗಿದ್ದರು ಎಂದು ಹೇಳಬುದು.

೯. ಚಮ್ಮಾರರು

ಪ್ರಾಚೀನ ಕಾಲದಿಂದಲೂ ಚಮ್ಮಾರ ಶಬ್ದದ ವಿವಿಧ ರೂಪಗಳು ಕಂಡುಬರುತ್ತವೆ. ಸಂಸ್ಕೃತದಲ್ಲಿ ಚಮ್ಮಾರ ಪದವನ್ನು ಸಮುದಾಯ ಮತ್ತು ವೃತ್ತಿಗಳ ನೆಲೆಯಲ್ಲಿ ಗುರುತಿಸಲಾಗಿದೆ. ಋಗ್ವೇದದಲ್ಲಿ ಚರ್ಮ ಹದಮಾಡುವವ ಎಂಬ ಅರ್ಥದಲ್ಲಿ ಬಳಕೆಗೊಂಡಿರುವುದನ್ನು ವಿದ್ವಾಂಸದಾದ ಪಿ.ವಿ. ಕಾಣೆ ಅವರು ಪ್ರಸ್ತಾಪಿಸಿದ್ದಾರೆ. ಪ್ರಾಚೀನ ಸಂಸ್ಕೃತ ಕಾವ್ಯಗಳಲ್ಲಿ ಪ್ರಯೋಗಗೊಂಡಿರುವ ಚಮ್ಮಾರ ಪದದ ಮೂಲದ ಬಗ್ಗೆ ಮೋನಿಯರ್ ವಿಲಿಯಮ್ಸ್ ಸಹ ಬೆಳಕು ಚೆಲ್ಲಿದ್ದಾರೆ. ಸಂಸ್ಕೃತದಲ್ಲಿ ಚರ್ಮ್ಮಾರ್ ಎಂದು ಕರೆದಿರುವುದನ್ನು ಮೋನಿಯರ್ ಆಂಗ್ಲ ಪಾರಿಭಾಷಿಕಕ್ಕೆ ಸಂವಾಧಿಯಾಗಿ ಸಂಸ್ಕೃತದಲ್ಲಿ ಚರ್ಮಕಾರ/ಚರ್ಮಕಾರಕಃ, ಚರ್ಮಕಾರಿ, ಚರ್ಮಕೃತ ಹಾಗೂ ಚವ[೨೮೩]ಎಂದಿರುವುದನ್ನು ಅವರು ತೋರಿಸಿದ್ದಾರೆ.

ಸಂಸ್ಕೃತ ಮೂಲದ ಚರ್ಮ್ಮಾರ್ ಶಬ್ದದಿಂದಲೇ ಕನ್ನಡದಲ್ಲಿ ಕೆಲವಾರು ರೂಪಗಳು ಹುಟ್ಟಿಕೊಂಡಿವೆಯೆಂಬುದು ಸ್ಪಷ್ಟ. ೮ನೆಯ ಶತಮಾನದಿಂದಲೇ ಕನ್ನಡ ಶಾಸನಗಳು ಹಾಗೂ ಕಾವ್ಯಗಳಲ್ಲಿ ಸಂಮಗಾರ, ಸಮ್ಮಗಾರ, ಸಮಗಾರ ರೂಪಗಳು ದೊರೆಯುತ್ತವೆ. ಇದಕ್ಕೂ ಹಿಂದಿನ ಉಲ್ಲೇಖಗಳನ್ನು ಶೋಧಿಸುವ ಅಗತ್ಯವಿದೆ. ಚಮ್ಮಾರ/ ಸಮಗಾರಕ್ಕೆ ಪರ್ಯಾಯವಾಗಿ ಚಮಾಡಿಯಾ, ಚಾಂಭಾರ್, ಚಮಗಾರ್, ಸಮಗಾರ್[೨೮೪] ಎಂದೂ ಕರೆಯಲಾಗುತ್ತದೆ.

ಬಾದಾಮಿಯ ಜಂಬುಲಿಂಗನ ದೇವಾಲಯದ ಕಂಬದಲ್ಲಿರುವ ಆರುಸಾಲಿನ ಶಾಸನ ತಿಳಿಸುವಂತೆ[೨೮೫] ಆ ವಾತಾಪಿ (ಬಾದಾಮಿ) ಎರಡು ಸಾವಿರ ಮಹಾಜನರುಳ್ಳ

ವಿದ್ಯಾಕೇಂದ್ರವಾಗಿದ್ದಿತು. ಈ ಮಹಾಜನರು, ಯಾವುದೋ ಸಂದರ್ಭದಲ್ಲಿ ಅಲ್ಲಿಯ ಚಮ್ಮಾರ ಸುಂಕವನ್ನು[೨೮೫] (ಕವಳ್ತೆಯನ್ನು) ಬಿಟ್ಟುಕೊಟ್ಟರು. ಕವರ್ತೆ(ಕವಳ್ತೆ)ಯೆಂಬುದು ಒಂದು ವಿಧದ ಸುಂಕ. ಇಲ್ಲಿ ಪ್ರಸ್ತಾಪಿಸಿದ ಬಾದಾಮಿ ಶಾಸನವು, ಸಮಗಾರ ಸಮುದಾಯಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಹಾಕಿಸಲಾದ ಶಾಸನವೆಂಬುದು ಗಮನಾರ್ಹ. ಬಿಜಾಪುರ ಜಿಲ್ಲೆ, ಸಿಂದಗಿ ತಾಲ್ಲೂಕು ಹಿಪ್ಪರಗಿ ಶಾಸನವು ಸಮಗಾರರ ಮೇಲೆ ವಿಧಿಸಲಾದ ಸುಂಕವನ್ನು ಕುರಿತು ಹೇಳುತ್ತದೆ. ಇಲ್ಲಿಯ ಕಾಶಿಲಿಂಗ ದೇವಾಲಯದಲ್ಲಿ ಗೋಡೆಗೆ ಹೊಂದಿಸಿರುವ ಕಲ್ಲುತೊಲೆಯ ಮೇಲೆ ಕಂಡರಿಸಲಾದ ಈ ಶಾಸನವು ೩೧ ಅಗಸ್ಟ್ ೧೧೯೨ರಂದು ಯಾದವ ಅರಸ ಭಿಲ್ಲಮನ ಅವಧಿಯದು ವಿವಿಧ ವೃತ್ತಿಗಳನ್ನು ಅನುಸರಿಸುತ್ತಿದ್ದ ವೃತ್ತಿಗಾರರು ಅಂದರೆ ಬಡಗಿ, ಕಮ್ಮಾರ, ಸಮಾಗಾರ, ಅಸಗ, ದೇಡಮಗ್ಗ, ಇವರ ಮೇಲೆ ಒಂದೊಂದು ಗಾ(ಕಾ)ವಲಿ ಬಣ್ಣೆ(ಣ್ನೆ)ಗೆ[೨೮೬] ಸುಂಕವನ್ನು ಹಾಕುತ್ತಿದ್ದುದನ್ನು ಇಲ್ಲಿ ಹೇಳಲಾಗಿದೆ. ಪ್ರಾಚೀನ ಕರ್ನಾಟಕದಲ್ಲಿ ವಿವಿಧ ಕಸುಬುಗಳನ್ನು ಶ್ರಮಿಸಿದವರ ಪೈಕಿ ಚಮ್ಮಾರ ಸಮುದಾಯದವರು. ಸಮಾಜದಲ್ಲಿ ಒಂದು ಪ್ರತಿಷ್ಠಿತ ಸ್ಥಾನ ಪಡೆದುಕೊಂಡಿರುವುದು ಗಮನಾರ್ಹ. ಕ್ರಿ.ಶ. ೯ನೆಯ ಶತಮಾನದಿಂದ ೧೪ನೆಯ ಶತಮಾನಗಳವರೆಗೆ ದೊರಕುವ ಕನ್ನಡ ಶಾಸನಗಳಲ್ಲಿ ವಿವಿಧ ವೃತ್ತಿ ಸಂಘದವರ ಬಗೆಗೆ ಉಲ್ಲೇಖಿಸಲಾಗಿದೆ. ಇವರನ್ನು ಹಿಟ್ಟುಕಾರರೆಂಬ ವಿಶೇಷಣ ಬಳಸಿ ಗುರುತಿಸಿರುವುದುಂಟು, ಕಮ್ಮಾರ, ಅಕ್ಕಸಾಲಿ, ಸೇನಬೋವ, ತಳವಾರ ಮೊದಲಾದವರನ್ನು ಹಿಟ್ಟುಕಾರರೆಂತಲೇ ಕರೆಯಲಾಗಿದೆ. ಚಮ್ಮಾರರು ಹಿಟ್ಟುಕಾರರಾಗಿದ್ದರೆಂಬುದು ಗಮನಾರ್ಹ ಸಂಗತಿ.

ವಿಜಯನಗರ ಪೂರ್ವದಲ್ಲಿ ಈ ಚಮ್ಮಾರರ ಕುರಿತು ಅನೇಕ ಶಾಸನಗಳಿವೆ. ಕ್ರಿ.ಶ. ೧೧೩೮ರ ಯಲಶಿರೂರು ಶಾಸನದಲ್ಲಿ ಹೊಲಗೇರಿಯ ಹೆಸರಿದೆ.[೨೮೭] ತುಂಬಿಗಿಯ ಶಾಸನದಲ್ಲಿ ಹೊಲೆ[೨೮೮] ಎಂಬ ಪದವಿದ್ದು ಮುಂದಿನ ಭಾಗ ತೃಟಿತವಾಗಿದೆ. ಅಂದರೆ ಇದರಿಂದ ಅವರು ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಎಂಬುದು ತಿಳಿಯುತ್ತದೆ. ಕೊಪ್ಪದ ೧೦೭೫ರ ಶಾಸನದಲ್ಲಿ ಇತರರ ಜತೆ ಪರೆಕಾರರಿಗೆ (ತಲುವೆ ಬಾರಿಸುವ) ೩೦ ಮತ್ತರ ಭೂಮಿ ನೀಡಿದ್ದೂ[೨೮೯] ಸೇರಿದೆ.

ಚಮ್ಮಾರರ ಪ್ರಮುಖ ಕಸುಬು ಸತ್ತ ದನಗಳ ಚರ್ಮವನ್ನು ಸುಲಿದು ಸಾಂಪ್ರದಾಯಿಕ ರೀತಿಯಲ್ಲಿ ಹದಗೊಳಿಸಿ, ಮಿಣಿ, ಜತ್ತಿಗೆ, ಬಾರಿಕೋಲು ಮೊದಲಾದ ವ್ಯವಸಾಯದ ಉಪಕರಣಗಳನ್ನು ಸಿದ್ಧಗೊಳಿಸುತ್ತಿದ್ದರು. ಚರ್ಮದ ಕೆಲಸವು ಎರಡು ಗುಂಪಿನ ಜನರಿಂದ ನಡೆಯುತ್ತಿತ್ತು. ಚರ್ಮವನ್ನು ಸುಲಿದು ಹದಮಾಡಿ ಅದನ್ನು ಉಪಯೋಗಕ್ಕೆ ಯೋಗ್ಯವಾಗಿ ಮಾಡುವವನು ಸಮ್ಮಾಗಾರ ಅಥವಾ ಚರ್ಮಕಾರ. ಹದಗೊಳಿಸಲ್ಪಟ್ಟ ಚರ್ಮದಿಂದ ಪಾದರಕ್ಷೆ ಮುಂತಾದ ವಸ್ತುಗಳನ್ನು ತಯಾರಿಸುವವನು ಮೊಚ್ಚಿಗ ನೆನಸಿಕೊಳ್ಳುತ್ತಿದ್ದ. ಇವೆರಡನ್ನು ಒಬ್ಬನೇ ಮಾಡುತ್ತಿದ್ದಿರಲೂಬಹುದು ಎಂದು ಡಾ.ಪಿ.ವಿ. ನಾರಾಯಣ ಅವರು ಅಭಿಪ್ರಾಯಪಡುತ್ತಾರೆ.[೨೯೦] ವಿಜಯನಗರ ಕಾಲದಲ್ಲಿ ಇವರ ಸ್ಥಾನಮಾನದ ಕುರಿತು ಅಂದಿನ ಕವಿಗಳು ದಾರ್ಶನಿಕರು ಚಿಂತನೆ ಮಾಡಿದ್ದಾರೆ.

ಜಾತಿಪದ್ಧತಿ ಹೇಗೆ ಅಂದು ಜನಜೀವನವನ್ನು ಹದಗೆಡಿಸಿತ್ತು ಹಾಗೂ ಅಸ್ಪೃಶ್ಯತೆಯ ಹೆಸರಿನಲ್ಲಿ ಜನರನ್ನು ಹೇಗೆ ಸುಲಿಗೆ ಮಾಡುತ್ತಿದ್ದರು ಎಂಬುದನ್ನು ಅಂದಿನ ಸಮಾಜದ ಸ್ಪಷ್ಟದರ್ಶಿಗಳಾದ ಕನಕ, ಪುರಂದರ, ಸರ್ವಜ್ಞ ಮುಂತಾದವರು ಸೂಚಿಸಿದ್ದಾರೆ. ತಮ್ಮಲ್ಲೇ ಅನೇಕ ದುರ್ಗುಣಗಳನ್ನಿಟ್ಟುಕೊಂಡು ಹೊಲೆಯರು ಎನಿಸಿಕೊಂಡವರು ಇತರರನ್ನು, ಹೊಲೆಯರೆಂದು ಹೇಳುವುದು ಯಾವ ನ್ಯಾಯ ಎಂದು ದಾಸರು ವಿಚಾರ ಪರರ ಗಮನ ಸೆಳೆದಿದ್ದಾರೆ. ಹೊಲೆಯ ಹೊರಗಿಹನೆ ಊರೊಳಗಿಲ್ಲವೆ! ಶ್ರೀ ಹರಿಯ ಸ್ಮರಣೆಯನು ಬಲ್ಲವರು ಪೇಳಿ.[೯೧] ಅಂದಿದ್ದಾರೆ. ವಿಜಯನಗರಕ್ಕೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರು ಚರ್ಮಕಾರರನ್ನು ಗುರುತಿಸಿದ್ದಾರೆ. ಅಂದು ಚರ್ಮಕಾರರು ಯಾವ ವಸ್ತುಗಳನ್ನು ತಯಾರಿಸುತ್ತಿದ್ದರು ಎಂಬುದಕ್ಕೆ ಪಾಯೇಸನು ಸಾಮಾನ್ಯ ಜನಗಳು ಬರಿಗಾಲಿನಲ್ಲೇ ತಿರುಗುತ್ತಾರೆ ಎಂದು ಹೇಳಿದರೆ ಬಾರ್ಬೋಸಾ ಗಂಡಸರು ಕಾಲುಚೀಲಹಾಕದೆ ಪಾದರಕ್ಷೆ ಧರಿಸುತ್ತಾರೆ[೯೨] ಎಂದು ಹೇಳುವನು. ಪಾಯೇಸನು ಕೆಲವರು ಹಾಕಿಕೊಳ್ಳುವ ಪಾದರಕ್ಷೆಯ ಬಗೆಗೆ ಹೇಳಿದರೆ, ಬಾರ್ಬೋಸ ಹೆಂಗಸರು ಹಾಕಿಕೊಳ್ಳುವ ಕಸೂತಿ ಹಾಕಿದ ಚರ್ಮದ ಪಾದರಕ್ಷೆಗಳ ವಿವರಗಳನ್ನು ತಿಳಿಸುತ್ತಾರೆ. ಅಂದು ವಿವಿಧ ವಿನ್ಯಾಸದ ಚಪ್ಪಲಿಗಳಿದ್ದವು, ಅಂದು ಅರಸರು, ಮಂತ್ರಿಮಂಡಲ, ಶ್ರೀಮಂತರು ಪಾದರಕ್ಷೆಗಳನ್ನು ಹಾಕುತ್ತಿತ್ತು, ಸಾಮನ್ಯವರ್ಗ ಧರಿಸುತ್ತಿರಲಿಲ್ಲ ಎಂಬುದಾಗಿ ತಿಳಿದುಕೊಳ್ಳಬಹುದು.

ಹಿಂದಿನಿಂದಲೂ ಪಾದರಕ್ಷೆಯ ಬಳಕೆ ಜನರಿಗೆ ಗೊತ್ತಿದ್ದಿರಬೇಕು. ಅದನ್ನು ಮಾಡಿಕೊಡುವವರಿಗೆ ಸಮ್ಮಗಾರ (ಚರ್ಮಕಾರ, ಈಗಿನ ಚಮ್ಮಾರ) ಮೊಚ್ಚಿಗಾರ[೯೩] ಎಂಬ ಹೆಸರುಗಳಿದ್ದವು. ಅವರ ಮನೆಗಳು ಒಂದೆಡೆ ಇರುತ್ತಿದ್ದವು. ಅವುಗಳನ್ನು ಮಾಡುವವರು ಸಾಮಾನ್ಯವಾಗಿ ಊರಿನ ಸತ್ತದನ ಮುಂತಾದವುಗಳನ್ನು ಎತ್ತುವ ಹರಿಜನರು, ಪಾದರಕ್ಷೆಯನ್ನು ಕೆರ,[೯೪] ಪಾಪಾಸು,[೯೫] ಮೆಟ್ಟು,[೯೬] ಹಾವುಗೆ[೯೭] ಎಂದು ಬೇರೆ ಬೇರೆ ಹೆಸರುಗಳಿಂದ ಕರೆಯುವ ವಾಡಿಕೆ ಅಂದಿಗೂ ಮತ್ತು ಇಂದಿಗೂ ಇದೆ. ಪಾದರಕ್ಷೆ ಹೊಸದನ್ನು ಹಾಕಿಕೊಳ್ಳುವಾಗ ಕಾಲು ಕಚ್ಚುವುದೆಂದು ಅವರು ಚರ್ಮವನ್ನು ಹದಗೊಳಿಸಲು ತೈಲ ಬಳಿಯುವರು, ಕಾಲ ಹಿಸಿತಿಂಬ ಶಂಕೆಯಿಂದಾ ಪಾದರಕ್ಷೆಗೆ ತೈಲಮಂ ಮೊದಲೆ ತೀಡುವಂತೆ[೯೮] ಆದರೆ ಈಗಿನ ಪಾದರಕ್ಷೆಗಳು ನುಣುಪಾಗಿ ಹದಗೊಂಡ ಚರ್ಮವೇ ಆಗಿರುವುದರಿಂದ ಅದರ ಅವಶ್ಯಕತೆಯಿಲ್ಲ. ಪಾದರಕ್ಷೆಯಲ್ಲೂ ವೈಭವವನ್ನು ಕಾಣಬಹುದಾಗಿದೆ. ಹೀಗೆ ರಾಜ, ರಾಣಿಯರು ಚಿನ್ನ ಬೆಳ್ಳಿ ಬೆಲೆಬಾಳುವ ಹಾವುಗೆಗಳನ್ನು ಮೆಟ್ಟುತ್ತಿದ್ದರು.[೯೯]

ವಿಜಯನಗರ ಕಾಲದಲ್ಲಿ ಪಾದರಕ್ಷೆಗಳ ಬಳಕೆ ತುಂಬಾ ಪರಿಚಿತವಾಗಿತ್ತು. ಮೋಚಿ ಅಥವಾ ಚಮ್ಮಾರರು ಜನರು ಹಾಕಿಕೊಳ್ಳಲೆಂದು ವೈವಿಧ್ಯಮಯ ಪಾದರಕ್ಷೆಗಳನ್ನು ತಯಾರಿಸುತ್ತಿದ್ದರು. ವಿಜಯನಗರಕ್ಕೆ ಭೇಟಿ ನೀಡಿದ್ದ ವಿದೇಶಿ ಪ್ರವಾಸಿ ನಿಕೊಲೊಕೋಂಟಿಯ ಪ್ರಕಾರ ಜನರು ನೇರಳೆ ಮತ್ತು ಚಿನ್ನದ ಬಣ್ಣದ ಪಟ್ಟಿಗಳನ್ನು ಹೊಂದಿರುವ ಚಪ್ಪಲಿಗಳನ್ನು ಧರಿಸುತ್ತಿದ್ದರು. ಜನರು ಒರಟು ಬೂಟುಗಳನ್ನು ಧರಿಸುತ್ತಿದ್ದುದನ್ನು ಬಾರ್ಬೋಸ ಗಮನಿಸಿದ್ದನು.[೧೦೦] ಪಾದರಕ್ಷೆಗಳಿಗೆ ಪ್ರಾಚೀನ ಶೈಲಿಯಂತೆ ಚೂಪಾದ ತುದಿ ಮತ್ತು ಅಟ್ಟೆಗಳನ್ನು ಬಿಟ್ಟು ಬೇರೇನೂ ಇರದೆ ಮೇಲ್ಗಡೆ ಅವುಗಳನ್ನು ಕಾಲಲ್ಲಿರಿಸಿಕೊಳ್ಳಲು ಸಹಾಯಕವಾಗುವಂತೆ ಕೆಲವು ಪಟ್ಟಿಗಳಿರುವ

ಇತರ ಪಾದರಕ್ಷೆಗಳೂ ಇವೆ. ಇಟಲಿಯಿಂದ ಬರುವ ಕೆಲವು ಕಾಗದಗಳು ಅಥವಾ ಅವಶೇಷಗಳಲ್ಲಿ ನೀವು ಕಾಣುವಂಥ ಪ್ರಾಚೀನ ಕಾಲದಲ್ಲಿ ರೋಮನ್ನರು ರೂಢಿಗತವಾಗಿ ಧರಿಸುತ್ತಿದ್ದಂತಹ ಪಾದರಕ್ಷೆಗಳಂತೆ ಅವನ್ನು ಮಾಡಲಾಗಿದೆ ಎಂದು ಪೆಯಾಸ್[೩೦೧] ಹೇಳುತ್ತಾನೆ. ಸಿರಿವಂತರಷ್ಟೇ ಪಾದರಕ್ಷೆಗಳನ್ನು ಹಾಕಿಕೊಳ್ಳುತ್ತಿದ್ದುದನ್ನು ಹಾಗೂ ಬಹುಪಾಲು ಜನರು ಬರಿಗಾಲಿನಲ್ಲಿಯೇ ನಾಡಿನಲ್ಲೆಲ್ಲ ನಡೆದಾಡುತ್ತಿದ್ದುದ್ದನ್ನು ಪೆಯಾಸ್ ಗಮನಿಸಿದ್ದಾನೆ. ಶಾಸನಗಳಲ್ಲಿ ಪಾದರಕ್ಷೆ ಕುರಿತು ಉಲ್ಲೇಖವಿದೆ. ಕ್ರಿ.ಶ. ೧೪೪೭ರಲ್ಲಿ ಕುಪ್ಪಣ್ಣವೊಡೆಯರ ಕಾಲದಲ್ಲಿ ಪಾದರಕ್ಷೆ ಧರಿಸಿದ ಅರಮನೆ ಸೈನಿಕರು ಈ ದೇವಾಲಯದೊಳಗೆ ಬರಬಾರದೆಂಬ[೩೦೨] ನಿಯಮ ಮಾಡಿದ ವಿಷಯ ಶಾಸನದಲ್ಲಿದೆ. ಅಂದು ದೇವಾಲಯಗಳ ಒಳಗೆ ಪಾದರಕ್ಷೆಗಳಿಗೆ ಪ್ರವೇಶವಿರಲಿಲ್ಲ, ಇಂದು ಸಹ ಪ್ರವೇಶವಿಲ್ಲ.

ವಚನ ಸಾಹಿತ್ಯದಲ್ಲಿ ಈ ಕಸುಬಿನವರ ಜೀವನ ತುಂಬಾ ಕಷ್ಟವಿತ್ತು. ಹೊಲೆಯ ನಾಯಿ ಹುಲುಸರವಿಯಿಂದ ಕರೆಕಷ್ಟ[೩೦೩] ಎಂದು ಹೊಲೆಯನನ್ನು ನಾಯಿಯೊಡನೆ ಸಮೀಕರಿಸುವುದನ್ನು ನೋಡಿದರೆ ಅವನ ಸ್ಥಿತಿಯು ಎಷ್ಟು ಹೀನವಾಗಿದ್ದಿತೆಂಬುದರ ಅರಿವಾಗುತ್ತದೆ. ಅಂತ್ಯಜನ ಹೆಸರು ಪಡೆಯಲೂ ಅನರ್ಹವಾದ ಅನಾಮಿಕನಾಗಿದ್ದ,[೩೦೪] ಇವನು ಊರ ಹೊರಗೆ ವಾಸಿಸಬೇಕಾಗಿತ್ತು. ಅದು ಹೊಲಗೇರಿ ಎನಿಸಿಕೊಳ್ಳುತ್ತಿದ್ದಿತು.[೩೦೫] ಯಶೋಧರ ಚರಿತೆಯಲ್ಲಿಯೂ ಇದರ ಸೂಚನೆಯಿದೆ. ಹರಿಗೋಲು, ಚರ್ಮದ ಪಾದರಕ್ಷೆಗಳು, ತುಪ್ಪಗಳನ್ನು ತುಂಬಲು ಉಪಯೋಗಿಸುತ್ತಿದ್ದ[೩೦೬] ಸಿದ್ದಲಿಕೆ–ಬುದ್ದಲಿಕೆಗಳೆಂಬ ಚರ್ಮದ ಚೀಲಳನ್ನು[೩೦೭] ಹೊಲೆಯನು ತಯಾರಿಸುತ್ತಿದ್ದನೆಂದು ಅಂಬಿಗರ ಚೌಡಯ್ಯನ ವಚನವೊಂದು ವಿವರಿಸುತ್ತದೆ. ಅಲ್ಲದೆ ಊರಲ್ಲಿ ಡಂಗುರ ಹೊಡೆದು ಸಾರುವ ಕೆಲಸವೂ ಹೊಲೆಯನದಾಗಿತ್ತು. ಅಂತ್ಯಜನ ವೇಷವನ್ನು ಕರ್ಣಪಾರ್ಯನ ನೊಗೆಯಲ್ ಸಂಬಳಿಗೋಲು ಕೆರ್ಪುರೆ ಸಹಿತಂ ಪುಗತರೆ[೩೦೮] ಎಂದು ಹೇಳಿದೆ. ಇವರು ತಮ್ಮ ಕಸುಬಲ್ಲದೆ ಸೈನಿಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಅಲ್ಲದೆ ಇವರು ಹೋರಾಟ ಮಾಡಿ ಮಡಿದ ಉಲ್ಲೇಖಗಳಿದ್ದು, ಕ್ರಿ.ಶ. ೧೪೨೮ರ ಶಾಸನದಲ್ಲಿ ಮನವನೆಯ ಮಾದಿಗನೊಬ್ಬನು ಹೋರಾಟದಲ್ಲಿ ಮಡಿದಾಗ ಅವನ ಹೆಂಡತಿ ಸ್ವರ್ಗಸ್ತೆಯಾದಳೆಂದು ತಿಳಿಸುವ ಮಾಹಾಸತಿ ಶಾಸನವಿದಾಗಿದೆ.[೩೦೯] ಲಕ್ಕಂಣ ವೊಡೆಯರು ಆಳುತ್ತಿದ್ದ ಮುಳಬಾಗಿಲು ರಾಜ್ಯದ ತೇಕಲನಾಡಿನ ಜುಂಜರುಗಣಂಗಳಿಗೆ ಸಲ್ಲುವ ಮರಗಳಲು ಗ್ರಾಮದ ಹಲವು ಪಾಂಚಾಳರು ಸೇರಿಕೊಂಡು ಸಂತೆಯನ್ನು ಕಟ್ಟಿಸಿ, ಅದರ ಸಂಬಂಧ ಆ ಸಂತೆಯ ಪಟ್ಟಣ ಸ್ವಾಮಿಯಾದ ಬಸ್ಸಿಸೆಟ್ಟಿಗ ಭೂಮಿಯನ್ನು ಮತ್ತು ಕೆಲವು ತೆರಿಗೆಯನ್ನು ಮಾನ್ಯವಾಗಿ ಬಿಡಲಾಗಿದೆ. ಸಂತೆಯಲ್ಲಿ ಕೊತ್ತು ಯತ್ತು ತ್ತೊತ್ತು ಕುದುರೆಯನ್ನು ಕೊಂಡಾಗ, ಮಾರಿದಾಗ ಕಬ್ಬಿಣ ಕೆಲಸ, ಮರಕೆಲಸ, ಅಕ್ಕಸಾಲೆ, ಅಗಸ, ನಾವಿಂದ, ಹೊಲೆಯ ಮುಂತಾದವರೂ ಮಾನ್ಯವನ್ನು ಸಲ್ಲಿಸಬೇಕು ಎಂದು ಶಾಸನದಲ್ಲಿ ಕಟ್ಟಳೆ ವಿಧಿಸಿದೆ,[೩೧೦] ಸಂತೆಯ ನಿರ್ಮಾಣ, ನಿರ್ವಹಣೆಯ ಬಗೆಗೆ ತಿಳಿಸುವ ಅಪರೂಪದ ಶಾಸನಗಳಲ್ಲಿ ಇದೂ ಒಂದಾಗಿದೆ. ಚರ್ಮದ ಕೆಲಸವನ್ನು ಮಾಡುತ್ತಾ ಚಮ್ಮಾರರು ಎನಿಸಿಕೊಂಡರು. ಇವರನ್ನು ಹೊಲೆಯರೆಂದು ಹೇಳಿರುವುದು ಯಾವ ನ್ಯಾಯ ಎಂದು ದಾಸರು ವಿಚಾರ ಪರರ ಗಮನ

ಸೆಳೆದಿದ್ದಾರೆ. ಹೊಲೆಯ ಹೊರಗಿಹನೆ ಊರೊಳಗಿಲ್ಲವೆ! ಶ್ರೀ ಹರಿಯ ಸ್ಮರಣೆಯನ್ನು ಬಲ್ಲಿದರು ಪೇಳಿ[೩೧೧] ಎಂಬ ಧ್ವನಿ ಇಲ್ಲದೆ ಪಾಯಿಯನ, ಯುವಸ್ವಾಂಗ್, ಇತ್ಸಿಂಗ್, ಅಲ್‌ಬೆರೂನಿ ಮುಂತಾದ ವಿದೇಶಿ ಪ್ರವಾಸಿಗರು ಭರತಖಂಡದಲ್ಲಿ ಚಂಡಾಲರಿಗೆ ಊರಿನ ಹೊರಗೆ ವಾಸಸ್ಥಾನವಿದ್ದಿತೆಂದೂ, ಅವರು ಊರಿನ ಒಳಕ್ಕೆ ಬಂದರೆ ತಾವು ಬರುತ್ತಿದ್ದೇವೆಂಬ ಎಚ್ಚರಿಕೆ ಕೊಡುತ್ತಿದ್ದರೆಂದು ಹೇಳಿರುವರು. ಹಾಗೆ ಬರುವಾಗ ಸಂಬಳಿ, ಸಂಬಳಿ ಎಂದು ಹೇಳಿಕೊಂಡು ಕೋಲು ತಟ್ಟುತ್ತಾ ಬರುತ್ತಿದ್ದರೆಂದು ಕೆಲವು ಕನ್ನಡ ಕಾವ್ಯಗಳಲ್ಲಿ ಉಲ್ಲೇಖವಿದೆ. ಆ ಕೋಲಿಗೆ ಸಂಬಳಿಗೋಲು[೩೧೨] ಎಂದು ಹೆಸರು.

ಹೊಲೆಯರು ಊರ ಹೊರಗೆ ವಾಸಮಾಡುತ್ತಿದ್ದರು. ಆ ಜಾಗವನ್ನು ಹೊಲಗೇರಿ ಎಂದು ಕರೆಯುತ್ತಿದ್ದರೆಂಬುದಕ್ಕೆ ಸಾಹಿತ್ಯಾಧಾರಗಳು,[೩೧೩] ಶಾಸನಾಧಾರಗಳೂ[೩೧೪] ಇವೆ. ಹೊಲೆಯ, ಮಾದಿಗ ಎಂಬ ಜಾತಿಸೂಚಕಗಳನ್ನು ಸೂಚಿಸುವ ಹೆಸರುಗಳವರೂ ಇದ್ದರು. (ಹೊಲೆಯರ ಹುಳ್ಳ, ಮಾದಿಗರ ಕಂಪ–ಮುಂತಾದವರು) ಹಾಗೆಯೆ, ಮಾತಂಗಿಯನ್ನು ಕವಿ 'ಮಾದಗಿತ್ತಿ' ಎಂದು ಕರೆದಿದ್ದಾನೆ. ಅಸ್ಪೃಶ್ಯತಾ ನಿವಾರಣೆ ಬಗೆಗೆ ಕಾನೂನುಗಳಾಗಿದ್ದರೂ ಇವತ್ತಿಗೂ ಹಳ್ಳಿಗಳಲ್ಲಿ ಹೊಲಗೇರಿ ಎಂಬುದಿದೆ. ಕೆಲವು ಕಡೆ ಹೊಲೇರಹಟ್ಟಿ ಎಂದೂ, ಮತ್ತೆ ಕೆಲವು ಕಡೆ ಮಾದಿಗರಹಟ್ಟಿ ಎಂದು ಕರೆಯುವ ವಾಡಿಕೆ ಇದೆ. ಊರು ಅಂದ ಮೇಲೆ ಹೊಲಗೇರಿ, ಅವನು ಊರು ಹೊಲಗೇರಿ ಒಂದು ಮಾಡಿಬಿಟ್ಟ ಎಂಬ ನಾಣ್ಣುಡಿಗಳು ಇಂದಿಗೂ ಬಳಕೆಯಲ್ಲಿವೆ. ಮೊದಲನೆಯ ಮಾತಿನಲ್ಲಿ ಊರು ಅಂದ ಮೇಲೆ ಹೊಲಗೇರಿ ಇರುತ್ತದೆ. ಎಂಬ ಭಾವನೆ, ಎರಡನೆಯದರಲ್ಲಿ ಅವು ಊರಿಂದ ದೂರದಲ್ಲಿರುತ್ತವೆ ಎಂಬುದು ಸ್ಪಷ್ಟವಾಗುತ್ತದೆ.

ಹೊಲೆಯರೆಂಬ ಹೆಸರಿನ ಕೆಳವರ್ಗದ ಜನ[೩೧೫] ಇದ್ದರು ಎಂಬುದನ್ನು ಶಾಸನಗಳು ಪುಷ್ಟೀಕರಿಸುತ್ತವೆ. ೧೨೦೫ರ ಒಂದು ಶಾಸನ ಕರ್ಣಾಟಕದಲ್ಲಿ ಹೊಲೆಯರ ಮಕ್ಕಳ ಮೇಲೂ ತೆರಿಗೆಗಳನ್ನು ಹಾಕುತ್ತಿದ್ದರೆಂದು ಹೇಳುತ್ತದೆ.[೩೧೬] ೧೪೩೦ರ ಮತ್ತೊಂದು ಶಾಸನ ಹೊಲೆಯರು ತಾವು ಕೊಡಬೇಕಾಗಿದ್ದ ಸುಂಕದಿಂದ ವಿಮುಕ್ತರಾಗಿದ್ದರೆಂದು ಹೇಳುತ್ತದೆ.[೩೧೭] ಅಲ್ಲದೆ ಅವರು ಊರ ಕೆಲಸಕಾರ್ಯಗಳಿಗೂ ನೆರವಾಗುತ್ತಿದ್ದರು.[೩೧೮]

ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಹೊಲೆಯರು ಎಂಬ ಒಂದು ವರ್ಗದ ಜನ ಇದ್ದರು. ಅವರ ಮೇಲೆ ತೆರಿಗೆಗಳನ್ನು ಹಾಕುತ್ತಿದ್ದರೂ ಅದರಿಂದ ವಿನಾಯಿತಿ ಅವರಿಗೆ ದೊರಕಿತ್ತು; ಹೊಲಗೇರಿ ಎಂಬ ಕೇರಿಗಳು ಸಾಮಾನ್ಯವಾಗಿ ಊರ ಹೊರಗೆ ಇದ್ದವು, ಅವರನ್ನು ಅಸ್ಪೃಶ್ಯರೆಂಬ ಭಾವನೆಯಿಂದ ಕಾಣುತ್ತಿದ್ದರು ಎಂಬ ಈ ವಿಷಯಗಳನ್ನು ಸಾಹಿತ್ಯ ಗ್ರಂಥಗಳಿಂದ ಹಾಗೂ ಕೆಲವು ಶಾಸನಗಳಿಂದ ತಿಳಿಯಲಾಗಿದೆ.. ವಿದೇಶಿ ಪ್ರವಾಸಿಗರ ವರದಿಯಲ್ಲಾಗಲಿ, ಶಾಸನಗಳಲ್ಲಾಗಲಿ ಹೊಲೆಯರ ಸಾಂಘಿಕ ಜೀವನ ಕುರಿತು ಸಂಪೂರ್ಣಚಿತ್ರ ನಮಗೆ ದೊರೆಯುವುದಿಲ್ಲ. ಆದರೆ ಸಮಾಜದಲ್ಲಿ ಯಾವ ಸ್ಥಾನಮಾನವನ್ನೂ ಹೊಂದಿರದಿದ್ದ ಅಂತ್ಯಜರ ಬಗೆಗೆ ನಮ್ಮ ಸಾಹಿತ್ಯ ಕೃತಿಗಳು ಅನುಕಂಪ ತಾಳಿವೆ. ಜನರು ಅವರನ್ನು ಕಾಣುತ್ತಿದ್ದ ರೀತಿ ಕವಿಗಳ, ಸಂತರ, ಸುಧಾರಕರ ಹೃದಯ ಮಿಡಿದಿದೆ. ಜನರ ನೈತಿಕ

ಮಟ್ಟವನ್ನು ಸುಧಾರಿಸುವುದರ ಮೂಲಕ ಸಮಾಜವನ್ನು ಸಂಸ್ಕರಿಸಲು ಹೊರಟ ಸಂತರಾದ ಕನಕ–ಪುರಂದರದಾಸರು ಜನತೆಯನ್ನು ಕೆಣಕಿ ನಿಜವಾದ ಹೊಲೆಯ ಯಾರು ಎಂಬುದನ್ನು ಯೋಚಿಸಿ ಎಂದು ಜನರಿಗೆ ಸವಾಲಿನಂತೆ ಪ್ರಶ್ನೆಗಳನ್ನು ಹಾಕಿದ್ದಾರೆ. ಹೊಲೆಯ ಬಂದನೆಂದು ಒಳಗೆ ದೇವರ ಮಾಡಿ! ಘಣ ಘಂಟೆ ಬಾರಿಸುತ! ತನುವಿನ ಕೋಪ ಹೊಲೆಯಲ್ಲವೇನಯ್ಯ! ಮನಸಿನ ವಂಚನೆ ಹೊಲೆಯಲ್ಲವೇನಯ್ಯ! ಇಂಥ ಹೊರಗಿದ್ದ ಹೊಲೆಯನನ್ನು ಒಳಗೆ ತುಂಬಿಟ್ಟುಕೊಂಡು! ಇದಕೇನು ಮದ್ದು ಪುರಂದರ ವಿಠಲ![೩೯] ಹಾಗಾದರೆ ಹೊಲೆಯ ಯಾರು? ಸೊಳೆಯನು ಕಾಮಿಸುವ ಶುದ್ಧ ಹೊಲೆಯ! ಕೊಂಡ ಸಾಲಗಳನು ತಿದ್ದದಾತನೆ ಹೊಲೆಯ! ಉಂಡ ಮನೆಗೆರಡನ್ನು ಬಗೆವಾತನೆ ಹೊಲೆಯ! ಮದ್ದಿಕ್ಕಿ ಕೊಲ್ಲುವವ ಮಾರಿ ಹೊಲೆಯ! ಶುದ್ಧತಾನೆಂಬಾತ ಶುಂಠ ಹೊಲೆಯ ಆಸೆಮಾತನು ಕೊಟ್ಟು ಭಾಷೆ ತಪ್ಪುವ ಹೊಲೆಯ! ಲೇಸು ಉಪಕಾರವ ಮಾಡದವ ಹೊಲೆಯ! ಮೋಸದಲ್ಲಿ ಮುನಿದು ಕೆಡಿಸುವವ ಹೊಲೆಯ! ಹುಸಿಯ ಬೊಗಳುವವನೊಬ್ಬ ಹುಚ್ಚ ಹೊಲೆಯ! ಪರಸತಿಗೆ ಆಳೂ(ಕ)ದವ (ಅಳುಕಿದವ?) ಪಾಪಿ ಹೊಲೆಯ! ಗುರು ಹಿರಿಯರನು ನಮಿಸದಾತನೆ ಹೊಲೆಯ! ಪುರಂದರವಿಠಲನ ನೆನೆಯದವ ಹೊಲೆಯ.[೪೦] ದಾಸರು ಕೊಟ್ಟಿರುವ ಈ ದೀರ್ಘ ವಿವರಣೆಯಲ್ಲಿ ಸಮಾಜದಲ್ಲಿ ಎಷ್ಟೆಷ್ಟು ತರಹದ ಅನಾಚಾರಗಳನ್ನು ಜನ ಮಾಡುತ್ತಿದ್ದರು ಎಂಬುದರ ಒಂದು ಚಿತ್ರ ದೊರೆಯುತ್ತದೆ. ಹೀಗೆ ತಮ್ಮೊಳಗೆ ಅನೇಕ ತಪ್ಪುಗಳನ್ನಿಟ್ಟುಕೊಂಡು ಬೇರೆಯವರಲ್ಲಿ ತಪ್ಪನ್ನರಸುವವರು ನಿಜವಾದ ಹೊಲೆಯರು ಎಂದು ದಾಸರು ಹೊಲೆಯ ಎಂಬ ಪದಕ್ಕೆ ಒಂದು ಹೊಸ ವ್ಯಾಖ್ಯಾನವನ್ನೇ ನೀಡಿದ್ದಾರೆ. ಹೊಲೆಯರು ಯಾರು ಎಂಬುದನ್ನು ಹೇಳಹೊರಟ ದಾಸರ ಕಣ್ಣುಮುಂದೆ ಸಮಾಜದಲ್ಲಿ ಕಾಣುತ್ತಿದ್ದ ಸಮಾಜದ್ರೋಹಿಗಳ ಒಂದು ಚಿತ್ರವೆ ನಿಂತಿದೆ.

ಹೊಲೆಯರು ಸಮಾಜದಲ್ಲಿ ಏನೂ ಸ್ಥಾನಮಾನಗಳಿಲ್ಲದೆ ಹೀನಸ್ಥಿತಿಯಲ್ಲಿರುತ್ತ, ಕವಿಗಳ, ಕಲಾವಿದರ, ದಾರ್ಶನಿಕರ, ಸಂತರ, ಸುಧಾರಕರ, ಸಹಾನುಭೂತಿಯನ್ನು ಪಡೆದುಕೊಂಡು ಬಂದಿದ್ದಾರೆ.[೪೧] ಅವರ ಸ್ಥಿತಿ ಅಂದಿನಿಂದ ಇಂದಿನವರೆಗೂ ಶೋಚನೀಯ ಸ್ಥಿತಿಯಲ್ಲಿದೆ. ಶಾಸನಗಳಲ್ಲಿ ಕಂಡುಬರುವ ಬೇರೆ ಬೇರೆ ಜಾತಿಯವರ ಸಾಮಾಜಿಕ ಸ್ಥಾನಮಾನಗಳನ್ನು ಡಾ. ಚಿದಾನಂದಮೂರ್ತಿಯವರು ವಿವರಿಸುತ್ತಾ, ಭಿನ್ನ ಭಿನ್ನ ಜಾತಿಗಳವರು ಸಾಮಾಜಿಕವಾಗಿ ಯಾವ ಯಾವ ಹಂತದಲ್ಲಿದ್ದರು ಎಂಬುದನ್ನು ಹೇಳುವುದು ಕಷ್ಟವೇ. ಎಲ್ಲರಿಗಿಂತ ಬ್ರಾಹ್ಮಣರು ಮೇಲಿನ ಹಂತದಲ್ಲಿದ್ದರೆಂಬುದು ನಿರ್ವಿವಾದವಾದುದು. ಬಹು ಕೆಳಗಿನ ಹಂತದಲ್ಲಿದ್ದವರು ಹರಿಜನರು ಎಂಬುದೂ ನಿರ್ವಿವಾದವಾದುದು.[೪೨] ಎಂದು ಹೇಳುತ್ತಾರೆ.

ಒಂದು ಹುಲ್ಲುಕಡ್ಡಿಯಾಗಲೀ ಸಮಯಕ್ಕೆ ಬರುತ್ತದೆ ಅನ್ನುವಂತೆ ಒಬ್ಬ ವ್ಯಕ್ತಿ ಹೊಲೆಯನೇ ಆಗಿರಲಿ; ಕೀಳುಜಾತಿಯವನೆ ಆಗಿರಲಿ ಅವನ ಬಗೆಗೆ ತಾತ್ಸಾರ ಸಲ್ಲದು; ಅವನಿಂದಲೂ ಕೆಲವು ಸಮಯದಲ್ಲಿ ಸಹಾಯ ಬೇಕಾಗಬಹುದು. ಉಚ್ಚ ನೀಚ ಭಾವನೆ ಇಟ್ಟುಕೊಂಡು ಯಾರನ್ನೂ ತಾತ್ಸಾರ ಮಾಡಬಾರದು ಎಂಬ ಭಾವನೆಗೆ ಕವಿವಾಣಿ ಪುಷ್ಟಿಕೊಡುತ್ತದೆ. ಕಾರ್ಯವಾಸಿ ಕತ್ತೇಕಾಲುಕಟ್ಟು ಎನ್ನುವಂತೆ: ಕುಲವುಳ್ಳವನಾದಡೆ ಕಾರ್ಯಬಾತೆಗೆ! ಹೊಲೆಯನಕೆಳಗೊಳ್ಳ ಬೇಹುದು! ಸಲೆ ಕಾರ್ಯಾಂತಕೆ ವಸುದೇವಕತ್ತೆ ಕಾಲ್ಗಳದನೆಂಬ[೪೩]

ನಾಣ್ಣುಡಿಯುಂಟು. ಕೃಷ್ಣನ ತಂದೆ ವಾಸುದೇವ ಎಷ್ಟೇ ದೊಡ್ಡವನಾಗಿದ್ದರೂ ಕಾರ್ಯಾರ್ಥವಾಗಿ ಕತ್ತೆಯ ಸಹಾಯ ಪಡೆಯಲಿಲ್ಲವೆ! ಹಾಗೆಯೇ ಎಂತಹ ಕುಲವುಳ್ಳವನಾದರೂ, ಕಾರ್ಯಾರ್ಥವಾಗಿ ಒಬ್ಬರೊಬ್ಬರ ಸಹಾಯವನ್ನು ಪಡೆಯಲೇಬೇಕಾಗುತ್ತದೆ. ಒಟ್ಟಿನಲ್ಲಿ ಹೊಲೆಯರ ಬಗೆಗೆ ಸಾಹಿತ್ಯ ಕೃತಿಗಳು ಸಹಾನುಭೂತಿ ವ್ಯಕ್ತಪಡಿಸಿ ಅವರ ವಿಚಾರದಲ್ಲಿ ಅನಾದರಣೆ ಮಾಡಕೂಡದು ಎಂದು ಜನರನ್ನು ಎಚ್ಚರಿಸಿವೆ. ಸಮಾಜದಲ್ಲಿ ಅಂತ್ಯಜರಿಗೆ, ಯಾವ ಯಾವ ಕಾಲದಲ್ಲಿ ಏನೇನು ಸ್ಥಾನಮಾನಗಳಿದ್ದವು ಎಂಬುದರ ಬಗೆಗೆ ಸಾಹಿತ್ಯ ಕೃತಿಗಳು ಸಾಕಷ್ಟು ಮಾಹಿತಿಯನ್ನು ಒದಗಿಸಬಲ್ಲವು ಎಂಬುದನ್ನು ಈ ಸಮೀಕ್ಷೆಯಿಂದ ತಿಳಿದುಬರುತ್ತದೆ.

೧೦. ನಾವಿಂದರು

ಸಾಮಾನ್ಯವಾಗಿ ತಲೆಕೂದಲನ್ನು ಬೋಳಿಸುವುದಕ್ಕೆ ಕ್ಷೌರ ಅಥವಾ ಮುಂಡನ ಎನ್ನುವರು. ಪುರುಷರ ಕ್ಷೌರ ಮಾಡುವವರನ್ನು ಹಡಪಿಗ, ಹಡಪದವ, ಹಜಾಮಾ, ನಾಪಿತ, ನಾವಿದ, ನಾವಿಂದ, ನಾದಿಗ, ಕೆಲಸಿಗ, ಕಷ್ಪದವ, ಕನ್ನಡಿಕಾಯಕದವ, ವಾರೀಕ, ನಾಯ್ಡು, ಕ್ಷೌರಿಕ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಊರಿಗೊಬ್ಬ ಕ್ಷೌರಿಕನಿರಬೇಕು ಎಂಬುದೊಂದು ರೂಢಿ ಮಾತು. ಪ್ರತಿಯೊಂದು ಗ್ರಾಮದಲ್ಲೂ ನಾವಿಂದನು ಇರಬೇಕಾದುದರ ಅವಶ್ಯಕತೆ, ಅನಿವಾರ್ಯತೆಗಳನ್ನದು ಸೂಚಿಸುತ್ತದೆ. ಪುರೋಹಿತವರ್ಗದಿಂದ ಹಿಡಿದು ತೀರಾ ಕೆಳಸ್ತರದವರೆಗೂ ಸಮಾಜದ ಎಲ್ಲ ಸಂಪ್ರದಾಯ, ಧರ್ಮಗಳವರಿಗೂ ಇವರ ಅವಶ್ಯಕತೆಯಿದೆ. ಇದಲ್ಲದೆ ಧರ್ಮಶಾಸ್ತ್ರಗಳು ಮನ್ನಿಸಿರುವ ಚೂಡಾಕರಣ, ಉಪನಯನ, ಕೇಶಾಂತ ಇತ್ಯಾದಿ ಕೆಲವು ಸಂಸ್ಕಾರ ವಿಧಿಗಳಲ್ಲಿ ಈ ಕಸುಬಿನ ಪಾತ್ರವಿದೆ.[೨೪] ಆಯಾ ಸಂಸ್ಕಾರ ನಡೆವ ಸಂದರ್ಭದಲ್ಲಿ ಅವನಿಗೆ ದಕ್ಕಬೇಕಾದ ತಕ್ಕ ಮರ್ಯಾದೆ ಸಲ್ಲುತ್ತದೆ. ಅವನು ಕ್ಷೌರ ಮಾಡುವ ಸ್ಥಳಕ್ಕೆ ಆಯುಷ್ಕರ್ಮಶಾಲೆ[೨೫] ಎನ್ನುತ್ತಾರೆ. ಗ್ರಾಮದಲ್ಲಿ ಒಂದು ಅಥವಾ ಎರಡು ನಾಯಿಂದರ ಮನೆಗಳಿರುತ್ತವೆ. ಕ್ಷೌರಿಕ ಕಸುಬಿನಿಂದಲೇ ತಮ್ಮ ಉಪಜೀವನವನ್ನು ನಡೆಸುತ್ತಾರೆ. ಬೆಳಗಿನಿಂದ ಸಂಜೆಯವರೆಗೂ ತಮ್ಮ ಕಸುಬಿನಲ್ಲಿ ತೊಡಗಿರುತ್ತಾರೆ. ತಮ್ಮ ಮನೆಯ ಹಿತ್ತಲು, ಕಟ್ಟೆಯಮುಂಭಾಗ, ಅಥವಾ ಕಟ್ಟೆಯ ಮೇಲೆ ತಮ್ಮ ಕಾರ್ಯ ಆರಂಭಿಸುತ್ತಾನೆ. ಕ್ಷೌರವನ್ನು ಮಣಿಯ ಮೇಲೆ ತುದಿಗುಂಡಿಯ ಮೇಲೆ ಕೈಯಲ್ಲಿ ಕನ್ನಡಿ ಹಿಡಿದು, ತನಗೆ ಕ್ಷೌರವಾಗುತ್ತಿರುವುದನ್ನು ಆಗಾಗ್ಗೆ ನೋಡುತ್ತಿರುತ್ತಾನೆ. ಅರಸ, ಮಾಂಡಲೀಕ, ಊರಗೌಡ, ಶ್ರೀಮಂತರ ಮನೆಗಳಿಗೆ ನಾವಿಂದನೆ ಹೋಗಿ ಕ್ಷೌರ ಮಾಡಿ ಬರುತ್ತಾನೆ. ಕ್ಷೌರವಾದ ಮೇಲೆ ಕೂದಲನ್ನು ಒಟ್ಟುಗೂಡಿಸಿ ಒಂದು ಪೆಟ್ಟಿಗೆಯಲ್ಲಿ ಹಾಕುತ್ತಾನೆ. ಅದನ್ನು ಹೊಲೆಯರು ತೆಗೆದುಕೊಂಡು ಹೋಗಿ ಊರ ಹೊರಗೆ ಹಾಕುವರು. ಕ್ಷೌರ ಮಾಡಿದ ಸ್ಥಳವನ್ನು ಕಸಬರಿಕೆಯಿಂದ ಬಡಿಸಿ, ನೀರು ಸಿಂಪಡಿಸುವನು. ನಂತರ ಆತನ ಮನೆಯ ಹೆಣ್ಣು ಮಕ್ಕಳು ಅದನ್ನು ಸಾರಿಸುವರು. ಕ್ಷೌರದ ಸಾಧನ ಸಲಕರಣೆಗಳು ಯಾವುವು ಎಂಬುದನ್ನು ಅಮುಗೆ ದೇವಯ್ಯನೆಂಬ ಶಿವಶರಣರ ವಚನದಲ್ಲಿ ಕಂಡುಬರುತ್ತದೆ.

ಎನ್ನ ಕನ್ನಡಿ ಒಳಹೊರಗಿಲ್ಲ ಎನ್ನ ಗಳಿಗೆಯ ಮುಟ್ಟಿನೊಳಗಿಲ್ಲ
ಕೊಂಡಬೇರ ಹಡಪಕಳವಲ್ಲ ಕತ್ತಿಯ ಬಸವಣ್ಣ ಕೊಟ್ಟ

ಕತ್ತರಿಯ ಚೆನ್ನಬಸವಣ್ಣ ಕೊಟ್ಟ, ಕಿತ್ತುಹಾಕುವ ಚಿಮ್ಮುಟವ ಪ್ರಭುರಾಯ ಕೊಟ್ಟ
ಮಿಕ್ಕಾದ ಎನ್ನಯ ಮುಟ್ಟ ಸತ್ಯಶರಣರು ಕೊಟ್ಟರು
ದೃಷ್ಟವ ಕೊಟ್ಟು ತಾ ಬೆಳಗಿನೊಳಗಾದ ಕನ್ನಡಿ ಕಾಯಕದ ಅಮ್ಮಿದೇವಯ್ಯ
ಹಿಡಿಯಿಲ್ಲದ ಶಸ್ತ್ರ, ಕೀಲಿಲ್ಲದ ಕತ್ತರಿ, ಉಭಯವನೊಳಗೊಡದ ಚಿಮ್ಮಟ
ರೂಹಿಲ್ಲದ ಚಣ ಹಲ್ಲಿಲ್ಲದ ಹಣಿಗೆ ಮಲವಿಲ್ಲದ ಬೆಳಗಿನ ಮುಕುರವ ಹಿಡಿದು
ಶರಣರೆಲ್ಲರವಿಡಿದಾಡಿ ಬಂದೆ[೩೬]

ಕ್ಷೌರದ ಸಾಧನಗಳನ್ನು ಬಿಂಬಿಸುವ ಈ ವಚನದ ಮೂಲಕ ಕನ್ನಡಿ, ಹಡಪ, ಕತ್ತಿ, ಚಣ, ಹಣಿಗೆ, ಕತ್ತರಿ, ಚಿಮ್ಮುಟ ಇವೇ ಮೊದಲಾದವು ಕನ್ನಡಿ ಕಾಯಕದ ಉಪಕರಣಗಳಾಗಿದ್ದವು ಎಂಬುದು ವಿದಿತವಾಗುತ್ತದೆ. ಕೂದಲು ಕತ್ತರಿಸಲು ಒಂದು ಕತ್ತರಿ, ಬೋಳಿಸಲು ಒಂದು ಕತ್ತಿ, ಕತ್ತಿ ಮಸೆಯಲು ಮಸೆಯುವ ಕಲ್ಲು, ಉಗುರು ತೆಗೆಯಲು ಚಣ, ಕತ್ತಿಯನ್ನು ಉಜ್ಜುವ ಚರ್ಮದ ಪಟ್ಟ, ಮೂಗಿನೊಳಗಿನ ಕೂದಲು ತೆಗೆಯುವ ಚಿಮ್ಮಟ, ಕೂದಲು ಬಾಚಲು ಬಾಚಣಿಗೆ, ದಾಡಿಗೆ ಹಚ್ಚುವ ಸಾಬೂನುವಡಿ, ಮುಖ ಕನ್ನಡಿ, ಕೊಬ್ಬರಿ ಎಣ್ಣೆಯ ಬಟ್ಟಲು, ನೀರಿನ ಬಟ್ಟಲು–ಇವೆಲ್ಲ ಸಲಕರಣೆಗಳನ್ನು ಹಾಕಿಟ್ಟುಕೊಳ್ಳಲು ಒಂದು ಹಡಪ ಅಥವಾ ಹಸಿಬಿ. ಇದು ದಪ್ಪ ಅರಿವೆಯಿಂದ ತಯಾರಿಸಿದ, ಅರಿವೆಯ ಎರಡೂ ತುದಿಗೆ ಜೇಬುಗಳುಳ್ಳ ಹೆಗಲಿಗೆ ಹಾಕಿಕೊಳ್ಳಲು ಅನುಕೂಲವಾದ ಚೀಲ. ಇದು ಕಟ್ಟಿಗೆಯ ಪೆಟ್ಟಿಗೆಯೂ ಆಗಿರಬಹುದು. ಈ ಸಾಧನ ಸಲಕರಣೆಗಳಲ್ಲಿ ಇಂದು ಸಾಕಷ್ಟು ಬದಲಾವಣೆಗಳಾದುದನ್ನು ಕಾಣುತ್ತೇವೆ.

ಭಾರತೀಯ ಸಮಾಜ ಕೂಡ ಈ ಕಸುಬನ್ನು ಕೀಳಾಗಿ ಕಂಡಿದೆ. ಅದನ್ನವಲಂಬಿಸಿದಾತ ಸಹ ಕೀಳು ಕಸುಬಿನವನಾಗಿ ಸಮಾಜದ ಕಣ್ಣಲ್ಲಿ ಕೀಳಾಗಿ ಕಂಡಿದ್ದಾನೆ. ಇತಿಹಾಸದುದ್ದಕ್ಕೂ ಅಲ್ಲಲ್ಲಿ ಈ ರೀತಿಯ ಕೀಳುದೃಷ್ಟಿಯ ನಿದರ್ಶನಗಳು ಕಾಣುತ್ತವೆ. ಕ್ರಿಪೂ. ಕಾಲದ ನಂದವಂಶ ಸಂಸ್ಥಾಪಕನನ್ನು ವೇಶ್ಯೆಯಲ್ಲಿ ಹುಟ್ಟಿದ ನಾಪಿತನ ಮಗ ಎಂದು ಜೈನ ಪರಿಶಿಷ್ಟಪರ್ವನ್ ಕೃತಿಯೂ 'ನಾಪಿತದಾಸ' ಎಂದು ಅವಶ್ಯಕ ಸೂತ್ರವೂ ಆತ ಹೀನಕುಲದವ ಎಂಬ ಭಾವ ಪ್ರಕಟಿಸುತ್ತಾ ಉಲ್ಲೇಖಿಸಿದೆ.[೩೭] ಕೌಂಡಿನ್ಯನೆಂಬ ಋಷಿ ಮೂರು ಭೂವನವರಿಯೆ ನಾವಿದ ಕಾಣಿಂ ಭೋ ಎಂಬ ಬಸವಣ್ಣನವರ ವಚನೋಕ್ತಿ ಅಂದಿನ ಸಮಾಜ ನಾವಿದನಂತೆ ನಾವಿದ ಪತ್ನಿಗೂ ಸಮಾಜದ ಈ ಓರೆದೃಷ್ಟಿ ಅಂಟದೆ ಇರಲಿಲ್ಲ. ಅವರು ದುರಾಚಾರಿಗಳೆಂಬ ಭಾವನೆ ಪ್ರಚಲಿತವಿತ್ತು. "ನರ್ತಕಿಯ ನಾಪಿತೆಯ ಪರ್ಣವಿಕ್ರಯಿಯ ಪ್ರವರ್ತಕಿಯ ದಾಸಿಯ" ಇನಿಬರೊಡನಾಡಿದೊಡೆ ಬಾಲೆಯರ್ತವೆ ದುರಾಚಾರಮಂ ಕಲಿವರು"[೩೮] ಎಂದು ಜೈಮಿನಿ ಭಾರತದಲ್ಲಿ ಲಕ್ಷ್ಮೀಶ ಒಂದೆಡೆ ನುಡಿದಿದ್ದಾನೆ.

ಊರಿಗೊಬ್ಬ ಕ್ಷೌರಿಕನಿರಬೇಕು ಎಂಬ ರೂಢಿಮಾತು ಬಹುಶಃ ನಾವಿದ ಕುಟುಂಬಗಳೂ ಹೆಚ್ಚು ಸಂಖ್ಯೆಯಲ್ಲಿ ಒಂದೆಡೆ ಇರದೆ ಚದುರಿ ಹೋಗಿದ್ದವೆಂಬ ಸೂಚನೆ ನೀಡುವಂತಿದೆ. ಒಂದು ಕುಟುಂಬ ಮಾತ್ರ ಒಂದು ಗ್ರಾಮದಲ್ಲಿರುತ್ತೇನೊ ಎಂಬತೆ ದೊಡ್ಡ ಊರಲ್ಲಿ ಹೆಚ್ಚು ಕುಟುಂಬಗಳಿದ್ದಿರಬೇಕು ನಾವಿಂದರದು ಉತ್ಪಾದಕ ಕಸುಬಲ್ಲ ಅದರಿಂದ ಆರ್ಥಿಕ ಉತ್ಪನ್ನವಾದರೂ

ಹೆಚ್ಚಾಗಿರುವ ಸಾಧ್ಯತೆ ಇಲ್ಲ. ಲಭ್ಯ ದಾಖಲೆಗಳನ್ನು ಪರಿಶೀಲಿಸಿದಾಗ ನಾವಿಂದ ಕಸುಬಿನವರು ಗಮನೀಯ ಪ್ರಮಾದಲ್ಲಿ ಸಮಾಜದಲ್ಲಿ ಪ್ರತಿಷ್ಠೆಯ ಸ್ಥಾನಗಿಟ್ಟಿಸಬಹುದಾದ ಕತ್ತಿಗಳನ್ನು ಮಾಡಿದ್ದು ತೀರ ಅಪರೂಪ. ನಾವಿಂದರು ವಿಜಯನಗರ ಪೂರ್ವದಲ್ಲಿ ಇದ್ದರು ಎಂಬುದಕ್ಕೆ ಅನೇಕ ಶಾಸನೋಕ್ತ ದಾಖಲೆಗಳಿವೆ. ಇವರು ಸಹ ದಾನ ಕೊಟ್ಟ ನಿದರ್ಶನಗಳಿವೆ.

ಕ್ರಿ.ಶ. ೧೦೫೭-೧೦೮೭ರ ಕುರ್ತುಕೋಟಿ ಶಾಸನದಲ್ಲಿ ದಾಸ ಎಂಬ ನಾವಿಂದ ದಾಸೇಶ್ವರ ದೇವಾಲಯವನ್ನು ಕಟ್ಟಿಸಿ ದಾನ ನೀಡಿದ ಉಲ್ಲೇಖವಿದೆ.[೨೯] ಈ ಶಾಸನದಲ್ಲಿ ಇತರ ದಾನಿಗಳ ಉಲ್ಲೇಖವಿದ್ದರು ಕೂಡಾ ಅವರಾರು ನಾವಿಂದ ಕಸುಬಿನವರಲ್ಲ. ಅಂತಾಗಿ ಈ ಶಾಸನ ಕುರ್ತುಕೋಟಿಯಲ್ಲಿ ಒಂದೇ ನಾವಿಂದ ಕುಟುಂಬ ಇದ್ದಿತ್ತೆಂಬ ಸೂಚನೆ ನೀಡುತ್ತದೆ. ನಾವಿಂದರೈನೂವರ ಶ್ರೇಣಿಯೊಂದು ಇದ್ದಿರಬಹುದಾದ ಅಸ್ಪಷ್ಟ ಸೂಚನೆ ಕೂಡ ಇಲ್ಲಿದೆ. ಕ್ರಿ.ಶ. ೧೨೭೬ರಲ್ಲಿ ನಾವಿಂದ ಚಟ್ಟೋಜನ ಮಗ ಸೋವೋಜ ದೇವರ ನಿತ್ಯಾಭಿಷೇಕಕ್ಕೆಂದು ಅಕ್ಷಯ ಭಂಡಾರವಾಗಿ ೧ ಗದ್ಯಾಣವನ್ನಿತ್ತ.[೩೦] ನಾವಿಂದರ ಗೋಸಾಸಿ ಸತ್ತು ಸುರಲೋಕಕ್ಕೆ ಹೋದುದನ್ನು ತಿಳಿಸುವ ಕ್ರಿ.ಶ. ೧೦೦೭ರ ವೀರಗಲ್ಲು ಶಾಸನ[೩೧] ಇತರ ಓಜರಂತೆ ಇವರು ಕೂಡ ಪ್ರಸಂಗ ಬಂದಾಗ ಕಾದಾಡಿ ವೀರಮರಣವನ್ನಪ್ಪುತ್ತಿದ್ದರು ಎಂಬುದಕ್ಕೆ ದಾಖಲೆಯಾಗಿದೆ. ಬ್ರಾಹ್ಮಣರ ಉಗುರುಗಳನ್ನು ತೆಗೆಯಲು ಅಗ್ರಹಾರಗಳಲ್ಲಿ ನಾವಿಂದರನ್ನು ನೇಮಿಸಿಕೊಳ್ಳುತ್ತಿದ್ದರೆಂದು ಕ್ರಿ.ಶ. ೧೧೫೮ರ ಶಾಸನವೊಂದು ತಿಳಿಸುತ್ತದೆ. ಸೋಮವಾರದಲು ೩೦ ಮನುಷ್ಯ ಬ್ರಾಹ್ಮಣರಗುರು ಕಳವ ನಾವಿಂದನ ಜೀವಿತಂ ಗದ್ಯಾಣ ೫.[೩೨] ಅವರ ಜೀವಿತಕ್ಕಾಗಿ ನಿರ್ದಿಷ್ಟ ಹಣ ಇಲ್ಲವೆ ಭೂಮಿಯನ್ನು ಮೀಸಲಾಗಿರಿಸಲಾಗುತ್ತಿತ್ತು.

ನಾವಿಂದ ಕಸುಬು ಒಂದು ಕಲೆಯೇ ಸೈ. ಆದ್ದರಿಂದ ಉಪಾದ್ಯಾಯ ಪದದಿಂದ ನಿಷ್ಪತ್ತಿಯಾಗಿರುವ ಓಜ ಪದ ಆ ಕಸುಬಿನವರ ಹೆಸರುಗಳಿಗೆ ಸೇರ್ಪಟ್ಟಿರುವುದು ಯಥಾಯೋಗ್ಯವೆ. ಕೂದಲು, ಮೀಸೆ, ಗಡ್ಡಗಳನ್ನು ಆಕರ್ಷಿಕವಾಗಿ ರೂಪುಗೊಳಿಸಿ ವ್ಯಕ್ತಿಯ ವ್ಯಕ್ತಿತ್ವಕ್ಕೆ ಮೆರಗು ಕೊಡುವುದು ಕಲೆಯಲ್ಲದೆ ಮತ್ತಿನ್ನೇನು? ಸಮಾಜದಲ್ಲಿ ಅವರವರ ಸ್ಥಾನ ಮಾನ ಅಧಿಕಾರ ಯೋಗ್ಯತೆಗಳಿಗೆ ತಕ್ಕಂತೆ ಕೇಶ, ಮೀಸೆ, ಗಡ್ಡಗಳನ್ನು ತೀಡಬಲ್ಲ ಕಲಾವಿದ ಈ ನಾವಿಂದ. ರೂವಾರಿ ನಿರ್ಜೀವ ಕಲ್ಲನ್ನು ಕಟೆದು ಸುಂದರ ರೂಪು ನೀಡಬಲ್ಲವನಾದರೆ, ನಾವಿಂದ ಜೀವಂತ ವ್ಯಕ್ತಿಯ ರೂಪವನ್ನು ಕೇಶಕರ್ತನದ ಮೂಲಕ ತೀಡಬಲ್ಲ ಕೇಶಶಿಲ್ಪಿ.

ರೂವಾರಿಗಳ ಕಲಾಚಾತುರ್ಯವನ್ನು ಗುರುತಿಸಿ ಸನ್ಮಾನಿಸಿದ ಸಂದರ್ಭ ವಾತಾಪಿಯ ಚಾಲುಕ್ಯರ ಕೊನೆಗಾಲದಲ್ಲಿ ಮೂಡಿತ್ತು. ಪಟ್ಟದಕಲ್ಲಿನ ಲೋಕೇಶ್ವರ(ವಿರೂಪಾಕ್ಷ) ದೇಗುಲ ಮಾಡಿದ ಸೂತ್ರಧಾರಿ ಗುಂಡ ಅನಿವಾರಿತಾಚಾರಿ ಮತ್ತು ಸರ್ವಸಿದ್ಧಿ ಆಚಾರಿಗಳು ಇಮ್ಮಡಿ ವಿಕ್ರಮಾದಿತ್ಯನಿಂದ ಗೌರವ-ಸನ್ಮಾಮಾನಗಳನ್ನು ಗಿಟ್ಟಿಸಿ ತಮ್ಮ ಬಳ್ಳಿವರ್ತೆಯನ್ನು ಮನ್ನಾ ಮಾಡಿಸಿಕೊಂಡಿದ್ದ ಸಂಗತಿ ಸರ್ವವಿದಿತ. ಕ್ರಿ.ಶ. ೮ನೆಯ ಶತಮಾನದಲ್ಲಿ ಅದಾವುದೋ ಕಾರಣಕ್ಕಾಗಿ ಬಾದಾಮಿಯ ಸಮ್ಮಗಾರರ ಕವರ್ತೆಯನ್ನು ಮನ್ನಾ ಮಾಡಲಾಯಿತೆಂಬುದು ಅಲ್ಲಿಯ ಜಂಬುಲಿಂಗ ದೇವಾಲಯದ ಸ್ಥಂಭಶಾಸನದಿಂದ ತಿಳಿಯುತ್ತದೆ. ನಾವಿಂದ

ಕಸುಬಿನಲ್ಲಿದ್ದವರೂ ತೆರಿಗೆಯಿಂದ ಮುಕ್ತರಾಗಿರಲಿಲ್ಲ. ನಾವಿದದೆರೆ ಎಂಬ ಕಸುಬು ತೆರಿಗೆ ಶಾಸನಗಳಲ್ಲಿ ಹಲವು ಬಾರಿ ಉಲ್ಲೇಖಿತವಾಗಿದೆ. ಇದಲ್ಲದೆ ಇನ್ನೂ ಹಲವು ತೆರಿಗೆಗಳನ್ನು ಅವರು ತೆರಬೇಕಿತ್ತು.

ವಿಜಯನಗರ ಕಾಲದಲ್ಲಿ ರಾಜ್ಯದ ವಿವಿಧ ಸ್ಥಳಗಳಲ್ಲಿ ದೊರೆತಿರುವ ಶಾಸನಗಳು ನಾವಿದ ಕಸುಬುದಾರರಿಗೆ ರಾಜಮನ್ನಣೆ ನೀಡಿದ ಬಗ್ಗೆ ತಿಳಿಸುತ್ತವೆ. ಇಂಥ ಕನಿಷ್ಠ ೩೨ ಶಾಸನಗಳು ಕರ್ನಾಟಕ ಮತ್ತು ಆಂಧ್ರದ ವಿವಿಧ ಭಾಗಗಳಲ್ಲಿ ಈವರೆಗೆ ಗಮನಿಸಲ್ಪಟ್ಟಿವೆ. ಉತ್ತರದಲ್ಲಿ ರಾಯಚೂರು, ವಿಜಾಪುರ ಜಿಲ್ಲೆಯಿಂದ ಹಿಡಿದು ದಕ್ಷಿಣದಲ್ಲಿ ಮೈಸೂರಿನ ಸಮೀಪದವರೆಗೂ, ಪಶ್ಚಿಮದಲ್ಲಿ ಚಿಕ್ಕಮಗಳೂರು ಜಿಲ್ಲೆಯಿಂದ ಹಿಡಿದು ಪೂರ್ವದಲ್ಲಿ ಬಳ್ಳಾರಿ, ಚಿತ್ರದುರ್ಗ, ತುಮಕೂರು ಜಿಲ್ಲೆಗಳವರೆಗೂ ಇವು ಹರಡಿಕೊಂಡಿವೆ. ಲಕ್ಕಂಣ ವೊಡೆಯರು ಆಳುತ್ತಿದ್ದ ಮುಳಬಾಗಿಲು ರಾಜ್ಯದ ತೇಕಲನಾಡಿನ ಜುಂಜರುಗಣಂಗಳಿಗೆ ಸಲ್ಲುವ ಮರಗಳಲು(ಈಗಿನ ಮರಗಲ್ಲು) ಗ್ರಾಮದ ನಾವಿಂದ ಇತರ ಕಸುಬಿನವರಿಗೆ ಕೆಲವು ತೆರಿಗೆಯನ್ನು ಮಾನ್ಯವಾಗಿ ಬಿಡಲಾಗಿದೆ.[೩೩೩] ಕ್ರಿ.ಶ. ೧೫೨೧ರಲ್ಲಿ ಕೃಷ್ಣದೇವರಾಯನು ರಾಜ್ಯವಾಳುವಾಗ ಸಿರಿಯೂರು, ಗೋಣಿಯಪುರ, ಮಾರೊಡಮೊಲ, ಪಿಚ್ಚನಹಳ್ಳಿ, ಸಂಪಗೆಯಪುರ, ಸೊಡಲೀಪುರ, ಸೇವೆಯಪುರ, ಗಳಗೆಯಪುರ, ಹರದೇಪುರ, ಕಂಮಾರನಪುರ, ಜಯೀದಾನಪುರ, ಮೋಟಗೋಡನಹಳ್ಳಿ, ಅಪಣನಪುರ, ಬದನೇಪುರ, ಗಂಗೋಪುರ, ಕಂಪಾನಿಧಿ–ಈ ಹದಿನಾರು ಗ್ರಾಮಗಳು, ಮಹಾಜನಗಳು ಕ್ರಮವಾಗಿ ನೀಡಿದ. ಮಾಧವ ಪಟ್ಟಣದ ಹಣ, ಕೊಂಗಿನ ಸೇವೆಯಿಂದ ಬರುವ ಸ್ಥಳಸುಂಕ ನಾವಿಂದನವರಿಗೆ ಹಾಗೂ ಇತರೆ ಕಸುಬುಗಳಾದ ಅಗಸ, ಮಾದಾರಿಕೆ, ಮಗ್ಗ, ಗಾಣಿಗ, ಕುರಿದೆರೆ ಮುಂತಾದ ತೆರಿಗೆಗಳಿಂದ ಬರುವ ಹಣವನ್ನು ಪ್ರಯಂಬಕಲಿಂಗ ದೇವರಿಗಾಗಿ ದಾನ ನೀಡಿದೆ.[೩೩೪] ಅದೇ ರೀತಿ ಕ್ರಿ.ಶ. ೧೫೨೧ ಕೃಷ್ಣದೇವರಾಯನ ಕಾಲದಲ್ಲಿ ಇವನಿಗೆ ಪುಣ್ಯವಾಗಬೇಕು, ಸೇನೆ ಸಮೃದ್ಧ ಆಗಬೇಕು, ದಿಗ್ವಿಜಯವಾಗಬೇಕು ಎಂದು ರಾಚಿರಾಜಗಳ ಮಗನಾದ ಸಾಳುವ ಗೋವಿಂದರಾಜನ ನಾವಿಂದರ ತೆರಿಗೆಯನ್ನು ಬಿಟ್ಟ[೩೩೫] ಉಲ್ಲೇಖವಿದೆ.

ಕ್ರಿ.ಶ. ೧೫೫೦ ಜೂನ್ ೪ನೆಯ ರಾಣಿಬೆನ್ನೂರು ಹಾಗೂ ಹಿರೆಕೆರೂರು ಶಾಸನಗಳು ನಾವಿಂದರ ಮೇಲಿನ ತೆರಿಗೆಗಳನ್ನು ಮನ್ನಾ ಮಾಡುವ ಪ್ರಸಂಗವೊದಗಿದ್ದರ ಮೇಲೆ ತುಸು ಬೆಳಕು ಚೆಲ್ಲುತ್ತವೆ. ಮಹಾಮಂಡಳೇಶ್ವರ ರಾಮರಾಚೇಂದ್ರ ಮಹಾ ಅರಸುಗಳು ಗಡ್ಡದ ಕೆಲಸಿಗಳು ತಿಂಮೋಜ, ಕೊಂಡೋಜ, ಭದ್ರೋಜ ಎಂಬ ಮೂವರ ಕೆಲಸಕ್ಕೆ ಮೆಚ್ಚಿ ಮನ್ನಿಸಲಾಗಿ ದೇವರ ಸದಾಶಿವರಾಯರು ಆಳುವಂಥಾ ರಾಜ್ಯದೊಳಗಣ ಗಡ್ಡದ ಕೆಲಸಗಳಿಗೆ ತೆರಿಗೆ ಸಿದ್ಧಾಯ ಮಸಿವಣ ಕಾರಣಿಕೆ ಕಡ್ಡಾಯ ಮದುವೆಯ ಸುಂಕ ಮಹಾನವಮಿಯಲು ಆಕಾಲ ಚಕ್ರ ಮುಂತಾಗಿ ತೆರುವಂಥಾ ತೆರುವ ಪಾಲಿಸಬೇಕು ಎಂದು ಬಿನ್ನಹಂ ಮಾಡಲಾಗಿ ತೆರುವಂಥಾದ್ದು ಎಲ್ಲವನು ಪಾಲಿಗೆ ಸರ್ವಮಾನ್ಯವ ಮಾಡಿದರು[೩೩೬] ಎಂಬುದು ರಾಣಿಬೆನ್ನೂರು ಶಾಸನದ ಹೇಳಿದೆ. ಇದರಿಂದ ತಿಮ್ಮೋಜ, ಕೊಂಡೋಜ ಮತ್ತು ಭದ್ರೋಜರು ರಾಮರಾಜನ ಅವನ ಪರಿವಾರದವರ ಖಾಸ ಕ್ಷೌರಿಕರಾಗಿದ್ದಿರಬೇಕು ಎಂಬುದು ಸೂಚಿತವಾಗುತ್ತದೆ. ಇವರ

ನಾವಿಂದ ಕಲಾಚಾತುರ್ಯಕ್ಕೆ ಮೆಚ್ಚಿಯೇ ನಾವಿಂದ ಕಸುಬಿನವರ ಮೇಲಿನ ತೆರಿಗೆಗಳನ್ನು ಮನ್ನಾ ಮಾಡಲಾಯಿತೆಂದು ಇದರಿಂದ ಸ್ಪಷ್ಟವಾಗುತ್ತದೆ. ಅಂದರೆ ಅಂದ ಅರಸರ, ಮಾಂಡಲಿಕ, ಶ್ರೀಮಂತ ವರ್ಗದವರು ಪ್ರತ್ಯೇಕವಾಗಿ ಕ್ಷೌರಿಕರನ್ನು ನೇಮಿಸಿಕೊಳ್ಳುವ ಪರಿಪಾಠವಿದ್ದಿರಬೇಕು.

ಕ್ರಿ.ಶ. ೧೫೪೪ರ ಎಪ್ರಿಲ್ ೨ರಂದು ಹೊರಡಿಸಲ್ಪಟ್ಟ ಸೊಂಡೂರಿನ ಶಾಸನ[೩೩೭] ತಿಮ್ಮೋಜ ಮತ್ತು ಕೊಂಡೋಜ ಎಂಬ ನಾವಿಂದರ ನೇತೃತ್ವದಲ್ಲಿ ನಾವಿಂದ ಸಮುದಾಯ ಮಾಡಿದ ಬಿನ್ನಹದ ಮೇರೆಗೆ ಸಂಡೂರು ಸೀಮೆಯ ನಾವಿಂದರ ಮೇಲಿನ ಸಿದ್ಧಾಯ ಹಾಗೂ ಕಾಣಿಕೆ ತೆರಿಗೆಗಳನ್ನು ರಾಮರಾಜ ಮಹಾಅರಸರುಗಳು ಸದಾಶಿವರಾಯರಲ್ಲಿ ವಿನಂತಿಸಿ ಮನ್ನಾ ಮಾಡಿದ್ದನ್ನು ಇದು ಹೇಳುತ್ತದೆ. ಚೆಂದೇನಹಳ್ಳಿ(ತುಮಕೂರು)[೩೩೮] ಹಾಗೂ ಹಿರಿಯಂಗಳ ಶಾಸನಗಳಲ್ಲಿ[೩೩೯] ನಾವಿಂದರ ಕುರಿತಿದೆ. ನಾವಿಂದರ ತೆರಿಗೆ ಕುರಿತು ಕೆಲವು ಶಾಸನಗಳು ಚುಟುಕಾಗಿ ಇದನ್ನು ನಿರೂಪಿಸುತ್ತವಾದರೆ, ಇನ್ನೂ ಕೆಲವು ವಿಸ್ತೃತವಾದ ತೆರಿಗೆಗಳನ್ನು ಹೆಸರಿಸುತ್ತವೆ. ಸಿದ್ಧಾಯ, ಕಾಣಿಕೆ ತೆರಿಗೆಗಳನ್ನು ಸಂಡೂರು ಶಾಸನ ಕುಲದೆರೆ ಸುಂಕುಗಳನ್ನು ಚಂದೇನಹಳ್ಳಿ ಶಾಸನ, ಕಾಣಿಕೆ, ಕಡ್ಡಾಯ, ಬಿಟ್ಟಿ, ಬಿರಾಡ, ಕೊಟ್ಟಣಗಳನ್ನು ಬಾಗಲಿ ಶಾಸನ, ನಾವಿಂದರ, ತೆರಿಗೆ, ಅನೀಕ(ಕಾಣಿಕ) ಆಕಾಲ ಚಕ್ರ, ಬಿಟ್ಟ ಬಿರಾಡಗಳನ್ನು ಅಮ್ಮಿನಭಾವಿ ಶಾಸನ, ಸಿದ್ಧಾಯ, ಬಿರಾಡ, ಕಾಣಿಕ, ಕಡ್ಡಾಯ ಮದುವೆ ಸುಂಕಗಳನ್ನು ಗುತ್ತಲ ಶಾಸನ, ಅನ್ನು-ಪನ್ನು(?) ಬಿಟ್ಟ, ಕಡ್ಡಾಯಗಳನ್ನು ಮಸ್ಕಿಶಾಸನ, ಮನೆದೆರೆಗೆಯನ್ನು ದೇವರಹಬ್ಬಳ್ಳ ಶಾಸನ, ಕಂದಾಯ, ಬಿಟ್ಟ ಕೊಟ್ಟಣಗಳನ್ನು ಕೊಟ್ಟೂರು ಶಾಸನ, ಬಿರಾಡ ಬಿಟ್ಟ, ದೇವಿಪೊನ್ನು, ಡೊಂಬದೆರಿಗೆಗಳನ್ನು ಕರಡಿ ಶಾಸನಗಳು ಉಲ್ಲೇಖಿಸಿವೆ. ಇವುಗಳಲ್ಲಿ ಕೆಲವೆಡೆ ಮಹಾನವಮಿಯ ಆಕಾಲ ಚಕ್ರ ಎಂದು ಉಲ್ಲೇಖಿತ ತೆರಿಗೆ ದೇವಿಪೊನ್ನಿಗೆ ಸಮಾನವಾದುದೆಂದು ತೋರುತ್ತದೆ.[೩೪೦] ಮಾನ್ಯ ಪಡೆಯುವ ಮುನ್ನ ನಾವಿಂದ ಕಸುಬಿನವರು ಮೇಲಿನ ವಿವಿಧ ತೆರಿಗೆಗಳ ಹೊರೆ ಎಷ್ಟಿತ್ತೆಂಬುದರ ಪರಿಕಲ್ಪನೆಯನ್ನು ಈ ಉಲ್ಲೇಖಗಳು ನೀಡುತ್ತವೆ.

ಈ ಮೇಲಿನ ಎಲ್ಲಾ ದಾಖಲೆಗಳಿಂದ ವಿಜಯನಗರ ಕಾಲದಲ್ಲಿ ನಾವಿಂದರ ಕಸುಬು ಪ್ರಮುಖವಾಗಿತ್ತು. ನಾವಿಂದರು ಕೇವಲ ಕ್ಷೌರ ಮಾಡುವುದಷ್ಟೆ ಅಲ್ಲ ಸೇನೆಯಲ್ಲಿ ಸೈನಿಕರಾಗಿ, ವೀರರಾಗಿ, ಕಾರ್ಯನಿರ್ವಹಿಸುತ್ತಿದ್ದರು. ದೇವಸ್ಥಾನವನ್ನು ನಿರ್ಮಿಸುವ ಶ್ರೀಮಂತರಾಗಿದ್ದರು. ಇವರು ಸಮಾಜದಲ್ಲಿ ಕೆಳವರ್ಗದಲ್ಲಿದ್ದರು ಅರಸ, ಮಾಂಡಲಿಕ, ಶ್ರೀಮಂತರು, ಜನಸಾಮಾನ್ಯರು ಇವರ ಕಾರ್ಯವನ್ನು ಪಡೆಯುವುದು ಅನಿವಾರ್ಯವಾಗಿತ್ತು. ಈ ರೀತಿ ನಾವಿಂದರ ಕಸುಬು ಅಂದು ಎಷ್ಟು ಪ್ರಮುಖವಾಗಿತ್ತು ಎಂಬುದು ತಿಳಿಯುತ್ತದೆ.

೧೧ ಅಗಸರು

ಮಲಿನವಾದ ಬಟ್ಟೆಗಳನ್ನು ಶುಭ್ರಗೊಳಿಸುವ ಕಸುಬು ಅಗಸನದು. ಈತನನ್ನು ಅಗಸ, ಮಡಿವಾಳ, ರಜಕ, ಎಂದೂ ಕರೆಯುವರು. ಮಹಾರಾಷ್ಟ್ರದ ಕಡೆ ಕೋಳಿ ಎಂದು ಕರೆಯುವುದು ರೂಢಿ. ಅಗಸನು ಅರಸ, ರಾಣಿ, ಮಾಂಡಲಿಕ, ಶ್ರೀಮಂತವರ್ಗದವರ ಮಾಸಲು ಮತ್ತು ಮೈಲಿಗೆಯ ಬಟ್ಟೆಗಳನ್ನು ಮಡಿ ಮಾಡುತ್ತಾನೆ. ಬಾಣಂತನ, ಕನ್ಯೆ ಋತುಮತಿಯಾದ ಸಂದರ್ಭದಲ್ಲಿ

ಮೈಲಿಗೆ ಬಟ್ಟೆ, ಹಬ್ಬ-ಹರಿದಿನಗಳಲ್ಲಿ ಊರ ಒಕ್ಕಲಿಗರ ಮನೆಯ ಬಟ್ಟೆಗಳನ್ನು ಒಗೆಯುವುದು, ವಿವಾಹ ಸಂದರ್ಭಗಳಲ್ಲಿ, ಗುಗ್ಗಳ ತರುವಾಗ, ಪುರವಂತರು ಮತ್ತು ಮದುಮಕ್ಕಳು ನಡೆದುಬರಲು 'ಹಡದಿ' (ನಡೆಮಡಿ) ಹಾಸುವುದು, ದೇವರಿಗೆ ದೀಡ ನಮಸ್ಕಾರ ಹಾಕುವಾಗ ಹಾಗೂ ಊರದೇವರಿಗೆ ಎಡೆ ಮಾಡಿದಾಗ ನಡೆಮಡಿ ಹಾಸುವುದು ಇವರ ಕಾಯಕ ಗ್ರಾಮಗಳಲ್ಲಿ ಯಾರಾದರೂ ಮರಣ ಹೊಂದಿದಾಗ ಮೈಲಿಗೆ ಬಟ್ಟೆ, ದಿನಂಪ್ರತಿ ಉಡುವ ಬಟ್ಟೆಗಳನ್ನು ಸ್ವಚ್ಚಗೊಳಿಸುವುದು ಅಗಸನ ಪರಂಪರೆಯ ಕಾರ್ಯಗಳು.

ವಿಜಯನಗರ ಕಾಲದಲ್ಲಿ ಈ ಕಸುಬು ಪ್ರಮುಖವಾಗಿ ಕಂಡುಬರುತ್ತದೆ. ವಿಜಯನಗರದ ರಾಜಧಾನಿ ಹಂಪಿಯಲ್ಲಿನ ದೇವಸ್ಥಾನಗಳನ್ನು ಗಮನಿಸಿದರೆ ದೇವರ ಬಟ್ಟೆಗಳ ಹಾಗೂ ದೇವರಿಗೆ ಸಂಬಂಧಿಸಿದ ಕಾರ್ಯಗಳಿಗೆ ಉಪಯೋಗಿಸುವ ಬಟ್ಟೆಗಳನ್ನು ಈ ಅಗಸರೆ ಮಾಡುತ್ತಿದ್ದರು. ಇವರಿಗೆ ತೆರಿಗೆ ಹಾಕಲಾಗುತ್ತಿತ್ತು ಎಂಬುದಕ್ಕೆ ಶಾಸನೋಕ್ತ ದಾಖಲೆಗಳಿವೆ.

ಕೃಷ್ಣದೇವ ಮಹಾರಾಯನ ಆಳ್ವಿಕೆಯ ಕಾಲದಲ್ಲಿ ತೆರಕಣಾಂಬಿ ಸೀಮೆಯನ್ನು ಸಾಳುವ ಗೋವಿಂದರಾಜನು ಆಳುತ್ತಿದ್ದ ತ್ರಿಯಂಬಕದೇವರ ಸೇವೆಗಾಗಿ ಗ್ರಾಮಗಳನ್ನು ಮತ್ತು ವಿವಿಧ ಕಸುಬುಗಳ ತೆರಿಗೆಗಳನ್ನು ದಾನವಾಗಿ ನೀಡಿದ ಅಂತಹ ಸಂದರ್ಭದಲ್ಲಿ ಅಗಸರ ತೆರಿಗೆಯನ್ನು ಕೃಷ್ಣದೇವರಾಯನಿಗೆ ಪುಣ್ಯವಾಗಲೆಂದು ಅವನ ನಿರೂಪದಿಂದಲೇ ಧಾರೆಯನ್ನೆರೆದು ಕೊಡಲಾಗಿದೆ.[೩೪೧] ಕ್ರಿ.ಶ. ೧೫೨೧ರಲ್ಲಿ ಕೃಷ್ಣದೇವರಾಯನು ರಾಜ್ಯವಾಳುತ್ತಿದ್ದಾಗ ಇವನಿಗೆ ಪುಣ್ಯವಾಗಬೇಕು, ಸೇನೆ ಸಮೃದ್ಧವಾಗಬೇಕು, ದಿಗ್ವಿಜಯವಾಗಬೇಕೆಂದು ಕೆಲವು ಗ್ರಾಮಗಳ ಕಸುಬುಗಳ ತೆರಿಗೆಯನ್ನು ದಾನವಾಗಿ ನೀಡಿದ್ದಾನೆ. ಅವರಲ್ಲಿ ನಾಯಿಂದ, ಕುಂಬಾರ, ಅಗಸರ ತೆರಿಗೆ ಗಾಣಸುಂಕ. ಮಗ್ಗಸುಂಕಗಳ[೩೪೨] ಉಲ್ಲೇಖವಿದೆ. ಹಾಗೆಯೇ ತ್ರೈಲದೇವನ ಮಡಿವಾಳ ಹಾಗೂ ತ್ರಿಪುರಾಂತಕ ದೇವರ ಮಡಿವಾಳನಾಥ ಮಾಕೆಯ್ಯನಿಗೆ ಭೂಧಾನವನ್ನು[೩೪೩] ನೀಡಿದಂತೆ ಉಲ್ಲೇಖಿಸಿದೆ. ಸೇನಬೋವ ಮದೆಯ್ಯ ಬೋರಯನಾಯಕನ ಮಗನಿಗೆ ಅಗಸರುಬರುಹ.[೩೪೪] ಹೀಗೆ ವಿಜಯನಗರ ಪೂರ್ವದಲ್ಲಿ ಅಗಸರ ಕಸುಬಿನ ಕುರಿತು ಉಲ್ಲೇಖಗಳಿವೆ.

ಈ ಅಗಸರ ಕುರಿತು ಅನೇಕ ಸಾಹಿತ್ಯ ದಾಖಲೆಗಳಿವೆ.

ಸನೆಯಸೊಕ್ಕಲಿಗನು ಹಂಸೆವಾಕೆ ಬೆಣ್ಣೆಯನು
ಅಸಗ ಸೀರೆಯನು ಅರವಂತೆ ಸೆಳೆ ತಾ
ಹಸಿವವರ ಬಲ್ಲಳು ಪರಮಾರ್ಥ.[೩೪೫]

ಇಲ್ಲಿ ಅಗಸನು ಸಿರೆಯನು ತೊಳೆಯುತ್ತಿದ್ದ ಎಂಬುದರ ಸೂಚನೆಯಿದೆ.

ಮಡಿಗಲ್ಲು-ಬಟ್ಟೆ ಮಡಿ ಮಾಡಲು ಉಪಯೋಗಿಸುವ ಕಲ್ಲು
ಮಸೆಗಲ್ಲು ಚಂದ್ರನಿಗೆ ಮಡಿಗಲ್ಲು ಸೂರ್ಯನಿಗೆ
ಎಂಬವೊಲು ಶರದಭ್ರಗಳ ಕಂಡುವು
ಸಾಣೆಯಲಿ ಕೃಶನಾದರೂ ಹೊಳಪು ಪಡೆದ ವಿಭು
ಅಧಿಕ ತೇಜದಿ ಸೂರ್ಯ ಬೆಳಗುತಿಹನು.[೩೪೬]
ಅಗಸೊಳಡರ್ದು ಪರೆದಿರ

ವೀಗಟೆ ನಿರ್ವಾಣ ರೇಖೆಗೊಡನೊ ಬಿದಿಯಂ
ಬೀಗವನಿಕೆಯಂತಾದೇ
ವಾಗಮ(ನ)ವ ಚೆಟ್ಟುವಾಗಗೋಚರ ಮತ್ತೀ

(ವ) ಎಂಬಿನಂ ಒಂದು ಹಸ್ತಿನಪುರಮನೆಯ್ದಿ ವಿಶ್ವ ಸೇನ ಮಹಾರಾಜನ ರಾಜಮಂದಿರದೊಳ ಮರೇಂದ್ರ ಸಮೇತಮ ಮರನಿಕಾಯಮಿರೆ ಪರಮ ಪವಿತ್ರ ಪುಲೋಮಪುತ್ರ ಪರಿವಾರದೇವಿ ಸಮನ್ವಿತೆ ಪೋಗಿ ಮಹಾದೇವಿಯ ಪ್ರಸೂತಿಕಾ ನಿಕಾಯಮಂ ಪೊಕ್ಕು ಹಾಗೆ ಬಂದು ಹಸ್ತಿನಾಪುರವನ್ನು ಮುಟ್ಟಿ ವಿಶ್ವಸೇನ ಮಹಾರಾಜನ ಅರಮನೆಯಲ್ಲಿ ದೇವೇಂದ್ರ ಸಹಿತವಾಗಿ ದೇವತೆಗಳು ನೆರೆದರು. ಆಗಪರಮ ಪರಿಶುದ್ಧಳಾದ ಶಚೀದೇವಿಯು ಪರಿವಾರ ದೇವಿಯರೊಡನೆ ಐರಾದೀವಿಯ ಬಾಣಂತಿ ಮನೆಯನ್ನು ಪ್ರವೇಶಿಸಿದಳು.[೩೪೭] ಇಲ್ಲಿ ಅಗಸರು ಅರಮನೆಯ ಬಟ್ಟೆಯನ್ನು ತೊಳೆಯುತ್ತಿದ್ದರು ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ಅವರು ಹೇಗೆ ಬಟ್ಟೆಯನ್ನು ತೊಳೆಯುತ್ತಿದ್ದರು ಎಂಬುದನ್ನು

ಬೀಸಿ ಮುಖರಂಧ್ರದಿಂದ
ವ್ಯಾಸುರಮನುಲುನ್ಮಿ ಬಿಸಿಯ ನೆತ್ತರ್ ಶಿರದಿಂ
ಸೊಸೆ ಮಿದುಳ ತದ್ಧೋಪನಿ
ವಾಸಗ್ರದ ಶಿಲೆಯೊಳಸಗವುಯ್ಲಂ ಪೊಯ್ದಂ.[೩೪೮]

ಇಲ್ಲಿ ಮಡಿವಾಳರು ಬಟ್ಟೆಯನ್ನು ಹೇಗೆ ಬೀಸಿ ಹೊಗೆಯುತ್ತಿದ್ದರು ಎಂದು ತಿಳಿಸಲಾಗಿದೆ.

ದೂಸಿಗರುಗಡಿಯಂ ಪೊ
ಕ್ಕಾಸುರ ಮೊಗೊದರಿ ಪಿಡಿದು ಮಿಂಡುಂ ತಾನುಂ
ಲೇಸಪ್ಪ ವಸ್ತ್ರ ನಿಕರೆಮ
ನೋಸರಿಸದೆ ಸೂರೆಗೊಂಡು ಚಾಗಂಗೆಯ್ದಂ.[೩೪೮ಅ]

ಸೀರೆ ವರ್ತಕರ ಅಂಗಡಿಯನ್ನು ಹೊಕ್ಕು ಭಯಂಕರವಾಗಿ ಕೂಗಿ ಹಿಡಿವ ತಾನು ತನ್ನ ಗುಂಪು ಉತ್ತಮವಾದ ವಸ್ತ್ರಗಳ ರಾಶಿಯನ್ನು ಲಕ್ಷ್ಯ ಮಾಡದೆ. ಸೂರೆಗೊಂಡು ತ್ಯಾಗ ಮಾಡಿದರು. ಹೀಗೆ ಅಗಸರು ಅರಸರಾಧಿಯಾಗಿ ಮಾಂಡಲಿಕರ ಶ್ರೀಮಂತರ, ಬಟ್ಟೆಗಳಲ್ಲನ್ನಲ್ಲದೆ, ದೇವಸ್ಥಾನದ ವಸ್ತ್ರಗಳನ್ನು ಸ್ವಚ್ಛಮಾಡುತ್ತಿದ್ದರು. ಅಗಸನು ತನ್ನ ಕಸುಬನ್ನು ಬೆಳಗಾದ ಕೂಡಲೇ ಆರಂಭಿಸುತ್ತಾನೆ. ತನಗೆ ಸಂಬಂಧಿಸಿದವರ ಮನೆಯ ಬಟ್ಟೆಗಳನ್ನು ಸಂಗ್ರಹಿಸಿಕೊಂಡು ಒಂದೆರಡು ಗಂಟುಕಟ್ಟಿ ಕೆರೆ, ಬಾವಿಗೋ ಒಗೆಯಲು ಹೋಗುತ್ತಾನೆ. ಕತ್ತೆಗಳಿದ್ದರೆ ಅದರ ಮೇಲೆ ಬಟ್ಟೆಗಳನ್ನು ಹೇರುತ್ತಾನೆ. ಬಟ್ಟೆಗಳನ್ನೆಲ್ಲಾ ಒಗೆದು, ಒಣಗಿಸಿ ಪುನಃ ಸೀರೆಯಲ್ಲಿಯೋ, ಧೋತರದಲ್ಲಿಯೋ ಕಟ್ಟಿಕೊಂಡು ಮನೆಮನೆಗೆ ಅಲೆದು ಅವರ ಬಟ್ಟೆಗಳನ್ನು ಮುಟ್ಟಿಸುತ್ತಾನೆ.

ಬಟ್ಟೆಗಳನ್ನು ತೊಳೆದು ಗುರುತಿಸಲು ಕಾಲರಿಗೆ, ಅಂಚಿಗೆ ಕೇರು ಎಣ್ಣೆಯಿಂದ ಚಿಕ್ಕ ಗುರುತು ಹಾಕಿರುತ್ತಾನೆ. ಸ್ತ್ರೀ-ಪುರುಷ ಮಕ್ಕಳ ಹೀಗೆ ಎಲ್ಲರ ಬಟ್ಟೆಗಳನ್ನು ತೊಳೆದು ಕೊಡುವನು. ಇದು ಬಹುಶ್ರಮವುಳ್ಳದ್ದು, ಈ ಕಸುಬನ್ನು ಗೇಲಿ ಮಾಡುವುದು ಗ್ರಾಮೀಣ ಸಾಹಿತ್ಯದಲ್ಲಿ ಕಂಡುಬರುತ್ತದೆ.

ಅಗಸರ ಹುಡುಗನ ಒಲ್ಲೆನಾ ಕಾಣಮ್ಮ
ಕಣಕಾಲು ಮೊಣಕಾಲು ಮೈಲಿಗೆ ಮಾಡತ್ಕಾಂಡು
ತಿಣಿಕಾದ್ತ ಬಟ್ಟೆ ಒಗೆದಾನು!

ಹಾಗೆಯೇ ಅವನ ಕಸುಬಿನ ಕುರಿತಂತೆ ಕೆಲವು ಗಾದೆ ಮಾತುಗಳೂ ಇವೆ. ಸಾಮಾನ್ಯವಾಗಿ ಅಗಸರು ಶುಚಿಗೊಳಿಸಲು ಕೊಟ್ಟ ಬಟ್ಟೆಗಳಲ್ಲಿ ತಮಗೆ ಒಪ್ಪುವ ಹೊಂದುವ ಬಟ್ಟೆಗಳನ್ನು ಉಟ್ಟುಕೊಳ್ಳುವುದುಂಟು. ಈ ಸಂದರ್ಭವನ್ನು 'ಅಗಸನ ಬಡಿವಾರ ಮಂದಿ ಅರಿವೆ ಮೇಲೆ' ಎಂಬಗಾದೆ ಸಮರ್ಥಿಸಿದರೆ, ಹೊಸದರಲ್ಲಿ ಅಗಸ ಗೋಣಿಯನ್ನು ಎತ್ತಿ ಎತ್ತಿ ಒಗೆದನಂತೆ ಎಂಬುದು ಅವನ ಅನುಭವವನ್ನು ಹೇಳುತ್ತದೆ. ಅಗಸನ ಸಿಟ್ಟು ಅನ್ಯರ ಬಟ್ಟೆಯ ಮೇಲೆ ಎಂಬುದು ಅವನ ಅಸಹಾಯಕತೆಯನ್ನು ನಿರೂಪಿಸುತ್ತದೆ.

ಅಗಸರು ಬಟ್ಟೆಗಳನ್ನು ಯಾವ ರೀತಿಯಲ್ಲಿ ಶುಭ್ರಗೊಳಿಸುತ್ತಾರೆ ಅಂದರೆ ಸಾಬೂನು-ಸೋಡಾ ಬರುವ ಪೂರ್ವದಲ್ಲಿ ಬಟ್ಟೆಯನ್ನು ಶುಭ್ರಗೊಳಿಸಲು ಅಗಸರು ಅಂಟವಾಳದ ಕಾಯಿಯನ್ನು ಉಪಯೋಗಿಸುತ್ತಿದ್ದರು. ಅಂಟುವಾಳದ ಒಣಗಿದ ಕಾಯಿಗಳನ್ನು ಜಜ್ಜಿ ನೀರಿರುವ ಪಾತ್ರೆಯಲ್ಲಿ ಹಾಕಿ ಕಲಕುತ್ತಾರೆ. ಆಗ ನೊರೆವುಂಟಾಗುತ್ತದೆ. ಅದರಲ್ಲಿ ಬಟ್ಟೆಗಳನ್ನು ಅದ್ದಿ, ಹಿಂಡಿ ತೆಗೆದು ಬೇರೆ ನೀರಿನಲ್ಲಿ ಒಗೆದು ಒಣಗಿಸಿ ಇಸ್ತ್ರಿ ಮಾಡುತ್ತಾರೆ. ಸೀಗೆ ಕಾಯಿಗಳಿಂದಲೂ ಇದೇ ರೀತಿ ಬಟ್ಟೆಗಳನ್ನು ಸ್ವಚ್ಛ ಮಾಡುವುದುಂಟು. ಬಟ್ಟೆಯ ಜಿಡ್ಡನ್ನು ತೆಗೆಯಲು ಎರೆಮಣ್ಣು, ಚೌಳನ್ನು ಉಪಯೋಗಿಸುತ್ತಿದ್ದರು. ಬಟ್ಟೆಯ ಹೊಲಸನ್ನು ತೆಂಗಿನ ಜುಟ್ಟದಿಂದ ತಿಕ್ಕಿ ತೆಗೆಯುತ್ತಿದ್ದರೆ ಗುಡಾರ ಕೌದಿ, ಚಾದರೆ ಬೆಡ್‌ಶಿಟ್‌ಗಳಂಥ ದೊಡ್ಡ ಬಟ್ಟೆಗಳನ್ನು ಒಗೆಯುವಾಗ ದೋಣ್ಣೆಯಿಂದ ಬಡಿದು ಹೊಂಸು ಬಿಸಿಸುವರು ಇಂಥವುಗಳನ್ನು ಇಬ್ಬರು ಸೇರಿ ಆ ಕಡೆ ಈ ಕಡೆ ಹಿಡಿದು ನೀರಿನಲ್ಲಿ ಅದ್ದಿ ಎತ್ತಿ ಕಲ್ಲಿಗೆ ಬಡಿಯುತ್ತಾರೆ. ಕೈಗಳಲ್ಲೋ ಕಾಲುಗಳಲ್ಲೋ ಹಿಂಡಿ ಬಿಸಿಲಿಗೆ ಹಾಕುತ್ತಾರೆ. ಅಂಗಿ ಧೋತರ, ಪಾವಟಿ, ಟೊಪ್ಪಿಗೆಗಳಂಥ ಬಿಳಿ ಬಟ್ಟೆಗಳನ್ನು ಒಗೆದು ಹಿಂಡಿದ ಮೇಲೆ ನೀಲಿ ಹಾಕುವುದುಂಟು. ಗಂಜಿಗೆಂದು ಕೊಟ್ಟ ಬಟ್ಟೆಗಳನ್ನು ಮೈದಾಹಿಟ್ಟಿನೊಂದ ತಯಾರಿಸಲಾದ ಗಂಜಿಯಲ್ಲಿ ಅದ್ದಿ ತೆಗೆದು ಒಣಗಿಸುವರು. ನಂತರ ಇಸ್ತ್ರಿ ಮಾಡುವರು. ಇಸ್ತ್ರಿ ಬರುವ ಪೂರ್ವದಲ್ಲಿ ಹಿತ್ತಾಳೆ ಚರಿಗೆ(ತಂಬಿಗೆ)ಯಲ್ಲಿ ಇದ್ದಿಲು ಬೆಂಕಿ ಹಾಕಿ ಇಸ್ತ್ರೀ ಮಾಡಲಾಗುತ್ತಿತ್ತು. ಹೀಗೆ ಅಗಸರ ಕಸುಬು ವಿಜಯನಗರದಲ್ಲಿ ಒಂದು ಪ್ರಮುಖ ಪಾತ್ರವಹಿಸಿತು. ಅರಮನೆಯ ಬಟ್ಟೆಗಳನ್ನು ತೊಳೆಯಲು ಪ್ರತ್ಯೇಕ ಅಗಸ ಕುಟುಂಬಗಳಿದ್ದಿರಬೇಕು. ಅವರು ಅರಸು ಮನೆತನದ ಬಟ್ಟೆಗಳನ್ನಲ್ಲದೆ ಬೇರೆ ಯಾವುದೇ ಕೆಲಸವನ್ನು ಮಾಡುತ್ತಿರಲಿಲ್ಲ.

ಮಧ್ಯಮ ವರ್ಗದವರ ಬಟ್ಟೆಗಳನ್ನು ಪ್ರತ್ಯೇಕ ಅಗಸರು ಶುಚಿಗೊಳಿಸುವ ಪದ್ಧತಿಯಿರಬೇಕು. ದೇವರಿಗೆ ಸಂಬಂಧಿಸಿದ ಬಟ್ಟೆ ಅರಸ, ಮಾಂಡಲೀಕ ಹೀಗೆ ಒಟ್ಟಾರೆ ಸಾಮ್ರಾಜ್ಯದ ಪ್ರಮುಖ ವರ್ಗದವರ ಬಟ್ಟೆಗಳನ್ನು ಒಗೆಯಲು ಅಗಸರನ್ನು ನೇಮಿಸುವ ಪದ್ಧತಿಯಿತ್ತು. ಅಗಸರು ಬಟ್ಟೆಗಳನ್ನು ನದಿ, ಕೆರೆ, ಬಾವಿಗಳಲ್ಲಿ ತೊಳೆಯುತ್ತಿದ್ದರು. ಹಾಗೂ ಆ ಕೆರೆಯನ್ನು ಅವರ ಸ್ವಚ್ಛಗೊಳಿಸಿಕೊಳ್ಳುತ್ತಿದ್ದರು ಎಂಬುದಕ್ಕೆ ಹೊಸಾಳದ ಶಾಸನವು ದಾಖಲೆಯಾಗಿ ಸೂಚಿಸುತ್ತದೆ.

ಇಲ್ಲಿ ಮಡಿವಾಳ ಮತ್ತು ಬೆಸ್ತರ ಕಾರ್ಯ ಕೆರೆಯನ್ನು ಅವಲಂಬಿಸಿದೆಯೆಂದಿದೆ.[೨೪೯] ಅಂದರೆ ಆ ಕೆರೆಯ ಕೆಸರನ್ನು ತೆಗೆದು ಶುದ್ಧಮಾಡಿ ಆ ಕೆರೆಯ ಜೀರ್ಣೋದ್ಧಾರ ಮಾಡಬೇಕೆಂದು ಹೇಳಿದೆ. ಅಗಸರು ತಾವು ಬಟ್ಟೆಗಳನ್ನು ಶುಭ್ರಗೊಳಿಸಲು ಬಳಸಿದ ಕೆರೆ, ಬಾವಿ, ಹಳ್ಳ-ಕೊಳ್ಳಗಳನ್ನು ತಮ್ಮ ಕಾರ್ಯ ಮುಗಿದ ನಂತರ ಅವುಗಳನ್ನು ಶುಚಿಗೊಳಿಸುತ್ತಿದ್ದರು. ಅಂದು ಪರಿಸರ ಸ್ವಚ್ಚತೆಗೆ ಆಧ್ಯತೆಯನ್ನು ನೀಡುತ್ತಿದ್ದರು ಎಂದು ತಿಳಿಯುತ್ತದೆ.

೧೧. ಬೆಸ್ತರು

ವಿಜಯನಗರ ಕಾಲದ ಪ್ರಮುಖ ಕಸುಬುಗಳಲ್ಲಿ ಬೆಸ್ತ ಅಥವಾ ಮೀನುಗಾರಿಕೆಯು ಒಂದು. ಮಾನವ ಭೂಮಿಯ ಮೇಲೆ ಉಗಮವಾದಾಗ ಆಹಾರ ಸಂಗ್ರಹಣೆಗಾಗಿ ಚಡಪಡಿಸಿದ್ದುಂಟು. ಗೆಡ್ಡೆಗೆಣಸುಗಳನ್ನು ಸೇವಿಸಿದ ತರುವಾಯ ಪ್ರಾಣಿಗಳನ್ನು ಬೇಟೆಯಾಡಲು ಮುಂದಾದ. ಈ ಪ್ರಾಣಿಗಳ ಬೇಟೆಯ ನವೀನ ವಿಧಾನ ಹಾಗೂ ತಾಂತ್ರಿಕ ಅವಿಷ್ಕಾರಗಳಿಂದ ಜಲಚರಗಳ ಬೇಟೆಯನ್ನು ರೂಢಿಸಿಕೊಂಡ ಅವುಗಳ ಪೈಕಿ. ಮೀನುಗಾರಿಕೆ ಪ್ರಮುಖವಾದುದಾಗಿದೆ. ಇದರಲ್ಲಿ ಎರಡು ವಿಧಾನಗಳನ್ನು ಗುರುತಿಸುತ್ತೇವೆ. ಒಂದು ಪ್ರಕೃತಿದತ್ತವಾಗಿ ನೀರಿನಲ್ಲಿ ನದಿ, ಹಳ್ಳ, ಕೊಳ್ಳಗಳಲ್ಲಿ ಬೇಟೆಯಾಡಿ ಸಂಗ್ರಹಿಸುವುದು. ಮತ್ತೊಂದು ಕೃತಕವಾಗಿ ಮೊಟ್ಟೆ ತಂದು ನೀರಿನಲ್ಲಿ ಸಾಕಿ ಸೇವಿಸುವುದು, ಅಂದು ಪ್ರಕೃತಿ ಬೇಟೆಯೇ ಹೆಚ್ಚು ಪ್ರಚಲಿತದಲ್ಲಿತ್ತು.

ಆದಿ ಕಾಲದಿಂದ ಬಂದ ಈ ಬೆಸ್ತ ಕಸುಬಿಗೆ ವಿವಿಧ ಹಂತಗಳಲ್ಲಿ ಉತ್ತೇಜನ ಸಿಕ್ಕಿದೆ. ಚಾರಿತ್ರಿಕವಾಗಿ ಮೌರ್ಯ, ಶಾತವಾಹನ, ಕುಶಾನ, ಗುಪ್ತ, ಗಂಗ, ಕದಂಬ, ಚಾಲುಕ್ಯ, ರಾಷ್ಟ್ರಕೂಟ ಮತ್ತು ಹೊಯ್ಸಳ, ವಿಜಯನಗರದ ಅವಧಿಯಲ್ಲಿ ಬೆಸ್ತ ಕಸುಬಿನ ಅನೇಕ ಕುರುಹುಗಳಿವೆ. ಈ ಕಾಲಘಟ್ಟಗಳಲ್ಲಿನ ಮೀನುಗಾರಿಕೆ ಬಗ್ಗೆ ಪುರಾತತ್ವದ ಆಕರಗಳು ಬೆಳಕು ಚೆಲ್ಲುತ್ತವೆ. ಅಲ್ಲದೆ ಪುರಾಣ, ಸಾಹಿತ್ಯ, ಶಾಸನ ಆಕರಗಳನ್ನು ಗಮನಿಸುವುದು ಸೂಕ್ತ. ಮಹಾಭಾರತದಲ್ಲಿ ಕರ್ಣನ ವೃತ್ತಾಂತವನ್ನು ಕೃಷ್ಣ ತಿಳಿಸುವಾಗ ರಾಧೆಯನೆಂಬ ಮಿಂಗುಲನ ಅಶ್ರಯದಲ್ಲಿ ಬರುವ ಸಂಗತಿ ತಿಳಿದು ಬರುತ್ತದೆ. ಕರ್ಣ ಮತ್ತು ದುರ್ಯೋಧನರಿಬ್ಬರು ಒಮ್ಮೆ ಭೇಟೆಗೆ ಹೋಗಿದ್ದಾಗ ಸತ್ತಂತಪರೆಂಬ ದಿವ್ಯ ಋಷಿಗಳನ್ನು ಭೇಟಿ ಮಾಡುತ್ತಾರೆ. ಆ ಋಷಿ ಮೊದಲು ಕರ್ಣನನ್ನು ಸತ್ಕರಿಸಿದಾಗ ಕೌರವನಿಗೆ ಕೋಪ ಉಕ್ಕಿ ಬಂತು. ಈ ಸನ್ನಿವೇಶವನ್ನು ಪಂಪ ತನ್ನ ವಿಕ್ರಮಾರ್ಜುನ ವಿಜಯದಲ್ಲಿ ಮನೋಜ್ಞವಾಗಿ ಚಿತ್ರಿಸುತ್ತಾ. ಅನಿದೆ ನಿಮಿದೆಕೆ ದಯೆಗೈಯ್ದಿರೊ ಈ ಮಿಂಗುಲಿ ಗಂಗೆ ಎಂಬುದು ಗಮನಾರ್ಹ. ಬೆಸ್ತರ ಹಿನ್ನೆಲೆಯನ್ನು ಪೌರಾಣಿಕವಾಗಿ ನೋಡುವುದಾದರೆ ಮತ್ಸ್ಯ ಎಂಬ ದೇಶವಿತ್ತು ಇಂದಿನ ಜಯಪುರ ಪ್ರದೇಶವೇ ಪ್ರಾಚೀನ ಮತ್ಸದೇಶ. ಅದು ಶೂರನ ದೇಶದ ಪಶ್ಚಿಮಕ್ಕಿದ್ದು ಮಹಾಭಾರತದ ಕಾಲದಲ್ಲಿ ವಿರಾಟನು ಇಲ್ಲಿ ರಾಜ್ಯಬಾರ ಮಾಡುತ್ತಿದ್ದ. ಒಂದು ಕಥೆಯ ಪ್ರಕಾರ ಅಧಿಕ ಎಂಬ ಅಪ್ಸರೆ ಬ್ರಹ್ಮನ ಶಾಪದಿಂದ ಮೀನಾಗಿ ಉಪರಿಚರವಸುವಿನ ವೀರ್ಯವನ್ನು ನುಂಗಿ ಮತ್ಸ್ಯ ರಾಜನೆಂಬ ಮಗನನ್ನು ಮತ್ಸ್ಯಗಂಧಮಾಲ ಎನ್ನುವ ಮಗಳನ್ನು ಪಡೆದು ಶಾಪವಿಮೋಚನೆ ಹೊಂದಿದಳು. ಈ ಮತ್ಸ್ಯಗಂಧಾಳ ಮೊದಲ ಹೆಸರೇ ಸತ್ಯವತಿ.

ಇದಲ್ಲದೆ. ಮತ್ಸ್ಯಾವತಾರವು ಹತ್ತು ಅವತಾರಗಳಲ್ಲಿ ಒಂದು. ರಾಕ್ಷಸನಾದ ಸೋಮಕನು ವೇದಗಳನ್ನು ಅಪಹರಿಸಲು ವಿಷ್ಣುವು ಮತ್ಸ್ಯಾವತಾರ ಹೊಂದಿ ಆ ರಕ್ಕಸನನ್ನು ಕೊಂದು ವೇದವನ್ನುದ್ಧರಿಸಿದನು.[೩೦]

ಮೀನಿನ ಬಗೆಯ ಮತ್ತೊಂದು ಪುರಾಣ ಹೀಗಿದೆ. ದೈವಸತ್ವ ಮನುವು ತಪಸ್ಸು ಮಾಡುತ್ತಿರುವಾಗ ಒಂದು ಮೀನು ದೊಡ್ಡ ಮೀನುಗಳಿಂದ ತನ್ನನ್ನು ರಕ್ಷಿಸಬೇಕೆನ್ನಲು, ಆತನು ಅದನ್ನು ಕಮಂಡಲದಲ್ಲಿಟ್ಟುಕೊಂಡನು. ಮೀನು ದಿನ ದಿನವೂ ಬೆಳೆಯುತ್ತಾ ಬರಲು ಆತನು ಅದನ್ನು ಕಮಂಡಲದಿಂದ ತೆಗೆದು ಬಾವಿಯಲ್ಲಿ ಹಾಕಿದನು. ಮುಂದೆ ದೊಡ್ಡ ಗಾತ್ರದಲ್ಲಿ ಬೆಳೆದಾಗ ಗಂಗಾ ನದಿಯಲ್ಲಿ ಬಿಡಲಾಯಿತು. ಕ್ರಮೇಣ ನದಿಯಲ್ಲಿ ಸಂಚಾರಕ್ಕೆ ಅಡಚಣೆಯಾದಾಗ ಆ ಮೀನನ್ನು ಸಮುದ್ರಕ್ಕೆ ಬಿಡಲಾಯಿತು. ಮುಂದೆ ಮೀನುವಿನೊಡನೆ ಸಂಬಂಧವಾಗಿ ಕಥೆಗೆ ನಾನಾ ತಿರುವುಗಳು ಹುಟ್ಟಿಕೊಳ್ಳುತ್ತವೆ. ಹೀಗೆ ಆದಿಕಾಲದಿಂದಲೂ ಮಹಾಪುರುಷರು ಮತ್ತು ಪುರಾಣ ಕಾವ್ಯಗಳ ಕಥಾನಾಯಕರು ಬುಡಕಟ್ಟುಗಳ ದೇಶಿಯ ಲಕ್ಷಣಗಳನ್ನು ಹೊಂದಿದ್ದಾರೆ. ಕಸುಬು ಮತ್ತು ಜಾತಿಗೊಬ್ಬ ಆರಾಧನಾ ವೀರನನ್ನು ಪಡೆದಿದ್ದಾರೆ. ಉದಾಹರಣೆ ಏಕಲವ್ಯ, ಗುಹಾ, ಧರ್ಮವ್ಯಾದ[೩೧] ಮೊದಲಾದವರು. ಬೆಸ್ತರ ಚರಿತ್ರೆ ಹುಡುಕುವುದು ತುಂಬಾ ಕಠಿಣ. ಮಾನವನ ಆಹಾರ ಅನ್ವೇಷಣೆಗಳಲ್ಲಿ ಕಂಡುಕೊಂಡ ವಿಧಾನವೆಂದು ಹೇಳಿದರೂ ಅದು ಕಸುಬಾಗಿ ನೆಲೆಯೂರಿದ ಬಗೆ ವಿಸ್ಮಯಕರವಾದುದು.

ಮೌರ್ಯರ ಕಾಲಕ್ಕೆ ಬೆಸ್ತ ಕಸುಬು ಅವ್ಯಾಹತವಾಗಿ ಮುಂದುವರೆದಿತ್ತು. ಈ ಹಿಂಸೆಯನ್ನು ತಪ್ಪಿಸಲು ಅಶೋಕ ನಾನಾ ಪ್ರಯತ್ನಗಳನ್ನು ಮಾಡಿದ್ದಾನೆ. ಅವನ ಕಂದಹಾರ ಶಾಸನವು ಬೇಡಲು(ಬೇಟೆಗಾರರು) ಹಾಗೂ ಬೆಸ್ತರು ಪ್ರಾಣಿಹತ್ಯೆಯನ್ನು ಬಿಟ್ಟು ಧರ್ಮದ ದಾರಿ ಹಿಡಿದರೆಂದು ಅಶೋಕ ಚಕ್ರವರ್ತಿ[೩೨] ಹೇಳಿದ್ದಾನೆ. ಇದು ಭಾರತದ ಚರಿತ್ರೆಯಲ್ಲಿ ಬೇಟೆ ಕುರಿತ ಉಲ್ಲೇಖಿತವಾದ ಮೊದಲನೆಯ ಶಾಸನವೆಂದರೆ ಅತಿಶಯೋಕ್ತಿಯಾಗಲಾರದು. ಬೇಡರು ಮತ್ತು ಬೆಸ್ತರು ಈ ಕಾಲಕ್ಕೆ ಬೇಟೆ ಮತ್ತು ಮೀನುಗಾರಿಕೆಯನ್ನು ಪ್ರಧಾನ ಕಸುಬಾಗಿ ಹೊಂದಿದ್ದರೆಂದು ತಿಳಿಯಬೇಕಾಗುತ್ತದೆ.

ಜನಸಮುದಾಯಗಳು ಇದನ್ನು ಪರಂಪರೆಯಿಂದ ಬಂದ ಕಸುಬೆಂದು ಸ್ವೀಕರಿಸಿ ತಲೆಮಾರುಗಳನ್ನೇ ಸವೆಸಿದವು. ವಿಜಯನಗರ ಕಾಲದಲ್ಲಿ ಬಾವಿ, ಕೆರೆ, ಹಳ್ಳ, ಕೊಳ್ಳ, ನದಿಗಳು ಸಾಕಷ್ಟಿದ್ದವು. ಈ ಸಾಮ್ರಾಜ್ಯದಲ್ಲಿ ಕೃಷ್ಣ–ತುಂಗಭದ್ರಾ, ಕಾವೇರಿ ನದಿಗಳು ಪ್ರತಿಯೊಂದು ಕಾರ್ಯಗಳಿಗೆ ಪ್ರಾಮುಖ್ಯತೆ ಪಡೆದಿದವು. ಇದು ರಾಜ್ಯಕ್ಕೆ ಆದಾಯ ತರುವ ಒಂದು ಕಸುಬಾಗಿತ್ತು. ಅಂದು ಮೀನುಗಾರಿಕೆ ಸಾರ್ವತ್ರಿಕವಾಗಿರಲಿಲ್ಲ ಒಂದು ಕಸುಬಿನವರಿಗೆ ಮಾತ್ರ ಸೀಮಿತವಾಗಿತ್ತು.

ವಿಜಯನಗರ ಕಾಲದ ಬೆಸ್ತರ ಕಸುಬಿನ ಕುರಿತು ಹಂಪಿ ಪರಿಸರದ ವಾಸ್ತುಶಿಲ್ಪ, ಕೋಟೆ, ರಕ್ಷಣಾಗೋಡೆ, ದೇವಾಲಯದ ಪ್ರಕಾರಗಳಲ್ಲಿ ಮೀನಿನ ಶಿಲ್ಪಗಳನ್ನು ಕೆತ್ತಲಾಗಿದೆ. ಇದರ ಉದ್ದೇಶ, ಔಚಿತ್ಯವೇನೆಂಬುದು ಸಹ ನಿಗೂಢವಾಗಿದೆ. ವಿಜಯನಗರ ಕಾಲದಲ್ಲಿ ಬೆಸ್ತ ಕಸುಬು

ಹೆಚ್ಚು ಇದ್ದಿರಬೇಕು. ಇದರ ಕುರಿತು ಶಾಸನ, ಸಾಹಿತ್ಯ ವಿದೇಶಿ ಪ್ರವಾಸಿಗರ ವರದಿಗಳನ್ನು ವಿಶ್ಲೇಷಿಸಲಾಗಿದೆ. ವಿಜಯನಗರ ಕಾಲದಲ್ಲಿ ಬೆಸ್ತರ ಕಸುಬು ಅಂದು ಉಪಕಸುಬಾಗಿ ಕೆಲವೊಂದು ವರ್ಗಗಳಿಗೆ ಜೀವನಾವಶ್ಯಕವಾಗಿದ್ದು, ರಾಜ್ಯಕ್ಕೆ ಆದಾಯ ತರುವ ಕಸುಬಾಗಿತ್ತು. ಅಂದು ಬೆಸ್ತರಿಗೆ, ನದಿ, ಕೆರೆ, ಕಟ್ಟೆಗಳಲ್ಲದೆ ಸಮುದ್ರವು ಉತ್ತಮ ಪರಿಸರವನ್ನು ನಿರ್ಮಿಸಿತ್ತು.

ಸಾಹಿತ್ಯ ಆಕರಗಳ ಕುರಿತು ನೊಡುವುದಾದರೆ ಹರಿಹರನ ಗಿರಿಜಾಕಲ್ಯಾಣ, ರಾಘವಾಂಕನ ಹರಿಶ್ಚಂದ್ರ ಕಾವ್ಯ, ಲಕ್ಕಣ್ಣದಂಡೇಶನ ಶಿವತತ್ವ ಚಿಂತಾಮಣಿ, ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ ಮೊದಲಾದ ಕಾವ್ಯಗಳು ಬೆಸ್ತರ ಬಗ್ಗೆ ಬೆಳಕು ಚೆಲ್ಲುತ್ತವೆ.

ರಾಘವಾಂಕನು ಹರಿಶ್ಚಂದ್ರ ಕಾವ್ಯದಲ್ಲಿ ರಾಜನನ್ನು ಬೇಟೆಗೆ ಆಹ್ವಾನಿಸುವಾಗ ಕಾಣಿಕೆ ರೂಪದಲ್ಲಿ ವಿವಿಧ ಪ್ರಾಣಿಗಳನ್ನು. ಅದರಲ್ಲಿ ಬೆಸ್ತರು ಬೇಟೆಯಾಡಿದ ಮೀನಿನ ಗೊಂಚಲು ಜೊತೆಗೆ ಹಲವು ಪ್ರಾಣಿಗಳಿದ್ದವು. ೨೪ ವಿಧದ ಬಲೆಗಳನ್ನು ರಾಘವಾಂಕ ಕಾವ್ಯದಲ್ಲಿ ತಿಳಿಸಿದ್ದಾನೆ.

ತಡಿಕೆವಲೆ ತಟ್ಟವಲೆ ಹಾಸುವಲೆ ಬೀಸುವಲೆ
ಕೊಡತಿವಲೆ ಕೋಲುವಲೆ ತಳ್ಳಿವಲೆ ಬಳಿವಲೆ
ತೊಡಕುವಲೆ ಪಾಚುವಲೆ ಗಢವಲೆ ಗೂಢವಲೆ
ಮಡಿಕೆವಲೆ ಮಂದಸಿವಲೆ ಹೊರಗಳ ಬೇಡವಲೆ[೩೫೩]

ಮೇಲಿನ ಬೇಟೆಯ ಬಲೆಗಳಲ್ಲದೆ, ಗಾಣ, ಕೂಳಿ, ಬಿಲ್ಲು, ಬಾಣ ಇತರೆ ಉಪಕರಣಗಳು ಮತ್ತು ಪ್ರಾಣಿ–ಪಕ್ಷಿಗಳ ಇರುಗೂಳಿ, ಹೆಗ್ಗೂಳಿ, ಕಿರುಗೂಳಿ, ಇತರ ಕೋಳಗಳ ಪರಿಕರಗಳನ್ನು ತಿಳಿಸಿದ್ದಾನೆ. ನದಿ ನೀರಿನಲ್ಲಿ ಪಾರಂಪರಿಕವಾಗಿ ಬಂದ ಮೀನು ಹಿಡಿಯುವ ಬಗೆಗಳನ್ನು, ಬೆಸ್ತರು ಹಿಡಿದ ಮೀನುಗಳನ್ನು ರಾಘವಾಂಕನು ತನ್ನ ಹರಿಶ್ಚಂದ್ರ ಕಾವ್ಯದಲ್ಲಿ ಹೀಗೆ ತಿಳಿಸಿದ್ದಾನೆ.

ಕೋರುವ ಸೀಗುಡಿ ಗೆಂಡೆ ಕಚ್ಚುಹಣ್ಣಲು ಬಸಿಗ

ಗೀರಲು ಬಂಗಡೆ ಹಾವು ಜಳಬಾಳೆ ಕುಡಿಲು (ಕೀ)ಹೆ

ಗ್ಗರುಗಣೆ ಮಣೆಗಣ್ಣ ತೂರು ತೆಂಪಲು ನೆಸಿಲು ಬೊಂಪು ಸವಿಬಾಯಗೊದಳೆ

ಗರು ಮೆರೆದ ಕಾಗೇಂಡೆಯಯ್ಯಿರೆಗ ದೊಂಡಿಕೆಂ

ಗರು ಹರಳು ಹಾರುವಂ ಹಿರಿಯ ಷೆಡು ಸಕ್ಕರಿಸಿ

ನಿರುಲು ಹಂದೆಗೆ ನಾನೆ ಮೊಗನೆಂಬ ಪರಿಪರಿಯ ಮೀನ್ಗಳಂಗುದಿಗೆಯ್ದರು.

ಇವಿಷ್ಟಲ್ಲದೆ ೮ ವಿಧದ ಬೇಟೆಗಳನ್ನು ತಿಳಿಸುವಾಗ ಅಂದು ಜಲ ಬೇಟೆಯ ಬಗ್ಗೆ ಆಸಕ್ತಿ ತೋರಿದ್ದಾನೆ. ಇವನಂತೆ ಚೌಡರಸ ಅಭಿನವ ದಶಕುಮಾರ ಚರಿತೆಯಲ್ಲಿ ಬೇಡರಹಳ್ಳಿ ಭಿಲ್ಲರ ಸಮೂಹ, ವಿವಿಧ ಬಗೆಯ ಬಲೆಗಳಲ್ಲದೆ. ಬಾಣಗಳನ್ನು[೩೫೪] ಹೆಸರಿಸಿದ್ದಾನೆ. ಇವರ ಕಾಲಕ್ಕೆ ಬೇಟೆ ಲೌಕಿಕತೆಯನ್ನು ಮೆರೆದಿತ್ತು.

ಕನಕದಾಸರ ಮೋಹನ ತರಂಗಿಣಿಯಲ್ಲಿ ಬೆಸ್ತರ ಬಗೆಗೆ ಜಲಗಾರ, ಮೀನು ಈ ಸಂಬಂಧವಲ್ಲದೆ ಇನ್ನು ಅನೇಕ ಸಂಗತಿಗಳನ್ನು ಅಲ್ಲಲ್ಲಿ ಮನೋಜ್ಞವಾಗಿ ಮೆಲುಕುಹಾಕಿದ್ದಾನೆ. ಇವನ ಕಾಲಕ್ಕೆ ಈ ಕಸುಬು ಲೋಕದೃಷ್ಟಿಯಿಂದ ಮಾನ್ಯವಾದಂತಿದೆ. ಕಾವ್ಯದಲ್ಲಿ ಬೆಸ್ತರ ಕುರಿತು ಈ ರೀತಿಯಿವೆ.

ಮಾಣಿಕ ಮೆಯ್ವಣ್ಣದ ಚಾಯ ಮೀನಕಂ
ಡಾಣಿಕಾರಿಕೆ ಜಲಗಾರ
ಕ್ಷೋಣೇಶ್ವರ ನಾಸ್ಥಾನಕೆ ತಂದು ಕೈ
ಗಾಣಿಕೆ ಕೊಟ್ಟ ಶಂಬರಗೆ.[೩೫೫]
ಮೀನ ತಂದವಿಗೆ ಬೇಡಿದ ವಸ್ತುಗಳ ಕೊಟ್ಟ
ಭೂನಾಥ ತಾತ್ವರಿಯದಲಿ ತಾನೊವ್ ಹೆಗ್ಗಡತಿಯ ಕೈಯಕಳುಹಿದ
ಬೋನದ ಮನೆಗೀವುದೆನುತಿ.[೩೫೬]

ವಿಜಯನಗರಕ್ಕೆ ಭೇಟಿಕೊಟ್ಟ ವಿದೇಶಿ ಪ್ರವಾಸಿಗರ ಪೈಕಿ ಅಬ್ದುಲ್ ರಜಾಕ್, ಫೆರಿಸ್ತಾ, ನಿಕಟಿನ್, ಡೊಮಿಂಗ್ ಪಾಯಸ್ ಮೊದಲಾದವರು ಇಲ್ಲಿನ ಬೆಸ್ತ ಕಸುಬಿನ ಬಗ್ಗೆ ಹೇಳಿದ್ದಾರೆ. ವಾಸ್ಕೋಡಿಗಾಮ ೧೫೦೨ರಲ್ಲಿ ಪುನಃ ಭಾರತಕ್ಕೆ ಬಂದಾಗ ಪೋರ್ತುಗಾಲದ ರಾಜನನ್ನು ಸಮುದ್ರ ಒಡೆಯನೆಂದು ಬಣ್ಣಿಸುತ್ತಾನೆ. ಭಾರತೀಯ ಕರಾವಳಿಯಲ್ಲಿದ್ದ ದೊಡ್ಡ ನೌಕೆಯೊಂದರಲ್ಲಿನ ೧೦೦ ಪ್ರಯಾಣಿಕರನ್ನು ನೌಕೆ ಮತ್ತು ನಾವಿಕರನ್ನು ನಾಶಪಡಿಸಿದ ಅವರು ಅಕ್ಟೋಬರ್ ೨೯ರಂದು ಕಾಲಿಕಟ್ ತಲುಪಿದ ಕೂಡಲೆ ನಗರದ ಮೇಲೆ ಗುಂಡಿನ ಮಳೆಗೆರೆದು, ಬಂದರನಲ್ಲಿದ್ದ ನಿರಾಕ್ಷೇಪ ಮೀನುಗಾರರನ್ನು ಸೆರೆಹಿಡಿದು ಅವರಲ್ಲಿ ೮೦೦ ಜನರನ್ನು ಪಾಶಮಕ್ರೂರತೆಯಿಂದ ಕೊಂದ.[೩೫೭] ಅಂದರೆ ಕಡಲ ತೀರದಲ್ಲಿ ಅತಿ ಹೆಚ್ಚು ಬೆಸ್ತರು ಇದ್ದರು ಎಂದು ತಿಳಿಯಬಹುದಾಗಿದೆ. ಇದಕ್ಕೆ ಇನ್ನೂ ಅಕರಗಳ ಕೊರತೆಯಿದ್ದು ಪರಿಶೀಲನಾರ್ಹವಾಗಿದೆ.

ಬೆಸ್ತರು ಮೀನುಗಳನ್ನು ಹಿಡಿಯಲು ತನ್ನ ಏನೆಲ್ಲಾ ಬಧ್ಧಿ ಶಕ್ತಿಯನ್ನು ಪ್ರಯೋಗಿಸಿ ಸಫಲತೆ ಕಂಡುಕೊಳ್ಳುತ್ತಾರೆ. ನೀರಿನಲ್ಲಿ ಮೀನಿನ ಸಂಚಲನ, ವಾಸದ ನೆಲೆ, ಆಯಕಟ್ಟಿನ ಭಾಗಗಳನ್ನು ಪತ್ತೆ ಹಚ್ಚುವುದು ಕಠಿಣದ ಕೆಲಸ. ಕಣ್ಣಿಗೆ ಕಂಡರೂ ನೀರಿನಲ್ಲಿ ಮೀನನ್ನು ಹಿಡಿಯುವುದು ದುಸ್ತರವಾದುದು. ಮೀನು ಹಿಡಿಯುವಾಗ ಪರಿಕರಗಳು ಅಗತ್ಯ, ಮೊದಲು ಈಜು ಬರಬೇಕು ಗಾಳಿ, ಕೊಳೆ, ಬಲೆಗಳ ಮೂಲಕ ಮೀನನ್ನು ಹಿಡಿಯುವ ಜನಾಂಗವೆ ಬೆಸ್ತರು. ಇದರಲ್ಲಿ ಅವರು ಪರಿಣಿತರೆಂಬುದು ಸ್ಪಷ್ಟ.

ಇವರು ಮೀನುಗಳನ್ನು ಹೀಡಿಯುವ ಮುನ್ನ ಕೇರೆ, ಬಾವಿ, ಕೊಳಗಳನ್ನು ಸ್ವಚ್ಚವಾಗಿರುವಂತೆ ನೊಡಿಕೊಳ್ಳುತ್ತಿದ್ದರು. ವಿಜಯನಗರ ಕಾಲದಲ್ಲಿ ಕೆರೆಗಳನ್ನು ಸ್ವಚ್ಚಗೊಳಿಸಿಕೊಂಡು ತಮ್ಮ ಕಸುಬನ್ನು ಮುಂದುವರೆಸಿದ್ದರು ಎಂಬುದಕ್ಕೆ ಶಾಸನೊಕ್ತ ದಾಖಲೆಯಿದೆ.

ಹೊಸಾಳೆದ ಶಾಸನವು ಬಾರಕೂರು ರಾಜ್ಯದ ಅರಿಯಕೇರಿಯ ಸೆಜ್ಜೆಕಾರರು ಮತ್ತು ಸಮಸ್ತರು ಕೂಡಿಕೊಂಡು ಹಲವು ದೇವರುಗಳಿಗೆ ದಾನಬಿಟ್ಟ ವಿವರದ ನಡುವೆ ಚೌಳಿಯ ಬೆಟ್ಟಿನ ಮಡಿವಾಳರು ಬೆಸ್ತು ಸೇರಿಕೊಂಡು ಆ ಊರಿನ ಕೆರೆಯ ಕೆಸರನ್ನು ತೆಗೆದು ಶುದ್ಧ

ಮಾಡಿ ಆ ಕೆರೆಯ ಜೀರ್ಣೋದ್ಧಾರ ಮಾಡಬೇಕೆಂದು ಹೇಳಿದೆ.[೨೫೮] ಇಲ್ಲಿ ಮಡಿವಾಳ ಮತ್ತು ಬೆಸ್ತರ ಕಾಯಕದವರು ಈ ಕೆರೆಯನ್ನು ಅವಲಂಬಿಸಿದೆಯೆಂದು ತಿಳಿದುಬರುತ್ತದೆ.

ಗಜಬೇಂಟೆಕಾರ ಎಂಬ ಬಿರುದಾವಳಿಯನ್ನು ಹೊಂದಿದ್ದ ವಿಜಯನಗರ ಅರಸ ಇಮ್ಮಡಿ ವೀರಪ್ರತಾಪ ದೇವರಾಯ ಮಹಾರಾಯನ ಆಳ್ವಿಕೆಯಲ್ಲಿ ತಿರುನಮತ್ತುಕಾಣಿಯಾಗಿರುವ ತಿರುಮಲೈಗೆ ಸೇರಿದ ನಾಲ್ಕು ಕೆರೆಗಳ ಮೀನುಗುತ್ತಿಗೆಯ ಆದಾಯದ ಹಣವನ್ನು ಪ್ರತಿವರ್ಷವು ಆ ಕೆರೆಗಳ ಹೂಳೆತ್ತಲು ಮತ್ತು ಸರಿಪಡಿಸಲು ಮೀಸಲು ಇಡಬೇಕೆಂದು ರಾಜನ ಪ್ರತಿನಿಧಿ ತಿಪ್ಪರೈಶನಾಯಕ, ಸ್ಥಾನತ್ತಾರ ಮತ್ತು ಮಾಹೇಶ್ವರರು ಹಾಗೂ ಪಡೈವೀಡು[೨೫೯] ನಿರ್ಣಯವನ್ನು ತೆಗೆದುಕೊಂಡಿರುವರು. ಅಂದರೆ ಕೆರೆಗಳ ನಿರ್ವಹಣೆಯನ್ನು ಕೆರಯಿಂದ ಬಂದ ಆದಾಯದಿಂದಲೇ ಮಾಡುತ್ತಿದ್ದರು ಎಂಬುದು ಈ ಶಾಸನದಿಂದ ತಿಳಿಯುತ್ತದೆ. ಅಂದು ಬೆಸ್ತ ಕಸುಬಿನವರು ಸಾಮಾನ್ಯವಾಗಿ ಮೀನುಗುತ್ತಿಗೆಯನ್ನು ಪಡೆದುಕೊಳ್ಳುತ್ತಿದ್ದರು.

ರಾಜಪ್ರಭುತ್ವದಲ್ಲಿ ಮೀನುಗಾರಿಕೆಗೆ ಅಷ್ಟು ಬೇಡಿಕೆ ಇದ್ದಂತಿರಲಿಲ್ಲ. ಆರಂಭದಲ್ಲಿ ಆಹಾರಕ್ಕಷ್ಟೇ ಸೀಮಿತವಾಗಿತ್ತು. ವಿದೇಶಿಯರ ಸಂಖ್ಯೆ ಹೆಚ್ಚಾದಂತೆ ಮತ್ತು ದೇಶಿಯರಲ್ಲಿ ಆಹಾರ ಬದಲಾವಣೆಯಾದಂತೆ ಬೆಸ್ತ ಕಸುಬು ಅಭಿವೃದ್ಧಿಗೊಂಡಿದೆ. ಅಂದು ಆಳರಸನು ಬೆಸ್ತ ಮುಖಂಡರಿಗೆ ಇಂತಿಷ್ಟು ಕೆರೆಯಲ್ಲಿ ಮೀನು ಹಿಡಿಯಬೇಕು ಎಂದು ಪರವಾನಿಗೆ ಕೊಡುತ್ತಿದ್ದರು. ಇಂದು ಸಹ ಹರಾಜಿನ ಮೂಲಕ ಮೀನಿನ ವ್ಯಾಪಾರ ನಡೆಯುತ್ತಿದೆ.

ಅಂದು ಬೆಸ್ತ-ಬೇಡರಿಗೆ ವ್ಯತ್ಯಾಸವಿದ್ದಂತಿರಲಿಲ್ಲ. ಹೀನ ಜಾತಿ ಕಸುಬಿನ ಭೇದ ಭಾವ ತೋರದೆ ಕುಮಾರರಾಮ ಇತರ ಅನೇಕ ಸ್ನೇಹಿತರಂತೆ ಬೆಸ್ತರ ಮೀನುಗಳಪ್ಪನನ್ನು ಸ್ನೇಹಿತನಾಗಿ ಪಡೆದಿದ್ದ. ಬೆಸ್ತರಕಸುಬು ರಾಜ್ಯಕ್ಕೆ ಆದಾಯ ತಂದು ಕೊಡುತ್ತಿತ್ತು. ಒಳನಾಡು ಮತ್ತು ಹೊರನಾಡಿನ ವ್ಯಾಪಾರದಲ್ಲಿ ವಿಜಯನಗರ ಸಾಮ್ರಾಜ್ಯ ಪ್ರಮುಖ ಸ್ಥಾನ ಪಡೆದಿತ್ತು. ಈ ಸಾಮ್ರಾಜ್ಯ ಮೂರು ಕಡೆ ಸಮುದ್ರವನ್ನ ಹೊಂದಿದ್ದರಿಂದ ವ್ಯಾಪಾರ-ವಹಿವಾಟಿಗೆ ಅಡ್ಡಿ ಆತಂಕಗಳಿದ್ದಂತಿಲ್ಲ.

ಅಬ್ದುಲ್ ರಜಾಕ್ ಹೇಳುವಂತೆ- ವಿಜಯನಗರ ಸಾಮ್ರಾಜ್ಯದಲ್ಲಿ ೩೦೦ ಬಂದರುಗಳಿದ್ದವು. ಹಿಂದೂ ಮಹಾಸಾಗರದ ದ್ವೀಪಗಳು ಮಲಯ, ಬರ್ಮಾ, ಚೈನಾ, ಅರೇಬಿಯಾ, ಪರ್ಷಿಯಾ, ದಕ್ಷಿಣಆಫ್ರಿಕಾ, ಅಬಿಸೇನಿಯಾ ಮತ್ತು ಪೋರ್ಚುಗಲ್‌ಳೊಡನೆ ವ್ಯಾಪಾರ ಸಂಬಂಧವಿತ್ತು. ಮುತ್ತು ರತ್ನಗಳನ್ನು ರಫ್ತು ಮಾಡಿದಂತೆ ಒಣಗಿದ ಮೀನನ್ನು ರಫ್ತುಮಾಡುತ್ತಿದ್ದರು. ವಿಜಯನಗರ ಕಾಲದಲ್ಲಿ ಅಂಕೋಲ, ಮಲಾಬಾರ್, ಹೊನ್ನಾವರ, ಭಟ್ಕಳ, ಬೈಂದೂರು, ಬಾರಕೂರು, ಬಸ್ರೂರು, ಮಂಗಳೂರು, ಮತ್ತು ಕುಂಬ್ಳೆ ಮೊದಲಾದ ಪಟ್ಟಣಗಳಲ್ಲಿ ಕೃಷಿ-ಉತ್ಪನ್ನಗಳು ವೃದ್ಧಿಗೊಂಡಿದ್ದವು. ಕಂಬಳಿತೀರದಲ್ಲಿ ಬೆಸ್ತರ ಕಸುಬು ಆವ್ಯಾಹತವಾಗಿ ನಡೆಯುತ್ತಿತ್ತು.

ಪಾಯೇಸ್ ಹೇಳುವಂತೆ ಪಾನ್ಸುಪಾರಿ ಬಜಾರಿನಲ್ಲಿ ಪ್ರತಿ ಶುಕ್ರವಾರ ಸಂತೆಯಲ್ಲಿ ಹಂದಿ, ಕೋಳಿ, ಸಮುದ್ರದಿಂದ ತಂದ ಒಣ ಮೀನು, ಇನ್ನೂ ಗೊತ್ತಿಲ್ಲದ ಸಾಮಾನುಗಳನ್ನು ಈ ದೇಶದ ಜನ ಮಾರುತ್ತಾರೆ ಎಂದಿರುವನು.[೨೬೦] ಅಂದರೆ ಒಣಮೀನು ಸಂತೆಯಲ್ಲಿ

ವ್ಯಾಪಾರವಾಗುತ್ತಿತ್ತು. ಎಂದಾದರೆ ಇಲ್ಲಿನ ನದಿಯಲ್ಲಿ ಮೀನಿಹಿಡಿದು ಆ ರೀತಿ ಮಾರಿರುವ ಶಕ್ಯತೆ ಇದೆ. ಇಂದಿಗೂ ಸಂತೆಗಳಲ್ಲಿ ಒಣಮೀನು ಮಾರಾಟ ಮಾಡಲಾಗುತ್ತದೆ.

೧೨. ಅಂಬಿಗ

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗಿರುವುದೇ ನದಿ ತಟದಲ್ಲಿ. ನದಿಯಲ್ಲಿ ದೋಣಿಯ ಮೂಲಕ ಹರಿಗೋಲನ್ನು ಹಿಡಿದುಕೊಂಡು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವ ಕಸುಬು ಅಂಬಿಗನದು. ಗ್ರಾಮದ ಕೆರೆಯ ನೀರನ್ನು ಕಾಯುವುದು, ವ್ಯವಸಾಯಕ್ಕೆ ಬಿಡುವುದು, ಕೆರೆಯ ತೂಬು ಮುಚ್ಚುವುದು, ತೆರೆಯುವುದು, ನದಿಯಲ್ಲಿ ನಾಡ ದೋಣಿ ನಡೆಸುವುದು ಇವನ ಕಾರ್ಯಗಳಾಗಿದ್ದವು. ವಿಜಯನಗರ ಸಾಮ್ರಾಜ್ಯದಲ್ಲಿ ಅಂಬಿಗರ ಕಸುಬು ಇತ್ತು ಎಂಬುದಕ್ಕೆ ಶಾಸನ, ಸಾಹಿತ್ಯ ಪುರಾತತ್ವ ದಾಖಲೆಗಳಿವೆ.

ಕ್ರಿ.ಶ. ೧೫೫೬ ಮಾರ್ಚ್ ೨೭ರಂದು (೧೫೫೪?) ಸದಾಶಿವರಾಯನು ಆನೆಗೊಂದಿಯ ಅಂಬಿಗರ ನಾಗಜೋಗಿ ಮತ್ತು ಬಸವಜೋಗಿಯವರಿಗೆ ಶಾಸನವನ್ನು ನೀಡಿದ ವಿವರ ಹೀಗಿದೆ. ತುಂಗಭದ್ರಾ ನದಿಯ ಎರಡು ದಂಡೆಗಳಾದ ಆನೆಗೊಂದಿ ಮತ್ತು ತಳವಾರ ಕಟ್ಟೆಯಲ್ಲಿ ೧೦ ಹರಗೋಲು, ೧೦ ಮಂದಿ ಅಂಬಿಗರು ನಿರಂತರವಾಗಿ ಕಾರ್ಯನಿರತರಾಗಿದ್ದು, ರಾಜನಿಗೆ ವಿಜ್ಞಾಪನೆ ಮಾಡಿಕೊಂಡಲ್ಲಿ ರಾಜನು ಇವರಿಗೆ ಆನೆಗೊಂದಿಯಲ್ಲಿ ೧೫ ಕೊಳಗೆ ನೀರು ಭೂಮಿ, ತಳವಾರ ಕೋಟೆಯಲ್ಲಿ ೧೫ ಕೊಳಗ ಬಿಟ್ಟು ೩೦ ಕೊಳಗ ನೀರು ಭೂಮಿಯನ್ನು ನೀಡಿ ಇದರ ಆದಾಯವನ್ನು ಇವರು ಅನುಭವಿಸುತ್ತಾ ಬ್ರಾಹ್ಮಣ, ಸಾಧು, ಸಂತರ ಸೇವೆ ಮಾಡಿಕೊಂಡಿರಬೇಕೆಂದು ಮಕ್ಕಳು ಮೊಮ್ಮಕ್ಕಳವರೆಗೂ ಆಚಂದ್ರಾರ್ಕರವಾಗಿ ಕಟ್ಟೆಮನೆ ಅಧಿಕಾರ ಕುಲಾಚಾರ ಜವಾಬ್ದಾರಿಯನ್ನು ಕೊಟ್ಟ ಬಗ್ಗೆ ಆನೆಗೊಂದಿಯ ಅಂಬಿಗರ ದೊಡ್ಡ ತಾಯಣ್ಣನಲ್ಲಿರುವ ಈ ತಾಮ್ರ ಶಾಸನದಲ್ಲಿ ಉಲ್ಲೇಖಿತಗೊಂಡಿದೆ.[೩೧] ಆನೆಗೊಂದಿ ಸಂಸ್ಥಾನದವರು ಅಂಬಿಗರ ಬರಮ ಮತ್ತು ಬಸವ ಎಂಬುವವರಿಗೆ ನೀಡಿದ ಸನ್ನದು ಇವರು ಸಂಸ್ಥಾನದ ಕಾರ್ಯವನ್ನು ದಕ್ಷತೆಯಿಂದ ಮಾಡುತ್ತಿರುವುದರಿಂದ ಇವರಿಗೆ ತುಂಗಭದ್ರಾ ನದಿಯಲ್ಲಿ ಐದು ಹುಟ್ಟುಗಳಿದ್ದು ಅವುಗಳಲ್ಲಿ ಎರಡು ಹುಟ್ಟುಗಳನ್ನು ಯಿನಾದಿ ಆಗಿ ನೀಡಿರುತ್ತಾರೆ. ಹಾಗೆಯೇ ಇವರು ಕಟ್ಟೆಮನೆಯವರಾಗಿದ್ದು ಅವರ ಜಾತಿಯ ರೀತಿ ರಿವಾಜುಗಳನ್ನು ನಿಯಂತ್ರಿಸುವವರು ಆಗಿರುತ್ತಾರೆಂದು ಶಾಸನ ತಿಳಿಸುತ್ತದೆ.

ದೊಡ್ಡ ತಾಯಣ್ಣನವರ ಹತ್ತಿರವಿರುವ ಮತ್ತೊಂದು ಶಾಸನದಲ್ಲಿ (ತೆಲುಗುಭಾಷೆ) ಕ್ರಿ.ಶ. ೧೭೨೧ರಲ್ಲಿ ಆನೆಗೊಂದಿ ಸಂಸ್ಥಾನದವರು ಅಂಬಿಗರ ಬರಮ ಮತ್ತು ಬಸವ ಎಂಬುವವರಿಗೆ ನೀಡಿದ ಸನ್ನಿಧಿನಲ್ಲಿ ಸಂಸ್ಥಾನದ ಕಾರ್ಯವನ್ನು ದಕ್ಷತೆಯಿಂದ ಮಾಡುತ್ತಿರುವ ಇವರಿಗೆ ತುಂಗಭದ್ರಾ ನದಿಯಲ್ಲಿ ೫ ಹರಗೋಲು ಬುಟ್ಟಿಗಳಿದ್ದ ಅವುಗಳಲ್ಲಿ ಎರಡು ಬುಟ್ಟಿಗಳನ್ನು ಇನಾಂ ಆಗಿ ನೀಡಿರುತ್ತಾರೆ.[೩೧] ಇವರು ಕಟ್ಟೆಮನೆಗೆ ಸೇರಿದವರಾಗಿದ್ದು ಜಾತಿ ಕಲಹಗಳನ್ನು ನಿವಾರಿಸುವ ಜವಬ್ದಾರಿಯನ್ನು ಹೊಂದಿದ್ದರು. ಇವರಲ್ಲಿ ಸಮಾನತೆ, ಶಾಂತಿ ಕಾಪಾಡಲು ಅರಸರು ಕೈಗೊಂಡ ನಿರ್ಣಯ ಪ್ರಶ್ನಾರ್ಹವಾದುದು. ಅಂಬಿಗರು ತಮ್ಮ ಕಸುಬಿನಿಂದ ಬಂದ

ಇಂತಿಷ್ಟು ಹಣವನ್ನು ರಾಜ್ಯದ ಬೊಕ್ಕಸಕ್ಕೆ ಕೊಡಬೇಕಾಗಿರುವ ಸಂಗತಿ ಬಗ್ಗೆ ಕ್ರಿ.ಶ. ೧೫೫೬ ಮಾರ್ಚ್ ೧೨ರ ಒಂದು ಶಾಸನದಲ್ಲಿ ಸದಾಶಿವರಾಯನ ಕಾಲದಲ್ಲಿ ಆನೆಗೊಂದಿ ಹೊಳೆಯ ಮೀನುಗಾರರು ೩೦೦ ಮಂದಿ ಅಂಬಿಗರು ಅಂಬಲಿಯ ಮಹಾಲಂಗವೊಡೆಯರಿಗೆ ತಾವು ಹೊಳೆಯಲ್ಲಿ ಬಿಡುವ ಚಿಕ್ಕ ಹರಿಗೋಲಿಗೆ ಒಂದು ಕಾಸು, ದೊಡ್ಡ ಹರಿಗೋಲಿಗೆ ಎರಡು ಕಾಸು ಹಣವನ್ನು ನೀಡುವುದಾಗಿ ತಿಳಿಸಲಾಗಿದೆ. ಅಂಬಿಗರು ಇಲ್ಲಿ ವ್ಯಾಪಕವಾಗಿ ನೆಲೆಸಿದ್ದು ಸೂರ್ಯ ಚಂದ್ರರ ಪರ್ಯಂತ ನಡೆಸಿಕೊಂಡು ಹೋಗಲು ಅಂಬಿಗರ ಕುಲದೇವತೆ ಶ್ರೀ ಗಂಗಾದೇವಿಯನ್ನು ಸಾಕ್ಷೀಕರಿಸಲಾಗಿದೆ. ಅರಸ ಇವರಿಗೆ ಭೂದಾನ, ಕತ್ತಿ ಬಿರುವ ಅಧಿಕಾರಗಳನ್ನು ಕೊಟ್ಟರೆ ಅದಕ್ಕೆ ಪರ್ಯಾಯವಾಗಿ ಅಂಬಿಗರು ದೇವಾಲಯಗಳಿಗೆ ಉದಾರವಾಗಿ ದಾನ ಮಾಡಿದ್ದು ಶ್ಲಾಘನೀಯ ಕಾರ್ಯ.

ಸಾಹಿತ್ಯದಲ್ಲಿ ಅಂಬಿಗರ ಕಸುಬಿನ ಕುರಿತು ದಾಖಲೆಗಳಿವೆ.

ಕೊಡಹಿ ಕೈಕಾಲ್ಗಳನು ತನುಬಲ
ವುಡುಗಿ ಬಸವಳಿದ ಬಲೆ ಕಂಬನಿ
ಗಡಲ ತೆಪ್ಪದವೋಲು ತನಿಗೆಡದಸುರನಂಗದಲಿ
ಮಿಡುಕುತಿರಲಾ ಕ್ಷಣ ಕವಳ ಬಸು
ರೊಡೆದು ಬಿದ್ದುದು ಗರ್ಭವವನಿಗೆ
ಮೃಡನಪರ ರೂಪಿಸಲು ದುರ್ಧರ ತ್ರೀವ್ರ ತೇಜದಲ್ಲಿ.[೩೬೨]

ಇಲ್ಲಿ ಅಂಬಿಗರು ಹೇಗೆ ತೆಪ್ಪವನ್ನು ನಡೆಸುತ್ತಿದ್ದರು ಎಂಬುದರ ವಿವರಣೆಯಿದೆ.

ಎಡೆಗುತ್ತಿಗಳನಲ್ಲಿಗಲ್ಲ ನಿಂದಪ್ರಿಯ
ನಿಡುಗಲ್ಲುಗಳನವರೊಳಗೆ
ಎಡೆಯಾಡುತಿಹ ದೋಣಿ ದುಗ್ಗಿ ಕಪ್ಪಲು ದೊಡ್ಡ
ಹಡಗುಗಳಿರವ ನೋಡಿದರು.[೩೬೩]

ಅಂಬಿಗರು ನದಿಗಳಲ್ಲಿ ಹೇಗೆ ದೋಣಿಗಳನ್ನು ನಡೆಸುತ್ತಿದ್ದರು ಹಾಗೂ ಅವರು ಆಡಿಸುತ್ತಿದ್ದ ಕೋಲು ಹೇಗೆ ಹಾವಿನಂತೆ ಹೆಡೆಯಾಡುತ್ತಿತ್ತು ಎಂಬುದರ ವಿವರವಿದೆ.

ಆನೆಗಳ್ಳಗಳು ಮತ್ತಾ ರಥ ಪಡಗುನ
ಮೀನ ತುರಂಗ ತರಂಗ
ಆ ನೆಲದಗಲದೊಳಾದಿ ಚಕ್ರಶನ
ಸೇನೆ ನಡೆದುದಬ್ಧಿಯಂತೆ.[೩೬೪]
ತಂಗಾಳಿಯೆನಿಪ ನಟ ಭಯಿತ್ರವ ನಚ್ಚಣಿ ತ
ರಂಗಾಕುಳಂ ಮಾತ್ರವಡೆದಸವೆ ತಾಳೆ ಬಹು
ಸಂಗಮಾದಖಿಳ ಜಲಚರದಂಲಗಳ ವಾದ್ದುವಿಂಗಡಂ ಗಾನರಸದಿ
ಬಂಗುರಿಪ ತುಂಬೆಗಳ ಗಾವರಂ ಗಾನಮಿಗೆ
ರಂಗಿಸುವ ಕೇಳುವಯ ನಿಟ್ಟಪ ಸಮುದ್ರೇಶ
ಮಂಗಲ ತ್ಯಾಗಪಟದೆಡೆಗೆ ಚಿಮ್ಮುಟ ರತ್ನವಂಗ ವಾಯ್ತುವಧಿನಾಟ್ಯ.[೩೬೫]

ಇಲ್ಲಿ ಅಂಬಿಗನು ಭಯಿತ್ರವೆ. ಅಂದರೆ ದೋಣಿಯನ್ನು ನೀರಿನಲ್ಲಿ ನಡೆಸುವಾಗ ಹೇಗೆ ಜಲಚರಗಳು ಕಾಣುತ್ತಿದ್ದವು ಅವುಗಳು ಎದುರಾಗುವಾಗ ಹೇಗೆ ಶಬ್ದ ಬರುತ್ತಿತ್ತು ಎಂಬುದನ್ನು ತಿಳಿಸಲಾಗಿದೆ.

ಪರಮ ಶ್ರೀಗುರುಮೂರ್ತಿ ಪಾವನ ಪರಂಜ್ಯೋತಿ ಸ್ಫುರದ್ರೂಪ. ಭಾ
ಸುರ ಸಚ್ಚಿದ್ರಸಪೂರ್ಣ ನಿಷ್ಕಳ ಕಳಾಸಂಯುಕ್ತ ಸಂಸಾರ ದು
ಸ್ತರ ನೀರಾಕರ ಕರ್ಣಾಧಾರ ದುರತಧ್ವಾಂತಾರ್ಕ ನಿನ್ನಂಘ್ರಿಪಂ
ಕರುಹಂಗಳ್ ಶರಣಂಗಳಕ್ಕೆ ಮಗಜಸ್ರಂ ಶ್ರೀ ವೃಷಾಧೀಶ್ವರಾ.[೩೬೬]

ಇಲ್ಲಿ ಕರ್ಣಾಧಾರೆ ಅಂದರೆ ನಾವಿಕ ಹೇಗೆ ತನ್ನ ಕೆಲಸದಲ್ಲಿ ನಿರತನಾಗಿರುತ್ತಿದ್ದ ಎಂಬುದನ್ನು ಕವಿ ತಿಳಿಸಿದ್ದಾನೆ.

ಕಣಿಕವಿಲ್ಲದ ಊಟ! ಬಣಿತೆಯಿಲ್ಲದೆ ಬದುಕು
ಎಣಿಕೆಯಿಲ್ಲದವಳ ಮನೆವಾರ್ತೆ ಹಗಲವು
ಮುಣುಕಿವಂತಕು ಪರಮಾರ್ಥ.[೩೬೭]

ಮನುಷ್ಯ ಬದುಕಬೇಕಾದರೆ ಊಟ, ಮನೆಯನ್ನು ನಡೆಸಬೇಕಾದರೆ ಹಣಕಾಸಿನ ವಿಚಾರದಲ್ಲಿ ಲೆಕ್ಕಚಾರವಿರದಿದ್ದರೆ ಹೇಗೆ ಏರುಪೇರಾಗುತ್ತದೊ ಹಾಗೆ ಅಂಬಿಗನಿಗೆ ಹರಗೋಲು ಇರದಿದ್ದರೆ ಏರುಪೇರಾಗುವುದು ಎಂದು ಸರ್ವಜ್ಞ ತನ್ನ ವಚನದಲ್ಲಿ ಹೇಳಿದ್ದಾನೆ.

ಕೆಲವರು ಮೃಗಜಲವ ನಿಜ ಜಲವೆಂಬ ಭ್ರಾಂತಿಯಲ್ಲಿ
ಹರಿಗೆಯನು ಹರಿಗೋಲು ಮಾಡಿಕೊಂಡು ವ್ಯರ್ಥ ಯತ್ನವೆ ಮಾಡಿ ಬಳಲುತ್ತಿದ್ದು
ದಾಂಟಿ ಜೀವವುಳಿದರೆ ಸಾಕು ತಮ್ಮದೆಂದು.[೩೬೮]

ಕೃಷ್ಣದೇವರಾಯನ ಕಾಲದಲ್ಲಿ ಮಂಡಲಾಧಿಪತಿ ಕೆಂಪು ಸಮುದ್ರದಲ್ಲಿದ್ದಾಗ ೧೨,೦೦೦ ಅಂಬಿಗರೊಂದಿಗೆ ಬಯಲುಗಳನ್ನು ಮತ್ತು ಗುಡ್ಡಗಳನ್ನು ಆವರಿಸಿದನು ಮತ್ತು ನದಿಗಳ ಪ್ರವಾಹವನ್ನು ತಡೆಹಿಡಿದ[೩೬೯] ಅಂದರೆ ಅಂದು ಅಂಬಿಗರು ಸಹ ಸೈನಿಕರ ಕೆಲಸವನ್ನು ಮಾಡುತ್ತಿದ್ದರು.

ಅಂಬಿಗರು ಹೇಗೆ ಬಂದರು ಎಂಬುದಕ್ಕೆ ಒಂದು ಐತಿಹ್ಯವಿದೆ. ಯಮುನಾ ನದಿಯ ಅಂಬಿಗರ ಮುಖಂಡ ಉಚ್ಚೈಶ್ರವಸ್(ದಾಶರಾಜ) ಎಂಬಾತ ಮನೆಯಲ್ಲಿ ಯಾರೊಂದಿಗೊ ಮಾತನಾಡುತ್ತಿದ್ದ. ಬಲಿಷ್ಠವಾದ ಮೀನೊಂದನ್ನು ತಂದ ಅಂಬಿಗರು ಅಡಿಗೆಗೆ ಅದನ್ನು ಸೀಳಿದಾಗ ಆ ಮೀನಿನ ಗರ್ಭದಲ್ಲಿ ಒಂದು ಹೆಣ್ಣು ಮಗು ಒಂದು ಗಂಡು ಮಗು, ಅವು ಅಳಲಾರಂಭಿಸಿದಾಗ ಹೊರಗಿದ್ದ ದಾಶರಾಜ ಆಶ್ಚರ್ಯಚಕಿತನಾದ ಅಡಿಗೆ ಮನೆಯಿಂದ ಮಕ್ಕಳ ಅಳು ಕೇಳಿಬಂದರೆ ಅ ಪುತ್ರಕನಾದವನಿಗೆ ಅಚ್ಚರಿಯಾಗದಿದ್ದೀತೆ? ಉತ್ಸುಕತೆ ತಾಳಲಾರದೆ ಅವನೇ ಅಡಿಗೆ ಮನೆಗೆ ನುಗ್ಗಿದ. ದಾಶರಾಜನ ಮುಖ ನೋಡಿ ಅಂಬಿಗರಿಗೆ ಮಹದಾನಂದವಾಯಿತು. ನಮ್ಮ ಒಡೆಯನಿಗೆ ಎರಡು ಮಕ್ಕಳು ಸಿಕ್ಕಂತಾಯಿತಲ್ಲ ಎಂಬ ಧನ್ಯತಾ ಭಾವದ ಉದ್ಗಾರವನ್ನು ತೆಗೆದರು. ಮಕ್ಕಳನ್ನು ಎತ್ತಿಕೊಂಡು ಹಿಗ್ಗಿದ ದಾಶರಾಜ. ಇಂಥ ಆಶ್ಚರ್ಯಗಳು ಅವನಿಗೆ ಹೊಸದೇನಲ್ಲವಲ್ಲ ಮಕ್ಕಳಿಬ್ಬರನ್ನು ಪತ್ನಿಯ ಕೈಗೆ ಕೊಟ್ಟು

ರಾಜಪುರೋಹಿತರಿಗೆ ಹೇಳಿಕಳುಹಿದ. ರಾಜಪುರೋಹಿತರಿಗೆ ಮಕ್ಕಳನ್ನು ನೋಡಿದ ಕೂಡಲೇ ಮುಖ ಅರಳಿತು. ಹಿಂದು ಮುಂದುಗಳನ್ನು ಸರಳವಾಗಿ ನಿರೂಪಿಸಬಲ್ಲ ಪುರೋಹಿತರು ಹೇಳಿದರು "ದಾಶರಾಜ, ನೀನು ಪುಣ್ಯವಂತ ಈ ಮಕ್ಕಳು ಉಪರಿಚರ ವಸ್ತುವಿನ ಸತ್ತ್ವ ಸಂಜಾತರು, ಆದ್ರಿಕೆ ಎಂಬ ಅಪ್ಸರೆ ಬ್ರಹ್ಮನ ಶಾಪದಿಂದ ಮೀನಾಗಿ ಹುಟ್ಟಿದಳು, ಗಗನ ಸಂಚಾರಿಯಾಗಿದ್ದ ಉಪರಿಚರ ವಸ್ತುವಿನ ಮೀರ್ಯವು ಈಕೆಯ ಗರ್ಭದಲ್ಲಿ ಸೇರಿ ಹೀಗೆ ಎರಡು ಮಕ್ಕಳಾಗಿ ಬೆಳೆದಿವೆ".[೬೦]

ಭದ್ರೇ ಈ ಮಾತನ್ನು ಕೇಳುತ್ತಾ ಇರುವಾಗ ರಾಜಪುರೋಹಿತರು ನೀನು ಎರಡು ಮಕ್ಕಳನ್ನು ಬಯಸುವುದು ಸರಿಯಲ್ಲ, ನಿನ್ನಂತೆ ಮಕ್ಕಳಿಗಾಗಿ ಹಂಬಲಿಸುತ್ತಿರುವ ನತದೃಷ್ಟನೊಬ್ಬನಿಗೆ ಒಂದು ಮಗುವನ್ನು ಪ್ರಧಾನ ಮಾಡು ಉಭಯರಿಗೂ ಹಿತವಾಗುತ್ತದೆ. ಇಬ್ಬರೂ ಮಕ್ಕಳು ಚಂದ್ರವಂಶವನ್ನು ಬೆಳಗಿಸುತ್ತಾರೆ.

ತಮ್ಮ ಮಾತೆಂದರೆ ವೇದವಾಕ್ಯ ಹಾಗಿದ್ದಲ್ಲಿ ನಾನು ಈ ಹೆಣ್ಣು ಮಗುವನ್ನು ಇರಿಸಿಕೊಳ್ಳುತ್ತೇನೆ. ನನ್ನ ಕುಲಕಸುಬನ್ನೆಲ್ಲ ಹೇಳಿಕೊಟ್ಟು ಗಂಡು ಮಗುವಿನಂತೆಯೇ ಶ್ರದ್ಧೆಯಿಂದ ಬೆಳೆಸುತ್ತೇನೆ. ಈ ಗಂಡು ಮಗುವನ್ನು ತಾವೇ ಯಾರಾದರೂ ಯೋಗ್ಯರೊಬ್ಬರಿಗೆ ಕೊಡುವುದು ಲೇಸು.

ಮತ್ಸ್ಯ ದೇಶದ ರಾಜರೂ ಸಂತಾನವಿಲ್ಲದೆ ಸಂಕಟಪಡುತ್ತಿದ್ದಾರೆ. ಅಲ್ಲಿ ಮಗು ಬೆಳೆಯಲಿ ದಾಶರಾಜನ ಮಗಳು ಸತ್ಯವತಿ ಹೆತ್ತ ತಾಯಿಯ ಸಂಸರ್ಗದಿಂದ 'ಮತ್ಸ್ಯಗಂಧಿ' ಎನ್ನಿಸಿಕೊಂಡಳು. ದೋಣಿ ನಡೆಸುವುದು, ಮೀನು ಹಿಡಿಯುವುದು ಅವಳಿಗೆ ತುಂಬ ಪ್ರಿಯವಾದ ವೃತ್ತಿಗಳಾಗಿದ್ದವು. ಉಡಿಯಲ್ಲಿ ಮೀನು ತುಂಬಿಕೊಂಡಿರುತ್ತಿದ್ದುದರಿಂದ ಗೆಳತಿಯರೆಲ್ಲ ಅವಳನ್ನು ಮತ್ಸ್ಯಗಂಧಿ ಎಂದೇ ಕರೆಯತೊಡಗಿದರು.[೬೧]

ವಿಜಯನಗರ ಕಾಲದಲ್ಲಿ ಅಂಬಿಗರು ಎಲ್ಲಿ ನೆಲಸಿದ್ದರು ಎಂಬುದಕ್ಕೆ ಅವರು ತುಂಗಭದ್ರಾದ ಎರಡು ದಂಡೆಗಳ ಆಸುಪಾಸಿನಲ್ಲಿ ನಿಂತ ಇಬ್ಬರು ವೀರರು ತಮ್ಮ ಹುಟ್ಟುಗಳನ್ನು ಕೈಯಲ್ಲಿ ಹಿಡಿದಿರುವಂತೆ ಶಿಲ್ಪದ ವಿವರಗಳನ್ನು ಬಿಡಿಸಲಾಗಿದೆ. ಈ ರೀತಿಯ ವೀರಗಲ್ಲುಗಳು ಅಪರೂಪವೆಂದು ಹೇಳಬಹುದಾಗಿದೆ. ಅಂಬಿಗರು ತುಂಗಭದ್ರಾದ ಎರಡು ದಂಡೆಗಳ ಆಸುಪಾಸಿನಲ್ಲಿ ವಾಸಿಸಿದರೂ, ನಿಖರವಾಗಿ ನೆಲೆಯೂರಿದ ತಾಣದ ಬಗ್ಗೆ ಖಚಿತತೆ ಇಲ್ಲ. ನದಿ ದಾಟುವ ಮಾರ್ಗಗಳಲ್ಲಿ ನೆಲೆ ನಿಂತರೂ, ಇವರ ವಾಸಸ್ಥಳ ಆನೆಗೊಂದಿ ಪರಿಸರವನ್ನು ಸಂಕೇತಿಸುತ್ತದೆ. ಈಗಿನ ತಳವಾರಘಟ್ಟದ ಸಮೀಪ ನೆಲೆಸಿರಬೇಕು. ವಸುಂಧರಾ ಫಿಲಿಯೋಜಾ ಅವರು ದಾಸರ ಮಂಟಪ ಎಂದು ಕರೆಯುವ ಪುರಂದರ ಮಂಟಪವು ಹಿಂದೆ ನದಿ ದಾಟಿ ಹೋಗಲು ಹರಿಗೋಲ ದಾರಿ ಕಾಯಲು ವೀಕ್ಷಣಾಲಯವಾಗಿದ್ದಿತು[೬೨] ಎಂದಿರುವರು. ನದಿಯುದ್ದಕ್ಕೂ ಸಂಪರ್ಕಮಾರ್ಗಗಳು ಇದ್ದುದರಿಂದ ಸಾಗಾಣಿಕೆಗೆ ಯೋಗ್ಯವಾದ ಜಾಗದಲ್ಲಿ ಅಂಬಿಗರು ನೆಲೆಸಿರುತ್ತಾರೆ. ಮೇಲಿನ ಸ್ಥಳವು ಹರಗೋಲು ನಿಲ್ಲುವ ಸ್ಥಳವಾಗಿರಬೇಕೇ ಹೊರತು ವೀಕ್ಷಣಾಲಯವಾಗಿರಲಿಕ್ಕಿಲ್ಲ. ಪ್ರಸ್ತುತ ಮಂಟಪವನ್ನು ೧೯೩೦ರಲ್ಲಿ ಕಟ್ಟಿಸಿ ಅದಕ್ಕೆ ಪುರಂದರದಾಸರ ಮಂಟಪ ಎಂದು ನಾಮಕರಣ ಮಾಡಿದ್ದರಿಂದ ಮೇಲಿನ ಅಭಿಪ್ರಾಯ ತಾಳುವುದರಲ್ಲಿ

ಅನುಮಾನವಿಲ್ಲ. ಇವರೇ ಮುಂದುವರೆದು ತಿಳಿಸುವಂತೆ ರಾಮದೇವರ ಗುಡಿಯ ಹಿಂದೆ ಎರಡು ದೋಣಿಗಳಿವೆ. ಅವುಗಳಲ್ಲಿ ಒಂದು ರಾಮನ ದೋಣಿ ಇನ್ನೊಂದು ಲಕ್ಷ್ಮಣ ದೋಣಿ ಎಂದು ಜನಾಭಿಪ್ರಾಯವನ್ನು ಸಮರ್ಥಿಸಿದ್ದಾರೆ. ಇಲ್ಲಿ ಯಾವಾಗಲೂ ನೀರಿರುತ್ತದೆ. ಇವುಗಳ ದಂಡೆ ಮೇಲೆ ಲಿಂಗ, ನಂದಿಯಿದೆ. ಈ ದೋಣಿಗಳ ಹಿಂದೆ ಅತೀ ಪುರಾತನ ಶಿವಾಲಯವಿರುವುದರಿಂದ ಅಂಬಿಗರ ಆರಾಧ್ಯದೇವತೆ ಅದಾಗಿರಬೇಕು. ಹಂಪಿ ನೋಡಿದ ನಂತರ ಯಾತ್ರಿಕರು ಆನೆಗೊಂದಿಗೆ ಹೊಗುವಾಗ ರಾಮಚಂದ್ರ(ಚಕ್ರತೀರ್ಥ) ದೇವಾಲಯದ ಬಳಿ ಇರುವ ಪುರಂದರ ಮಂಟಪದಿಂದ ಹೋಗುತ್ತಿದ್ದಿರಬೇಕು. ನದಿಯಲ್ಲಿ ಇಳಿಮುಖ ಸಾರಿಗೆಗೆ ಅನುಕೂಲವಾಗಿರುವುದರಿಂದ ಆಯಾಸವಿಲ್ಲದೆ ಹರಗೋಲನ್ನು ಹತ್ತಿ ಕೆಳಗಿನ ದಡ ತಲುಪಬಹುದಾಗಿದೆ.

ಹಂಪಿಯ ಪ್ರತಿಯೊಂದು ದೇವಾಲಯಗಳನ್ನು ಗಮನಿಸಿದಾಗ ಉತ್ತರಕ್ಕೆ ನದಿ ತೀರದಲ್ಲಿರುವ ಆನೆಗೊಂದಿ ಮಹಾದ್ವಾರ ಕಾಣುತ್ತದೆ. ಇದು ಅಂಬಿಗರ ನೆಲಸುತಾಣ ಎಂಬುದಕ್ಕೆ ವೀರಗಲ್ಲುಗಳೆರಡು ಕೋಟೆ ಪ್ರವೇಶದ್ವಾರದಲ್ಲಿ ಪಶ್ಚಿಮಕ್ಕೆ ಮುಖಮಾಡಿ ನಿಂತಿರುವುದನ್ನು ಗಮನಿಸಲಾಗಿದೆ. ಇವುಗಳ ಬಗ್ಗೆ ಆರ್.ಶೇಷಶಾಸ್ತ್ರಿಯವರು ಜನರನ್ನು ಒಂದು ದಡದಿಂದ ಮತ್ತೊಂದು ದಡಕ್ಕೆ ಸಾಗಿಸುವಲ್ಲಿ ತಮ್ಮ ಸಾಹಸವನ್ನು ತೋರಿಸಿ ನೀರಿನಲ್ಲಿ ಈ ವೀರಗಲ್ಲುಗಳು ಹಂಪೆಯಿಂದ ತುಂಗಭದ್ರಾ ನದಿಯನ್ನು ದಾಟಿ ಆನೆಗೊಂದಿಗೆ ಹೋಗುವ ದಾರಿಯಲ್ಲಿವೆ. ಇಂದಿಗೂ ಅಂಬಿಗರು ಅವುಗಳನ್ನು ವಿಶೇಷ ಸಂದರ್ಭಗಳಲ್ಲಿ ಆರಾಧಿಸುತ್ತಾರೆ ಮತ್ತು ಅವುಗಳನ್ನು ವೀರಗಾರರು ಎಂಬುದಾಗಿ ಕರೆಯುತ್ತಾರೆ. ನಿಂತ ಇಬ್ಬರು ವೀರರು ತಮ್ಮ ಹುಟ್ಟುಗಳನ್ನು ಕೈಯಲ್ಲಿ ಹಿಡಿದಿರುವಂತೆ ಶಿಲ್ಪದ ವಿವರಗಳನ್ನು ಬಿಡಿಸಲಾಗಿದೆ. ಈ ರೀತಿಯ ವೀರಗಲ್ಲುಗಳು ಅಪರೂಪವೆಂದು ಹೇಳಬಹುದು.[೩೭೩] ಈ ವಿವರಕ್ಕೆ ಪೂರಕವಾಗಿ ಡೊಮಿಂಗೋ ಪಾಯಸ್‌ನು ಅಂಬಿಗರು ನದಿ ತೀರದಲ್ಲಿ ಹರಿಗೋಲು ಹಾಕುತ್ತಿದ್ದರಲ್ಲದೆ, ಹಂಪೆ ಮತ್ತು ಆನೆಗೊಂದಿಗಳಿಗೆ ಪರಸ್ಪರ ಸಂಪರ್ಕ ಕಲ್ಪಿಸುತ್ತಿದ್ದರು[೩೭೪] ಎಂಬುದನ್ನು ತಿಳಿಸಿದ್ದಾರೆ.

ಅಂಬಿಗತನವು ವಂಶಪರಂಪರೆಯಾಗಿ ತಲೆಮಾರುಗಳನ್ನು ಸವೆಸಿದ ವೃತ್ತಿ. ವಿಜಯನಗರ ಕಾಲಕ್ಕೆ ಇದು ಪವಿತ್ರ ಕಾಯಕವಾಗಿದ್ದಿತು. ತಪಸ್ಸಿಗೆ, ಮೋಕ್ಷಸಾಧನೆಗೆ ಆವಾಸಕೇಂದ್ರಗಳಾದ ನದಿಗಳು ಅಂಬಿಗರಿಗೆ ಗಂಗೆಯಷ್ಟೇ ಪವಿತ್ರ ಮತ್ತು ಭಕ್ತಿದಾಯಕವಾಗಿವೆ. ತಂದೆಯಿಂದ ಮಗ, ಮಗನಿಂದ ಮೊಮ್ಮಗನಿಗೆ ರವಾನೆಯಾಗುವ ಅಂಬಿಗತನವು ವಾಣಿಜ್ಯೋದ್ಯಮಕ್ಕೆ ಹಾಸು ಹೊಕ್ಕಾದ ಪರಿಸರವನ್ನು ನಿರ್ಮಿಸಿತ್ತು. ಭೂತಕಾಲದಲ್ಲಿ ತಳವಾರಘಟ್ಟ ಮತ್ತು ಆನೆಗೊಂದಿಗಳ ನಡುವೆ ಎರಡು ದಡಗಳನ್ನು ಕೂಡಿಸುವ ಸೇತುವೆಗಳಿರಲಿಲ್ಲ. ಅಂಬಿಗರಿಗೆ ಹರಗೋಲು ನಡೆಸುವ ವೃತ್ತಿ ಜೀವಂತವಾಗಿತ್ತು. ದೇಶೀಯ ಸಂಸ್ಕೃತಿಯ ಪ್ರತೀಕವಾಗಿರುವ ಹರಗೋಲು ಆಧುನಿಕ ಸಂಪರ್ಕ ಸಾಧನಗಳ ಹಿನ್ನೆಲೆಯಲ್ಲಿ ಮರೆಯಾಗುವ ದಿನಗಳು ದೂರ ಇಲ್ಲ. ಹೊಲ, ಮನೆಗಳಿಲ್ಲದೆ, ಹರಗೋಲುಗಳನ್ನೇ ನಂಬಿದ ಅಂಬಿಗರಿಗೆ ಭವಿಷ್ಯದ ದಿನಗಳು ಕರಾಳವಾಗಿವೆ.

ವಿಜಯನಗರ ಕಾಲದ ಮೀನುಗಾರಿಕೆ ಆಹಾರ ಮಾಧ್ಯಮವಾಗಿ ಮತ್ತು ವಾಣಿಜ್ಯ ವೃತ್ತಿಯಾಗಿ ವೃದ್ಧಿಯಾಗಿತ್ತು. ಅದೇ ರೀತಿ ಇಲ್ಲದಿದ್ದರೆ ಅಂಬಿಗತನ ಪ್ರಯಾಣಿಕರು ನದಿ ದಾಟುವುದು ತುಂಬಾ ಕಷ್ಟ ಎಂಥವರನ್ನು ಭೇದ-ಭಾವಗಳಿಲ್ಲದೆ ದಡದಿಂದ ದಡಕ್ಕೆ ತಲುಪಿಸುವ ಕೆಲಸವನ್ನು ಅಂಬಿಗರು ಮಾಡುತ್ತಿದ್ದರು. ಇವರಿಗೆ ರಾಜಮನ್ನಣೆಯಿದ್ದು ವಿಜಯನಗರ ಅವಧಿಯಲ್ಲಿ ರಾಜರಿಂದ ಪೋಷಣೆಗೊಂಡು ಅನೇಕ ಕಟ್ಟು-ನಿಟ್ಟಿನ ಮತ್ತು ಉದಾರತೆಯ ಜೀವನವನ್ನು ನಡೆಸಿದ್ದು ಮಹತ್ವವಾದುದು. ಇಂಥಾ ಅನೇಕ ಸಂಗತಿಗಳು ಈ ಬಗ್ಗೆ ಇನ್ನಷ್ಟು ಬೆಳಕು ಚೆಲ್ಲುತ್ತವೆ.

೧೩. ಬ್ರಾಹ್ಮಣ

ವಿಜಯನಗರ ಕಾಲದ ಬ್ರಾಹ್ಮಣರು ತ್ರಿಮತಗಳಲ್ಲೊಂದಕ್ಕೆ ಅಂದರೆ ಸ್ಮಾರ್ಥ, ಮಾಧ್ವ ಅಥವಾ ಶ್ರೀ ವೈಷ್ಣವ ಮತಕ್ಕೆ ಸೇರಿದವರು. ಇವರು ಕ್ರಮವಾಗಿ ಶಂಕರಾಚಾರ್ಯ, ಮಧ್ವಾಚಾರ್ಯ ಮತ್ತು ರಾಮಾನುಜಾಚಾರ್ಯರ ಅನುಯಾಯಿಗಳಾಗಿದ್ದವರು.[೩೨೫] ಈ ವರ್ಗಗಳಲ್ಲಿ ಧಾರ್ಮಿಕ ಅಧ್ಯಯನಾದಿಗಳನ್ನು ನಡೆಸುತ್ತಿದ್ದ ವೈದಿಕರು, ವೃತ್ತಿಜೀವಿಗಳು, ಅಧಿಕಾರಿಗಳು, ನೌಕರರು, ಜಮೀನುದಾರರು, ವರ್ತಕರು ವಿವಿಧ ಕಸುಬುಗಳನ್ನು ನಡೆಸುತ್ತಿದ್ದವರು ಸೇರಿದ ಲೌಕಿಕರು ಇರುತ್ತಿದ್ದರು ಇವರುಗಳಲ್ಲಿ ಹಲವಾರು ಉಪಪಂಗಡಗಳಿರುತ್ತಿದ್ದವು.

ಸ್ಮಾರ್ಥರು ಅದ್ವೈತ ಸಿದ್ದಾಂತವನ್ನು ಒಪ್ಪಿಕೊಂಡವರು, ಅವರಲ್ಲಿ ಸೀರುನಾಡು, ಬಡಗನಾಡು, ಮುಲುಕನಾಡು, ಬಬ್ಬೂರು, ಕಮ್ಮೆ, ಎಲುಚುಕೆಮ್ಮೆ, ಕರ್ಹಾಡಿ, ಚಿತ್ಪಾವನ, ಹವೀ, ಹೊಯ್ಸಳ ಕರ್ನಾಟಕ, ಮೂಗೂರು, ಅಥವಾ ಹಳೇ ಕರ್ನಾಟಕ, ತೈಯರ್[೩೨೬] ಇತ್ಯಾದಿ ವಿಭಾಗಗಳಿದ್ದವು.

ವಿಜಯನಗರ ಕಾಲದಲ್ಲಿ ಇವರಲ್ಲಿ ಎರಡು ಮುಖ್ಯವಾದ ವರ್ಗಗಳಿದ್ದವು ತೆಂಗಲೈ(ದಕ್ಷಿಣದವರು) ಮತ್ತು ವಡಗೈ(ಉತ್ತರದವರು) ಆ ಕಾಲದಲ್ಲಿ ಎರಡೂ ಪಂಗಡಗಳ ನಡುವೆ ವಿವಾಹ ಮತ್ತು ಸಹಪಂಕ್ತಿ ಭೋಜನ ಮೊದಲಾದ ಸಾಮಾಜಿಕ ಸಂಪರ್ಕವು ತುಂಬಾ ಕಡಿಮೆಯಾಗಿತ್ತು. ಕರ್ನಾಟಕ ಶ್ರೀ ವೈಷ್ಣವರಲ್ಲಿ ಹಲವರು ತಮಿಳನ್ನು ಕೆಲವರು ತೆಲುಗನ್ನು ಮನೆಮಾತಾಗಿ ಆಡುತ್ತಿದ್ದರು. ಕಂಚಿ ಮತ್ತು ಶ್ರೀ ರಂಗಂಗಳು ಅವರ ಪವಿತ್ರ ಕ್ಷೇತ್ರಗಳಾಗಿದ್ದವು. ಹೆಚ್ಚಾಗಿ ಮಂಡ್ಯತ್ತಾರ್, ಹೆಮ್ಮಗೆಯಾರ್, ತಿರುಮಲೆಯಾರ್, ಕೀಳ್ನಾತ್ತಾರ್, ಮತ್ತು ಸ್ವಯಮಾಚಾರ್ಯರ್ ಇವು ಶ್ರೀ ವೈಷ್ಣವರಲ್ಲಿದ್ದ ಉಪಪಂಗಡಗಳು ಆಗ ಅಹೋಬಲ ಮಠ ಮತ್ತು ಪದಕಾಲ ಮಠಗಳು ಅವರ ಮುಖ್ಯ ಕೇಂದ್ರಗಳಾಗಿದ್ದವು.[೩೨೨]

ವಿಜಯನಗರ ಕಾಲದ ಸಾಮಾಜಿಕ ರಚನೆಯನ್ನು ಅಭ್ಯಸಿಸುವಾಗ ಜಾತಿಪದ್ಧತಿ ಪ್ರಬಲ ರಚನೆಯಾಗಿ ಕಂಡುಬರುತ್ತದೆ. ಭಾರತೀಯ ಸಮಾಜವು ತನ್ನ ಸಾಂಪ್ರದಾಯಿಕ ಮತ್ತು ಪೂರ್ವಾಚಾರಪ್ರಿಯ ಮನೋಭಾವದೊಂದಿಗೆ, ಅತಿನಿಷ್ಠೆಯ ಆಚಾರ ವಿಚಾರ ಮತ್ತು ರೂಢಿಗಳನ್ನು ಆಧಾರವಾಗಿಟ್ಟುಕೊಂಡು ಯಾವುದೇ ಬದಲಾವಣೆಯನ್ನು ಮಾಡಿಕೊಳ್ಳದೆ ವಿಜಯನಗರ ಕಾಲದಲ್ಲಿ ಕೂಡ ಮುಂದುವರೆಯಿತು.

ಕುಲಕಸುಬಿನ ಆಧಾರದ ಮೇಲೆ ರೂಪುಗೊಂಡಿದ್ದ ಸಮಾಜ ಕ್ರಮೇಣ ವರ್ಣವ್ಯವಸ್ಥೆಗೆ ಪರಿವರ್ತನೆಗೊಂಡು, ನಂತರ ಜಾತಿ ವ್ಯವಸ್ಥೆಗೆ ಪರಿವರ್ತನೆಗೊಂಡಿರುವುದು ಈಗಾಗಲೇ

ಸಾಕಷ್ಟು ಚರ್ಚೆಗೆ ಒಳಪಟ್ಟಿದೆ. ವರ್ಣವ್ಯವಸ್ಥೆಗಿಂತ ಮೊದಲು ಜಾತಿಗಳು ಹುಟ್ಟಿಕೊಂಡವು ಎನ್ನುವ ವಾದವೂ ಇದೆ. ವರ್ಣ ಮತ್ತು ಜಾತಿ ಎನ್ನುವ ಪದಗಳ ಬಗ್ಗೆ ಎಷ್ಟೇ ವ್ಯಾಖ್ಯಾನಗಳು ಬಂದರೂ ಅವುಗಳ ಸಂದರ್ಭದಲ್ಲಿ ಗೊಂದಲವಂತೂ ನಿವಾರಣೆಯಾಗಿಲ್ಲ.

ವಿಜಯನಗರ ಸಾಮ್ರಾಜ್ಯವು ಪರಂಪರೆಯಿಂದ ಅನುಷ್ಠಾನದಲ್ಲಿದ್ದ ವರ್ಣ ಅಥವಾ ಜಾತಿ ಪದ್ಧತಿಯ ಆಧಾರದ ಮೇಲೆ ನಿಂತಿದ್ದಿತು. ಧರ್ಮಶಾಸ್ತ್ರಗಳ ಪ್ರಕಾರ ವರ್ಣಗಳು ನಾಲ್ಕು ಅವುಗಳ ಪೈಕಿ ಮೊದಲನೆಯದು ಬ್ರಾಹ್ಮಣ ಅಥವಾ ಪುರೋಹಿತ ವರ್ಗಕ್ಕೆ ಸೇರಿದ್ದಿತು. ಕ್ಷತ್ರಿಯರು ಎರಡನೇ ಸ್ಥಾನ, ವ್ಯಾಪಾರಸ್ಥರು ಮೂರನೆಯ ಮತ್ತು ಉಳಿದವವುಗಳನ್ನು ಶೂದ್ರರೆಂದು ಪರಿಗಣಿಸಿ ನಾಲ್ಕನೆಯ ಸ್ಥಾನವನ್ನು ನಿರ್ದೇಶಿಸಲಾಗಿತ್ತು.

ಜಾತಿಗಳಲ್ಲಿ ಬ್ರಾಹ್ಮಣ ಶ್ರೇಷ್ಠ ಎಂಬುದು ಸಾರ್ವತ್ರಿಕವಾಗಿ ಒಪ್ಪಿತವಾಗಿದ್ದಿತು. ಈ ಕುರಿತು ಸಾಹಿತ್ಯ ಮತ್ತು ಶಾಸನಗಳು ಹೆರಳವಾದ ಮಾಹಿತಿಯನ್ನು ನೀಡುತ್ತವೆ. ಅವುಗಳಲ್ಲಿ ಹದಿನೆಂಟು ಜಾತಿಗಳ ಉಲ್ಲೇಖಗಳಿದ್ದು ಮೊದಲನೆಯದು ಬ್ರಾಹ್ಮಣ ಕೊನೆಯದು ಅಂತ್ಯಜ ಅಥವಾ ಹೊಲೆಯ ಎನ್ನುವ ವಿವರಗಳಿವೆ. ಇದು ಅಂದಿನ ಶ್ರೇಣೀಕೃತ ಸಮಾಜ ವ್ಯವಸ್ಥೆಯ ಯಥಾವತ್ತಾದ ಚಿತ್ರಣವಾಗಿ ಕಂಡುಬರುತ್ತದೆ. ವಿಜಯನಗರ ಪೂರ್ವದಲ್ಲಿ ಅಷ್ಟಾದಶ ಜಾತಿ ಅಥವಾ ಹದಿನೆಂಟು ಜಾತಿ ಎಂಬುದು ಒಂದು ಅಂಗೀಕೃತವಾದ ಮಾತಾಗಿದ್ದಿತು. ಜಾತಿಗಳು ಹದಿನೆಂಟಕ್ಕಿಂತ ಹೆಚ್ಚಾಗಿದ್ದರು ಆ ಮಾತು ಹಾಗೇ ಉಳಿದುಕೊಂಡು ಬಂದಿತು.

ಲಕ್ಷ್ಮೇಶ್ವರದ ಸು ಕ್ರಿ.ಶ. ೭೫೦ರ ಶಾಸನವು ಆ ಬಗ್ಗೆ ಬಹುಶಃ ಮೊದಲ ಉಲ್ಲೇಖ ಇದು ಓಂ ಸ್ವಸ್ತಿ ಶ್ರೀ ವಿಕ್ರಮಾದಿತ್ಯ ಯುವರಾಜರ್ ಪೊರಿಗೆರಿಯೊ ಮಹಾಜನಕ್ಕುಂ ನಗರುಕ್ಕು ಹದಿನೆಂಟು ಪ್ರಕೃತಿಗಳ್ಗುಂ ಕೊಟ್ಟ ಆಚಾರ ವ್ಯವಸ್ಥೆ.[೩೭೮] ಪುಲಿಗೆರೆಯ ಜನರನ್ನು ಈ ಶಾಸನ ಬ್ರಾಹ್ಮಣವರ್ಗ, ವರ್ತಕವರ್ಗ ಮತ್ತು ಹದಿನೆಂಟು ಪ್ರಕೃತಿ (ಜಾತಿ) ಎಂದು ವಿಂಗಡಿಸಿದೆ. ಈ ಶಾಸನದ ಪ್ರಸ್ತುತವೆಂದರೆ ಪ್ರಕೃತಿ ಎಂಬ ಶಬ್ದ ಪ್ರಜೆ, ಜಾತಿ ಎಂಬರ್ಥದಲ್ಲಿ ಬಳಕೆಯಾಗಿರುವುದು. ಹದಿನೆಂಟು ಜಾತಿಗಳಲ್ಲಿ ಮೊದಲನೆಯದು ಬ್ರಾಹ್ಮಣ, ಕೊನೆಯದು ಅಂತ್ಯಜ ಅಥವಾ ಹೊಲೆಯ. ಜಾತಿಗಳಲ್ಲೆಲ್ಲಾ ಬ್ರಾಹ್ಮಣ ಶ್ರೇಷ್ಠ ಹೊಲೆಯ ಕನಿಷ್ಟ ಎಂಬುದು ಸಾರ್ವತ್ರಿಕವಾಗಿ ಒಪ್ಪಿತವಾಗಿದ್ದಿತು. ಜಾತಿಯೊಳೆಲ್ಲ ಉತ್ತಮವಾದ ಜಾತಿಯ ವಿಪ್ರಕುಲ ಎಂಬ ಪಂಪನ ಮಾತಾಗಲಿ, ವಿಪ್ರ ಮೊದಲು ಅಂತ್ಯಜ ಕಡೆಯಾಗಿ[೩೭೯] ಎಂಬ ಬಸವಣ್ಣನವರ ಮಾತಾಗಲಿ ಇದನ್ನು ತಿಳಿಸುತ್ತದೆ. ಬ್ರಾಹ್ಮಣ ಮೊದಲಾಗಿ ಶ್ವಪಚ ಕಡೆಯಾಗಿ ಎಲ್ಲಂಗುರೂ ಜನನವೊಂದೆ ಆಹಾರ ನಿದ್ರೆ ಭಯ ಮೈಥನವೊಂದೆ, ಪುಣ್ಯಪಾಪವೊಂದೆ, ಸ್ವರ್ಗವೊಂದೆ ಬೇರೆಂಬ ಭಂಗಿತರು ನೀವು ಕೇಳಿದೆ![೩೮೦] ಬ್ರಾಹ್ಮಣ ಮೊದಲಾಗಿ ಶ್ವಪಚ ಕಡೆಯಾಗಿ ಎಂಬ ಹಾವಿನಹಾಳ ಕಲ್ಲಯ್ಯನ ಮಾತೂ ಅದನ್ನು ಹೇಳುತ್ತದೆ. ಭೀಮಕವಿಯ ಬಸವ ಪುರಾಣದಲ್ಲಿ ಬಿಜ್ಜಳ ಹದಿನೆಂಟು ವರ್ಣಗಳೂ ಆದಿ ಕಾಲದಲ್ಲಾದವು ಎನ್ನುತ್ತಾನೆ. ದೇವರು ಮನುಷ್ಯನ ಜೊತೆಗೆ ಹದಿನೆಂಟು ಜಾತಿಗಳನ್ನು ಸೃಷ್ಟಿಸಿದನೆಂಬುದು ಅದರ ಸಾರಂಶ. ವರ್ಣ ಎನ್ನುವ ಮಾತು ಜಾತಿ ಎಂಬರ್ಥದಲ್ಲಿ ಬಳಕೆಯಾಗಿದೆ.[೩೮೧] ಇಲ್ಲಿ ಆ ಹದಿನೆಂಟು ಜಾತಿ ಜನರ ವೃತ್ತಿಗಳನ್ನು ಹದಿನೆಂಟು ಕಾಯಕವೆಂದಿದ್ದಾನೆ.[೩೮೨] ಕನ್ನಡ ಕಾಯಕದ ಅಮ್ಮಿದೇವ ಹಾಗೂ

ಇಬ್ಬರು ವಚನಕಾರರು ಅ ಹದಿನೆಂಟು ಜಾತಿಗಳ ಪಟ್ಟಿ ಕೊಟ್ಟಿದ್ದಾರೆ. ಅ ಜಾತಿಗಳು ಸೊಡ್ಡಳ ಬಾಚರಸನ ಪ್ರಕಾರ ಪ್ರತಿ ವ್ಯಕ್ತಿಯಲ್ಲಿಯೂ ಇವೆ. ಸೊಡ್ಡಳ ಬಾಚರಸನ ವಚನ ಹೀಗಿದೆ.

> ಶಿಖಿ ಬ್ರಾಹ್ಮಣ, ನಯನ ಕ್ಷತ್ರಿಯ, ನಾಶಿಕ ಬಣಜಿಗ, ಅಧರ ಒಕ್ಕಲಿಗ
> ಕರ್ಣ ಗೊಲ್ಲ, ಕೊರಳು ಕುಂಬಾರ, ಬಾಹು ಪಂಚಾಳ, ಅಂಗೈ ಉಪ್ಪಾರ
> ನಖ ನಾಯಿಂದ, ಒಡಲು ಡೊಂಬ, ಬೆನ್ನು ಅಗಸ, ಚರ್ಮ ಬೇಡ,
> ಪೃಷ್ಠಾಸ್ಥಾನ ಕಬ್ಬಿಲಿಗ, ಒಳದೊಡೆ ಹೊಲೆಯ,
> ಮೊಳಕಾಲು ಈಳಿಗ, ಕಣಕಾಲು ಸಮಗಾರ,
> ಮೇಗಾಲು ಮಚ್ಚಿಗ, ಚಲಪಾದವೆಂಬ ಅಂಗಾಲು ಶುದ್ಧಮಾದಿಗ ಕಾಣಿರೋ
> ಇಂತೀ ಹದಿನೆಂಟು ಜಾತಿ ತನ್ನಲ್ಲಿ ಉಂಟು.[೩೫]

ಅಂಬಿಗರ ಚೌಡಯ್ಯನು ಹದಿನೆಂಟು ಕುಲಜಾತಿ ಉಲ್ಲೇಖ ಮಾಡಿ ಹದಿನೇಳನ್ನು ಮಾತ್ರ ಕೊಡುತ್ತಾನೆ. ಅಲ್ಲಿ ಬಿಟ್ಟು ಹೋಗಿರುವ ಬ್ರಾಹ್ಮಣನನ್ನು ಸೇರಿಸಿದರೆ ಸಂಖ್ಯೆ ಹದಿನೆಂಟಾಗುತ್ತದೆ. ಚೌಡಯ್ಯನ ಪಟ್ಟಿ ಹೀಗಿದೆ.

> ಕಣ್ಣೇ ಕಂಚುಗಾರ, ಕರ್ಣವೇ ಬಣಜಿಗ, ಮೂಗೇ ಈಳಿಗ
> ಕೊರಳೇ ಕುಂಬಾರ, ತುಟಿಯೇ ಹೆಂಡಗಾರ, ಹಲ್ಲೇ ಕಲ್ಲುಕುಟಿಗ,
> ತಲೆಯೇ ಮೋಪುಗಾರ, ಬೆನ್ನಬೇಡ, ಅಂಗೈಯೇ ಅಕ್ಕಸಾಲಿಗ,
> ಮುಂಗೈಯೇ ಬಡಿಗ, ಕರವೇ ಕೋಮಟಿಗ,
> ಕಣಕಾಲೇ ಕಾಳಿಂಗ, ಕುಂಡಿಯೇ ಕುಡುವೊಕ್ಕಲಿಗ
> ಒಳದೊಡೆಯೇ ಸಮಗಾರ, ಹೊರದೊಡೆಯೆ ಮಚ್ಚಿಗ
> ಮೇಗಾಡಿ ಹೊಲೆಯ, ಬುದ್ದಿಯೇ ಬಯಲಗಂಬಾರ
> ಇಂತಪ್ಪ ಕುಲ ಹದಿನೆಂಟು ಜಾತಿ.[೩೬]

ಈ ಮೇಲಿನ ಉಲ್ಲೇಖಗಳು ಮನುಷ್ಯನ ದೇಹವನ್ನು ಆಧಾರವಾಗಿಟ್ಟುಕೊಂಡು ಸಮಾಜದ ವಿಭಿನ್ನ ಸ್ತರಗಳನ್ನು ವಿವರಿಸುವ ಪ್ರಯತ್ನ ಕಂಡುಬರುತ್ತದೆ. ಮನುಷ್ಯನ ದೇಹದ ಅಂಗಗಳು ಇಲ್ಲಿ ಸಾಂಕೇತಿಕವಾಗಿ ಕಂಡುಬರುತ್ತವೆ ಸಮಾಜವನ್ನು ಒಬ್ಬ ವ್ಯಕ್ತಿಯಲ್ಲಿ ಕಾಣುವ ವಚನಕಾಲದ ದೃಷ್ಟ ಮತ್ತು ಅಶಯಗಳು ಏನೇ ಇದ್ದರೂ ಅಂದಿನ ಜಾತಿವ್ಯವಸ್ಥೆ ಹಾಗೂ ಸಮಾಜದ ರಚನೆಯ ಸ್ವರೂಪವನ್ನು ತಿಳಿಯಲು ಸಹಕಾರಿಯಾಗುತ್ತದೆ.

ವಿಜಯನಗರ ಕಾಲದಲ್ಲಿ ಮೇಲಿನ ಎಲ್ಲಾ ಜಾತಿಗಳು ಇದ್ದವು. ಹದಿನೆಂಟು ಜಾತಿಗಳಲ್ಲಿ ಒಂದೊಂದು ಜಾತಿಗೂ ಬೇರೆ ಬೇರೆ ಕಸುಬು ಇರುವುದನ್ನು ಕನ್ನಡಿ ಕಾಯಕದ ಅಮ್ಮಿದೇವ ಹೇಳಿದ್ದಾನೆ.[೩೭] ಜಾತಿಯಲ್ಲಿ ಪ್ರಧಾನವಾದುದು ಹುಟ್ಟು ಎಂಬುದನ್ನು ಉರಿಲಿಂಗ ಪೆದ್ದಿ ಗುರುತಿಸಿದ್ದಾನೆ, ಬ್ರಾಹ್ಮಣ ಕ್ಷತ್ರಿಯರ ಮಗ ಕ್ಷತ್ರಿಯ, ವೈಶ್ಯನ ಮಗ ವೈಶ್ಯ, ಶೂದ್ರನ ಮಗ ಶೂದ್ರ[೩೮] ಅದೇ ತರ್ಕವನ್ನು ಮುಂದುವರೆಸಿದರೆ, ಕಮ್ಮಾರನ ಮಗ ಕಮ್ಮಾರ, ಮಡಿವಾಳನ ಮಗ ಮಡಿವಾಳ, ಕುಂಬಾರನ ಮಗ ಕುಂಬಾರಿಕೆ, ಇತ್ಯಾದಿಯಾಗಿ ಜಾತಿ ವ್ಯವಸ್ಥೆಯ ಅಡಿಗಲ್ಲುಗಳಾದ ಉದ್ಯೋಗ ಮತ್ತು ಜನ್ಮಗಳೆರಡರ ವಿಷಯವು ವಚನಕಾರರಿಗೆ ತಿಳಿದಿತ್ತೆಂಬುದು ಸ್ಪಷ್ಟವಾಗುತ್ತದೆ. ಇದು ವಿಜಯನಗರ ಕಾಲದಲ್ಲೂ ಮುಂದುವರೆದಿತ್ತು.

ಧರ್ಮಶಾಸ್ತ್ರಗಳ ಪ್ರಕಾರ ವರ್ಣಗಳು ನಾಲ್ಕು ಅವುಗಳ ಪೈಕಿ ಮೊದಲನೆಯದು ಬ್ರಾಹ್ಮಣ ಅಥವಾ ಪುರೋಹಿತ ವರ್ಗಕ್ಕೆ ಸೇರಿತ್ತು. ಎರಡನೆಯ ಸ್ಥಾನವನ್ನು ಕ್ಷತ್ರಿಯರೆಂದು ಕರೆಯುವ ಯೋಧವರ್ಗ, ವ್ಯಾಪಾರಸ್ಥ ಎಂದು ವೈಶ್ಯವರ್ಗಕ್ಕೂ ಉಳಿದವರು ಶೂದ್ರರೆಂದು ಪರಿಗಣಿಸಿ ನಾಲ್ಕನೇ ಸ್ಥಾನಮಾನ ಕೊಡಲಾಗಿತ್ತು. ಶೂದ್ರವರ್ಗದಲ್ಲಿ ಕುಶಲಕರ್ಮಿಗಳು ಕಾರ್ಮಿಕರೂ ಮತ್ತು ವ್ಯವಸಾಯ ಕಸುಬುಗಳಲ್ಲಿ ನಿರತರಾಗಿದ್ದವರೂ ಇದ್ದರು. ಈ ನಾಲ್ಕು ವಿಭಾಗಗಳಿಂದ ಮನ್ನಣೆ ಪಡೆದ ಅನೇಕ ಕಸುಬುದಾರರಿದ್ದರು. ಈ ಕಸುಬುದಾರರಿಗೆ ತಮ್ಮದೇ ಆದ ನಡೆ, ನುಡಿ, ಆಚಾರ, ಸಂಪ್ರದಾಯ ವಿಧಿ ನಿಷೇಧಗಳಿದ್ದವು.

ಆ ಕಾಲದ ಸಾಮಾಜಿಕ ರಚನೆಯಲ್ಲಿ ಬ್ರಾಹ್ಮಣರು ಹಿಂದೂ ಸಮಾಜದ ಅತ್ಯಂತ ಎತ್ತರ, ಪ್ರಧಾನವಾದ ಸ್ಥಾನದಲ್ಲಿದ್ದರು. ಅಂದಿನ ಕರ್ನಾಟಕದ ಬ್ರಾಹ್ಮಣರು ಪಂಚದ್ರಾವಿಡ ವರ್ಗಕ್ಕೆ ಸೇರಿದವರು ಅವರಲ್ಲಿ ಕೊನೆಯ ಪಕ್ಷ ಆರು ಭಾಷಾ ವರ್ಗಗಳಿದ್ದವು. ಕನ್ನಡ, ತೆಲುಗು, ತಮಿಳು, ಮರಾಠಿ, ಕೊಂಕಣಿ ಮತ್ತು ತುಳು ಭಾಷೆಗಳನ್ನು ಮಾತಾಡುತ್ತಿದ್ದರು. ಕೊಂಕಣಿ ಬ್ರಾಹ್ಮಣರು ಪೋರ್ಚಗೀಸ್ ಗೋವಾದಿಂದ ವಲಸೆ ಬಂದವರು. ತುಳು ಬ್ರಾಹ್ಮಣರು ಬಹಳ ಹಿಂದೆಯೇ ಕರಾವಳಿ ಪ್ರದೇಶಕ್ಕೆ ಹೋಗಿ ನೆಲಸಿದವರು.

ವಿಜಯನಗರ ಕಾಲದಲ್ಲಿ ಸ್ಥಾಪಿಸಿದ ಅಗ್ರಹಾರಗಳಿಂದಾಗಿ ನದಿ ತೀರದ ತೀರ್ಥಕ್ಷೇತ್ರಗಳಾದ ನಂಜನಗೂಡು, ಸೋಸಲೆ, ಟಿ.ನರಸೀಪುರ, ಮಿಲೆ, ಸಾಂಗ್ರಾಮಗಳಲ್ಲಿ ಕೆರೆ–ಕಾಲುವೆ ಮೊದಲಾದವುಗಳ ನೀರು ಇರುವ ಸ್ಥಳಗಳಲ್ಲಿ ಹಾಗೂ ಮೇಲುಕೋಟೆ, ತೊಣ್ಣೂರುಗಳಂತಹ ಪ್ರಾಚೀನ ಸ್ಥಳಗಳಲ್ಲಿ ಬ್ರಾಹ್ಮಣರು ನೆಲೆಸುವುದಕ್ಕೆ ಅವಕಾಶವಾಯಿತು.[೩೮೭] ಪೇಸ್‌ನ ಪ್ರಕಾರ ಬ್ರಾಹ್ಮಣರಲ್ಲಿ ನಾಲ್ಕು ವರ್ಗಗಳಿದ್ದವು ಪುರೋಹಿತರು, ಅಧಿಕಾರಿಗಳು, ವ್ಯವಹಾರಸ್ಥರು ಮತ್ತು ಅನುವಂಶಿಕ ಜಮೀನ್ದಾರರು. ನ್ಯೂನಿಜ್‌ನೂ ಬ್ರಾಹ್ಮಣರನ್ನು ನಾಲ್ಕು ವರ್ಗಗಳಾಗಿ ವಿಭಾಗಿಸಿದ್ದನು. ಪ್ರತಿಯಾಗಿ ರಾಜಪುರೋಹಿತರು ಇವರು ಸಾವಿರಾರು ಸಂಖ್ಯೆಯಲ್ಲಿದ್ದರು ದಾನವಾಗಿ ಬೇಕಾದಷ್ಟು ಹಣವನ್ನು ಪಡೆಯುತ್ತಿದ್ದರು. ಅವರ ಬಳಿ ಯಾವಾಗಲೂ ತುಂಬಾ ಹಣವಿರುತ್ತೆ. ಅವರು ಎಷ್ಟು ಉದ್ದತರಾಗಿರುತ್ತಾರೆಂದರೆ, ಬಾಗಿಲು ಕಾಯುವವರು ಪೆಟ್ಟುಕೊಟ್ಟರೂ ಅವರನ್ನು ಪಡೆಯಲು ಸಾಧ್ಯವಾಗುವುದಿಲ್ಲ.[೩೮೮]

ನ್ಯೂನಿಜನ ಪ್ರಕಾರ ಎರಡನೆಯ ಗುಂಪಿನ ಬ್ರಾಹ್ಮಣರು ಪ್ರಾಮಾಣಿಕರಾಗಿ ಜನ ವ್ಯಾಪಾರವನ್ನು ನಡೆಸುವವರು, ಸೂಕ್ಷ್ಮಮತಿಗಳು, ಬುದ್ಧಿವಂತರು, ಲೆಕ್ಕಚಾರದಲ್ಲಿ ನಿಪುಣರು ಹಾಗೂ ತಮ್ಮ ಕರ್ತವ್ಯ ಪಾಲನೆಯಿಂದಾಗಿ ರಾಜ್ಯದ ಆಡಳಿತವು ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳುತ್ತಾರೆ. ಇನ್ನೊಂದು ವರ್ಗದವರೆಂದರೆ ಕನರೀಸ್ ಜನರು. ಇವರ ಬಳಿ ಪಗೋಡಗಳಿರುತ್ತವೆ. ಅವುಗಳ ಮೇಲೆ ಕೋಟೆಗಳು ಮತ್ತು ಹಸುಗಳ ಚಿತ್ರಗಳು ಕೆತ್ತಿರಲಾಗಿದೆ.[೩೮೯]

ಬ್ರಾಹ್ಮಣರು ಪ್ರಮುಖವಾಗಿ ದೇವಾಲಯದ ಪುರೋಹಿತ, ಅಧಿಕಾರಿ, ವ್ಯಾಪಾರಸ್ಥರಾಗಿ ಮತ್ತು ಅಗ್ರಹಾರವನ್ನು ಪಡೆದು ತಮ್ಮ ಕಸುಬುಗಳಲ್ಲಿ ತೊಡಗಿಕೊಂಡಿರುವುದನ್ನು ಕಾಣಬಹುದಾಗಿದೆ. ಅರಮನೆಯ ಪುರೋಹಿತರು ಅರಮನೆಗೇ ಸೀಮಿತವಾದ ಕರ್ತವ್ಯಗಳನ್ನು ಹೊಂದಿದ್ದರು.

ಜೊತೆಗೆ ನ್ಯಾಯ ವಿತರಣೆಯ ಅಧಿಕಾರವೂ ಇದ್ದಿತು. ಬ್ರಾಹ್ಮಣರಲ್ಲಿ ತುಂಬಾ ಪ್ರಭಾವಶಾಲಿಗಳಾಗಿದ್ದ ವಿದ್ವಾಂಸರು, ಜೋತಿಷ್ಯರು, ಸಾಹಿತಿಗಳು, ವೈದ್ಯರು, ನ್ಯಾಯವನ್ನು ವ್ಯಾಖ್ಯಾನಿಸಬಲ್ಲ, ನ್ಯಾಯವನ್ನು ತೀರ್ಮಾನ ಮಾಡುವವರು ಆಗಿರುತ್ತಿದ್ದರು. ಅವರು ಪೂರ್ಣ ಸಸ್ಯಹಾರಿಗಳು, ಕೌಟುಂಬಿಕ ಜೀವನದಲ್ಲಿ ಏಕಪತ್ನೀ ವ್ರತಸ್ಥರಾಗಿದ್ದರು.

ಇವರು ರಾಜ್ಯಾಡಳಿತದಲ್ಲಿ ಬಹುಮುಖ್ಯರಾಗಿದ್ದರು. ವಿದ್ಯಾವಂತ ಬ್ರಾಹ್ಮಣರಲ್ಲಿ ಬಹುತೇಕ ಜನರು ಸರಕಾರಿ ಸೇವೆಯನ್ನು ಕೈಗೊಳ್ಳಲು ಬಯಸುತ್ತಿದ್ದರು. ಅದರಲ್ಲಿ ಉಜ್ವಲವಾದ ಭವಿಷ್ಯವಿತ್ತು. ಉತ್ತಮ ಲೆಕ್ಕಪತ್ರ ತಜ್ಞರು, ಆಡಳಿತ ನಿಪುಣರೂ ಆಗುವಂತೆ ಅವರಿಗೆ ತರಬೇತಿ ನೀಡಲಾಗುತ್ತಿತ್ತು. ಕೇಂದ್ರ ಆಡಳಿತದ ಸಚಿವಾಲಯದಲ್ಲಿ ಈ ವರ್ಗದ ಜನರೇ ತುಂಬಿರುತ್ತಿದ್ದರು. ಈ ವರ್ಗದ ಬ್ರಾಹ್ಮಣರು ಧಾರ್ಮಿಕ ಆಚರಣೆಗಳಲ್ಲಿ ಅಷ್ಟಾಗಿ ಸಂಪ್ರದಾಯಬದ್ಧವಾಗಿರಲಿಲ್ಲ.[೬೦] ಪ್ರಮುಖವಾದ ಸೈನಿಕ ಹುದ್ದೆಗಳ ನೇಮಕ ವಿಚಾರದಲ್ಲಿ ಬ್ರಾಹ್ಮಣರನ್ನು ನೇಮಕ ಮಾಡಿಕೊಳ್ಳುತ್ತಿದ್ದರು. ವಾಸ್ತವವಾಗಿ ಕೃಷ್ಣದೇವರಾಯನ ಕಾಲದಲ್ಲಿ ಇಂತಹ ನೇಮಕಾತಿಗಳು ಅಧಿಕವಾಗಿದ್ದವು. ಸರಕಾರದ ಅತಿಮುಖ್ಯವಾದ ಹುದ್ದೆಗಳಿಗೆ ಬ್ರಾಹ್ಮಣರನ್ನು ನೇಮಿಸುವುದಕ್ಕೆ ಕೃಷ್ಣದೇವರಾಯ ಕೊಟ್ಟ ಕಾರಣ ಒಬ್ಬ ಬ್ರಾಹ್ಮಣ ಎಂತಹ ಆಪತ್ತಿನ ಸಮಯದಲ್ಲೂ ಕರ್ತವ್ಯಬದ್ದನಾಗಿರುತ್ತಾನೆ. ಕ್ಷತ್ರಿಯ ಅಥವಾ ಶೂದ್ರನೊಬ್ಬನ ಅಧೀನವಾಗಿ ಕೆಲಸ ಮಾಡಬೇಕಾಗಿ ಬಂದರೂ ಅವನು ಸೇವೆಯಲ್ಲಿ ಮುಂದುವರೆಯುತ್ತಾನೆ. ಅಧ್ಯಯನ ತನಗೆ ನಿಷ್ಠೆಯಿಂದಿರುವ ಹಾಗೂ ಅನೇಕ ಕಲೆ ಮತ್ತು ವಿಜ್ಞಾನಗಳಲ್ಲಿ ಪರಿಣತರಾಗಿರುವ, ಧರ್ಮದಿಂದ ನಡೆಯುವ, ಪರಾಕ್ರಮಿಗಳಾದ ಬ್ರಾಹ್ಮಣರನ್ನು ತನ್ನ ಕೋಟೆಯ ರಕ್ಷಣೆಗೆ ನೇಮಿಸುವ ರಾಜನು ಎದೆಯ ಮೇಲೆ ಕೈಯಿರಿಸಿಕೊಂಡು ನಿರಾಳವಾಗಿ ನಿದ್ದೆ ಮಾಡಬಹುದು. ಅವರು ತಮ್ಮ ಕಾಲಕ್ಕಿಂತ ಹಿಂದಿನಿಂದಲೂ ಸೇವೆಯಲ್ಲಿದ್ದು ಕೋಟೆಗಳಲ್ಲಿ ಹುಲಿಯ ಗಿಣ್ಣನ್ನೂ(ಪಾಲಿಜುನ್ನ) ಇತರ ಅಪೂರ್ವ ವಸ್ತುಗಳನ್ನು ಅನೇಕ ವೇಳೆಗಳವರೆಗೆ ಸಂಗ್ರಹಿಸಲ್ಪಟ್ಟಿರುತ್ತಾರೆ. ವರಮಾನವನ್ನು ಅಧಿಕಗೊಳಿಸಿ ಅವನ ಕೋಶವನ್ನು ದ್ವಿಗುಣಗೊಳಿಸುತ್ತಾರೆ, ವೆಚ್ಚವನ್ನು ಕಡಿಮೆ ಮಾಡುತ್ತಾರೆ. ಜನರು ಯಾವುದೇ ಕಷ್ಟಗಳಿಲ್ಲದೆ ಸುಖವಾಗಿರುವಂತೆ ನೋಡಿಕೊಳ್ಳುತ್ತಾರೆ. ರಾಜನಾಗಲಿ, ಪ್ರಜೆಗಳಾಗಲಿ ತೊಂದರೆ ಪಡದೆ ಕೇವಲ ಶತ್ರುಗಳನ್ನು ಕಾಡುವ ಹಾಗೆ ನೋಡಿಕೊಳ್ಳುತ್ತಾರೆ.[೬೧]

ಅಬ್ದುಲ್ ರಜಾಕ್‌ನ ತರುವಾಯ ವಿಜಯನಗರಕ್ಕೆ ಬಂದ ವಿದೇಶಿ ಸಂದರ್ಶಕರು ಸಹ ಸಮಾಜದಲ್ಲಿ ಬ್ರಾಹ್ಮಣರಿಗಿದ್ದ ಸ್ಥಾನಮಾನದ ಬಗ್ಗೆ ತಿಳಿಸುತ್ತಾರೆ. ಈ ಬ್ರಾಹ್ಮಣರು ನಮ್ಮ ಕ್ರೈಸ್ತ ಭಿಕ್ಷುಗಳಂತಿರುತ್ತಾರೆ. ಮತ್ತು ಪುಣ್ಯಪುರುಷರೆಂದು ಪರಿಗಣಿಸಲ್ಪಡುತ್ತಾರೆ. ನಾನು ಹೇಳುತ್ತಿರುವುದು ದೇವಾಲಯಗಳ ಪುರೋಹಿತರು ಮತ್ತು ಪಂಡಿತರಾದ ಬ್ರಾಹ್ಮಣರ ಬಗೆಗೆ, ಏಕೆಂದರೆ ರಾಜನಲ್ಲಿ ಅನೇಕ ಬ್ರಾಹ್ಮಣರಿರುವರಾದರೂ ಅವರು ಪುರ ಮತ್ತು ಪಟ್ಟಣಗಳ ಅಧಿಕಾರಿಗಳಾಗಿದ್ದು ಅವರು ಸರಕಾರಕ್ಕೆ ಸೇರಿದವರು. ವರ್ತಕರು ಹಾಗೂ ಉಳಿದವರು ತಮ್ಮ ಸ್ವಂತದ ಆಸ್ತಿಪಾಸ್ತಿ ಮತ್ತು ಸಾಗುವಳಿಯಿಂದ ಹಾಗೂ ತಮ್ಮ ಪಿತ್ರಾರ್ಜಿತ ಹೊಲಗಳಲ್ಲಿ ಬೆಳೆಯುವ ಫಸಲುಗಳಿಂದ ಜೀವಿಸುವರು. ದೇವಾಲಯಗಳ ಉಸ್ತುವಾರಿಯುಳ್ಳ ಜನರು ವಿದ್ವಾಂಸರಾಗಿದ್ದು, ಸಾವಿಗೀಡಾಗುವ ಯಾವುದನ್ನೂ ಮಾಂಸವನ್ನಾಗಲಿ, ಮೀನನ್ನಾಗಲಿ ಅವರು

ತಿನ್ನುವುದಿಲ್ಲ ಏಕೆಂದರೆ ಅದು ರಕ್ತವೆಂದೇ[೫೨] ಎಂದು ಪೆಯಿಸ್ ಹೇಳುತ್ತಾರೆ. ಬ್ರಾಹ್ಮಣರು ಆರಾಧನಾ ಮಂದಿರಗಳ ಅರ್ಚಕರಾಗಿರುವರೆಂದು ಮತ್ತು ಅವರು ಸಾವಿಗೀಡಾಗುವ ಯಾವುದನ್ನು ತಿನ್ನುವುದುಲ್ಲ ಎಂದು ಬಾರ್ಬೋಸಾ ತಿಳಿಸುತ್ತಾನೆ. ಅವರು ಮದುವೆಯಾಗುವುದು ಒಬ್ಬಳನ್ನೇ, ಆಕೆ ಮೃತಳಾದರೆ ಮರುಮದುವೆಯಾಗುವುದಿಲ್ಲ. ಅವರ ಗಂಡು ಮಕ್ಕಳು ಅವರೆಲ್ಲ ವಸ್ತುಗಳನ್ನು ಪಡೆಯುತ್ತಾರೆ. ರಾಜ್ಯದ ಅರಸ ಮತ್ತು ಮಹಾ ಅಧಿಪರು ಅವರಿಗೆ ನೀಡುವ ದಾನದತ್ತಿಗಳ ಮೇಲೆ ಅವರು ಜೀವಿಸುತ್ತಾರೆ. ಅನೇಕ ಬ್ರಾಹ್ಮಣರಿಗೆ ಸ್ಥಿರಾಸ್ತಿಗಳಿವೆ. ಇತರರು ಉತ್ತಮ ಆದಾಯ ಹೊಂದಿರುವ ಮಠ ದೇಗುಲಗಳಲ್ಲಿರುತ್ತಾರೆ.[೫೩] ನ್ಯೂನಿಜ್‌ನ ಪ್ರಕಾರ ಬ್ರಾಹ್ಮಣರು ಪ್ರಾಮಾಣಿಕ ಜನ, ವ್ಯಾಪಾರ ಮಾಡುವವರು, ಬಹು ತೀಕ್ಷ್ಣಮತಿಯುಳ್ಳವರು ಹಾಗೂ ಬಹುಪ್ರತಿಭಾವಂತರು. ಲೆಕ್ಕಪತ್ರದಲ್ಲಿ ಪರಿಣತರು, ತೆಳುದೇಹದವರು ಮತ್ತು ಸುರೂಪಿಗಳು, ಆದರೆ ಪರಿಶ್ರಮದ ಕೆಲಸಕಾರ್ಯಗಳಿಗೆ ಯೋಗ್ಯರಲ್ಲದವರು. ಇವರಿಂದ ಮತ್ತು ಇವರು ಕೈಗೊಳ್ಳುವ ಕರ್ತವ್ಯಗಳಿಂದ ರಾಜ್ಯವು ನಡೆಯುತ್ತದೆ[೫೪] ಎಂದು ಅಭಿಪ್ರಾಯಪಟ್ಟಿದ್ದಾರೆ.

ವಿಜಯನಗರ ಸಾಮ್ರಾಜ್ಯದಲ್ಲಿ ಬ್ರಾಹ್ಮಣರು ವಿವಿಧ ಕಸುಬುಗಳಲ್ಲಿ ನಿರತರಾಗಿದ್ದರೂ, ಬೇರೆ ಬೇರೆ ಕಾರ್ಯಕ್ಷೇತ್ರಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಅವರು ಅರಸನಿಗೆ ಸಚಿವರಾಗಿ ಮತ್ತು ಪ್ರಾಂತಾಧಿಪತಿಗಳಾಗಿ ಸೇವೆಸಲ್ಲಿಸುತ್ತಿದ್ದು ತಮ್ಮ ಸಮರ್ಥ ಆಡಳಿತದಿಂದ ರಾಜ್ಯವನ್ನು ಶ್ರೀಮಂತಗೊಳಿಸಿದರು. ಅರಸನಿಗೆ ಸಾಮಾಜಿಕ ಮತ್ತು ಧಾರ್ಮಿಕ ವಿಷಯಗಳಲ್ಲಿ ಸಲಹೆಗಾರರಾಗಿದ್ದರು. ಸೈನಿಕ ಹುಂಡಿಗಳಲ್ಲೂ ಇದ್ದು ಅವರು ಅರಸನಿಗೆ ದಂಡನಾಯಕರಾಗಿ ಸೇವೆ ಸಲ್ಲಿಸಿದ್ದುಂಟು.[೫೫] ಇಮ್ಮಡಿ ದೇವರಾಯನು ಸಿಂಹಾಸನವೇರುವ ಸುಮಾರು ೨೦ ವರ್ಷಗಳ ಮೊದಲು ವಿಠಣ್ಣ ಒಡಯನೆಂಬ ಬ್ರಾಹ್ಮಣನು ಕ್ರಿ.ಶ. ೧೪೦೩ರಲ್ಲಿ ಅರಗದ ರಾಜ್ಯಪಾಲನಾಗಿದ್ದನು.[೫೬] ಇಮ್ಮಡಿ ದೇವರಾಯನ ಆಳ್ವಿಕೆಯ ಕಾಲದಲ್ಲಿ ಆತನ ಸೋದರಿ ಹರಿಮಾಳನ್ನು ಮದುವೆಯಾಗಿ ಭಾವನಾದ ಸಾಳುವ ತಿಪ್ಪ ಅಥವಾ ಹಾಗೂ ಆತನ ಮಗ ಗೋಪ ಆತ್ರೇಯ ಗೋತ್ರಕ್ಕೆ ಸೇರಿದ ಬ್ರಾಹ್ಮಣ ದಂಡನಾಯಕರಾಗಿದ್ದಂತೆ ತೋರುತ್ತದೆ.[೫೭] ಅಣ್ಣಾಮಾರಾಧ್ಯ ಉರುಫ ಕೊಂಪಲ್ಲಿ ಎಂಬ ಬ್ರಾಹ್ಮಣನು ನಗರ ದ್ವಾರಗಳ ಅಧಿಪತಿಯಾಗಿ ನೇಮಕವಾಗಿದ್ದನು.[೫೮] ಊರುಗಳಲ್ಲಿ ಬ್ರಾಹ್ಮಣರು ಅಗ್ರಹಾರಗಳೆಂದು ಕರೆಯಲಾದ ಪ್ರತ್ಯೇಕ ವಠಾರವನ್ನು ಹೊಂದಿದ್ದು ಅಲ್ಲಿ ತಮ್ಮ ವೇದಶಾಸ್ತ್ರಗಳ ಅಧ್ಯಯನವನ್ನು ನಡೆಸುತ್ತಿದ್ದರು. ಕೆಲವೊಮ್ಮೆ ಸಂಪೂರ್ಣ ಗ್ರಾಮ ಹಾಗೂ ಅದರ ಅಕ್ಕಪಕ್ಕದ ಭೂಮಿ ಕಾಣಿಕೆಗಳನ್ನು ಮಾನ್ಯವಾಗಿ ಬ್ರಾಹ್ಮಣರಿಗೆ ನೀಡಲಾಗುತ್ತಿತ್ತು. ಕೆಲವು ವಿಷಯಗಳಲ್ಲಿ ಬ್ರಾಹ್ಮಣರಿಗೆ ಸ್ವಾತಂತ್ರ್ಯವಿತ್ತಾದರೂ ಅಗ್ರಹಾರಗಳಿಗೆ ರಾಜ್ಯವು ತನ್ನ ಅಧಿಕಾರಿಗಳನ್ನು ಹೇರುತ್ತಿತ್ತು.[೫೯]

ಒಟ್ಟಾರೆ ವೇದಶಾಸ್ತ್ರಗಳನ್ನು ಅಧ್ಯಯನ ಮತ್ತು ಅಧ್ಯಾಪನ, ಪೂಜೆ, ಆರಾಧನೆ ಮುಂತಾದ ಕೆಲಸ ಕಾರ್ಯಗಳನ್ನು ಮಾಡುವ ಬ್ರಾಹ್ಮಣರು ಉನ್ನತ ದರ್ಜೆಯವರಾಗಿದ್ದರು. ಕ್ಷತ್ರಿಯರು ಮತ್ತು ವೈಶ್ಯರು ಮಾಡುವ ಕೆಲಸ ಕಾರ್ಯಗಳನ್ನು ಮತ್ತು ಸೇನೆಗೆ ಸೇರಿದ ಬ್ರಾಹ್ಮಣರು ಎರಡನೆಯ ದರ್ಜೆಯವರಾಗಿದ್ದರು. ಹೀಗೆ ಬ್ರಾಹ್ಮಣರು ದೇವಾಲಯದ ಪುರೋಹಿತರು, ಅಧಿಕಾರಿಗಳು, ವ್ಯಾಪಾರಸ್ಥರು ಮತ್ತು ಅಗ್ರಹಾರವನ್ನು ಪಡೆದವರು ಮುಂತಾದ ಪಂಗಡಗಳಿದ್ದವು.

ಇವರು ಸಮಾಜದಲ್ಲಿ ಉನ್ನತವಾದ ಸ್ಥಾನಮಾನ ಹೊಂದಿದ್ದರು. ರಾಜರು, ಅಧಿಕಾರಿಗಳು ಮತ್ತು ಇತರ ವರ್ಗದವರು ಬ್ರಾಹ್ಮಣರಿಗೆ ಉಡುಗೋರೆ, ಕಾಣಿಕೆ, ಭೂಮಿ ಧಾನವನ್ನು ನೀಡುತ್ತಿದ್ದರು. ಬ್ರಾಹ್ಮಣರಿಗೆ ಕಾಣಿಕೆಯನ್ನರ್ಪಿಸಿದರೆ ಪುಣ್ಯ ಬರುತ್ತದೆ ಎನ್ನುವ ಧಾರ್ಮಿಕ ನಂಬಿಕೆಯನ್ನು ಸಮಾಜದಲ್ಲಿ ಬಿಂಬಿಸಲಾಗಿತ್ತು. ಹೀಗೆ ಒಂದು ಉನ್ನತ ಮಟ್ಟದ ಸ್ಥಾನಮಾನವನ್ನು ಸಾಮಾಜಿಕವಾಗಿ ವಿಜಯನಗರ ಕಾಲದಲ್ಲಿ ಬ್ರಾಹ್ಮಣರು ಗಳಿಸಿಕೊಂಡಿದ್ದರು.

೧೪. ಗೊಲ್ಲ–ಕುರುಬ(ಪಶುಪಾಲಕ)

ವಿಜಯನಗರ ಆಳ್ವಿಕೆಯ ಸಂದರ್ಭದಲ್ಲಿ ಚಾಲ್ತಿಯಲ್ಲಿದ್ದ ಬೇಟೆ, ಪಶುಪಾಲನೆ ಮತ್ತು ಕೃಷಿ ವ್ಯವಸ್ಥೆಗಳು ಪ್ರಗತಿದಾಯಕ ಕ್ಷೇತ್ರಗಳಾಗಿದ್ದವು. ಅಂದಿನ ಪಶುಪಾಲನೆಯನ್ನು ಭಾರತೀಯ ಸಾಂಸ್ಕೃತಿಕ ಚರಿತ್ರೆಯ ಹಿನ್ನೆಲೆಯಲ್ಲಿ ಅವಲೋಕಿಸಬಹುದಾಗಿದೆ. ಶಿಲಾಯುಗದ ಮಾನವನ ಬದುಕು ಆಹಾರ ಸಂಗ್ರಹಣೆಯಿಂದ ಬೇಟೆಗೆ ಪರಿವರ್ತನೆಯಾದರೆ ಬೇಟೆಯಿಂದ ಕ್ರಮೇಣ ಪಶುಪಾಲನೆಗೆ ಆಸ್ಪದವಾಯಿತು. ಸಾತ್ವಿಕ ಪ್ರಾಣಿಗಳನ್ನು ಮನೆ, ಹೊಲ ಹಾಗೂ ಹಟ್ಟಿ ಅಥವಾ ಮಂದೆಯಲ್ಲಿ ವಾಸಿಸಲು ಅವಕಾಶ ಕಲ್ಪಿಸಿಕೊಟ್ಟು, ಅದರ ಹಾಲು, ಸಗಣಿಯಿಂದ ಆರ್ಥಿಕ ಕೊರತೆಯನ್ನು ಮಾನವ ನೀಗಿಸಿಕೊಳ್ಳುತ್ತಿದ್ದ. ವೇದಗಳ ಅಥವಾ ಆರ್ಯರ ಕಾಲವು ಪಶುಪಾಲನೆಯ ಸುವರ್ಣಯುಗವಾಗಿತ್ತು. ಆ ಕಾಲಕ್ಕೆ ದನಗಳ ಹಿಂಡು, ಗೋವುಗಳ ಸಂಪತ್ತು ಹೆಚ್ಚಿರುವವನೇ ಶ್ರೀಮಂತನಾಗಿರುತ್ತಿದ್ದ. ದನಗಳಿಗಾಗಿಯೇ ತುರಗ ಕಾಳಗಗಳಾಗುತ್ತಿದ್ದವು. ಹೀಗೆ ಮೌರ್ಯ, ಶಾತವಾಹನ, ಕದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟ, ಅರಸರ ಕಾಲದಲ್ಲಿ ಪಶುಪಾಲನೆ, ಗೋಗ್ರಹಣ ಅಥವಾ ತುರುಕಾಳಗಗಳ ಕುರಿತು ಉಲ್ಲೇಖಗಳು ಸಿಗುತ್ತವೆ.

ಮುಮ್ಮಡಿ ಸಿಂಗೇನಾಯಕ, ಕಂಪಿಲರಾಯ ಮತ್ತು ಕುಮಾರರಾಮನ ಅವಧಿಯಲ್ಲಿ ನಡೆದ ಗೊಗ್ರಹಣದ ಬಗ್ಗೆ ಶಾಸನ ವೀರಗಲ್ಲುಗಳು ಸಾಕ್ಷಿಕರಿಸುತ್ತವೆ.[೧೦೦] ಪಶುಪಾಲನೆಗೆ ವಿಜಯನಗರ ಅರಸರು ತೋರಿದ ಪ್ರೀತಿ ಅಭಿಮಾನ ದೊಡ್ಡದು. ಕ್ರಿ.ಶ. ೧೪೮೨ ಮಾರ್ಚ್ ೨೦ ರಂದು ಹರಿಹರ ಮಹಾರಾಯನು ತನ್ನ ಸಾಮ್ರಾಜ್ಯದ ಎತ್ತು, ಎಮ್ಮೆ, ಕರಕುಶಲಕರ್ಮಿಗಳಿಂದ ತೆರಿಗೆ ವಸೂಲಿ ಮಾಡುವ ಹೊಸ ವಿಧಾನವನ್ನು ಜಾರಿಗೆ ತಂದನು.[೧೦೧] ಗೋವುಗಳಿಗೆ ತೆರಿಗೆ ವಿಧಿಸುವುದು ಮಾತ್ರವಲ್ಲ ಅದನ್ನು ದಾನ ಮಾಡುವುದು ಪ್ರಚಲಿತದಲ್ಲಿತ್ತು. ಆಂಧ್ರದ ಅನಂತಪುರ ಜಿಲ್ಲೆಯಲ್ಲಿರುವ ಧಾರ್ಮಿಕ ಕ್ಷೇತ್ರ ಕದ್ರಿ ನರಸಿಂಹಸ್ವಾಮಿ ದೇವಾಲಯದ ಶಾಸನದಲ್ಲಿ ಕ್ರಿ.ಶ. ೧೪೧೮ ಪ್ರೆಬುವರಿ ೧೬ ರಂದು ಹರಿಹರ ಮಹಾರಾಯನು ನಾಲ್ಕು ನಾಡು ಪಾಂಚಾಳರಿಗೆ ಮದುವೆ, ಕುಲಿಕೆ, ಯತ್ತು, ಯಮ್ಮೆ, ಧೊತ್ತ ಭಂಡಿಯ ಬತ್ತದ ಸುಂಕ ಉಪ್ಪರ ನೆಲವನ್ನು ಅನುಪು ಆಳು ಅರಣಿಕೆ[೧೦೨] ಕೊಟ್ಟ ವಿಷಯ ತಿಳಿಯುತ್ತದೆ.

ಕೃಷ್ಣದೇವರಾಯನ ಕಾಲದ ಕ್ರಿ.ಶ. ೧೫೨೧ರ ಶಾಸನದಲ್ಲಿ ಗೋಧಾನದ ಉಲ್ಲೇಖವಿದೆ. ಮಾನುವೆ. ಹಾನಗಲ್ಲು ಆಲಂಪೂರ, ರಾಯಚೂರು, ಮಗಡೆದುರ್ಗಗಳನ್ನು ಗೆದ್ದು ಕೃಷ್ಣ ಮತ್ತು ಭೀಮಾನದಿ ಸಂಗಮದಲ್ಲಿ ರತ್ನಧೇನು ಮಹಾದಾನವನ್ನು ಮಾಡಿ ತನ್ನ ಹೆಂಡತಿ

ಚಿಂನಾದೇವಿ ಕೈಲಿ ಗೋದಾನವನ್ನು, ತಿರುಮಲದೇವಿ ಕೈಲಿ ಕನಕ ಗೋಧಾನ ಮಾಡಿಸುತ್ತಾನೆ.[೪೦೩] ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲೂಕು ಮುತ್ತಿಗೆ ಗ್ರಾಮದ ಆಂಜನೇಯ ದೇವಾಲಯದ ಶಾಸನದಲ್ಲಿ ಕ್ರಿ.ಶ. ೨–೧೧–೧೫೫೭ನೆಯ ಮಂಗಳವಾರ ಮಹಾನಾಯಕಾಚಾರ್ಯ ಕೃಷ್ಣಪ್ಪನಾಯಕನು ಮುತ್ತಿಗೆ ಗ್ರಾಮದ ಕೃಷಿಕರು ಕೊಡಬೇಕಾದ ಕುರಿಗಳ ತೆರಿಗೆ ನಿಗದಿ ಪಡಿಸಿದ್ದನ್ನು ತಿಳಿಸುತ್ತದೆ.

ವಿಜಯನಗರ ಸಾಮ್ರಾಜ್ಯಕ್ಕೂ ಪೂರ್ವದಲ್ಲಿ ಹಂಪಿ ಪರಿಸರವು ಪಶುಪಾಲನ ಚಟುವಟಿಕೆಗಳಿಂದ ಕೂಡಿತ್ತು. ಹರಪನಹಳ್ಳಿ ತಾಲೂಕು ನೀಲಗುಂದ ಮುತ್ತೇಶ್ವರ ದೇವಸ್ಥಾನದ ಮುಂದಿನ ವೀರಗಲ್ಲು ಶಾಸನದಲ್ಲಿ ಕ್ರಿ.ಶ. ೧೦೭೯ ಜನವರಿ ೨೦ ಭಾನುವಾರ ಚಯಂದಿರನ ಮಗ ಮರೆಯಾಳ್ವನು ನೀರ್ಗ್ಗುಂದದ ಮೂಲಿನ ಕಲ್ಲುಗಂಗನು ಮರಣ ಹೊಂದಿರುವುದನ್ನು ತಿಳಿಸುತ್ತದೆ.[೪೦೪] ಬೆಣ್ಣಿಹಳ್ಳಿ ಪಂಪಾಪತಿ ದೇವಸ್ಥಾನದಲ್ಲಿ ಹೊಯ್ಸಳ ವೀರನರಸಿಂಹ ದೇವನಿಗೆ ಸೇರಿದ ನೆಲ್ಲೆಮ್ಮೆಯ ಉಗ್ರಾಣ ಗಿಂಪಯ್ಯ ಪಿರಿಯಣ್ಣನು ಬೆಣ್ಣೆವೂರಿನ ವಿರೂಪಾಕ್ಷ ದೇವರ ನೈವೇದ್ಯಕ್ಕೆ ದೀಪಕ್ಕೆ ಮತ್ತು ದೇವಸ್ಥಾನದ ೧೨ ಮಹಾಜನರ ಭೋಜನಕ್ಕೆ ಒಂದು ಹಸು ಮತ್ತು ಒಂದು ಎಮ್ಮೆಯನ್ನು ದಾನ ನೀಡಿದ[೪೦೫] ಬಗ್ಗೆ ತಿಳಿಸುತ್ತದೆ.

ಮಧ್ಯಕಾಲೀನ ಸಂದರ್ಭದಲ್ಲಿ ಬ್ರಾಹ್ಮಣರು ಗೋಮಾಂಸ ಭಕ್ಷಿಸುವುದನ್ನು ಈ ಮೂಲಕ ಅರ್ಥೈಸಿಕೊಳ್ಳಬಹುದು.[೪೦೬] ದೇವರ ನೈವೇದ್ಯದ ದೀಪಕ್ಕೆ ಹಸು ಮತ್ತು ಎಮ್ಮೆಯನ್ನು ದಾನ ನೀಡುವುದು ಅವುಗಳ ಉತ್ಪನ್ನದಿಂದ ಬರುವ ಹಣವನ್ನು ಬಳಸಿಕೊಳಬಹುದಾಗಿತ್ತು. ಪಶುಗಳು ಆ ಕಾಲಕ್ಕೆ ಗಣನೀಯ ಪ್ರಮಾಣದಲ್ಲಿದ್ದ ಸೂಚನೆ ಕಂಡುಬರುತ್ತದೆ. ವಿಜಯನಗರ ಆಳ್ವಿಕೆಯ ಅವಧಿಯಲ್ಲಿ ಗೋಗ್ರಹಣ, ಕಾಡು ಪ್ರಾಣಿಗಳ ಉಪಟಳದಿಂದ ಸತ್ತವೀರರ ಕುರಿತು ವೀರಗಲ್ಲುಗಳಿವೆ. ಹಾಗೆಯೇ ಆನೆ, ಹಂದಿ, ಹುಲಿ, ನರಿ, ಚಿರತೆ, ಸಿಂಹ ಇತರೆ ಕಾಡುಪ್ರಾಣಿಗಳು ದನ, ಕರುಗಳಿಗೆ ಕೊಡುವ ಹಿಂಸೆಯನ್ನು ತಪ್ಪಿಸಲು ವೀರರು ಹೋರಾಡಿ ಮಾಡಿದ ದಾಖಲೆಗಳಿವೆ.

ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕಿನ ಲೋಕದೊಳಲಿನ ಆಂಜನೇಯ ದೇವಾಲಯದ ಹಿಂಭಾಗದಲ್ಲಿರುವ ವೀರಗಲ್ಲು ಅಪೂರ್ವವಾದದ್ದು. ಈ ವೀರಗಲ್ಲಿನಲ್ಲಿ ಪಶುಗಳನ್ನು ರಕ್ಷಿಸಿ ದುಷ್ಟ ಪ್ರಾಣಿಗಳೊಡನೆ ಹೋರಾಡುವಾಗ ಮಡಿದಿರುತ್ತಾನೆ. ಸ್ವರ್ಗಕ್ಕೆ ಹೋಗುವ ಕಲ್ಪನೆಯನ್ನು ಶಿಲ್ಪ ವೀರನೊಂದಿಗಿರುವ ಆಯುಧವನ್ನು ಕಂಡರಿಸಲಾಗಿದೆ. ಮತ್ತೊಂದು ವೀರಗಲ್ಲಿನಲ್ಲಿ ವೀರನ ಕೈಯಲ್ಲಿ ಬಂದೂಕು ಇತರೆ ಆಯುಧಗಳನ್ನಿಡಿದು ಗೋವುಗಳ ಪಕ್ಕದಲ್ಲಿ ನಿಂತಿದ್ದಾನೆ. ಇವು ಪ್ರಸ್ತುತ ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿಡಲಾಗಿದೆ. ಬಳ್ಳಾರಿ ಪ್ರದೇಶದ ವೀರಗಲ್ಲೊಂದರಲ್ಲಿ ಪಶುಗಳ ರಕ್ಷಕ ಹೋರಾಡುವ ದೃಶ್ಯವನ್ನು ಕೆತ್ತಲಾಗಿದೆ. ಎಮ್ಮೆಗಳಿಗೋಸ್ಕರ ಹೋರಾಡಿ ಮಡಿದ ವೀರಗಲ್ಲು ಕೊಪ್ಪಳ ಜಿಲ್ಲೆ ಬೂದುಗುಂಪದಲ್ಲಿದೆ.[೪೦೭] ಈ ಶಿಲ್ಪದಲ್ಲಿ ವೀರನು ಬಿಲ್ಲು, ಬಾಣ ಹಿಡಿದು ಎದುರಾಳಿಗಳೊಂದಿಗೆ ಯುದ್ಧದಲ್ಲಿ ನಿರತನಾಗಿದ್ದಾನೆ. ಆತನ ಹಿಂಭಾಗ ಎರಡು ಎಮ್ಮೆ ಅಥವಾ ಕೋಣಗಳು ಎರಡು ಎತ್ತುಗಳು ಹಾಗೂ ಮೇಲ್ಭಾಗದಲ್ಲಿ ಒಂದು ನೇಗಿಲಿನ ಹಾಗೂ ಅಸ್ಪಷ್ಟವಾದ ಮೂರು ಸಾಲಿನ ಶಾಸನವಿದ್ದು ಮೇಲ್ಭಾಗದಲ್ಲಿ ಸಖಿಯರು ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ಚಿತ್ರವಿದೆ.

ಹೊಳಲ್ಕೆರೆ ತಾಲ್ಲೂಕಿನ ಗಂಜಿಗಟ್ಟೆಯಲ್ಲಿ ಪಶುಪಾಲಕನಾದ ಗಾದರಿಪಾಲನಾಯಕನ ಶಿಲ್ಪವಿದೆ. ಹುಲಿಗಳೊಂದಿಗೆ ಹೋರಾಡುವಾಗ ಇವನು ಇವನ ತಮ್ಮ ಚಿನ್ನಪಾಲನಾಯಕ ಮಡಿಯುತ್ತಾರೆ. ತುರುಮಂದೆಗೆ ನುಗ್ಗಿದ ಹುಲಿಗಳೆರಡನ್ನು ಕೊಂದು ತಾನು ಮರಣ ಹೊಂದಿದ ಘಟನೆಯನ್ನು ಈ ವೀರಗಲ್ಲು ಸಂಕೇತಿಸುತ್ತದೆ. ಇವನು ಮಡಿದ ನಂತರ ಹೆಂಡತಿಯರಾದ ಕಂಚವ್ವ, ಕಾಮವ್ವರು ಸಹಗಮನ ಅನಸರಿಸುತ್ತಾರೆ. ಈ ಕಾರಣವಾಗಿ ಮಾಸ್ತಿಗಲ್ಲನ್ನು ನೆಡಿಸಲಾಗಿದೆ. ಇಂದಿಗೂ ಸಹ ಮಿಂಚೆರಿ ಗುಡ್ಡದಲ್ಲಿ ಚಿತ್ರದುರ್ಗ, ಚಳ್ಳಕೆರೆ ಭಾಗದ ಮ್ಯಾಸನಾಯಕರು ಹೋಗಿ ಒಂದು ದಿನ ಜಾತ್ರೆ ಮಾಡುತ್ತಾರೆ. ಇವರ ಕುರಿತು ಲಾವಣಿಗೀತೆಗಳು ಸಹ ಇವೆ. ಮತ್ತೊಬ್ಬ ಜಗಲೂರು ಪಾಪನಾಯಕನೆಂಬ ಪವಾಡಪುರುಷ ಮೂಲತಃ ಪಶುಪಾಲಕನಾಗಿ ಕಂಡುಬರುತ್ತಾನೆ.[೪೦೮] ಚಳ್ಳಕೆರೆ ತಾಲ್ಲೂಕು (ಗೋರ್ಲಕಟ್ಟೆ ಹತ್ತಿರ ಇವನು ದನ ಕಾಯುತ್ತಿದ್ದ ಈ ವೀರನ ಬಗ್ಗೆ ವೀರಗಲ್ಲು ದೇವಾಲಯ ಸಮಾಧಿ ಜಗಳೂರು, ಚಿತ್ರದುರ್ಗ, ದಾವಣಗೆರೆ ಬಳ್ಳಾರಿ ಜಿಲ್ಲೆಗಳು ಕಂಡುಬರುತ್ತವೆ.

ಬೇಟೆ, ಪಶುಪಾಲನೆಯೊಂದಿಗೆ ಬೆಳೆದು ಬಂದ ಬುಡಕಟ್ಟು ಜನರಾದ ಬೇಡರಿಗೆ ಪಶುಗಳೇ ಸಂಪತ್ತು. ವಿಜಯನಗರ ಸಾಮ್ರಾಜ್ಯ ಅಭಿವೃದ್ಧಿ ಪತ ತಲುಪಿದಾಗಲೇ ಆಂಧ್ರ, ಒರಿಸ್ಸಾದಿಂದ ಬೇಡ ಬುಡಕಟ್ಟಿನ ಪಶುಪಾಲಕರು ಕರ್ನಾಟಕಕ್ಕೆ ವಲಸೆ ಬಂದರು. ಇವರು ಮೂಲತಃ ಬೇಟೆಗಾರರಾದರೂ ಆನಂತರ ಪಶುಪಾಲನಾ ಕಸುಬನ್ನು ಶಾಶ್ವತವಾಗಿ ಉಳಿಸಿಕೊಂಡು ಬಂದರು. ಆಂಧ್ರದ ಶ್ರೀಶೈಲ, ತಿರುಪತಿ, ಕದ್ರಿ, ಅಹೋಬಲಂ ಮೊದಲಾದ ನೆಲೆಗಳಿಂದ ಇಲ್ಲಿಗೆ ಆಗಮಿಸಿರುತ್ತಾರೆ. ಇವರು ತಮ್ಮ ಜೊತೆ ೧೨ ಪೆಟ್ಟಿಗೆ ದೇವರು, ೫೦೦ ಜನ ಮೇಸರ್‍ರು ಸೇರಿ ವಿಜಯನಗರದ ಮೊದಲ ರಾಜಧಾನಿ ಆನೆಗೊಂದಿಗೆ ಬರುತ್ತಾರೆ.[೪೦೯] ಇವರ ಕಾಲಮಾನದ ಕುರಿತು ಗೊಂದಲಗಳಿವೆ.

ಆಂಧ್ರದ ಅನಂತಪುರ ಜಿಲ್ಲೆ ಮೂಲಕ ಬಂದುದು ಕೆಲವು ಗುಂಪುಗಳು ಮೊಳಕಾಲ್ಮೂರು ತಾಲ್ಲೂಕಿನ ಕಂಪಳ ದೇವರಹಟ್ಟಿ, ಮುತ್ತಿಗಾರಹಳ್ಳಿ ಮತ್ತು ನಾಯಕನಹಟ್ಟಿಯಲ್ಲಿ ತಂಗುತ್ತಾರೆ. ಕಂಪಳದೇವರಹಟ್ಟಿ ಹತ್ತಿರ ಜನಿಗೆಹಳ್ಳ(ಚಿನ್ನಹಗರಿ ನದಿ) ಪರಿಸರದಲ್ಲಿ ಗೋವುಗಳನ್ನು ಮೇಯಿಸಿಕೊಂಡು ಕಾಲಕಳೆದರು. ಈ ಗುಂಪಿನ ಕೆಲವರು ಜಗಲೂರು ಹತ್ತಿರ ಗುಹೇಶ್ವರ ಬೆಟ್ಟಕ್ಕೆ ಹೋಗುತ್ತಾರೆ.[೪೧೦] ಇವರು ಎಲ್ಲೆಲ್ಲಿ ಹೋಗಿ ನೆಲೆ ನಿಂತರೂ ಅವು ಪವಿತ್ರ ಕ್ಷೇತ್ರಗಳಾಗಿ ಖ್ಯಾತಿ ಪಡೆದವು.

ಪಶುಪಾಲಕರ ಸಾಂಸ್ಕೃತಿಕ ವೀರರಾದ ದಡ್ಡಿಸೂರನಾಯಕ, ಗಲ್ಲುಗಲ್ಲು ಗಾಜನಾಯಕ, ಯರಗಾಟನಾಯಕ, ಕೊರೆಲು ಪಾಪನಾಯಕ, ಕೊಡಗಲು ಬೊಮ್ಮಯ್ಯ, ಯರಮಂಚನಾಯಕ ಮೊದಲಾದ ಪಶುಪಾಲಕ ವೀರರು ತಮ್ಮ ಹೋರಾಟ, ದೈವ ಶಕ್ತಿಯ ಮೂಲಕ ಪಶುಪಾಲನ ಕುಟುಂಬಗಳಿಗೆ ದೇವರುಗಳಾಗಿದ್ದಾರೆ.[೪೧೧] ಹಾಗೆಯೆ ಕೆಲವೊಂದು ಬಾರಿ ಸಾಮ್ರಾಜ್ಯ ರಕ್ಷಣೆಗೂ ನಿಲ್ಲುತ್ತಿದ್ದರು. ಒಮ್ಮೆ ಆನೆಗೊಂದಿ ರಾಜನಿಗೆ ಕಿರುಕುಳ ಕೊಡುತ್ತಿದ್ದ ಭೀಮಾ ಜಟ್ಟಿಯನ್ನು ಸೋಲಿಸಿದ ಜೋಡಿ ಮಲ್ಲಪ್ಪನಾಯಕನಿಗೆ ಆನೆಗೊಂದಿ ರಾಜ ರಾಮರಾಯ ತಿರುಮಲ ರಾಜನು ಬುಕ್ಕಸಾಗರ ಹರಿಯ ಸಮುದ್ರ ಗ್ರಾಮಗಳ ನಡುವೆ ಇದ್ದ ಕಳಸಾಪುರ, ಕಮಲಾಪುರ,

ಕೆರೆಯ ಕೆಳಗೆ ೩ ಖಂಡುಗ ಬೀಜಾವರ್ರಿ ಭೂಮಿಯನ್ನು ಉಂಬಳಿಯಾಗಿ ಬಿಟ್ಟುಕೊಡುತ್ತಾರೆ.[೪೧೨] ಹೀಗೆ ಹಟ್ಟಿ ನಾಯಕರ ಆಳ್ವಿಕೆ ಆರಂಭವಾದಾಗ ರಾಯದುರ್ಗ ಮತ್ತು ನಾಯಕನಹಟ್ಟಿಯವರಿಗೆ ಒಪ್ಪಂದ ಏರ್ಪಡುತ್ತದೆ. ರಾಯದುರ್ಗ ಯರ್ರಿಬೊಮ್ಮಳನಾಯಕ ೩೦೦ ಕುರಿ, ೭೦೦ ಆಕಳು ಪಡೆದು ಮೊಳಕಾಲ್ಮೂರು ಸೀಮೆಯನ್ನು ಬಿಟ್ಟುಕೊಡುತ್ತಾನೆ.

ವಿಜಯನಗರ ಕಾಲದಲ್ಲಿ ಪಶುಪಾಲನಾ ವೃತ್ತಿ ಸಾಮಾಜಿಕವಾಗಿ ಒಂದು ಪ್ರಮುಖ ಸ್ಥಾನವನ್ನು ಪಡೆದಿತ್ತು. ಅದರಂತೆ ಮತ್ತೊಂದು ಪಶುಪಾಲನ ವೃತ್ತಿಯಲ್ಲಿ ಉಪಕಸುಬಾಗಿ ಬರುವುದೆಂದರೆ ಕುರಿಸಾಕಾಣಿಕೆ ಇವರನ್ನು ಕುರುಬ ಎಂಬ ಹೆಸರಿನಿಂದ ಸಂಬೋಧಿಸಲಾಗುತ್ತಿದೆ. ಕುರುಬ ಎನ್ನುವುದು ಮೊದಲಿಗೆ ಬೆಟ್ಟಗಳಲ್ಲಿ ವಾಸಿಸುವ ಜನರನ್ನು ಸೂಚಿಸುತ್ತಿತ್ತು. ಅನಂತರ ತಪ್ಪುಗ್ರಹಿಕೆಯಿಂದಾಗಿ ಕುರಿಕಾಯುವವರನ್ನು ಸೂಚಿಸಲಾರಂಭಿಸಿತು, ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಬೇಡರಂತೆ ಕುರುಬರು ವೀರ ಜನಾಂಗ, ಇವರು ತಮ್ಮ ವೀರತನದ ಜೊತೆಗೆ ಕೃಷಿ ಮತ್ತು ಪಶುಪಾಲನೆಯನ್ನು ಉಪಕಸುಬಾಗಿ ಸ್ವೀಕರಿಸಿದರು. ನಂತರ ಸಾಮಾಜಿಕವಾಗಿ ಮಾನ್ಯತೆ ಪಡೆದು ಅನೇಕ ದಾನ ಧರ್ಮ ಕಾರ್ಯಗಳಲ್ಲಿ ನಿರತರಾಗಿರುವುದು ಕಂಡುಬರುತ್ತದೆ.

ವಿಜಯನಗರ ಪೂರ್ವದಲ್ಲಿ ಈ ಕುರುಬ ಜನಾಂಗವಿತ್ತು ಎನ್ನುವುದಕ್ಕೆ ಶಾಸನೋಕ್ತ ದಾಖಲೆಯಿದೆ. ಕ್ರಿಶ. ೯೮೮ರ ಶ್ರೀನಿವಾಸಪುರ ತಾಲ್ಲೂಕು ಅರಕಲಕೋಟೆಯ ತೃಟಿತ ಶಾಸನವೊಂದರಲ್ಲಿ ಕುರುಂಬರ್ಬಟ್ಟ ಬಿದಿರಿಕಾಳ ಧರ್ಮ ನಿಡಿಹೆ ದೇಗುಲ[೪೧೩] ಎಂಬ ಉಲ್ಲೇಖ ಬಂದಿದೆ. ಮತ್ತೊಂದು ಶಾಸನ ಅರಕೋಣಂ ತಾಲ್ಲೂಕು ಪೊಯ್ಯನೂರು ಸ್ಥಳದ ಜಲನಾಥೇಶ್ವರ ದೇವಸ್ಥಾನಕ್ಕೆ ರಾಷ್ಟ್ರಕೂಟ ಕನ್ನರದೇವನ ನಂದಾದೀಪಗಳಿಗಾಗಿ ದತ್ತಿ ಬಿಟ್ಟ ಅದಕ್ಕಾಗಿ ೯೦ ಕುರಿಗಳು ಹಾಗೂ ಅವುಗಳನ್ನು ಕಾಪಾಡಲು ಮುಲಮಲ್ಲೈ ಕುರಿಗಾಹಿ ಕುರುಬನಿಗೆ ಜವಬ್ದಾರಿ ವಹಿಸಿರುವುದನ್ನು ತಿಳಿಸುತ್ತದೆ.[೪೧೪] ಹಾಗೆ ಅನೇಕ ಸಾಹಿತ್ಯ ಕೃತಿಗಳಲ್ಲಿಯೊ ಇವರ ಕುರಿತು ದಾಖಲೆಗಳಿವೆ. ಇವರ ಕಸುಬು ಕುರಿ ಸಾಕಾಣಿಕೆ, ಕೃಷಿ ಜೊತೆಗೆ ಕಂಬಳಿ ತಯಾರಿಕೆಯಾಗಿತ್ತು.

ಉತ್ತಮವಾದ ಸೊಪು ಸಕಲಾತಿಗಳ ಕಥೆಂಗಳ
ಚಿತ್ರವಸನಂಗಳು ಸ್ವರ್ಗಪಟ್ಟಾವಳಿಯ
ಮತ್ತವಾರಣಗಳಂ ಹೆಯಗಳು ವಿಮತರ ಚಿತ್ರಗಂಬಳ ಮನಿತ್ತು
ವಿಸ್ತರದಿ ಬಿನ್ನಪಂಗೈದುಂ ನಮಸ್ಕರಿಸಿ
ವಸ್ತುಮಂ ಮುಂದಿಟ್ಟು ಜಂಗಮಾರ್ಪಣೆಗೈದ
ನುಸ್ತಿರೋಚಿತಮನಂ ಶೈಲಗಣನಾಥ ಶಿವನ ಸ್ತುತಿಸಿ ಪುಳಕಿಸುತ್ತ.[೪೧೫]

ಕಂಬಳಿ ಎಂದರೆ ನೆನಪಿಗೆ ಬರುವುದು ಕುರುಬರು. ಇವರು ತಮ್ಮ ಕುರಿಗಳ ಉಣ್ಣೆಳಿಂದ ಬಣ್ಣ ಬಣ್ಣದ ಕಂಬಳಿಗಳು ತಯಾರಿಸುವರು ಅದರಲ್ಲೂ ಉತ್ತಮವಾದ ವಸ್ತ್ರ ತಯಾರಿಕೆ ಕಂಬಳಿಗಳಿಂದ ಶಿವನನ್ನು ಅಲಂಕರಿಸುವರು ಎಂದು ತಿಳಿಯುತ್ತದೆ.

ಅಲ್ಲಿ ಶಾಖೋಪಶಾಖೆಯ ಕಡಿಯಲ್ಲಿ ಕುರುಬ
ನಿಲ್ಲ ನಮ್ಮಯ ತಪೋಕುಜನ ಖಂಡಿಸುವನೀ

ಖಿಲ್ಲಗಡವಿಯ ಗಿಡಗಳತಿಯೊದವೇಯಂದಡಿಲ್ಲಲ್ಲ ಮರನಿನ್ನೆಯ
ಬಿಲ್ಲತನ ಶಾಂತವಿಂತಿರ ಬೇಡವೇ ಹೊಳೆಯ
ಕಲ್ಲುಕನು ಹಿಡಿದ ಗಾದೆ ನಿನಗುಂಪುಮೆಯ
ಪಲ್ಲಭನಿಳರ ವೃಕ್ಷದವ[೧೧೪]

ಕುರಿ ಕಾಯುವವನ ಕಸುಬು ಕುರಿ ಸಾಕುವುದು. ಅವರು ಬಿಸಿಲಿನಲ್ಲಿ ತಮ್ಮ ವೃತ್ತಿ ಮುಂದುವರೆಸಿ ಅವುಗಳ ತುಪ್ಪಟದಿಂದ ಕಂಬಳಿಗಳನ್ನು ತಯಾರಿಸುವನು. ಒಬ್ಬ ಮುನಿಯು ಒಂದು ಮರದ ಕೆಳಗೆ ತಪಸ್ಸಿಗೆ ಕುಳಿತರೆ ಎಷ್ಟು ಶಾಂತವಾಗಿ ಇರುವನೋ ಹಾಗೆ ಕುರುಬರು ಶಾಂತ ರೀತಿಯಲ್ಲಿ ತಮ್ಮ ಕಸುಬನ್ನು ವಂಶಪಾರಂಪರ್ಯವಾಗಿ ಮುಂದುವರೆಸಿರುವುದು ಕಂಡುಬರುತ್ತದೆ.

ಈ ಪಶುಪಾಲನೆ ಕಸುಬು ಪ್ರಮುಖವಾಗಿ ಬೇಡ ಮತ್ತು ಕುರುಬ ಸಮುದಾಯದವರನ್ನು ಪೋಷಿಸುತ್ತಿತ್ತು. ಈ ಕುರಿತು ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ಭೇಟಿ ನೀಡಿದ ವಿದೇಶಿ ಪ್ರವಾಸಿಗರ ವರದಿಗಳಿಂದ ದೃಢಪಡಿಸಬಹುದಾಗಿದೆ. ಡೊಮಿಂಗೊ ಪಾಯೇಸ್ (೧೫೨೦-೨೨) ವಿಜಯನಗರಕ್ಕೆ ಭೇಟಿ ಕೊಟ್ಟಾಗ ಅವನು ಪಶುಪಾಲಕ ದೃಶ್ಯವನ್ನು ಕಂಡು ಹೀಗೆ ಹೇಳಿದ್ದಾನೆ: ಈ ರಾಜ್ಯದ ಭೂಮಿಗಳು ಒಳ್ಳೆಯ ಸಾಗುವಳಿ ಮಾಡಿದವುಗಳು ಮತ್ತು ಬಲು ಫಲವತ್ತಾದವುಗಳಲ್ಲದೆ, ಇಲ್ಲಿ ಆಕಳ, ಎಮ್ಮೆ, ಕುರಿ ಮೊದಲಾದ ಜಾನುವಾರುಗಳು ವಿಪುಲತೆಯಿಂದ ಕೂಡಿವೆ ಎನ್ನುತ್ತಾನೆ. ಏಕೆಂದರೆ ಈ ನಾಡಿನಲ್ಲಿ ಅವರು ವಸ್ತುಗಳನ್ನು ಅಥವಾ ಆಕಳುಗಳನ್ನು ಕೊಲ್ಲುವುದಿಲ್ಲ. ಎತ್ತುಗಳು ಹೊರೆ ಹೊರುವ ಪ್ರಾಣಿಗಳು ಮತ್ತು ಹೇಸರುಗತ್ತೆಗಳಂತಿರುತ್ತವೆ, ಇವು ಅವರ ಎಲ್ಲಾ ಸರಕುಗಳನ್ನು ಹೊತ್ತೊಯ್ಯುತ್ತವೆ. ಅವರು ಆಕಳುಗಳನ್ನು ಪೂಜಿಸುತ್ತಾರೆ ಮತ್ತು ಅವುಗಳನ್ನು ಕಲ್ಲಿನಲ್ಲಿ ಕಟ್ಟಿದ ದೇವಸ್ಥಾನಗಳಲ್ಲಿ ಇಡುತ್ತಾರೆ. ಈ ದೇವಸ್ಥಾನಗಳಿಗೆ ದಾನ ಮಾಡಿದ ಅನೇಕ ಹೋರಿಗಳಿದ್ದು ಅವು ಊರು ಸುತ್ತಿದರೂ ಯಾರೂ ಅವುಗಳಿಗೆ ತೊಂದರೆ ಅಥವಾ ಹಾನಿ ಮಾಡುವುದಿಲ್ಲ[೧೧೬] ಎಂದು ತಿಳಿಸಿದ್ದಾನೆ. ಬಹುಶಃ ಅವನು ಗೂಳಿಗಳನ್ನು ಅಥವಾ ದೇವರೆತ್ತುಗಳನ್ನು ದನಗಳನ್ನು ಈ ರೀತಿ ಬಣ್ಣಿಸಿರಬೇಕು.

ಕೃಷ್ಣದೇವರಾಯನ ಪ್ರಧಾನ ಅಶ್ವಪತಿಯಾಗಿದ್ದ ಮಲ್ಲಪ್ಪನಾಯಕ ಕಾಲೇಕು(ಕ್ಯಾಲಿಕಟ್)ದ ಒಳನಾಡಿನಲ್ಲಿರುವ ಅವಳಿ (ಕೋಲಾರ ಜಿಲ್ಲೆ ಮೊರಸು ಒಕ್ಕಲು) ಪ್ರದೇಶದ ದೊರೆಯಾಗಿರುವನು. ಈ ನಾಡಿನಲ್ಲಿ ಕಬ್ಬಿಣ, ಹತ್ತಿ, ಭತ್ತ, ಆಡು, ಕುರಿ, ಆಕಳು ಮತ್ತು ಎಮ್ಮೆಗಳು ವಿಪುಲವಾಗಿದ್ದವೆಂದು ಅವನಿಗೆ ೧೫ ಸಾವಿರ ಪರ್ದಾಬಗಳ ಆದಾಯವಿದೆ. ೪೦೦ ಕುದುರೆ ಮತ್ತು ೬೦೦೦ ಕಾಲಾಳುಗಳೊಂದಿಗೆ ಸೇವೆ ಮಾಡಲು ಬಾಧ್ಯಸ್ಥರು ಮತ್ತು ರಾಜನಿಗೆ ಪ್ರತಿ ವರ್ಷ ೫ ಸಾವಿರ ಪರ್ದಾಬಗಳನ್ನು ಕೊಡುತ್ತಾನೆಂದು ನ್ಯೂನಿಜ್ ತಿಳಿಸಿದ್ದಾನೆ.

ಕುರುಬರಿಗೂ ಮತ್ತು ವಿಜಯನಗರದ ಅರಸು ಮನೆತನಕ್ಕೂ ಒಂದು ರೀತಿಯ ಅವಿನಾಭಾವ ಸಂಬಂಧ ಬೆಳೆದು ಬಂದಿರುವುದಕ್ಕೆ ಅನೇಕ ಆಧಾರಗಳಿವೆ. ಹಂಪಿ ಪರಿಸರದಲ್ಲಿ ಕುರುಬರಿಗೆ ಸಂಬಂಧಿಸಿದ ಅನೇಕ ಕುರುಹುಗಳಿರುವುದು ಇದಕ್ಕೆ ನಿದರ್ಶನಗಳಾಗಿವೆ. ಮೂರು ತಾಮ್ರ ಶಾಸನಗಳು, ಕುರುಬರ ಗುರು ಪರಂಪರೆಗೆ ಸಂಬಂಧಿಸಿದ (ತುರುವಕೆರೆ ಶಾಸನ, ಹೊಸ

ಶೋಧ ಶಾಸನ ಅಧ್ಯಯನ-೧-೨-೨೦೦೪ ಹಾಗೂ ಡಾ.ಬಿ.ರಾಜಶೇಖರಪ್ಪ ಅವರು ಪ್ರಕಟಿಸಿದ ಎರಡು ಶಾಸನ ೧) ಕುರುಬರು ದಾವಣಗೆರೆಯ ಗೌಡಿಕೆಯ ಹಕ್ಕನ್ನು ದಿವ್ಯದ ಮೂಲಕ ಗೆದ್ದುಕೊಂಡ ಶಾಸನ, ಇಮ್ಮಡಿ ಮೆದಕೇರಿ ನಾಯಕನ ಕಾಲದ ಒಂದು ತಾಮ್ರಪಟ ಈ ಶಾಸನಗಳು ಕುರುಬರ ಪ್ರಾಚೀನ ಧಾರ್ಮಿಕ ಮತ್ತು ಸಾಮಾಜಿಕ ಪದ್ಧತಿಯ ಮೇಲೆ ಹೊಸ ಬೆಳಕನ್ನು ಚೆಲ್ಲಿವೆ.[೪೧೭] ಪ್ರಸುತ ಶಾಸನವು ಕುರುಬರಿಗೂ, ಬಣಜಿಗರಿಗೂ ನಡೆದ ವಾದ-ವಿವಾದಗಳನ್ನು ವಿವರವಾಗಿ ನಿರೂಪಿಸುತ್ತದೆ. ಕುರುಬರಿಗೆ ಹಗಲುದೀವಟಿಗೆ, ಸಿಂಹಲಲಾಟ, ರುಂಡಮಾಲೆ ಮುಂತಾದ ಸಾವಿರ ಬಿರುದುಗಳು ಸಲ್ಲುವುದೆಂದು ಬಣಜಿಗರು ವ್ಯಾಜ್ಯ ಹೂಡಿದ್ದರು ಇದಕ್ಕೆ ಪ್ರತಿಯಾಗಿ ಬಣಜಿಗರ ಕುರುಬರ ದಾರಾಶುಕಣ ಕಟ್ಟಲಾಗದು, ಕಂಬಳಿಗದ್ದಿಗೆ ಹಾಕಲಾಗದು, ಕುರುಬರ ಬದುಕು ಮುಟ್ಟಲಾಗದು ಇವುಗಳಲ್ಲಿ ಒಂದು ನಿಮಗೆ ಸಲ್ಲವು ಎಂದು ವಾದ ಹೂಡಿದ್ದರು ಈ ಜಗಳ ಹಂಪಿಯಲ್ಲಿ ಬಗೆಹರಿಯಬೇಕು ಎಂದು ಎರಡೂ ಸಮುದಾಯದ ಮುಖಂಡರು ತೀರ್ಮಾನಿಸಿದರು. ಶಾಸನದ ಕೊನೆಯಲ್ಲಿ ಶಾಪಾಶಯವಿದೆ.[೪೧೮]

ವಿಜಯನಗರ ಕಾಲದಲ್ಲಿ ಈ ಪಶುಪಾಲಕ ಕಸುಬುಗಳಿಗೆ ಸಮಾಜದಲ್ಲಿ ತುಂಬಾ ಪ್ರಾಮುಖ್ಯತೆ ಕೊಟ್ಟಿದ್ದರು. ವಿಜಯನಗರ ಪೂರ್ವದಲ್ಲಿದ್ದ ಪಶುಪಾಲನೆಗೂ ಈ ಕಾಲಕ್ಕೂ ಸಾಕಷ್ಟು ವ್ಯತ್ಯಾಸವಿದೆ. ವಿಜಯನಗರ ಪೂರ್ವದಲ್ಲಿ ಗೋವುಗಳ ಕಳ್ಳತನ, ಗೋಗ್ರಹಣ ನಡೆದ ಅನೇಕ ಪ್ರಸಂಗಗಳಿವೆ. ಅವುಗಳನ್ನು ಶಾಸನ, ಶಿಲ್ಪಗಳು ದೃಢೀಕರಿಸುತ್ತವೆ. ವಿಜಯನಗರ ಕಾಲಕ್ಕೆ ಸುಧಾರಣೆ ಕಂಡುಬರುತ್ತದೆ. ಪಶುಪಾಲನೆ ಜೊತೆಗೆ ಇಲ್ಲಿ ಕೃಷಿಯನ್ನು ಅವಲಂಬಿಸಿದ್ದರು. ಗೋವುಗಳ ಸಾಕಾಣಿಕೆ ಸ್ಪರ್ಧೆ ಇಳಿಮುಖವಾದಂತಾಯಿತು ಆದರೂ ಗೋವುಗಳಿಗೆ ಪೂಜ್ಯನೀಯ ಸ್ಥಾನವಿತ್ತು. ಅರಸನಿಗೆ ಸ್ವಂತ ಗೋವುಗಳಿಲ್ಲದಾಗ ಇನ್ನೊಬ್ಬರಿಂದ ಅದನ್ನು ಖರೀದಿಸಿ ಪುರೋಹಿತರಿಗೆ ಕುಶಲಕರ್ಮಿಗಳಿಗೆ ಕೊಡುತ್ತಾನೆ. ಅಂದು ದನಗಳನ್ನು ಕಾಯುವ ಮತ್ತು ಹುಲ್ಲುಗಾವಲಿನ ಪ್ರದೇಶಕ್ಕೆ ಪ್ರವೇಶಿಸಲು ತೆರಿಗೆ ಕೊಡಬೇಕಾಗಿತ್ತು.

ವಿಜಯನಗರ ಕಾಲದ ಪಶುಪಾಲನೆ ಹೆಚ್ಚಾಗಿ ಮಲೆನಾಡು, ಬಯಲುಸೀಮೆ ಹಾಗೂ ಜಲಸಂಪನ್ಮೂಲ ಮತ್ತು ಹುಲ್ಲುಗಾವಲು ಪ್ರದೇಶದಲ್ಲಿತ್ತು. ಇಲ್ಲಿ ಆರೋಗ್ಯಯುತ ಪಶುಗಳನ್ನು ಪೋಷಿಸಲಾಗುತ್ತಿತ್ತು. ಮಧ್ಯ ಕರ್ನಾಟಕದಲ್ಲಿ ಬೇಡರು, ಕುರುಬರು ಮತ್ತು ಗೊಲ್ಲರು ಪ್ರಮುಖ ಪಶುಪಾಲಕರಾಗಿದ್ದರು, ಸಾಕುವ ಗೋವುಗಳನ್ನು ದೇವರಿಗೆಂದು ಬಿಟ್ಟು ಎತ್ತು ದನಗಳನ್ನು ದೇವರೆತ್ತುಗಳೆಂದು ಕರೆಯುತ್ತಿದ್ದರು. ಇಂದಿಗೂ ಸಹಸ್ರಾರು ಸಂಖ್ಯೆಯ ದೇವರೆತ್ತುಗಳಿರುವುದನ್ನು ಗಮನಿಸಬಹುದು. ಇವುಗಳನ್ನು ಕಾಯುವವನಿಗೆ ಕಿಲಾರಿ ಎನ್ನುತ್ತಾರೆ. ಗೊಲ್ಲರಲ್ಲಿ ಎತ್ತಪ್ಪ, ಜುಂಜಪ್ಪ, ಲಂಬಾಣಿಗರ ಸೇವಾಲಾಲ ಮತ್ತು ರಾಮೋಜಿ, ಕುರುಬರ ಮಾಳಿಂಗರಾಯ, ಮೈಲಾರ, ಬೇಡರ ಗಾದರಿಪಾಲನಾಯಕ[೪೧೯] ಇವರು ಪ್ರಮುಖ ನಾಯಕರಾಗಿದ್ದರು.

ವಿಜಯನಗರ ಕಾಲದಲ್ಲಿ ಹೀಗೆ ಪಶುಪಾಲನ ಕಸುಬು ಸಾಮಾಜಿಕವಾಗಿ ಪ್ರಮುಖ ಸ್ಥಾನಮಾನ ಪಡೆದುಕೊಂಡಿತ್ತು. ಅದಕ್ಕೆ ಅರಸರ ಪ್ರೋತ್ಸಾಹವಿತ್ತರು. ಪಶುಪಾಲಕ ಸಮಾಜದಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದ್ದರು. ಇಂದಿಗೂ ಸಹ ಕುರುಬರು ನೇಯುವ ಕಂಬಳಿ

ಸಮಾಜದಲ್ಲಿ ಒಂದು ಪ್ರಮುಖ ಸ್ಥಾನಮಾನವನ್ನು ಪಡೆದುಕೊಂಡಿದ್ದು ಅದನ್ನು ಪ್ರತಿಯೊಂದು ಶುಭಕಾರ್ಯಗಳಲ್ಲೂ ಬಳಸಲ್ಪಡುತ್ತಾರೆ.

೧೫. ಮಾಲೆಗಾರರು

ರೈತರ ಮನೆ, ದೇವಸ್ಥಾನಗಳಿಗೆ ದಿನನಿತ್ಯ ಪೂಜಾದಿ ಕಾರ್ಯಗಳಿಗೆ ಹೂಗಳನ್ನು ಮಾಲೆ ಕಟ್ಟಿ ಮಾರುವವರನ್ನು ಮಾಲೆಗಾರರು ಎನ್ನುವರು. ಇವರ ಕಸುಬು ಹೂಗಾರಿಕೆ. ಇವರನ್ನು ಹೂಗಾರರು, ಮಾಲೆಗಾರರು, ಜೀನಗಾರ, ಜೀರುಗೊರವ, ಮಾಲಿ, ಫೂಲಿಮಾಲಿ ಇತ್ಯಾದಿ ಹೆಸರುಗಳಿಂದ ಕರೆಯುವರು. ಪೂಜಾ ಕಾರ್ಯಗಳು ಹೂವು, ಪತ್ರೆಗಳಿಲ್ಲದೆ ನಡೆಯುವುದಿಲ್ಲ. ಅದಕ್ಕಾಗಿ ಹೂವು ಮತ್ತು ಪತ್ರೆಗಳನ್ನು ಬೆಳಗಿನ ಸಮಯದಲ್ಲಿ ಮನೆ ಮನೆಗೆ ಹೋಗಿ ಕೊಡುವರು. ಗಿಡದಿಂದ ಪತ್ರೆ ಮತ್ತು ಹೂವುಗಳನ್ನು ತರಲು ಹೊರಟಾಗ ಸ್ನಾನ ಮಾಡಿ ಮಡಿಯಿಂದ ಇರುತ್ತಾರೆ. ಗಿಡವನ್ನು ಹತ್ತುವುದಿಲ್ಲ, ದೋಟಿಯಿಂದ ಕೆಳಗಿನಿಂದಲೇ ಪತ್ರೆಯನ್ನು ಹರಿಯುತ್ತಾರೆ. ಹತ್ತಬೇಕಾದ ಸಂದರ್ಭದಲ್ಲಿ ಮಾತ್ರ ಅದಕ್ಕೆ ನಮಸ್ಕರಿಸಿ ಹತ್ತುತ್ತಾರೆ. ಕೆಳಗಡೆ ಬಿದ್ದ ಪತ್ರೆಯನ್ನು ಕಾಲಿನಿಂದ ತುಳಿಯುವುದಿಲ್ಲ. ಇವರಿಂದ ಪತ್ರೆಯನ್ನು ಪಡೆದು ಕೊಂಡ ಜನಗಳು ಅವರ ಪತ್ರೆ ಬುಟ್ಟಿಯಲ್ಲಿ ಅಕ್ಕಿ, ಕಾಳುಕಡಿಗಳನ್ನು ಹಾಕುವರು. ಖಾಲಿ ಬುಟ್ಟಿಯನ್ನು ಕೊಡಬಾರದೆಂಬ ಸಂಪ್ರದಾಯಿವಿದೆ. ಹಬ್ಬ–ಹರಿದಿನಗಳಲ್ಲಿ ಹೂ ಮಾಲೆಗಳನ್ನು ವಿಶೇಷವಾಗಿ ಕಟ್ಟಿ ಮಾರುವರು ಈ ಕಾರ್ಯಗಳನ್ನು ಮಾಲೆಗಾರರು ಮಾಡುವರು. ಹೂ ಪತ್ರೆಗಳನ್ನು ಗಂಡಸರು ತರುತ್ತಾರೆ. ಅವುಗಳನ್ನು ಕಟ್ಟಿ ಮಾರುವವರು ಹೆಂಗಸರು. ವಿಜಯನಗರ ಕಾಲದಲ್ಲಿ ಈ ಕಸುಬು ಇತ್ತು ಎಂಬುದಕ್ಕೆ ಹಂಪಿಯಲ್ಲಿ ದೇವಸ್ಥಾನಗಳಿಗೆ ನಡೆಯುವ ಪೂಜಾವಿಧಾನಗಳು, ದಾಖಲೆಯಾಗುತ್ತವೆ. ಕಟ್ಟಿದ ಹೂಮಾಲೆಗೆ ತೆರಿಗೆಯನ್ನು ಹಾಕಿದ ಶಾಸನೋಕ್ತ ದಾಖಲೆಗಳು ದೊರೆಯುತ್ತವೆ. ಈ ಸಾಮ್ರಾಜ್ಯದ ರಾಜಧಾನಿಯಾದ ಹಂಪಿಯಲ್ಲಿ ವಿವಿಧ ಧಾರ್ಮಿಯ ದೇವಸ್ಥಾನಗಳು ಇವೆ. ಇವುಗಳಿಗೆ ಪ್ರತಿನಿತ್ಯ ಪೂಜಾ ವಿಧಿ ವಿಧಾನಗಳು ನಡೆಯುತ್ತಿದ್ದವು. ಅವುಗಳಿಗೆ ವಿವಿಧ ಹೂಗಳಿಂದ ತಯಾರಿಸಿದ ಬೇರೆ ಬೇರೆ ಗಾತ್ರದ ಹಾರಗಳನ್ನು, ಹೂವುಗಳನ್ನು ಹಾಕಿ ಪೂಜಿಸಲಾಗುತ್ತಿತ್ತು. ಅವುಗಳನ್ನು ಈ ಹೂ ಮಾಲೆಗಾರರು ಪೂರೈಸುತ್ತಿದ್ದರು. ಈ ರೀತಿ ಹೂಮಾಲೆ ಪತ್ರೆಗಳನ್ನು ಮಾಡುವ ಕಸುಬಿನವರು ವಿಶೇಷವಾದ ಹಬ್ಬ ಹರಿದಿನಗಳ ಸಂದರ್ಭದಲ್ಲಿ ದೊಡ್ಡ ಹೂಮಾಲೆಗಳನ್ನು ಕಟ್ಟುತ್ತಿದ್ದ ಇವರು ಕಟ್ಟಿದ ಹೂಮಾಲೆಗಳಿಂದ ರಥಗಳನ್ನು ಸಿಂಗರಿಸಿ ಈ ಕೆಲಸವನ್ನು ಹೂಮಾಲೆಗಾರರೇ ಮಾಡುತ್ತಿದ್ದರು. ರಥ, ಪಲ್ಲಕ್ಕಿಗಳನ್ನು ಅಲಂಕರಿಸುವುದು, ವಿಶೇಷ ಸಂದರ್ಭದಲ್ಲಿ ಜರುಗುವ ಶುಭಕಾರ್ಯಗಳಿಗೆ ಹೂಗಳನ್ನು ಒದಗಿಸುವುದು ಸ್ತ್ರೀ ಋತುಮತಿಯಾದಾಗ, ಕೂಸು ಜನಿಸಿದಾಗ. ನಾಮಕರಣ ಸಂದರ್ಭದಲ್ಲಿ ತೊಟ್ಟಿಲಿಗೆ ಮಾಲೆ ಮತ್ತು ಬಿಡಿ ಹೂಗಳನ್ನು ಕೊಡುವರು.

ಮಾಲ್ಯವಂತ ರಘುನಾಥ ದೇವಾಲಯದ ಪೂರ್ವ ದ್ವಾರದ ಕೆಳಗಿನ ಬಲ ಭಿತ್ತಿಯಲ್ಲಿ ಉಬ್ಬು ಚಿತ್ರವಿದೆ. ಅದರಲ್ಲೂ ತೊಟ್ಟಿಲನ್ನು ಹೂಗಳಿಂದ ಅಲಂಕರಿಸಿರುವುರುದು ಕಂಡುಬರುತ್ತದೆ. ಹಾಗೆಯೆ ಆಂಧ್ರದ ಚಿಂತಾಂಲ ವೆಂಕಟರಮಣ ದೇವಾಲಯ, ಹಜಾರರಾಮಚಂದ್ರ, ವಿರೂಪಾಕ್ಷ

ದೇವಾಲಯ ಇನ್ನು ಹಲವು ಸ್ಮಾರಕಗಳ ಮೇಲಿನ ಉಬ್ಬು ಶಿಲ್ಪಗಳಲ್ಲಿ ಕೂಡ ಹೂಮಾಲೆ ಹಾಕಿರುವ ಉಬ್ಬು ಚಿತ್ರಗಳಿರುವುದನ್ನು ಕಾಣುತೇವೆ. ದೀಪಾವಳಿ, ದಸರಾ, ಪಂಚಮಿ, ಹಬ್ಬಗಳಲ್ಲಿ ಸ್ತ್ರೀಯರಿಗೆ ಅದರಲ್ಲೂ ಮುತ್ತೈದರಿಗೆ ಹೂವಿನ ದಂಡೆಗಳನ್ನು ಮಾಡಿಕೊಡುವರು[೧೨೦] ಈ ಎಲ್ಲಾ ಕೆಲಸ ಕಾರ್ಯಗಳಿಗೆ ಗ್ರಾಮದ ಗ್ರಾಮಸ್ಥರು ಇನಾಮ ಹೊಲ ಅಥವಾ ಮಾನೇರ ಹೊಲ ಕೊಟ್ಟಿದ್ದುಂಟು.

ಅಂದು ಸ್ತ್ರೀಯರು ಹೇಗೆ ಹೂವುಗಳನ್ನು ಮುಡಿದು ಸಿಂಗರಿಸಿ ಕೊಳ್ಳುತ್ತಿದ್ದರು ಎಂಬುದನ್ನು

ಜಡೆಗಳೊಳಗೆ ಮಲ್ಲಿಗೆಯ ಹೂವಿನಸರ
ಬಿಡದುಟ್ಟ ಸಾಲಿಯ ಸೀರೆ
ಕಡುಪರಿಮಳವಾಂತ ದಿವ್ಯಾಂಗದ ಚಲ್ವ
ಮಡದಿ ರನ್ನೆಯರೊಪ್ಪಿದರು.[೧೨೧]

ಇಲ್ಲಿ ತನ್ನ ಹೆಂಡತಿಯು ಮಲ್ಲಿಗೆಯ ಹೂವಿನ ಸರವನ್ನು ಉಟ್ಟು ಹೇಗೆ ಕಾಣುತ್ತಿದ್ದಳು ಎಂಬುದನ್ನು ಕವಿಯ ವರ್ಣಿಸಿರುವರು.

ಕಟ್ಟೆಂಬ ನುಡಿ ಮಾಲೆಗಾರ್ತಿಯರೊಳು ನೆರೆ
ಪೆಟ್ಟೆಂಬ ನುಡಿ ಟಂಕದೊಳಗೆ
ಕುಟ್ಟೆಂಬ ನುಡಿ ವ್ರೀಹಿಯೊಳಲ್ಲದೆ ಬೇರೆ
ದಿಟ್ಟಿಸಲಾ ನಾಡುಳಿಲ್ಲ.[೧೨೨]
ಪರಿಮಳವೆರದಿಂಪಿನ ದಿವ್ಯಪುಷ್ಪವ
ಪರಿಕೊಂಡತಿಹರುಷದಲಿ
ಸರಗಟ್ಟಿ ಬೆಲೆಗೆ ಮಾರುವ ಮಾಲೆಗಾತಿಯ
ರಿದವ ನಾನೇನ ಬಣ್ಣಿಪೇನು[೧೨೩]

ಇಲ್ಲಿ ಸ್ತ್ರೀಯರು ಹೇಗೆ ಹೂಮಾಲೆಗಳನ್ನು ಕಟ್ಟುತ್ತಿದ್ದರು, ಕಟ್ಟಿದ ಹೂ ಮಾಲೆಗಳನ್ನು ಹೇಗೆ ಮಾರುತ್ತಿದ್ದರು ಎಂಬುದರ ವಿವರವನ್ನು ಕೊಡಲಾಗಿದೆ. ಹಂಪೆಯಲ್ಲಿ ಏಳು ಬಜಾರುಗಳಿದ್ದು, ಅಲ್ಲಿ ವಿವಿಧ ರೀತಿಯ ವಸ್ತುಗಳನ್ನು ಮಾರುತ್ತಿದ್ದರು ಅದರಲ್ಲಿ ಹೂಗಳು ಇರುತ್ತಿದ್ದವು ಎಂಬುದನ್ನು ತಿಳಿದುಬರುತ್ತದೆ.

ಇಂದು ಕಳೆಯುವ ಮುತ್ತುಗಳಲಾ
ನಂದದಿಂದಕ್ಷತೆಯನಿಟ್ಟಳು
ತಂದು ತರುಣೀಯರೀದ ಹೂವಿನ ದಂಡಯಿಂದೆಯನು
ಸಂದಿಸುತ ನಾನಾ ಪ್ರಕಾರದ
ಚೆಂದ ಚೆಂದವ ಪತ್ರೆ ದೊರ್ವೆಗ
ಳಿಂದೆ ಮಾಯಾದೀವಿ ಮಾಡಿದಳ ಭವೆ ಪೂಜೆಯನು.[೧೨೪]

ಅಕ್ಷತೆಯನ್ನಿಟ್ಟ ತರುಣಿಯರು ತಂದು ಕೊಡುವ ಹೂವಿನ ಮಾಲೆ, ಹೂವಿನ ರಾಶಿಯನ್ನು ಮಧುರನಾಥನಿಗೆ ಏರಿಸುತ್ತಾ ನಾನಾ ಬಗೆಯ ಚೆಂದ ಚೆಂದದ ಪತ್ರೆ ಗರಿಕೆಗಳಿಂದ ಶಿವನ ಪೂಜೆಯನ್ನು ಮಾಡಿದರು.

ಬೆಳೆದ ಕೆಂಗರ್ವು ಬಿಬ್ಬರ ಬಿರಿದು ಚೆಲ್ಲಿರುವ
ಮುತ್ತುಗಳ ಕೋಯ್ದು ಹಾರವ ಧರಿಸಿಕೊಂಡ ಚೆಲ್ವೆಯರು ಕೊಯ್ವಲವ ಕಾವಾಗ ರಾಜಯಶ
ಗೀತೆಗಳ ಹಾಡುತ್ತಿದ್ದರು ಬಿನದದಿಂದ[೪೨೫]

ಇಲ್ಲಿ ಸ್ತ್ರೀಯರು ಹೇಗೆ ಹಾಡುಗಳನ್ನು ಹಾಡುತ್ತಾ ಹೂಗಳನ್ನು ಕೊಯ್ಯುತ್ತಿದ್ದರು. ಹಾಗೆ ಕೊಯ್ದು ಹೂವುಗಳನ್ನು ಹೇಗೆ ಚೆಲುವೆಯರು ಹಾರ ಮಾಡಿಕೊಂಡು ಶೃಂಗರಿಸಿಕೊಳ್ಳುತ್ತಿದ್ದರು ಎಂಬುದನ್ನು ತಿಳಿಸಲಾಗಿದೆ.

ಪಿರವಧೂ ಪರಿರಂಭೂಗೋಲ್ಲಾಸದಲಿ ಲಲಿತ
ಪುಳಕದಲಿ ರೋಮಗಳು ನಿಮಿರುವಂತೆ
ಕುರುವಕವು ತೋರಿತಹ! ಮದನ ನಿಗ್ರಹಗೈದ
ವ್ರತಿಗಳಿಗು ರಾಗದುನ್ಮಾದ ವೇರೆ
ಪುಷ್ಪದುಪಚೆಯ ಹವಿಕೊಯ್ವುವುದು.[೪೨೬]

ಇಲ್ಲಿ ಮದುವೆಯ ಸಮಯದಲ್ಲಿ ವಧುವರರಿಗೆ ಹೂವಿನ ಹಾರಗಳು ಬೇಕು, ಆಗ ಹೂವಿನ ಮಾಲೆ ಧರಿಸಿ ಕೊಂಡು ಹೇಗೆ ಕಾಣುತ್ತಿದ್ದರು ಎಂಬುದನ್ನು ತಿಳಿಸಲಾಗಿದೆ.

ದೇವೇಂದ್ರನಪ್ಸರೆಯರೊಡಗೂಡಿ ನಡೆವಂತೆ
ನಂದನವ ಹೋಮತಿಹ ಪ್ರಮದವನಕೆ
ಕಂಪಣ ನರೇಂದ್ರ ತನ್ನೊಲವಿನರಸಿಯರೊಡನೆ
ಹೊರಟು ನಡೆದನು ಪುಷ್ಪದ ಪಚಯಕ್ಕೆ[೪೨೭]

ಅಪ್ಸರೆಯರ ಜೊತೆಯಲ್ಲಿ ದೇವೇಂದ್ರ ಹೇಗೆ ಹೋಗುತ್ತಾನೊ ಹಾಗೆ ವಧುವರರು ಹೋಗುತ್ತಿದ್ದದರ ವಿವರವಿದೆ.

ಕೆಂಬಣ್ಣ ರಂಜಿಸುತ ದುಂಡಾದ ಚಂದಿರನ
ಮಂಡಲವ ನೊಡಿದರೆ ಸಂದೇಹವಹುದು
ಆರಕ್ತ ಸಂಧ್ಯಾಕ ಪುಷ್ಪದಲಿ ಪುಷ್ಪಶರ
ವಿಜಯ ಛತ್ರವೆ ರಚಿಸಿಕೊಂಡ ತನಗೆಂದು.[೪೨೮]

ಅಂದು ಯಾವ ರೀತಿಯ ಹೂವುಗಳನ್ನು ಬೆಳೆಯುತ್ತಿದ್ದರು ಎಂಬುದು ಮೇಲಿನ ಪದ್ಯದಿಂದ ತಿಳಿಯುವುದು

ಶಾಳಿವನ ಗರ್ದೆ ನವಪಟ್ಟಕದೆ ಸಾಲಿನಿಂ
ನಾಳಿಕೇರವ್ರಜಗಳಿಂ ಕಂಡಕೇರದಿಂ
ಬಾಳೆ ಬಿಕುಳಂ ಚಂಪಕಂ ರಸಾಲಂಗಳಿಂ ದಾಳಿಮಕಪಿತ್ಥಂಗಳಿಂ
ಧೂಳಿಮದ ಕುಂಕುಮ ಸುಗಂಧಕುಜದಿಕ್ಕಿಯಿಂ
ಕಾಳಿಮದ ಮಲ್ಲಕಾಸುಮನದಿಂ ಭ್ರಮರದಿಂ
ಪಾಳಿವಿಡಿದಿಂತೆಸೆವ ಪುಷ್ಪವಾಟಿಕವಸೆಯೇ ಚಾಳಕದೆ ಕಿಂಜಲ್ಕದಿ

ಪುಷ್ಪವಾಟಿಕೆ ಅಂದರೆ ಹೂವಿನಂಗಡಿ ಬೀದಿ, ಹೂವುಗಳನ್ನು ಹೇಗೆ ಬೀದಿಯಲ್ಲಿ ಮಾರಾಟ ಮಾಡುತ್ತಿದ್ದರು ಎಂಬುದು ಗೊತ್ತಾಗುತ್ತದೆ.

ದಿಂಡುಗೆಡೆದಳು ಧರೆಗೆ ಹೂವಿನ
ದಂಡೆಯನ್ನು ಬಿಸುವಂತೆ ಕೆದರಿದ
ಮಂಡೆಯಲಿ ಬಿಡುಮುಡಿಯ ಮಲ್ಲಿಗೆ ಸೂಸಲವನಿಯು
ಕಂಡು ಕೆಳದಿಯರೊರಲಿವರು ಋಷಿ
ಮಂಡಲ ವಿದೇನೆನಂತೆ ಕೇಳುತ
ಪುಂಡರೀಕೆವಳಾಕ್ಷೆಯಲ್ಲಿಗೆ ಬಂದುದಾಕ್ಷಣಕೆ[೪೨೯]

ಹೂವಿನ ರಾಶಿಗಳನ್ನು ಹೇಗೆ ಹಾಕುತ್ತಿದ್ದರು ಎಂದು ಮೇಲಿನ ಚಿತ್ರಣದಿಂದ ತಿಳಿಯುತ್ತದೆ.

ಹೂಗಾರರ ಕುರಿತು ಅನೇಕ ಶಾಸನೋಕ್ತ ದಾಖಲೆಗಳಿವೆ. ದೇವರ ಪೂಜೆಗೆ ಹೂವುಗಳನ್ನು ಸಮರ್ಪಿಸುತ್ತಿದ್ದವರಿಗೆ ದಾನ ಕೊಟ್ಟ ವಿವರವಿದೆ. ರಂಗನಾಥ ದೇವರಿಗೆ ನಿತ್ಯಪೂಜೆ ಸೇವೆಗಳು ನಿಯತವಾಗಿ ಪದಿವೆಟ್ಟಾಂಪಡಿಯ ವಿಶೇಷ ಪೂಜೆಗೆ ಅನುಕೂಲವಾಗುವಂತೆ ದೇವಾಲಯದ ಹೂವಿನ ತೋಟವನ್ನು ನಿರ್ವಹಿಸುವುದು.[೪೩೦] ದೇವರ ಪೂಜೆಗಾಗಿ ಹೂವಿನ ತೋಟಗಳನ್ನು ಬೆಳೆಸುತ್ತಿದ್ದರು ಎಂಬುದಾಗಿದೆ.

ಅಂಗಭೋಗಕ್ಕೆ ಚೈತ್ರಪೋತ್ರಕ್ಕಂ ಪೂಜಾರಿಗಂ
ಹಾಡುವರ್ಗಂ ಹರೆಕಾರಿರ್ಗ್ಗಂ ದೇವರ
ಪೂದೋಂಟಮಂ ಮಾರ್ಪ್ಪ ಮಾಲೆಗಾರಿಂಗೆ ಇನಿಬರ[೪೩೧]

ಶ್ರೀ ಮೂಲಸ್ಥಾನ ದೇವರ ನೈವೇದ್ಯಕ್ಕೆ ಅಂಗಭೋಗಕ್ಕೆ ಚೈತ್ರ ಪವಿತ್ರಕ್ಕೆ ಪೂಜಾರಿಗೆ, ಹಾಡುವರು, ಹರಿಕಾರರು, ದೇವರ ಹೂದೋಟವನ್ನು ನಿರ್ವಹಿಸುವ ಮಾಲೆಗಾರರಿಗೆ ಬಡ್ಡಿಯಿಂದ ಬರುವ ಹಣದಿಂದ ಜೀವನ ನಿರ್ವಹಿಸುವರು.

ನೆಳಲ ಹುಣಸೆಯ ಗಿರಿಯ ಗವಿಯಲ್ಲಿನ ಕಲ್ಲಿನಲ್ಲಿ ಚೆಂಚರ ಮಲ್ಲಿಕಾರ್ಜುನನು ಉದ್ಭವ ಮೂರ್ತಿಯಾಗಿ ಕಾಣಿಸಿಕೊಂಡನು. ಪಾತಾಳಗಂಗೆ ಮತ್ತು ಗೌರಿಯ ಗಂಡನಾದ ಶ್ರೀಶೈಲ ಮಲ್ಲಿಕಾರ್ಜುನನು ಅದೇ ಗುಹೆಯ ಕಲ್ಲಿನಲ್ಲಿ ಪ್ರತ್ಯಕ್ಷನಾದ ಭೈರವಮೂರ್ತಿ ಅಯ್ಯನ ಕನಸಿನಲ್ಲಿ ಒಂದು ಘಟನೆಯನ್ನು ವಿವರಿಸಿದ. ಇದನ್ನು ಕೇಳಿ ಹೂವಿಗನು ಆ ಸ್ಥಳವನ್ನು ಪುಣ್ಯಕ್ಷೇತ್ರವಾಗಿ ಮಾಡಿದ.[೪೩೨]

ಪುಟಪರ್ತಿಯ ಲಿಂಗಾಭಟರ ಮಗ ಕಂಭಂ ಕಾವುದೀಕ್ಷಿತರಿಗೆ ಕ್ರಯಪತ್ರ ಮಾಡಿದರು. ಪೂಜೆ ಮತ್ತು ದೇವಾಲಯದ ವ್ಯವಸ್ಥೆ ನೋಡಿಕೊಳ್ಳಲು ಆಯಿರಾಮಜಯನ ಮಕ್ಕಳಾದ ಸ್ಥಾನಿಕನಾದ ಹಿರಿವಲಭಯ ಮತ್ತು ಚಿಕ್ಕವಲಭಯರಿಗೆ ಒಪ್ಪಿಸಿದರು. ಇವರು ದೇವರ ಪೂಜೆ ನೈವೇದ್ಯ ಮಾಡಿಕೊಂಡು ಇರಬೇಕು. ಹೂವಿನ ಹಾರ ತಯಾರಿಸಿದವರಿಗೆ ೩ ಪಡಿ ಮತ್ತು ೨ ಪಡಿ, ದೇವಾಲಯವನ್ನು ಕಾಯುವವನಿಗೆ ಬಿಡಬೇಕೆಂದು ಸಲಹೆ ಮಾಡಿದನು.[೪೩೩]

ಕುಪ್ಪಣ ಒಡೆಯರ ಬಾರಕೂರನ್ನು ಆಳುವಾಗ ಭಂಡಾರದ ಗುರುರಾಯ ಒಡೆಯರ ಬಾರಕೂರಿನ ಶ್ರೀ ಕೋಟಿನಾಥ ದೇವರ ದರ್ಶನಕ್ಕೆ ಬಂದು ದೇವರಾಯ ಮಹಾರಾಯರ ಹೆಸರಿನಲ್ಲಿ ದೇವಾಲಯದಲ್ಲಿ ಮಠವನ್ನು ಮಾಡಿಸಿ ಮಹಾಪೂಜೆ, ಪರಿಮಳದ ಹೂಮಾಲೆಗೆ ೬ ಗದ್ಯಾಣಗಳನ್ನು ನೀಡಲಾಗಿದೆ.[೪೩೪]

ಪ್ರತಾಪದೇವರಾಯರು ಸಾಮ್ರಾಜ್ಯವನ್ನು ಆಳುತ್ತಿರುವಾಗ ಶ್ರೀರಂಗನಾಥನ ಸೇವೆಗಾಗಿ ಆದಿತ್ಯ ಉಡೈಯಾರ್‌ನ ಮಗನಾದ ಅಣ್ಣಚಾಂಡಪ್ಪಗಳು ದೇವಾಲಯದ ಅಧಿಕಾರಿ ಉತ್ತಮನಂಬಿಗೆ ಮರನಾಡಿನ ತೆಂಕರ್ರೈ ರಾಜಗಂಭಿರವಳನಾಡು ಮತ್ತು ಶಿರತಾಮಾರು ಗ್ರಾಮಗಳನ್ನು ದಾನವಾಗಿ ನೀಡಲಾಗಿದೆ. ಇದನ್ನು ಹೂಮಾಲೆಗೆ, ಪ್ರತಿದಿನದ ನೈವೇದ್ಯಕ್ಕೆ ತುಪ್ಪ ಸಕ್ಕರೆಗಾಗಿ ನಂದಾದೀಪಕ್ಕೆ ಮತ್ತು ರಂಗನಾಥನ ರಥ ಉತ್ಸವಕ್ಕೆ ನೀಡಲಾಗಿದೆ.[೪೩]

ಹೂಗಾರನು ವಿವಿಧ ರೀತಿಯ ಮಾಲೆಗಳನ್ನು ತಯಾರಿಸುತ್ತಾನೆ. ಮದುವೆಯ ಸಮಯದಲ್ಲಿ ಮದುಮಗಳಿಗೆ ತಲೆದಂಡೆ, ಹೂವಿನ ಮಾಲೆಯ ಸರ ಮಾಡಿಕೊಡುವನು. ಈ ದಂಡ ಸರ, ಮೊದಲಾದವುಗಳನ್ನು ಮಲ್ಲಿಗೆ, ಸೇವಂತಿಗೆ, ಚೆಂಡುಹೂ ಇತ್ಯಾದಿ ಹೂಗಳಿಂದ ಮಾಡಿಕೊಡುವರು.

ಉತ್ತರ ಕರ್ನಾಟಕದ ಸುಗ್ಗಿಯ ಕಣದಲ್ಲಿ ಹೂಗಾರನು ನೀಡಿದ ಪತ್ರೆ ಹೂವಿನ ದಂಡೆಗಳಿಂದ ರೈತ ಬೆಳೆದ ಬೆಳೆಗಳ ರಾಶಿಯನ್ನು (ಬೂದ) ಪೂಜಿಸುವುದು ಜನಪದ ಸಾಹಿತ್ಯದಲ್ಲಿ ಉಕ್ತವಾಗಿದೆ.

ಬೂದನಿಗೆ ಬಾಸಿಂಗ ಭೂಮಿ ತಾಯಿಗೆ ದಂಡೆ
ಸಾಲ ಶರಣರಿಗೆ ಸರಮಾಲೇ ಕಟಿಗೊಂಡು
ಮಾದಯ್ಯ ಗೆದ್ದ ಕೈಲಾಸ

ಈ ಮಾದಯ್ಯ ಶಿವಶರಣ, ಜೀರರಿಗೂ (ಹೂಗಾರ) ಒಕ್ಕಲಿಗರ ಕಣದಲ್ಲಿ ರಾಶಿಗೆ ಪತ್ರೆ ಹೂಂದಡೆಗಳನ್ನು ಕೊಡುವ ರೂಢಿಯಿದೆ. ಇಲ್ಲಿ ಬಾಸಿಂಗವೆಂದರೆ ಎಲೆ ಪತ್ರೆಗಳ ಮುಕುಟ. ಅದನ್ನು ರೈತರು ರಾಶಿಯ ದಿವಸ ಹಾಕುವರು. ಹೂ ದಂಡೆಯನ್ನು ಮೇಟಿಗೆ ಕಟ್ಟಿ ಉಳಿದ ಉಪಕರಣಗಳಿಗೆ ಸಾಲು ಶರಣರೆಂದು ಹೂಮಾಲೆಗಳನ್ನು ಹಾಕಿ ಪೂಜೆ ಮಾಡುವರು. ತುಂಬುವ ರಾಶಿಯಲ್ಲಿ ತಟ್ಟೆಯ ತುಂಬ ಕಾಳನ್ನು ರೈತನು ಹೂಗಾರನಿಗೆ ಬಾಬ್ತು ಎಂದು ಕೊಡುವುದು ವಾಡಿಕೆ.[೪೬] ಈ ಕಾಯಕವನ್ನು ಶಿವಶರಣರ ಕಾಲದಲ್ಲಿ ಹೂಗಾರ ಮಾದಯ್ಯನು ಮಾಡುತ್ತಿದ್ದನೆಂದು ಅವನ ಚರಿತ್ರೆಯಿಂದ ತಿಳಿದುಬರುತ್ತದೆ.

ವಿಜಯನಗರ ಕಾಲದಲ್ಲಿ ಹೂಗಳು ಇಲ್ಲದೆ ಜನಗಳು ಇರುತ್ತಿರಲಿಲ್ಲ ಎಂದು ವಿದೇಶಿ ಪ್ರವಾಸಿಗರು ತಮ್ಮ ವರದಿಗಳಲ್ಲಿ ತಿಳಿಸಿದ್ದಾರೆ. ಹೊಟ್ಟೆಗೆ ಹಿಟ್ಟು ಇಲ್ಲವಾದರೂ ಜುಟ್ಟಿಗೆ ಮಲ್ಲಿಗೆ ಹೂ ಇರಬೇಕು ಎನ್ನುವಂತೆ ಇಲ್ಲಿ ಹೂಗಾರರ ಕಸುಬು ಸಮಾಜದಲ್ಲಿ ತುಂಬಾ ಪ್ರಾಮುಖ್ಯತೆಯನ್ನು ಪಡೆದಿತ್ತು. ಜನಸಾಮಾನ್ಯರಾದಿಯಾಗಿ ಅರಸರವರೆಗೂ ಹೂಗಳನ್ನು ಒದಗಿಸುತ್ತಿದ್ದರು. ದೇವಸ್ಥಾನದ ಪೂಜಾದಿ ಕಾರ್ಯಗಳಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಇಂದಿಗೂ ಸಹ ಹಂಪಿಯ ವಿರೂಪಾಕ್ಷ ದೇವಾಲಯಕ್ಕೆ ಹೂವುಗಳನ್ನು ಕೊಡುವವರು ಇದ್ದಾರೆ.

೧೬. ಮೇದಾರಿಕೆ

ಬಿದಿರನ್ನು ಸೀಳಿ ಬುಟ್ಟಿ, ಮೊರ ಮುಂತಾದವುಗಳನ್ನು ಹೆಣೆಯುವ ಕಸಬೇ ಮೇದಾರಿಕೆ. ಇವರನ್ನು ಮೇದಾರ, ಮ್ಯಾದಾರ ಎಂದು ಕರೆಯುತ್ತಾರೆ. ಇವರು ಕಾಡಿನಲ್ಲಿರುವ ಗಟ್ಟಿ ಬಿದಿರನ್ನು ತಂದು ಸೀಳಿ ಸಿಬಿರುಗಳನ್ನು ಮಾಡಿ, ನೀರಿನಲ್ಲಿ ಸ್ವಲ್ಪ ಹೊತ್ತು ನೆನಸಿಟ್ಟು,

ಮೆದುಗೊಳಿಸಿ ಬುಟ್ಟಿ, ತೂರುಬುಟ್ಟಿ, ಗುಳೆಬುಟ್ಟಿ, ಹೂವಿನಬುಟ್ಟಿ, ಕಾಯಿಪಲ್ಲೆ ಬುಟ್ಟಿ, ಮೊರ, ಸಾಣಿಗೆ, ಬಿದಿರಿನ ಬೀಸಣಿಕೆ, ಕಾಳುಗಳನ್ನು ತುಂಬಿಡಲು ಕರುಸೆ ಇತ್ಯಾದಿ ವಸ್ತುಗಳನ್ನು ತಯಾರಿಸುವರು. ಅನೇಕ ಸಾಹಿತ್ಯ ಕೃತಿಗಳಲ್ಲಿ ಈ ಮೇದಾರರು ಯಾವ ರೀತಿಯ ವಸ್ತುಗಳನ್ನು ತಯಾರಿಸುತ್ತಿದ್ದರು ಎಂಬುದು ತಿಳಿಯಬುದಾಗಿದೆ.

ತರಕಾರಿ ತುಂಬಲು, ಕಾಳುಕಡಿಗಳನ್ನು ಹಾಕಲು ಇತ್ಯಾದಿ ಕೆಲಸಗಳಿಗೆ ಬಿದಿರಿನಿಂದ ತಯಾರಿಸಿದ ಬುಟ್ಟಿಗಳನ್ನು ಬಳಸುತ್ತಿದ್ದರು.

ಅರಳ ಪಡಲಿಗೆ ಧಾರೆವಟ್ಟಲು
ಭರಣಿ ಸುಣದ ಕಂಡಿಕೆ ಮಣಿವುಪ
ಕರಣತತಿ ಬಟ್ಟಲು ಪಡಿಗವಡ್ಡಣಿಗೆ ಪರಿಯಾಣ
ಮೊರೆವ ಹಾವುಗೆ ಮಟ್ಟಿವಗಿಳೀ
ಹಿರಿಯ ಚಿತ್ರದ ಭಿತ್ತಿಯಂ ಮೊಸ
ಪರಿಯನಸಿ ರಾಜಸಿದಪುದು ಗಣಿಕಾನಿಕೇತನವು[೪೩೭]

ಈ ರೀತಿಯ ವಸ್ತುಗಳನ್ನು ತಯಾರಿಸಲು ಹಗುರವಾದ ಬಿದಿರನ್ನು ಬಳಸುತ್ತಿದ್ದರು ಎಂಬುದಕ್ಕೆ

ಹಲವು ಸೊಳುದಕದೊಳಲು ಬಿಸಳೆ
ಸೆಳೆದೊಗದಪಂ ಬಿಳಿದಿಹುವೆ ಕಂ
ಬಳಿ ಹಗರುಗಳನ್ನಿಕ್ಕಿ ಬಿಗಿದೆಡೆ ನಾಯ ಬಾಲವದು
ಬಳಿಕ ನೀಳಕೆ ಸಸಿನವುಹುದೇ
ಆಲದೊಳಾಗಳು ನೆನವುತಿರ್ದಡೆ
ಶಾಲೆಯು ಮೃದುವಾಗಿಪ್ಪದೇ ತಾನವ ಪರಿಯಿಂದ[೪೩೮]

ಅಂದರೆ ಬಿದಿರನ್ನು ಬಳಸುವ ಮುನ್ನ ಅದನ್ನು ನೀರಿನಲ್ಲಿ ನೆನಸಿ ಮೃದುಮಾಡಿ ಬಳಸುತ್ತಿದ್ದರು ಎಂಬುದು ಮೇಲಿನ ಪದ್ಯದಿಂದ ತಿಳಿಯುತ್ತದೆ. ಹಾಗೆಯೆ ಮೃದು ಮಾಡಿದ ಬಿದಿರನ್ನು ನಮಗೆ ಬೇಕಾದ ಆಕಾರಕ್ಕೆ ತಿರಿಗಿಸಿಕೊಳ್ಳಲು ಅನುಕೂಲವಾಗುತ್ತದೆ.

ಬಿದರೆ ಅಂದಣಮೆಕ್ಕು! ಬಿದಿರೆ ಸತ್ತಿಗೆಯಕ್ಕು
ಬಿದಿರೆ ತಾಕೊಡಗು ಪರಪದವ ಲೋಕದೊಳು
ಬಿದಿರದಿರೆ ಕೆಡಗು ಪರಮಾರ್ಥ.[೪೩೯]

ಬೆಟ್ಟದ ಬಿದಿರೇ ನೀನು ಅಟ್ಟಿಕೆ ಏಣಿಯಾದೆ, ಕಾಲುಮುರಿದವರಿಗೆ ಊರುಗೋಲಾದೆ, ಬಿದಿರಿಂ ಭೂ ಅಯ್ಯ ಬಿದಿರಿಂ ಭೂ ಬಿದಿರ ಫಲವನುಂಬರೆ ಬಿದಿರಂ ಭೋ ಬಿದಿರಲಂದಣ ವಕ್ಕು ಬಿದಿರೆ ಸತ್ತಿಗೆಯಕ್ಕು ಬಿದಿರಲೇ ಗುಡಿಯು ಗುಂಡಾರಗಳಕ್ಕು ಬಿದಿರಲೇ ಸಕಲ ಸಂಪದವೆಲ್ಲ ಬಿದಿರದವರ ಮೆಚ್ಚು ನಮ್ಮ ಕೂಡಲ ಸಂಗಮದೇವ[೪೪೦].

ಬಿದಿರಿನಿಂದ ಸಕಲ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳಬಹುದು. ಇದು ಸಂಪತ್ತಿನ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ ಎಂಬುದನ್ನು ಈ ವಚನದ ಸಾರದಿಂದ ಅರಿಯಬಹುದಾಗಿದೆ.

ವಿಜಯನಗರ ಸಾಮ್ರಾಜ್ಯದಲ್ಲಿ ವಾತವರಣ ತುಂಬಾ ಬಿಸಿಯಾಗಿರುತ್ತಿತ್ತು. ಬೇಸಿಗೆ ಕಾಲದಲ್ಲಿ ಗಾಳಿ ಬೀಸಿಕೊಳ್ಳಲು ಪ್ರತಿಯೊಬ್ಬರು ಬೀಸಣಿಗೆಯನ್ನು ಬಳಸುತ್ತಿದ್ದರು. ಇಂದಿಗೂ ಗ್ರಾಮೀಣ ಭಾಗದಲ್ಲಿ ಇವುಗಳನ್ನು ಉಪಯೋಗಿಸುತ್ತಾರೆ. ಅವುಗಳನ್ನು ಬಿದಿರಿನಿಂದ ತಯಾರಿಸುತ್ತಿದ್ದರು. ಶ್ರೀಮಂತ ಬಡವ ಎನ್ನದೆ ಬೀಸಣಿಗೆ ಎಲ್ಲರೂ ಉಪಯೋಗಿಸುತ್ತಿದ್ದರು.

ಅಲ್ಲಲ್ಲಿಯವರ ಸುಪ್ಪತ್ತಿಗೆಯ ಮೇಲೊರಗು
ವಲ್ಲಲ್ಲ ಚಂದ್ರಕಾಂತದ ಕೊಡದೊಳಿವು ಪನ್ನೀರ
ಮಜ್ಜನ ಮಾಡುವ
ಅಲ್ಲಲ್ಲಿ ಸರಿಪಚ್ಚೆ ವುಡಿಯನುದೊಳ್ಜಲ್ಲಿ
ವಲ್ಲಲ್ಲಿ ಸಿರಿಗಣ್ಣಿನಣ್ಪನಿಕ್ಕುವ ಜನಿಗ
ಳಲ್ಲದೇ ಸುಮ್ಮನಿರ್ಪವರ ಕಾಣಿಂ ಮನೋಹಿತವನಿಡುವ ಕಿಚ್ಚಿನಿಂದ[೪೪೧]

ಮನೆಗಳನ್ನು ಹತ್ತಲು, ಕೋಟೆಗೋಡೆಗಳನ್ನು ಹತ್ತಲು ಏಣಿಗಳನ್ನು ಬಳಸುತ್ತಿದ್ದರು. ಇವುಗಳನ್ನು ಮೇದಾರರೇ ತಯಾರಿಸುತ್ತಿದ್ದರು.

ಅಟ್ಟಣಿಯೊ ಸದರ ನಗರಕ್ಕೆ ಧಾಳಿಡಲು ತಂ
ದಿಟ್ಟ ಸಚ್ಚಣಿಗೆಗಳೂ ಕೊತ್ತಳವೂ ಗಗನದೊಳು
ಬಟ್ಟೆಯಂ ನಡೆದು ಚೆಂಡಾದ ಖಚರರು ಸಾರತಿಂದಿಟ್ಟ ಭದ್ರಂಗಳೊ
ನಟ್ಟ ಡೆಂಕಣಿಗಳೋ ಹಗೆಗಳೂ ದುರ್ಗವರೆ
ಯಟ್ಟಲೆತ್ತಿದ ಹಲವು ಕೈಯೊ ಪರಿಖೆಯ ಪರ್ವಿ
ನೊಟ್ಟೆಜೆಯಾ ಪುರದ ಪರಿವಶೇಷವೋ ಎನಿಸಿತೆಂಬಾಗಳನ್ನು ಪೊಗಳ್ವೆನು[೪೪೨]

ಏಣಿಗಳನ್ನು ದೊಡ್ಡದೊಡ್ಡ ಕಟ್ಟಡಗಳು ಹತ್ತಲು ಬಳಸುತ್ತಿದ್ದರು ಏಣಿಗಳು ಯಾವ ರೀತಿ ಅಂದರೆ ಕೋಟೆಯ ಕಾಳಗದಲ್ಲಿ ಸೈನಿಕರು ಯುದ್ಧ ಮಾಡಬೇಕಾದರೆ ಏಣಿಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಇಲ್ಲಿ ಮೇದಾರ ಕಸುಬು ಯುದ್ಧ ಕಾರ್ಯಗಳಿಗೆ ಹೇಗೆ ಉಪಯೋಗವಾಗುತ್ತಿತ್ತು ಎಂಬುದು ವೇದ್ಯವಾಗುತ್ತದೆ.

ಹಲವೆಲುಸಿಕ್ಕೆಗಳ ಬಿಗಿದು ಬೀಮನೆಯ್ದು
ನುಲಿಯ ಹಂದೊಗಲ ಹಾಸಿನೊಳಂ ಮಂಚಂ ಜಡಿಯೆ
ಹೊಲೆಯನೋಲಿಗೆವಿತ್ತು ನರಕಪಾಲದೊಳು ತೀಲೇವಿದ
ಹನಿಯ ಗೋಮಾಂಸವ[೪೪೩]

ಮೇದಾರರು ಹಗ್ಗಗಳನ್ನು ತಯಾರಿಸುತ್ತಿದ್ದರು. ಹಗ್ಗ ಪ್ರತಿಯೊಂದು ಕೆಲಸಕಾರ್ಯಗಳಿಗೂ ದನಕರುಗಳನ್ನು ಕಟ್ಟಲು, ವ್ಯವಸಾಯ ಕಾರ್ಯಗಳಿಗೆ, ಯುದ್ಧ ಚಟುವಟಿಕೆಗಳಿಗೆ ಹೀಗೆ ಪ್ರತಿನಿತ್ಯ ಬಳಸುವ ಸಾಧನಗಳಲ್ಲಿ ಹಗ್ಗ ಪ್ರಮುಖ ಪಾತ್ರವಹಿಸಿತ್ತು.

ಹಗ್ಗದಿಂದ ಯಾವ ರೀತಿಯ ಪರಿಕರಗಳನ್ನು ತಯಾರಿಸುತ್ತಿದ್ದರು ಎಂದು,

ಹಾರಯಿಸಿ ತಲೆದಡವಿ ತೋರಿ ಹಾಸವ ತಿವಿದು
ದೂರದಿಂ ಕೊಡು ಹೆಸರಿಸಿ ಹತ್ತಿ ಹಣಗಿ ನೆಲ
ಕೋರಂತೆಯಡಗಿ ತನ್ನನುವಿನಳವಿಗೆ ಜಂಣಂಗಿ ನಡೆದು ಬಳಿಕೇಗೆಯ್ದುವು.[೪೪೪]

ಹೀಗೆ ಮೇದಾರ ಕಸುಬು ಅಂದು ಸಾರ್ವಜನಿಕ ಜೀವನದಲ್ಲಿ ಪ್ರಮುಖ ಪಾತ್ರವಹಿಸಿತ್ತು. ಕೃಷಿ ಕಾರ್ಯ ಚಟುವಟಿಕೆಗಳಿಗೆ ಈ ಮೇದಾರಿಕೆ ತುಂಬಾ ಪ್ರಯೋಜನವಾಗುತ್ತಿತ್ತು. ಅದೇ ರೀತಿ ಯುದ್ಧ ಸಲಕರಣೆಗಳ ಪ್ರಮುಖ ಪರಿಕರಗಳನ್ನು ತಯಾರಿಸುತ್ತಿದ್ದರು. ಒಟ್ಟಾರೆ ವಿಜಯನಗರ ಕಾಲದಲ್ಲಿ ಈ ಕಸುಬು ದಿನನಿತ್ಯದ ಜೀವನ, ಯುದ್ಧಕಾರ್ಯಗಳಿಗೆ ಅತ್ಯಂತ ಪ್ರಯೋಜನಕಾರಿಯಾಗಿ ಕಾರ್ಯನಿರ್ವಹಿಸುತ್ತಿತ್ತು.

೧೭. ಪಾತ್ರದವರು

ತಾಯ್ತನ ಮತ್ತು ಲೈಂಗಿಕತೆ ಎಂಬ ಮುಕ್ತವಾಗಿದ್ದ ಸಾಮಾಜಿಕ ಘಟ್ಟದಲ್ಲಿ ಈ ದಾಸಿ, ಸೂಳೆ, ತೊತ್ತು ಇತ್ಯಾದಿ ಪದಗಳಿಗೆ ಅವಕಾಶವಿರಲಿಲ್ಲ. ಕಾರಣ ಅಂದು ಈ ಪದ್ಧತಿಗಳು ಚಾಲ್ತಿಯಲ್ಲಿರಲಿಲ್ಲ. ನಾಗರಿಕತೆಯ ವಿಕಾಸದಲ್ಲಿ ಕುಟುಂಬ ವ್ಯವಸ್ಥೆ ಸ್ಥಾಪಿತಗೊಂಡು ಪತಿಯ ಯಜಮಾನ್ಯಕ್ಕೆ ಸ್ತ್ರೀ ಒಳಗಾಗಿ ಪಾತಿವ್ರತ್ಯ ಲೈಂಗಿಕ ನಿಷ್ಠೆ, ಗರತಿತನಗಳ ವ್ಯವಸ್ಥಿತ ಚೌಕಟ್ಟಿಗೆ ಹೆಣ್ಣು ಬಂಧಿಸಲ್ಪಟ್ಟ ಸಂದರ್ಭದಲ್ಲೇ ಆ ವ್ಯವಸ್ಥೆಯಿಂದಾಚೆಗೆ ಪುರುಷ ತನ್ನ ಲೈಂಗಿಕ ಸೌಕರ್ಯಕ್ಕಾಗಿ ಮತ್ತೊಂದು ಪರ್ಯಾಯ ವ್ಯವಸ್ಥೆಯನ್ನು ರೂಪಿಸಿಕೊಂಡನು ಅದೇ ಸೂಳೆ ಸಮಾಜ.

ಯುದ್ಧದಲ್ಲಿ ಗಂಡನನ್ನು ಕಳೆದುಕೊಂಡು ದೇವತಾ ಸ್ತ್ರೀಯರು ದೇವ ಒಡೆಯನಾದ ಇಂದ್ರನಿಂದ ಆಜ್ಞಾಪಿಸಲ್ಪಟ್ಟು ವೇಶ್ಯಾಧರ್ಮವನ್ನು ಸ್ವೀಕರಿಸಬೇಕಾಗಿ ಬಂದ ವಿಚಾರ ಮತ್ಸ್ಯ ಪುರಾಣದಿಂದ ತಿಳಿದುಬರುತ್ತದೆ.[೪೪೫] ಸುಂದರಿಯಾದ ಈ ಸ್ತ್ರೀಯರು ಯುದ್ಧದಲ್ಲಿ ಗಂಡಂದಿರನ್ನು ಕಳೆದುಕೊಂಡು ಶತ್ರುಗಳಿಂದ ಆಕ್ರಮಣಕ್ಕೆ ಒಳಗಾದಾಗ ಅಸಹಾಯಕ ಪರಿಸ್ಥಿತಿಯಲ್ಲಿ ಅವರನ್ನು ಅರಮನೆ, ದೇವಾಲಯಗಳಲ್ಲಿ ಭಕ್ತಿಯಿಂದ ವೇಶ್ಯಾಧರ್ಮವನ್ನು ಅನುಸರಿಸುವಂತೆ ಇಂದ್ರನು ನೀಡಿದ ಈ ಆಜ್ಞೆಯು ವೇಶ್ಯಾ, ಸಮಾಜದ ದೇವಾಲಯ ಸೂಳೆಯರ ಪದ್ಧತಿಯ ಹುಟ್ಟಿನ ಗುಟ್ಟನ್ನೇ ಸ್ಫೋಟಿಸುತ್ತಿದೆ.

ಮಧ್ಯಕಾಲೀನ ಸಮಾಜದಲ್ಲಿ ಹೆಚ್ಚಿನ ಯುದ್ಧಗಳು, ಆರ್ಥಿಕ ಅಭಿವೃದ್ಧಿಯಿಂದ ಸೃಷ್ಟಿಯಾದ ಸಂಪತ್ತು ಮತ್ತು ಸಿರಿವಂತ ವರ್ಗ ಅಧಿಕಾರಿ ಪ್ರಭುವರ್ಗ ಸಹಜವಾಗಿಯೇ ಭೋಗಜೀವನದ ಕಡೆಗೆ ಆಕರ್ಷಿತವಾದುದರಿಂದ, ಬಿಡುವು, ಮನೋರಂಜನೆಗಳು ಅವಶ್ಯಕವೆನಿಸಿ ನೃತ್ಯ, ಸಂಗೀತ, ನಾಟಕ, ಸ್ತ್ರೀಭೋಗ ಮುಂತಾದವುಗಳಿಗೆ ಬೇಡಿಕೆ ಹೆಚ್ಚಿದಂತೆ ಕಂಡುಬರುತ್ತದೆ. ದೇವದಾಸಿಯರು, ಸೂಳೆಯರು, ಪಾತ್ರದವರು, ಓಲಗಿಕಾರ್ತಿಯರು, ಪೊಡ್ಡಿಯರು, ಗಣಿಕೆ, ವಾರಾಂಗನೆ ಇತ್ಯಾದಿ ಹೆಸರುಗಳಿಂದ ಇವರನ್ನು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಈ ಸೂಳೆ ಸಮಾಜವನ್ನು ವ್ಯಕ್ತಿಸೂಳೆ, ದೇವಸೂಳೆ, ಸಮಾಜಸೂಳೆ[೪೪೬] ಎಂದು ವರ್ಗೀಕರಿಸಲಾಗಿದೆ.

ದೇವರ ತೊತ್ತು-ದಾಸಿಯರು

ಸ್ತ್ರೀ ಗರತಿಯಾಗಿರಲಿ, ವಾರಂಗನೆಯಾಗಿರಲಿ, ವೀರನ ಪತ್ನಿಯಾಗಿರಲಿ, ಪುರುಷ ದೌರ್ಜನ್ಯಕ್ಕೆ ಊರಳಿವು, ಪೆಣ್‌ಪುಯಲ್, ಯುದ್ಧದ ಪರಿಣಾಮಗಳಿಗೆ ಸಿಕ್ಕಿಕೊಳ್ಳುತ್ತಿದ್ದಳು. ಜೊತೆಗೆ ಅನೇಕ ರೀತಿಯ ಧಾರ್ಮಿಕ ಕಟ್ಟುಪಾಡು, ಮೌಢ್ಯಗಳು ಅವಳನ್ನು ಅತಂತ್ರ ಸ್ಥಿತಿಗೆ ತಳ್ಳಿರುವುದನ್ನು, ಬಲಿ ಮಾಡಿರುವುದನ್ನು

ಶಾಸನಗಳು ಬಿಂಬಿಸಿವೆ. ದೇವಾಲಯಗಳಿಗೆ ದಾಸಿ, ತೊತ್ತು, ಸೂಳೆ, ಪಾತ್ರದವಳೆಂಬ ಹೆಸರಿನಲ್ಲಿ ಹೆಣ್ಣುಗಳನ್ನು ಬಿಟ್ಟು ಅವರ ಪೋಷಣೆಗೆ ದಾನ ದತ್ತಿಗಳನ್ನು ನೀಡುತ್ತಿದ್ದರು.

ಹೆಗ್ಗಡೆ ಕೇಶವನೆಂಬುವವನು ತನ್ನ ಮಗಳನ್ನು ಅಮೃತೇಶ್ವರ ದೇವರ ಹೊಸಲಿಗಿಟ್ಟು ಸೂರ್ಯದೇವನನ್ನು ಒಲವಿನಿಂದ ಪ್ರತಿಷ್ಠೆ ಮಾಡಿಸಿದನೆಂದು ಒಂದು ಶಾಸನ ಹೇಳುತ್ತದೆ. ಈ ಶಾಸನವು ನಾಲ್ಕು ಅಡಿಯ ವೀರಗಂಬದ ಮೇಲೆ ಬರೆದಿದೆ. ಶಾಸನದಲ್ಲಿ ಹೊಸಲಿಗಿಟ್ಟು ಎಂಬುದು ಹರಕೆ ಸಲ್ಲಿಸಿ ಎಂಬ ಅರ್ಥದಲ್ಲಿಯೇ ಅಥವಾ ಬಲಿ ನೀಡಿ ಎಂಬ ಅರ್ಥದಲ್ಲಿಯೋ ಅಥವಾ ಅಮೃತೇಶ್ವರನಿಗೆ ದಾಸಿಯಾಗಿ (ತೊತ್ತಾಗಿ) ಬಿಟ್ಟುದು ಎಂಬ ಅರ್ಥದಲ್ಲಿ ಬಳಕೆಯಾಗಿದೆಯೋ ಎಂಬುದು ಸ್ಪಷ್ಟವಿಲ್ಲ. ಕನ್ಯೆಯರನ್ನು ದೇವಸ್ಥಾನಕ್ಕೆ ಸೂಳೆಯರೆಂದು ಬಿಡುತ್ತಿದ್ದುದರ ಬಗೆಗೆ ಉದಾಹರಣೆಗಳೊಂದಿಗೆ ಚೆನ್ನಕ್ಕ ಅವರು ಚರ್ಚಿಸಿದ್ದಾರೆ. ಬಹುಶಃ ಕೇಶವ ಹೆಗ್ಗಡೆ ತನ್ನ ಮಗಳನ್ನು ದೇವರ ತೊತ್ತಾಗಿ ಬಿಟ್ಟಿರುವ ಸಾಧ್ಯತೆಯಿದೆ.[೪೪೭]

ಕೆಂಬಾಳಿನ ಮಲ್ಲಿಕಾರ್ಜುನ ದೇವರ ದಾಸನಾದ ತಮ್ಮರಿಯ ತಂಗಿ ಹೊನ್ನವ್ವೆ ಎಂಬುವವಳನ್ನು ದೇವರ ತೊತ್ತೆಂದು ಕರೆಯಲಾಗಿದೆ.[೪೪೮] ಜೊತೆಗೆ ಅವಳನ್ನು ಪುಣ್ಯವಂತೆ ಎಂದು ಹೊಗಳಿರುವುದು ವಿಪರ್ಯಾಸ ಆದರೆ ಸಮಾಜವು ನಂಬಿದ ಇಂಥ ಪುಣ್ಯ ಕಾರ್ಯಗಳು ಇಂದು ಶೋಷಣೆಯಾಗಿ ಕಾಣುತ್ತವೆ. ಅದು ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಇಂದಿಗೂ ನಡೆಯುತ್ತಿರುವ ಶೋಷಣೆ ಎಂಬ ಅರಿವು ಈಗ ಉಂಟಾಗುತ್ತಿದೆ.

ಪಾತ್ರಭೋಗ-ರಾಜಧಾನಿ ಭಂಡಾರವಾಡದ ಅರಸಿಕೆರೆಯ ಪ್ರಸನ್ನ ಚೆನ್ನಕೇಶವ ದೇವರ ಒಸಗೆಗೆ 'ಲಕ್ಷ್ಮೀನಾರಾಯಣದಾಸಿ' ಎಂಬ ಹೆಸರಿನಲ್ಲಿ ಹೆಣ್ಣು ಮಗಳೊಬ್ಬಳು ಎಂಟು ಗದ್ಯಾಣಗಳನ್ನು ದೇವರ ಭಂಡಾರಕ್ಕೆ ನೀಡಿದ್ದಾಳೆ. ಬಹುಶಃ ಈಕೆ ಆ ದೇವಾಲಯದ 'ದೇವದಾಸಿ'[೪೪೯] (ಪಾತ್ರದವಳು) ಇರಬಹುದು. ಒಬ್ಬ ಬಾಣಸುಗಿತ್ತಿಯ ವಾರ್ಷಿಕ ಜೀವಿತ ಮೂರು ಗದ್ಯಾಣಗಳು ಮಾತ್ರವಿದ್ದ ಕಾಲದಲ್ಲಿ ದೇವದಾಸಿಯೊಬ್ಬಳು ಎಂಟು ಗದ್ಯಾಣಗಳ ದಾನ ನೀಡಿರುವುದು ಅವಳ ಆರ್ಥಿಕ ಸಾಮರ್ಥ್ಯವನ್ನು ತೋರಿಸುತ್ತದೆ.[೪೫೦] ಅಂಗಭೋಗ ರಂಗಭೋಗಗಳಿಗೆ ದೇವಾಲಯಗಳಲ್ಲಿ ಸ್ತ್ರೀಯರನ್ನು ನೇಮಿಸಿಕೊಳ್ಳಲಾಗುತ್ತಿದ್ದು, ನೃತ್ಯ ಸಂಗೀತ ಸೇವೆಗಾಗಿ ನೇಮಿಸಲ್ಪಡುತ್ತಿದ್ದ ಕಲಾವಂತೆಯರು ವಿಶೇಷ ಮಾನ್ಯತೆಗೆ ಪಾತ್ರರಾಗಿರುತ್ತಿದ್ದರು. ಉಯಗೌಂಡಿಯ ಹಳ್ಳಿಯ ಗೌವುಂಡನ ಮಕ್ಕಳು ತಮ್ಮ ಊರಿನಲ್ಲೂ ದೇವರಿಗೆ ಪಾತ್ರಭೋಗ ಸೇವೆ ಬೇಕೆಂದು ಬಯಸಿ ತಳಿಲೂರಿನ ಮಹಾಜನರನ್ನು ವಾರ್ಷಿಕ ೪೧ ಗದ್ಯಾಣಗಳನ್ನು ಇಕ್ಕುತ್ತ ಬಹೆವೆಂಬ ಕರಾರಿನ ಮೇಲೆ ದೇವಾಲಯದ ರಂಗಭೋಗವನ್ನು ಏರ್ಪಡಿಸಿದರೆಂದು ತಿಳಿದುಬರುತ್ತದೆ.[೪೫೧] ತಳಲೂರು ಅಗ್ರಹಾರದಲ್ಲಿ ಅನೇಕ ದೇವಾಲಯಗಳಿದ್ದು ಅಲ್ಲಿನ ಚೆನ್ನಕೇಶವ(ಮಧುಸೂದನ) ದೇವಾಲಯದಲ್ಲಿ ಪಾತ್ರಭೋಗವಿದ್ದುದು ತಿಳುದುಬರುತ್ತದೆ.[೪೫೨] ಈಗಲೂ ತಿಟ್ಟುಮಲ್ಲೇಶನ ಗುಡಿಯ ಮುಂಭಾಗದ ಬಯಲಿನಲ್ಲಿ ಸೂಳೆ ಮಂಟಪವೆಂದು ಕರೆಯುವ ಮಂಟಪವನ್ನು ನೋಡಬಹುದು. ಇದೇ ತಳಲೂರಿನ ಮತ್ತೊಂದು ಶಾಸನದಲ್ಲಿ ಕೇಶವದೇವರ ಬೊಮ್ಮವ್ವೆಯ ತೋಟವನ್ನು ಕರೀದಿಸಿ ಅಜಿತೇಶ್ವರ ದೇವರಿಗೆ ದಾನ ಬಿಟ್ಟಿದ್ದನ್ನು ಹೇಳಿದೆ.[೪೫೩]

ಈಕೆ ಕೇಶವ ದೇವರ ದಾಸಿ ಪಾತ್ರಭೋಗದವಳು ಅಗಿದ್ದು, ಆಕೆಯ ಹೆಸರಿನಲ್ಲಿ ತೋಟ ಹೊಂದಿರುವುದು ಅವಳ ಆರ್ಥಿಕ ಸ್ಥಿತಿವಂತಿಕೆಯನ್ನು ಸೂಚಿಸುತ್ತದೆ. ಮತ್ತೊಂದು ಶಾಸನದಲ್ಲಿ[೬೫೪] ಹಾದರಿಯ ಕೆಯಿ ಕಂಬ ೪೨ನ್ನು ಹಿರಿಯ ಕೆರೆಯ ಕೆಳಗೆ ನೀಡಲಾಗಿದೆ. ಇದು ದೇವಸೂಳೆಯರಿಗೆ ಪಾತ್ರಭೋಗ ಅಥವಾ ರಂಗಭೋಗಕ್ಕೆ ನೀಡಿರುವ ಭೂಮಿಯಾಗಿದೆ.

ಓಲಗಿಕಾರ್ತಿಯರು–ಅತ್ಯಂತ ಸುಂದರಿಯರು, ಶ್ರೇಷ್ಠ ಕಲಾವಿದೆಯರೂ ಆದ ಸ್ತ್ರೀಯರನ್ನು ಆಯ್ಕೆಮಾಡಿ ಅರಮನೆ, ದೇವಾಲಯದಲ್ಲಿ ಓಲಗದ ನರ್ತನ ಗಾಯನಗಳಿಗೆ ನೇಮಿಸಿಕೊಳ್ಳಲಾಗುತ್ತಿತ್ತು. ಇವರು ಅರಸರ ಪ್ರೀತಿಯನ್ನು, ಆಶ್ರಯವನ್ನು ಹೊಂದಿ ಸಿರಿವಂತೆಯರೂ ಪ್ರಭಾವೀ ಹೆಣ್ಣುಗಳೂ ಆಗಿರುತ್ತಿದ್ದರು. ಕಲ್ಯಾಣದ ಹಿರಿಯ ಹೆಮ್ಮಾಡಿ ರಾಯನನ್ನು ಓಲಿಗಿಸಲು ಹೋಗಿದ್ದ ಹೊಯ್ಸಳ ಬಿಟ್ಟಿದೇವನನ್ನು ಪ್ರಭಾವಿಸಿದ ಚಲುಕವ್ವೆ ಓಲಗಿಕಾರ್ತಿಯ ಬೇಡಿಕೆಯಂತೆ ಅವಳ ಸಂಬಂಧಿಗಳಾದ ಚಳುಕೆಯ್ಯನಾಯಕನನ್ನು ಡಿಂಗರಿಗನಾಗಿ ಸ್ವೀಕರಿಸಿ ಆ ವಂಶದವರಿಗೆ ಒಂದು ಆಡಳಿತ ವಿಭಾಗವನ್ನು ಬಿಟ್ಟಿದೇವನು ಆಳ್ವಿಕೆಗೆ ನೀಡಿದ್ದು[೬೫೫] ಓಲಗಿಕಾರ್ತಿಯೊಬ್ಬಳ ಪ್ರಭಾವ ಸಾಮರ್ಥ್ಯವನ್ನು ಮನಗಾಣಿಸುತ್ತದೆ.

ವ್ಯಕ್ತಿಸೂಳೆ–ಸೂಳೆಯರನ್ನು ಇಟ್ಟುಕೊಳ್ಳುವುದು ಪುರುಷ ಸಾಮರ್ಥ್ಯ ಪ್ರತಿಷ್ಠೆಯ ಕುರುಹಾಗಿತ್ತು. ಇದು ಸಿರಿವಂತರು, ಅಧಿಕಾರಿವರ್ಗ, ಅರಸರಲ್ಲಿ ಹೆಚ್ಚು ಕಾಣಿಸಿಕೊಳ್ಳುತ್ತದೆ. ಸಾಮಾನ್ಯರ ವಿಚಾರಗಳನ್ನು ಶಾಸನಗಳು ಹೇಳುವುದಿಲ್ಲ. ವೀರಗಲ್ಲೊಂದು ಸೂಳೆಯೊಬ್ಬಳ ಬದುಕಿನ ಬಗೆಗೆ ವಿಶೇಷ ಬೆಳಕನ್ನು ಚೆಲ್ಲುತ್ತದೆ.[೬೫೬] ರಾಜಕನೆಂಬಾತ ಬಿಟ್ಟಯ್ಯನ ಸೂಳೆಯನ್ನು ಕೊಂದು ಮೃತಪಟ್ಟ ವಿಷಯವನ್ನು ಅದು ತಿಳಿಸುತ್ತದೆ. ಈ ವೇಶ್ಯೆಯ ಕೊಲೆ ನಡೆದಿರುವುದು ತೊಂಡನೂರ ಬೀಡಿನಲ್ಲಿ ಈಕೆಯನ್ನು ಬಿಟ್ಟಯ್ಯನೆಂಬುವವನ ಸೂಳೆ ಎಂದಿರುವುದರಿಂದ ಅವನ ವೈಯಕ್ತಿಕ ಹೆಣ್ಣಾಗಿದ್ದು, ತೊಂಡನೂರಿಗೆ ಹೋಗಿ ಬೀಡುಬಿಟ್ಟಿದ್ದ ಸೈನಿಕ ಬಿಟ್ಟಯ್ಯನೊಂದಿಗೆ ಈಕೆಯೂ ಹೋಗಿದ್ದಾಳೆ. ಈ ಸೂಳೆಯ ಕಾರಣದಿಂದ ಬೀಡಿನಲ್ಲಿ ಉಂಟಾಗಿರಬಹುದಾದ ಗೊಂದಲ ಅಥವಾ ಈರ್ಷೆ ಯಾವುದರ ಬಗೆಗೂ ಶಾಸನ ಹೇಳುವುದಿಲ್ಲ. ಇವಳನ್ನು ಕೊಂದ ಮೇಲೆ ರಾಜಕನನ್ನು ಬಹುಶಃ ಬಿಟ್ಟಯ್ಯ ಕೊಂದಿದ್ದಾನೆ. ಅವರಿಬ್ಬರ ನಡುವೆ ಹೋರಾಟ ನಡೆದಿರಬೇಕು. ರಾಜಕನೆಂಬ ಸೈನಿಕನನ್ನು ವೀರನೆಂದು ಪರಿಗಣಿಸಿ ಮಲೆಯಾಳ ಬಾಚಿಕೆಯ ನಾಯಕನ ಮಗ ಮತ್ತು ಬದ್ದೆಯನ ಅಳಿಯ ಬಮ್ಮೆಯನಾಯಕರು ವೀರಗಲ್ಲು ನಿಲ್ಲಿಸಿರುವುದನ್ನು ನೋಡಿದರೆ ಕೊಲೆಯ ಉದ್ದೇಶ ಶ್ರೇಷ್ಠವಾದದ್ದೇ ಆಗಿರಬಹುದೇ? ಏನೇ ಆಗಿರಲಿ ಪುರುಷರ ಈ ದ್ವೇಷಾಸೂಯೆಗಳಿಂದ ಹತಳಾದ ಸ್ತ್ರೀಯ ಬಗೆಗೆ ಚಕಾರವೆತ್ತದ ಶಾಸನ ಇದು ರಾಜಕನನ್ನು ವೀರನೆಂದು ಪರಿಗಣಿಸಿ ವೀರಗಲ್ಲು ನಿಲ್ಲಿಸಿರುವುದು ಪುರುಷ ಪ್ರಧಾನ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ.

ಸಮಾಜ ಸೂಳೆ–ಸಾರ್ವಜನಿಕರ ಕಾಮತೃಪ್ತಿಯ ಅವಶ್ಯಕತೆಗೆ ಅನುಗುಣವಾಗಿ ಈ ಸಮಾಜದಲ್ಲಿ ಸೂಳೆಗಾರಿಕೆ ಬೆಳೆಯಿತು. ಶಮನಗೊಳ್ಳದ ಮಾನವನ ಕಾಮ ಸೂಳೆಗೇರಿಯ ಆಶ್ರಯವಿರದಿದ್ದರೆ ಹೆಚ್ಚಾಗಿ ಹರಿದು ಗೃಹಸ್ಥ ಸಮಾಜದ ಸ್ವಾಸ್ತ್ಯವನ್ನೇ ಅಲುಗಿಸಬಹುದಾದ್ದರಿಂದ ಇದು ಅವಶ್ಯಕ.[೬೫೭] ಮನಶಾಸ್ತ್ರಜ್ಞರೂ ಇದೇ ಅಭಿಪ್ರಾಯ ನೀಡುತ್ತಾರೆ. ಸಾಹಿತ್ಯದಲ್ಲಿ ವೇಶ್ಯಾವಾಟಿಕೆಯ ವರ್ಣನೆ

ಹೆಚ್ಚಾಗಿ ಬಂದಿವೆಯಾದರೆ ಶಾಸನಗಳು ಆ ವೇಶ್ಯೆಯರ ಮೇಲಿನ ತೆರಿಗೆಗಳ, ಅಧಿಕಾರಿಗಳ ವಿವರ ನೀಡುತ್ತವೆ. ವಿಜಯನಗರದ ಅರಸರ ಸೈನಿಕರ ಬೀಡಿನಲ್ಲಿ ಸುಂದರಿಯರಾದ ಹೆಣ್ಣುಗಳನ್ನೂ ಒದಗಿಸುತ್ತಿದ್ದರೆಂದು ಸೈನಿಕರಲ್ಲಿ ಉತ್ಸಾಹ ತುಂಬಲು ಸಂಬಳದೊಂದಿಗೆ ಈ ಹೆಣ್ಣುಗಳು ಮುಖ್ಯರಾಗಿದ್ದರೆಂಬ ಪ್ರವಾಸಿ ಬಾರ್ಬೋಸಾನ ಹೇಳಿಕೆಯಿಂದ ಯುದ್ಧಗಳೂ ಕೂಡ ವೇಶ್ಯಾವೃತ್ತಿಯ ವೃದ್ಧಿಗೆ ಹೇಗೆ ಕಾರಣವಾಗಿದ್ದವೆಂಬುದು ತಿಳಿಯುತ್ತದೆ.[೪೫೮] ವಿಜಯನಗರಕ್ಕೆ ಭೇಟಿ ನೀಡಿದ ಅನೇಕ ಪ್ರವಾಸಿಗರು ಅಲ್ಲಿ ಅಂತಃಪುರದ ಸ್ತ್ರೀಯರ, ವೇಶ್ಯೆಯರ ವೈಭವ ಅವರಿಗೆ ಪ್ರತಿಷ್ಠಿತ ವ್ಯಕ್ತಿಗಳೊಂದಿಗೆ ಕೂರುವ ಅವಕಾಶಗಳಿದ್ದು, ಉತ್ತಮ ಸ್ಥಾನಮಾನವಿತ್ತೆಂದು ಹೇಳುತ್ತಾರೆ.[೪೫೯] ಆದರೆ ಆ ವೈಭವದ ಹಿಂದೆ ಮರೆಯಾಗಿದ್ದ ಸ್ತ್ರೀ ಶೋಷಣೆಯನ್ನು ಹೀನಾಯ ಸ್ಥಿತಿಯನ್ನು ಗುರುತಿಸಿಕೊಳ್ಳುವಲ್ಲಿ ವಿಫಲವಾಗಿದ್ದಾರೆ. ಎ.ಬಿ. ದೂಬ ಅಂತಹ ಶೋಷಣೆಯನ್ನು ಗುರುತಿಸಿದ್ದಾರೆ.[೪೬೦]

ಅಂದು ಈ ಪದ್ಧತಿ ಒಂದು ಕಸುಬಾಗಿ ಬೆಳೆದಿದ್ದನ್ನು ಗಮನಿಸಿಬಹುದು. ದೇವಾಲಯಗಳಿಗೆ ಎರಡು ರೀತಿಯ ಸೇವೆ ನಡೆಯುತ್ತಿತ್ತು. ಒಂದು ರಂಗಭೋಗ ಇಲ್ಲಿ ಬಹಳಷ್ಟು ಸಂಖ್ಯೆಯ ನರ್ತಕೀಯರನ್ನು ನೃತ್ಯಕ್ಕಾಗಿ ನೇಮಿಸಿಕೊಳ್ಳುತ್ತಿದ್ದರು, ಅದರಲ್ಲಿ ದೇವದಾಸಿಯರು ಸೇರಿರುತ್ತಿದ್ದರು. ಇದು ದೇವಾಲಯದ ಹೊರಗೆ ರಂಗ ಮಂಟಪದಲ್ಲಿ ನಡೆಯುವ ಪ್ರಕ್ರಿಯೆಯಾಗಿತ್ತು. ದೇವಸ್ಥಾನಕ್ಕೆ ಬಂದ ಭಕ್ತಾಧಿಗಳಿಗೆ ಮನರಂಜನೆಯನ್ನು ಒದಗಿಸುತ್ತಿದ್ದರು. ಜೊತೆಗೆ ದೇವರಿಗೂ ಸಂತೃಪ್ತಿ ದೊರೆಯಲಿ ಎಂಬ ಉದ್ದೇಶದಿಂದ ಈ ರೀತಿಯ ಕಾರ್ಯಗಳನ್ನು ಮಾಡುತ್ತಿದ್ದರು. ಮತ್ತೊಂದು ಅಂಗಭೋಗ ದೇವಸ್ಥಾನದ ಗರ್ಭಗೃಹದ ಒಳಗೆ ದೇವರ ಮೂರ್ತಿಗೆ ನಡೆಯುವ ಪೂಜಾಕಾರ್ಯದ ಭಾಗವಾಗಿ ಮಾಡುತ್ತಿದ್ದರು.

ದೇವಾಲಯದಲ್ಲಿ ನಡೆಯುವ ನಾಟ್ಯ, ನೃತ್ಯ, ನಾಟಕ, ಸಂಗೀತಗಳಲ್ಲಿ ಈ ದೇವದಾಸಿಯರ ಪಾತ್ರ ಗಮನಾರ್ಹವಾಗಿರುತ್ತಿತ್ತು. ಇದು ವಿಜಯನಗರ ಪೂರ್ವದಲ್ಲಿದ್ದರೂ ನಂತರದ ಕಾಲದಲ್ಲಿ ಹೆಚ್ಚು ಪ್ರಚಲಿತಕ್ಕೆ ಬಂದಿತು. ರಂಗಭೋಗಕ್ಕಾಗಿ ನವರಂಗ ಪ್ರದೇಶವು ಚಿಕ್ಕದಾದಾಗ ಹೊಸದಾಗಿ ಮತ್ತೊಂದು ಮಹಾರಂಗ ಮಂಟಪದ ರಚನೆ ಈ ಕಾಲಘಟ್ಟದಲ್ಲಿ ಆಯಿತು. ಸಾಮಾನ್ಯವಾಗಿ ೬೪ ಕಂಬಗಳಿಂದ ಕೂಡಿದ ಮಂಟಪವಾಗಿತ್ತು. ಎತ್ತರದ ವೇದಿಕೆಯ ಮೇಲೆ ರಚನೆಯಾಗುತ್ತಿತ್ತು. ಹೆಚ್ಚು ಜನ ಕುಳಿತು ವೀಕ್ಷಿಸಲು ಅವಕಾಶ ಕಲ್ಪಿಸಲಾಗುತ್ತಿತ್ತು. ಅಂದು ರಂಗಭೋಗವು ಹೆಚ್ಚು ವಿಸ್ತಾರವಾಗಿ ಬೆಳೆದಿರುವುದು ಗಮನಾರ್ಹ. ರಂಗಭೋಗದಲ್ಲಿ ಸತಿ–ಪತಿಯರಿಬ್ಬರು ಭಾಗವಹಿಸುತ್ತಿದ್ದರು. ಸ್ತ್ರೀಯರನ್ನು ದೇವದಾಸಿ, ಸೂಳೆ, ಪಾತ್ರದವಳು ಗಣಿಕೆ ಇತ್ಯಾದಿ ಹೆಸರುಗಳಿಂದ ಕರೆದಿರುವುದನ್ನು ಕಾಣುತ್ತೇವೆ. ವಿಜಯನಗರ ಕಾಲದಲ್ಲಿ ಇದು ಒಂದು ಕಸುಬಾಗಿ ವೃದ್ಧಿಗೊಂಡಿತ್ತು ಎಂದು ಹೇಳಬಹುದಾಗಿದೆ. ಅವರಿಗಾಗಿಯೇ ರಾಜಧಾನಿಯಾದ ಹಂಪಿಯಲ್ಲಿ ಪ್ರತ್ಯೇಕ ಕೇರಿಯಿತ್ತು ಎಂದು ಲಾಂಗ್ ಹರ್ಸ್ಟ್ ಎಂಬ ವಿದ್ವಾಂಸರು ಹೇಳಿದ್ದಾರೆ. ಈ ಬಜಾರಿನಲ್ಲಿ ಅವರು ಹೆಚ್ಚು ವಾಸಮಾಡುತ್ತಿದ್ದರು. ಅದಕ್ಕಾಗಿಯೇ ಅದನ್ನು ಸೂಳೆ ಬಜಾರು ಎಂದು ಕರೆಯುತ್ತಿದ್ದರೆಂದು ಹೇಳಿದ್ದಾರೆ. ಜನಸಾಮಾನ್ಯರ ಆಡುಭಾಷೆಯಲ್ಲಿ ಸೂಳೆ ಬಜಾರ್ ಎಂದು ಕರೆಯುವ ವಾಡಿಕೆ ಇಂದಿಗೂ ಇದೆ.[೪೬೧] ಆದರೆ ಇದು ಸೂಳೆ ಬಜಾರು ಆಗಿರಲಿಲ್ಲವೆಂಬುದು ಸಂಶೋಧನೆಗಳಿಂದ ದೃಢಪಟ್ಟಿದೆ.

ದೇವದಾಸಿಯರ ಬಗ್ಗೆ ನಮಗೆ ವಿದೇಶಿ ಪ್ರವಾಸಿಗರ ವರದಿಗಳಲ್ಲಿ ನಿರೂಪಿತವಾಗಿರುವುದನ್ನು ಗಮನಿಸಿಬಹುದು. ವಿದೇಶಿ ಪ್ರವಾಸಿಯಾದ ಪಾಯೇಸ್‌ನು ದೇವಾಲಯಗಳಲ್ಲಿ ತಾನು ಕಂಡ ದೇವದಾಸಿಯರ ಬಗ್ಗೆ ಬರೆಯುತ್ತಾನೆ. ದೇವರ ಪೂಜೆಯ ಸಮಯದಲ್ಲಿ ದೇವಸ್ಥಾನಕ್ಕೆ ಸೇರಿದ ದೇವದಾಸಿಯರು ನೃತ್ಯ ಮಾಡುತ್ತಾರೆ. ಇವರು ಸೂಳೆಗಾರಿಕೆ ಮಾಡುತ್ತಾ ಊರಿನ ಪ್ರಮುಖ ಬೀದಿಗಳಲ್ಲಿ ವಾಸಮಾಡುತ್ತಾರೆ. ಇದಕ್ಕೆಂದೇ ಪ್ರತ್ಯೇಕ ಬಜಾರುಗಳಿವೆ.[೪೨] ಅಂದು ಇವರ ಬಗ್ಗೆ ಗೌರವ ಭಾವನೆ ಇತ್ತು. ದೇವಸ್ಥಾನಗಳಲ್ಲಿ ನೃತ್ಯಕ್ಕಾಗಿ ಬಹಳಷ್ಟು ಸಂಖ್ಯೆಯ ನರ್ತಕಿಯರನ್ನು ನೇಮಿಸಿಕೊಳ್ಳುತ್ತಿದ್ದರು.[೪೩] ದೇವದಾಸಿಯರಿಗೆ ದೇವಾಲಯಗಳ ಭೂಮಿಯನ್ನು ನೀಡಲಾಗುತ್ತಿತ್ತು. ಅವರಲ್ಲಿ ಕೆಲವರು ವಂಶಪಾರಂಪರ್ಯ ಹಕ್ಕುಗಳ ಆಧಾರದ ಮೇಲೆ ತಮ್ಮ ಸ್ಥಾನವನ್ನು ಕಾಯ್ದುಕೊಂಡಿದ್ದರು. ದೇವದಾಸಿಯು ಪದ್ಧತಿಯಂತೆ ನಂತರ ಇದು ಒಂದು ಕಸುಬಾಗಿ ಮಾರ್ಪಾಡಾಗಿತ್ತು.

ವಿಜಯನಗರ ಪೂರ್ವದಲ್ಲಿ ಅವರು ಕೇವಲ ನೃತ್ಯ ಮಾಡುತ್ತಿರಲಿಲ್ಲ, ಅದರಿಂದ ಬಂದ ಆದಾಯದಲ್ಲಿ ದಾನಮಾಡಿದ ಉಲ್ಲೇಖಗಳು ಇವೆ. ಬಾದಾಮಿ ಚಾಲುಕ್ಯರ ಕಾಲದಲ್ಲಿ ಪಟ್ಟದಕಲ್ಲಿನ ವಿರೂಪಾಕ್ಷ ದೇಗುಲದ ಸೂಳೆಯೊಬ್ಬಳು ದಾನಮಾಡಿದ ಉಲ್ಲೇಖ ಕಂಡುಬರುತ್ತದೆ.[೪೪]

ಜನಸಂಖ್ಯೆ ಬೆಳೆದಂತೆ ದೇವಸ್ಥಾನಗಳು ಬೆಳೆದವು. ಆಗ ಸೂಳೆಯರ ಸಂಖ್ಯೆಯಲ್ಲಿ ಹೆಚ್ಚಾದ್ದರಿಂದ ಅವರ ಕಾರ್ಯಕ್ಷೇತ್ರದಲ್ಲಿ ಬದಲಾವಣೆಯಾಯಿತು. ಹಾಗಾಗಿ ಅವರ ಕೆಲಸ ಕಾರ್ಯಗಳಿಗೆ ತಕ್ಕಂತೆ ಸೂಳೆಯರಿಗೆ ಹೆಸರನ್ನು ಇಡಲಾಯಿತು. ಕಂಬದ ಪಕ್ಕದಲ್ಲಿ ದೇವಾಲಯದಲ್ಲಿ ಅಲಂಕಾರಕ್ಕೆ ನಿಲ್ಲುವ ಸೂಳೆಗೆ ಕಂಬದ ಸೂಳೆ, ನರ್ತನ ಇತ್ಯಾದಿ ಕಾರ್ಯಗಳನ್ನು ಮಾಡುವವರು ಪಾತ್ರದವರು, ದೇವರಿಗೆ ಉತ್ಸವ ಮಂಟಪದಲ್ಲಿ ಅಥವಾ ಗರ್ಭಗೃಹದಿಂದ ದೇವರು ಹೊರಗೆ ಹೋರಟಾಗ ಚಾಮರ ಬೀಸುವವರಿಗೆ ಚಾಮರದ ಸೂಳೆ ಎಂದು ಕರೆಯಲಾಗಿದೆ.[೪೫]

ವಿಜಯನಗರ ಕಾಲದಲ್ಲಿ ಇವರನ್ನು ವಿವಿಧ ಹೆಸರುಗಳಿಂದ ಕರೆಯುತ್ತಿದ್ದರು. ಅವರು ಮಾಡುತ್ತಿದ್ದ ಕಸುಬು ಮಾತ್ರ ಒಂದೇ ಆಗಿತ್ತು. ಸಮಾಜದಲ್ಲಿ ಒಂದು ರೀತಿಯ ಗೌರವ ಭಾವನೆಗಳಿಂದ ಇವರನ್ನು ಕಾಣುತ್ತಿದ್ದರು. ಆದರೆ ನಂತರದ ಕಾಲದಲ್ಲಿ ಇದು ಒಂದು ಅನಿಷ್ಟ ಪದ್ಧತಿಯಾಗಿ ಬೆಳವಣಿಗೆ ಹೊಂದಿತು. ದೇವಸ್ಥಾನಗಳಿಗೆ ಬಿಡುವ ದೇವದಾಸಿಯರನ್ನು ಊರಿನ ಪ್ರಮುಖರು ಅನೈತಿಕ ಚಟುವಟಿಕೆಗಳಿಗೆ ದೂಡಿದರು. ಈ ರೀತಿಯ ದೇವದಾಸಿ ಪದ್ಧತಿ ಕೆಲವು ಸಮುದಾಯಗಳಲ್ಲಿ ಮಾತ್ರ ಕಂಡುಬರುತ್ತದೆ. ಅಂದರೆ ತಳಸಮುದಾಯದವರು ಮಾತ್ರ ಈ ಕಸುಬನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು ಉನ್ನತ ವರ್ಗದವರು ಈ ಕಸುಬಿನಿಂದ ದೂರ ಇರುತ್ತಿದ್ದರು. ವಿಜಯನಗರ ಕಾಲದಲ್ಲಿ ಈ ಕಸುಬಿಗೆ ತುಂಬಾ ಗೌರವ ದೊರೆಯುತ್ತಿತ್ತು, ನಂತರದ ಕಾಲದಲ್ಲಿ ಈ ಕಸುಬು ಮಾಡುವವರನ್ನು ಸಮಾಜ ವಕ್ರದೃಷ್ಟಿಯಿಂದ ನೋಡಲಾರಂಬಿಸಿತು. ಇತ್ತೀಚಿಗೆ ಇದು ಒಂದು ಅನಿಷ್ಟ ಪದ್ಧತಿಯಾಗಿ ಬೆಳವಣಿಗೆ ಹೊಂದಿರುವುದನ್ನು ಕಾಣುತ್ತೇವೆ.

ರಾಜಪರಿವಾರದ ಕಸುಬುದಾರರು

ದೇವಾಲಯದ ಕಸುಬುಗಳು

೧೮. ಸ್ಥಾನಿಕ

ಪಿ. ಗುರುರಾಜ ಭಟ್ಟರು ಅವಲೋಕಿಸಿರುವಂತೆ ಸ್ಥಾನಿಕ ಎಂಬ ಪದವು ಅಧಿಕಾರ ಸೂಚಕವಷ್ಟೇ ಹೊರತು ಜಾತಿ ಸೂಚಕವಲ್ಲ.[೪೬] ಕೌಟಲ್ಯನ ಅರ್ಥಶಾಸ್ತ್ರದ ಪ್ರಕಾರ ಸ್ಥಾನಿಕ ಎಂಬುವವನು ಆರ್ಥಿಕ ವ್ಯವಸ್ಥೆಯನ್ನು ನೋಡಿಕೊಳ್ಳುವ ಅಧಿಕಾರಿ. ಕಾಲಕಳೆದಂತೆ ದೇವಾಲಯದ ಸ್ಥಿರಾಸ್ತಿ ಮತ್ತು ಆರ್ಥಿಕ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದ ಅಧಿಕಾರಿಯನ್ನು ಸ್ಥಾನಿಕ ಎಂದೇ ಪರಿಗಣಿಸಲಾಗಿದೆ. ಸ್ಥಾನಿಕ ಎಂಬ ಅಧಿಕಾರವು ಜೈನ, ಶ್ರೀವೈಷ್ಣವ, ಕಾಳಮುಖ ಹಾಗೂ ಶೈವರಲ್ಲಿ ಗೌರವದ ಸ್ಥಾನವಾಗಿ ಪರಿಗಣಿತವಾಗಿತ್ತು. ದೇವಾಲಯಗಳ ಆಡಳಿತಾತ್ಮಕ ಮತ್ತು ಆರ್ಥಿಕ ಜವಾಬ್ದಾರಿಯನ್ನು ಒಪ್ಪಿಕೊಂಡಿದ್ದ ಸ್ಥಾನಿಕ ಅಥವಾ ಸ್ಥಾನಪತಿಯನ್ನು ರಾಜನಾಗಲಿ ಅಥವಾ ಅಧಿಕಾರಿಯಾಗಲಿ ನೇಮಿಸುತ್ತಿದ್ದ ಉಲ್ಲೇಖಗಳಿಲ್ಲ. ಆದರೆ ದೇವಾಲಯದ ನಿರ್ಮಾತೃಗಳಾದ ದಾನಿಗಳೇ ಸ್ಥಾನಿಕರನ್ನು ನೇಮಿಸುವುದು ಕೆಲವೊಂದು ಶಾಸನಗಳಲ್ಲಿ ಉಲ್ಲೇಖಗೊಂಡಿದೆ. ಕೊಂಡಜಿಟಿಯ ಮಗ ಕೃಷ್ಣಯ್ಯನು ಕೆಸರ್ಯೆಯಲ್ಲಿ ಕೃಷ್ಣದೇವರನ್ನು ಪ್ರತಿಷ್ಠೆ ಮಾಡಿಸಿ ಕೊಮಾರಪೆರುಮಾಳೆ ಮತ್ತು ಆತನ ತಮ್ಮ ರಾಮಾಂಜಯ್ಯನಿಗೆ ಸ್ಥಾನಿಕ ಪದವಿಯನ್ನು ನೀಡುತ್ತಾನೆ.[೪೭] ಕೃಷ್ಣಯ್ಯನು ತನ್ನ ಮಾತಿನಂತೆ ನಡೆಯಬೇಕೆಂದು ಸ್ಥಾನಿಕರಿಗೆ ಕಟ್ಟಳೆ ವಿಧಿಸುತ್ತಾನೆ. ಇಲ್ಲಿ ದೇವಾಲಯದ ನಿರ್ಮಾಣವು ದಾನಿಗಳಿಂದ ಕೈಗೊಂಡಾಗ ಹೊಸ ದೇವಾಲಯಕ್ಕೆ ಸ್ಥಾನಿಕರನ್ನು ನೇಮಿಸುವ ಜವಾಬ್ದಾರಿ ದಾನಿಗಳಿಗೆ ಇದ್ದಿತು. ಅವರ ನೇಮಕಾತಿಯಿಂದ ಹಿಡಿದು ದೇವಾಲಯಗಳ ಸೇವಾವರ್ಗ ಮತ್ತು ದೇವಾಲಯದ ಪೂಜೆಯು ಸುಗಮವಾಗಿ ನಡೆದುಕೊಂಡು ಹೋಗಲು ಹಲವು ದತ್ತಿಗಳನ್ನು ನೀಡಿ ಅವರನ್ನು ನೇಮಿಸುತ್ತಿದ್ದರು.

ಕೃಷ್ಣದೇವರಾಯನು ಹಂಪಿಯಲ್ಲಿ ಉದಯಗಿರಿಯಿಂದ ತಂದ ಬಾಲಕೃಷ್ಣ ಪ್ರತಿಮೆಗೆ ದೇವಾಲಯವನ್ನು ಕಟ್ಟಿಸಿ ಅದರ ನಿರ್ವಹಣೆಗೆ ಇಬ್ಬರು ಸ್ಥಾನಿಕರನ್ನು ಆಯ್ಕೆ ಮಾಡಿದ[೪೮] ದೇವಾಲಯದ ನಿರ್ಮಾತೃಗಳು ಸ್ಥಾನಿಕರನ್ನು ಆಯ್ಕೆ ಮಾಡುತ್ತಿದ್ದರು. ಅವರು ತಮ್ಮ ಹೇಳಿಕೆಗಳಿಗೆ ಅನುಸಾರವಾಗಿ ನಡೆದುಕೊಂಡು ಬರಲು ಕಟ್ಟಳೆಗಳನ್ನು ವಿಧಿಸಿರುವುದು ಉಲ್ಲೇಖವಾಗಿದೆ. ಹೊಸ ದೇವಾಲಯಗಳನ್ನು ನಿರ್ಮಾಣ ಮಾಡಿದಾಗ ಹೊಸ ಸ್ಥಾನಿಕರನ್ನು ನೇಮಿಸುವುದು ಕೆಲವು ಶಾಸನಗಳಲ್ಲಿ ಕಂಡುಬಂದರೆ, ಇನ್ನು ಹಳೆಯ ದೇವಾಲಯಗಳ ಸ್ಥಾನಿಕರಿಗೆ ಹೊಸ ದೇವಾಲಯಗಳ ನಿರ್ವಹಣಾ ಜವಾಬ್ದಾರಿ ನೀಡಿರುವುದು ಹಲವು ಶಾಸನಗಳಲ್ಲಿ ಕಂಡುಬರುತ್ತದೆ.

ರಂಗಭಟ್ಟರು ಹಂಪಿಯ ವಿಠಲದೇವಾಲಯದಲ್ಲಿ ಆಳ್ವಾರರ ದೇವಾಲಯದ ಪೂಜೆ ಮತ್ತು ದೇವಾಲಯದ ವ್ಯವಸ್ಥೆಯನ್ನು ನೋಡಿಕೊಳ್ಳಲು ಆಯಿರಾಮಜಯ್ಯನ ಮಕ್ಕಳಿಗೆ ಸ್ಥಾನಿಕರಾದ ಹಿರಿಯವಲಭಯ್ಯ ಮತ್ತು ಚಿಕ್ಕವಲಭಯ್ಯರಿಗೆ ಒಪ್ಪಿಸಿದುದು ತಿಳಿದುಬರುತ್ತದೆ.[೪೯] ಇವರು ಸ್ಥಾನಕ ಪದವಿಯ ಜೊತೆಗೆ ಪೂಜೆ, ನೈವೇದ್ಯ ಮಾಡಿಕೊಂಡು ಬರಬೇಕೆಂದು ಹೇಳಿದ್ದು ವಿಶೇಷವಾಗಿದೆ. ಇದು ಹೆಚ್ಚಿನ ಕಡೆ ಕಂಡುಬಂದಿಲ್ಲದ ಕಾರಣ ಸ್ಥಾನಿಕವು ವಂಶಪಾರಂಪರ್ಯವಾಗಿ ಅಥವಾ ಶಿಷ್ಯ ಪರಂಪರೆಯನ್ನು ಮುಂದುವರಿಸುತ್ತಾ ಬಂದ ಅಧಿಕಾರವಾಗಿತ್ತು.

ಸ್ಥಾನಪತಿಯು ದೇವರಿಗೆ, ದೇವಾಲಯಕ್ಕೆ, ಮಠಕ್ಕೆ ನೀಡಲ್ಪಟ್ಟ ದಾನಗಳನ್ನು ಸ್ವೀಕರಿಸುವ ಅಧಿಕಾರವನ್ನು ಪಡೆದಿದ್ದನು. ದಾನಿಗಳಿಂದ ಪಡೆದ ದಾನವನ್ನು ವ್ಯವಸ್ಥಿತವಾಗಿ ವಿನಿಯೋಗಿಸುವ ಆರ್ಥಿಕ ಜವಾಬ್ದಾರಿಯು ಇವನದಾಗಿತ್ತು. ದೇವಾಲಯಗಳಿಗೆ ಸಂಬಂಧಿಸಿದಂತೆ ಸ್ಥಾನಪತಿಯದೇ ಪ್ರಥಮಾಧಿಕಾರವಾಗಿತ್ತು. ಆತನು ಗುರುಸ್ಥಾನದಲ್ಲಿರುತ್ತಿದ್ದುದರಿಂದ ಗುರು ಅಥವಾ ಆಚಾರ್ಯ ಸ್ಥಾನವೂ ಜೊತೆಗೂಡಿ ದೇವಸ್ಥಾನವೇ ಅವನ ಮಾತುಗಳಿಗೆ ಬದ್ಧವಾಗಿರುತ್ತಿತ್ತು. ದೇವಾಲಯ ಆಡಳಿತವರ್ಗದ ಅಧಿಕಾರ ಸ್ಥಾನದಲ್ಲಿ ಸ್ಥಾನಿಕನೇ ವಿನಹ ಮತ್ತಾರೂ ದೇವಾಲಯವನ್ನು ಪ್ರತಿನಿಧಿಸುತ್ತಿರಲಿಲ್ಲ. ನಾಡನ್ನಾಳುವ ಅರಸು, ಊರೊಡೆಯರು, ವರ್ತಕ ವರ್ಗ, ಮೊದಲಾದ ಊರ ಪ್ರಮುಖರು, ಮಹಾಜನರು ಸ್ಥಾನಪತಿಯ ಜೊತೆಗೆ ದೇವಸ್ಥಾನದ ಆಡಳಿತಾತ್ಮಕ ವಿಷಯಗಳಲ್ಲಿ ಸಹಕರಿಸುತ್ತಿದ್ದರು. ಆದರೂ ದೇವಾಲಯ ಆಡಳಿತದ ಪ್ರತ್ಯಕ್ಷ ಪರಮಾಧಿರ ಸ್ಥಾನಪತಿಯದೆ ಆಗಿರುತ್ತಿತ್ತು.

ದೇವಾಲಯಗಳ ನಿರ್ವಹಣೆ ನೋಡಿಕೊಳ್ಳುತ್ತಿದ್ದ ಸ್ಥಾನಿಕರ ಬಗ್ಗೆ ಹಲವು ಶಾಸನಗಳು ಉಲ್ಲೇಖಿಸುತ್ತವೆ. ಹಂಪಿಯಲ್ಲಿನ ರಾಮಚಂದ್ರ ದೇವರ ದೇವಾಲಯದಲ್ಲಿ ಮಧವಯ್ಯ ಎಂಬ ಸ್ಥಾನಿಕನು ದೇವಾಲಯ ನಿರ್ವಹಣೆಯನ್ನು ನೋಡಿಕೊಳ್ಳುತ್ತಿದ್ದನು.[೪೭೦] ಕುಂದುರ್ಪಿ ತಿಮ್ಮನಾಯಕನು ವೆಂಪಲಪರ್ತಿ ತಿರುವೇಂಗಳನಾಥ ನೇಮಿಸಿದನು.[೪೭೧] ಇದಲ್ಲದೆ ದೇವಾಲಯದ ಆಡಳಿತದ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಒಬ್ಬ ಸ್ಥಾನಿಕನಲ್ಲದೆ ಅನೇಕ ಸ್ಥಾನಿಕರಿದ್ದುದು ಕಂಡುಬರುತ್ತದೆ. ಹಂಪಿಯ ವಿಠಲ ದೇವಾಲಯದಲ್ಲಿ ದೇಮಯ್ಯ, ನರಸಯ್ಯ, ವೀರಪ, ಚಿಕ್ಕವೀರಪ ಮತ್ತು ಪುರುಷೋತ್ತಮ ಈ ಐದು ಜನ ಸ್ಥಾನಿಕರಾಗಿದ್ದರು.[೪೭೨] ದೊಡ್ಡ ದೇವಾಲಯಗಳಲ್ಲಿ ಆಡಳಿತ ನಿರ್ವಹಣೆ ಹೆಚ್ಚು ಇದ್ದುದರಿಂದ ಬೇರೆ ಬೇರೆ ಕೆಲಸಗಳನ್ನು ನೋಡಿಕೊಳ್ಳಲು ಹಲವು ಸ್ಥಾನಿಕರನ್ನು ನೇಮಿಸಿಕೊಳಲಾಗುತ್ತಿತ್ತು.

೧೯. ಅರ್ಚಕ

ದೇವಾಲಯಗಳಲ್ಲಿ ದೇವರ ಪೂಜೆ ಮಾಡುವ ಸಲುವಾಗಿ ಊರಿನ ಮಹಾಜನರು, ಅರಸರು ಮತ್ತು ದಾನಿಗಳಿಂದ ಅವರ ಅಭಿಮತದಂತೆ ನೆಮಿತನಾದ ವ್ಯಕ್ತಿಯೇ ಅರ್ಚಕ. ಕೆಲವೊಂದು ಬಾರಿ ಸ್ಥಾನಿಕನು ಅರ್ಚಕನನ್ನು ನೇಮಿಸುತ್ತಿದ್ದ. ಪೂಜಾರಿಯ ಅಧಿಕಾರವು ಸಾಮಾನ್ಯವಾಗಿ ವಂಶಪಾರಂಪರ್ಯವಾಗಿಯೇ ಮುಂದುವರಿಯುತ್ತಿತ್ತು. ದೇವಸ್ಥಾನ ಮತ್ತು ದೇವತಾ ಸಾನ್ನಿಧ್ಯವು ಆಕರ್ಷಕವಾಗಿರಲು ಅರ್ಚಕನೂ ಮುಖ್ಯ ಕಾರಣ ಎಂಬುದು ಶೈವಾಗಮದ ಅಭಿಪ್ರಾಯ. ಆಗಮೋಕ್ತ ಕ್ರಮದಲ್ಲಿ ಪ್ರತಿನಿತ್ಯ ದೇವರ ವಿಗ್ರಹಕ್ಕೆ ಪೂಜೆ ಸಲ್ಲಿಸುವುದು ಪೂಜಾರಿಯ ಕರ್ತವ್ಯವಾಗಿತ್ತು. ಬೇರಾವ ವಿಷಯಕ್ಕೂ ಅವನು ಜವಾಬ್ದಾರನಾಗಿರಲಿಲ್ಲ ಅವನ ಸೇವೆಗಾಗಿ ಭೂಮಿ ಮತ್ತು ಹಣದ ರೂಪದಲ್ಲಿ ಸಂಭಾವನೆಯನ್ನು ನೀಡಲಾಗುತ್ತಿತ್ತು.

ಅರ್ಚಕಸ್ಯತು ಮಹಾತ್ಮ್ಯಾತ್ ಪೂಜ್ಯಬಿಂಬಸ್ಯ ಸೌಷ್ಠವಾತ್

ಪೂಜೋಪಕರಣಾಚ್ಚವ ತ್ರಿಭಿಸ್ಸಾನ್ನಿಧ್ಯಮುಚ್ಚತೇ ಎಂದಿದೆ.[೪೭೩]

ಇದರರ್ಥ ಅರ್ಚಕನು ಸದಾಚಾರ ಸಂಪನ್ನ, ಸುಶಿಕ್ಷಿತ, ತಪಸ್ವಿಯಾಗಿ, ನಿಗ್ರಹಾನುಗ್ರಹ ಸಾಮರ್ಥ್ಯ ಶಾಲಿಯಾಗಿರಬೇಕೆಂಬುದೇ ಆಗಿದೆ.

ದಾನಿಗಳು ಪೂಜಾರಿಯ ಜೀವನ ನಿರ್ವಹಣೆಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸುತ್ತಿದ್ದರು. ಅಷ್ಟೇ ಅಲ್ಲದೆ ಭಕ್ತರ ವಿಶೇಷ ಗೌರವಾದರಗಳಿಗೆ ಸುಲಭವಾಗಿ ಪಾತ್ರನಾಗುತ್ತಿದ್ದ ವ್ಯಕ್ತಿ ಪೂಜಾರಿಯಾಗಿದ್ದನು. ಅರ್ಚಕನು ಸ್ಥಾನಪತಿಯ ಅಧೀನನಾಗಿಯೇ ಕಾರ್ಯನಿರ್ವಹಿಸಬೇಕಾಗುತ್ತಿತ್ತು. ಬಹುದೊಡ್ಡ ದೇವಾಲಯಗಳಲ್ಲಿ ಬೇರೆ ಬೇರೆ ವಿಧಿಗಳನ್ನು ಪೂರೈಸಲು ಹೆಚ್ಚಿನ ಅರ್ಚಕರು ಬೇಕಾಗುತ್ತಿದ್ದರು. ಇವರು ಸಾಮಾನ್ಯವಾಗಿ ಬ್ರಾಹ್ಮಣರಾಗಿರುತ್ತಿದ್ದರು. ದೇವರ ಪೂಜೆ–ಪುನಸ್ಕಾರಗಳನ್ನು ನೆರವೇರಿಸಿ ದೇವರ ಉತ್ಸವಗಳನ್ನು ಕರಾರುವಾಕ್ಕಾಗಿ ನಡೆಸಿಕೊಂಡು ಬರುತ್ತಿದ್ದರು. ದೇವಾಲಯದ ಅರ್ಚಕನಿಗೆ ಕೆಲವು ವಿಶೇಷ ಗುಣಗಳಿರಬೇಕೆಂದು ಶಾಸ್ತ್ರ ಗ್ರಂಥಗಳು ಹೇಳುತ್ತವೆ. ಅರ್ಚಕರಿಗೆ ತಪಸ್ಸು ನಿಷ್ಠೆ ನಿಯಮ ಹಾಗೂ ಶೀಲಗಳಿರಬೇಕು ಅದಕ್ಕೆ ಅರ್ಚಕಸ್ಯ ತಪೋಬಲಾತ್ ಎಂದು ಹೇಳಿವೆ. ಕೃಷ್ಣದೇವರಾಯನು ೩೭ ಬ್ರಾಹ್ಮಣರನ್ನು ಬಾಲಕೃಷ್ಣ ದೇವರ ಪೂಜಾಕಾರ್ಯಗಳಿಗಾಗಿ ನೇಮಿಸಿದನು.[೪೭೪] ದೇವಾಲಯದಲ್ಲಿ ಪೂಜೆ ವಿಧಿಗಳಿಗೆ ಹಲವಾರು ಅರ್ಚಕರಿರುತ್ತಿದ್ದುದು ತಿಳಿಯುತ್ತದೆ. ಬ್ರಾಹ್ಮಣರ ಮೇಲೆ ರಾಯನು ಸದಾ ಗೌರವವುಳ್ಳವನಾಗಿದ್ದನು. ಬ್ರಾಹ್ಮಣರು ನೀತಿವಂತರೂ ಪ್ರಾಮಾಣಿಕರೂ ಕಾರ್ಯ ಸಮರ್ಥರೂ ಆಗಿದ್ದುದರಿಂದ ರಾಯನಿಗೆ ಅಂತಹ ಬ್ರಾಹ್ಮಣರಲ್ಲಿ ಹೆಚ್ಚಿನ ಭಕ್ತಿಯಿತ್ತು. ಮತ್ತು ನಂಬಿಕೆಯಿದ್ದಿತು.[೪೭೫] ಇದನ್ನು ತನ್ನ ಕೃತಿಯಾದ ಅಮುಕ್ತಮೌಲ್ಯದಲ್ಲಿ ಹೇಳಿಕೊಂಡಿದ್ದಾನೆ. ವೇದಾಧ್ಯಯನ ಸಂಪನ್ನರೂ ಜಪಯಜ್ಞಶೀಲರೂ ಆಗಿದ್ದರು. ಕೇವಲ ಐಶ್ವರ್ಯಾಕಾಂಕ್ಷಿಗಳಾಗಿರಲಿಲ್ಲ. ಇಂದ್ರ ಕುಬೇರರು ದಾನ ಕೊಟ್ಟರೂ ಅವರು ದಾನಕ್ಕಾಗಿ ಕೈಯೊಡ್ಡುವವರಾಗಿರಲಿಲ್ಲ ಎಂದು ಕೃಷ್ಣದೇವರಾಯ ಹೇಳಿರುವನು ಬ್ರಾಹ್ಮಣರು ವಿದ್ವತ್ತಿನಿಂದಲೂ ವೈದಿಕ ವೃತ್ತಿಯಿಂದಲೂ ಜೀವನ ಮಾಡುತ್ತಿದ್ದರು. ಅವರಿಗೆ ದೇವಾಲಯದ ಛತ್ರದಲ್ಲಿ ಉಚಿತ ಭೋಜನ ಸಿಗುತ್ತಿತ್ತು[೪೭೬] ಎಂದು ರಾಯನು ಆಮುಕ್ತಮೌಲ್ಯದಲ್ಲಿ ಹೇಳಿದ್ದಾನೆ.

೨೦. ಪರಿಚಾರಕರು

ವಿಜಯನಗರ ಕಾಲದಲ್ಲಿ ಅನೇಕ ಹೊಸ ದೇವಾಲಯಗಳು ನಿರ್ಮಾಣಗೊಂಡು ಹಳೆಯ ದೇವಾಲಯಗಳು ಜೀರ್ಣೋದ್ಧಾರ ಪಡೆದವು. ದೇವಾಲಯದಲ್ಲಿ ಹೊಸ ಪೂಜಾ ಪದ್ಧತಿಗಳು ಹುಟ್ಟಿಕೊಂಡು ಅವುಗಳ ನಿರ್ವಹಣೆಗೆ ಹಲವು ಪರಿಚಾರಕ ವರ್ಗದವರು ಬೇಕಾದರು. ದೇವಾಲಯದ ಆಡಳಿತದ ಜವಾಬ್ದಾರಿ ನೋಡಿಕೊಳ್ಳಲು ಸ್ಥಾನಿಕರಿಗೆ ಸಹಾಯಕರಾಗಿ ಸೇವಾವರ್ಗದವರು ನೇಮಕಗೊಂಡರು. ಇವರು ದೇವಾಲಯದ ಆಡಳಿತದಲ್ಲಿ, ಕೆಲಸಕಾರ್ಯಗಳಲ್ಲಿ ಹೊಣೆಯನ್ನು ಹೊತ್ತು ದೇವರ ನಿತ್ಯ ಕೈಂಕರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದರು.

ದೇವಾಲಯಗಳಲ್ಲಿ ದೇವರ ಅಂಗಭೋಗ, ರಂಗಭೋಗ, ಸೇವಾವರ್ಗ ಪ್ರತಿನಿತ್ಯದ ಸೇವೆಗಳಿಗೆ ಮತ್ತು ಅಲ್ಲಿನ ವಿಶೇಷ ಉತ್ಸವ, ಪರ್ವಗಳ ಆಚರಣೆಗೂ ಸೂಕ್ತವಾದ ಏರ್ಪಾಡು ಮಾಡುತ್ತಿದ್ದುದರಿಂದ ಆಡಳಿತದಲ್ಲಿ ನಿರಂತರವಾದ ಸೇವಾವರ್ಗವು ಇರುತ್ತಿತ್ತು. ದೇವಾಲಯದ

ಸೇವಾವರ್ಗವು ಸ್ಥಾನಪತಿಯ ಮೂಲಕ ಅಥವಾ ದಾನಿಯು ನೇರವಾಗಿ ನೇಮಿಸುತ್ತಿದ್ದನು. ಇವರಿಗೆ ದಾನ-ದತ್ತಿಗಳನ್ನು ಧನ, ಧಾನ್ಯ ಮತ್ತು ಭೂಮಿಯ ರೂಪದಲ್ಲಿ ಸಂಭಾವನೆ ನೀಡಿರುವುದನ್ನು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ದೇವಾಲಯದ ಪರಿಚಾರಕರಲ್ಲಿ ಮುಖ್ಯವಾದವರು ದೇವರ ಸೇವೆಗೆ ಬೇಕಾದ ಆಚಾರ್ಯರು, ಪೌರಾಣಿಕರು, ಜ್ಯೋತಿಷ್ಯರುಗಳು, ಮಂಡಳಿಯ ಸದಸ್ಯರು, ಬ್ರಹ್ಮ (ಮುಖ್ಯ ಪೂಜಾ ಮತ್ತು ಹಬ್ಬಗಳಲ್ಲಿ) ವೇದಪರಾಯಣ ಮಾಡುವವರು, ಮಂತ್ರ ಪುಷ್ಪದವರು, ಪವಮಾನಾಭಿಷೇಕ ಮತ್ತು ನಾಮತ್ರೇಯರು, ಇವರು ತಿರುವೇಂಗಳನಾಥ ದೇವಾಲಯದ ಅರ್ಚಕವರ್ಗದವರಾಗಿದ್ದರು.[೪೭೭] ಇವರಲ್ಲಿ ಪೂಜಾರಿಗಳು ಅತಿ ಅಗತ್ಯವಾದ ವರ್ಗದವರಾಗಿದ್ದರು. ಇವರಲ್ಲದೆ ಶಾಸನಗಳು ಹಲವಾರು ಪರಿಚಾರಕರನ್ನು ಹೆಸರಿಸಿವೆ. ದೇವಾಲಯ ಪರಿಚಾರಕರಲ್ಲಿ ಸೇನಭೋವ ಎಂಬುವವನ ಹೆಸರು ವೈಷ್ಣವ ದೇವಾಲಯಗಳಲ್ಲಿ ಲೆಕ್ಕಾಧಿಕಾರಿಯಾಗಿ ದಾಖಲೆಗಳಲ್ಲಿ[೪೭೮] ಕಂಡುಬರುತ್ತದೆ. ಹಂಪಿಯ ರಾಮಚಂದ್ರ ದೇವಾಲಯದ ಕಾರ್ಯಗಳನ್ನು ನೋಡಿಕೊಳ್ಳಲು ಕರಣಿಕ ಎನ್ನುವ ಅಧಿಕಾರಿ ಇದ್ದನು ಇವನು ದೇವಾಲಯದ ಲೆಕ್ಕವನ್ನು ನೋಡಿಕೊಳ್ಳುತ್ತಿದ್ದನು.[೪೭೯] ಅಲ್ಲದೆ ದೇವಾಲಯಗಳಲ್ಲಿ ದಾಖಲೆಗಳನ್ನು ಬರೆಯುವ ಮತ್ತು ಲೆಕ್ಕಗಳನ್ನು ಇಡುತ್ತಿದ್ದ ಲೆಕ್ಕಿಗನು[೪೮೦] ಇರುತ್ತಿದ್ದನು.

ಕೃಷ್ಣದೇವರಾಯನ ಕಾಲದಲ್ಲಿ ತಿರುಮಲೆಯ ತಿರುವೇಂಗಳನಾಥನ ದೇವಾಲಯದಲ್ಲಿದ್ದ ಪರಿಚಾರಕವರ್ಗದವರೆಂದರೆ ತಿರುವಿನ್ರಾರುಡೈಯಾರ್‌ಗಳ್ ಕುಪ್ಪ ವೆಂಕಟ್ಟರಸು, ಅಪ್ಪಾಕೊಂಡಾರ್, ಶ್ರೀನಿವಾಸನ್, ಕುಪ್ಪಯಂ, ವಿಲ್ಲಿಯಾರ್ ಮೊದಲಾದ ಅಧಿಕಾರಿಗಳಿದ್ದರು, ಹಂಪಿಯ ವಿಜಯವಿಠಲ ದೇವಾಲಯದಲ್ಲಿ ಭಂಡಾರದ ಹಿರಿತಿಮ್ಮಯ್ಯನು ದೇವರ ನಾನಾಭರಣಗಳನ್ನು ಮತ್ತು ದೇವಾಲಯದ ಬೀಗಮುದ್ರೆಯನ್ನು ನೋಡಿಕೊಳ್ಳುತ್ತಿದ್ದನು.[೪೮೧] ಈ ದೇವಾಲಯದ ಸೇವಾವರ್ಗದವರೆಂದರೆ ಸ್ಥಾನಿಕರು, ಭಂಡಾರದವರು, ವಾದ್ಯದವರು, ಪರಿಚಾರಕರು, ಅಡುಗೆಯವರು, ಹಿಟ್ಟುಕಟ್ಟುವವರು, ಗೋದಿ ಬೀಸುವವರು, ಹೂವುಕಟ್ಟುವವರು, ಗಂಧಪರಿಮಳದವರು, ದೊರವರು, ಎಣ್ಣೆ ಪಂಜು ಹಿಡಿಯುವವರು, ನಟುವ ರಂಗದವರು, ಸೇನಭೋವ, ಅನಂತಯ ಭಾರವರು, ಸ್ವಯಂಪಾಕಿ, ಘಳಿಯಾರದವರು, ಲೆಕ್ಕಿಗ, ಸಂಕೀರ್ತನೆ ಹಾಡುವವರು, ಕರಣಿಕರು, ಅಧಿಕಾರಿಗಳು ಇರುತ್ತಿದ್ದು ಶಾಸನಗಳಲ್ಲಿ ಉಲ್ಲೇಖಿತವಾಗಿದೆ. (ವಿಜಯನಗರ ತುಳುವ ವಂಶದ ಹಂಪಿಯ ವಿಠಲ ದೇವಾಲಯದ ಶಾಸನಗಳಲ್ಲಿ ಈ ಎಲ್ಲಾ ಪರಿಚಾರಕ ವರ್ಗದವರ ಹೆಸರುಗಳು, ಸ್ಥಾನಗಳೂ ಉಲ್ಲೇಖಿಸಿರುವುದು ಕಂಡುಬರುತ್ತದೆ.)

ದೇವಾಲಯಗಳಿಗೆ ಬರುವ ದಾನದತ್ತಿಗಳಲ್ಲಿ ಆಭರಣಗಳು, ಹೊನ್ನು ಮುಖ್ಯವಾಗಿವೆ. ಅವುಗಳನ್ನು ನೋಡಿಕೊಳ್ಳಲು ಪ್ರತ್ಯೇಕ ಅಧಿಕಾರಿಗಳು ನೇಮಕವಾಗುತ್ತಿದ್ದರು. ಇವರು ಆಭರಣದ ಜವಾಬ್ದಾರಿಯನ್ನು ಹೊತ್ತು ಅವುಗಳನ್ನು ಪೂಜೆ ಮತ್ತು ಉತ್ಸವ ಸಂದರ್ಭದಲ್ಲಿ ಮಾತ್ರ ನೀಡುತ್ತಿದ್ದರು. ಇವರಲ್ಲದೆ ದೇವಾಲಯದ ಸೇವಾವರ್ಗದವರಲ್ಲಿ ಪಾತ್ರ(ಪಾತರ)ದವರು ಮುಖ್ಯವಾಗಿದ್ದರು. ದೇವರನ್ನು ಪ್ರತಿಮಾ ರೂಪದಲ್ಲಿ ಅರ್ಜಿಸುವಾಗ, ಮನುಷ್ಯರಿಗೆ ಅತಿಥಿ ಸ್ಥಾನದಲ್ಲಿ ದೊರಕುವ ಎಲ್ಲಾ ಗೌರವ, ಅದರ ಸತ್ಕಾರಗಳು ಲಭ್ಯವಾಗುತ್ತವೆ. ದೇವರನ್ನು ಜೀವಂತ ವ್ಯಕ್ತಿ ಎಂಬಂತೆಯೇ ಸ್ವಾಗತಿಸಿ, ಸತ್ಕರಿಸಿ, ಚಕ್ರವರ್ತಿಯೊಬ್ಬರಿಗೆ ಸಲ್ಲುವ ಎಲ್ಲಾ

ಭೋಗಗಳನ್ನು ಸಾಂಕೇತಿಕವಾಗಿ ಒದಗಿಸುವುದು ಈಗಲೂ ರೂಢಿಯಲ್ಲಿದೆ. ಸಂಗೀತ ಮತ್ತು ನೃತ್ಯಗಳು ಬಹಳ ಮುಖ್ಯವಾಗಿದ್ದು ನೃತ್ಯದ ಮೂಲಕ ಸೇವೆ ಸಲ್ಲಿಸುವ ನರ್ತಕ ಅಥವಾ ನರ್ತಕಿಯು ಯಾವುದೇ ಒಂದು ಪುರಾಣದ ಪಾತ್ರವಾಗಿ ಅಭಿನಯದ ಮೂಲಕ ನೃತ್ಯ ಪದರ್ಶನ ಮಾಡುತ್ತಿದ್ದ ಕಾರಣದಿಂದ ಅಂತಹವನ್ನು ಪಾತ್ರದವರು[೪೮೨] ಎಂದು ಕರೆಯುತ್ತಾರೆ ಸೂಳೆಯರಿದ್ದ ದೇವಾಲಯಗಳಲ್ಲಿ ಸೂಳೆವಳೆ ಇರುತ್ತಿದ್ದನು. ಇವನು ಸೂಳೆಯರ ಮೇಲ್ವಿಚಾರಕ, ಜೊತೆಗೆ ನೃತ್ಯ ಶಿಕ್ಷಕನೂ ಆಗಿರುತ್ತಿದ್ದನು. ದೇವಾಲಯಗಳ ಸೇವಾವರ್ಗಕ್ಕೆ ಒದಗಿಸಿರುವ ದಾನವನ್ನು ಗಮನಿಸಿದಾಗ ಅದರಲ್ಲೂ ರಂಗಭೋಗದ ಸೇವೆಗಾಗಿ ದೊರೆತ ಪ್ರೋತ್ಸಾಹವು ಗಣನೀಯವಾದದ್ದು, ಅಂತೆಯೇ ಕ್ರಿ.ಶ. ೧೫೭೫ರ ಒಂದು ಶಾಸನವು ತಿರುಮಲೆಯ ದೇವಾಲಯದ ಆಡಳಿತದಲ್ಲಿನ ಪರಿಚಾರಕ ವರ್ಗದವರನ್ನು ಈ ಕೆಳಗಿನಂತೆ ತಿಳಿಸುತ್ತದೆ.[೪೮೩]

ಸ್ಥಾನತ್ತಾರ್ ದೇವಾಲಯದ ಪ್ರಧಾನ ಆಡಳಿತ ನಿರ್ವಹಣೆಯನ್ನು ನೋಡಿಕೊಳ್ಳುವವ.

ನಂಬಿಮಾರರು ದೇವಸ್ಥಾನ ಅರ್ಚಕ ವೃತ್ತಿಯಲ್ಲಿರುವವರು, ದೇವಾಲಯದ ಪೂಜೆ, ಪುನಸ್ಕಾರ ಮತ್ತು ಉತ್ಸವಗಳನ್ನು ನೋಡಿಕೊಳ್ಳುವವರು.

ಅನುಸಂಧಾನರಿ ದೇವಾಲಯದಲ್ಲಿ ಪೂಜೆಯಾದ ಮೇಲೆ ವೇದಗಳ ಪಠಣ ಮತ್ತು ಪ್ರಬಂಧಗಳನ್ನು ಹೇಳುವವರು.

ತೇವೈ ದೇವಸ್ಥಾನದ ಪರಿಚಾರಕದವರು, ಇವರು ಅರ್ಚಕರಿಗೆ ಸಹಾಯಕರಾಗಿ ಕೆಲಸ ಮಾಡುವರು.

ಕಂಗಾಣೆಪ್ಪಾನ್ ಆಡಳಿತದ ಮೇಲ್ವಿಚಾರಕ.

ತಿರುಪ್ಪಣಿಪಿಳ್ವೆ ದೇವಸ್ಥಾನದ ರಿಪೇರಿ ಕೆಲಸವನ್ನು ಮಾಡುವವರು.

ಅಧಿಕಾರಿ ಪರಿಚಾರಕರ ಮುಖ್ಯಸ್ಥ.

ಕೈಕೋಳರು ದೇವಾಲಯದ ಸೇವಕ

ಶಿಪ್ಪಿಯಾರ್ ದೇವಾಲಯದ ಅಭಿವೃದ್ಧಿಗೆ ಬೇಕಾದ ಮಂಟಪಗಳನ್ನು ಕಟ್ಟುವವ.

ಮಂಟಪಕೊಟ್ಟರ್ ಮಂಟಪಗಳನ್ನು ರಿಪೇರಿ ಮಾಡುವವ.

ತಿರುವಿಧಿಶಾನಿ ದೇವಾಸ್ಥಾನದಲ್ಲಿ ಪೂಜೆಯ ನಂತರ ರಂಗಮಂಟಪದಲ್ಲಿ ನಾಟ್ಯ ಮಾಡುವವರು.

ಶಾಸನಗಳಲ್ಲಿ ಉಲ್ಲೇಖಿಸಿರುವ ಹಾಗೆ ತಿರುಮಲೆ ಮತ್ತು ತಿರುಪತಿಯಲ್ಲಿನ ರಾಮಾನುಜ ಕೂಟಗಳಲ್ಲಿ (ಅನ್ನಸತ್ರಗಳು) ಮೇಲ್ವಿಚಾರಕ ಇರುತ್ತಿದ್ದನು.[೪೮೪] ಚಿನ್ನದ ಖಜಾನೆಯನ್ನು ನೋಡಿಕೊಳ್ಳಲು ಖಜಾನೆ ಪಾಲಕ ಹೂತೋಟದ ಮೇಲ್ವಿಚಾರಕರು[೪೮೫] ಕೂಡ ಇರುತ್ತಿದ್ದರು.

ಟಿಪ್ಪಣಿಗಳು

೧. ಸೂರ್ಯನಾಥ ಕಾಮತ್, ಹದಿನೆಂಟು ಜಾತಿಗಳಾಗಿ ಅಸ್ವಾದ, ಪು-೪೩೧

೨. ಎಸ್.ಐ.ಐ. ೯, (!) ಹರಪನಹಳ್ಳಿ, ೩೭೮, ಕ್ರಿ.ಶ. ೧೨೭೯. ಮಂಜುನಾಥ, ಸಿ.ಯು. ಪು-೧೮೧

೩. ಎಂ.ಇಂ. ೧೪. ನಂ.೧೪. ಲಕ್ಷ್ಮೇಶ್ವರ, ಗದಗ, ಕ್ರಿ.ಶ. ೭೨೫, ಪು-೧೯೦-೧೯೧

೪. ಸಂಕೀರ್ಣ ವಚನ ಸಂಪುಟ-೨, (ಸಂ) ವಿದ್ಯಾಶಂಕರ, ಎಸ್., ವಚನ-೧೨, ಪು-೬

೫. ನಾವಲಗಿ., ಸಿ.ಕೆ. ಜಾನಪದ ಸ್ಪಂದನ, ಪು-೧೦೪

೬ ನಾಗರಾಜು,ಹೆಚ್.ಎಂ. ವಿಜಯನಗರ ಇಮ್ಮಡಿ ದೇವರಾಯ, ಪು-೧೯೩

೭ ಮಹೇಶ್., ಜಿ ಪಿಎಚ್.ಡಿ., ಪ್ರಬಂಧ ,ಪು-೮೧, ಟಿ. ಮಹದೇವ, ಡಿ.ತ್ಯಾಗಿ, Santhro, pological, survey of India, vol.1

೮. ಮಹೇಶ್., ಜಿ, ಅದೇ, ಪು-೮೧

೯. ಎಮ್.ಎ.ಆರ್., ೧೯೧೦-, ಪು-೩೬. ಎ.ಕ., ೯, ಚನ್ನರಾಯಪಟ್ಟಣ, ೬೬, ಕ್ರಿ.ಶ.೧೨೮೮

೧೦. ವಿದ್ಯಾಶಂಕರ್., ಎಸ್, (ಸಂ), ಸಂಕೀರ್ಣ ವಚನ ಸಂಪುಟ-೨, ಜೇಡರ ದಾಸಿಮಯ್ಯ ವಚನ-೭೩೮, ಪು-೨೩೬

೧೧. ಕೆ.ಐ., ೫, ನಂ.೫೩, ಹಾನಗಲ್ ತಾ. ಕ್ರಿ.ಶ.೧೧.೨೦.೨೧., ಪು-೨೧೪

೧೨. ಇ.ಸಿ. ೮, ಹಾನಗಲ್, ೪೧, ಕ್ರಿ.ಶ. ೧೨೦೦, ಪು-೨೬೭

೧೩. ಎ.ಇಂ. ೧೩, ಬೆಳಗಾವಿ, ಕ್ರಿ.ಶ.೧೨೦೪, ಪು-೧೯-೨೨

೧೪. ಕೆ.ಐ. ೫, ನಂ.೧೦೨, ಮಲ್ಲಿಗವಾಡ, ಹುಬ್ಬಳ್ಳಿ ತಾ. ೧೨ನೆಯ ಶತಮಾನ, ಪು-೩೦೫

೧೫. ಎಸ್.ಐ.ಐ. ೧೫, ನಂ.೪೬, ಸಾಲವಾಡಗಿ, ಬಾಗೇವಾಡಿ ತಾ. ಜಗದೇಕಮಲ್ಲ-೨, ಪು- ೬೨

೧೬. ಎ.ಇಂ. ೧೩, ಬೆಳಗಾವಿ ತಾ. ಕ್ರಿ.ಶ. ೧೨೦೪, ಪು-೧೦-೨೨

೧೭. ಸೌ.ಇ.ಇಂ. (೧) ನಂ. ೯೨, ಮುಳಗುಂದ, ಗದಗ ತಾ. ಕ್ರಿ.ಶ. ೧೦೮೨, ಪು-೯೩

೧೮. ಎಸ್.ಐ.ಐ., ೨೦, ರೋಣ, ಇಂಡಿ ತಾ. ಕ್ರಿ.ಶ.೧೦೬೯, ಪು-೪೯

೧೯. ಎಸ್.ಐ.ಐ., ೨೦, ನಂ.೧೭೮, ಹಿಪ್ಪರಗಿ, ಸಿಂದಗಿ ತಾ. ಕ್ರಿ.ಶ.೧೧೯೨, ಪು-೨೨೫

೨೦. ಎಸ್.ಐ.ಐ., ೧೫, ನಂ.೧೬೯, ಕೊಲಾರ, ಬಾಗೇವಾಡಿ ತಾ. ಕ್ರಿ.ಶ. ೧೨೨೩, ಪು-೨೧೫

೨೧. ಎ.ಕ., ೬, ಕೃ.ಪೇಟೆ, ೧೦೬, ಕ್ರಿ.ಶ.೧೧೬೫

೨೨. ಎ.ಇ.ಐ., ೬, ಪು-೧೬೬, ನಂ.೭೯೩, ಕ್ರಿ.ಶ. ಪಟ್ಟಗಾರರು ರೇಷ್ಮೇ ವಸ್ತ್ರಗಳನ್ನು ನೇಯುವವರು ಎಂದು ಭಾವಿಸಬಹುದು

23. ARSBIE, 1916-312, Annual Repors of South India Epigraphy

೨೪. ಇ.ಸಿ. ೪, ಸಿಹೆಚ್.-೯೭, ನಾಗರಾಜು, ಹೆಚ್,ಎಂ., ಪು-೧೯೩

೨೫. ಎಆರ್ಎಸ್ಐಈ, ೧೯೧೮, ಪು-೧೬೬.

೨೬. ಎಮ್.ಇ.ಆರ್., ಸಂ.೧೯೩೪೦೩೫, ೨೬೫, ಕ್ರಿ೧೪೪೫.

೨೭. ಎಮ್.ಇ.ಆರ್., ೧೯೨೩ರ ೨೧೪, ಅನುಬಂಧ, ಸಿ. ಶಾ. ಕಿ.ಆ.೧೩೪೮ ಅಥವಾ ಕ್ರಿ.ಶ. ೧೪೨೬.

೨೮. ಎಮ್.ಇ.ಆರ್. ೧೯೩೪-೩೫, ೨೦೯, ಅನುಬಂಧ, ಬಿ. ಕ್ರಿ.ಶ. ೧೪೨೮.

೨೯. ಎಮ್.ಇ.ಆರ್., ಸಂ. ೧೯೨೮-೨೯ರ ೨೬೩, ಅನುಬಂಧ.ಬಿ.

೩೦. ಎ.ಕ. ೯, ಚನ್ನಪಟ್ಟಣ, ೬೫, ಯಲಿಯೊರು, ಕ್ರಿ.ಶ. ೧೨೭೮..

೩೧. ಎ.ಕ. ೧೧, ಪು-೩೩೨, ಏಪೊರ ತಾ, ಸುರಪುರ, ಶಿರಹಟ್ಟಿ, ಕ್ರಿ.ಶ. ೭೯೩.

೩೨. ಎ.ಕ. ೧೧, ಪು-೧೬೬, ಲಕ್ಷ್ಮೇಶ್ವರ ತಾ. ಶಿರಹಟ್ಟಿ, ಕ್ರಿ.ಶ. ೭೯೩.

೩೩. ಶ್ರೀಕಂಠಯ್ಯಕೆ., ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನ ಜೀವನ ಚಿತ್ರ, ೧೯೮೩, ಪು–೪೦೨.

೩೪. ಭರತೇಶ ವೈಭವ, ಸಂ, ೧ ಪ, ೩೫.

೩೫. ರಾ.ಚ. ೧೮–೨೭

೩೬. ರಾ.ಚ.-೧೮–೨೭

೩೭. ಪು.ಕೀ. ೨–೧೫.

೩೮. ಪು.ಕಿ. ೧–೧೦೦.

೩೯. ಸಂ.ರಾಜೀ. ೨, ಪು–೧೪೫, ಪು.ಕಿ. ೪–೬೭.

೪೦. ಭ.ವೈ. ೬೩–೧೪.

೪೧. ರಾ.ಚ. ೪೧–೯೨.

೪೨. ನ.ಚ. ಪು–೨೪.

೪೩. ಮೊ.ತ. ೩–೪೩.

೪೪. ಎಸ್.ಪಿ.ಎಲ್. ೨, ಪು–೩೦೧.

೪೫. ಪು.ಕಿ. ೧–೧೪೦.

೪೬. ಭ.ವೈ. ೩೧–೪೧.

೪೭. ನಾಗೇಗೌಡ., ಹೆಚ್.ಎಲ್, ಪ್ರವಾಸಿ ಕಂಡ ಇಂಡಿಯಾ, ಸಂಪುಟ–೨, ಪು–೨೯೨.

48. Varthema, Qtd, Spl, II, p-300.

೪೯. ಪ್ರೌ.ಕಾ. ೧೨–೨೨.

೫೦. ಪು.ಕಿ. ೧–೧೫೭.

೫೧. ರಾ.ಚ. ೪–೧೧೩., ಮೊ.ತ. ೩–೨೧.

೫೨. ಬ.ಪು. ೨೩–೩,೪.

೫೩. ನಾವಲಗಿ., ಸಿ.ಕೆ., ಜಾನಪದ ಸಂಪುಟ, ಪು–೧೦೪.

೫೪. ಮ.ಅ.ಪು. ೫–೪೩.

೫೫. ಬ.ಪು. ೧೭–೧೪. ೫೫ಅ.ಸೊ.ಶ. ೧–೫೦

೫೬. ರಾ.ಚ. ೩೧–೬೮.

೫೭. ಸಿದ್ದಲಿಂಗಮ್ಮ., ಬಿ.ಜಿ. ಪು–೩೦.

೫೮. ಅದೇ, ಪು–೩೦.

59. Joseph wolf, The Dawn of man p-195.

೬೦. ಅದೇ, ಪು–೨೦೧.

೬೧. ಸಂಕಾಲಿಯ ಹೆಚ್.ಡಿ., ಪ್ರಿ ಹಿಸ್ಟಾರಿಕ್ ಆರ್ಟ್ ಇನ್ ಇಂಡಿಯಾ, ಪು–೧೦.೬೨. ಆರ್.ಎಸ್.ಶರ್ಮಾ, ಪು–೧೮೦.

೬೩. ಬಸವರಾಜು ಎಲ್., ಸರ್ವಜ್ಞನ ವಚನಗಳು, ವ.೬, ಪು–೨.

೬೪. ಅದೇ, ವ.೧೦೫೧, ಪು–೨೦೭

೬೫. ಹಂಪನಾಗರಾಜಯ್ಯ, ೧೯೮೨ಮ ಶಾಂತಿಪುರಾಣ, ಸಂ–೫, ಪ.೧೫, ಪು–೧೭೬.

೬೬ ಹಂಪನಾಗರಾಜಯ್ಯ, ಶಾಂತಿಪುರಾಣ, ಪ.೫೧,ಸಂ.೧೨, ಪು-೪೯೬. ಆರ್.ಎಸ್., ಹಿರೇಮಠ, ನೇಮಿನಾಥ ಪುರಾಣ, (ಪ್ರಸಂ.) ೧೯೬೮, ಸಂ.೪, ಪ.೩, ಪು- ೭೪.

೬೭ ಸಣ್ಣಯ್ಯ., ಬಿ.ಎಸ್. (ಸಂ), ಸಿ.ಪು. ೧೯೭೭, ಪು-೧೬೨.

೬೮. ಭಾನುಮತಿ ವೈ.ಸಿ., ಅನಂತನಾಥ ಚುಡಾಮಣಿ, ಸಂ.೧೨, ಪ.೬೫, ಪು-೧೬೩, ೧೯೮೧.

೬೯. ಮಂಜುನಾಥ., ಜಿ.ಜಿ., ಲಿಂಗಪುರಾಣ, ೧೯೯೭, ಸಂ.೮, ಪ-೧೭.

೭೦. ಎ.ಕ. ೮, ತೀಥಹಳ್ಳಿ, ೧೯., ಕೆಳದಿ ವೆಂಕಟೇಶ ಜೋಯಿಸ, ಕೆಳದಿ ಅರಸ ಶಾಸನ ಸಂಪುಟ

೭೧. ೧೯೯೧, ಪು-೪೮-೩೫. ಶಿವಪುರ, ತೀಥಹಳ್ಳಿ, ಶಿವಮೊಗ್ಗ, ಕ್ರಿಶ. ೧೫೭೩.

೭೨. ಎಸ್.ಐ.ಐ. ೯, ೧೧, ೫೧೦, ಕ್ರಿಶ.೧೫೧೮.

೭೩. ಮೈ. ಎ.ಕ. ೫, ತಿ.ನರಸಿಪುರ, ೮೮, ಕ್ರಿಶ. ೧೨೨೬.

೭೪. ಎ.ಕ. ೪, ಯಳಂದೂರು, ೨, ಕ್ರಿಶ. ೧೭ನೆಯ ಶತಮಾನ.

೭೫. ಎ.ಆರ್. ನಂ. ೨೯೨, ಮತ್ತು ೧೮೯೫-ಎಸ್.ಐ.ಐ., ೫. ಕ.ವಿ.ವಿ. ಶಾಸನ ಸಂಪುಟ-೪, ತಮಿಳುನಾಡು, ಜನ್ನ, ಪು-೩೩, ಕ್ರಿಶ. ೧೧೮೦-೮೧. ವಿನಯಪಾಂಡ್ಯ.

೭೬ ಹೊ.ಕು. ರಾಚಂ. ಸಂ.೯, ಪು-೧೯೯.

೭೭ ರಾಬರ್ಟ್ ಸಿವೆಲ್, ಆರ್. ಮರೆತುಹೊದ ಮಹಾಸಾಮ್ರಾಜ್ಯ ವಿಜಯನಗರ, ಪು-೮೩.

೭೮. ಕ.ಇ. ೫, ೨೧, ತೇರದಾಳ, ತಾ. ಜಮಖಂಡಿ, ಕ್ರಿಶ. ೧೧೨೫.

೭೯. ಕರ್ನಾಟಕ ಭಾರತಿ, ೬-೩, ಪು-೪೩-೫೪, ಕಮ್ಮಾಳ ತಾ. ಗೋಕಾಕಾ, ಕ್ರಿಶ. ೧೨೦೪.

೮೦. ಎ.ಇ. ೨೧, ಪು-೩೦-೩೪, ಕೊಲ್ಲಾಪುರ, ತಾ. ಕೊಲ್ಹಾಪುರ, ಕ್ರಿಶ. ೧೧೩೫.

೮೧. ಎ.ಕ. ಸಂ. ೨೪, ತುಮಕೂರು, ಸಂಖ್ಯೆ, ೬೪.

೮೨. ಕ.ವಿ.ವಿ.ಶಾ.ಸಂ. ೩, ಕೊಪ್ಪಳ ಜಿಲ್ಲೆ, ಕ್ರಿಶ. ೧೫೧೮. .

೮೩. ಎ.ಕ. ಸಂ.೩, ಸಂ.೧೩೦-೧೫೦.

೮೪. ಕಲಬುರ್ಗಿ, ಎಂ.ಎಂ., ಹರಿಹರನ ರಗಳೆಗಳು, (ಸಂ), ೧೯೯೯, ಪು-೨೬೯.

೮೫. ಸಿದ್ಧರಾಮೇಶ್ವರ ವಚನ ಸಂಪುಟ, ವಚನ-೧೯೫೫, ೨೦೦೧, ಪು-೪೨೦.

೮೬. ಕಲಬುರ್ಗಿ, ಎಂ.ಎಂ., ಶಾಸನಗಳಲ್ಲಿ ಶಿವಶರಣರು, ೧೯೭೮, ಪು-೨೨.

೮೭. ದೇವೇಂದ್ರ ಕುಮಾರ್ ಹಕಾರಿ, ಸಂಧ್ಯಾರೆಡ್ಡಿ, ಕೆ.ಆರ್., ಗ್ರಾಮೀಣ ವೃತ್ತಿಗಳು, ೨೦೦೦, ಪು-೧೯೭.

೮೮. ನಾಗೇಶ್, ಹೆಚ್.ವಿ., ಆಯಾ-ಆಯಾಗಾರರು, ಜಾನಪದ ಸಾಹಿತ್ಯ ದರ್ಶನ, ಭಾಗ-೨, ೧೯೮೨, ಪು-

೮೯. ಅದೇ, ಪು-೧೯೩.

೯೦. ಗುರುರಾಜಚಾರ್, ಎಸ್., ಸಾಮ್ ಅಸ್ಪೆಕ್ಟ್ಸ್ ಆಫ್ ಎಕಾನಾಮಿಕ್ ಅಂಡ್ ಸೋಷಿಯಲ್ ಲೈಫ್ ಇನ್ ಕರ್ನಾಟಕ, ೧೯೭೪, ಪು-೭೦.

೯೧. ಆಲ್ಟೆಕರ್, ಎ.ಎಸ್., ಎ ಹಿಸ್ಟರಿ ಆಫ್ ವಿಲೇಜ್ ಕಮ್ಯುನೀಟಿಸ್ ಇನ್ ವೆಸ್ಟರ್ನ್ ಇಂಡಿಯಾ ಮದ್ರಾಸ್, ೧೯೨೭, ಪು-೯೩-೯೪.

೯೨. ಎ.ಕ. ೯, ಬಿ.ಎನ್. ೧೨, ನಾಗರಾಜ್,ಹೆಚ್.ಎಮ್., ಪು-೧೯೨.

೯೩. ಕ.ಕೀ. ೮೧, ಮ.ಕೀ. ೪-೩೦.

೯೪. ಕ.ಕೀ. ೪೭

೯೫. ಮೊ.ತ. ೩೨-೬

೯೬ ಸ.ವ. ೧೩೬೨.

೯೬ ಅ. ಪ್ರ.ಕಂ,ಇ, ಪು ೩೬೭–೬೯

೯೬ ಬ. ಗ. ಬಾ. ೧೧–೩೭

೯೬ ಸ, ತೋ ರಾ. ೮–೧೩

೯೭ ಎ.ಕ. ೯, ಮಾಗಡಿ, ೧೫, ಕ್ರಿ.ಶ. ೧೩೧೫.

೯೮. ಬಿ.ಕೆ.ಐ., ೧, ೬೮. ಕ್ರಿ.ಶ. ೧೦೩೨, ಎ.ಕ. ೭, ಎಸ್.ಯು. ೧೧೯, ಕ್ರಿ.ಶ. ೧೦೪೨.

೯೯. ಎಸ್.ಐ.ಐ., ೧೫, ನಂ.೬೯, ಹೊಸೂರು, ಗದಗ ತಾ., ಕ್ರಿ.ಶ. ೧೧೮೬, ಪು–೯೫.

೧೦೦. ಕುಮಾರಸ್ವಾಮಿ, ಕೆ.ಎಸ್., ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರಿಯರು, ೧೯೯೬, ಪು–೭೬.

೧೦೧. ಎ.ಕ. ೫, ಚೆನ್ನರಾಯಪಟ್ಟಣ, ೨೪೪.

೧೦೨. ಎ.ಕ. ೧೦, ಚನ್ನರಾಯಪಟ್ಟಣ, ೩೧, ಕ್ರಿ.ಶ. ೧೫೦೦.

೧೦೩. ಎ.ಕ. ೧–೧೯, ಕ್ರಿ.ಶ.೧೫೪೪.

೧೦೪. ಎ.ಕ. ೧೭, ಮಾಲೂರು, ೩, ಕ್ರಿ.ಶ.೧೪೩೧.

೧೦೫. ಎ.ಕ. ೧೧, ಜಗಳೂರು, ೪೨, ಕ್ರಿ.ಶ. ೧೪೮೦.

೧೦೬. ಸೋಮಶೇಖರ್, ಎಸ್.ವೈ., ಹಂಪಿಯ ಬಜಾರುಗಳು, ಪು–೯.

೧೦೭. ಶಿವತತ್ವ ಚಿಂತಾಮಣಿ, ಸಂ.೩೮, ಪ.೫೫೪.

೧೦೮. ಸೋಮಶೇಖರ್, ಎಸ್.ವೈ., ಪೂರ್ವೋಕ್ತ, ಪು–೧೧.

೧೦೯. ಲಿನ್ಸಾಟಿನ್ ಪರ್ಜೇಸ್ ಫಿಲಿಗ್ರಾಮ್, ಸಂ–೧೦, ಪು–೨೭೪.

೧೧೦. ವೇಗಾ ಪರ್ಜೇಸ್ ವಿಲಿಗ್ರಾಮ್ಸ, ಸಂ.೧೦, ಪು–೨೨೨.

೧೧೧. ಸಾಲತೊರೆ, ಬಿ.ಎ., ಸೋಶಿಯಲ್ ಅಂಡ್ ಪೊಲಿಟಿಕಲ್ ಲೈಫ್ ಇನ್ ವಿಜಯನಗರ ಎಂಪಾಯರ್, ಭಾಗ–೨, ಪು–೩೮೨.

೧೧೨. ಎ.ಕ. ೧೦, ಕೆ.ಐ. ಸ.೩೪, ಪು–೮.

೧೧೩. ಎ.ಕ. ೯, ಡಿ.ಜಿ. ಸಂ.೩೦–೮೩. ಪು–೪೬.

೧೧೪. ಎ.ಆರ್., ರಿಪೋರ್ಟ್ ಪಾರ್ ೧೯೧೪, ಪು–೯೯.

೧೧೫. ಸಾಲೆತೊರೆ, ಬಿ.ಎ., ಪೊರ್ವೋಕ್ತ, ಪು–೩೯೪.

೧೧೬. ಅದೇ, ಪು–೩೯೪.

೧೧೭. ಎ.ಕ. ಟಿ.ಎನ್., ೧೨೦, ಪು–೯೧–೯೨.

೧೧೮. ಮಂಜಣ್ಣ, ಪಿ.ಬಿ., ವಿಜಯನಗರ ಕಾಲದ ಕ್ರೀಡೆ ಮತ್ತು ವಿನೋದಾವಳಿ, ಪು–೧೮೮.

೧೧೯. ಸೋಮಶೇಖರ್, ಎಸ್.ವೈ., ಪೂರ್ವೋಕ್ತ, ಪು–೧೦–೧೧.

೧೨೦. ಪಂಡಿತ್, ಎಸ್. ಬಸಪ್ಪ, (ಸಂ), ಲಕ್ಕಣ್ಣ ದಂಡೇಶನ, ಶಿವತತ್ವ ಚಿಂತಾಮಣಿ, ಪು–೨೫೨.

೧೨೧. ಎಸ್.ಐ.ಐ. ೪, ಸಂ.೨೫೪.

೧೨೧. ಅ. ಎಸ್.ಎಸ್,ಐ. ೯. ಭಾಗ, ೨, ಸಂ, ೫೧೮

೧೨೨. ಎ.ಕ. ೬, ಪು–೧೨೩, ನಂ.೨೪.

೧೨೩. ಲಕ್ಷ್ಮಣ್ ತೆಲಗಾವಿ, (ಸಂ) ಸಂಶೋಧನ, ೧೯೯೧, ಪು–೬೦೮.

೧೨೪. ಎ.ಇ. ೧೮, ೩೧೩–೩೩೧, ಕ್ರಿ.ಶ. ೮೦೮.,

ಎ.ಇ. ೧೮, ೨೯೩-೩೨೯, ಕ್ರಿ.ಶ. ೧೧೦೦.

ಎ.ಇ. ೩೦, ೨೮-೩೦, ಕ್ರಿ.ಶ. ೮೦೩, ೧೮ಮ ೨೯೮-೨೯, ಕ್ರಿ.ಶ. ೧೧೦೦.

೧೨೫. ನಾವಲಗಿ, ಸಿ.ಕೆ., ೧೯೮೯, ಜಾನಪದ ಸ್ಪಂದನ, ಪು-೮೩.

೧೨೬. ದೇವೇಂದ್ರಕುಮಾರ್ ಹಕಾರಿ, ಸಂಧ್ಯಾರೆಡ್ಡಿ, ಕೆ.ಆರ್., ಗ್ರಾಮೀಣ ವೃತ್ತಿಗಳು, ಪು-೮೭.

೧೨೭. ಕನ್ನಡ ನಿಘಂಟು, ಸಂಪುಟ-೩, ಪು-೨೮೪೧.

೧೨೮. ಅದೇ, ಪು-೬೨.

೧೩೦. ಎ.ಕ. ೬. ಕಡೂರು, ೧೧೨, ಕಂಜಿಗಲ್ಲು, ಕ್ರಿ.ಶ. ೧೨೫೩.

೧೩೧. ಎ.ಇ. ೨೧, ಪು-೩೦-೩೪, ಕೊಲ್ಲಾಪುರ ತಾ. ಕೊಲ್ಲಾಪುರ, ಕ್ರಿ.ಶ. ೧೧೩೫.

೧೩೨. ಎಸ್.ಐ.ಐ. ೧೧, (!!) ನಂ.೧೫೩. ಸೂಡಿ, ರೋಣ ತಾ. ಕ್ರಿ.ಶ. ೧೧೦೩, ಪು-೧೯೨.

೧೩೩. ಎ.ಕ. ೧೧, (ಹಳೆ) ಶಿರಾ, ೩೭, ಸು.ಕ್ರಿ.ಶ. ೧೦೪೦, ಪು-೨೭೪.

೧೩೪. ಎಸ್.ಐ.ಐ. ೧೧, (೧೧) ನಂ.೨೦೨, ಲಕ್ಕುಂಡಿ, ಗದಗ ತಾ. ಕ್ರಿ.ಶ.೧೧೨೫, ಪು-೨೫೭.

೧೩೫. ಎ.ಕ. ವೋ.೧೧, ಹೆಚ್.ಕೆ. ೧೧ ಮತ್ತು ೧೧೦, ಕ್ರಿ.ಶ.೧೫೪೬.

೧೩೬. ಎ.ಕ., ೧೦, ಬಂಗಾರ ಪೇಟೆ, ೭೨, ಕ್ರಿ.ಶ. ೧೪೩೦.

೧೩೭. ದಶಕುಮಾರ ಚರಿತೆ, ಸಂ.೫, ಪ.೫೫.

೧೩೮. ಬಸವರಾಜು, ಎಲ್., (ಸಂ), ಸರ್ವಜ್ಞನ ವಚನ, ವಚನ-೨೧, ಪು-೩೫೬.

೧೩೯. ನರಸಿಂಹಮೂರ್ತಿ,ಎ.ವಿ., ಭಾರತೀಯ ನಾಣ್ಯ ಪರಂಪರೆ, ೨೦೦೮, ಪು-೧೨೩.

೧೪೦. ನರಸಿಂಹಮೂರ್ತಿ,ಎ.ವಿ., ಅದೇ, ಪು-೧೨೪.

೧೪೧. ಅದೇ, ಪು-೨೪.

೧೪೨. ಗೋಪಾಲ್, ಬಿ.ಆರ್., ವಿಜಯನಗರ ಶಾಸನಗಳು, ಸಂಪುಟ-೨, (ಕೆ.ಎನ್. ೭೪೯), ಪು-೧೪೬.

೧೪೩. ಅದೇ, ಸಂಪುಟ-೨, ಕೆ.ಎನ್., ೧೦೩೫, ಪು-೧೦೩೫, ಪು-೨೭೬.

೧೪೪. ಅದೇ, ಸಂಪುಟ-೨, ಕೆ.ಎನ್., ೯೦೦, ಪು-೨೧೨-೨೧೩.

೧೪೫. ಮೋಹನ್‌ಕೃಷ್ಣ ರೈ., ಪ್ರಭುತ್ವ ಮತ್ತು ಜನತೆ, ೨೦೦೪, ಪು-೯೭.

೧೪೬. ಸೌ.ಇ.ಇ. ೧೫, ಪು-೮೭, ನಂ.೬೨, ಕ್ರಿ.ಶ. ೧೧೮೪.

೧೪೭. ಮೋಹನ್‌ಕೃಷ್ಣ ರೈ., ಪೂರ್ವೋಕ್ತ, ಪು-೯೭.

೧೪೮. ಕುಪ್ಪುಸ್ವಾಮಿ,ಜಿ.ಆರ್., ಎಕನಾಮಿಕ್ ಕಂಡಿಷನ್ ಇನ್ ಕರ್ನಾಟಕ, ೧೯೭೫, ಪು-೧೦೯.

೧೪೯. ನರಸಿಂಹಮೂರ್ತಿ, ಎ.ವಿ., ದಿ ಕಾಯಿನ್ಸ್ ಆಫ್ ಕರ್ನಾಟಕ ೧೯೭೫, ಪು-೭೮-೯೦.

೧೫೦. ಪ್ರಾ.ಕ.ಇಂ. ಪು-೩೭೫-೭.

೧೫೧. With a pateca of diamonds on his neck at very greil value (F.E p-243.

೧೫೨. ಪ್ರ.ಕಂ.ಇ. ಸಂಪುಟ-೨, ಪು-೨೯೧-೨೯೨.

೧೫೩. ಭ.ವೈ., ೧೬-೨೩-೨೪.

೧೫೪. ಪ್ರಭುಲಿಂಗಲೀಲೆ, ೪-೫.

೧೫೫. ರಾ.ಚ. ಸ.೨೯, ಪ-೯೭.

೧೫೬. ಭ.ವೈ. ೩೧-೪೪.

೧೫೭. ಪು.ಕೀ. ೧-೧೯.

೧೫೮. ಪು.ಕೀ. ೧-೩೪.

೧೫೯. ಭ.ವೈ. ೪೦-೧೧೫.

೧೬೦. ರಾ.ಚ. ೨೯-೯೫-೯೭.

೧೬೧. ಶಿ.ತ.ಚಿಂ. ೩೦-೪೫.

೧೬೨. ರಾ.ಚ. ೨೯-೯೭.

೧೬೩. ರಾ.ಚ. ೩೪-೧೭.

೧೬೪. ಪ್ರಲೀ. ೪-೩೧.

೧೬೫. ಪು.ಕೀ. ೨-೧೯೬.

೧೬೬. ನ.ಚ. ೨-೬.

೧೬೭. ಭಾ.ಸಂ. ಪು-೨೩೨.

೧೬೮. ಪ್ರಕಂ.ಇ. ೨, ಪು-೨೯೩.

೧೬೯. ಭ.ವೈ. ೭೭-೧೧೮.

೧೭೦. ಪು.ಕೀ. ೧-೧೯೧.

೧೭೧. ಭಾರತೀಯ ಸಂಸ್ಕೃತಿ, ಪು-೨೩೨.

೧೭೨. ರಾ.ಚ. ೨೯-೯೮.

೧೭೩. ಮೊ.ತ. ೪-೩.

೧೭೪. ರಾ.ಚ. ೨೯-೧೮೧.

೧೭೫. ನ.ಚ. ೨೩೧.

೧೭೬. ಪು.ಕೀ. ೨-೨೦೧.

೧೭೭. ಪು.ಕೀ. ೧-೧೯೧.

೧೭೮. ಭ.ವೈ. ೨೨-೪೨, ೭೭-೧೧೬.

೧೭೯. ರಾ.ಚ. ೨೯-೯೯.

೧೮೦. ಭ.ವೈ. ೩೧-೪೩, ೭೭-೧೧೭.

181. Chambers Twentiesh century dictionary: Allied publishers, 1964, p-1042.

182. Ramacharc, Taksan and similar artisans in astadhyay, The mysore orientaist, Vol.I March-sept, 1967, p-103-114.

೧೮೩. ವಿಕ್ರಮಾರ್ಜುನ ವಿಜಯಂ ಅಶ್ವಾಸ-೨, ಪದ್ಯ-೩.

೧೮೪ ಬಸವಣ್ಣನವರ ವಚನಗಳು, ೧೯೬೮, ವ.೫೮೮-೫೮೯-೯೨.

೧೮೫. ಧರ್ಮಾಮೃತ, ಗದ್ಯಾನುವಾದ ೧೯೭೮, ಪು-೧೯೦, ಚ.೭೦.

೧೮೫ಅ. ಸಿದ್ದಲಿಂಗಮ್ಮ ಬಿ.ಜಿ., ಪು. ೨೭

೧೮೬. ಚಿದಾನಂದಮೂರ್ತಿ, ಎಂ., ೧೯೭೯, (ಮೊಹನ್‌ಕೃಷ್ಣ ರೈ, ಪು-೯೫.

೧೮೭ ವಿಲಿಯಂ ಕೊಯಲೋ, ದಿ ಹೊಯ್ಸಳ ವಂಶ, ೧೯೫೦, ಪು-೨೫೪.

೧೮೮ . ಎಸ್.ಐ.ಐ., ನಂ.೨೦, ಸಿಡನೂರು, ಹಿರೇಕೆರೂರು, ತಾ. ಕ್ರಿಶ. ೧೦೧೫.

೧೮೯. ಎ.ಕ. ೧೧, ಚಿ.ಮ. ೭೧, ಕ್ರಿಶ. ೧೦೬೧, ಪು-೪೧.

೧೯೦. ಕ.ವಿ.ವಿ. ಶಾಸನ, ಬಳ್ಳಾರಿ, ನಂ.೨೩, ಪು-೨೧೮.

೧೯೧. ಕ.ವಿ.ವಿ. ಶಾಸನ ಸಂಪುಟ-೨, ಕೊಪ್ಪಳ ಜಿಲ್ಲೆ, ನಂ.೨೭, ಕ್ರಿ.ಶ. ೧೦೮೨, ಪು-೩೦೭.

೧೯೨. ಕ.ಇ. ೧, ಅಕ್ಕಲಕೋಟೆ, ೩ ಮತ್ತು ಕ್ರಿ.ಶ. ೧೨೨೩.

೧೯೩. ಎ.ಕ. ೧೭, ಮಾಲೂರು, ೩, ಕ್ರಿ.ಶ. ೧೪೩೧,

೧೯೪. ಎ.ಆರ್. ಣಮ. ೬೭೯, ಮತ್ತು ೧೯೨೨, ಎಸ್.ಐ.ಐ. ೧೧, ನಂ.೫೧೦, ಶಾಸನ ೪೨೮.

೧೯೫. ಶೇಖರಚಾರಿ, ಕಮ್ಮಾರರ ಬದುಕಿನ ಸಿತ್ಯಂತರ, ಪಿಎಚ್.ಡಿ, ಪ್ರಬಂಧ, ಪು-೩೪.

೧೯೬. ಜನ್ನ, ಅನಂತನಾಥ ಪುರಾಣ, ೫-೧೫.

೧೯೭. ರಾ.ಚ. ೧೩-೧೩೫.

೧೯೮. ರಾ.ಚ. ೧೦-೪೩.

೧೯೯. ಮೋ.ತ. ಸಂ.೨೦, ಪ.೧೦.

೨೦೦. ಶ್ರೀಕಂಠಯ್ಯ, ಕೆ., ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಪು-೫೪-೬೩.

೨೦೧. ಎ.ಕ. ೩, ಪೀಠಿಕೆ, ಪು-೩೪. ಉಲ್ಲೇಖ, ಸಾರಾಜೀ-೧, ಪು-೪೨೩, ಶ್ರೀಕಠಶಾಸ್ತ್ರಿ, ಪು-೧೧೮೪.

೨೦೨. ರಾ.ಚ. ೪೧೪೮.

೨೦೩. ಗ.ಭಾ,ಭೀ. ೪-೫೮, ೫೯,೭೧,೬-೩೭.

೨೦೪. ರಾ.ಚ. ೧೧-೩೬

೨೦೫. ರಾ.ಚ. ೧೬-೩೮.

೨೦೬. ಕಿ.ನಿ. ೨೯೭. ಭ.ವೈ. ೨೦-೧೩೨.

೨೦೭. ಚ.ಬ.ಪು-೪೨-೩೬.

೨೦೮. ರಾ.ಚ. ೩೭-೫೯.

೨೦೯. ಶ್ರೀಕಂಠಯ್ಯ, ಕೆ., ಪೂರ್ವೋಕ್ತ, ೧೧೭.

೨೧೦. ಎಫ್.ಇ. ಪು-೨೬೬-೬೨, ೩೧೩.

೨೧೧. ಮೋ.ತ. ಸಂ.೪೦. ಪ.೪೧.

೨೧೨. ವಾಸುದೇವ ಬಡಿಗೇರ, ಹಂಪಿ ಪ್ರದೇಶದ ಲೋಹಶಾಸ್ತ್ರ ಕಲೆ, ವಿಜಯನಗರ ಅಧ್ಯಯನ ಪು-೧೯೬.

೨೧೩. ಅದೇ, ಪು-೧೯೭.

೨೧೪. ಅದೇ, ಪು-೧೯೭.

೨೧೫. ಹೆರಾಸ್ ಹೆನ್ರಿ ಅರವಿಡು ಡಯಾನಾಸ್ಟಿ ಆಫ್ ವಿಜಯನಗರ, ಪು-೬೨-೬೩.

೨೧೬. ಚಂದ್ರಶೇಖರಯ್ಯ, ಬಿ.ಎಮ್., ಭಾರತೀಯ ಸಂಸ್ಕೃತಿ ಸಮೀಕ್ಷೆ, ಪು-೨೦೦.

೨೧೭. ಹಿರೇಮಠ,ಆರ್.ಸಿ., ಸಿದ್ದರಾಮೇಶ್ವರ ವಚನಗಳು, ೧೯೬೮, ವಚನ-೬೪೯.

೨೧೮. ಹಿರೇಮಠ,ಆರ್.ಸಿ., ಚನ್ನಬಸವಣ್ಣನವರ ವಚನಗಳು, ೧೯೦೮, ವಚನ-೯೧೫.

೨೧೯. ತೀ.ನಂ. ಶ್ರೀಕಂಠಯ್ಯ, ಗದಾಯುದ್ಧ ಸಂಗ್ರಹ, ೭-೮೪.

೨೨೦. ದೀಪಿಕಾರಂಜನ್ ದಾಸ್, ಎಕನಾಮಿಕ್ ಹಿಸ್ಟರಿ ಆಫ್ ದಿ ಡೆಕನ್ ಪು-೧೭೫-೭೬.

೨೨೧. ಉತ್ತಂಗಿ ಚೆನ್ನಪ್ಪ, ೧೯೫೭, ಆಪಿಯ್ಯನ ವಚನಗಳು, ವಚನ-೨೪೧. ಪು-೧೪೨.

೨೨೨. ಬಸವರಾಜು, ಎಲ್., ೧೯೬೩, ಶಿವದಾಸಗೀತಾಂಜಲಿ, ವ.೩೦೯, ಪು-೧೭೬.

೨೨೩. ಎ.ಇ. ೧೧, ಶೋರಾಪುರ, ೩೨ ಡಿ, ಕ್ರಿ.ಶ. ೧೧೧೦.

೨೨೪. ಎಸ್.ಐ.ಐ. ೧೫, ಮುಂಡರಗಿ ೫೭೨, ಕ್ರಿ.ಶ. ೧೨ನೆಯ ಶತಮಾನ.

೨೨೫. ಎಸ್.ಐ.ಐ. ೯, (೧), ನಂ.೬೭, ಕೊಳಗಲ್ಲು, ಬಳ್ಳಾರಿ ತಾ. ಕ್ರಿ.ಶ. ೯೮೪, ಪು–೩೯.

೨೨೬. ಗುರುರಾಜಚಾರ್, ಎಸ್., ಸಮ್ ಆಸ್‌ಪೆಕ್ಟ್ಸ್ ಆಫ್ ಎಕನಾಮಿಕ್ ಅಂಡ್ ಸೋಷಿಯಲ್ ಲೈಫ್ ಇನ್ ಕರ್ನಾಟಕ, ಪು–೮೯.

೨೨೭. ಸಿದ್ದಲಿಂಗಮ್ಮ. ಬಿ.ಜಿ., ಪು–೩೮.

೨೨೮. ಎ.ಆರ್.ಐ.ಇ., ೧೯೫೯–೬–, ಬಿ.ಎನ್., ೧೪೨.

೨೨೯. ಎ.ಕ. ೯, ಬೆಲೂರು, ೨೦, ಕ್ರಿ.ಶ. ೧೩೯೫, ಪು–೧೯.

೨೩೦. ಕುಮಾರಸ್ವಾಮಿ, ಕೆ.ಎಸ್., ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರ್ಯರು, ಪು–೨೭೨.

೨೩೧. ಗಂಗಾದೇವಿಯ ಮಧುರಾ ವಿಜಯಂ, ಸಂ.೮, ಪ–೨೩.

೨೩೨. ರಾ.ಚ. ೪–೧೧೧–೧೧೫.

೨೩೩. ಪ್ರೌ.ಕಾ. ೧೨–೩೪.

೨೩೪. ಭ.ವೈ. ೪–೫೮.

೨೩೫. ಭ.ವೈ. ೪–೬೧.

೨೩೫. ಶೇಖರಪ್ಪ, ಎಂ. ಚಿತ್ರದುರ್ಗ ಜಿಲ್ಲೆಯ ಗಾಣಿಗ ಸಮುದಾಯದ ಸಮಾಜ ಶಾಸ್ತ್ರೀಯ ಅಧ್ಯಯನ, ೨೦೦೯, ಪು–೧೯.

೨೩೬. ಎಸ್.ಐ.ಐ., ೧೫, ಬಾಗೇವಾಡಿ ೧೨೯, ಕ್ರಿ.ಶ. ೧೧೭೬.

೨೩೭ ಎಸ್.ಐ.ಐ., ೧೫, ರೋಣ, ೧೩೯, ಕ್ರಿ.ಶ. ೧೧೮೩.

೨೩೮. ಎ.ಕ. ಪಾಂಡವಪುರ, ೩೫, ಕ್ರಿ.ಶ. ೧೧೯೩.

೨೩೯. ಎ.ಕ. ೭, ಶಿಕಾರಿಪುರ, ೨೩೬, ಕ್ರಿ.ಶ. ೧೧೭೪.

೨೪೦. ಹಿರೇಮಠ, ಬಿ.ಆರ್.,ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಪು–೧೦೫.

೨೪೧. ಅದೇ, ಪು–೧೦೬.

೨೪೨. ಎ.ಕ. ೩, ಗುಂಡ್ಲುಪೇಟೆ, ೧೩೬.

೨೪೩. ಇ.ಕ. ೩, ಗುಂಡ್ಲುಪೇಟೆ, ಶಾಸಂ. ೧೫೬, ಕ್ರಿ.ಶ. ೧೫೨೧.

೨೪೪. ಎ.ಕ. ೫, ತಿ.ನರಸಿಪುರ, ೩೨೨, ಕ್ರಿ.ಶ. ೧೧೭೯.

೨೪೫. ಜಯಪ್ರಕಾಶ, ದ ಗಿಲ್ಡ್ಸ್ ಆಫ್ ಮಿಲ್ಲರ್ಸ್ ಇನ್ ಎನ್ಸಿಯೆಂಟ್ ಇಂಡಿಯಾ, ಪು–೩೦೭.

೨೪೬. ಎ.ಇ. ೨೦, ಬಾಗಲಕೋಟೆ, ೧೧೨, ಕ್ರಿ.ಶ.೧೧೬೭.

೨೪೭. ಎ.ಕ. ೯, ಕನಕಪುರ, ೫೯, ಕ್ರಿ.ಶ. ೧೪೨೫.

೨೪೮. ಎ.ಕ. ೫, (ಪ), ತಿ.ನರಸಿಪುರ, ೧೪೩, ಕ್ರಿ.ಶ. ೧೪೨೬.

೨೪೯. ಎಸ್.ಐ.ಐ. ೭, ೨೬೬, ಕ್ರಿ.ಶ. ೧೪೨೭.

೨೫೦. ಎ.ಕ., ೪, ಚಾಮರಾಜನಗರ, ೨೪೦, ಕ್ರಿ.ಶ. ೧೪೨೯.

೨೫೧. ಕ.ವಿ.ವಿ.ಶಾ.ಸಂ. ೩, ೩೯೭, ಕ್ರಿ.ಶ. ೧೫೧೦.

೨೫೨. ಎ.ಕ. ೧೨, ಮಧುಗಿರಿ, ೫೮, ಕ್ರಿ.ಶ. ೧೫೧೧.

೨೫೩. ಚನ್ನಬಸವ ಪುರಾಣ, ಸಂ.೪೨, ಪು–೧೦.

೨೫೪. ಚಂದ್ರಪ್ರಭ ಪುರಾಣ, ಅಶ್ವಾಸ–೫, ಪದ್ಯ–೧೦೫.

೨೫೫. ರಾಬರ್ಟ್ ಸಿವೆಲ್, ಆರ್., ಪೂರ್ವೋಕ್ತ, ಪು–೩೭೦.

೨೫೬. ಎ.ಕ. ೪, ಚಾಮರಾಜನಗರ, ೧೦೫, ೧೨ನೆಯ ಶತಮಾನ, ಪು–೬೧.

೨೫೭. ಸಿದ್ದಲಿಂಗಮ್ಮ, ಬಿ.ಜಿ., ಪು–೪೨.

೨೫೮. ಎಸ್.ಐ.ಐ. ೨೦, ನಂ.೪೧, ಬನವಾಸಿ, ಸಿರ್ಸಿ ತಾ. ಕ್ರಿ.ಶ. ೧೦೬೮, ಪು–೪೭.

೨೫೯. ಎ.ಕ. ೧೧, (ಹಳೆ) ಚಿದು, ೦೩, ಕ್ರಿ.ಶ. ೧೩೫೬, ಪು–೫.

೨೬೦. ಎ.ಕ. (ಹಳೆ), ಸಾಗರ, ಪು–೩೦೪.

೨೬೧. ಎ.ಕ. ೮, (ಹಳೆ) ಸಾಗರ, ಪು–೩೦೪.

೨೬೨. ಎ.ಕ. ೭, ಸೊರಬ, ೨೧೮, ಕ್ರಿ.ಶ. ೧೨೮೨, ಪು–೯೨.

೨೬೩. ಎಸ್.ಐ.ಐ. ೨೦, ನಂ.೧೯, ರೊಗಿ, ಬಿಜಾಪುರ, ಕ್ರಿ.ಶ.೧೦೧೫, ಪು–೨೦.

೨೬೪. ೭, (ಹಳೆ), ನಗರ ೧೮, ಕ್ರಿ.ಶ. ೧೩೨೦, ಪು–೩೫೦.

೨೬೫. ಎ.ಕ. ೭, ನಗರ, ೨೭, ಕ್ರಿ.ಶ. ೧೩೦೨, ಪು–೩೫೯.

೨೬೬. ಎ.ಕ. ೭, ಸಾಗರ, ೧೫೬, ಕ್ರಿ.ಶ. ೧೩೦೪, ಪು–೩೩೦.

೨೬೭. ಎ.ಕ. ೯, ಬೇ. ೮೭, ೧೨ನೆಯ ಶತಮಾನ, ಪು–೪೭.

೨೬೮. ಅನುವೆಲ್ ರಿಪೋರ್ಟ್ ಆನ್ ಇಂಡಿಯನ್ ಎಫಿಗ್ರಾಫಿ, ೧೯೩೮–೩೯–ಬಿ.ಕೆ. ಸಂ. ೮೨–ಎಸ್.ಐ.ಐ., ೨೩೪.

೨೬೯. ಪ್ರೊಗ್ರೆಸ್ ರಿಪೋರ್ಟ್ ಆಫ್ ದಿ ಕನ್ನಡ ರೀಸರ್ಚ ಇನ್ಸ್‌ಟಿಟ್ಯೂಟ್, ೧೯೩೯–೪೦, ಸಂ–೪೫,೪೯,೫೨, ಕರ್ನಾಟಕ ಇನ್ಸ್ಕ್ರಿಪ್ಸನ್ಸ್,೧, ಸಂ–೬೧.

೨೭೦. ಅದೇ, ೧೯೩೮–೩೯, ಸಂ.೬೧, ಕ.ಇ., ೧, ಸಂ.೬೧.

೨೭೧. ಎ.ಕ. ೭, ಪರಿಷ್ಕೃತ, ಮದ್ದೂರು.೯೨.

೨೭೨. ಆನುವೆಲ್ ರಿಪೋರ್ಟ್ ಆಫ್ ದಿ ಮೈಸೂರು ಆರ್ಕಿಯಾಲಾಜಿಕಲ್ ಡಿಪಾರ್ಟ್‌ಮೆಂಟ್, ೧೯೪೨, ಸಂಖ್ಯೆ.೭೨.

೨೭೩. ಎ.ಕ. ೭, ಸೊರಬ, ೧೧೮–೧೧೫.

೨೭೪. ಅನುವೆಲ್ ರಿಪೋರ್ಟ್ ಆನ್ ಸೌತ್ ಇಂಡಿಯನ್ ಎಫಿಗ್ರಾಫಿ ೧೯೧೮, ಸಂ.೨೮೩.

೨೭೫. ಎ.ಕ. ೬, ಚಿಕ್ಕಮಗಳೂರು, ೪೮.

೨೭೬. ಎ.ಕ. ೪, ಕಾನಕಾನಹಳ್ಳಿ, ೮.

೨೭೭.ಎ.ಕ. ೫, ಹಾಸನ, ೮, ಪರಿಷ್ಕೃತ, ಹಾಸನ.೨.

೨೭೮. ಪರಮಶಿವಮೂರ್ತಿ, ಡಿ.ವಿ. (ಸಂ) ಪ್ರೌಢದೇವರಾಯನ ಶಾಸನಗಳು, ಪು–೫೬.

೨೭೯. ಎ.ಕ. ೧೦, ಬಾಗೇಪಲ್ಲಿ, ೭೦.

೨೮೦. ಎ.ಕ. ೧೦, ಮುಳಬಾಗಿಲು, ೧೫೮.

೨೮೧. ಕೇಶವ, ಟಿ.ಎಮ್., ವಿಶ್ವೇಶ್ವರ, ಎಂ.ವಿ., ವಿಜಯನಗರ ವಾಸ್ತು ನಿರ್ಮಾಣಕ್ಕೆ ಉಪಯೋಗಿಸಿದ ಕಲ್ಲುಗಳು, ಗೋಪಾಲ್ ಆರ್, ಇತರರು (ಸಂ) ವಿಜಯನಗರ ಅಧ್ಯಯನ ಸಂ.೧೪, ಪು–೨೭೫.

೨೮೨. ಅದೇ, ಪು–೨೭೬–೭೭.

೨೮೩. ಮೋನಿಯರ್ ವಿಲಿಯಮ್ಸ್, ೧೯೮೯, ಎ ಡಿಕ್ಷನರಿ ಇಂಗ್ಲೀಷ್ ಅಂಡ್ ಸಂಸ್ಕೃತಿ ಮೊತಿಲಾಲ್ ಬನಾರಾಸಿದಾಸ್, ದೆಹಲಿ, ಪು–೪೪೪.

೨೮೪. ಲಕ್ಷ್ಣ್ ತೆಲಗಾವಿ, ಇತಿಹಾಸದಲ್ಲಿ ಚಮ್ಮಾರರು, ಕೆಲವು ಟಿಪ್ಪಣಿಗಳು, ಚೆನ್ನಸ್ವಾಮಿ ಸೊಸಲೆ, (ಸಂ), ಚರಿತ್ರೆ ಅಧ್ಯಯನ, ಸಂಪುಟ-೫, ಸಂಚಿಕೆ-೧, ಪು-೧೯.

೨೮೫. ಎಸ್.ಐ.ಐ. ೧೫, ನಂ.೪೫೦ ೮ನೆಯ ಶತಮಾನ, ಪು-೩೩೯.

೨೮೬. ಎಸ್.ಐ.ಐ. ನಂ.೨೦, ನಂ.೭೮, ೧೧೯೨, ಪು-೨೨೪-೨೫.

೨೮೭. ಎಸ್.ಐ.ಐ. ೧೧, (೧), ನಂ.೫೦, ಗದಗ ತಾ. ಕ್ರಿ.ಶ. ೧೧೩೮, ಪು-೩೮.

೨೮೮. ಎಸ್.ಐ.ಐ. ೧೧, (೧೧), ನಂ.೧೩೨, ತುಂಬಿಗಿ, ಮುದ್ದೆಬಿಹಾಳ,ತಾ. ಕ್ರಿ.ಶ. ೧೦೮೬, ಪು-೧೫೪.

೨೮೯. ಎಸ್.ಐ.ಐ. ೧೧, (೧), ನಂ.೧೧೬, ಕೊಪ್ಪ, ಬಾಗಲಕೋಟೆ ತಾ. ಕ್ರಿ.ಶ. ೧೦೭೫, ಪು-೧೧೬.

೨೯೦. ನಾರಾಯಣ, ಪಿ.ವಿ., ವಚನಾ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ, ಪು-೧೫೯.

೨೯೧. ಪುರಂದರ ದಾಸರ ಕೀರ್ತನೆ, ೧-೧೭೮.

೨೯೨. ಪ್ರ ಕ.ಇಂ. ೨, ಪು-೨೯೨,

೨೯೩. ರಾ.ಚ. ೪-೧೪.

೨೯೪. ಪು.ಕೀ. ೫-೨೧.

೨೯೫. ಅದೇ, ೨-೧೫.

೨೯೬. ಬ.ಪು- ೨೦-೨೧- ಸ.ವಚನ.೧೭೯೯.

೨೯೭. ಭ.ವೈ. ೪೭-೧೧.

೨೯೮. ಚೇ.ಕಾ. ೧-೨೩.

೨೯೯. ಮೋಹನ ತರಂಗಿಣಿ, ೪-೧೫.

೩೦೦. ಬಾರ್ಬೋಸಾ, ಭಾಗ-೧, ಪು-೨೦೫,

೩೦೧. ಸೆವೆಲ್, ಆರ್, ಪು-೨೪೩.

೩೦೨. ಪ್ರೌಢದೇವರಾಯನ ಶಾಸನಗಳು, ಪು-೨೯.

೩೦೩. ದೇವರ ದಾಸಿಮಯ್ಯನ ವಚನ, ೩೨ ಪು-೧೧.

೩೦೪. ಬಸವ ವ. ೯೩೩, ಪು-೩೮೬.

೩೦೫. ಬಸವ, ವ.೬೦೭. ಪು-೨೪೩.

೩೦೬. ಯಶೋಧರ ಚರಿತೆ, ೩-೭೩.

೩೦೭ ಅಂಬಿಗರ ಚೌಡಯ್ಯನ ವಚನಗಳು, ವ.೧೪೫.

೩೦೮. ನಾರಾಯಣ, ಪಿ.ವಿ., ಪು-೮೩.

೩೦೯. ಎ.ಕ. ೮, ಸೊರಬ, ೨೪, ಕ್ರಿ.ಶ. ೧೪೭೯.

೩೧೦. ಎ.ಕ. ೧೦, ಬಂಗಾರಪೇಟೆ, ೭೨, ಕ್ರಿ.ಶ. ೧೪೩೦.

೩೧೧. ಪು.ಕೀ. ೧-೧೭೮.

೩೧೨. ಶ್ರೀಕಂಠಯ್ಯ, ಕೆ., ವಿಜಯನಗರ ಕಾಲದ ಜನ ಜೀವನ ಚಿತ್ರ, ಪು-೨೫೧.

೩೧೩. ಬ.ಪು. ೩೦-೨೮, ೪೯-೩೦.

೩೧೪. ಚಿದಾನಂದಮೂರ್ತಿ, ಎಂ., ಕ.ಶಾ.ಸಾಂ.ಅ. ಪು-೩೫೬.

೩೧೫. ಬಾ.ಸಂ. ಪು-೨೦೫, ಬಿ.ಎಎಸ್., ಸಾರಾಜಾ ೧, ೧೧೨.

೩೧೬. ಎ.ಕ. ೫, ಪಿ.೧, ಸಿ.ಎನ್, ೧೮೧, ಪು-೨೦೪.

೩೧೭. ಎ.ಕ. ಬಿ.ಪಿ. ೭೨, ಪು–೧೫೨, ಬಹುಶಃ ಇದು, ವಿಜಯನಗರ ಸಾಮ್ರಾಜ್ಯದ ಕೆಲವು ಭಾಗದಲ್ಲಿರಬೇಕು, ಸಾರಾಜೀ.೨, ಪು–೧೧೭

೩೧೮. ಎ.ಕ. ೯, ಎಚ್.ಟಿ. ೪೧, ಪು–೯೨.

೩೧೯. ಪು.ಕೀ. ೫, ಉಭೋ, ೪೫.

೩೨೦. ಪು.ಕಿ. ಉಭೋ. ೧–೧೭೮, ಸ.ವ. ೯೫೩, ಬ.ಪು. ೫೫–೧೮, ಕಕೀ–೧೨೪, ಮಲಿವ.೪೬.

೩೨೧. ಪ್ರಜಾವಾಣಿ, ೧೨–೧೧–೭೧.

೩೨೨. ಕ.ಶಾ.ಸಾಂ. ಅ. ಪು–೪೪, ನೋಡಿ ತಿಪ್ಪೇರುದ್ರಸ್ವಾಮಿ, ಹೆಚ್, ಕ.ಸಂ.ಸ. ಪು–೨೦೮.

೩೨೩. ಸೊಸೋ. ೧೮–೬೨.

೩೨೪. ನಾವಿಂದ ಕಲೆಗೊಂದು ಸಂಮಾನ, ಶ್ರೀನಿವಾಸ ಪಾಡಿಗಾರ, ವಿಜಯನಗರ ಅಧ್ಯಯನ, ಸಂ.– ೩, ಸಂ. ಶಿವಶಂಕರ, ಎಮ್, ಎಲ್., ಚನ್ನಬಸಪ್ಪ ಎಸ್, ಪಾಟೇಲ, ಪು–೭೬.

೩೨೫. ನಾವಲಗೀ, ಸಿ.ಕೆ. ಜಾನಪದ ಸ್ಪಂದನ, ಪು–೬೮.

೩೨೬. ಅದೇ, ಪು–೭೦.

೩೨೭. ಮುಂಜುಮದಾರ್, ಆರ್.ಸಿ., (ಸಂ). ದಿ ಏಜ್ ಆಫ್ ಇಂಪೀರಿಯಲ್ ಯುನಿಟಿ ಪು–೯೧.

೩೨೮. ಜೈ.ಭಾರತ, ೫–೫೮.

೩೨೯. ಎಸ್.ಐ.ಐ., ೧೧, ೧೩೩, ಕ್ರಿ.ಶ. ೧೦೫೭.

೩೩೦. ಎಸ್.ಐ.ಐ. ೯, ೧. ೩೭೪. ಕ್ರಿ.ಶ. ೧೨೭೬.

೩೩೧. ಎ.ಕ. ೭, ಎಸ್.ಕೆ. ೧೯೫, ಕ್ರಿ.ಶ. ೧೦೦೭.

೩೩೨. ಎ.ಕ. ೭, ಎಸ್.ಕೆ. ೧೮೫, ಕ್ರಿ.ಶ.೧೧೫೮.

೩೩೩. ಎ.ಕ. ೧೦, ಬಂಗಾರ ಪೇಟೆ, ೭೨, ಕ್ರಿ.ಶ. ೧೪೩೦.

೩೩೪. ಎ.ಕ. ೩, ಗುಂಡ್ಲುಪೇಟೆ ೧೫೦. ಕ್ರಿ.ಶ. ೧೫೨೧.

೩೩೫. ಎ.ಕ. ಗುಂಡ್ಲುಪೇಟೆ ೧೫೬. ಕ್ರಿ.ಶ. ೧೫೨೧.

೩೩೬. ಎಸ್.ಐ.ಐ. ೧೮, ೨೮೬, ಕ್ರಿ.ಶ. ೧೫೫೦.

೩೩೭. ಎಸ್.ಐ.ಐ. ೧೫, ೨೫೯, ವಿಜಯನಗರ ಇನ್ಸ್‌ಕ್ರಿಪ್ಸನ್ಸ್, (೬) ಬಾರಗೋಪಾಲ್, ೧, ಕೆ.ಎನ್, ೪೦೯.

೩೩೮. ಎ.ಕ. ೧೧, ಟಿ.ಪಿ. ೧೨೬.

೩೩೯. ಎ.ಕ. ೬, ಕೆ.ಡಿ. ೧೬೭.

೩೪೦. ಶ್ರೀನಿವಾಸ ಪಾಡಿಗಾರ, ನಾವಿಂದ ಕಲೆಗೊಂದು ಸಂಮಾನ, ವಿಜಯನಗರ ಅಧ್ಯಯನ, ಸಂ.–೩, ಪು–೭೮.

೩೪೧. ಎ.ಕ. ೩, ಗಂಡ್ಲು. ೧೩೬, ಕ್ರಿ ೧೫೧೫.

೩೪೨. ಎ.ಕ., ೩, ಗುಂಡ್ಲು, ೧೫೬, ಕ್ರಿ.ಶ. ೧೫೨೧.

೩೪೩. ಕ.ವಿ.ವಿ.ಶಾ.ಸಂ., ೮, ಸಂಖ್ಯೆ೮, ಬಿದರ್ ತಾ. ಕ್ರಿ.ಶ. ೧೧೪೯–೧೧೬೨.

೩೪೪. ಎ.ಕ. ಸಂ.೩, ಸಂ.೪೮, ಬೆಳತೂರು, ಕ್ರಿ.ಶ. ೧೨೫೫.

೩೪೫. ಬಸವರಾಜು. ಎಲ್., ಸರ್ವಜ್ಞನ ವಚನಗಳು, ಪು–೨೭೬.

೩೪೬. ಕುಶಾಲಪ್ಪಗೌಡ, ಕೆ., ಮಧುರಾವಿಜಯಂ ಅಥವಾ ವೀರಕಂಪಣ ರಾಯಚರಿತಂ, ಸಂ.೫, ಪ.೪೩.

೩೪೭. ಶಾಂತಿನಾಥಪುರಾಣ, ಸಂಧಿ.೧೦, ಪದ್ಯ.೫.

೩೪೮. ನೇಮಿನಾಥಪುರಾಣ, ಸಂ.೬, ಪ.೭

೩೪೮. ವೆಂಕಟರಮಣಪ್ಪ, ಕೆ., (ಗಅನು) ಧರ್ಮಾಮೃತಂ, ಸಂಖ್ಯೆ.೨, ಪ.೩೨.

೩೪೯. ಪ್ರೌಢದೇವರಾಯನ ಶಾಸನಗಳು, ಪು-೬೧.

೩೫೦. ಪುರಾಣ ಭಾರತ ಕೋಶ, ಪು-೪೫೨.

೩೫೧. ವಿರೂಪಾಕ್ಷ ಪೂಜಾರಹಳ್ಳಿ, ವಿಜಯನಗರ ಕಾಲದ ಮೀನುಗಾರಿಕೆ ಮತ್ತು ಅಂಬಿಗತನ, ವಿಜಯನಗರ ಅಧ್ಯಯನ ಸಂಪುಟ.೬ ಪು-೭೪.

೩೫೨. ಶರ್ಮ, ಆರ್. ಎಸ್., ಪ್ರಾಚೀನ ಭಾರತ, ಪು-೧೩೭.

೩೫೩. ಹರಿಶ್ಚಂದ್ರ ಕಾವ್ಯ, ೫-೮.

೩೫೪. ವಿರೂಪಾಕ್ಷ ಪೂಜಾರಹಳ್ಳಿ, ಪೂರ್ವೋಕ್ತ, ಪು-೭೬.

೩೫೫. ಮೊ.ತ. ೩೪-೧೨೯.

೩೫೬. ಮೊ.ತ. ೩೬-೧೨೬.

೩೫೭. ಮರೆತು ಹೋದ ಮಹಾಸಾಮ್ರಜ್ಯ ವಿಜಯನಗರ, ಪು-೧೨೬.

೩೫೮. ಪ್ರೌಢದೇವರಾಯನ ಶಾಸನಗಳು, ಪು-೬೧.

೩೫೯. ಎಸ್.ಐ.ಐ., ೨೬, ೬೯, ಕ್ರಿ.ಶ. ೧೪೪೫.

೩೬೦. ಪ್ರ.ಕಂ.ಇಂ. ಸಂ.೨, ಪು-೩೬೭.

೩೬೧. ಕ.ವಿ.ವಿ. ಶಾ.ಸಂ.೨, ಪು-೩೪೦..

೩೬೨. ಹಿರೇಮಠ, ಆರ್.ಸಿ., (ಸಂ) ಕೆ.ಜಿ., ಶಾಸ್ತ್ರಿ, ಪೌಲೋಮ, ಆಸ್ತಿಕ್ತ ಪರ್ವಗಳು, ಪು-೮.

೩೬೩. ಪುಟ್ಟಪ್ಪ, ಕೆ.ವಿ., ಭರತೇಶ ವೈಭವ, (ಪ್ರಸಂ), (ಸಂ) ಟಿ.ಎಸ್., ಶ್ಯಾಮಾರಾವ್, ಪು-೨೦೫.

೩೬೪. ಅದೇ, ಪು-೨೬೦.

೩೬೫. ಲಿಂಗಪುರಾಣಂ, ಸಂ. ೨, ಪ.೩೦.

೩೬೬. ಬಸವರಾಜವಿಜಯಂ, ಸಂ.೫, ಪದ್ಯ.೬೧.

೩೬೭. ಬಸವರಾಜು, ಎಲ್., ಸರ್ವಜ್ಞನ ವಚನಗಳು, ಪರಮಾರ್ಥ, ಪು-೩೨೯.

೩೬೮. ಕುಶಾಲಪ್ಪ ಗೌಡ, (ಕ.ಅ), ಮಧುರಾ ವಿಜಯಂ ಅಥವಾ ವೀರಕಂಪಣರಾಯ ಚರಿತಂ, ಪು-೩೪.

೩೬೯. ರಾಬರ್ಟ್ ಸಿವೆಲ್, (ಅನು) ಮರೆತುಹೋದ ಮಹಾಸಾಮ್ರಜ್ಯ, ವಿಜಯನಗರ, ಪು-೧೫೦.

೩೭೦. ಆರಾ.ಮಿತ್ರ, ಕುಮಾರವ್ಯಾಸನ ಕಥಾಮಿತ್ರ, ಪು-೬-೭.

೩೭೧. ಅ.ರಾ. ಮಿತ್ರ, ಕುಮಾರವ್ಯಾಸ, ಭಾರತ ಕಥಾಮಿತ್ರ, ಪು-೭-೮.

೩೭೨. ವಸುಂದಾರ ಫಿಲಿಯೋಜ, ಅಳಿದುಳಿದ ಹಂಪೆ, ಪು-೯೩.

೩೭೩ ಶೇಷಶಾಸ್ತ್ರೀ ಆರ್., ಕರ್ನಾಟಕದ ವೀರಗಲ್ಲುಗಳು ಪು.೧೨೭

೩೭೪. ವಿರೂಪಾಕ್ಷಿ ಪೂಜಾರಹಳ್ಳಿ, ವಿಜಯನಗರ ಕಾಲದ ಮೀನುಗಾರಿಕೆ ಮತ್ತು ಅಂಬಿಗತನ ವಿಜಯನಗರ ಅಧ್ಯಯನ ಸಂಪುಟ-೬. ಪು. ೮೨

೩೭೫. ಮಹೇಶ್, ಜಿ., ಪಿಹೆಚ್.ಡಿ, ಪ್ರಬಂಧ, ಪೂರ್ವೋಕ್ತ, ಪು-೪೪.

೩೭೬. ಅದೇ, ಪು-೪೪.

೩೭೭. ಮಹೇಶ್, ಜಿ., ಪೂರ್ವೋಕ್ತ, ಪು-೪೪.

೩೭೮.ಎ.ಇ. ೧೬, ನಂ.೧೪, ಗದಗ ತಾ. ವಿಕ್ರಮಾದಿತ್ಯನ ಕಾಲ ಪು-೧೯೦-೧೯೧.

೩೭೯. ಪುಟ್ಟಪ್ಪ, ಕೆ.ವಿ., (ಸಂ) ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯ, ಪು-೪೦೨.

೩೮೦. ಸಂಕೀರ್ಣ ವಚನ ಸಂಪುಟ.೪, ವಚನ.೧೧೬೨, ಪು-೩೬೫.

೩೮೧. ಹಿರೇಮಠ್, ಆರ್.ಸಿ., (ಸಂ), ಭೀಮಕವಿ, ಕೃತಿ ಬಸವ ಪುರಾಣ, ಸಂ.೨, ಪು-೮೨೫. (೫೪-೧೨).

೩೮೨. ಕನ್ನಡಿ ಕಾಯಕದ ಅಮ್ಮಿದೇವಯ್ಯನ ವಚನ, ೧೨, ಸಂಕೀರ್ಣ ವಚನ ಸಂಪುಟ. ಪು-೬.

೩೮೩. ಸಂಕೀರ್ಣ ವಚನ, ಬಿ.ಆರ್., ಹಿರೇಮಠ, ಸಂ.೪, ಸೊಡ್ಡಳ ಬಾಚರಸನ ವಚನ.೮೧೨, ಪು-೨೪೮.

೩೮೪. ಸಂಕೀರ್ಣ ವಚನ ಸಂಪುಟ.೧, ಅಂಬಿಗರ ಚೌಡಯ್ಯ, ಕಲಬುರ್ಗಿ, ಎಂ.ಎಂ., ವಚನ.೨೬೨, ಪೂರ್ವೋಕ್ತ, ಪು-೮೫.

೩೮೫. ಸಂಕೀರ್ಣ ವಚನ ಸಂಪುಟ-೨, (ಸಂ), ಕನ್ನಡಿ ಕಾಯಕದ ಅಮ್ಮಿದೇವಯ್ಯನ ವಚನ.೧೨, ಪು-೬.

೩೮೬. ಸಂಕೀರ್ಣ ವಚನ ಸಂಪುಟ-೧, (ಸಂ) ಕಲಬುರ್ಗಿ, ಎಂ.ಎಂ., ಉರಿಲಿಂಗ ಪೆದ್ದಿಗಳ ವಚನ.೧೫೩೫, ಪು-೫೫೫.

೩೮೭. ಮಹೇಶ್, ಜಿ., ವಿಜಯನಗರ ಕಾಲದ ವೃತ್ತಿ ಆಧಾರಿತ ಜಾತಿಗಳು, ಒಂದು ಅಧ್ಯಯನ, ಪಿಹೆಚ್.ಡಿ ಪ್ರಬಂಧ, ಪು-೪೪.

೩೮೮. ರಾಬರ್ಟ್ ಸಿವೆಲ್, ಎ ಫರಾಗಾಟನ್ ಎಂಪಾಯಿರ್, ಪು-೩೬೦.

೩೮೯. ಅದೇ, ಪು-೩೭೦-೭೧.

೩೯೦. ವೆಂಕಟರಮಣಯ್ಯ, ಎನ್, ಸ್ಟಡಿಸ್ ಇನ್ ದಿ ಹಿಸ್ಟರಿ ಆಫ್ ಥರ್ಡ್ ಡೈಯನಾಸ್ಟಿ ಆಫ್ ವಿಜಯನಗರ, ಪು-೩೫೪-೩೫೫.

೩೯೧. ಮಹಾಲಿಂಗಂ, ಟಿ.ವಿ., ಪೂರ್ವೋಕ್ತ, ಪು-೧೬-೧೭.

೩೯೨. ರಾಬರ್ಟ್ ಸಿವೆಲ್, ಆರ್., ಮಾರೆತುಹೋದ ಮಹಾಸಾಮ್ರಾಜ್ಯ ವಿಜಯನಗರ, ಪು-೨೩೭-೨೩೮.

೩೯೩. ಡೇಮ್ಸ್, ಬಾರ್ಬೋಸಾ, ೧, ಪು-೨೧೭.

೩೯೪. ಸೆವೆಲ್, ಆರ್., ಪೂರ್ವೋಕ್ತ, ಪು-೩೭೦-೭೧.

೩೯೫. ನಾಗರಾಜು, ಹೆಚ್.ಎಮ್., ವಿಜಯನಗರ ಇಮ್ಮಡಿ ದೇವರಾಯ, ಪು-೧೮೯.

೩೯೬. ಎ.ಕ. ೬, ಕೆ.ಪಿ. ೫೨, ಪು-೫೬-೭.

೩೯೭. ಹಯವದನ್‌ರಾವ್, ಸಿ., ಎಮ್.ಜಿ., ಭಾಗ-೨, ಸಂ.೩, ಪು-೧೬೬೯-೧೬೭೦.

೩೯೮. ನಾಗರಾಜು, ಹೆಚ್.ಎಮ್., ಪೂರ್ವೋಕ್ತ, ಪು-೧೯೦.

೩೯೯. ಎ.ಕ. ೪, ವೈ.ಎಲ್., ೪೫.

೪೦೦. ವಿರೂಪಾಕ್ಷಿ ಪೂಜಾರಹಳ್ಳಿ, ವಿಜಯನಗರ ಅಧ್ಯಯನ ಸಂ.೯, ವಿಜಯನಗರ ಕಾಲದ ಪಶುಪಾಲನೆ, ಪು-೨೫೭.

೪೦೧. ಎಸ್.ಐ.ಐ. ಸಂ.೯, ಭಾಗ-೧೧, ಪು-೪೪೭.

೪೦೨. ಎಸ್.ಐ.ಐ. ೯, ಭಾಗ-೩, ಅದೇ, ಪು-೪೪೬.

೪೦೩. ರಾಯಚೂರು ಜಿಲ್ಲೆ ಶಾಸನ ಸಂಪುಟ, ಮಾನ್ವಿ ೧೯, ಕ.ವಿ.ವಿ.ಶಾ. ವಿ.ಅ. ವಿ.ಪೂ.೨೫೮.

೪೦೪. ಬಳ್ಳಾರಿ ಶಾಸನ ಸಂಪುಟ, ಸಂ.೩೮೬.

೪೦೫. ಅದೇ, ಶಾಸ. ೩೨೬

೪೦೬. ವಿರೂಪಾಕ್ಷಿ ಪೂಜಾರಹಳ್ಳಿ, ವಿಜಯನಗರ ಅಧ್ಯಯನ, ೧೯, ಪು-೨೫೯.

೪೦೭. ಇತಿಹಾಸ ದರ್ಶನ, ೧೩, ೧೯೯೮, ಪು-೧೯-೨೦.

೪೦೮. ವಿರೂಪಾಕ್ಷಿ ಪೂಜಾರಹಳ್ಳಿ, ಪೂರ್ವೋಕ್ತ, ಪು-೨೬೦.

೪೦೯. ಅದೇ, ಪು-೨೬೧.

೪೧೦. ಅದೇ, ಪು-೨೬೧.

೪೧೧. ವಿರೂಪಾಕ್ಷಿ ಪೂಜಾರಹಳ್ಳಿ, ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು ಪು-

೪೧೨. ವಿರೂಪಾಕ್ಷಿ ಪೂಜಾರಹಳ್ಳಿ, ವಿ.ಅ. ಪೂರ್ವೋಕ್ತ, ಪು-೨೬೨.

೪೧೩. ಎ.ಕ. ಸಂ.೧೦, ಶ್ರೀನಿವಾಸಪುರ ಪು-೭.

೪೧೪. ಎಸ್.ಐ.ಐ. ಭಾಗ-೫, ನಂ.೧೩೬೫.

೪೧೫. ಲಿಂಗಪುರಾಣಂ (ಸಂ), ಜಿ.ಜಿ. ಮಂಜುನಾಥ, ಕ.ಅ.ಸ. ಸಂ.೧೬, ಪ.೪೬, ಪು-೧೬೪.

೪೧೬. ರಾಬರ್ಟ್ ಸಿವೆಲ್, ಮರೆತುಹೋದ ಮಹಾಸಾಮ್ರಾಜ್ಯ, ವಿಜಯನಗರ, ಅನು.ಸದಾನಾಂದ ಕನವಳ್ಳಿ, ಪು-೨೬೦.

೪೧೭. ಹಳ್ಳಿಕೆರೆ, ಎಫ್.ಟಿ., ಕುರುಬರಿಗೆ ಸಂಬಂಧಿಸಿದ ಅಪ್ರಕಟಿಂತ ತಾಮ್ರಶಾಸನ, ವಿ.ನ.ಅ. ಪು-೭೬.೪೧೮.

೪೧೮. ಅದೇ, ಸಂಪುಟ-೧೭, ಪು-೮೦-೮೩.

೪೧೯. ವಿರೂಪಾಕ್ಷಿ ಪೂಜಾರಹಳ್ಳಿ, ವಿ.ಅ. ಸಂ.೯, ವಿಜಯನಗರ ಕಾಲದ ಪಶುಪಾಲನೆ, ಪು-೨೬೨.

೪೨೦. ನಾವಲಗಿ, ಸಿ.ಕೆ., ಜಾನಪದ ಸ್ಪಂದನ, ಪು-೧೦೧.

೪೨೧. ಶಾಮಶಾಸ್ತ್ರೀ, ಆರ್., (ಸಂ), ಕಂಠಿರವ ನರಸರಾಜ ವಿಜಯ, ಸಂ.೨, ಪ.೮೯. ಪು-೨೩.

೪೨೨. ಆರ್. ಶಾಮಶಾಸ್ತ್ರೀ, ಅದೇ, ಸಂ.೨, ಪ.೧೪.

೪೨೩. ಅದೇ, ಸಂ.೨, ಪ.೮೪.

೪೨೪. ವಿದ್ಯಾಶಂಕರ, ಎಸ್., ಚಾಮರಸನ ಪ್ರಭುಲಿಂಗ ಲೀಲೆ, ಸಂ.೪, ಪ.೪೦,

೪೨೫. ಕುಶಾಲಪ್ಪಗೌಡ, ಕೆ., ಮಧುರಾವಿಜಯಂ, ಅಥವಾ ವೀರ ಕಂಪಣರಾಯ, ಸಂ.೫, ಪ.೪೮, ಪು-೪೭.

೪೨೬. ಅದೇ. ಸಂ.೫, ಪ.೬೮.

೪೨೭. ಅದೇ, ಸಂ.೬, ಪ.೧

೪೨೮. ಅದೇ, ಸಂ.೭, ಪ.೩೭.

೪೨೯. ಹಿರೇಮಠ, ಆರ್.ಸಿ., (ಪ್ರಸಂ), ಶಾಸ್ತ್ರೀ ಕೆ.ಜಿ. (ಸಂ), ಪೌಲೋಮ ಆಸ್ತಿಕ ಪರ್ವಗಳು, ಸಂ.೩, ಪ.೬.

೪೩೦. ಕ.ವಿ.ವಿ. ಶಾಸನ ಸಂ.೪, ಸಂ.೨೩, ಶ್ರೀರಂಗ ತಿರುಚನಾಪಳ್ಳಿ, ತಾ, ಕ್ರಿ.ಶ. ೧೪೧೪, ಪು-೩೫-೩೬.

೪೩೧. ಎ.ಆರ್. ನಂ.ಬಿ೨, ೬೬, ಆಫ್ ೧೯೫೩-೫೪.

೪೩೨. ವಿ.ಪಿ.ಆರ್. ನಂ.೧೪೭, ಆಫ್ ೧೯೮೪-೮೭.

೪೩೩. ಕ.ವಿ.ವಿ. ಶಾಸನ ಸಂ.೩, ಸಂ.೨೧೦, ವಿ.ಪಿ.ಆರ್. ನಂ.೨೧, ಆಫ್ ೧೯೮೩-೮೪.

೪೩೪. ಎಸ್.ಐ.ಐ. ೧೧, ೧೧, ೪೫೧, ಕ್ರಿ.ಶ. ೧೪೪೭.

೪೩೫. ಎಸ್.ಐ.ಐ. ೨೪, ೩೨೯, ಕ್ರಿ.ಶ. ೧೩೫೫.

೪೩೬. ನಾವಲಗಿ, ಸಿ.ಕೆ., ಜಾನಪದ ಸ್ಪಂದನ, ಪು-೧೦೨.

೪೩೭. ಹಿರೇಮಠ, ಆರ್.ಸಿ.,(ಭೀಮಕವಿಯ ವಿರಚಿತ) ಬಸವ ಪುರಾಣ, ಸಂ.೧೧, ಪ.೧೨. ಪು-೯೪.

೪೩೮. ಅದೇ, ಸಂ.೧೧, ಪ.೧೨.

೪೩೯. ಅದೇ, ಸಂ.೫೯, ಪ.೪೮.

೪೪೦. ಬಸವರಾಜು, ಸರ್ವಜ್ಞನ ವಚನಗಳು ಪರಮಾರ್ಥ, ಪು-೧೪೨-೧೪೩.

೪೪೧. ಮಹೇಶವಾಡಿ, (ಸಂ), ಸಮ್ಯುಕೌಮುದಿ ಸಂ.೩, ಪ.೨೮, ಪು-೫೬.

೪೪೨. ಬಸವರಾಧ್ಯ, ಪವಿತ್ರ ಬಸಪ್ಪ, (ಸಂ), ಹರಿಶ್ಚಂದ್ರ ಕಾವ್ಯ, ಪು-೧೨..

೪೪೩. ಅದೇ, ಪ.೧೦, ಪು-೧೯೪.

೪೪೪. ಅದೇ, ಪ.೧೦, ಪು-೭೩.

೪೪೫. ಮತ್ಸ್ಯಾಪುರಾಣ, ಸಂ.೩, ಅಧ್ಯಾಯ-೭೦, ಪು-೨೮.

೪೪೬. ಚೆನ್ನಕ್ಕ ಎಲಿಗಾರ, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪು-೭೩.

೪೪೭. ಎ.ಕ. ೧೦, (ಪರಿ), ಅರಸಿಕೆರೆ ಶಾಸನ ಸಂಖ್ಯೆ.೨೧೭, ಮಾಡುಡಿ, ಕ್ರಿ.ಶ. ೧೪-೧೫ನೆಯ ಶತಮಾನ.

೪೪೮. ಅದೇ, ಚ.ಪ. ಶಾಸಂ. ೭೧, ಕೆಂಬಾಳು, ಕ್ರಿ.ಶ. ೧೧೬೮.

೪೪೯. ಅದೇ, ಅ.ಕೆ. ಶಾ.ಶಂ.೨೪, ಅರಸಿಕೇರೆ, ಕ್ರಿ.ಶ.೧೧೭೩.

೪೫೦. ಅದೇ, ಅ.ಕೆ. ಸಂ.೨೨೭, ಮುರುಂಡಿ, ಕ್ರಿ.ಶ. ೧೧೭೪.

೪೫೧. ಅದೇ, ಸಂ.೧೬೭, ತಳಲೂರು, ಕ್ರಿ.ಶ. ೧೩೬೮.

೪೫೨. ಅದೇ, ಸಂ.೧೭೦.ತಳಲೂರು, ಕ್ರಿ.ಶ. ೧೨೧೪.

೪೫೩. ಅದೇ, ಸಂ.೧೭೦, ತಳಲೂರು, ಕ್ರಿ.ಶ. ೧೨೧೪.

೪೫೪. ಅದೇ, ಸಂ.೩೧೪, ಕ್ರಿ.ಶ.೧೨೩೩.

೪೫೫. ಎ.ಕ. ೧೨, ಕಡೂರು, ಶಾ. ಸಂ.೨೮, ಕ್ರಿ.ಶ.೧೨೧೬.

೪೫೬. ಎ.ಕ. ೧೦, ಅ.ಕೆ.ಶಾ. ಸಂ.೨೩೮, ಹಾರನಹಳ್ಳಿ, ೧೨ನೆಯ ಶತಮಾನ.

೪೫೭. ಚೆನ್ನಕ ಎಲಿಗಾರ, ಪೂರ್ವೋಕ್ತ, ಪು-೭೩.

೪೫೮. ಬಾರ್ಬೋಸಾ, ಸಂ೧, ಪು-೨೦೮.

೪೫೯. ಸಿವೆಲ್, ದಿ ಫರ್‌ಗಾಟನ್ ಎಂಫೈರ್,

೪೬೦. ಪ್ರವಾಸಿ ಕಂಡ ಇಂಡಿಯಾ, ಸಂ.೮.

೪೬೧. ಸೋಮಶೇಖರ್, ಎಸ್.ವೈ., ಹಂಪಿಯ ಬಜಾರುಗಳು, ಪು-೯.

೪೬೨. ಅದೇ, ಪು-

೪೬೩. ನಾಗೇಗೌಡ, ಹೆಚ್, ಎಲ್., ಪೂರ್ವೋಕ್ತ, ಪು-೩೬೦.

೪೬೪.ಇ.ಆಂ. ೯, ಸಂ.೧೨೪, ಕ್ರಿ.ಶ. ೭೭೮.

೪೬೫. ಸತೀಶ್, ಕೆ., ಪೂರ್ವೋಕ್ತ, ಪು-೧೮೬.

೪೬೬. ಗುರುರಾಜಭಟ್ಟ, ಪಿ., ತುಳುನಾಡು, ಪು-೧೩೮-೧೪೦.

೪೬೭. ಕ.ವಿ.ವಿ. ಶಾ.ಸಂ.-೨, ಕೊಪ್ಪಳ ಜಿಲ್ಲೆ, ಗಂಗಾವತಿ, ಸಂಖ್ಯೆ. ೭೩, ಕೆಸರಟ್ಟಿ, ಕ್ರಿ.ಶ. ೧೫೨೭.

೪೬೮. ಎಸ್.ಐ.ಐ. ೪. ಸಂಖ್ಯೆ.೨೫೫.

೪೬೯. ಕ.ವಿ.ವಿ.ಶಾ.ಸಂ-೩, ಹಂಪಿ, ಸಂ.೨೧೦.

೪೭೦. ಕ.ವಿ.ವಿ.ಶಾ.ಸಂ-೩, ಹಂಪಿ, ಸಂಖ್ಯೆ.೨೫೭.

೪೭೧. ಎಸ್.ಐ.ಐ.೧೫, ಸಂ.೭೪, ಕ್ರಿ.ಶ. ೧೫೨೨.

೪೭೨. ಎಸ್.ಐ.ಐ. ೯, ೨, ಸಂ.೬೦೭.

೪೭೩. ಶೈವಾಗಮ-ಸಿದ್ಧಾಂತ ಶೇಖರ ಮತ್ತು ಶ್ರೀಮದ್ಭಾಗವತ.

೪೭೪. ಎಸ್.ಐ.ಐ. ೪, ನಂ.೨೫೪ ಮತ್ತು ೨೫೫.

೪೭೫. ಆಮುಕ್ತಮಾಲ್ಯದ, ಆಶ್ವಾಸ, ೪, ಪದ್ಯ, ೨೦೭, ೨೧೧, ೨೫೫.

೪೭೬. ನಿರುಪಮಾ, ಆಮುಕ್ತಮಾಲ್ಯದ ಕ.ವಿ.ವಿ. ೧೯೯೯, ಆಶ್ವಾಸ ೪-೩೫.

೪೭೭. ಎಸ್.ಐ.ಐ. ೯, ಆಫ್, ೧೧, ನಂ.೫೬೪.

೪೭೮. ಎಸ್.ಐ.ಐ.೪, ನಂ.೨೪೫, ೨೫೦, ೨೫೫.

೪೭೯. ಎಸ್.ಐ.ಐ. ೪, ನಂ.೨೫೦.

೪೮೦. ಟಿ.ಟಿ.ಡಿ.ಐ. ೨ ನಂ.೪.

೪೮೧. ಎಸ್.ಐ.ಐ. ೪, ೨, ನಂ.೬೮೮.

೪೮೨. ಗೋಪಾಲರಾವ್, ಹೆಚ್.ಎಸ್., ಪು–೯೭.

೪೮೩. ಟಿ.ಟಿ.ಡಿ.ಐ.೩, ನಂ.೧೦೫.

೪೮೪. ಟಿ.ಟಿ.ಡಿ.ಐ.೨, ನಂ.೩೮.

೪೮೫. ಟಿ.ಟಿ.ಡಿ.ಐ. ೪, ನಂ.೧.

೪೮೬. ಟಿ.ಟಿ.ಡಿ.ಐ.೧, ನಂ.೧೮೭.

ಅಧ್ಯಾಯ-೪

ನಂಬಿಕೆ, ಆಚರಣೆ ವಿಧಿ-ನಿಷೇಧ, ಪಾರಂಪರಿಕ ಜ್ಞಾನ

ಭೂಮಿಯ ಮೇಲೆ ಅಸ್ತಿತ್ವ ಪಡೆದುಕೊಂಡ ಗೋಚರ ಮತ್ತು ಅಗೋಚರ ವಸ್ತುಗಳ ಸೃಷ್ಟಿಗೆ ಒಂದು ಕಾರಣ ಇದ್ದೇ ಇದೆ. ತಾಯಿ ಗರ್ಭದಿಂದ ಜನಿಸಿದ ಮಗುವಿಗೆ ಹುಟ್ಟಿನಿಂದಲೇ ಅಕ್ಕ, ತಂಗಿ, ಮಗ, ಮಗಳು, ಮೊಮ್ಮಗ ಹೀಗೆ ಅನೇಕ ಸಂಬಂಧಗಳು ಹೆಣೆದುಕೊಳ್ಳುತ್ತವೆ. ಕುಟುಂಬ, ಶಾಲೆ, ಸಮಾಜದಲ್ಲಿ ತನ್ನ ಅಸ್ತಿತ್ವವನ್ನು ಹೆಸರಿನ ಮೂಲಕ ಗುರುತಿಸಿಕೊಂಡು ಪ್ರಜೆಯಾಗಿ ಬಾಳುತ್ತದೆ. ಹೀಗೆ ಭೂಮಿ ಆಕಾಶಗಳ ಜೊತೆಯಲ್ಲಿ ಗೋಚರಿತ ಜೀವಿಗಳು ಮತ್ತು ಅಗೋಚರಿತವಾದವುಗಳು ಭೂಗರ್ಭದಲ್ಲಿ, ಆಕಾಶಕಾಯದಲ್ಲಿ ಎಷ್ಟೋ ವಿಷಯಗಳು ಅಡಗಿ ಕುಳಿತವು. ಭೂಮಿ ಆಕಾಶದೊಂದಿಗೆ ಅಸ್ತಿತ್ವ ಪಡೆದ ಜೀವಿಗಳು ವಿಕಾಸ ಹಾಗೂ ಬದಲಾವಣೆ ಹೊಂದಿದಂತೆ ಬುದ್ಧಿ ಬೆಳೆದಂತೆ ನಂಬಿಕೆಗಳ ಹುಟ್ಟು ಆರಂಭವಾಯಿತು ಎನ್ನಬಹುದು.

ನಂಬಿಕೆಗಳು ಭಾವನೆ ಮತ್ತು ಆಲೋಚನೆಯ ರೂಪದಲ್ಲಿದ್ದರೆ ಆಚರಣೆಗಳು ಕ್ರಿಯಾ ರೂಪದಲ್ಲಿರುತ್ತವೆ. ಈ ಸಮಾಜವು ನಂಬಿಕೆಯ ಮೇಲೆ ನಡೆಯುತ್ತಿದೆ. ಜನಗಳು ಆಚರಿಸುವ ಆಚರಣೆ, ಸಂಪ್ರದಾಯಗಳು ನಂಬಿಕೆ ಮೇಲೆ ನಿಂತಿವೆ. ಜೀವನದಲ್ಲಿ ನಂಬಿಕೆಗಳ ಪಾತ್ರ ಬಹಳ ಮುಖ್ಯವಾದದು. ಅವುಗಳೇ ಅವರ ಕೆಲಸಕ್ಕೆ ಆಧಾರಗಳು. ದೇವರು, ಪೂಜೆ, ತೀರ್ಥಯಾತ್ರೆ ಹಬ್ಬಹರಿದಿನಗಳು ಸ್ವಪ್ನ ಹೀಗೆ ಜೀವನಕ್ಕೆ ಸಂಬಂಧಿಸಿದ ಸ್ಥಾನದಲ್ಲಿ ತನ್ನ ಅಸ್ತಿತ್ವದ ಕಾಲು ಚಾಚಿರುವ ನಂಬಿಕೆಗಳು ಸಂಸ್ಕೃತಿಯ ಮೂಲನೆಲೆಗಳಾಗಿವೆ. ಒಂದೊಂದು ಧರ್ಮ, ಜನಾಂಗ, ಕುಲಗಳು ಆಚರಿಸುವ ನಂಬಿಕೆಗಳು ಅವರ ಕಸುಬಿಗೆ ತೋರು ದೀಪಗಳಾಗಿವೆ.

ಅನೇಕ ವಿದ್ವಾಂಸರು ನಂಬಿಕೆಗಳಲ್ಲಿ ಬೇರೆ ಬೇರೆ ಪ್ರಕಾರಗಳಾಗಿ ಗುರುತಿಸಿದ್ದಾರೆ. ನಂಬಿಕೆ ಎನ್ನುವ ಪದದ ಮಹತ್ವ ಬಹಳಷ್ಟು ಆಳವಾದ, ವಿಶಾಲವಾದ ಅತ್ಯಂತ ಮೌಲ್ಯಯುತ ಪದವಾಗಿದೆ. ಪ್ರಸಿದ್ಧ ಪ್ರಬಂಧಕಾರ ಗಾರ್ಡಿನರ್ ಭಾವ ಜೀವಿಯಾದ ವರದ ಹಸ್ತ[1] ಎಂದಿದ್ದಾರೆ. ನಂಬಿಕೆಗಳು ಬಹಳ ಪ್ರಾಚೀನವಾದವು ಅವುಗಳ ಪ್ರಾಚೀನತೆ ನೋಡುವುದಾದರೆ ಭೂಮಿಯ ಮೇಲೆ ಎಂದು ಮಾನವನ ಉಗಮವಾಯಿತೋ ಅಂದೇ ಮಾನವನ ಮನೋಮಂದಿರದಲ್ಲಿ ಅವು ಮೂಡಿದವೆನ್ನಬಹುದು.

ಮನುಷ್ಯ ತಾನು ನಡೆಸಿಕೊಂಡು ಬಂದ ವಿಶಿಷ್ಟ ಆಚರಣೆಗಳ ಬಗ್ಗೆ ಹೊಂದಿದ ಶ್ರದ್ಧೆ, ಉತ್ಸಾಹಗಳು ನಂಬಿಕೆ, ಸಂಪ್ರದಾಯ ಸೃಷ್ಟಿಗೆ ಕಾರಣವಾಗಿವೆ.[2] ಆಚರಣೆಗಳು ಜನರ ಬದುಕಿನ

ಅವಿಭಾಜ್ಯ ಅಂಗಗಳು ಅವು ಕಾಲಮಾನಕ್ಕೆ ತಕ್ಕಂತೆ ಬದಲಾವಣೆಗೊಳ್ಳುತ್ತಾ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ನಿರಂತರವಾಗಿ ಸಾಗಿಬಂದಿವೆ. ಆಚರಣೆಗಳು ಒಂದು ನಿರ್ದಿಷ್ಟ ಸಮಯದಲ್ಲಿ ವ್ಯಕ್ತಿಯಿಂದ ಆರಂಭಗೊಂಡಿರುತ್ತವೆ. ವ್ಯಕ್ತಿಯಿಂದ ಇತರರನ್ನು ಒಳಗೊಂಡು ತನ್ನ ಸುತ್ತಲಿನ ಸಮಾಜ ಕಾಲಾನುಕ್ರಮದಲ್ಲಿ ಪಾಲಿಸಿಕೊಂಡು ಬಂದ ವ್ಯವಸ್ಥೆಯ ಸಂಪ್ರದಾಯ ಒಪ್ಪಿಕೊಂಡ ಕ್ರಮಗಳೇ ಆಚರಣೆಗಳು, ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಮುಂತಾದ ಚಟುವಟಿಕೆಗಳು ಒಳಗೊಂಡಿರುತ್ತವೆ. ನಂಬಿಕೆಯ ಸಿದ್ಧಾಂತ ಆಚರಣೆಯನ್ನು ಮುಂದುವರೆಸಿಕೊಂಡು ಹೋಗುವಂತೆ ಮಾಡುತ್ತದೆ.

ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ನಮ್ಮ ಪೂರ್ವಿಕರಿಂದ ಪಡೆದ ಜ್ಞಾನ ಎನ್ನಬಹುದು. ಈ ರೀತಿಯ ಜ್ಞಾನವನ್ನು ಪಡೆದು ಅನೇಕ ವಸ್ತುಗಳನ್ನು ತಯಾರಿಸುವುದನ್ನು ಮಾನವ ಕಲಿತ.

ಕಸುಬುಗಳ ಹಿನ್ನೆಲೆಯನ್ನು ಆದಿ ಮಾನವ ಬೇಟೆಯಾಡಲು ಆಯುಧ ತಯಾರಿಸುವ, ಉಡುಗೆ-ತೊಡುಗೆ ಹೀಗೆ ಅವನು ಮಾಡುವ ಪ್ರತಿಯೊಂದು ಕಸುಬಿನಲ್ಲಿ ಚಾರಿತ್ರಿಕ ಅಂಶವನ್ನು ಗಮನಿಸಬಹುದು. ಅಂದಿನ ಮಾನವರು ವಿವಿಧ ಬಗೆಯ ಆಯುಧಗಳನ್ನು ತಯಾರಿಸುವ ತಾಂತ್ರಿಕತೆಯನ್ನು ಕಂಡುಕೊಂಡಿದ್ದರು. ನಂತರ ವಿವಿಧ ವಿನ್ಯಾಸದ ಮಡಕೆ ಕುಡುಕೆ, ಕಬ್ಬಿಣದಿಂದ ಕೃಷಿ ಉಪಕರಣ, ಲೋಹಗಳಿಂದ ಆಭರಣಗಳ ತಯಾರಿಕೆ, ವಿವಿಧ ವಸ್ತುಗಳಿಂದ ಬಗೆ ಬಗೆಯ ಉಪಕರಣಗಳ ತಯಾರಿಕೆಯನ್ನು ಮಾಡಿದ.

ಇತಿಹಾಸ ಕಾಲಕ್ಕೆ ಬಂದರೆ ಸಿಂಧೂಬಯಲಿನ ನಾಗರಿಕತೆಯ ಜನರು ವಿವಿಧ ಬಗೆಯ ಕಸುಬುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು ಎಂದು ಉತ್ಖನನದಲ್ಲಿ ದೊರೆತ ಅವಶೇಷಗಳಿಂದ ತಿಳಿಯುತ್ತದೆ. ಅಲ್ಲಿ ಚಮ್ಮಾರ, ಕಮ್ಮಾರ, ಬಡಗಿ, ಯೋಧ, ಕುಂಬಾರ, ಬೆಸ್ತ, ಅಕ್ಕಸಾಲಿಗ ಹೀಗೆ ವಿವಿಧ ಬಗೆಯ ಕಸುಬುದಾರರು ಇದ್ದರು ಎಂಬುದು ವೇದ್ಯವಾಗುತ್ತದೆ. ವಿಜಯನಗರ ಕಾಲದಲ್ಲಿ ಪ್ರಮುಖವಾಗಿ ನೇಕಾರ, ಬಡಗಿ, ಕಮ್ಮಾರ, ಕುಂಬಾರ, ಅಕ್ಕಸಾಲಿ, ಕಂಚುಗಾರ, ಮೇದಾರ ಹೀಗೆ ಹಲವು ಕಸುಬುದಾರರಿದ್ದರು. ಎಂಬುದು ವಿದೇಶಿ ಪ್ರವಾಸಿಗರ ವರದಿ, ಶಾಸನ, ಪ್ರಾಕ್ತನ, ಸಾಹಿತ್ಯ ಆಧಾರಗಳಿಂದ ದೃಢಪಡಿಸಬಹುದು. ಈ ಮೇಲಿನ ಕಸುಬುಗಳಲ್ಲದೆ ಇನ್ನೂ ಹಲವು ಉಪಕಸುಬುಗಳು ಇದ್ದವು. ಈ ಎಲ್ಲಾ ಕಸುಬುಗಳಿಗೂ ತನ್ನದೇ ಆದ ಒಂದು ಪಾರಂಪರಿಕ ಜ್ಞಾನವಿತ್ತು. ಆ ಜ್ಞಾನದ ಮೂಲಕ ಅವರು ವಸ್ತುಗಳನ್ನು ತಯಾರು ಮಾಡುತ್ತಿದ್ದರು

ಯಾವುದೇ ಒಂದು ಕೆಲಸವನ್ನು ಪ್ರಾರಂಭಿಸಬೇಕಾದರೆ ದೇವರಿಗೆ ಪೂಜೆ ಸಲ್ಲಿಸಿ ಪ್ರಾರಂಭಿಸುತ್ತೆವೆ. ವ್ಯಾಪಾರಕ್ಕೆ ವಿಜಯನಗರ ಕಾಲದಲ್ಲಿ ತುಂಬಾ ಪ್ರಾಮುಖ್ಯತೆಯಿತ್ತು. ಅಂದು ವ್ಯಾಪಾರಕ್ಕೆ ತನ್ನದೆ ಆದ ಬೀದಿಗಳಿದ್ದವು. ಅಲ್ಲಿ ಅವರು ಸಂತೆಗಳನ್ನು ಸ್ಥಾಪಿಸಿಕೊಂಡು ತಮ್ಮ ಕಾರ್ಯಗಳನ್ನು ಮಾಡುತ್ತಿದ್ದರು.

ವಾಣಿಯಧವನೆಂಬ ವ್ಯವಹಾರಿ ಪಟ್ಟೆಯ
ಗೋಣಿಯೊಳ್ ತುಂಬಿದ ರತ್ನ
ಓಣಿಯೊಳ್ ಚಲ್ಲಿದಂತಿದೆ ನಿನ್ನ ಕೃತಿಯಂಬ
ಮಾಣಿಕ ಮನ್ಮನೋನಾಥ. ಮೋ. ತ. ಸಂ.೧ ಪ-೩೪.

ನನ್ನ ಸ್ವಾಮಿ, ನಿನ್ನ ಕೃತಿ ರತ್ನವು, ಬ್ರಹ್ಮನೆಂಬ ವ್ಯಾಪಾರಿಯು ರೇಶಿಮೆಯ ಚೀಲದಲ್ಲಿ ತುಂಬಿದ ರತ್ನವು ಓಣಿಯಲ್ಲಿ ಬಿದ್ದಂತೆ ಇದೆ

ಕ್ರಿ.ಶ. ೧೧೯೦ರ ಹಿರೇಬೇವಿನೂರ ಶಾಸನ.[೩] ನೆರಪಿಯೆವರೆಲ್ಲರು ಕುಳ್ಳಿರಿಸಿಯೆ ಕೇಳ್ದಿಧರ್ಮ್ಮ ಸಂಥಯೆನಿಸಿಯೆ ಮಾಯ್ದೇವರಸಂ ಮಾಡಿದ ಧಂಮ್ಮಂ ಧೀರೆಯೊಳಗಿದು ಧರ್ಮ ಸಂತೆಯ ಚಂದ್ರಾರ್ಕ್ಕಂ!! ಎಂದು ಉಲ್ಲೇಖಿಸುತ್ತದೆ. ಸಂತೆ ಕಟ್ಟಿಸುವುದರಿಂದ ಪುಣ್ಯ ಪ್ರಾಪ್ತಿಯಾಗುವುದೆಂಬ ನಂಬಿಕೆಯೂ ಜನರಲ್ಲಿ ಇದ್ದಿತು. ಶುಭ ಮುಹೂರ್ತದಲ್ಲಿ ನನ್ನಿಕಂಬ ಪ್ರತಿಷ್ಠಾಪಿಸಿ, ಹೊಸಸಂತೆ ಪ್ರಾರಂಭಿಸುತ್ತಿದ್ದರು.[೪] ನನ್ನಿಕಂಬ ಕಲ್ಲಿನದ್ದು ಬಹುಶಃ ದೇವಾಲಯದ ಮುಂದೆ ನೆಟ್ಟುದುದಾಗಿರಬೇಕು. ಹಸುಬೆಗಳನ್ನು ನನ್ನಿಕಂಬದ ಮುಂದೆ ಇಳುಹಿಸಿ ಒಯ್ಯುತ್ತಿದ್ದರೆಂದು ಕುಂದವಾಡ ಶಾಸನ ಹೇಳುತ್ತದೆ.[೫] ನನ್ನಿಕಂಬ ಮತ್ತು ದೇವಾಲಯಗಳು ವ್ಯಾಪಾರಿಗಳಲ್ಲಿ ದೈವೀಭಾವನೆಯನ್ನು ತುಂಬಿ, ವ್ಯವಹಾರವನ್ನು ಧರ್ಮಬುದ್ಧಿಯಿಂದ ನಡೆಸಿಕೊಂಡು ಹೋಗಲು ಸಹಾಯಕವಾಗುತ್ತಿದ್ದಂತೆ ತೋರುವುದು. ವ್ಯಾಪಾರದಲ್ಲಿ ಅವ್ಯವಹಾರ, ಅನ್ಯಾಯ, ಆಚಾತುರ್ಯಗಳು ಸಂಭವಿಸದಂತೆ ನೋಡಿಕೊಳ್ಳಲು ನನ್ನಿಕಂಬವನ್ನು ಸತ್ಯ, ಪ್ರಾಮಾಣಿಕತೆಗಳ ಸಂಕೇತವಾಗಿ ನಿಲ್ಲಿಸುತ್ತಿದ್ದರು. ಅಂದರೆ ಇಲ್ಲಿ ಕಂಬ ಅಂದರೆ ರಾತ್ರಿ ಸಮಯದಲ್ಲಿ ದೀಪದ ವ್ಯವಸ್ಥೆ, ವಸ್ತುಗಳು ಕಾಣುವ ರೀತಿ ಆರ್ಥಿಕ ವ್ಯವಹಾರದಲ್ಲಿ ತೊಂದರೆ ಆಗದೆ ಇರಲಿ ಎಂಬ ಉದ್ದೇಶವು ಇರಬಹುದು.

ಹಲವು ದೀಪ್ತಿಯ ಪಟ್ಟೆ ಝುಲ್ಲಿ ನಾನಾ ವರ್ಣ
ದಳೆದ ಚಿತ್ರಾಂಬರ ನಿಚಯ
ಸುಲಲಿತ ದೇವಾಂಗ ವಸ್ತ್ರದೊಟ್ಟಿಲ ಸಾಲು
ಮರೆಗೆಗಳಿರ್ದುವಿಕ್ಕೆಲದಿ. ಮೋ.ತ. ಸಂ-೩, ಪ-೨೪,

ಹೊಳೆಯುವ ಹಲವು ಬಗೆಯ ಡಾಲು, ಗೊಂಡೆ, ನಾನಾ ಬಗೆಯ ಬಣ್ಣದ ವಸ್ತ್ರಗಳ ಕೋಮಲವಾದ ರೇಶಿಮೆಯ ಬಟ್ಟೆಗಳು ತೊಟ್ಟಿಲುಗಳು ಇದ್ದ ಅಂಗಡಿಗಳ ಸಾಲುಗಳು ಬೀದಿಯ ಎರಡೂ ಕಡೆಗಳಲ್ಲಿದ್ದವು.

ನೇಕಾರರಿಗೆ ಸಂಬಂಧಿಸಿದಂತೆ ಸಂತೆಯಲ್ಲಿ ದೇಡಸೀರೆ, ನೂಲು, ಪಟ್ಟಸೂತ್ರಗಳ ಮೇಲೆ ಆಕರಿಸುತ್ತಿದ್ದ ಸಂತೆಯ ಆಯಾ ಹಾಗೂ ಕೋಲಾರ ಶಾಸನದ ನೇಕಾರ ಸೇವೆ ಪದಗಳು ಸಾಲಿಗರು ಮತ್ತು ಪಟ್ಟಸಾಲಿಗರು ಮಗ್ಗದ ಮೂಲಕ ನೇಯ್ದು ತಯಾರಿಸಿದ ಬಟ್ಟೆಗಳನ್ನು ಸಂತೆಯಲ್ಲಿ ಮಾರುತ್ತಿದ್ದರೆಂದು ಹೇಳುತ್ತವೆ.[೬] ನೇಕಾರರು ಹತ್ತಿಯ ವಸ್ತ್ರಗಳಲ್ಲದೆ ರೇಷ್ಮೆಯ ವಸ್ತ್ರಗಳನ್ನು ನೇಯ್ದು ಮಾರಾಟ ಮಾಡುತ್ತಿದ್ದರು. ಇಂಥ ರೇಷ್ಮೆ ವ್ಯಾಪಾರಿಯನ್ನು ಪಟ್ಟಾಯಿಲ.[೭] ಎಂದು ಉಲ್ಲೇಖಿಸುತ್ತವೆ. ನೇಕಾರರು ವಿವಿಧ ಬಗೆಯ ಬಟ್ಟೆಗಳನ್ನು ನೇಯುವ ಕಸುಬನ್ನು ಆಚರಿಸಿಕೊಂಡು ಬಂದಿರುವುದು ಶಾಸನ, ಸಾಹಿತ್ಯ ಕೃತಿಗಳಲ್ಲಿ ಕಾಣುತ್ತೇವೆ.

ಎಲ್ಲಾ ಪ್ರಕಾರಗಳಿಗೂ ಪೌರಾಣಿಕ ಅಂಶಗಳು ತಳಕು ಹಾಕಿಕೊಂಡಿರುವಂತೆ ನೇಕಾರ ಸಮುದಾಯಗಳ ಬಗೆಗೂ ಪೌರಾಣಿಕ ಕಥೆ ತಳುಕು ಹಾಕಿಕೊಳ್ಳುವ ಮೂಲಕ ಪುರಾಣ ಕಾಲದ ದಾಖಲೆ ಒದಗಿಸುತ್ತದೆ. ಪದ್ಮಶಾಲಿ ಅಥವಾ ನೇಕಾರ ಸಮುದಾಯ ಎಂದು ಕರೆಸಿಕೊಂಡಿರುವ ಪದ್ಮಶಾಲಿ ಸಮುದಾಯದವರು

ಎಲ್ಲಾ ಸಮುದಾಯಗಳಿಗೂ ಸೃಷ್ಟಿ ಪುರಾಣಗಳಿರುವಂತೆ ಪದ್ಮಶಾಲಿ ಸಮುದಾಯಕ್ಕೂ ಸೃಷ್ಟಿ ಪುರಾಣವಿದೆ. ಅಷ್ಟಾದಶ ಪುರಾಣಗಳಲ್ಲಿ ಶ್ರೀ ಮಾರ್ಕಂಡೇಶ್ವರ ಪುರಾಣವು ಮಹತ್ವದಾಗಿದೆ. ಮಾರ್ಕಂಡೇಶ್ವರನು ಮಾಡಿ ಯಜ್ಞಕುಂಡದಲ್ಲಿ ಹುಟ್ಟಿದವನೆಂದು ಹೇಳಲಾದ ಭಾವನಾಋಷಿಯು ಪದ್ಮಶಾಲಿ ವಂಶದ ಮೂಲಪುರುಷನಾಗಿದ್ದಾನೆ. ಈತನ ೧೦೧ ಮಕ್ಕಳ ಹೆಸರಿನಲ್ಲಿ ಈ ಸಮುದಾಯದ ಗೋತ್ರಗಳಿರುವುದನ್ನು ಕಾಣಬಹುದು. ಈತನಿಗೆ ಸಂಬಂಧಿಸಿದ ಸೃಷ್ಟಿ ಪುರಾಣ ಹೀಗೆ ಹೇಳುತ್ತದೆ. ಕಾಳವಾಸುವರೆಂಬ ರಾಕ್ಷಸನ ಸಂಹಾರಕ್ಕೋಸ್ಕರ ಮಾರ್ಕಂಡೇಯಸ್ವಾಮಿ ಯಜ್ಞ ಮಾಡಿದರೆ ಅದರ ಫಲದಿಂದ ಯಜ್ಞಕುಂಡದಲ್ಲಿ ಹುಟ್ಟಿ ಬಂದ ವೀರನಿಗೆ ಸಮಸ್ತ ಋಷಿಗಳು ಶುಭಸಮಯದಲ್ಲಿ ಶಾಸ್ತ್ರೋಕ್ತವಾಗಿ ಭಾವನಾಋಷಿ ಎಂದು ನಾಮಕರಣ ಮಾಡಿದರು. ಆಗ ಮಾರ್ಕಂಡೇಯಸ್ವಾಮಿ ಮಗನಿಗೆ ಸಮಸ್ತ ವಿದ್ಯಾಶಾಸ್ತ್ರಗಳನ್ನು ಗುರುವಿನ ಮೂಲಕ ತಿಳಿದು ನಿನ್ನ ಮುಂದಿನ ಕೆಲಸವನ್ನು ನೆರವೇರಿಸು ಎಂದು ಹೇಳಿದರು. ಅಂತೆಯೇ ಭಾವನಾ ಋಷಿ ದೊಡ್ಡವನಾಗುತ್ತಾನೆ. ಆಗ ಶಂಕರನು ಭಾವನಾ ಋಷಿಗೆ ನೀನು ಲೋಕದ ಉದ್ಧಾರಕ್ಕಾಗಿ ವಸ್ತ್ರಗಳನ್ನು ತಯಾರು ಮಾಡಬೇಕು. ನಂತರ ಶಂಭಾಸುರನ ವಂಶದವನಾದ ಕಾಳವಾಸುರನನ್ನು ಸಂಹಾರ ಮಾಡಬೇಕೆಂದು ಹೇಳಿದನು ನಂತರ ಶ್ರೀ ಮಹಾವಿಷ್ಣುವಿನ ಬಳಿ ಬಂದ ಭಾವನಾ ಋಷಿಯು ಭೂಷಣಕ್ಕೆ ವಸ್ತ್ರಗಳು ಇಲ್ಲದೇ ದೇವತೆಗಳು, ಯಕ್ಷರು, ಗಂಧರ್ವರು ಕಿನ್ನರ ಕಿಂಪುರುಷಾಧಿಗಳು, ಬಾಳೆ ಎಲೆಗಳನ್ನು ಧರಿಸುತ್ತಾರೆ. ಅವರಿಗಾಗಿ ವಸ್ತ್ರಗಳನ್ನು ತಯಾರಿಸುವ ಆಜ್ಞೆ ಶಂಕರನಿಂದ ಆಗಿದೆ. ಆದ್ದರಿಂದ ನಿನ್ನ ನಾಭೀಕಮಲ (ಪದ್ಮ)ದಿಂದ ನೂಲನ್ನು ಕೊಟ್ಟು ಲೋಕೋದ್ಧಾರ ಮಾಡಬೇಕೆಂದು ಪ್ರಾರ್ಥಿಸಿದರು. ಆಗ ವಿಷ್ಣುವು ಭಾವನಾ ಋಷಿಯ ಕರ್ತವ್ಯವನ್ನು ತಿಳಿದು ವಿಷ್ಣುವು ತನ್ನ ನಾಭೀಕಮಲ (ಪದ್ಮ)ದಿಂದ ಬರುವ ನೂಲನ್ನು ಲೋಕೋದ್ಧಾರಕ್ಕಾಗಿ ನೀನು ಉಪಯೋಗಿಸಬಹುದೆಂದು ಕೆಲವು ನಿಬಂಧನೆಗಳನ್ನು ವಿಧಿಸುತ್ತಾರೆ. ಏನೆಂದರೆ ನಿಮ್ಮ ಮುಂದಿನ ವಂಶದವರು ನನ್ನ ನಾಭೀಕಮಲದ ನೂಲಿನಿಂದ ವಸ್ತ್ರಗಳನ್ನು ತಯಾರು ಮಾಡಿ ನಿತ್ಯ ಕರ್ಮಗಳನ್ನು ಪಾಲಿಸಿ ಶುಚ್ಚಿಭೂರ್ತವಾಗಿ ಇರಬೇಕು. ಅಮವಾಸ್ಯೆ ದಿವಸ (ಮಗ್ಗನೇಯ್ಗೆ) ನೇಯಬಾರದು ಮತ್ತು ಇಷ್ಟದೇವತಾ ಪೂಜೆ, ಗಾಯಿತ್ರೀ ಜಪತಪವನ್ನು ಪಾಲಿಸಿ ಜನಿವಾರವನ್ನು ಧರಿಸಿ ನೇಮ ನಿತ್ಯಗಳನ್ನು ಪಾಲಿಸಬೇಕು. ಈ ರೀತಿ ನಿಮ್ಮ ವಂಶದವರು ನಡೆದುಕೊಂಡರೆ ನನ್ನ ನಾಭೀಕಮಲದಿಂದ ನೂಲನ್ನು ತೆಗೆದುಕೊಳ್ಳುತ್ತೇವೆ. ಎಂದು ವಿಷ್ಣುವು ಹೇಳಿದನು. ಅದಕ್ಕೆ ಭಾವನಾಋಷಿಯು ಸಂತೋಷವಾಗಿ ಒಪ್ಪಿಕೊಂಡನು. ಆಗ ಮಹಾವಿಷ್ಣುವು ತನ್ನ ನಾಭೀಕಮಲದಲ್ಲಿಯ ಒಂದು ರೇಖೆಯನ್ನು ಕೊಟ್ಟನು. ವಿಷ್ಣುವು ಕೊಟ್ಟ ಆ ರೇಖೆಯಿಂದ ನೂಲನ್ನು ತಯಾರು ಮಾಡಿಕೊಂಡು ವಿವಿಧ ವಸ್ತ್ರ ಆಭರಣಗಳನ್ನು ತಯಾರಿಸಿದನು ಈಶ್ವರನಿಗೆ ರುದ್ರಾಕ್ಷ ಕಂಠ ಮಾಲಿಕೆಯನ್ನು, ವಿಷ್ಣುವಿಗೆ ಕನಕ ಪೀತಾಂಬರವನ್ನು ಬ್ರಹ್ಮನಿಗೆ ಕಷಾಯ ವಸ್ತ್ರವನ್ನು, ಸರಸ್ವತಿದೇವಿಗೆ ಸೇವಂತಿಗೆ ಸೀರೆಯನ್ನು ವರುಣನಿಗೆ ವಸಂತರಾಗವನ್ನು, ಕುಬೇರನಿಗೆ ಶುಭ್ರಂಬಾರವನ್ನು ಯಮನಿಗೆ ಕಪ್ಪುವರ್ಣದ ವಸ್ತ್ರಗಳನ್ನು ತಯಾರು ಮಾಡಿಕೊಟ್ಟನು.

ಒಮ್ಮೆ ಈಶ್ವರನು ನಾನು ಎಲ್ಲ ಚರ್ಮವನ್ನು ಧರಿಸಿರುವೆನು ಆದರೆ ಹುಲಿ ಚರ್ಮಧರಿಸಿಲ್ಲ ಅದನ್ನು ತಂದುಕೊಂಡುವಂತೆ ಭಾವನಾಋಷಿಗೆ ಹೇಳುತ್ತಾನೆ. ಅದರಂತೆಯೇ ಭಾವನಾ ಋಷಿ ಕಾಡಿಗೆ ಹುಲಿಯನ್ನು ಹುಡುಕಲು ಹೊರಟನು. ಹುಲಿಗಳ ಸಮೂಹವನ್ನು ಈಶ್ವರನ ಸನ್ನಿಧಾನಕ್ಕೆ

ಕರೆತರುವ ಸಂದರ್ಭದಲ್ಲಿ ನಾರದರಿಂದ ಈ ವಿಷಯವನ್ನು ತಿಳಿದು ರಾಕ್ಷಸನು ಸೈನ್ಯ ಸಮೇತನಾಗಿ ಅಡ್ಡಗಟ್ಟುತ್ತಾನೆ. ಇವರಿಬ್ಬರಿಗೂ ಯುದ್ಧವಾಗುತ್ತದೆ. ಭಾವನಾಋಷಿಯ ರಾಕ್ಷಸರೊಡನೆ ಯುದ್ಧ ಮಾಡುತ್ತಾ ತನ್ನ ಮೈ ಬೆವರನ್ನು ತೆಗೆದು ಓಂ ನಾರಾಯಣಾಯ ನಮಃ ಎಂದು ಭೂಮಿಗೆ ಹಾಕಲು ಆ ತಕ್ಷಣವೇ ಇಬ್ಬರು ಮಕ್ಕಳು ಹುಟ್ಟಿ ನಿಲ್ಲುತ್ತಾರೆ. ಆಗ ಭಾವನಾ ಋಷಿಯು ಅವರಿಗೆ ಈ ಹುಲಿಗಳನ್ನು ಎಲ್ಲಿಯೂ ಕದಲದಂತೆ ನೋಡಿಕೊಳ್ಳಿ ಎಂದು ಹೇಳಿ ರಾಕ್ಷಸನ ವಕ್ಷಸ್ಥಲಕ್ಕೆ ಹೊಡೆದನು. ಆಗ ರಕ್ತ ಸುರಿಯುತ್ತದೆ. ರಕ್ತ ಕೆಳಗೆ ಬಿದ್ದ ಕೂಡಲೇ ರಾಕ್ಷಸನಿಗೆ ಸಮಾನರಾದಂಥ ರಾಕ್ಷಸರು ಹುಟ್ಟುತ್ತಿದ್ದರು. ಆಗ ಆ ಇಬ್ಬರು ಮಕ್ಕಳಿಗೆ ತಾವು ಹಿಡಿದಂತೆ ಹುಲಿಗಳನ್ನು ಬಿಡಿರೆಂದು ಆಜ್ಞೆ ಮಾಡಿ ಕೊನೆಗೆ ಕಾಳವಾಸುರರನ್ನು ಸಂಹಾರ ಮಾಡುವಲ್ಲಿ ಯಶಸ್ವಿಯಾಗುತ್ತಾನೆ. ಅಲ್ಲಿಗೆ ಭಾವನಾ ಋಷಿಯು ಸಂತೋಷಗೊಂಡು ಪರ್ವತಾಕಾರವಾಗಿ ಬಿದ್ದಿರುವ ರಾಕ್ಷಸನನ್ನು ನೋಡಿ ಇವನ ದೇಹದ ಅಂಗಾಂಗದ ಭಾಗಗಳು ಯಾವತ್ತು ಮುಂದಿನ ವಂಶದವರಿಗೆ ಮಗ್ಗ (ನೇಯ್ಗೆ/ ನೇಯುವರಿಗೆ) ಉಪಯೋಗವಾಗಲಿ ಎಂದು ಬಿದ್ದಿರುವ ಆ ರಾಕ್ಷಸನ ಶಾರೀರವನ್ನು ನೋಡಿ ಅವರ ವಕ್ಷಸ್ಥಲವನ್ನು ಬಿಗಿದು ಮಗ್ಗದ ಕುಣಿಯನ್ನಾಗಿ ಮಾಡಿ ತಲೆಯನ್ನಾಗಿ ಕಡಿದು ತಲೆ ಬರುಡೆಯ ಚಿಪ್ಪನ್ನು ನೀಲಿ ಬಣ್ಣ ಅದ್ದುದ ಬಾನಿಯನ್ನಾಗಿ, ಮಾಡಿ ಅವನ ನಾಲಿಗೆಯನ್ನು ಎರಡು ಭಾಗವಾಗಿ ಸೀಳಿ ಒಂದನ್ನು ನಾಲಿಗೂಟವನ್ನು ಮಾಡಿ, ಇನ್ನೊಂದನ್ನು ಹೊಕ್ಕಳ ಗೂಟವನ್ನಾಗಿ ಮಾಡಿ, ಅವನ ಕೆಂಡದಂತಿರುವ ಕಣ್ಣುಗಳನ್ನು ಕಿತ್ತು ಕಂಡಿಕಿ ಸುತ್ತುವ ರಾಟಿಯನ್ನಾಗಿ ಮಾಡಿ, ಅವನ ಮುಂಗೈಗಳನ್ನು ತುಂಡರಿಸಿ ಹುಂಡಿ ಹೂಡುವ ಊಡತಿಯನ್ನಾಗಿ ಜೋಡಿಸಿ ಅವನ ಉಕ್ಕಿನ ಶರೀರದಂಥಾ ಮೈಮೇಲಿರುವ ರೋಮಗಳನ್ನು ತೆಗೆದು ಹಾಕಿ ಉಂಕಿ ಹೂಡುವ ಕುಂಚಿಗೆಯನ್ನಾಗಿ ಮಾಡಿ, ಅವನ ಬೆನ್ನೆಲುಬನ್ನು ಕಿತ್ತು ನೇಯುವ ಕುಂಟಿಯನ್ನಾಗಿ ಮಾಡಿ, ಅವನ ಕಾಲಿನ ಹೆಬ್ಬೆರಳುಗಳನ್ನು ತೆಗೆದು ಮಿಣಿ ಗೂಟವನ್ನಾಗಿ ಮಾಡಿ ಅವನ ಮೊಳಕಾಲ್ಮೂಳೆಯನ್ನು ತೆಗೆದು ಚುಂಡಿಯ ಕೋಲುಗಳಾನ್ನಾಗಿ ಮಾಡಿ, ಅವನ ಕೊಬ್ಬಿದ ಕೋರೆಯ ಹಲ್ಲುಗಳನ್ನು ಕಿತ್ತು ನೇಯುವ ಲಾಳಿಯನ್ನಾಗಿ ಮಾಡಿ, ಆ ಅಸುರರ ನರನಾಡಿಗಳೆಲ್ಲವನ್ನು ತೆಗೆದು ನೇಯುವ ಸೂತ್ರವನ್ನಾಗಿ ಮಾಡಿ, ಅವನ ಕರುಳನ್ನು ತೆಗೆದು ಹಗ್ಗವನ್ನಾಗಿ ಮಾಡಿಕೊಂಡು ಈ ವಿಧದಲ್ಲಿ ನೇಯುವ ಸಲಕರಣೆಗಳನ್ನು ಮಾಡಿ ಇನ್ನು ಮುಂದೆ ಭೂಮಿಯ ಮೇಲೆ ಮುಂದಿನ ನಮ್ಮ ವಂಶದವರು ಮತ್ತು ಮಗ್ಗ ನೇಯುವವ ಯಾವತ್ತು ಈ ಅಸುರರ ಅಂಗಾಂಗಗಳ ಹೆಸರುಗಳನ್ನು ಉಚ್ಚಾರ ಮಾಡಿ ಉಪಯೋಗಿಸಲಿ ಅವರ ಇಷ್ಟಾರ್ಥ ಸಿದ್ಧಿಸಲಿ ಎಂದು ಹಾರೈಸಿದರು.

ಪದ್ಮ ಮತ್ತು ಶಾಲಾ ಎಂಬ ಎರಡು ಶಬ್ದಗಳು ಬೌದ್ಧ ಧರ್ಮಕ್ಕೆ ಸೇರಿದ ಕೊಡುಗೆಗಳಾಗಿರುವುದರಿಂದ ಇವರು ಬೌದ್ಧರೆಂದು ಕೆಲವರು ವಾದಿಸುತ್ತಾರೆ. ಹಲವು ಗೋತ್ರಗಳು ಬುದ್ಧನ ಹೆಸರಿನಲ್ಲಿರುವ ಪದ್ಮಶಾಲಿ ಸಮುದಾಯದಲ್ಲಿ ಕಂಡುಬರುತ್ತವೆ. (ಆಂಧ್ರ ಪ್ರದೇಶದ ಬುದ್ಧವಾರಿ ಪೇಟ ಎಂಬ ಊರು ಬುದ್ಧನ ಹೆಸರಿನಲ್ಲಿದ್ದು ಅಲ್ಲಿರುವರೆಲ್ಲ ಹೆಚ್ಚಿನ ಸಂಖ್ಯೆ ಪದ್ಮಶಾಲಿಯರೇ ಆಗಿರುತ್ತಾರೆ. ಅದನ್ನು ಇಂದು ಬುಧವಾರ ಪೇಟ ಎಂದು ಕರೆಯುತ್ತಾರೆ. ಇಲ್ಲಿರುವವರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಪದ್ಮಶಾಲಿಯರೆ ಆಗಿದ್ದಾರೆ.

ಪದ್ಮಶಾಲಿ ಸಮುದಾಯದವರು ಸಿಂಧೂಬಯಲಿನ ನಾಗರೀಕತೆಯಿಂದ ಬಂದವರಾಗಿರಬಹುದು. ಇವರ ಗೋತ್ರಗಳಲ್ಲಿ ಸಿಂಧೂಲ, ಚಿಂಧೂಲ, ಸಿಂಧಗಿರಿ ಎಂಬ ಗೋತ್ರಗಳು ಕಂಡುಬರುತ್ತವೆ.

ಕೆಲವು ಗೋತ್ರದವರು ಬಿಹಾರದ ಮೂಲದಿಂದ ಬಂದವರೆಂದು ಹೇಳಿಕೊಳ್ಳುತ್ತಾರೆ. ಉದಾಹರಣೆಗೆ ವರ್ಣಾಲ, ವನ್ನಾಲ, ಹೊನ್ನಾಳಿ ಎಂಬ ಗೋತ್ರಗಳು ಬಿಹಾರದಿಂದ ಬಂದವರು ಎಂದು ಹೇಳಿಕೊಳ್ಳುತ್ತಾ ಕಾಲಾನುಕ್ರಮವಾಗಿ ಶೈವ, ವೈಷ್ಣವ, ಸಂಪ್ರದಾಯಕ್ಕನುಗುಣವಾಗಿ ಮಾರ್ಪಾಡಾಗಿದ್ದು ಶೈವ ಪಂಥದವರು ತಮಿಳುನಾಡಿನಲ್ಲಿ ನಾಯನಾರರು ಎಂದು ವೈಷ್ಣವ ಪಂಥದವರನ್ನು ಆಳ್ವಾರರೆಂದು ಕರೆಯಲ್ಪಡುತ್ತಾರೆ. ಇವರೆಲ್ಲಾ ಆಚಾರ-ವಿಚಾರ ಗೋತ್ರಗಳನ್ನು ಅವಲೋಕಿಸಿದರೆ ಇವರು ಆ ಭಾಗದವರಲ್ಲವೆಂದೂ ಸಿಂಧೂ ಬಯಲಿನ ನಾಗರಿಕತೆಯಿಂದ ಬಂದವರೆಂದು ತಿಳಿಯಬಹುದು.

ಪದ್ಮಶಾಲಿ ಎಂಬುದು ನೇಕಾರ ಸಮುದಾಯದಲ್ಲಿ ಬರುವ ಒಂದು ಸಮುದಾಯ. ಕುಲಕಸುಬಿನಿಂದ ನೇಕಾರರೆಂದು ಗುರುತಿಸಲ್ಪಡುವ ಸಮುದಾಯಗಳೆಂದರೆ ದೇವಾಂಗ, ಪದ್ಮಶಾಲಿ, ಕುರುಹಿನಶೆಟ್ಟಿ, ಪಟ್ಟಸಾಲಿ, ಸ್ವಕುಳಸಾಲಿ ಮತ್ತು ತೊಗಟ್ಟೆ ವೀರ ಸಮುದಾಯಗಳು ಪ್ರಮುಖವಾದವು.

೧೯೪೪ರಲ್ಲಿ ಮಹಾರಾಷ್ಟ್ರದ ಸೊಲ್ಲಾಪುರದಲ್ಲಿ ಅಖಿಲ ಭಾರತ ಪದ್ಮಶಾಲಿ ಸಮುದಾಯದ ಸಮಾವೇಶ ನಡೆದಾಗ ಹಾಗೂ ಬೇರೆ ಬೇರೆ ಕಡೆ ಈ ಸಮುದಾಯದವರ ಅಧಿವೇಶನಗಳು, ಸಮಾವೇಶ ನಡೆಸಿದಾಗ ತೆಲಗು ಭಾಷೆಯಲ್ಲಿ ನಡೆಸಲಾಗಿದೆ. ಎಂಬುದು ಬಹುತೇಕವಾಗಿ ಇವರು ಆಂಧ್ರದ ಮೂಲದವರು ಎಂಬುದನ್ನು ದೃಢಪಡಿಸುತ್ತವೆ. ಅಲ್ಲದೆ ಪದ್ಮಸಾಲಿ ಸಮುದಾಯದವರು ಅಧಿಕವಾಗಿ ಆಂಧ್ರದಲ್ಲಿ ಅಖಿಲ ಭಾರತ ಪದ್ಮಶಾಲಿ ಸಮುದಾಯದ ಪ್ರಧಾನ ಕಛೇರಿ ಹೈದರಾಬಾದಿನಲ್ಲಿ[೮] ಇರುವುದನ್ನು ಗಮನಿಸಬಹುದು.

ತಿರುಪತಿ ವೆಂಟಕರಮಣನ ಪತ್ನಿ ಪದ್ಮಾವತಿ, ಪದ್ಮಶಾಲಿ ಸಮುದಾಯದ ಮನೆತನದವಳೆಂಬ ಭಾವನೆಯಿದೆ. ತಿರುಪತಿಯಲ್ಲಿ ಪದ್ಮಾವತಿಯನ್ನು ಧಾರೆ ಎರೆಯುವುದು ಮುಂತಾದ ಆಚರಣೆಗಳನ್ನು ಈ ಸಮುದಾಯದವರು ಮಾಡುತ್ತಾ ಬಂದಿದ್ದಾರೆ. ಮಾರ್ಕಂಡೇಯನ ವಂಶಸ್ಥರೆಂದು ಹೇಳಿಕೊಳ್ಳುವ ಪದ್ಮಶಾಲಿಗಳು ಎಲ್ಲೆಲ್ಲಿ ನೆಲೆಸಿದ್ದಾರೋ ಅಲ್ಲೆಲ್ಲಾ ಶ್ರೀ ಮಾರ್ಕಂಡೇಯನ ದೇವಸ್ಥಾನ ನಿರ್ಮಿಸಿಕೊಂಡು ಕುಲದೈವವೆಂದು ಪೂಜಿಸುತ್ತಾರೆ. ಪದ್ಮಶಾಲಿ ಸಮುದಾಯದವರು ದಕ್ಷಿಣ ಕರ್ನಾಟಕದ ಉಡುಪಿ, ಮಂಗಳೂರು ಜಿಲ್ಲೆಗಳಲ್ಲಿ ಅಧಿಕ ಸಂಖ್ಯೆಯಲ್ಲಿದ್ದು ಅವರನ್ನು ಶೆಟ್ಟಿಗಾರರೆಂದು ಕರೆಯಲಾಗುತ್ತದೆ.

ನೇಕಾರರು ಬ್ರಾಹ್ಮಣರಿಗೆ ನಾವೂ ಸಮಾನರು ಎಂದು ಪದ್ಮಶಾಲಿಯವರು ಹೇಳುತ್ತಾರೆ. ಇವರಲ್ಲಿ ಲಿಂಗಧಾರಣೆ ಕಂಡುಬರುವುದಿಲ್ಲ. ಜನಿವಾರಧಾರಣೆ ಇದೆ. ಪದ್ಮಬ್ರಾಹ್ಮರು ಎಂಬುದಾಗಿಯೂ ಹೇಳುತ್ತಾರೆ. ಹಲವು ಭಾಗಗಳಲ್ಲಿ ಪದ್ಮಶಾಲಿ ಸಮುದಾಯದವರು ವಿವಾಹ, ಮಂಗಳ ಕಾರ್ಯಗಳಲ್ಲಿ ವೀಳ್ಯೆಶಾಸ್ತ್ರ ಮಾಡುವ ಸಂದರ್ಭದಲ್ಲಿ ಲಿಂಗ ಮತ್ತು ಜನಿವಾರ ತೊಡಿಸಿ ಶಾಸ್ತ್ರ ನಡೆಸುವುದು ಕಂಡುಬರುತ್ತದೆ.

ವಸ್ತ್ರಗಳ ಉದ್ಯಮದ ಇತಿಹಾಸದಲ್ಲೇ ಅತ್ಯಂತ ಸೂಕ್ಷ್ಮವಾದ ಕೆಲಸ ನೂಲಿನಿಂದ ನವುರಾದ ಬಟ್ಟೆಯನ್ನು ನೇಯುವುದು. ಈ ಕಸುಬಿಗೆ ತನ್ನದೆ ಆದ ಇತಿಹಾಸವಿದೆ. ಸಾವಿರಾರು ವರ್ಷಗಳ ಹಿಂದೆ ನೇಯ್ದ ಬಟ್ಟೆಗಳು ಇಂದಿಗೂ ಉತ್ಕೃಷ್ಟವಾಗಿವೆ. ಅದು ನಯವಾದ ನೇಯ್ಗೆಯ ತಂತ್ರಜ್ಞಾನವನ್ನು ತೋರಿಸುತ್ತದೆ. ಅಂದಿನ ವಸ್ತ್ರಗಳನ್ನು ನಾವು ವರ್ಣಚಿತ್ರಗಳಲ್ಲಿ ಗಮನಿಸಬಹುದು. ಇಂದಿಗೂ ಅವು ಭಿತ್ತಿಗಳ ಮೇಲೆ ಚಿತ್ರಿತವಾಗಿವೆ. ನೇಕಾರರು ಪ್ರಾಚೀನ ಕಾಲದ ಈಜಿಪ್ಟ್‌ನಲ್ಲಿ ಬಟ್ಟೆ ಉದ್ಯಮದ

ಇತಿಹಾಸದಲ್ಲಿ ಅತ್ಯಂತ ಸೂಕ್ಷ್ಮವಾದ ನೂಲಿನಿಂದ ನವುರು ಬಟ್ಟೆಗಳನ್ನು ನೇಯುತ್ತಿದ್ದರು. ನಾಲ್ಕು ಸಾವಿರ ವರ್ಷಗಳ ಹಿಂದೆ ನೇಯ್ದ ಮಾದರಿಗಳು ಕಾಲದ ಸವೆತ ಉಂಟಾಗಿದ್ದರೂ ಇಂದಿಗೂ ಎಷ್ಟು ಉತ್ಕೃಷ್ಟ ಹಾಗೂ ನಯವಾದ ನೇಯ್ಗೆಯನ್ನ ತೋರಿಸುತ್ತವೆ ಎಂದರೆ ರೇಷ್ಮೆಯಿಂದ ಅದರ ವ್ಯತ್ಯಾಸವನ್ನು ಕಂಡುಹಿಡಿಯಲು ಭೂತಕನ್ನಡಿ ಬೇಕಾಗುತ್ತದೆ. ಪ್ರಾಚೀನ ಈಜಿಪ್ಟ್‌ನ ಕೈಮಗ್ಗದ ಈ ವಸ್ತ್ರಕ್ಕೆ ಹೋಲಿಸಿದರೆ ಆಧುನಿಕ ಯಾಂತ್ರಿಕ ಮಗ್ಗದ ಅತ್ಯುತ್ತಮ ಬಟ್ಟೆಯೂ ಒರಟಾಗಿ ಕಾಣುತ್ತದೆ.[೯] ಕ್ರಿಪೂ. ೨೫೦೦–೧೩೦೦ರವರೆಗಿನ ಸಿಂಧೂ ಸಂಸ್ಕೃತಿಯ ಜನ ನೂಲುವ, ನೇಯುವ ಮತ್ತು ಹೊಲೆಯುವ ಕಲೆಯನ್ನು ಬಲ್ಲವರಾಗಿದ್ದರು ಈ ಸಂಗತಿಯು ಆ ನೀವೇಶನಗಳಲ್ಲಿ ದೊರೆತ ಕದಿರು ಮತ್ತು ಕಂಚಿನ ಸೂಜಿಗಳಿಂದ ಗೊತ್ತಾಗುತ್ತದೆ.

ಪಾಣಿನಿಯ ತನ್ನ ಕೃತಿಯಲ್ಲಿ ಅರಳೆ (ಕಾಟನ್)ಯ ಉಲ್ಲೇಖಿಸಿದ್ದಾನೆ. ಗ್ರೀಕ್ ಇತಿಹಾಸಕಾರ ಹೆರೊಡೊಟಸ್‌ನು ಭಾರತೀಯ ಯೋಧರು, ಯುದ್ಧ ಸಮಯದಲ್ಲಿ ಅರಳೆ ಬಟ್ಟೆ ದರಿಸುತ್ತಿದ್ದುದನ್ನು ಹೇಳುತ್ತಾನೆ. ಹಾಗೆ ವಿಜಯನಗರ ಸಾಮ್ರಾಜ್ಯದಲ್ಲಿ, ಯುದ್ಧ ಸಮಯದಲ್ಲಿ ಸೈನಿಕರಿಗೆ ಹರಳೆಯಿಂದ ನೇಯ್ದಿರುವ ಬಟ್ಟೆ ಬೇಕಾಗಿತ್ತು ಎಂದು ವಿದೇಶಿ ಪ್ರವಾಸಿಗರ ವರದಿಯಿಂದ ತಿಳಿಯುತ್ತದೆ. ನೇಕಾರರು ಎಷ್ಟು ಜ್ಞಾನವನ್ನು ಹೊಂದಿದ್ದರು ಎಂದರೆ ಅವರು ಹತ್ತಿಯಿಂದ ತುಂಬಾ ಉತ್ಕೃಷ್ಟವಾಗಿ ನೇಯ್ದಿರುವುದು ತಿಳಿಯುತ್ತದೆ. ಕೌಟಲ್ಯನ ಅರ್ಥಶಾಸ್ತ್ರದಲ್ಲಿ ನೇಯ್ಗೆ ಉದ್ಯಮದ ಪ್ರಸ್ತಾಪವಿದೆ. ಮೆಗಾಸ್ತನಿಸನು ಭಾರತೀಯರು ಧರಿಸುತ್ತಿದ್ದ ಹೂ ನಕ್ಷೆಯ ಮಕಮಲ್ಲಿನ ಉಡುಗೆಗಳ ಬಗ್ಗೆ ಹೇಳುತ್ತಾನೆ. ಚಂದ್ರಗುಪ್ತನ ಕಾಲದಲ್ಲಿ ಉಣ್ಣೆ, ರೇಷ್ಮೆ, ಜಿಂಕೆ, ನವಿರು, ಗಿಡದ ತೊಗಟೆ, ಗಿಡದ ನಾರು ಮುಂತಾದವುಗಳ ನೂಲನ್ನು ಬಳಸಿ ಬಟ್ಟೆ ತಯಾರಿಸುತ್ತಿದ್ದುದನ್ನು ಹಾಗೂ ಉದ್ಯಮದ ಪರಿಶೀಲನೆಗಾಗಿ ಮೇಲ್ವಿಚಾರಕರಿರುತ್ತಿದ್ದು[೧೦] ತಿಳಿದುಬರುತ್ತದೆ.

ನೇಕಾರರು ಶ್ರೇಣಿಗಳನ್ನು ಸ್ಥಾಪಿಸಿಕೊಂಡಿದ್ದರು. ಗುಪ್ತರ ಕಾಲದ ಮಂದರಸನ ಶಾಸನದಿಂದ ಇಂತಹ ಶ್ರೇಣಿಗಳಿಗೆ ಎಷ್ಟು ಸ್ವಾತಂತ್ರ್ಯವಿದ್ದಿತು. ಎಂದು ತಿಳಿಯುವುದು ಶ್ರೇಣಿಯು ಮೊದಲು ಲಾಟದೇಶದಲ್ಲಿದ್ದು ಅಲ್ಲಿನ ಅರಸನಿಂದ ಆಹ್ವಾನಹೊಂದಿ ದಶಪುರದಲ್ಲಿ ನೆಲೆಸಿತು. ಈ ಶ್ರೇಣಿಯ ಸದಸ್ಯರು ನೇಕಾರಿಕೆ ಭೂತಗತ, ಕಾವ್ಯ, ನಾಟಕ, ಅಲಂಕಾರ, ಧನುರ್ವಿದ್ಯಾ, ಗಾಂಧರ್ವವಿದ್ಯಾ ಮುಂತಾದವುಗಳಲ್ಲಿ ಪರಿಣಿತರಾಗಿದ್ದರು. ದಶಪುರದಲ್ಲಿ ವಾಪೀ, ಕೂಪ, ತಟಾಕ, ಆರಾಮ, ಸೂರ್ಯದೇವಾಲಯಗಳನ್ನು ಸ್ಥಾಪಿಸಿದರು. ಚೋಳ, ಚಾಳುಕ್ಯ, ಹೊಯ್ಸಳ, ವಿಜಯನಗರ ಸಾಮ್ರಾಜ್ಯಗಳಲ್ಲಿಯೂ ಇಂತಹ ಸಂಘಗಳು, ಪ್ರಬಲವಾಗಿದ್ದವು. ಅಂದು ಕಾಶ್ಮೀರ, ಡಾಕಾ, ಮಸ್ಲಿನ್, ಮಧುರೈ, ತಕ್ಷಶಿಲಾ ಮುಂತಾದ ಪಟ್ಟಣಗಳು ವಿದೇಶಗಳಲ್ಲಿ ಬಟ್ಟೆಗಳಿಗೆ ಪ್ರಸಿದ್ಧಿ ಹೊಂದಿದ್ದವು ಅಂದು ನೇಕಾರಿಕೆ ಕೈಗಾರಿಕೆಗಳು ಉನ್ನತ ಸ್ಥಿತಿಯಲ್ಲಿದ್ದವು.

ನೇಕಾರರು ತಮ್ಮದೆ ಆದ ತಂತ್ರಜ್ಞಾನದಿಂದ ಬಟ್ಟೆಯನ್ನು ನೇಯುತ್ತಿದ್ದರು. ಹತ್ತಿಯಿಂದ ರಾಟೆಯಲ್ಲಿ ನೂಲು ತೆಗೆಯುತ್ತಿದ್ದರು. ಈ ರೀತಿ ನೂಲು ತೆಗಯುವವರನ್ನು ಕದಿರ ಕಾಯಕದವರನ್ನುತ್ತಿದ್ದರು. ಕದಿರ ರೆಮ್ಮವ್ವೆಯೆಂಬ ವಚನಕಾರ್ತಿಯು ಈ ಕಾಯಕದವಳಾಗಿದ್ದಳು. ರಮ್ಮವ್ವೆಯ ಕುರಿತಾದ ಒಂದು ವಚನ ಹೀಗಿದೆ.

ನಾ ತಿರುಹುವ ರಾಟಿಯ ಕುಲಜಾತಿಯ ಕೇಳಿರಣ್ಣ
ಅಡಿಯ ಹಲಗೆ ಬ್ರಹ್ಮ ತೋರಣ ವಿಷ್ಣು
ನಿಂದ ಬೊಂಬೆ ಮಹಾರುದ್ರ
ರುದ್ರನ ಬೆಂಬಳಿಯವೆರಡು ಸೂತ್ರಕರ್ಣ
ಅರಿವೆಂಬ ಕದಿರು, ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿ
ಸುತ್ತಿತ್ತು ನೂಲ ಕದಿರು ತುಂಬಿತು
ರಾಟಿಯ ತಿರುಹಲಾಲೆ□ಎನ್ನ ಗಂಡ ಕುಟ್ಟಿಹ
ಇನ್ನೇವ ಕದಿರಮ್ಮಿಯೊಡೆಯ ಗುಹೇಶ್ವರಾ?[೧೧]

ಈ ವಚನವು ರಾಟಿಯ ವಿವಿಧ ಭಾಗಗಳಾದ ಅಡಿಯ ಹಲಗೆ, ತೋರಣ ಬೊಂಬೆ, ಸೂತ್ರಕರ್ಣ ಮತ್ತು ಕದಿರುಗಳನ್ನು ಪರಿಚಯಿಸುತ್ತದೆ. ರಾಟಿಯನ್ನು ಕೈಯಲ್ಲಿ ಹಿಡಿದು ತಿರುಗಿಸುತ್ತಾ ನೂಲು ತೆಗೆಯುತ್ತಿದ್ದರು ಕರಟದ ಕದಿರಂತೆ ತಿರುಗದೆ[೧೨] ತೆಗೆದ ನೂಲು ಕದಿರಿನಲ್ಲಿ ಸುತ್ತಿಕೊಳ್ಳುತ್ತಿತ್ತು. ಕದಿರ ಮಹತ್ವನ್ನು ಕದಿರು ಮುರಿಯೇ ಏನೂ ಇಲ್ಲ ಎಂದು ಕದಿರ ಕಾಯಕಾದ ಕಾಳವ್ವೆಯು[೧೩] ಹೇಳುತ್ತಾಳೆ.

ನೂಲು ತೆಗೆಯಲು ಬಿಡಿಸಿ ಸ್ವಚ್ಚ ಮಾಡಿದ ಹತ್ತಿಯನ್ನು ಉಪಯೋಗಿಸುತ್ತಿದ್ದರು. ನೂತ ನೂಲನ್ನು ನೇಕಾರರಿಗೆ ಮಾರುತ್ತಿದ್ದರು. ಅದರಿಂದ ಅವರ ವಿವಿಧ ವಿನ್ಯಾಸದ ಬಟ್ಟೆಗಳನ್ನು ಮಗ್ಗಗಳ ಮೂಲಕ ತಯಾರು ಮಾಡುತ್ತಿದ್ದರು. ನೂಲಿನಿಂದ ಬಟ್ಟೆ ಮಾಡುವವರು ನೇಕಾರರು, ಜಾಡರು, ಬಹುಶಃ ಇವರು ಹತ್ತಿ ಬಟ್ಟೆಗಳನ್ನು ನೇಯುವವರಾಗಿದ್ದರು.

ನೂಲನ್ನ ಹೇಗೆ ಹದಗೊಳಿಸುತ್ತಿದ್ದರು ಎಂದರೆ ಅದನ್ನು ಗಂಜಿಯಲ್ಲಿ ಅದ್ದಿ ಹಾಸುಮಣಿ ಎಂಬ ಮರದ ಚೌಕಟ್ಟಿಗೆ ಕಟ್ಟುತ್ತಿದ್ದರು. ಹೀಗೆ ಕಟ್ಟಿದ ನೂಲನ್ನು ಹುರಿಗೊಳಿಸುವುದಕ್ಕಾಗಿ ತಿರುಗಿಸುತ್ತಿದ್ದರು. ಇದನ್ನೇ ವಚನಗಳಲ್ಲಿ ಹಾಸುನಿಕು[೧೪] ಎಂದು ಕರೆದಿರುವುದು ಬಟ್ಟೆಯನ್ನು ನೇಯಲು ನೂಲನ್ನು ಉದ್ದುದ್ದವಾಗಿ ಕಟ್ಟುತ್ತಿದ್ದರು. ಈ ರೀತಿ ಕಟ್ಟಿದ ನೂಲಿನ ಹಾಸನ್ನು ಉಂಕಿ[೧೫] ಎಂದು ಕರೆಯುತ್ತಿದ್ದರು. ಹೀಗೆ ಉಂಕೆಯನ್ನು ಮಾಡುವಾಗ ಅದನ್ನು ಶುಭ್ರಗೊಳಿಸುವುದಕ್ಕೆ ಕುಂಚಿ[೧೬]ಗೆಯನ್ನು ಬಳಸುತ್ತಿದ್ದರು. ಮಗ್ಗದ ಹಾಸಿನ ಮೇಲೆ ಯಾವ ಬಟ್ಟೆಗಳಿಗೆ ಎಷ್ಟು ನೂಲು ಕಟ್ಟಬೇಕು ಅಂದರೆ ಸೀರೆಗೆ ಅನುಗುಣವಾಗಿ ಕಟ್ಟುತ್ತಿದ್ದರು. ಅದನ್ನು ಅಣಿ[೧೭] ಎಂದು ಕರೆಯುತ್ತಾರೆ ಇವುಗಳನ್ನು ಮಗ್ಗದ ಮೇಲೆ ಮತ್ತು ಕೆಳಗೆ ಬೀಡಿಸಿ ಕಟ್ಟುತ್ತಿದ್ದರು ಅದನ್ನು ಅಣಿಕಟ್ಟು ಎನ್ನುವರು. ಉದ್ದುದ್ದವಾಗಿರುವ ನೂಲನ್ನು ಹಾಸು ಎಂದು ಅಡ್ಡಡ್ಡವಾಗಿರುವ ನೂಲನ್ನು ಹೊಕ್ಕು[೧೮] ಎಂದು ಈಗಿನ ಹೆಸರಿನಿಂದಲೇ ಆಗಲೂ ಕರೆಯುತ್ತಿದ್ದರು.

ಈ ಎರಡೂ ನೂಲುಗಳು ಸೇರಿ ಸೀರೆಯಾಗುತ್ತಿತ್ತು. ಇದನ್ನು ನಯಸೇನ ಪಾಸು ಪೊಕ್ಕಂ ಬೆರೆಸು ಸೀರೆಯಂತು ಎಂದು ಉಲ್ಲೇಖಿಸುತ್ತಾನೆ.[೧೯] ಹೀಗೆ ಮೇಲಿನ ಮತ್ತು ಕೆಳಗಿನ ನೂಲುಗಳನ್ನು ಸೇರಿಸಲು ನೇಕಾರನು ಹಿಡಿಯುವ ಉಪಕರಣ ಲಾಳಿ[೨೦] ಈ ಲಾಳಿಯಲ್ಲಿ ಸೇರಿಸಲು ಹಾಕುತ್ತಿದ್ದ ನೂಲಿನ ಉಂಡೆಯನ್ನು ಕಂಡಿಕೆ ಎನ್ನುವರು.[೨೧] ಕಂಡಿಕೆಯನ್ನು ಸೇರಿಸುವುದಕ್ಕಾಗಿ ಉಪಯೋಗಿಸುತ್ತಿದ್ದ ಕೊಕ್ಕೆಯನ್ನು ಮುಳ್ಳು ಅಥವಾ ಕಂಡಿಕೆಯ ಮುಳ್ಳು[೨೨] ಎನ್ನುವರು. ಹೀಗೆ ನೇಕಾರನು ಮಗ್ಗದಲ್ಲಿ

ಕುಳಿತು ನೂಲನ್ನು ಕೆಳಗೆ ಮತ್ತು ಮೇಲೆ ಕಟ್ಟಿಕೊಂಡು ಒಂದು ಕೈಯಲ್ಲಿ ಮಗ್ಗ ಮತ್ತೊಂದು ಕೈಯಲ್ಲಿ ಲಾಳಿಯನ್ನು ಹಿಡಿದು ಕೈ, ಕಾಲು, ಕಣ್ಣುಗಳನ್ನು ಮಗ್ಗದ ಮೇಲೆ ಗಮನವಿಟ್ಟು ಅತಿಸೂಕ್ಷ್ಮವಾಗಿ ನೇಯುತ್ತಿದ್ದರು. ಬಟ್ಟೆಗಳನ್ನು ನೇಯಲು ತಮ್ಮದೆ ಆದ ಒಂದು ತಂತ್ರಜ್ಞಾನವನ್ನು ಅವರು ಅಳವಡಿಸಿಕೊಂಡಿದ್ದರು. ಈ ಜ್ಞಾನವನ್ನು ಅವರು ತಮ್ಮ ಮಕ್ಕಳಿಗೆ ಕಲಿಸುತ್ತಿದ್ದರು. ಅದೇ ಕಸುಬು ಕುಲಾಂತರವಾಗಿ ಬರುತ್ತಿತ್ತು. ಅಂದು ಸಾಮಾನ್ಯವಾಗಿ ಈ ಜ್ಞಾನವನ್ನು ಬೇರೆಯವರಿಗೆ ಕಲಿಸುತ್ತಿರಲಿಲ್ಲ. ತಮ್ಮ ಕುಟುಂಬದ ಸದಸ್ಯರಿಗೆ ಕಲಿಸುತ್ತಿದ್ದರು. ವಿವಿಧ ಬಣ್ಣದ ಸೀರೆಗಳನ್ನು ನೇಯುತ್ತಿದ್ದರು. ಅವರು ನೂಲಿಗೆ ಬಣ್ಣವನ್ನು ಹಾಕುವ ತಮ್ಮದೆ ಆದ ತಂತ್ರಜ್ಞಾನ ಅಳವಡಿಸಿಕೊಂಡಿದ್ದರು. ಬಟ್ಟೆಗಳಿಗೆ ಬಣ್ಣಗಳನ್ನು ಹಾಕುತ್ತಿದ್ದ[೨೩] ಸೂಚನೆಯು ಒಂದು ವಚನದಲ್ಲಿದೆ. ಅಂದು ರೇಷ್ಮೆ ವಸ್ತ್ರಗಳನ್ನು ತಯಾರಿಸುತ್ತಿದ್ದರು ಎಂದು ನಮಗೆ ಸಾಹಿತ್ಯಕೃತಿ, ಶಾಸನಗಳಲ್ಲಿ ದಾಖಲೆ ದೊರೆಯುತ್ತದೆ. ಅನೇಕ ಶಾಸನಗಳು ಪಟ್ಟಸಾಲಿಗರನ್ನು ಉಲ್ಲೇಖಿಸುವುದರಿಂದ ಪ್ರತ್ಯೇಕವಾಗಿ ಅಂದು ರೇಷ್ಮೆ ವಸ್ತ್ರವನ್ನು ತಯಾರಿಸುತ್ತಿದ್ದ ನೇಕಾರರಿರಬಹುದು. ಹೀಗೆ ರೇಷ್ಮೆ ಮತ್ತು ಹತ್ತಿಯಿಂದ ವಸ್ತ್ರಗಳನ್ನು ತಯಾರಿಸುತ್ತಿದ್ದರು. ಹತ್ತಿ ಬಟ್ಟೆಗಳಲ್ಲಿ ಚೆಂದಕ್ಕಾಗಿ ಸರಿಗೆಯನ್ನು[೨೪] ಅಂದು ದೇವಾಂಗ ಎಂಬ ವಸ್ತ್ರವನ್ನು ಮಾಡುತ್ತಿದ್ದರು. ಇದು ರೇಷ್ಮೆ ಬಟ್ಟೆಯನ್ನು[೨೫] ಸೂಚಿಸುತ್ತದೆ. ಈ ರೀತಿ ವಿವಿಧ ಬಣ್ಣದ ವಸ್ತ್ರಗಳಿಗೆ ಪ್ರತ್ಯೇಕ ಬಣ್ಣದೆರೆ[೨೬] ಎಂಬ ತೆರಿಗೆಯಿತ್ತು. ಹೀಗೆ ನೇಕಾರರು ತಮ್ಮದೇ ಆದ ಶೈಲಿಯಲ್ಲಿ ವಿವಿಧ ಬಣ್ಣದ ವಸ್ತ್ರಗಳನ್ನು ತಯಾರು ಮಾಡಿ ಅರಸರಿಗೆ ಶ್ರೀಮಂತ ವರ್ಗದವರಿಗೆ ಕೊಡುತ್ತಿದ್ದರು.

ಪ್ರಾಚೀನ ಕಾಲದಿಂದಲೂ ಭಾರತ ತುಂಬಾ ನವುರಾದ ವಸ್ತ್ರಗಳನ್ನು ತಯಾರಿಸುವುದರಲ್ಲಿ ನೈಪುಣ್ಯತೆಯನ್ನು ಪಡೆದಿತ್ತು. ಈ ಉಲ್ಲೇಖಗಳು ನಮಗೆ ಸಾಹಿತ್ಯ ಕೃತಿಗಳಲ್ಲಿ ದೊರೆಯುತ್ತದೆ. ಹರಿಹರನು ತನ್ನ ಕಾಲದ ಹಲವಾರು ಪ್ರಭೇದಗಳನ್ನು ತನ್ನ ಕೃತಿಗಳಲ್ಲಿ ಹೆಸರಿಸುತ್ತಾನೆ. ಮಹಾಚೀನಿ, ಲತಾವಳಿ, ಪುಷ್ಪಾವಳಿ, ನೇತ್ರಾವಳಿ, ಗಜಾವಳಿ, ಸಿಂಹಾವಳಿ, ಚಿತ್ರಾವಳಿ, ಸುರಾವಳಿ, ಹಂಸಾವಳಿ, ಪಟ್ಟಾವಳಿ[೨೭] ಇತ್ಯಾದಿ ವಚನಗಳಲ್ಲಿ ಬಟ್ಟೆಗಳ ಬಗೆಗಾಗಲಿ ಉಡುಪುಗಳ ಉತ್ಪನ್ನಗಳಾಗಲಿ ಹೆಚ್ಚಿನ ಮಾಹಿತಿ ದೊರೆಯುವುದು ಆದರೂ ಅಲ್ಲಿಲ್ಲಿ ಸ್ತ್ರೀಯರು ಪುರುಷರು, ಮಕ್ಕಳು ತೊಡುವ ಉಡುಪುಗಳ ಮಾಹಿತಿ ದೊರೆಯುತ್ತದೆ. ಹೊಲಿಯದಿದ್ದ ಬಟ್ಟೆಗೆ ಸೀರೆ (<ಸಂ.ಚೇರೆ) ಎಂದು ಹೆಸರು. ಮಹಿಳೆಯರು ಉಡುವ ವಸ್ತ್ರವೆಂಬುದಕ್ಕೆ ಈ ಪದದ ಅರ್ಥ ಆಗಿನ್ನೂ ಸಂಕುಚಿತವಾಗಿರಲಿಲ್ಲ. ಈಗಿನ ಸೀರೆಗೆ ಆಗ ಬಣ್ಣ[೨೮] ಎನ್ನುತ್ತಿದ್ದರು ಅಂದು ನೇಕಾರರು ನೂಲಿನಿಂದ ವಸ್ತ್ರಗಳನ್ನು ತಯಾರಿಸುತ್ತಿದ್ದರು ಅವುಗಳಿಗೆ ಕರೆಗಳಿದ್ದು ಅವುಗಳನ್ನು ಕೊಯ್ದು ಜನರು ಉಡುತ್ತಿದ್ದುದನ್ನು[೨೯] ನಯಸೇನಾ ತನ್ನ ಧರ್ಮಾಮೃತ ಕೃತಿಯಲ್ಲಿ ಹೇಳುತ್ತಾನೆ.

ಅಂದು ಬಾಲಕಿಯರು ತೊಡುತ್ತಿದ್ದ ಉಡುಪಿಗೆ, ಕಿರುಗೆ[೩೦] ಎಂಬ ಹೆಸರಿನಿಂದ ಕರೆಯುತ್ತಿದ್ದರು ಕುಪ್ಪಸ (ಕೂರ್ಪಾಸ)ದ ಒಂದು ಹೆಸರು ವಚನದಲ್ಲಿದೆ. ಇದು ಸ್ತ್ರಿ- ಪುರುಷರಿಬ್ಬರೂ ತೊಡುತ್ತಿದ್ದ ವಸ್ತ್ರ[೩೧] ಪಂಪ, ಹರಿಹರರು ಕುಪ್ಪಸವನ್ನು[೩೨] ಹೆಸರಿಸುತ್ತಾರೆ. ಗಂಡಸು ಧರಿಸುತ್ತಿದ್ದ ಚಲ್ಲಣದ[೩೩] ಉಲ್ಲೇಖವೂ ವಚನಗಳಲ್ಲಿದ. ಜಂಗಮರು, ವಿರಕ್ತರು ಕಾವಿಯನ್ನುಡುತ್ತಿದ್ದರು ಕೇಶ ಕಾಷಾಯಾಂಬರ ವೇಷ ಲಾಂಛನವದ ಡೋನೂ[೩೪] ಹರಿದ ವಸ್ತ್ರಗಳನ್ನು ಸೇರಿಸಿ ದಪ್ಪಗೆ ಹೊಲಿದುದನ್ನ ಜೊಂತೆ ಎನ್ನುತ್ತಿದ್ದರು.[೩೫] ಹೀಗೆ ನೇಕಾರಿಕೆಯ ಕಸುಬು ನೂಲುವ ನೇಯುವ ಒಂದು ಬಹು ಪ್ರಮುಖ ಕಸುಬಾಗಿ ಬೆಳೆದುಬಂದಿತು.

ನೇಕಾರ ನೇಯ್ದ ಬಟ್ಟೆಗಳನ್ನು ವಿಜಯನಗರ ಕಾಲದ ಶಿಲ್ಪಗಳ ಮೂಲಕವು ಗುರುತಿಸಬಹುದು. ಅಂದಿನ ಶಿಲ್ಪಗಳಲ್ಲಿ ಸ್ತ್ರಿ-ಪುರುಷರು ಯಾವ ರೀತಿಯ ಉಡುಪುಗಳನ್ನು ಧರಿಸುತ್ತಿದ್ದರು ಎಂಬುದನ್ನು ಗಮನಿಸಬಹುದು. ಹಜಾರರಾಮಸ್ವಾಮಿ, ವಿರೂಪಾಕ್ಷ, ವಿಜಯ ವಿಠ್ಠಲ, ಲೇಪಾಕ್ಷಿ, ಕಂಚಿ ದೇವಾಲಯ, ಮಹಾನವಮಿ ದಿಬ್ಬ, ಹೀಗೆ ವಿಜಯನಗರ ಸಾಮ್ರಾಜ್ಯ ಎಲ್ಲೆಲ್ಲಿ ಆಳ್ವಿಕೆ ಮಾಡಿತು ಅಲ್ಲಿ ಅನೇಕ ದೇವಸ್ಥಾನ, ಕೋಟೆ ಕೊತ್ತಲಗಳನ್ನು ನಿರ್ಮಿಸಿದ್ದಾರೆ. ಅದರಲ್ಲಿ ಅನೇಕ ಉಬ್ಬು ಕೆತ್ತನೆಗಳಿವೆ. ಆ ಕೆತ್ತನೆಗಳಲ್ಲಿ ಉಡುಪುಗಳನ್ನು ಗಮನಿಸಿದರೆ ನೇಕಾರರು ಯಾವ ರೀತಿಯ ವಸ್ತ್ರಗಳನ್ನು ನೇಯುತ್ತಿದ್ದರು ಎಂದು ತಿಳಿಯುತ್ತದೆ.

ಅಂದು ಕೃಷಿ ನಂತರ ಜೀವನಾಧಾರ ಎನಿಸಿರುವ ಕಸುಬು ಎಂದರೆ ನೇಕಾರಿಕೆ. ಇದು ಶ್ರಮದಾಯಕ ಕಸುಬು ಮಗ್ಗದ ಮೇಲೆ ಕುಳಿತ ಸ್ತ್ರಿ-ಅಥವಾ ಪುರುಷ ಒಂದೇ ಕಾಲದಲ್ಲಿ ಕಣ್ಣು ಕಾಲು ಕೈಗಳನ್ನು ಉಪಯೋಗಿಸಬೇಕಾಗುತ್ತದೆ. ಕಣ್ಣಿನ ದೃಷ್ಟಿ ನೂಲಿನ ಮೇಲೆ ಇರಬೇಕು. ನೂಲು ಸರಿಯಾಗಿ ಒಂದಕ್ಕೊಂದು ಸೇರ್ಪಡೆಯಾಗುತ್ತಿವೆಯೇ ಇಲ್ಲವೆ ಎಂದು ಗಮನಿಸುತ್ತಿರಬೇಕು. ನೂಲಿನ ಎಳೆಗಳು ಆಗಾಗ ತುಂಡಾಗುತ್ತಿರುತ್ತವೆ. ಕಾಲುಗಳ ಕೆಳಗೆ ಜೊಡಿಸಿರುವ ಅಣಿಯನ್ನು ತುಳಿಯುತ್ತಿರಬೇಕು. ಕೈಗಳಲ್ಲಿ ಲಾಳಿ ಹಿಡಿದು ನೇಯುತ್ತಿರಬೇಕು. ಹೀಗೆ ಪ್ರಾರಂಭವಾದ ನೇಕಾರಿಕೆ ಬೆಳಿಗ್ಗೆಯಿಂದ ಸಂಜೆಯ ತನಕ ತನ್ನ ಕಸುಬಿನಲ್ಲಿ ನಿರತನಾಗಿರುತ್ತಾನೆ. ಕಸುಬು ಶ್ರಮದ ಜೋತೆಗೆ ತಾಳ್ಮೆಯು ಕೂಡ ಇರಬೇಕು. ಹತ್ತಿ, ರೇಷ್ಮೆ ಅಲ್ಲದೆ ಉಣ್ಣೆಗಳಿಂದಲೂ ವಸ್ತ್ರಗಳನ್ನು ತಯಾರಿಸುತ್ತಿದ್ದರು. ಅಂದು ಟಗರುಗಳ ತುಪ್ಪಳದಿಂದ ಮಾಡಿದ ಕಂಬಳಿಯನ್ನು ವಿಜ್ಞಾನೇಶ್ವರ ಹೆಸರಿಸುತ್ತಾನೆ. ಕಂಬಳಿಗಳ ಪ್ರಸ್ತಾಪ ಕೆಲವು ಶಾಸನಗಳಲ್ಲಿಯೂ ಉಂಟು ದಾವಣೆಗೆರೆ, ಚಿತ್ರದುರ್ಗ, ದೊಡ್ಡಬಳ್ಳಾಪುರ ಮುಂತಾದ ಸ್ಥಳಗಳಲ್ಲಿ ಕಂಬಳಿಗಳನ್ನು[೩೬] ನೆಯ್ಯುತ್ತಿದ್ದತ್ತೆ ಕಾಣುತ್ತದೆ. ಅಂದು ಹಲವು ಬಗೆಯ ಕಂಬಳಿಗಳನ್ನು ಮಾಡುತ್ತಿದ್ದರು ಎಂದು ಡಾ. ಗುರುರಾಜಚಾರ್ ಅಭಿಪ್ರಾಯಿಸುತ್ತಾರೆ.[೩೭] ವಡ್ಡಾರಾಧನೆ ಕೂಡ ರತ್ನಗಳಿಂದ[೩೮] ಕೂಡಿದ ಕಂಬಳಿಯನ್ನು ತಯಾರಿಸುತ್ತಿದ್ದ ವಿಚಾರವನ್ನು ತಿಳಿಸುತ್ತದೆ.

ಅಂದು ವಿವಿಧ ರೀತಿಯ ಮಗ್ಗಳಿದ್ದವು ಉದಾ: ಸಾದಾಮಗ್ಗ, ಗುಣಿಮಗ್ಗ, ನಿಲುಮಗ್ಗ, ಖಣದಮಗ್ಗ, ಕಂಬಳಿಮಗ್ಗ, ಹೀಗೆ ವಸ್ತ್ರಗಳನ್ನು ಆಧರಿಸಿ ಮಗ್ಗಗಳು ರೂಪುಗೊಳ್ಳುತ್ತಿದ್ದವು.

ವಿಜನಗರದ ಪೂರ್ವಶಾಸನಗಳಲ್ಲಿ ನೇಕಾರರನ್ನು ಸಾಲಿಗ, ಜೇಡ, ದೊಸಿಗ, ಪಟ್ಟಸಾಲಿಗ ಇತ್ಯಾದಿ ಹೆಸರುಗಳಿಂದ ಕರೆಯುತ್ತಿದ್ದರು. ಅಂದು ಕೈ ಮಗ್ಗದಿಂದ ನೇಯುವ ಚಿತ್ರಣವನ್ನು ಜೇಡರ ದಾಸಿಮಯ್ಯನ ವಚನದಿಂದ ತಿಳಿಯಬಹುದು.

ಉಂಕೆಯ ನಿಗುಚಿ ಸರಿಗೆಯ ಸಮಗೊಳಿಸಿ
ಸಮಗಾಲನಿಕ್ಕಿ ಅಣಿಯೇಮೇಳ ಮೆಟ್ಟಿದೆ
ಹಿಡಿದ ಲಾಳಿಯ ಮುಳ್ಳು ಕಂಡಿಕೆಯ ನುಂಗಿತ್ತು.
ಈ ಸೀರೆಯ ನೆಯ್ದುವ ನಾನೊ, ನೀನೊ ರಾಮನಾಥ![೩೯]

ಈ ವಚನಗಳಲ್ಲಿ ಮಗ್ಗದ ವಿವಿಧ ಭಾಗ ಹಾಗೂ ಅದರ ಕಾರ್ಯವಿಧಾನಗಳನ್ನು ತಿಳಿಯಬಹುದು.

ಮಗ್ಗದಲ್ಲಿ ಕಂಡುಬರುವ ಉಪಕರಣಗಳು ಕಂಡಿಕೆ, ಅಣಿಗೆ, ಕಂಡಿಕೆ, ಕಂಡಿಕೆಮುಳ್ಳು ಕದಿರು ಚರಕ, ಮಗ್ಗ, ರಾಣಿ, ಲಾಳಿ, ಈ ಉಪಕರಣಗಳನ್ನು ಬಳಸಿಕೊಂಡು ಅಂದು ವಿವಿಧ ರೀತಿಯ ವಸ್ತ್ರಗಳನ್ನು ತಯಾರಿಸುತ್ತಿದ್ದರು. ಇದು ವಂಶಪಾರಂಪರ್ಯವಾಗಿ ಮುಂದುವರಿದು ಬಂದ ಕಸುಬಾಗಿದೆ. ನೇಯ್ಗೆಯಲ್ಲಿ ತಮ್ಮ ಹಿರಿಯರು ಮಾಡುವ ಕಾರ್ಯದ ವಿವಿಧ ಹಂತಗಳನ್ನು ಸೂಕ್ಷ್ಮವಾಗಿ ಮಕ್ಕಳು ಗಮನಿಸುತ್ತಾ ಅವರಿಗೆ ನೇಯ್ಗೆಯಲ್ಲಿ ನೇರವಾಗುತ್ತಾ ಈ ಕಸುಬಿನಲ್ಲಿ ವಿದ್ವತ್‌ಅನ್ನು ಸಾಧಿಸುತ್ತಾರೆ. ಈವರಿಗೆ ಯಾವುದೇ ರೀತಿಯ ಶೈಕ್ಷಣಿಕ ವಿಧಾನವಿಲ್ಲ. ಹೀಗೆ ತಮ್ಮ ಹಿರಿಯರು ಹಾಕಿಕೊಟ್ಟ ಮಾರ್ಗದಲ್ಲೆ ತಮ್ಮ ಕುಲಕಸುಬನ್ನು ಮುಂದುವರೆಸಿಕೊಂಡು ಹೋಗುವರು.

ಚಮ್ಮಾರರು

ಯಾವುದೇ ಜನಾಂಗದ ಮೂಲ ಅವರು ಸ್ವೀಕರಿಸುವ ಕಸುಬನ್ನು ಅವಲಂಬಿಸಿರುವುದು ಭಾರತೀಯ ಸಮಾಜದ ಪ್ರಧಾನ ಲಕ್ಷಣವೇ ಆಗಿದೆ. ಪ್ರಾಣಿಗಳ ಚರ್ಮವನ್ನು ಸುಲಿದು ಹದಗೊಳಿಸಿ ವಸ್ತುಗಳನ್ನು ತಯಾರಿಸುವ ಕಸುಬುದಾರರೆ ಚಮ್ಮಾರರು. ವಿಶ್ವಕರ್ಮರು ಮತ್ತು ಮಾದಿಗರು ಒಂದೇ ಪ್ರಾಚೀನ ಕುಲಮೂಲದಿಂದ ಹೊರಬಿದ್ದ ಶಾಖೆಗಳಿರಬಹುದೆಂದು ಅನುಮಾನಪಡಲು ಸಾಧ್ಯವಿದೆ. ಇಂದು ಇವರಿಬ್ಬರ ನಡುವೆ ಇರುವ ಸಂಬಂಧ ಹಾಗೂ ಆದಿಶಕ್ತಿಯ ಮೂಲಕ ಜಾಂಬವ ತಾತನಿಗೆ ಹುಟ್ಟಿದ ಮಗನೇ ವಿಶ್ವಬ್ರಹ್ಮ. ವಿಶ್ವಬ್ರಹ್ಮನೇ ವಿಶ್ವಕರ್ಮ! ಎನ್ನುವ ಸಂಗತಿಗಳನ್ನು ಆಧರಿಸಿ ಮೇಲಿನ ತೀರ್ಮಾನಕ್ಕೆ ಬರಬಹುದೇನೋ? ಮಾತೃ ಪ್ರಧಾನ ದೇವತಾ ಆರಾಧನೆಯ ಪ್ರತೀಕವಾದ ಕಾಳಿ, ಆದಿಶಕ್ತಿ, ಅಂಕಾಳಮ್ಮರ ಪೂಜಾರಿಗಳಾಗಿ ಈ ವಿಶ್ವಕರ್ಮರು, ಹಾಗೂ ದಕ್ಷಿಣ ಭಾರತದ ಅಸ್ಪೃಶ್ಯರೆಲ್ಲರೂ ಒಂದೇ ಕುಲ ಕುಡಿಯ ಕೊಂಡಿಗಳಾಗಿರುವ ಸಂಭವವಿದೆ. ಪ್ರಧಾನವಾಗಿ ದಕ್ಷಿಣ ಭಾರತದ ಎಲ್ಲ ಕಡೆ ವಿಶ್ವಕರ್ಮರ ಕೇರಿಗಳಿರುವ ಕಡೆ ಅಂಕಾಳಮ್ಮನೂ, ಹೊಲೆಯ ಮಾದಿಗ ಕೇರಿಗಳಲ್ಲಿರುವ ಕಾಳಮ್ಮ, ಗಂಗಮ್ಮ, ಅಂಕಾಳಮ್ಮ, ನಲ್ಲಗಂಗಮ್ಮ ಮುಂತಾದ ಶಾಕ್ತೇಯ ದೇವತೆಗಳ ಗುಡಿಗಳಿರುವುದು ಸಾಮಾನ್ಯ ಸಂಗತಿ.

ಮತಂಗ–ಎಂದರೆ ಆನೆ ಮತ್ತು ಮಾದಿಗ ಎಂಬ ಎರಡು ಅರ್ಥವಿರುವುದರ ಜೊತೆಗೆ ಮಾದಿಗ ಕುಲಕ್ಕೂ ಆನೆಗಳಿಗೂ ಒಂದು ರೀತಿಯಲ್ಲಿ ವಿಶೇಷ ಸಂಬಂಧ ಇದೆಯೆಂದೇ ಹೇಳಬಹುದು. ಸಿಂದ್ ಮಾದಿಗರ ಸಹ ಬಂಧುಗಳಾದ ಮಾಸ್ಟೀಕರು ಮಾವುತ ಮಲ್ಲರಾಗಿದ್ದರ ಜನತೆಗೆ ಅವರ ಮೂಲ ಪುರುಷನಾದ ಹನುಮಂತರಾಯನು ಯಯಾತಿರಾಜ (ಗೊಲ್ಲರರಾಜ) ಪಟ್ಟದ ಆನೆಯ ಕೂರಿಸಿ ಕಂಚಿಯ ಬೀದಿಗಳಲ್ಲಿ ಮೇರವಣಿಗೆ ಮಾಡಿಸಿದ್ದರೆ,[೬೦] ಯಯಾತಿ ಗೊಲ್ಲ ರಾಜನಾಗಿದ್ದು, ಗೊಲ್ಲರು ಎಡಗೈನ ಒಂಬತ್ತು ಪಣದವರಾಗಿದ್ದುದರಿಂದಲೇ ಬಹುಶಃ ಮಾದಿಗ ಮಾಸ್ಟೀಕರಿಗೆ ಆನೆ ಮೇಲೆ ಮೇರವಣಿಗೆ ಮಾಡಿಸಿದ್ದರಬಹುದು ಮಾಸ್ಟೀಕರ ಪುರಾಣದಲ್ಲಿ ಬರುವ ಹೊಲೆಯರ ಗುರು ಕಾಣಿಸಿಕೊಳ್ಳುವುದೆ ಆನೆಯ ಮೇಲೆ. ಅದೂ ಹೇಗನ್ನುವಿರಿ ಆನೆಯ ಮೇಲೆ ಅವರದಾಗತ್ತಿ ಅವದಾ ಮೇಲೆ ಸವದಾಗತ್ತಿ ಕೆಂಪುಬಟ್ಟೆ ತೊಟ್ಟುಕೊಂಡು ಕೆಂಪುಛತ್ರಿ ಹಿಡಿದು ಕೊಂಡು ಮಾದಿಗರ ಮೇಲೆ ಯುದ್ಧಕ್ಕೆ ಬರುತ್ತಾನೆ.[೬೧] ಹೊಲೆಯ ಮಾಸ್ಟೀಕರ ಪುರಾಣ ಕತೆಯಲ್ಲೂ ಮಾದಿಗರ ನಾಯಕ ಆದಿ ಜಾಂಬವಂತ ಆನೆ ಕಾಲಾಳು ಹೊಂದಿರುವುದರ ಬಗ್ಗೆ ಪ್ರಸ್ತಾಪವಿದೆ. ಆದಿಜಾಂಬವಂತ ತನಗೆ

ಕುಸ್ತಿ ಕಲಿಸುತ್ತಿದ್ದ ಗುರು ಸಾಲ್ತಿಕ ಮಲದೇವರಾಜು ಜತೆಗೂಡಿ ಕುಸ್ತಿಯಾಡುತ್ತಿದ್ದ ಕೋಟೆಯ ಬಾಗಿಲುಗಳನ್ನೆಲ್ಲ ಎರಡು ಘಟ ಆನೆಗಳಿಂದ ನೂಕಿಸಿ ತೆಗೆಸುತ್ತಿದ್ದರಂತೆ. ಒಂದು ಘಟ ಎಂದರೆ ೧೨ ಆನೆಗಳು ಹೊಲೆಯ ಮತ್ತು ಮಾದಿಗರಿಗೆ ಆನೆಗಳೊಂದಿಗೆ ಸಂಬಂಧ ಇರುವುದು ಇದರಿಂದ ತೋರಿಬರುತ್ತದೆ.

ಈ ಎರಡು ಪದಗಳ ಅರ್ಥ ಇತಿಹಾಸಕಾರ ಫ್ಲೀಟರನ್ನೂ ಗೊಂದಲಕ್ಕೆ ಕೆಡವಿದಂತಿದೆ. ಕ್ರಿಶ. ೬೩೪ ಸುಮಾರಿಗೆ ಚಾಲುಕ್ಯ ಸಾಮ್ರಾಜ್ಯದ ಮಂಗಳೇಶನೊಂದಿಗೆ ಮತಂಗ ಪದದ ಪ್ರಸ್ತಾಪ ಬರುತ್ತದೆ. ಮಂಗಳೇಶ ಪುರಾತನ ದ್ರಾವಿಡ ಸಾಮ್ರಾಜ್ಯಗಳಲ್ಲಿ ಒಂದಾದ ಕಳಚೂರಿಗಳ ಮೇಲೆ ಯುದ್ಧ ಮಾಡಿ ಗೆಲ್ಲುತ್ತಾನೆ. ಆ ಯುದ್ಧದಲ್ಲಿ ಮತಂಗ ಸೈನಿಕರು ಭಾಗವಹಿಸಿದ್ದಾಗಿ, ಅವರೊಂದಿಗೆ ಕಾದಾಡಿ ಮಂಗಳೇಶ ಗೆದ್ದುದಾಗಿ ಉಲ್ಲೇಖವಿದೆ.

ಮೊದಲು ಮತಂಗ ಎಂದರೆ ಮಾದಿಗ ಮೂಲನಿವಾಸಿ ಬಳಗ ಎಂದು ಭಾವಿಸಿದ್ದ ಫ್ಲೀಟರು ಅನಂತರ ಅದು ಆನೆಗಳೆ ಎಂಬುದರಲ್ಲಿ ತಮಗೆ ಅನುಮಾನವೇ ಇಲ್ಲವೆಂದು ಅಭಿಪ್ರಾಯಪಟ್ಟಿದ್ದನ್ನು ಎಮ್ಮಾಕ್ಲೊ ತಮ್ಮ ವೈಲ್ಸೀವಿಂಗ್ ಸ್ಯಾಂಡಲ್ಸ್ ಆಟ್ ಟೇಲ್ಸ್ ಆಫ್ ಎ ತೆಲುಗು ಪರೆಯ ಟ್ರೈಬ್ ಕೃತಿಯ ಪ್ರಸ್ತಾಪನೆಯಲ್ಲಿ ವಿವರಿಸಿದ್ದಾರೆ.

ಸಂಸ್ಕೃತ ಸಾಹಿತ್ಯದಲ್ಲಿ ಮತಂಗರು

ಚಮ್ಮಾರರು ಕೇವಲ ಚರ್ಮಕೆಲಸಗಾರರಾಗಿರದೆ ಸಂಸ್ಕೃತ ಸಾಹಿತ್ಯದಲ್ಲಿ ಪ್ರಧಾನವಾಗಿ ಮತಂಗರ, ಮತಂಗರಾಜರ ಸಮರಶೌರ್ಯ ಸಾರುವ ಸನ್ನಿವೇಶಗಳು ದೊರೆಯುತ್ತವೆ. ಆರನೆಯ ಶತಮಾನದವನೆನ್ನಲಾದ ಬಾಣಭಟ್ಟನ ಕಾದಂಬರಿಯಲ್ಲಿ ಸಬರರ ನಾಯಕ ಮತಂಗನನ್ನು ಕುರಿತು ಹೀಗೆ ಹೇಳಲಾಗಿದೆ. ತಾರುಣ್ಯ ತುಂಬಿ ತುಳುಕುತ್ತಿದ್ದ ಈ ಮತಂಗ ನಾಯಕನ ದೇಹವನ್ನು ಕಬ್ಬಿಣದಿಂದ ಮಾಡಿದ ಹಾಗೆ ಭಾಸವಾಗುತ್ತಿತ್ತಂತೆ. ಇಂಥ ಮತಂಗ ನಾಯಕ ತನ್ನ ಸಹಸ್ರಾರು ಸಹಚರರೊಂದಿಗೆ ಬರುತ್ತಿರುವುದು ಬೆಳಕಿನ ಕಿರಣಗಳು ಕಲುಕಿದ ಕಾನನದಂತೆ, ಸುಳಿದಾಡುವ ಸಾವಿನಂತೆ, ಕೇಡು ಕೃತ್ಯಗಳ ಪಡೆಯಂತೆ ತೋರುತ್ತಿತ್ತೆಂದು ಬಾಣಭಟ್ಟ ವರ್ಣಿಸುತ್ತಾನೆ. ಈ ವರ್ಣನೆಯೇ ಮತಂಗರು ಕಿರಾತಕ ಕಾಡು ಜನರೆಂಬುದನ್ನು, ಅಪ್ರತಿಮ ಸಮರ ಸೇನಾನಿಗಳೆಂಬುದನ್ನು ಎತ್ತಿ ತೋರಿಸುತ್ತದೆ.

ಕ್ರಿಶ. ೧೧೨೫ರ ಸುಮಾರಿಗಿದ್ದ ಸೋಮದೇವಭಟ್ಟನ ಕಥಾಸರಿತ್ಸಾಗರದಲ್ಲಿ ದುರ್ಗಾ ಪಿಶಾಚನೆಂಬ ಮತಂಗ ನಾಯಕ ಬರುತ್ತಾನೆ. ಈ ಆದಿವಾಸಿ ಮತಂಗ ನಾಯಕನ ಬಳಿ ನೂರು ಸಹಸ್ರ ಬಿಲ್ಲುವಿದ್ಯಾ ಪ್ರವೀಣರಾದ ಮತಂಗ ಕುಲದ ಸೈನಿಕರಿದ್ದು, ದುರ್ಗಾ ಪಿಶಾಚ ರಾಜರಿಂದಲೂ ಜಯಿಸಲಾಗದ ಅಜೇಯನೆಂದೇ ಖ್ಯಾತಿ ಹೊಂದಿದವನಾಗಿರುತ್ತಾನೆ.

ಮಾದಿಗರು ಯುದ್ಧಗಳಲ್ಲಿ ಭಾಗವಹಿಸುತ್ತಿದ್ದರೆಂಬುದಕ್ಕೆ ತೆಲುಗಿನ ಜಾನಪದ ಸಾಹಿತ್ಯದಲ್ಲಿ ಆಧಾರಗಳಿವೆ. ಕಾಟಮರಾಜುವಿನ ತಮ್ಮನಾದ ಚೆನ್ನಯ್ಯಬಾಲುಡು ಕಾರಂಪುಡಿಯ ಮೇಲೆ ಯುದ್ಧವನ್ನು ಘೋಷಿಸಿದ. ಅಣ್ಣನಾದ ಕಾಟಮರಾಜುವನ್ನು ಸಹಾಯಕ್ಕೆ ಕರೆದ. ಅವನು ಮತ್ತೊಂದು ಯುದ್ಧದಲ್ಲಿ ನಿರತನಾಗಿದ್ದ ಕಾರಣ ತಮ್ಮನ ನೆರವಿಗೆ ಬಾರಲು ಆಗಲಿಲ್ಲ. ಆಗ ಚೆನ್ನಯ್ಯಬಾಲುಡು ಮಾದಿಗರನ್ನು

ತನ್ನ ಸಹಾಯಕ್ಕೆ ಬರುವಂತೆ ಕೇಳಿಕೊಂಡ ಆ ಮೇರೆಗೆ ಅವರು ಸಹಾಯಕ್ಕೆ ಬಂದರು. ಅಂದಿನ ಯುದ್ಧದಲ್ಲಿ ಜಯವನ್ನು ಗಳಿಸಿದರು.[೮] ಹೀಗೆ ಮಾದಿಗರನ್ನು ಯುದ್ಧದಲ್ಲಿ ಬಂದು ಭಾಗವಹಿಸುವಂತೆ ಕೇಳಬೇಕಾದರೆ ಮಾದಿಗರು ಯುದ್ಧಾನುಭವಿಗಳೇ ಆಗಿರಬೇಕು. ಕೇವಲ ಚಪ್ಪಲಿ ಹೊಲೆಯುವ ಕಾಯಕ ಮಾತ್ರ ಗೊತ್ತಿದ್ದವರಾಗಿದ್ದರೆ ಯುದ್ಧಕ್ಕೆ ಅವರನ್ನು ಆಹ್ವಾನಿಸುವ ಪ್ರಮೇಯ ಚೆನ್ನಯ್ಯ ಬಾಲುಡುವಿಗೆ ಇರುತ್ತಿರಲಿಲ್ಲ.

ಮಾದಿಗರು ಯುದ್ಧ ಜಯಿಸಿಕೊಟ್ಟ ಇನ್ನೊಂದು ಪ್ರಸಂಗ ಕುರಿತು ಸಿಂದ್ ಕತೆಯಲ್ಲಿ ಉಲ್ಲಖವಿದೆ. ನೆಲ್ಲೂರು ಸೀಮೆಯಲ್ಲಿ ತಮ್ಮ ಗೋವುಗಳ ಹಿಂಡನ್ನು ನಾಶ ಮಾಡಲು ಬಂದ ಶತೃಗಳನ್ನು ಸಂಹರಿಸಲು ಗೊಲ್ಲ ರಾಜ ಮಸಿಲಿನಾಯುಡು ಹೋಗುತ್ತಾನೆ. ಅವನು ಸೋತು ಹಿಮ್ಮೆಟ್ಟುತ್ತಿರುವ ಸುದ್ದಿ ಕೇಳಿ ಇನ್ನೂ ಬಾಲ್ಯವಸ್ಥೆಯಲ್ಲಿರುವ ಗೊಲ್ಲರ ಸಾಕುಮಗನಾಗಿದ್ದ ಮನ್ನೇಡು ಬೀರನ್ನ ತಾನೇ ಯುದ್ಧಕ್ಕೆ ಮುಂದಾಗುತ್ತಾನೆ. ಇದನ್ನು ಸಿಂದ್ ಕತೆಯಲ್ಲಿ ಮನ್ನೇಡು ಬೀರನ್ನ ಕದಿಲ್ಯಾಡೇ ಕತ್ತೂಲ ನೀಡಲತೋ (ಮನ್ನೇಡು ಬೀರಣ್ಣ ಕದಿಲ್ಯಾನೆ ಕತ್ತಿಗಳ ನೆರಳಲ್ಲಿ) ಎಂದು ವರ್ಣಿಸಲಾಗಿದೆ.

ಹೀಗೆ ಹೊರಟ ಬೀರಣ್ಣ ಹಾಲು ಹೊಳೆಯ ಒಡ್ಡಿನಲ್ಲಿದ್ದ ಬೃಹತ್ ಮತ್ತಿ ಮರವನ್ನು ಕತ್ತಿಯಿಂದ ಒಂದೇ ಏಟಿಗೆ ಕತ್ತರಿಸುತ್ತಾನೆ. ಆ ಮರ ಉರುಳಿದ ಸದ್ದಿಗೇನೆ ಶತೃ ಸೈನ್ಯ ಚೆದುರಿ ಚೆಲ್ಲಾಪಿಲ್ಲಿಯಾಗುತ್ತದೆ. ಬೀರಣ್ಣ ಶತೃಗಳ ಬೆನ್ನಟ್ಟಿ ಜಯ ಸಾಧಿಸುತ್ತಾನೆ.

ಬೀರಣ್ಣನನ್ನು ಮಾದಿಗರಾಗಲಿ, ಗೊಲ್ಲರಾಗಲಿ ಇನ್ನೂ ಮರೆತಿಲ್ಲ. ಮಾದಿಗರ ಮದುವೆಯಲ್ಲಿ ಈತನ ಹೆಸರಿನಲ್ಲಿ ಬೀರಣ್ಣ ಗುಡಿ ಉಪವಾಸ ಎನ್ನುವ ವ್ರತವೊಂದಿದೆ. ಹೆಣ್ಣಿನ ಕಡೆಯ ಸಹೋದರ ಸಂಬಂಧಿಗಳು ಉಪವಾಸ ಇದ್ದು, ಚಪ್ಪರದ ದಿನ ಊರಿನ ಹೊರಗೆ ಹೋಗಿ ಬೀರಣ್ಣನಿಗೆ ಎಡೆ ಇಕ್ಕಿ ಪೂಜಿಸಿ ತಮ್ಮ ಈ ವ್ರತವನ್ನು ಅಂತ್ಯಗೊಳಿಸುತ್ತಾರೆ.ಗೊಲ್ಲರು ಕೂಡ ತಮ್ಮ ಮದುವೆಗೆ ಮಾದಿಗರನ್ನು ಆಹ್ವಾನಿಸಿ ಅವರಿಂದ ಈ ಬೀರಣ್ಣ ಗುಡಿ ವ್ರತಾಚರಣೆ ಮಾಡಿಸುತ್ತಾರೆ. ಇದು ಮುಗಿದ ಮೇಲೆಯೇ ಅವರಲ್ಲಿ ಧಾರೆ ನಡೆಯುವುದು.

ಈ ಎರಡು ಜನಾಂಗಗಳಿಂದ ಹೀಗೆ ಆರಾಧಿಸಲ್ಪಟುವ ಬೀರಣ್ಣ ಗೊಲ್ಲರಿಗೆ ಜಯ ತಂದು ಕೊಡಲು ಪ್ರಾಣಾರ್ಪಣೆ ಮಾಡಿರುವ ಸಾಧ್ಯತೆ ಇದೆ. (ಈ ಬಗ್ಗೆ ಸಿಂದ್ ಕತೆಯಲ್ಲಿರಬಹುದಾದ ವಿವರಗಳು ದೊರೆತಿಲ್ಲ) ಆದ್ದರಿಂದಲೇ ಗೊಲ್ಲರೂ ಮಾದಿಗರೂ ಮರೆಯದೆ ಇನ್ನೂ ತಮ್ಮ ಮದುವೆಯಲ್ಲಿ ಈ ಧೀರ ಜಾನಪದ ನಾಯಕನಿಗೆ ಎಡೆ ಹಾಕುವ ಮೂಲಕ ತಮ್ಮ ಕೃತಜ್ಞತೆ ಸಲ್ಲಿಸುತ್ತಿದ್ದಾರೆಂದು ಭಾವಿಸಬಹುದು.

ಆರ್. ಶೇಷಶಾಸ್ತ್ರಿಯವರು ತಮ್ಮ ಕರ್ನಾಟಕ ವೀರಗಲ್ಲುಗಳು ಕೃತಿಯಲ್ಲಿ ಇನ್ನೊಂದು ಅಂಶದ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಆಂಧ್ರದ ಗೊಲ್ಲ ಜನಾಂಗ ಆರಾಧಿಸುವ ವೀರರು ಗೊಲ್ಲರಾಗಿರದೆ ಮಾದಿಗರಾಗಿರುವುದನ್ನು ಅವರು ಪ್ರಸ್ತಾಪಿಸಿದ್ದಾರೆ. ಗೊಲ್ಲರಿಗೆ ನೆರವಾಗಲು ಯುದ್ಧಕ್ಕೆ ಹೋದ ಮಾದಿಗರನೇಕರು ಮನ್ನೇಡು ಬೀರಣ್ಣನ ಹಾಗೆ ಮಡಿದಿರುವುದು ಇದರಿಂದ ವ್ಯಕ್ತವಾಗುತ್ತದೆ.

ಹಾಗೆಯೇ ಕೋಲಾರ ಜಿಲ್ಲೆಯ ಹರಿಜನರು (ಮಾದಿಗರು) ಆಚರಿಸುವ ಭಾರತ ಹುಣ್ಣಿಮೆ (ಭಾರತಾಲ ಪುನ್ನಮು) ದಿನ ಸಾಯಂಕಾಲ ಊರ ಮಂದಿನ ಗಂಗಮ್ಮನ ಗುಡಿಯ ಮುಂದೆ

ಒಂದು ಹೊಸ ಮಡಿಕೆಯ ತುಂಬಾ ನೀರು, ಹೊಸದಾರ ಮತ್ತು ಸೂಜಿಯೊಂದನ್ನು ಇಟ್ಟಿರುತ್ತಾರೆ. ಅವರ ಪ್ರಕಾರ ಮಹಾಭಾರತ ಯುದ್ಧದಲ್ಲಿ ಭಾಗವಹಿಸಲು ಹೋದ ತಮ್ಮ ವೀರರು ಆ ದಿನ ಹಿಂತಿರುಗುತ್ತಾರೆ. ಅವರು ಯುದ್ಧದಲ್ಲಿ ದಣಿದು ಬಂದಿರುತ್ತಾರೆ. ಅದಕ್ಕಾಗಿ ಅವರಿಗೆ ಕುಡಿಯಲು ಮಡಿಕೆಯಲ್ಲಿ ನೀರು, ಯುದ್ಧದಲ್ಲಿ ಅವರ ದೇಹ ಶಸ್ತ್ರಗಳಿಂದ ಹರಿದು ಹೋಗಿರುತ್ತದೆ. ಹರಿದುಹೋದ ದೇಹದ ಭಾಗಗಳನ್ನು ಹೊಲಿದುಕೊಳ್ಳಲು ಸೂಜಿ ಮತ್ತು ದಾರ ಆ ದಿನ ರಾತ್ರಿಯೆಲ್ಲ ಹಾಡುಗಳನ್ನು ಹಾಡುತ್ತಾ ಕಳೆಯುತ್ತಾರೆ.[೪೩] ಯುದ್ಧದಲ್ಲಿ ಹೋರಾಡುವಾಗ ಶಸ್ತ್ರಾಸ್ತ್ರಗಳಿಂದ ಹರಿದು ಹೋಗುವ ತಮ್ಮ ದೇಹದ ಭಾಗಗಳನ್ನು ಹೊಲಿದುಕೊಳ್ಳುವ ಇನ್ನೆರಡು ಪ್ರಸಂಗಗಳನ್ನು ನೋಡಬಹುದು.

ಒಮ್ಮೆ ಕುಮಾರರಾಮ ಅಶ್ವಾರೂಢನಾಗಿ ಸಂಚರಿಸುತ್ತಿರುವಾಗ ಅವನ ಕುದುರೆಯ ಜೀನು ಹರಿದು ಕೆಳಗೆ ಜಾರುತ್ತಾನೆ. ಆಗ ಅವನ ಜತೆಯಲ್ಲೇ ಇದ್ದ ಸಹವರ್ತಿ ಮಾದಿಗರ ರಾಮನು ತನ್ನ ಮೈಯ ಚರ್ಮವನ್ನೇ ಹರಿದು ಕುದುರೆಯ ಕಿತ್ತಜೀನನ್ನು ಸರಿಪಡಿಸುತ್ತಾನೆ. ಕುಮಾರರಾಮ ಅಪಾಯದಿಂದ ಪಾರಾಗುತ್ತಾನೆ. ಇದೊಂದು ಪ್ರಸಂಗವಾದರೆ, ಇನ್ನೊಂದು ಪ್ರಸಂಗ ಹೊಲೆಯ ಮಾಸ್ತೀಕರ ಪುರಾಣಕತೆಯಲ್ಲಿ ಬರುತ್ತದೆ. ತಮ್ಮ ಜಾತಿಗೆ ಇಲ್ಲ ಸಲ್ಲದ ಕಿರುಕುಳ ಕೊಡುತ್ತಿದ್ದ ಮಾದಿಗ ನಾಯಕ ಆದಿ ಜಾಂಬವಂತನೊಂದಿಗೆ ಹೊಲೆಯ ಮಾಸ್ಟೀಕರ ಮೂಲ ಪುರುಷ ಚನ್ನಯ್ಯ ದಾಸರಿ ಕಾದಾಡುವಾಗ ಜಾಂಬವಂತನ ಮೈಯನ್ನು ಕತ್ತಿಯಿಂದ ಕೊಚ್ಚಿ ಗಾಯಗೊಳಿಸುತ್ತಾನೆ. ಇವು ಎಂಥ ದೊಡ್ಡ ಗಾಯಗಳೆಂದರೆ ಹರಿದ ಚರ್ಮವನ್ನು ತೂರಿಕೊಂಡು ಒಳಗಿನ ಅಂಗಾಂಗಗಳು ಹೊರಬರುತ್ತವೆ. ಆ ಜಾಂಬವಂತ ಸೂಜಿದಾರಗಳಿಂದ ಹರಿದ ಭಾಗಗಳನ್ನು ಹೊಲಿದುಕೊಂಡೆ ಯುದ್ಧಮಾಡುತ್ತಾನೆ.

ಮಾದಿಗ ಜನಾಂಗಕ್ಕೂ, ಯುದ್ಧಕ್ಕೂ ಅತಿ ಹತ್ತಿರದ ನಂಟಿರುವುದು ಈ ಮೇಲಿನ ಸಂಗತಿಗಳಿಂದ ದೃಢಪಟುತ್ತದೆ. ಯುದ್ಧಗಳ ಖುದ್ದು ಅನುಭವ ಇರುವ ಜನಾಂಗದ ಸುಪ್ತ ಮನಸ್ಸು ಮಾತ್ರ ಇಂಥ ಸಶಕ್ತ ಪುರಾಣ ಪ್ರತಿಮೆಗಳನ್ನು ಸೃಷ್ಟಿಸಬಲ್ಲದೆಂದು ಧಾರಾಳವಾಗಿ ಹೇಳಬಹುದು. ಅಷ್ಟೇ ಅಲ್ಲದೆ ಮಾದಿಗರು ಮೊದಲು ಯುದ್ಧ ಮಾಡುವ ಸಮರ ಕಲಿಗಳಾಗಿದ್ದು ಅಥವಾ ಯುದ್ಧವನ್ನೇ ಕಸುಬಾಗಿಸಿಕೊಂಡಿದ್ದ ಪ್ರಾಚೀನ ಜನಾಂಗವಾಗಿದ್ದು, ಯುದ್ಧದಲ್ಲಾದ ಪರಾಭವ, ಅವರನ್ನು ಅವರಿದ್ದ ಉನ್ನತ ಸ್ಥಾನದಿಂದ ಪದಚ್ಯುತಗೊಳಿಸಿ ಗೆದ್ದವರ ಗುಲಾಮರಾಗಿ ಕೀಳು ಕಸುಬುಗಳನ್ನು ಕೈಗೊಳ್ಳುವಂತೆ ಮಾಡಿರಬಹುದೆಂದು ಊಹಿಸಬಹುದಾಗಿದೆ.

ಊರ ಹೊರಗಿದ್ದುಕೊಂಡು ಸತ್ತ ದನಗಳನ್ನು ಕೊಯ್ದು ಚರ್ಮಸುಲಿದು ಅದರಿಂದ ವ್ಯವಸಾಯ ಉಪಕರಣಗಳನ್ನು ಮಾಡಿಕೊಡುವಂತ ಒಂದು ಸಾಮಾಜಿಕ ಒತ್ತಡ ಮತ್ತು ಒಪ್ಪಂದಕ್ಕೂ ಅವರಿಗಿದ್ದ ಯುದ್ಧದ ಅನುಭವವೇ ಕಾರಣವಾಗಿರಬಹುದು. ಇವರಿಗಿದ್ದ ಸಿಗಿಯುವ, ಕಡಿಯುವ, ಕತ್ತರಿಸುವ ರಣತಂತ್ರ ಕೌಶಲ್ಯವೇ ಇವರು ಚರ್ಮ ಕುಶಲಿಗಳಾಗಿ ಮುಂದುವರೆಯಲು ಅನುವು ಮಾಡಿಕೊಟ್ಟಿರಬಹುದು.

ಸತ್ತ ದನಗಳ ಚರ್ಮ್ಮವನ್ನು ಸುಲಿದು ಸಾಂಪ್ರದಾಯಿಕ ರೀತಿಯಲ್ಲಿ ಹದಗೊಳಿಸಿ, ಮಿಣಿ, ಜತ್ತಿಗೆ ಬಾರಕೋಲು ಮೊದಲಾದ ವ್ಯವಸಾಯದ ಉಪಕರಣಗಳನ್ನು ಸಿದ್ಧಗೊಳಿಸುವುದಕ್ಕೆ ಚರ್ಮಗಾರಿಕೆ

ಅಥವಾ ಚಮ್ಮಾರಿಕೆ ಎನ್ನುವರು. ಚರ್ಮದ ಕೆಲಸವು ಎರಡು ಗುಂಪಿನ ಜನರಿಂದ ನಡೆಯುತ್ತಿತ್ತು. ಚರ್ಮವನ್ನು ಸುಲಿದು ಹದಮಾಡಿ ಅದನ್ನು ಉಪಯೋಗಕ್ಕೆ ಯೋಗ್ಯವಾಗಿ ಮಾಡುವವನು 'ಸಮಾಗಾರ' ಅಥವಾ ಚರ್ಮಕಾರ ಹದಗೊಳಿಸಲ್ಪಟ್ಟ ಚರ್ಮದಿಂದ ಪಾದರಕ್ಷೆ ಮುಂತಾದ ವಸ್ತುಗಳನ್ನು ತಯಾರಿಸುವವನು ಮಚ್ಚಿಗ ನೆನಸಿಕೊಳ್ಳುತ್ತಿದ್ದ ಇವೆರಡನ್ನು ಒಬ್ಬನೇ ಮಾಡುತ್ತಿದ್ದಿರಲೂಬಹುದು.

ಚರ್ಮವನ್ನು ಹದ ಮಾಡುವ ಕ್ರಮವನ್ನು ಮಾದಾರ ಚನ್ನಯ್ಯನೆಂಬ ವಚನಕಾರನ ಒಂದು ವಚನವು

ಸ್ಥೂಲ ಸೂಕ್ಷ್ಮಕಾರಣವೆಂಬ ಮೂರು ಕಂಬವ ನೆಟ್ಟು
ಆಗುಚೇಗೆಯೆಂಬ ದಡಗೋಲಿನಲ್ಲಿ
ಅಗಡದ ಎಮ್ಮೆಯ ಚರ್ಮವತೆಗೆದು
ಉಭಯನಾಮವೆಂಬ ನಾರಿನಲ್ಲಿ ತಿತ್ತಿಯನೊಪ್ಪವ ಮಾಡಿ
ಭಾವವೆಂಬ ತಿಗುಡಿನಲ್ಲಿ
ಸರ್ವಸಾರವೆಂಬ ಖಾರದ ನೀರು ಹೊಯಿದು
ಅಟ್ಟೆಯ ದುರ್ಗುಣ ಕೆಟ್ಟು,
ಮೆಟ್ಟಡಿಯವರಿಗೆ ಮುಟ್ಟಿಸಬಂದೆ
ಮೆಟ್ಟಡಿಯ ತಪ್ಪಲ ಕಾಯದೆ
ಮೆಟ್ಟಡಿಯ ಬಟ್ಟೆಯ ನೋಡಿಕೊಳ್ಳಿ
ಕೈಯುಳಿ ಕತ್ತಿ ಅಡಿಗೂಂಟಕ್ಕಡಿಯಾಗಬೇಡ
ಅರಿ ನಿಜಾ(ತ್ಮಾ) ರಾಮ ರಾಮನಾ

ಈ ವಚನವು ಸತ್ತ ಎಮ್ಮೆಯನ್ನು ಮೂರು ಕಂಬಗಳಿಗೆ ಕಟ್ಟಿ ದಡಿಗೋಲಿನಿಂದ ಅದರ ಚರ್ಮವನ್ನು ತೆಗೆದು ಲವಣದ ನೀರಿನಲ್ಲಿ ನೆನೆಸಿ ಹದಮಾಡುತ್ತಿದ್ದ ರೀತಿಯನ್ನು ಸ್ಥೂಲವಾಗಿ ತಿಳಿಸುತ್ತದೆ. ಇದು ಈಗಲೂ ಹಳ್ಳಿಗಳಲ್ಲಿ ಚರ್ಮ ಹದ ಮಾಡುವ ಸಮಾಗಾರರು ಅನುಸರಿಸುವ ವಿಧಾನವನ್ನೆ ಹೋಲುತ್ತದೆ. ಅವರು ಹದ ಮಾಡುವ ಕ್ರಮವು ಈ ರೀತಿಯಿದೆ. ದೊಡ್ಡ ದೊಡ್ಡ ಮಣ್ಣಿನ ಬಾನಿಗಳಲ್ಲಿ ಸುಣ್ಣದ ನೀರನ್ನು ಹಾಕಿ ಅದರಲ್ಲಿ ಕಚ್ಚಾ ಚರ್ಮವನ್ನು ಸುಮಾರು ಒಂದು ತಿಂಗಳ ಕಾಲ ನೆನೆಯಿಡುತ್ತಾರೆ. ಅನಂತರ ಚರ್ಮವನ್ನು ತೆಗೆದು ಅದರಲ್ಲಿನ ಸುಣ್ಣದ ಅಂಶವು ಹೋಗುವಂತೆ ಒಳ್ಳೆಯ ನೀರಿನಲ್ಲಿ ಮತ್ತೆ ಮೂರು ದಿನಗಳ ಕಾಲ ನೆನೆಸುತ್ತಾರೆ. ಆ ಮೇಲೆ ಮತ್ತೊಂದು ಪಾತ್ರೆಯಲ್ಲಿ ನೆಲ್ಲಿಯ ಎಲೆಗಳನ್ನು ಮಿಶ್ರ ಮಾಡಿರುವ ನೀರಿನಲ್ಲಿ ಪುನಃ ಹನ್ನೆರಡು ದಿನಗಳಷ್ಟು ಕಾಲ ನೆನಸುತ್ತಾರೆ. ಅನಂತರ ಚರ್ಮವನ್ನು ನೀರಿನಿಂದ ತೆಗೆದು ಹಿಂಡಿ ಒಂದು ತಿಂಗಳ ಕಾಲ ಹಾಗೆಯೇ ಬಿಡುತ್ತಾರೆ. ಆದಾದ ನಂತರ ಚರ್ಮವನ್ನು ತೊಳೆದು ಹಿಂಡಿ ಅದನ್ನು ಹೊಲಿದು ಅದರಲ್ಲಿ ಗೋಡಂಬಿ, ದದ್ದಾಲ ಮತ್ತು ನೇರಳೆ ಮರಗಳ ತೊಗಟೆಯನ್ನು ತುಂಬಿ ಒಂದು ದಿನದ ಮಟ್ಟಿಗೆ ತೂಗು ಹಾಕುತ್ತಾರೆ. (ತಿತ್ತಿಯನೊಪ್ಪಹ ಮಾಡಿ ತಿಗುಡಿನಲ್ಲಿ) ಆ ಮೇಲೆ ಹೊಲಿಗೆಯನ್ನು ಬಿಚ್ಚಿ, ಚರ್ಮವನ್ನು ತೊಳೆದು ಶುದ್ಧಿಮಾಡಿ ಒಂದು ದಿನ ಬಿಸಿಲಿನಲ್ಲಿ ಒಣಗಿಸಿದರೆ ಚರ್ಮವು ಪಾದರಕ್ಷೆಯನ್ನು ತಯಾರಿಸಲು ಯೋಗ್ಯವಾಗುತ್ತದೆ.

ಮಾದಿಗರು ಸಾಂಪ್ರದಾಯಿಕ ಪದ್ಧತಿಯಲ್ಲಿ ಚರ್ಮವನ್ನು ಹದಗೊಳಿಸಿ, ಜೋಡುಗಳನ್ನು ಹಾಗೂ ಕೃಷಿ ಉಪಕರಣಗಳನ್ನು ನಿರ್ಮಿಸುವುದರಲ್ಲಿ ನಿಷ್ಣಾತರು. ತೊಗಲಿನ ಹದವನ್ನು ಮಾದಿಗ ಮಾತ್ರ ಚೆನ್ನಾಗಿ ಅರಿತವನು. ಎಮ್ಮೆಯ ತೊಗಲಿನಿಂದ ಎಕ್ಕಡ, ಎತ್ತು-ಹಸುವಿನ ತೊಗಲಲ್ಲಿ ಜತ್ತಿಗೆ, ಬಾರು, ಹಂಗಡ, ಗೆಜ್ಜೆಸರ, ಹಂತಿಯ ದಾವನಿ, ಕಟಗುಣಿ(ಬಾರಕೋಲಿನ ಚಿಪು), ಕೋಣನ ತೊಗಲಿನಿಂದ ನೀರೆತ್ತುವ ಮೊಟ್ಟೆ, ಮಿಣಿ, ಕರುವಿನ ತೊಗಲಿನಿಂದ ಸಣ್ಣಬಾರು, ಬಾರಕೋಲು ಬಾರು, ಜತ್ತಿಗೆ ಬಾರು, ಹಿಡಿಹಗ್ಗದ ಬಾರು ಮುಂತಾದವುಗಳನ್ನು ತಯಾರಿಸುತ್ತಾರೆ. ಅಲ್ಲದೆ ಉಡುವಿನ ಚರ್ಮದಿಂದ ದಮಡಿಯನ್ನೂ, ಕುರಿಯ ಚರ್ಮದಿಂದ ಹಲಗೆಯನ್ನೂ ಇವರೇ ತಯಾರಿಸುತ್ತಾರೆ. ನಗಸುತ್ತು (ಮಿಣಿ) ಹಂಗಡ, ಗೆಜ್ಜೆಸರ, ಹಂತಿಯ ದಾವನಿ-ಮುಂತಾದವುಗಳನ್ನು ತೊಗಲು ಹಸಿ ಇರುವಾಗಲೇ ತಯಾರಿಸುತ್ತಾರೆ. ದಮ್ಮಡಿ, ಹಲಗೆಗಳನ್ನು, ಚರ್ಮ ಒಣಗಿದ ಮೇಲೆಯೇ ತಯಾರಿಸುತ್ತಾರೆ. ಈ ಉಪಕರಣಗಳನ್ನು ತಯಾರಿಸಲು ಮಾದಿಗರು ಉಳಿ, ರಾವಿ, ಅಡಿಗಲ್ಲು, ಗೂಟ, ಕೊಡತಿ, ಪಕ್ಕಡ ಮೊದಲಾದ ಸಾಧನ ಸಲಕರಣೆಗಳನ್ನು ಬಳಸುತ್ತಾರೆ. ಮಾದರಚನಯ್ಯನ ಕೈಯುಳಿಕತ್ತಿ ಅಡಗುಂಟಕ್ಕಡಿಯಾಗಬೇಡ ಅರಿನಿಜಾತ್ಮ ರಾಮರಾಮನಾ ಎಂಬ ವಚನಾಂಕಿತದಲ್ಲಿ ಮಾದರಿ ಕಸುಬಿನ ಕೆಲವು ಆಯುಧಗಳು ಉಕ್ತವಾದುದು ಇಲ್ಲಿ ಗಮನಿಸಬೇಕಾದ ಸಂಗತಿ. ಮಾದಾರ ಧೂಳಯ್ಯ ಮತ್ತು ಮಾದಾರ ಚನ್ನಯ್ಯರು ಶಿವಶರಣ ಕಾಲದ ಸಮಗಾರರಾಗಿದ್ದುದು ಇಲ್ಲಿ ಸ್ಮರಣಾರ್ಹ.

ಚಮ್ಮಾರರು ಚರ್ಮದ ವೃತ್ತಿಯಲ್ಲಿ ನಿಪುಣರು. ಜತ್ತಿಗೆ ಹೆಣೆಯುವಲ್ಲಿ, ಕಟಗುಣಿ ಕಟ್ಟುವಲ್ಲಿ, ದಾವನಿಯ ಗಂಟು ಹಾಕುವಲ್ಲಿ, ನೊಗಸುತ್ತು, ಬಾರಕೋಲಗಳಿಗೆ ಸುರಳಿ ಹಕುವಲ್ಲಿ, ಕಣ್ಣಿ-ಗಂಗಡಗಳ ಹೆಣಿಕೆಯ ವಿನ್ಯಾಸದಲ್ಲಿ ಎಲ್ಲದಲ್ಲೂ ಇವರ ವೃತ್ತಿ ನಿಪುಣತೆಯನ್ನು ಗುರುತಿಸಬಹುದು.

ಅಕ್ಕಸಾಲಿಗರು/ಚಿನಿವಾರರು

ಈ ಕಸಬಿನವರಲ್ಲಿ ಕೆಲವು ಅಕ್ಕಸಾಲಿಗಳು ಅದ್ಭುತ ರೀತಿಯಲ್ಲಿ ಜನರನ್ನು ವಂಚಿಸುತ್ತಿದ್ದುದು ಜನಪದ ಗಾದೆ-ಕಥೆಗಳ ಮೂಲಕ ತಿಳಿದುಬರುತ್ತದೆ. 'ಅಕ್ಕಸಾಲಿ ಅಕ್ಕನ ಬಂಗಾರವನ್ನು ಕದಿಯದೆ ಬಿಡನು' ಎಂಬ ಗಾದೆ ಜನಜನಿತವಾಗಿದೆ. ಅಕ್ಕಸಾಲಿಯ ಈ ವಂಚನೆಯನ್ನು ನಿರೂಪಿಸುವ ಹಾಸ್ಯ ಕಥೆಯೊಂದು ಉಂಟು. ಅಕ್ಕಸಾಲಿಯ ಮಗ ಅಕ್ಕಸಾಲೆಯಲ್ಲಿರುತ್ತಾನೆ. ಅಕ್ಕ ಕೊಟ್ಟ ಚಿನ್ನದಲ್ಲಿ ಒಡವೆ ಮಾಡಿರುತ್ತಾನೆ. ಅಕ್ಕ ಎಂಬ ಕಾರಣಕ್ಕಾಗಿ ಆತ ಚಿನ್ನವನ್ನು ಅಪಹರಿಸದಿರಬಹುದು ಎಂಬ ಅನುಮಾನ ತಂದೆಗೆ ಉಂಟಾಗುತ್ತದೆ. ಕದಿ ಎಂಬುದನ್ನು ಸೂಚಿಸುವುದಕ್ಕಾಗಿ ಇದ್ದಕ್ಕಿದ್ದಂತೆ ರಾಮಾ ರಾಮಾ ಎಂದು ಕೂಗುತ್ತಾನೆ, ಮಗ ಇನ್ನೂ ಚಾಣಾಕ್ಷ ರಾಮನ ಹೆಂಡತಿ ಸೀತೆಯನ್ನು ಆಗಲೇ ರಾವಣ ಅಪಹರಿಸಿದ್ದಾನೆ ಎಂದು ಹೇಳಿ ತಂದೆಯ ಸಂಶಯವನ್ನು ಬಗೆಹರಿಸುತ್ತಾನೆ.[೪೪] ಅದರಂತೆ ಅಕ್ಕಸಾಲಿಗನ ಭಕ್ತಿ ಅಗ್ಗಿಷ್ಟಗೆಯಲ್ಲಿ ಹೋಯಿತ್ತು ಎನ್ನುವ ಚನ್ನಬಸವಣ್ಣನವರ ಮಾತೂ ಈತನ ವಂಚಕ ಪ್ರವೃತ್ತಿಯನ್ನೆ ಧ್ವನಿಸುತ್ತದೆ. 'ಮರ್ತ್ಯವೆಂಬುದು ಕರ್ತಾರನ ಕಮ್ಮಟ' ಎಂಬ ಬಸವಣ್ಣನವರ ಮಾತಿನಲ್ಲಿ ನೆನೆಯಬಹುದು. ಹಾಗೆಯೆ ಅಕ್ಕಸಾಲಿ ಚಿನ್ನ ಬಡಿಯುವಾಗ 'ಕೊಟ್ಟೋನ್ ಕೆಟ್ಟ, ಕೊಟ್ಟೋನ್ ಕೆಟ್ಟ, ಕುಟ್ಟಾ ಕುಟ್ಟಾ ಕೊಟ್ಟೋನ್ ಕೆಟ್ಟ' ಎಂಬ ಧ್ವನಿ ಹೊರಡುತ್ತಿದೆಯಂತೆ. ಇದು ಕೂಡ ಸಾಂಕೇತಿಕವಾಗಿ ಆತನ ಕೀಳು ಭಾವನೆಯನ್ನು ಸೂಚಿಸುತ್ತದೆ. ಹೀಗಾಗಿ, ಕದಿಯುವುದು

ತಮ್ಮ ಮೂಲ ಕಸುಬಿನ ಗುಣ ಎಂದು ಕೆಲವು ಅಕ್ಕಸಾಲಿಗಳು ತಿಳಿದು, ಅದನ್ನು ಮುಂದುವರೆಸಿಕೊಂಡು ಬಂದಂತೆ ಕಾಣುತ್ತದೆ.

ಅಕ್ಕಸಾಲಿಗರು ತಾವು ಸಿದ್ಧಪಡಿಸಿದ ಆಭರಣಕ್ಕೆ ಅದರ ತೂಕಕ್ಕನುಗುಣವಾಗಿ ಕೊಂಡುಕೊಳ್ಳುವದರಿಂದ ಹಣಪಡೆಯುತ್ತಾ ಬಂದಿದ್ದಾರೆ. ಅದರಲ್ಲಿ ತಮ್ಮ ಕೂಲಿಯನ್ನೂ ಸೇರಿಸಿರುತ್ತಾರೆ. ಹಳೆಸಾಮಾನು ಕೊಟ್ಟು, ಹೊಸ ಆಭರಣ ಮಾಡಿಸುವಾಗ ಕೇವಲ ಕೂಲಿ ಪಡೆಯುತ್ತಾರೆ. ಹೆಚ್ಚಿಗೆ ತಮ್ಮಿಂದ ಏನಾದರೂ ಹಾಕಿ ಮಾಡುವುದಿದ್ದರೆ ಅದಕ್ಕೆ ಮತ್ತೆ ಕೂಲಿ ಪಡೆಯುವರು.

ಚಿನಿವಾರರ ಬಗೆಗೆ ಕನ್ನಡ ನಿಘಂಟುಗಳಲ್ಲಿ ಚಿನಿವರ, ಚಿನವಲ, ಚಿನವಾರ, ಚಿನವಾರ, ಚಿನಿವರ, ಚಿನಿವಲ, ಚಿನಿವಾಲ, ಚಿನ್ನವಾರ, ಚಿನ್ನವಾಲ, ಚಿನ್ನಿವಾರ, ಚಿನ್ನದ ವ್ಯಾಪಾರಿ ನಾಣ್ಯಗಳ ವಿನಿಮಯ ಮಡಿ ಕೊಡುವವನು ಎಂದಿದೆ. ಪ್ರಾಚೀನ ಕಾಲದಿಂದಲೂ ಜನರು ಲೋಹಗಳನ್ನು ಬಳಸುತ್ತಿದ್ದರು.[೨೫] ಇವುಗಳ ಬಗೆಗೆ ಅವರು ಅನುಭವದಿಂದ ಪಡೆದುಕೊಂಡ ಅವರದೇ ಆದ ಜ್ಞಾನ ಸಂಪತ್ತು ಇತ್ತು ಪುಡಿರೂಪದ ಅದಿರನ್ನು ದ್ರವರೂಪಕ್ಕೆ ಪರಿವರ್ತಿಸಿ ಪುನಃ ಅದನ್ನು ಘನರೂಪಕ್ಕೆ ತರುವ ಲೋಹ ಕೆಲಸದವರನ್ನು ಅಕ್ಕಸಾಲಿಗರು ಎನ್ನುವರು.

ಅಕ್ಕಸಾಲಿಗರು ತಮ್ಮದೆ ಆದ ವಿಧಾನದ ಮೂಲಕ ಆಭರಣಗಳನ್ನು ತಯಾರಿಸುವರು. ಸೃಷ್ಠಿಗೆ ಮೂಲ ಕುಲುಮೆ ಎಂಬ ನಂಬಿಕೆ ವಿಶ್ವಕರ್ಮರಲ್ಲಿದೆ. ಈತನೇ ಸೃಷ್ಠಿಕರ್ತ ಕುಲುಮೆ ಹುಟ್ಟಿದ ಮೇಲೆಯೇ ಕುಲಹುಟ್ಟಿತು ಎಂಬ ಮಾತು ಪ್ರಚಲಿತವಾಗಿದೆ. ಚಿನಿವಾರರ ಕೆಲಸಗಳಿಗೆ ಕೇವಲ ಲೋಹಗಳ ಉಪಕರಣಗಳಷ್ಟೇ ಅಲ್ಲದೆ ಬೆಳ್ಗಾರ, ಪುಡಿ, ಕೆ.ಡಿ.ಎಮ್. ಪಾದರಸ, ಅರಗು, ನವಸಾಗರ, ಅಡಿಗೆಸೋಡ, ನೈಟ್ರಿಕ್ ಆಮ್ಲ, ಗಂಧಕಾಮ್ಲ, ರೋಸ್‌ಗಡ್ಡೆ, ಮೌಲ್ಡಿಂಗ್, ಮಣ್ಣು, ರಾಜಾಮ್ಲ, ಜಲಜನಕಾಮ್ಲ, ಮುಂತಾದವುಗಳ ಅಗತ್ಯ ಬಹಳ ಬೆಳ್ಗಾರ ಎಂದರೆ ಅಭರಣಗಳನ್ನು ಬೆಸುಗೆ ಮಾಡಬೇಕಾದರೆ ಪ್ರಮುಖವಾಗಿ ಬಳಸಲೇಬೇಕಾದ ಒಂದು ಕಲ್ಲು. ಪೊಡಿ ಎಂದರೆ ಬೆಳ್ಳಿ, ತಾಮ್ರ ಹಾಗೂ ಚಿನ್ನದ ಮಿಶ್ರಣದ ಪುಡಿ ಆಗಿರುತ್ತದೆ. ಇದರಲ್ಲಿ ಚಿನ್ನಕ್ಕಿಂತ ಬೆಳ್ಳಿಯ ಪ್ರಮಾಣ ಹೆಚ್ಚಿರುತ್ತದೆ ಪೊಡಿ ಬೆಸುಗೆ ಮಾಡಿರುವ ಆಭರಣವನ್ನು ಕರಗಿಸಿದರೆ ಹೆಚ್ಚಿನ ಭಾಗ ವೇಸ್ಟೇಜ್ ಹೋಗುತ್ತದೆ. ಇದರಿಂದ ಆಭರಣ ಮಾಡುವವನಿಗೆ ಹೆಚ್ಚಿನ ಲಾಭವಾಗುತ್ತದೆ.

ಕೆ.ಡಿ.ಎಂ. ಎಂದರೆ ಚಿನ್ನ, ಬೆಳ್ಳಿ ಹಾಗೂ ತಾಮ್ರದ ಮಿಶ್ರಣದ ಲೋಹವಾಗಿಸಿ ಮೂಸೆಯಲ್ಲಿ ಮೂರು ಲೋಹಗಳನ್ನು ಹಾಕಿ ಕಾಯಿಸುತ್ತಾರೆ. ಅದರ ಜೊತೆಗೆ ಸ್ವಲ್ಪ ಅಡಿಗೆ ಸೋಡದ ಪುಡಿಯನ್ನು ಬೆರೆಸುತ್ತಾರೆ. ಆಗ ಮೂರು ಲೋಹಗಳು ಸಮನಾಗಿ ಬೆರೆತು ದ್ರಾವಣ ಆಗುತ್ತದೆ. ದ್ರಾವಣವನ್ನು ಅಚ್ಚಿಗೆ ಹಾಕಿ ನೀರಲ್ಲಿ ಅದ್ದುವುದರ ಮೂಲಕ ತಂಪುಗೊಳಿಸುತ್ತಾರೆ. ಆಭರಣಗಳಿಗೆ ರಂಧ್ರ ಹಾಕುವಾಗ, ಬೇರೆ ಬೇರೆ ಆಕಾರಗಳನ್ನು ಕೊರೆಯುವಾಗ ಕೆತ್ತುವಾಗ, ಉಜ್ಜುವಾಗ, ನಯಗೊಳಿಸುವಾಗ ಬೇರೆ ಬೇರೆ ಸಂದರ್ಭಗಳಲ್ಲಿ ಬಂಗಾರದ ಸೂಕ್ಷ್ಮವಾದ ಚೂರುಗಳು ಮಣ್ಣಲ್ಲಿ ಕೂಡುವುದುಂಟು. ಅಕ್ಕಸಾಲಿಯು ಆಭರಣಗಳನ್ನು ತಯಾರಿಸಲು ಬಂಗಾರ, ಬೆಳ್ಳಿ, ವಜ್ರ, ರತ್ನ, ಕೆಂಪು, ನೀಲಮಣಿ, ಪಚ್ಚೆ, ಹಸಿರು, ಪದ್ಮರಾಗ, ರಕ್ತಶಿಲೆ, ವೈಢೂರ್ಯ, ಹವಳ, ತೈಲಸ್ಫಟಿಕ ಕ್ಷೀರಸ್ಪಟಿಕ ಮತ್ತು ರಾಸಾಯನಿಕ ಸಂಯೋಜಿತ ಹರಳುಗಳನ್ನು ಬಳಸುತ್ತಾನೆ. ಅಲ್ಲದೆ, ಸಮುದ್ರದ ಉಪ್ಪು, ಪೆಟ್ಲುಪ್ಪು, ನುಣ್ಣನೆಯ ಕೆಂಪು ಮರಳು,

ಪಟಕ, ರಸಕರ್ಪೂರ, ಗಂಧಕಾಮ್ಲ, ನೈಟ್ರಿಕ್‌ಆಮ್ಲ ಮೊದಲಾದುವನ್ನೂ ತನ್ನ ಕಸಬಿನಲ್ಲಿ ಅಕ್ಕಸಾಲಿ ಉಪಯೋಗಿಸುತ್ತಾನೆ.

ಅಕ್ಕಸಾಲೆಯ ಉದ್ಯಮಕ್ಕೆ ಇಷ್ಟೇ ಸಾಲವು ವಿವಿಧ ಬಗೆಯ ಆಯುಧಗಳೂ ಬೇಕಾಗುತ್ತವೆ. ಇದ್ದಿಲನ್ನು ತಯಾರಿಸುವ ಕುಪ್ಪಡಿಗೆ (ಅಗ್ಗಿಷ್ಟಗೆ), ಊದುಕೊಳವೆ, ಸಣ್ಣತಿದಿ, ಮೂಸೆ, ಅಡಿಗಲ್ಲು, ಬಗೆಬಗೆಯ ಅಚ್ಚುಗಳು, ಸುತ್ತಿಗೆ, ಉಳಿ, ಕತ್ತರಿ, ಬೈರಿಗೆ, ತ್ರಿಜ್ಯಮಾಪಕ, ಇಕ್ಕಳ, ಚಿಮ್ಮಟ, ಅರಗುಗಳು, ಕುಂಚಗಳು ಮುಂತಾದುವು ಅವನ ಕಸುಬಿನಲ್ಲಿ ಬಳಸಲಾಗುವ ಆಯುಧಗಳು. ಇವು ಕಬ್ಬಿಣ ಅಥವಾ ಉಕ್ಕಿನಿಂದ ಮಾಡಿದಂಥವು. ಅಕ್ಕಸಾಲಿಗನಿಗೆ ಇವೆಲ್ಲಾ ಪೂಜ್ಯನೀಯ ವಸ್ತುಗಳಾಗಿವೆ. ಈ ಮೇಲಿನ ವಸ್ತು ಮತ್ತು ಆಯುಧಗಳ ಸಹಾಯದಿಂದ ಸ್ತ್ರೀಪುರಷರ ಹಾಗೂ ಮಕ್ಕಳ ವಸ್ತು-ಒಡವೆಗಳನ್ನು ತಯಾರಿಸುತ್ತಾನೆ. ಸ್ತ್ರೀಯರಿಗಾಗಿ ರಾಗಟೆ, ಜಡೆಬಿಲ್ಲೆ, ಚೌರಿ, ಬಾವಲಿ, ಓಲೆ, ಪದಕ, ಮೂಗುತಿ, ಲೋಲಕು, ಕಂಕಣ, ವಂಕಿ, ಬೂಜಬಂಧ, ಡಾಬು, ಕಾಲಗೆಜ್ಜೆ, ಕಾಸಿನಸರ, ಅವಲಕ್ಕಿಸರ, ಉಂಗುರ, ಕಾಲುಂಗರ, ಪಿಲ್ಲಿ, ಮಾಂಗಲ್ಯ, ತೀಕೆ, ಮಿಂಚು, ಚಿಂತಾಕು, ನಾಗರು, ಕಾಲುಚೈನು, ಕಾಲಗೆಜ್ಜೆ, ಗುಂಡು ಮುಂತಾದುವುಗಳನ್ನು ಮಾಡಿದರೆ ಪುರುಷರಿಗಾಗಿ ಕೊರಳಚೈನ, ಶರಟಿನ ಗುಂಡಿ, ಕೈಸರಪಣಿ, ಕೈಗಡಿಯಾರದ ಸರಪಣಿ, ಕಿವಿಯಲ್ಲಿ ಮುರುವು, ತಾಯಿತ, ಬೆರಳಿನುಂಗುರ ಮೊದಲಾದವುಗಳನ್ನು ತಯಾರಿಸದರೆ, ಮಕ್ಕಳಿಗಾಗಿ ಉಡಿದಾರ, ಕೈಗುಂಡು, ಕಾಲ್ಚೇನು, ಕಾಲ್ಕಡಗ, ಬೆರಳುಂಗುರ, ಮುರುವು ಮೊದಲಾದವುಗಳನ್ನು ಮಾಡುತ್ತಾನೆ.

ಗೃಹೋಪಯೋಗಿ ವಸ್ತುಗಳಾದ ಬೆಳ್ಳಿತಾಟು, ತಂಬಿಗೆ, ಲೋಟ, ಚಮಚೆ, ಬಟ್ಟಲು, ಭರಣಿ-ಪೂಜಾಸಾಮನುಗಳಾದ ಬೆಳ್ಳಿ ಆರತಿ, ಹೂವಿನಬುಟ್ಟಿ, ಅಲ್ಲದೆ ದೇವತಾವಿಗ್ರಹ, ಪ್ರಭಾವಳಿಗಳು, ಹಲವಾರು ಬಗೆಯ ಹಿಡಿಕೆಗಳು, ಛತ್ರಿಗಳು, ಬೀಸಣಿಕೆಗಳು, ಲಾಂಛನಗಳು ಇತ್ಯಾದಿ ಇತ್ಯಾದಿಗಳನ್ನು ಅಕ್ಕಸಾಲಿಯು ತಯಾರಿಸುತ್ತಾನೆ. ಪಂಚಲೋಹದ ವಿಗ್ರಹ ಮತ್ತು ಬೆಳ್ಳಿ ಬಂಗಾರ ಎರಡೆ ಲೋಹಗಳಿಂದ ತಯಾರಾಗುವ ದೇವತಾ ವಿಗ್ರಹಗಳನ್ನು ತಯಾರಿಸುವಾಗ ಕುಶಲಕರ್ಮಿಗೆ ಶಾಸ್ತ್ರದ ಪರಿಜ್ಞಾನವಿರವುದು ಅವಶ್ಯ

ಹೆಣ್ಣು ಮಕ್ಕಳ ಕಿವಿ-ಮೂಗು ಚುಚ್ಚುಬೇಕಾದರೆ ಅಕ್ಕಸಾಲಿಯೇ ಬೇಕು. ಆತ ಹಾಸ್ಯಪೂರ್ಣವಾಗಿ ಮಾತನಾಡಿಸುತ್ತ, ಎಳ್ಳಷ್ಟೂ ನೋವಾಗದಂತೆ ತುಂಬ ಚಮತ್ಕಾರಿಕವಾಗಿ ಚುಚ್ಚುತ್ತಾನೆ. ಅಂತೆಯೇ 'ಕಿವಿ ಪತ್ತಾರ ಚುಚ್ಚಬೇಕು' ಎನ್ನುವ ಮಾತು ಪ್ರಚಲಿತದಲ್ಲಿದೆ. ಪತ್ತಾರ ತನ್ನ ಕುಲಕಸುಬಿನೊಂದಿಗೆ ಇತರ ಕಸುಬುಗಳನ್ನೂ ಮಾಡುತ್ತಿದ್ದ ಎಂಬುದಕ್ಕೆ ಶಾಸನಾಧಾರಗಳಿವೆ. ಅಕ್ಕಸಾಲಿಗರು ಅಪರೂಪಕ್ಕೆ ಶಾಸನಗಳನ್ನು ಕೆತ್ತುತ್ತಿದ್ದರು. ಟಂಕಸಾಲೆಗಳಲ್ಲಿ ನಾಣ್ಯಗಳನ್ನು ತಯಾರಿಸಲು ಅಕ್ಕಸಾಲಿಗರನ್ನು ರಾಜರು ನೇಮಿಸುತ್ತಿದ್ದರು. ಅಕ್ಕಸಾಲಿಗ ಈ ಕೆಲಸಕ್ಕಾಗಿ ರಾಜರಿಂದ ವಾರ್ಷಿಕ ವೇತನವನ್ನು ಪಡೆಯುತ್ತಿದ್ದ ಅಲ್ಲದೆ ಬಡಗಿ, ಕಮ್ಮಾರರ ಕೆಲಸಗಳನ್ನು ಅಕ್ಕಸಾಲಿಗರು ಮಾಡುತ್ತಿದ್ದರೆಂದು ಶಾಸನಗಳು ಹೇಳುತ್ತಿವೆ.

ಅಕ್ಕಸಾಲಿಗರು ಆಭರಣ ಮಾಡುವ ಅನುಭವವನ್ನು ದಕ್ಷತೆಯನ್ನು ಗಳಿಸಿಕೊಂಡಿರುವನು. ಇವರು ಬಹುತೇಕ ಪರಂಪರೆಯನ್ನೇ ಅನುಸರಿಸುತ್ತಾನೆ.

ಬಂಗಾರವನ್ನು ಶುದ್ಧಗೊಳಿಸಲು ನೈಟಿಕ್ ಆಸಿಡ್, ಗಂದಕಾಮ್ಲ, ಅಡುಗೆಉಪ್ಪು, ಪಟಿಕೆಗಳು ಇರುತ್ತವೆ. ಚಿನ್ನ, ಬೆಳ್ಳಿ ಮೊದಲಾದ ಲೋಹವು ಪ್ರಕೃತಿಯಲ್ಲಿ ಸಹಜವಾಗಿ ಸಿಗುತ್ತಿದ್ದುದರಿಂದ ಅದಿರಿನಿಂದ ಲೋಹಗಳನ್ನು ಬೇರ್ಪಡಿಸುವ ವಿಧಾನವನ್ನು ಜನರು ಕಂಡುಕೊಂಡರು. ಪ್ರತಿಯೊಂದು ಆಭರಣಗಳನ್ನು ತಯಾರಿಸಲು ಅವರದೇ ಆದ ವಿಧಿವಿಧಾನಗಳು ಇವೆ. ಅಂತಹ ವಿಧಾನಗಳಲ್ಲಿ ಒಂದನ್ನು ನೋಡುವುದಾದರೆ ಮೊದಲು ಅಚ್ಚಿನ ಮಣಿಗೆ ಜೇಡಿ ಮಣ್ಣು ಅಥವಾ ತಿಳಿಮಣ್ಣನ್ನು ಭರ್ತಿಮಾಡಿ ಅದರೊಳಗೆ ಮಾದರಿ ಉಂಗುರಗಳನ್ನಿಟ್ಟು ಗುರುತು ಮಾಡಿಕೊಳ್ಳುತ್ತಾರೆ. ತಾವು ಬಳಸುವ ಬಂಗಾರ ಎಷ್ಟು ತೂಕದ್ದು, ಎಷ್ಟು ಉಂಗುರಗಳನ್ನು ತಯಾರಿಸಬೇಕೆಂಬುದರ ಆಧಾರದ ಮೇಲೆ ಚಿಕ್ಕ ಅಥವಾ ದೊಡ್ಡದಾದ ಅಚ್ಚಿನ ಮಣಿಯನ್ನು ಅಣಿಗೊಳಿಸುತಾರೆ. ಆನಂತರ ಮೂಸೆಯಲ್ಲಿ ಬಂಗಾರ, ಬೆಳ್ಳಿ ಹಾಗೂ ತಾಮ್ರವನ್ನು ತಾವು ಎಷ್ಟು ತೂಕದ ಉಂಗುರ ಮಾಡಬೇಕೆಂದು ಅದಕ್ಕೆ ತಕ್ಕಂತೆ ಈ ಲೋಹಗಳ ಮಿಶ್ರಣವನ್ನು ಕೂಡಿಸಿ ಅಗ್ಗಿಷ್ಟಿಕೆಯಲ್ಲಿಟ್ಟು ತಿದಿಯ ಸಹಾಯದಿಂದ ಬೆಂಕಿಯನ್ನು ಉರಿಸುತ್ತಾರೆ. ಅದರೊಳಗೆ ಒಂದೆರಡು ಚಿಟಕೆಯಷ್ಟು ಅಡಿಗೆಸೊಡು ಮತ್ತು ಸ್ವಲ್ಪ ನವಸಾಗರ (ಒಂದು ಬಗೆಯ ಪುಡಿ) ಹಾಕುತ್ತಾರೆ. ನಾವು ದೊಸೆ, ಇಡ್ಲಿ ಮಾಡುವಾಗ ಆ ಹಿಟ್ಟಿಗೆ ಸೊಡ ಬೆರೆಸಿದರೆ ಹಿಟ್ಟು ಉಕ್ಕಿ ತಿಂಡಿಗಳ ಮೃದುವಾಗುತ್ತವೆಯೋ ಹಾಗೆಯೋ ಇಲ್ಲಿ ಬಳಸಿದರೆ ಚಿನ್ನ, ಬೆಳ್ಳಿ, ತಾಮ್ರಗಳು ಒಂದಕ್ಕೊಂದು ಚೆನ್ನಾಗಿ ಮಿಶ್ರವಾಗುತ್ತವೆ. ಅಲ್ಲದೆ ನವಸಾಗರ ಸೇರಿಸುವುದರಿಂದ ಏನಾದರೂ ಕಸವಿದ್ದಲ್ಲಿ ಹೋಗಿ ಬಂಗಾರ ಹೊಳೆಯಲು ಅನುಕೂಲವಾಗುತ್ತದೆ. ಜೊತೆಗೆ ಬಂಗಾರದ ದ್ರವವನ್ನು ಅಚ್ಚಿನ ಮಣಿಗೆ ಬಸಿಯುವಾಗ ಮೂಸೆಯಲ್ಲಿ ಸ್ವಲ್ಪವೂ ಉಳಿಯದಂತೆ ಸಹಕರಿಸುತ್ತದೆ. ಹೀಗೆ ಚೆನ್ನಾಗಿ ಬಂಗಾರದ ದ್ರಾವಣ ಕುದಿದ ನಂತರ ಕೊಕ್ಕಿಕ್ಕೆಳ ಸಹಾಯದಿಂದ ಅಚ್ಚಿನ ಮಣಿಗೆ ಸುರಿಯುತ್ತಾರೆ. ಕೇಲವೆ ನಿಮಿಷಗಳಲ್ಲಿ ಇದು ಕಟ್ಟಿಯಾಗಿರುತ್ತದೆ. ಅಚ್ಚಿನ ಮಣಿಯ ಕಪಾಡುಗಳನ್ನು ತೆರೆದು ಒಳಗಡೆ ಇದ್ದ ಮಾದರಿ ಬಂಗಾರದ ಗಟ್ಟಿಯನ್ನು ದ್ರಾವಣದ ಸಹಾಯದಿಂದ ನೀರಿಗೆ ಹಾಕುತ್ತಾರೆ. ಹೀಗೆ ಆರಿಸಿದ ನಂತರ ಅದಕ್ಕೆ ಯಾವ ಸೈಜು ಆಕಾರ ಇತ್ಯಾದಿಯಾಗಿ ಗೆರೆ ಹಾಕುತ್ತಾರೆ. ನಂತರ ಹಿಡಿಗೆ ಅದನ್ನು ಸಿಕ್ಕಿಸಿಕೊಂಡು ಡ್ರಿಲ್ಲಿಂಗ್ ಮಿಷನ್ನಿಗೆ ಬಿಟ್ಸ್ ಹಾಕಿಕೊಂಡು ಅದರಲ್ಲಿ ಕೂರಿಸಲು ರಂಧ್ರವನ್ನು ಕೊರೆಯುತ್ತಾರೆ. ತಮಗೆ ಬೇಕಾದ ಆಕಾರಕ್ಕೆ ಕತ್ತರಿಸಿ ಕೊಳ್ಳುತ್ತಾರೆ. ಆನಂತರ ಅದನ್ನು ವರ್ತುಲಾಕಾರದಲ್ಲಿ ಮಾಡಿಕೊಂಡು ಸುತ್ತಲು ಅರದಿಂದ ಉಜ್ಜುತ್ತಾರೆ. ಹರಳು ಕೂರಿಸಬೇಕಾದ ಜಾಗದಲ್ಲಿ ಮೊದಲು ಸೀಉಳಿಯಂದ ಚಿನ್ನದ ವೆಸರನ್ನ ಎತ್ತುತ್ತಾರೆ. ಅಲ್ಲಿಗೆ ದ್ರಾವಣದ ಸಹಾಯದಿಂದ ಹರಳನ್ನು ಕೂರಿಸಿದ ನಂತರ ಮಸೆ ಹಾಕುತ್ತಾರೆ. ಮಸೆ ಹಾಕುವುದು ಎಂದರೆ ಉಂಗುರಕ್ಕೆ ಹರಳನ್ನು ಕೊರಿಸಿದ ನಂತರ ಹರಳಿನ ಸುತ್ತಲೂ ಇರುವ ಚಿನ್ನದ ಹೆಸರನ್ನು ಪೊಗೆರೆಯ ಸಹಾಯದಿಂದ ಮಡಿಸುತ್ತಾರೆ. ಅದರ ಮೇಲೆ ಮಸೆಸುತ್ತಿಗೆ (ಚಿಕ್ಕ ಸುತ್ತಿಗೆ)ಯಿಂದ ಮಲ್ಲಿಗೆ ಬಡಿದು ಹರಳು ಬೀಳದಂತೆ ನಯವಾಗಿ ಕೂರಿಸುತ್ತಾರೆ ಇದನ್ನೇ ಮಸೆ ಹಾಕುವುದು ಎನ್ನುವರು.

ಉಂಗುರವನ್ನು ಹಿಡಿದುಕೊಳ್ಳಲು ಅನುಕೂಲವಾಗುವಂತೆ ಹಿಡಿಗೆ ಹಾಕಿಕೊಂಡು ಕರಸಾನಿಯಿಂದ ಮೆರುವೆ ಪೊಗರೆವನ್ನು ಚೆನ್ನಾಗಿ ಉಜ್ಜಿ ಹಂತ ಮಾಡಿಕೊಂಡು ಸುತ್ತಲಿನ ವೆಸರನ್ನು ಹರಳಿನ ಮೇಲೆ ಕೊರಿಸುತ್ತಾರೆ. ಮೆದುವಾಗಿ ಮಸೆ ಸುತ್ತಿಗೆಯಿಂದ ಬಡಿಯುತ್ತಾರೆ.

ಆನಂತರ ಇಕ್ಕುಳಕ್ಕೆ ಉಂಗುರವನ್ನು ಸಿಕ್ಕಿಸಿಕೊಂಡು ತಮಗೆ ಬೇಕಾದ ಸೈಜಿಗೆ ವರ್ತುಲಾಕಾರವನ್ನು ಮಾಡಿಕೊಂಡು ಬೆಳ್ಗಾರರ ಸಹಾಯದಿಂದ ಬೆಸುಗೆ ಹಾಕುತ್ತಾರೆ. ತಮಗೆ ಬೇಕಾದ ಆಕಾರವನ್ನು ಸಾರವಾಗಿ ಅರಗಳಿಂದ ಉಜ್ಜುತ್ತಾರೆ. ಚಿನ್ನವನ್ನು ಕತ್ತರಿಸುವಾಗ ಆಭರಣಗಳನ್ನು ಉಜ್ಜುವಾಗ ಮಸೆ ಹಾಕುವಾಗ ಕೆಳಗಡೆ ಒಂದು ಅಗಲವಾದ ಹಸುವಿನ ಚರ್ಮವನ್ನು ಬಳಸುತ್ತಾರೆ. ಅದರಲ್ಲಿ ಉದುರುವ ಬಂಗಾರದ ಪುಡಿಯನ್ನು ಬ್ರಷ್ ಸಹಾಯದಿಂದ ಸಂಗ್ರಹಿಸಿ ಕರಗಿಸಿ ಮತ್ತೆ ಆಭರಣಗಳನ್ನು ಮಾಡಲು ಬಳಸುತ್ತಾರೆ. ಬೆಸುಗೆ ಕೆಲಸದಲ್ಲಿ ಮುಗಿದ ನಂತರ ಇಕ್ಕಳಕ್ಕೆ ಸೇರಿಸಿಕೊಂಡು ಉಂಗುರದಲ್ಲಿನ ಉಬ್ಬು-ತಗ್ಗುಗಳ ಸಮನಾಗುವಂತೆ ಮೊದಲು ಕೊಂಬಿನ ಸುತ್ತಿಗೆಯಿಂದ ಸುತ್ತಲೂ ಬಡಿಯುತ್ತಾರೆ. ಇದರಿಂದ ಉಂಗುರದ ಮೇಲೆ ಅಷ್ಟಾಗಿ ಕಚ್ಚು ಬಿಳದೆ ನಯಸ್ಸಾಗುವ ಸಂಭಾವ ಹೆಚ್ಚು ಇರುತ್ತದೆ.

ಹೀಗೆ ಒಂದು ವಸ್ತು ಅಥವಾ ಆಭರಣಗಳನ್ನು ತಯಾರಿಸುವಾಗ ಅದರದೇ ಆದ ವಿಧಿ-ವಿಧಾನ ತಂತ್ರಜ್ಞಾನಗಳಿರುತ್ತವೆ. ಇಂತಿಂಥ ಗಾತ್ರದ ಆಭರಣಗಳನ್ನು ಮಾಡಬಹುದೆಂದು ನಿರ್ಣಯಿಸಬಲ್ಲ ಅಕ್ಕಸಾಲಿಗ ಒಮ್ಮೆ ಒಂದು ಆಕಾರವನ್ನು ನೋಡಿದರೆ ಸಾಕು ಆತ ಅದನ್ನು ಮಾಡಿಯೇ ಮಾಡುತ್ತೇನೆಂಬ ಛಲ ಬರುತ್ತದೆ. ಅವನ ಕೈಚಳಕದ ಮಾನದಂಡವೆನೆಂಬುದನ್ನು ಸೂಕ್ಷ್ಮಾತಿ-ಸೂಕ್ಷ್ಮ ಆಭರಣಗಳ ಮಾದರಿ ನೋಡಿದರೆ ತಿಳಿಯುತ್ತದೆ. ಆಭರಣಗಳ ಕುಸುರಿ ಕೆತ್ತನೆಯ ಕೆಲಸ ಮುಂತಾದವುಗಳಿಂದ ಅವರ ಕಲೆ ಅಭಿವ್ಯಕ್ತಿಗೊಳ್ಳುತ್ತದೆ. ಈ ವಿಧಿ ವಿಧಾನಗಳ ಕುರಿತು ಸ್ವವಿವರವಾಗಿ ಹಡಗಿಲಿಯ ಹಂಸಾನಂದ ಚಾರ್ಯರು ತಿಳಿಸಿದ್ದಾರೆ. ವಿಜಯನಗರ ಕಾಲದಲ್ಲಿ ಹೇಗೆ ತಯಾರಿಸುತ್ತಿದ್ದರು ಎಂದು ಈ ಕೆಳಗಿನ ಆಧಾರ ಪುಷ್ಟಿಕೊಡುತ್ತದೆ.

ಪುಡಿ ಕತ್ತು ಕುಂಕುಮ ಕಪ್ಪುರ ಪುಡಿ
ಬಿಡುಮುತ್ತು ಮಾಣಿಕದೊಡನೆ
ಹಿಡಿಹೊನ್ನ ಸೂರೆಯಬಿಟ್ಟರಿಕ್ಕೆಲದಂ
ಗಡಿಗರತೀವ ಮೊದದಲಿ. ಮೋ. ತ. ಸಂ-೪೨, ಪ-೨೮,

ಬೀದಿಯ ಪಕ್ಕದ ಅಂಗಡಿಕಾರರು ಕತ್ತುರಿ-ಕುಂಕುಮ-ಕಪ್ಪುರದ ಹುಡಿಯನ್ನು ಹಾಗೂ ಬೊಗಸೆಗಟ್ಟಲೆ ಹೊನ್ನು ಮಾಣಿಕವನ್ನು ಹರುಷದಿಂದ ತೂರಿ ಸೂರೆಗೊಳಿಸಿದರು. ವಿಜಯನಗರ ಕಾಲದಲ್ಲಿ ಬೀದಿಗಳಲ್ಲಿ ಹೊನ್ನು-ವರಗಳನ್ನು ಮಾರಾಟ ಮಾಡುತ್ತಿದ್ದರು ಎಂದು ಜನಜನಿತವಾದ ಮಾತು.

ತೋರಮಾಣಿಕ ಪಚ್ಚೆ ವಜ್ರವೈಢೂರಿಯ
ನೇ ರಾಣಿಮೌಕ್ತಿಕ ನೀಲ
ದಾರಾಜಿಪ ರತ್ನಭೂಷಣಂಗೆಯ್ವ ಸೋ
ನ್ನಾರರಂಗಡಿಗಳೊಪ್ಪಿದುವು. ಮೋ.ತ. ಸಂ-೩, ಪ-೨೫,

ಬೆಲೆಯುಳ್ಳ ಮಾಣಿಕ, ಪಚ್ಚೆ, ನೀಲ ಮೊದಲಾದ ವಜ್ರವೈಡೂರ್ಯಗಳಿಂದ ಮುತ್ತುಗಳಿಂದ ಮನೋಹರವಾದ ರತ್ನಭರಣಗಳನ್ನು ಮಾಡುವ ಅಕ್ಕಸಾಲಿಗರ ಅಂಗಡಿಗಳು ಕಂಗೊಳಿಸಿದವು.

ಸಾಣೆಯ ಮೇಲೆ ರನ್ನಗಳಿಟ್ಟು ಮಸೆದೊಪ್ಪ
ಗಾಣಿಸಿ ಕುಡುವತೀಟಿಗರು
ಆಣಿ ಮುತ್ತಿಗೆ ವೆಗ್ಗಳ ಬೆಲೆಗಟ್ಟುವ
ವಾಣಿಜರಿರ್ದರಿಕ್ಕೆಲದಿ. ಮೋ.ತ. ಸಂ-೩, ಪ-೨೬,

ರತ್ನಗಳಿಗೆ ಸಾಣೆಯನ್ನು ಹಚ್ಚಿ ಹೊಳಪು ಮಾಡಿಕೊಡುವ ಸಾಣೆಗಾರರು, ಮತ್ತು ಶ್ರೇಷ್ಠ ಮುತ್ತುಗಳಿಗೆ ಅಮಿತ ಬೆಲೆಕಟ್ಟುವ ವ್ಯಾಪಾರಿಗಳು ಬೀದಿಯ ಎರಡೂ ಬದಿಗೆ ಇದ್ದರು. ಅವರು ತಮ್ಮದೇಯಾದ ತಂತ್ರಜ್ಞಾನದ ಮೂಲಕ ತಯಾರಿಸುತ್ತಿದ್ದರು.

ಚಪ್ಪನ್ನ ದೇಶದ ನಾಣೆಯಂಗಳ ನೋಟ
ತಪ್ಪದ ಚಪಲ ಸೆಟ್ಟಿಗಳು
ಒಪ್ಪವಡೆದು ಕುಳಿತಿರ್ದರು ಹಣಹೊನ್ನ
ಕುಪ್ಪೆಯ ಮುಂದಿಟ್ಟುಕೊಂಡು. ಮೋ.ತ. ಸಂ–೩, ಪ–೨೭,

ಐವತ್ತಾರು ದೇಶದ ನಾಣ್ಯಗಳಣ್ಣು ಕಾಯುತ್ತ ಚುರುಕುಗಣ್ಣಿನ ಶೆಟ್ಟಿಗಳು ಹಣ ಬಂಗಾರದ ಕುಪ್ಪರಿಗೆಗಳನ್ನು ಮುಂದಿಟ್ಟುಕೊಂಡ ಠೀವಿಯಿಂದ ಕುಳಿತಿದ್ದರು. ಅಂದು ವಿಜಯನಗರಕ್ಕೆ ವಿವಿಧ ಸಾಮ್ರಾಜ್ಯಗಳ ವ್ಯಾಪರಸ್ಥರು ಬಂದು ತಮ್ಮ ಆಭರಣಗಳನ್ನು ಮಾರಾಟ ಮಾಡುತ್ತಿದ್ದರು.

ಒರಗಲ್ಲ ರಜವ ಮೇಣದೊಳೊತ್ತಿ ತೆಗೆದದ
ಕರಗಿ ಸುವರ್ಣಖಂಡುಗವ
ನೆರೆದ ಯಾಚಕರಿಗೆ ಹಂಚಿ ಕುಡುವ ಚಿನ್ನ
ವರದರೊಪ್ಪಿದರು ಕಟ್ಟೆಯಲ್ಲಿ. ಮೋ.ತ. ಸಂ–೩, ಪ–೨೮,

ಒರಗಲ್ಲಿಗೆ ಹತ್ತಿದ ಬಂಗಾರದ ಧೂಳಿಯನ್ನು ಮೇಣದಿಂದೊತ್ತಿ ತೆಗೆದು, ಕರಗಿಸಿ ಮಾಡಿದ ಬಂಗಾರದ ತುಣುಕುಗಳನ್ನು ನೆರೆದ ಯಾಚಕರಿಗೆ ಹಂಚಿಕೊಡುವ ಚಿನ್ನದ ವ್ಯಾಪಾರಿಗಳು ಕಟ್ಟೆಯ ಮೇಲೆ ಶೋಭಿಸಿದರು.

ಓರಂತೆ ಮರಕಾಲರು ಹಡಗಿನ ವ್ಯವ
ಹಾರದಿ ಗಳಿಸಿದ ಹಣವ
ಭಾರ ಸಂಖ್ಯೆಯಲ್ಲಿ ತೂಗುವರು ಬೇಡಿದರೆ ಕು
ಬೇರಂಗೆ ಕಡವ ಕೊಡುವರು. ಮೋ.ತ. ಸಂ–೩, ಪ–೨೯,

ಹಡಗದ ವ್ಯಾಪಾರಿಗಳು ತಾವು ಗಳಿಸಿದ ಹಣವನ್ನು ಅಧಿಕ ಲೆಕ್ಕದಲ್ಲಿ ತೂಕಮಾಡುವವರು ಅಷ್ಟೇ ಅಲ್ಲ ಕುಬೇರನಿಗೂ ಕಡವಾಗಿ ಕೊಡುವಂಥವರು. ಅಕಸಾಲಿಗರು ಅಂದು ಶ್ರೀಮಂತರಾಗಿದ್ದು, ಸಾಮ್ರಾಜ್ಯದ ಆರ್ಥಿಕ ವ್ಯವಹಾರದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಕಂಚುಗಾರು ಕೈದುಗಾರರು ಹೊಳೆಯ ಹೊಂ

ಮಂಚಗಾರು ಶಿಲ್ಪಿಗರು

ಸಂಚುಗಾರರು ಸದ್ವಿಧಿಕರಾದ

ಪಂಚಾಳರಿರ್ದರಿಕ್ಕಲದಿ. ಮೋ ತ ಸಂ–೨೨,

ಕಂಚುಗಾರರು, ಕಮ್ಮಾರರು, ಹೊಳೆಯುವ ಚಿನ್ನದ ಮಂಚ ತಯಾರಕರು, ಶಿಲ್ಪಗಳು, ಕುಶಲ ವಿದ್ಯಾವಂತರಾದ ಅಕ್ಕಸಾಲಿಗರು ಹೀಗೆ ಬೀದಿಯ ಎರಡು ಪಕ್ಕದಲ್ಲಿ ಪಂಚಾಳರಿದ್ದರು.

ಅಗಸರು

ದಕ್ಷಿಣ ಭಾರತದ ಗ್ರಾಮಗಳ ಸೇವಕ ವರ್ಗದಲ್ಲಿ ಮಹತ್ವದ ಪಾತ್ರ ಅಗಸರಿಗಿದೆ. ಶ್ರೇಣೀಕರಣದಲ್ಲಿ

ಆಯಾಯಾ ಪ್ರದೇಶದಲ್ಲಿ ಅಗಸರು ಯಾವ ಸ್ಥಾನದಲ್ಲಿರುವರೋ ಅಲ್ಲಿಂದ ಮೇಲಿನ ಕುಲಗಳ ಬಟ್ಟೆಗಳನ್ನು ಮಡಿ ಮಾಡುವುದಕ್ಕಷ್ಟೇ ಅವರ ವೃತ್ತಿ ಸೀಮಿತವಾಗಿಲ್ಲ, ನಿಜ, ಇದು ಅವರ ಪ್ರಧಾನ ಕಸುಬು. ಆದರೆ ಇಲ್ಲಿಂದಲೇ ಅವರ ಸಾಮಾಜಿಕ ಸಂಬಂಧಗಳ ವಿಚಿತ್ರ ಜಾಲ ಪ್ರಾರಂಭವಾಗುತ್ತದೆ. ಕಸುಬಿನ ಪಾವಿತ್ರ್ಯದ ಮಹತ್ವವನ್ನು ವಿಧಿಯಾಚರಣೆಗಳ ಸಂದರ್ಭಗಳಲ್ಲಿ ಪ್ರಕಟ ಮಾಡುವ ವಿಧಾನ ಆಶ್ಚರ್ಯಕರ. ಕುಲ ಮೇಲು-ಕೀಳಿನ ವ್ಯವಸ್ಥೆಯಲ್ಲಿ ಅಗಸರು ಮಧ್ಯದಲ್ಲೇಲ್ಲೋ ಬರುತ್ತಾರಾದರೂ ನಿರ್ದಿಷ್ಟ ಸಂದರ್ಭಗಳಲ್ಲಿ ಅವರ ಪ್ರಾಮುಖ್ಯತೆ ಬ್ರಾಹ್ಮಣರಂಥ ಸರ್ವಶ್ರೇಷ್ಠ ಕುಲದವರನ್ನೂ ಕೂಡ ನಿಯಂತ್ರಿಸುತ್ತದೆಂಬುದನ್ನು ಕಾಣಬಹುದು. ಈ ಮಾತು ಅಸ್ಪೃಶ್ಯರಾದ ಹೊಲೆಯ-ಮಾದಿಗರಿಗೂ ಅನ್ವಯಿಸುವಂಥದೇ.

ವೈದಿಕ ಕಾಲದ ವ್ಯವಸ್ಥೆಗೆ ಪ್ರತಿಯಾಗಿ ವೈಶಿಷ್ಟ್ಯ ಪೂರ್ಣವಾಗಿರುವ ದ್ರಾವಿಡಕುಲ ವ್ಯವಸ್ಥೆಯ ಸಾಮಾನ್ಯ ಲಕ್ಷಣಗಳಿಗೆ ಅಗಸರು ಹೊರತಾಗಿಲ್ಲ. ಅಂದರೆ ವೈದಿಕ ಕುಲದ ಸಾಮಾನ್ಯ ಲಕ್ಷಣಗಳನ್ನು ಅಗಸ ಕುಲವೂ ಮೀರುತ್ತದೆ. ಮೋಲ್ನೋಟಕ್ಕೆ ಕಾಣಬರುವಂತೆ ಬಟ್ಟೆಗಳನ್ನು ಮಡಿ ಮಾಡಿ ಕೊಡುವ ಅಗಸರ ಕಸುಬು ಚರಿತ್ರೆಯ ಯಾವ ಕಾಲದಲ್ಲಿ ಹುಟ್ಟಿರಬಲ್ಲದೆಂಬುದನ್ನು ಸೂಚಿಸುತ್ತದೆ. ಕುಲಗಳಿಂದಲೆ ಹೊರಗಿಡಬಲ್ಲ ಸೂತಕ ಅಥವಾ ಮೈಲಿಗೆಯನ್ನು ಕಳೆಯುವ ಕ್ಷೌರಿಕ ಮತ್ತು ಅಗಸ ಕುಲಗಳು ಅತ್ಯಂತ ಪವಿತ್ರವಾಗಿದ್ದವು ಎಂದು ಸಮರ್ಥಿಸುವುದು ಇಲ್ಲಿಯ ಉದ್ದೇಶವಾಗಿದೆ. ದುಡಿಮೆಗಾರ ಕುಲಗಳು ದಕ್ಷಿಣ ಸಮಾಜ ಮತ್ತು ಸಂಸ್ಕೃತಿಯಲ್ಲಿ ಕೀಳಾಗಿರಲಿಲ್ಲ. ಕೂದಲು, ಉಗುರಿನಂಥ ಅಪವಿತ್ರ ವಸ್ತುಗಳನ್ನು ದೇಹದಿಂದ ಬೇರ್ಪಡಿಸುವ ಮತ್ತು ಹೊಲಸು ಬಟ್ಟೆಗಳನ್ನು ಸೆಳೆಯುವ ಕ್ಷೌರಿಕ ಮತ್ತು ಅಗಸರು ಕೀಳು ಕುಲದವರು ಎಂದು ಸ್ಥಾಪಿತವಾದುದು ವೈದಿಕರ ಪ್ರಭಾವದಿಂದಲೇ ಶೋಷಕ ವರ್ಗಗಳಿಗೆ ದುಡಿಯುವ ಕುಲಗಳು ದಾರಿಯನ್ನೇ ಹಿಡಿದುದು ಕರ್ನಾಟಕದಲ್ಲಿಯ ಅನುಭವವಾಗುತ್ತದೆ. ಆದರೂ ಕರ್ನಾಟಕದ ಕ್ಷೌರಿಕರು ಮತ್ತು ಅಗಸರು ತಮ್ಮ ಆದಿಮ ಸ್ಥಾನಮಾನಗಳನ್ನು ಉಳಿಸಿಕೊಂಡೆ ಬಂದರು.

ನಿರ್ದಿಷ್ಟ ಕುಲದೊಳಗೆ ಶುದ್ಧಿ ಮಾಡುವ ಕ್ಷೌರಿಕ ಮತ್ತು ಅಗಸ ಕುಲಗಳು ದಕ್ಷಿಣ ನಾಡಿನಲ್ಲಿ ಹುಟ್ಟಿದವು. ಹೊಲೆಯ ಮಾದಿಗರಲ್ಲಿ ಅವರ ಕುಲದ ಅಗಸ ಮತ್ತು ಕ್ಷೌರಿಕರಿದ್ದಾರೆ. ಈ ಲಕ್ಷಣ ಹೊಲೆಯ ಮಾದಿಗರಿಷ್ಟೇ ಸಂಬಂಧಿಸಿದ್ದಲ್ಲ ಎನ್ನಲು ತಿಯಾನ್‌ನಂಥ ಹಲವಾರು ಕುಲಗಳು ಸಾಕ್ಷಿಯಾಗಿವೆ. ಅಸ್ಪೃಶ್ಯರಾದ ಕಾರಣಕ್ಕಾಗಿಯೇ ಹೊಲೆಯ ಮಾದಿಗರು ಪ್ರತ್ಯೇಕ ಅಗಸ ಮತ್ತು ಕ್ಷೌರಿಕರನ್ನು ನಿರ್ಮಿಸಿಕೊಳ್ಳ ಬೇಕಾಯಿತೆಂದು ಹೇಳುವುದು ಸರಿಯಲ್ಲ ಎಂಬುದು ಈ ಉದಾಹರಣೆಯಿಂದ ಸ್ಪಷ್ಟವಾಗುವ ಅಂಶ ಒಂದು ಕುಲದೊಳಗೆ ಕಸುಬುದಾರರು ಇತರ ಉಪಕಸುಬು ಕುಲಗಳು ಹುಟ್ಟಿಕೊಳ್ಳುವ ಪ್ರಕ್ರಿಯೆ ದಕ್ಷಿಣ ಭಾರತದ ಕುಲಗಳ ವೈಶಿಷ್ಟ್ಯ, ತಮಿಳು ನಾಡಿನ ಪರ್ಯೆಯಾನ್ (ದಲಿತ) ಇದಕ್ಕೆ ಉತ್ತಮ ನಿದರ್ಶನ, ಅವರಲ್ಲಿ ನೇಕಾರ, ಅಗಸ, ಕ್ಷೌರಿಕ, ಬಡಿಗ ಮೊದಲಾದ ಕಸುಬುಗಳು ಅನೇಕ ಉಪಕಸುಬುಗಳಾಗಿವೆ.[೬] ಮೂಲ ಕೆಲಸುಗಾರ ಕೃಷಿಕ ಪರ್ಯೆಯಾನ್ (ಹೊಲೆಯ) ಕುಲದಿಂದಲೇ ಪಂಚಾಳರು ಮತ್ತು ಅಗಸರು, ಕ್ಷೌರಿಕರು ಹುಟ್ಟಿಕೊಂಡು ನಂತರ ಮೇಲ್ಜಾತಿಗಳಾಗಿರಬೇಕೆಂಬ ಮಹತ್ವದ ವಿಚಾರದ ಚರ್ಚೆ ನಡೆಯಬೇಕಾಗಿವೆ.

ಅಗಸ ಮತ್ತು ಕ್ಷೌರಿಕರು ತಮ್ಮ ಕಸುಬುಗಳ ಮೂಲಕವಷ್ಟೇ ಸ್ಥಾನಮಾನ ಪಡೆದವರಾಗಿರಲಿಲ್ಲ, ಮದುವೆ, ಸಾವು, ಮೈನೆರೆದ ಸಂದರ್ಭದಲ್ಲಿ ಪೂಜಾರಿಯಂತೆ ಕೆಲಸ ಮಾಡುವ ಮೂಲಕ (ವಿಧಿಯಾಚರಣೆಗಳನ್ನು ಪೂರೈಸುವ) ಬೇರೆ ವಿಧದಲ್ಲಿ ಆಲೋಚಿಸುವುದಕ್ಕೆ ಪ್ರೇರಣೆ ನೀಡುತ್ತಾರೆ. ಮದುವೆ ಮಾಡುವ ವಿಧಿಯಾಚರಣೆಗಳಲ್ಲಿ ಅಗಸಗಿತ್ತಿ, ವರನ ಬಾಯಿಂದ ಹಪ್ಪಳ ತೆಗೆಯುವ ಸಂದರ್ಭ ಬರುತ್ತದೆ. ಕ್ಷೌರಿಕ ವಿಧಿ ಬದ್ಧವಾಗಿ ವರನ ಕೂದಲು ಮತ್ತು ಉಗುರು ತೆಗೆಯುತ್ತಾನೆ. ತಿಯಾನ್ ಹುಡುಗಿ ಮೈನೆರೆದ ಸಂದರ್ಭದಲ್ಲಿ ಕೈಕೊಳ್ಳುವ ಸುದೀರ್ಘವಾದ ಕ್ರಿಯಾಚರಣೆಯಲ್ಲಿ ಅಗಸ ಮತ್ತು ಅಗಸಗಿತ್ತಿಯರು ತುಂಬ ಮಹತ್ವದ ಪಾತ್ರವಿದೆ. ಥರ್‌ಸ್ಟನ್ ವಿವರಣೆ ನೀಡಿದ್ದಾರೆ. ಬಟ್ಟೆ ಬದಲಿಸುವ ಪ್ರಸಂಗ ತುಂಬ ವೈವಿಧ್ಯಮಯವಾದ ರಿಚ್ಯುವಲ್‌ಗಳ ಹಿನ್ನೆಲೆಯಲ್ಲಿಯೇ ನಡೆಯುತ್ತಿತ್ತು. ಅದನ್ನು ನಡೆಸುವವರು ಅಗಸ ದಂಪತಿಗಳು ಈ ಸಂಗತಿ ಅಗಸರನ್ನು ಅವರ ಕಸುಬಿಗಷ್ಟೇ ಸೀಮಿತಗೊಳಿಸುವ ಹಾಗಿಲ್ಲ. ಈ ಕಸುಬುಗಳ ಮೂಲಕ ದಕ್ಷಿಣ ಭಾರತದಲ್ಲಿ ಸಮಾಜ ವಿಧಿ ಬದ್ಧ ಆಚರಣೆಗಳನ್ನೂ ಪೂರೈಸುತ್ತಿತ್ತು. ಇದು ಅಗಸರು ಒಂದು ಕಾಲಕ್ಕೆ ಪೂಜಾರಿಗಳಾಗಿದ್ದರೆಂಬುದನ್ನು ದೃಢಪಡಿಸುತ್ತದೆ. ಈಗಲೂ ಕರ್ನಾಟಕದ ಎಷ್ಟೋ ಗ್ರಾಮ ದೇವತೆಗಳ ಪೂಜಾರಿಗಳು ಅಗಸರಾಗಿದ್ದಾರೆ. ಹಬ್ಬ, ಉತ್ಸವ, ಜಾತ್ರೆಗಳಂಥ ಸಂದರ್ಭಗಳಲ್ಲಿ ಅವರ ಪಾತ್ರ ವಿಶೇಷವಾಗಿರುತ್ತವೆ. ಋತುಮತಿಯಾದ ಹುಡುಗಿಗೆ ಮಾಡುವ ವಿಧಿಯ ಆಚರಣೆಯಲ್ಲಿ ಅಗಸ ದಂಪತಿಗಳು ದೀಪ, ಆಹಾರಧಾನ್ಯ ಮತ್ತು ಅನ್ನ, ಅರಿಶಿಣ, ತೆಂಗಿನಕಾಯಿ, ಗಿಂಡಿಗಳನ್ನು ಬಳಸುತ್ತಾರೆ. ಇವೆಲ್ಲ ಮದುವೆ, ಸಾವಿನಂಥ ಮಹತ್ವದ ಘಟನೆಗಳಲ್ಲಿಯೂ ಮುಖ್ಯವಾಗುತ್ತದೆ. ಅಗಸನು ಅನೇಕ ಕೆಲಸಗಳಲ್ಲಿ ಹುಡುಗಿ ಸ್ನಾನ ಮಾಡಲು ಹೋದ ಕರೆ ದಂಡೆಗೆ ಸಾಂಕೇತಿಕ ಕಾಮನ ಬಿಲ್ಲನ್ನು ಬಗ್ಗಿಸಿ ಹಿಡಿದಾಗ ಆಕೆ ಅದಕ್ಕೆ ತಾಕದಂತೆ ಅದರ ಮಧ್ಯೆ ದಾಟುವುದೂ ಇದೆ.[೯೭]

ದಕ್ಷಿಣ ಕರ್ನಾಟಕದ ಹಳ್ಳಿಗಳ ಅಮ್ಮಂದಿರ ಹಬ್ಬ ಅಥವಾ ಜಾತ್ರೆಗಳಲ್ಲಿ ಹೊಲೆಯ, ಮಾದಿಗ ಮತ್ತು ಪೂಜಾರಿಗಳ ಜತೆ ಮಡೆ ಅನ್ನವನ್ನು ಮತ್ತು ಬಲಿಯಾದ ಕುರಿ, ಮೇಕೆ ಮೊದಲಾದ ಪ್ರಾಣಿಗಳ ತಲೆಗಳನ್ನು ಅಗಸ ಮತ್ತು ಕ್ಷೌರಿಕರಿಗೂ ಸಮವಾಗಿ ಹಂಚುವ ವ್ಯಾಪಕ ಪದ್ಧತಿ ಇದೆ. ಹಳ್ಳಿಗಳ ಮೂಲ ನಿವಾಸಿಗರು ಹೊಲೆಯರು ಮತ್ತು ಮಾದಿಗರು, ಕೃಷಿ ಪ್ರಧಾನವಾದ ಇದರ ಸಮಾಜ ಮಾತೃ ಅಧಿಕಾರವನ್ನು ಒಳಗೊಂಡಿತ್ತು.

ಅಗಸರು–ಉತ್ತರ ಕರ್ನಾಟಕದಲ್ಲಿ ೧೨ನೆಯ ಶತಮಾನದ ಕಾಯಕ ಜೀವಿಗಳ ಚಳುವಳಿ ಮತ್ತು ಮಡಿವಾಳ ಮಾಚಯ್ಯನಂಥ ಶರಣರಿಂದಾಗಿ ಅಗಸರ ಸಮಾಜ ಪ್ರಭಾವಿತವಾಯಿತು. ಆದರೆ ದಕ್ಷಿಣ ಕರ್ನಾಟಕದಲ್ಲಿ ಅವರ ಸ್ಥಿತಿಗತಿ ಮೂಲದಿಂದ ಹೆಚ್ಚು ಭಿನ್ನವಾಗಲಿಲ್ಲ. ತುಳುನಾಡಿನ ಅಗಸರ ಬಗ್ಗೆ ಥರಸ್ಟನ್ ಮಾಹಿತಿ ಸಂಗ್ರಹಿಸಿದ್ದಾರೆ.

ತುಳುಭಾಷಿಕ ಅಗಸರು ಅಳಿಯ ಸಂತಾನ ಪದ್ಧತಿಯನ್ನು ಅನುಸರಿಸುತ್ತಾರೆ. ಅಗಸಿ (ರುಮಾಲು) ಎಂಬ ಪದವು ಅಗಸಕ್ಕೆ ಮೂಲವೆಂದು ಭಾವಿಸಲಾಗಿದೆ. ಬಟ್ಟೆ ಸೆಳೆಯುವುದು ವಂಶಪಾರಂಪರ್ಯ ಕಸುಬಾಗಿದೆ. ಕತ್ತೆಗಳ ಮೇಲೆ ಕಾಳು ಸಾಗಿಸುವ ಮದುವೆ–ಉತ್ಸಾವಾದಿಗಳಲ್ಲಿ ದೀಪ ಹೊತ್ತೊಯ್ಯುವ ಮೊದಲಾದ ಉಪವೃತ್ತಿಗಳನ್ನು ಮಾಡುತ್ತಿದ್ದರು. ಅನುವಂಶಿಕ ವೃತ್ತಿಗೆ ರೈತರಿಂದ ಆಯ್ಕೆಯನ್ನು

ಪಡೆಯುವ ಹಕ್ಕುಳ್ಳವರಾಗಿದ್ದರು. ಹುಡುಗಿ ದೊಡ್ಡವಳಾದಾಗ ಗಂಡನ ಮನೆಗೆ ಸುದ್ದಿ ಮುಟ್ಟಿಸುವುದು ಇವರ ಕುಲಕ್ಕಂಟಿದ ಸಾಮಾಜಿಕ ಸೇವೆಗಳಲ್ಲಿ ಸೇರಿತು. ಅಗಸರು ತಮ್ಮ ಕಸುಬುಗಳ ಉಪಕರಣಗಳನ್ನು ಪೂಜಿಸುತ್ತಾರೆ. ಹೊಲಸು ಬಟ್ಟೆಗಳನ್ನು ಕುದಿಸುವ ದೊಡ್ಡ ಪಾತ್ರ 'ಉಬ್ಬೆ' ಬಟ್ಟೆಗಳು ಸುಟ್ಟುಹೋಗಬಾರದೆಂದು ಉಬ್ಬೆಗೆ ಪೂಜೆ ಮಾಡಿ ಪ್ರಾಣಿ ಬಲಿ ನೀಡುವುದು ವಾಡಿಕೆ ಭೂತದೇವ ಎಂಬ ದೇವರ ಗುಡಿಗಳಲ್ಲಿ ಅಗಸ ಕುಲದ ಪೂಜಾರಿಗಳಿದ್ದಾರೆ. ಉಬ್ಬೆ ಅಮ್ಮ ಈ ಮಾತೃದೇವತೆಗೆ ಪ್ರಾಣಿಬಲಿ ಇದೆ. ಈ ಸಂಗತಿಗಳು ಅಗಸರನ್ನು ಮಾತೃಮೂಲದ ಆದಿಮ ದ್ರಾವಿಡ ಕುಲಗಳಿಗೆ ಸೇರಿಸುತ್ತವೆ. ದಕ್ಷಿಣ ಭಾಗದಲ್ಲಿ ಪ್ರತಿ ಕುಲವು ತನ್ನದೇ ಆದ ಪೂಜಾರಿ ವರ್ಗವನ್ನು ಹೊಂದಿರುತ್ತದೆ. ಕಸುಬಿಗೆ ಪ್ರತ್ಯೇಕತೆ ಮತ್ತು ವೈಶಿಷ್ಟ್ಯಗಳು ಪ್ರತ್ಯೇಕ ದೇವರು ಮತ್ತು ಪುರೋಹಿತರನ್ನು ಕಲ್ಪಿಸುತ್ತಾ ಬಂದಿವೆ. ಭೂತದೇವರ ಪೂಜಾರಿಕೆ ಅಗಸರಿಗಿದೆ. ವಿಷ್ಣು ಆರಾಧಕರಾಗಿರುವುದರಿಂದ ಸನಾತನಿಗಳೂ ಇವರ ಪುರೋಹಿತರು ಭೂತ ಉತ್ಸವದಲ್ಲಿ ಪೊಂಬದರು ಅಥವಾ ಪರವರು (ಹೊಲೆಯರು) ಪ್ರಾಣಿಗಳನ್ನು ಹಿಡಿದಿದ್ದರೆ ಅದರ ರುಂಡ ಕತ್ತರಿಸುವವರು ಅಗಸರು ಭೂತಕಾಲದಲ್ಲಿ ಮುಖ್ಯ ಆಶಯವಾದ ಪ್ರಾಣಿ ಬಲಿ ಅಸ್ಪೃಶ್ಯರ ಜತೆ ಸೇರಿ ಮಹತ್ವದ ಆಚರಣೆಯಾಗಿ ಅಗಸರಿಗಿರುವುದು. ಅವರನ್ನು ದಕ್ಷಿಣ ಹೊಲೆಯ ಮಾದಿಗರ ಬಳಿಸಂಬಂಧಕ್ಕೆ ಜೋಡಿಸುತ್ತದೆ. ಸೂತಕ ಮೈಲಿಗೆ ಕಳೆಯಲು ಅಗಸರು ಬಟ್ಟೆ ಕೊಡುವ ಪದ್ಧತಿ ಇಲ್ಲಿಯೂ ಇದೆ. ಮಗು ಹುಟ್ಟಿದ ಏಳನೇ ದಿನ ಅಗಸಗಿತ್ತಿ ಮಗುವಿನ ಕೊರಳಿಗೆ ದಾರ ಕಟ್ಟುವ ಪದ್ಧತಿ ಇವೆ. ಇದು ಮಗುವಿನ ರಕ್ಷಣೆ ಮಾಡುತ್ತದೆಂಬ ನಂಬಿಕೆಯಿದೆ. ಮಧ್ಯಕಾಲದಲ್ಲಿ ಭಕ್ತಿ ಮತ್ತು ಪೂಜಾ ಪಂಥಗಳು ತೀರಾ ಚಲನಶೀಲವಾಗಿ ತಮ್ಮ ಪ್ರಭುತ್ವದ ಮಾದರಿಗಳನ್ನು ನಿರ್ಮಿಸುತ್ತಿದ್ದಾಗ ಒಂದು ಹಂತದಲ್ಲಿ ದೇವಾಲಯ ಸಂಸ್ಕೃತಿ ರೂಪು ತಳೆಯಿತು. ಈ ವೃತ್ತಿಪರ ಕಸುಬುದಾರರಲ್ಲಿ ಶಿವೋಪಾಸಕರು, ವಿಷ್ಣುವಿನ ಉಪಾಸಕರು, ಬ್ರಹ್ಮನ ಉಪಾಸಕರು, ಜಿನೋಪಾಸಕರು, ಕಾಳಿಯ ಆರಾಧಕರೂ ಇದ್ದರು. ಇದರಿಂದ ಜೈನ ಮತೀಯರು, ಕೆಲವರು ವೈಷ್ಣವರು, ಕೆಲವರು ವೀರಶೈವರೂ ಆಗಿದ್ದು ಬಹುಮಂದಿ ಕಾಳಾಮುಖ ಶೈವಪಂಥಿಯರೂ ಆಗಿದ್ದಿರಬಹುದು.

೧೨ನೆಯ ಶತಮಾನದ ಬಾಚಿ ಕಾಯಕದ ಬಸವಣ್ಣನೆಂಬ ವಚನಕಾರನು ತನ್ನ ಅಂಕಿತವನ್ನು ಬಸವಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾ ವಿಮಲ ರಾಜೇಶ್ವರ ಲಿಂಗ[೨೮] ಎಂದು ಈತನ ಪತ್ನಿ ಕಾಳವ್ವೆಯ ಕರ್ಮಹರ ಕಾಳೇಶ್ವರ[೨೯] ಎಂದೂ ಉಕ್ತಿಸುವುದರಿಂದ ವಿಶ್ವಕರ್ಮ ಬಡಗಿಗಳು ಕಾಳಿಕಾದೇವಿಯನ್ನು ಪೂಜಿಸುತ್ತಿದ್ದರು ಎಂದು ತಿಳಿಯಬಹುದಾಗಿದೆ. ಬಡಗಿಗಳಲ್ಲದೆ ಕಂಚುಗಾರರೂ ಕೂಡ ಕಾಳಿಕಾದೇವಿಯ ಆರಾಧಕರಾಗಿದ್ದನ್ನು ಬಸವಣ್ಣ ತನ್ನೊಂದು ವಚನದಲ್ಲಿ ಉಲ್ಲೇಖಿಸುತ್ತಾನೆ.[೩೦] ಇದೇ ವಚನವು ಮಾಲೆಗಾರರು ಬ್ರಹ್ಮನ ಉಪಾಸಕರಾಗಿದ್ದನ್ನು ತಿಳಿಸುತ್ತದೆ.

ಹೊಯ್ಸಳ ಕಾಲದ ಶಿಲ್ಪಿಗಳು ಭರಮಯ್ಯ, ಹರಿಯೋಜ, ಸೂರಿಯಾಚಾರಿ ಎಂಬುದಾಗಿ ವೈಷ್ಣವ ಮತೀಯರಾಗಿದ್ದರು ಎಂದು ಹೇಳುತ್ತಾರೆ. ಆದರೆ ಇಂಥ ಹೆಸರುಗಳು ಎರಡು ಮೂರು ಮಾತ್ರ ಇರುವುದರಿಂದ ವೈಷ್ಣವ ಮತೀಯ ಶಿಲ್ಪಿಗಳ ಸಂಖ್ಯೆ ತುಂಬ ಕಡಿಮೆ ಇತ್ತು ಎಂದು ಹೇಳಬಹುದು.[೩೧] ಕ್ರಿ.ಶ. ೧೨೦೭ರ ಕಂದಗಲ್ ಶಾಸನವು[೩೨] ತೆಲ್ಲಿಗರು ತೆಲ್ಲಿಗೇಶ್ವರ ದೇವಾಲಯವನ್ನು ಕಟ್ಟಿ ಆ ದೇವರ ರಂಗಭೋಗ ರಂಗಭೋಗಕ್ಕೆ ದಾನ ಮಾಡಿದ್ದನ್ನು ತಿಳಿಸುತ್ತದೆ. ಕೆಲ್ಲಂಗೆರೆಯ ಶಾಸನವೊಂದು

ಆ ಊರಿನ ಗ್ರಾಮೇಶ್ವರ[೫೩] ದೇವಾಲಯವನ್ನು ತೆಲ್ಲಿಗ ಸ್ತ್ರೀಯೊಬ್ಬಳು ಕಟ್ಟಿಸಿದ ವಿಷಯಗಳನ್ನು ತಿಳಿಸುತ್ತದೆ.

ಹೀಗೆ ಅನೇಕ ಶಾಸನಗಳು ತೆಲ್ಲಿಗರು ತೆಲ್ಲಿಗೇಶ್ವರ ದೇವಾಲಯವನ್ನು ಕಟ್ಟಿಸಿದ ವಿವರಗಳು ನಮಗೆ ಸಿಗುತ್ತವೆ. ಕೆಲವು ಶಾಸನಗಳಲ್ಲಿ ಗಳಗೇಶ್ವರ ದೇವರು, ವೀರಭದ್ರ ದೇವರು, ದುರ್ಗಾದೇವತೆ ಮುಂತಾದ ದೇವರಿಗಿ ದತ್ತಿ ಬಿಟ್ಟಿದ್ದು ಕಂಡುಬರುತ್ತದೆ. ಅಪರೂಪಕ್ಕೆ ಇವರು ಜಿನಾಲಯ, ಬೌದ್ಧ ವಿಹಾರಗಳನ್ನು ಪೋಷಿಸಿದ ವಿಷಯವು ತಿಳಿದುಬರುತ್ತದೆ. ಹಾಗಾಗಿ ತೆಲ್ಲಿಗ ಕುಲದವರು ಶೈವ, ಬೌದ್ಧ, ಜೈನ ಮುಂತಾಗಿ ನಾನಾ ಮತಾವಲಂಬಿಗಳಾಗಿದ್ದರೆಂದು ಹೇಳಬಹುದು. ಆದರೆ ಬಹುತೇಕವಾಗಿ ೧೨-೧೩ನೆಯ ಶತಮಾನದಲ್ಲಿ ತೆಲ್ಲಿಗರೆಲ್ಲರೂ ಶೈವ ಮತದ ತೆಕ್ಕೆಯೊಳಗೆ ಬರುತ್ತಿದ್ದ ಪ್ರಕ್ರಿಯೆ ಶಾಸನಗಳಲ್ಲಿ ವ್ಯಕ್ತವಾಗುತ್ತದೆ. ಇವರು ಕಟ್ಟಿಸಿದ ಈಶ್ವರ ದೇವಾಲಯಕ್ಕೆ ಒಂದಿಲ್ಲೊಂದು ಶೈವ ಕಾಳಾಮುಖ ಮಠದ ಉಸ್ತುವಾರಿಯ ವ್ಯವಸ್ಥೆ ಮಾಡುತ್ತಿದ್ದರು. ಈ ರೀತಿ ತೆಲ್ಲಿಗರ ದೇವರಿಗೆ ಆಗಮೋಕ್ತ ಪೂಜಾಕ್ರಮಗಳನ್ನು ನಡೆಸುವ ನಿಮಿತ್ತಾಗಿ ತೆಲ್ಲಿಗ ಸಮುದಾಯಗಳು ಈ ಮಠದ ಅನುಯಾಯಿಗಳಾಗಿ ಬದಲಾವಣೆ ಹೊಂದಿದ ಸಾಧ್ಯತೆ ಇದೆ. ತೆಲ್ಲಿಗ ಸ್ಥಾನಾಚಾರ್ಯ ಎಂಬಂಥ ಪ್ರಯೋಗಗಳು ತೆಲ್ಲಿಗರು ಆಗಮೊಕ್ತ ಪೂಜೆಯ ಮೂಲಕ ತಮ್ಮ ಧಾರ್ಮಿಕ ಸ್ಥಾನಮಾನವನ್ನು ಪಡೆದುಕೊಂಡ ವಿಷಯವನ್ನು ಸೂಚಿಸುತ್ತದೆ.

ಬೆಳಗಾವಿಯ ಶಾಸನವೊಂದಲ್ಲಿ ಅದೇ ವೇಣುಗ್ರಾಮ ಸ್ಥಳದ ಚಿನ್ನದ ವ್ಯಾಪಾರಿಗಳು ದೊಸಿಗ ಪರದರು (ಬಟ್ಟೆವ್ಯಾಪಾರಿಗಳು) ತೆಲ್ಲಿಗರು, ದಿಂಕಸಾಲಿಗರು[೫೪] ಮೊದಲಾದವರೆಲ್ಲ ಸೇರಿ ಶಾಂತಿನಾಥ ದೇವರ ಬಸದಿಗೆ ದಾನ ಕೊಟ್ಟ ಸಾಕಷ್ಟು ದಾನದ ವಿವರಗಳು ಇದರಲ್ಲಿವೆ.ಈ ಶಾಸನದಿಂದ ಅಕ್ಕಸಾಲಿಗರು, ತೆಲ್ಲಿಗರು, ನೇಕಾರರು, ಜಿನಾಲಯಗಳಿಗೂ ಕೂಡ ನಡೆದುಕೊಳ್ಳುತ್ತಿದ್ದದ್ದು ಗೊತ್ತಾಗುತ್ತದೆ. ಹಾಗೆಯೇ ಹೊಯ್ಸಳ ಬಲ್ಲಾಳರಾಯನ ಕಾಲದ ಕ್ರಿ.ಶ. ೧೦೦೩ರ ಕೊಲ್ಲಾಪುರದ ತಾಮ್ರ ಶಾಸನದಲ್ಲಿ ಆ ಊರಿಂಗೆ ಹಿಟ್ಟಿನ ತಳವಾರಿ ಮಾರಯನಾಯಕ ಆಂತಗೆ ಮತ್ತರು ೬ ... ಹಿಟ್ಟಿಕಾರ ಬಡಗಿ ಹಿಲೇಜಗೆ ಮತ್ತರುಳ, ಹಿಟ್ಟಿನ ಕಂಮ್ಮಾರ ದೇವೋಜಂಗೆ ಮತ್ತರುಳ, ಹಿಟ್ಟಿನ ಅಕ್ಕಸಾಲೆ ಪಾರಿಸೋಜಂಗೆ ಮತ್ತರುಳ,[೫೫] ಎಂದು ಮುಂತಾಗಿ ಭೂಮಿದಾನ ಪಡೆದವರ ವಿವರಗಳಿವೆ. ಪಾರಿಸೋಜ ಎಂಬ ಹೆಸರಿನಿಂದ ಆ ಅಕ್ಕಸಾಲಿಗನು ಜೈನಮತದವನಾಗಿದ್ದನೆಂದು ವಿಧಿತವಾಗುತ್ತದೆ. ಕ್ರಿ.ಶ. ೧೦೦೭ರ ಲಕ್ಕುಂಡಿಯ ಶಾಸನವು ಪರಮಶ್ರೀ ಜಿನಧರ್ಮಾಂಬರ ರವಿ ಸಿರಿಪಾಳಸೆಟ್ಟಿ-ಯಾತ್ಮಜನುಧ್ಯಚ್ಚರಿತಂ ಬಾಹುಬಾಲಿ ಸವಿಸ್ತರದಿನಂ ಬರೆದನೆಯ್ದೊ ಡಾರ್ಪೊಗಳರಿದಂ[೫೬] ಕ್ರಿ.ಶ. ೧೦೮೦ರ ತುಂಬರಹೊಸೂರು ಶಾಸನವು ಜಿನಪಾದಾರಾಧಕಂ ಪದ್ಮೋಜ[೫೭] ಕ್ರಿ.ಶ. ೧೧೪೬ರ ಅಮ್ಮಿನಬಾವಿ ಶಾಸನವು ಜಿನವರ್ಮ್ಮೋಜನ ಕಣ್ದರಣೆ[೫೮] ಈ ಮೊದಲಾದ ಶಾಸನೋಲ್ಲೇಖಗಳಿಂದ ಶಿಲ್ಪಿಗಳಲ್ಲಿಯೂ ಜಿನೋಪಾಸಕರಿದ್ದದ್ದು ಗೋತ್ತಾಗುತ್ತದೆ.

ಹೊಯ್ಸಳ ಕಾಲದ ಕಸುಬುದಾರರಲ್ಲಿ ಬಹಳ ಮಂದಿ ಶೈವ ಪಂಥಿಯರಾಗಿದ್ದರು. ಆಗ ಶೈವ ಪಂಥದ ಮತ್ತೊಂದು ತುಂಬ ಪ್ರಬಲವಾಗಿದ್ದ ಶಾಖೆ ಕಾಳಾಮುಖ ಶಾಖೆ. ಸಾಕಷ್ಟು ಮಂದಿ ಕಸುಬುದಾರರು ಈ ಕಾಳಮುಖ ಪಂಥಕ್ಕೆ ಸೇರಿದವರೂ ಆಗಿದ್ದರು. ಬೇಲೂರಿನ ಪ್ರಸಿದ್ಧ ಶಿಲ್ಪಿಯಾದ ದಾಸೋಜನ ಮಗ ಚಾವಣನು ತಾನು ಬಳ್ಳಿಗಾವೆಯ ಧಮ್ಮೇಶ್ವರ ದೇವರ ಪಾದಪಂಕಜ

ಭ್ರಮರನಾಗಿದ್ದುದಾಗಿ ಹೇಳಿಕೊಂಡಿದ್ದಾನೆ. ಅಲ್ಲಿಯೇ ಅದೇ ಕಾಲದಲ್ಲಿ ಕೆಲಸ ಮಾಡಿದ ಮತ್ತೊಬ್ಬ ಮುಖ್ಯ ಶಿಲ್ಪಿ ನಾಗೋಜನು ತಾನು ಗದುಗಿನ ಸ್ವಯಂಭು ತ್ರಕೋಟೇಶ್ವರ ದೇವರಿಗೆ ಸೇರಿದವನು ಎಂದು ಹೇಳಿ ಹೇಳಿಕೊಂಡಿದ್ದಾನೆ. ಬಳ್ಳಿಗಾವೆಯ ಧರ್ಮೇಶ್ವರ ದೇವರ ದೇವಸ್ಥಾನ ಮತ್ತು ಗದುಗಿನ ತ್ರೀಕೊಟೇಶ್ವರ ದೇವಸ್ಥಾನಗಳು ಅಂದು ಪ್ರಸಿದ್ಧವಾಗಿದ್ದ ಕಾಳಾಮುಖ ಪಂಥೀಯರ ಕೇಂದ್ರ್ರಗಳಾಗಿದ್ದವು[೫೯] ಎಂದು ಗುರುತಿಸುವರು. ಅವರು ಈ ಇಬ್ಬರು ಶಿಲ್ಪಿಗಳು ಕಾಳಾಮುಖ ಪಂಥಕ್ಕೆ ಸೇರಿದವರು ಎಂದು ಹೇಳುತ್ತಾರೆ. ಕೆಲವು ಶಾಸನಗಳಲ್ಲಿ ರಾಶಿ, ರಾಸಿ, ಜೀಯ, ಎಕ್ಕೊಟಿ, ಪಂಡಿತ ಎಂಬ ಉಪನಾಮಗಳನ್ನು ಹೊಂದಿರುವ ಹೆಸರುಗಳಿಂದ ಕೂಡಿದ ವ್ಯಕ್ತಿಗಳು ಶಿಲ್ಪಿ ಕರ್ಮವನ್ನು ಮಾಡಿದ್ದಾರೆ. ಬೈರೋಜ, ಮಲ್ಲಿತಮ್ಮ, ಮಸಣಿತಮ್ಮ, ನಂಜಯ್ಯ, ಮಾಬೋಜ ಮುಂತಾದ ಹಲವಾರು ಶಿಲ್ಪಿಗಳ ಹೆಸರುಗಳಿಂದ ಶೈವ ಪಂಥ ಈ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದಿದ್ದು ಗೊತ್ತಾಗುತ್ತವೆ. ಶೈವ, ವೈಷ್ಣವ, ಜೈನ ಮತ್ತು ಬೌದ್ಧ ಎಂಬ ಚತುಸ್ಸಮಯಗಳು ಲಕ್ಕುಂಡಿಯಲ್ಲಿದ್ದವು. ಇದು ಪರಮತ ಸಹಿಷ್ಣುತೆಯನ್ನು ತೋರಿಸುತ್ತದೆ. ಕ್ರಿ.ಶ. ೧೧–೧೨ನೆಯ ಶತಮಾನದಲ್ಲಿ ಲಾಕುಳ, ಪಾಶುಪಾತ, ಪಂಥವು ವಿಶೇಷ ಪ್ರಚಾರದಲ್ಲಿತ್ತು. ಶೈವ ಮತ್ತು ಜೈನರ ನಡುವೆ ಕೆಲವೊಮ್ಮೆ ಮನಸ್ತಾಪವಾಗುತ್ತಿತ್ತು. ಏಕಾಂತದ ರಾಮಯ್ಯನು ಶಿರಸ್ಸು ಪವಾಡವನ್ನು ಮಾಡಿ ಜೈನಮೂರ್ತಿಗಳನ್ನು ನಾಶಪಡಿಸಿದನೆಂದು ಅಬ್ಬಲೂರಿನ ಶಾಸನವು ಹೇಳುತ್ತದೆ. ಈ ಪ್ರಕಾರ ಪವಾಡ ಮಾಡಿ ವೀರ ಸೋಮನಾಥ ದೇವಾಲಯವನ್ನು ಕಟ್ಟಿಸಿದನ್ನು ಕಂಡು ಕದಂಬ ಕಾಮದೇವನು ಏಕಾಂತದ ರಾಮಯ್ಯನನ್ನು ಹಾನುಗಲ್ಲಿಗೆ ಕರೆದುಕೊಂಡು ಹೋಗಿ ಮರ್ಯಾದೆ ಮಾಡಿದ್ದಾನೆ ಮತ್ತು ಮಳವಳ್ಳಿ ಎಂಬ ಹಳ್ಳಿಯನ್ನು ವೀರಸೋಮನಾಥ ದೇವರಿಗೆ ದಾನ ಮಾಡಿದ್ದಾನೆ.

ಶ್ರೀ ವೈಷ್ಣವರಿಗೂ ಮತ್ತು ಜೈನರಿಗೂ ವಿರೋಧ ಬಂದಾಗ ವಿಜಯನಗರದ ಎರಡನೆಯ ಬುಕ್ಕರಾಯನು ಆ ಎರಡು ಮತೀಯರಲ್ಲಿ ರಾಜೀ ಮಾಡಿಸಿದ ಸಂಗತಿಯನ್ನು ಶ್ರವಣಬೆಳಗೊಳದ ಒಂದು ಶಾಸನವು ತಿಳಿಸುತ್ತದೆ. ಜೈನ ಧರ್ಮಕ್ಕೂ ಶ್ರೀ ವೈಷ್ಣವ ಧರ್ಮಕ್ಕೂ ಭೇದವಿಲ್ಲ. ಜೈನ ದರ್ಶನಕ್ಕೆ ಆದ ಹಾಸಿ ವೃದ್ಧಿ ವೈಷ್ಣವ ದರ್ಶನಕ್ಕೆ ಹಾನಿ ವೃದ್ಧಿಯಾದಂತೆ ವೈಷ್ಣವ ಧರ್ಮವು ಜೈನದರ್ಶನವನ್ನು ರಕ್ಷಿಸಿಕೊಂಡು ಹೋಗಬೇಕೆಂದು ಬುಕ್ಕರಾಯನು ಆದೇಶವಿತ್ತಿದ್ದಾನೆ.[೬೦] ವಚನಕಾರರ ಕಾಲದಲ್ಲಿ ಜೈನರನ್ನು ಹಿಮ್ಮೆಟ್ಟಿಸುವಂಥಹ ಕಾರ್ಯಗಳು ನಡೆದವು ಈ ಅವಧಿಯಲ್ಲಿ ಶಿವಮೊಗ್ಗ, ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅನೇಕ ಜೈನ ದೇವಾಲಯಗಳು ಶಾಸನವಾದವಲ್ಲದೇ ಅವುಗಳು ಶೈವ ದೇವಾಲಯಗಳಾಗಿ ಪರಿವರ್ತನೆಯಾದವು ಹರಿಹರನ ಕಾಲದಿಂದಲೇ ವೀರಶೈವ ಪರಂಪರೆ ಹೆಚ್ಚು ಪ್ರಬುದ್ಧವಾಯಿತು.

ಒಟ್ಟಿನಲ್ಲಿ ಆ ಕಾಲದಲ್ಲಿ ಧಾರ್ಮಿಕ ಮತ ಶ್ರದ್ಧೆಯು ಎಲ್ಲಾ ಕಸುಬುದಾರರಿಗೂ ತೆರೆದ ಆಯ್ಕೆಯಾಗಿತ್ತು. ಎಂಬುದು ಸೂಚಿತವಾಗುತ್ತದೆ. ಉದ್ಯೋಗಗಳು ಕುಲ ಅಥವಾ ಧರ್ಮದ ಆಧಾರದ ಮೇಲೆ ಆಧಾರಿಸಲ್ಪಟ್ಟಿಲ್ಲವೆಂಬುದು ಸೂಚಿಸುತ್ತದೆ.

ಅಗಸ

ಅಗಸನು ತನ್ನ ಕಸುಬನ್ನು ಬೆಳಗಾದ ಕೂಡಲೇ ಆರಂಭಿಸುತ್ತಾನೆ. ತನಗೆ ಸಂಬಂಧಿಸಿದವರ

ಮನೆಯ ಬಟ್ಟೆಗಳನ್ನು ಸಂಗ್ರಹಿಸಿಕೊಂಡು, ಒಂದೆರಡು ಗಂಟುಕಟ್ಟಿ, ಒಂದರ ಮೇಲೊಂದು ಇಟ್ಟು ಬೆನ್ನ ಮೇಲೆ ಹೊತ್ತು, ತಲೆಗೆ ಸಿಕ್ಕಿಸಿಕೊಂಡು ಹಳ್ಳಕ್ಕೊ, ಕೆರೆಗೊ, ಬಾವಿಗೊ ಒಗೆಯಲು ಹೋಗುತ್ತಾನೆ. ಕತ್ತೆಗಳಿದ್ದರೆ ಕತ್ತೆಯ ಮೇಲೆ ಬಟ್ಟೆಗಳನ್ನು ಹೇರುತ್ತಾನೆ. ಬಟ್ಟೆಗಳನ್ನೆಲ್ಲಾ ಒಗೆದು, ಒಣಗಿಸಿ, ಪುನಃ ಸೀರೆಯಲ್ಲಿಯೋ, ಧೋತರದಲ್ಲಿಯೋ ಕಟ್ಟಿಕೊಂಡು ಮನೆಮನೆಗೆ ಅಲೆದು ಅವರವರ ಬಟ್ಟೆಗಳನ್ನು ಮುಟ್ಟಿಸಿ, ರೊಟ್ಟಿ, ಪಲ್ಯ, ಸಾರು ಪಡೆಯುತ್ತಾನೆ. ಬಟ್ಟೆಗಳನ್ನು ಗುರುತಿಸಲು, ಕಾಲರಿಗೆ, ಅಂಚಿಗೆ ಕೇರು ಎಣ್ಣೆಯಿಂದ ಚಿಕ್ಕ ಗುರುತು ಹಾಕಿರುತ್ತಾನೆ. ಸ್ತ್ರೀ–ಪುರುಷ–ಮಕ್ಕಳು–ಎಲ್ಲರ ಬಟ್ಟೆಗಳನ್ನೂ ಒಗೆದು ಕೊಡುವನು. ಇದು ಬಹು ಶ್ರಮದ ಕೆಲಸ. ಈ ಕಸುಬನ್ನು ಗೇಲಿ ಮಾಡುವುದು ಗ್ರಾಮೀಣ ಸಾಹಿತ್ಯದಲ್ಲಿ ಕಂಡುಬರುತ್ತದೆ.

ಅಗಸರ ಹುಡುಗನ ಒಲ್ಲೆನಾ ಕಾಣಮ್ಮ
ಕಣಕಾಲು ಮೊಣಕಾಲು ಮೈಲಿಗೆ ಮಾಡ್ಕೊಂಡು
ತಿಣಿಕಾಡ್ತ ಬಟ್ಟೆ ಒಗೆದಾನು!

ಹಾಗೆಯೇ ಅವನ ವೃತ್ತಿಯನ್ನು ಕುರಿತಂತೆ ಕೆಲವು ಗಾದೆ ಮಾತುಗಳೂ ಇವೆ. ಸಾಮಾನ್ಯವಾಗಿ ಅಗಸರು ಶುಚಿಗೊಳಿಸಲು ಕೊಟ್ಟ ಬಟ್ಟೆಗಳಲ್ಲಿ ತಮಗೆ ಒಪ್ಪುವ, ಹೊಂದುವ ಬಟ್ಟೆಗಳನ್ನು ಉಟ್ಟುಕೊಳ್ಳುವುದುಂಟು. ಈ ಸಂದರ್ಭವನ್ನು 'ಅಗಸನ ಬಡಿವಾರ ಮಂದಿ ಅರಿವೆ ಮೇಲೆ' ಎಂಬ ಗಾದೆ ಸಮರ್ಥಿಸಿದರೆ, 'ಹೊಸದರಲ್ಲಿ ಅಗಸ ಗೋಣಿಯನ್ನು ಎತ್ತಿ ಎತ್ತಿ ಒಗೆದನಂತೆ' ಎಂಬುದು ಅವನ ಅನನುಭವವನ್ನು ಅರುಹುತ್ತದೆ. ಅದರಂತೆ 'ಅಗಸನ ಸಿಟ್ಟು ಅನ್ಯರ ಬಟ್ಟೆಯ ಮೇಲೆ' ಎಂಬುದು ಅವನ ಅಸಹಾಯಕತೆಯನ್ನು ನಿರೂಪಿಸುತ್ತದೆ.

ಸಾಬೂನು–ಸೋಡಾ ಬರುವ ಪೂರ್ವದಲ್ಲಿ ಬಟ್ಟೆಯನ್ನು ಶುಭ್ರಗೊಳಿಸಲು ಅಗಸರು ಅಂಟವಾಳದ ಕಾಯಿಗಳನ್ನು ಉಪಯೋಗಿಸುತ್ತಿದ್ದರು. ಅಂಟುವಾಳದ ಒಣಗಿದ ಕಾಯಿಗಳನ್ನು ಜಜ್ಜಿ, ನೀರಿರುವ ಬಕೆಟ್ಟಿನಲ್ಲಿ ಹಾಕಿ ಕಲಕುತ್ತಾರೆ. ಆಗ ನೊರೆವುಂಟಾಗುತ್ತದೆ. ಅದರಲ್ಲಿ ಬಟ್ಟೆಗಳನ್ನು ಎದ್ದಿ, ಹಿಂಡಿ ತೆಗೆದು, ಬೇರೆ ನೀರಿನಲ್ಲಿ ಒಗೆದು, ಒಣಗಿಸಿ, ಇಸ್ತ್ರಿ ಮಾಡುತ್ತಾರೆ. ಸೀಗೀ ಕಾಯಿಗಳಿಂದಲೂ ಇದೇ ರೀತಿ ಬಟ್ಟೆಗಳನ್ನು ಸ್ವಚ್ಛ ಮಾಡುವುದುಂಟು. ಬಟ್ಟೆಯ ಜಿಡ್ಡನ್ನು ತೆಗೆಯಲು ಎರೆಮಣ್ಣು ಉಪಯೋಗಿಸುತ್ತಿದ್ದರು. ಬಟ್ಟೆಯ ಹೊಲಸನ್ನು ತೆಂಗಿನ ಜುಟ್ಟದಿಂದ ತಿಕ್ಕಿ ತೆಗೆಯುತ್ತಿದ್ದರು. ಗುಡಾರ, ಕೌದಿ, ಚಾದರ್, ಬೆಡ್‌ಸೀಟಗಳಂಥ ದೊಡ್ಡ ಬಟ್ಟೆಗಳನ್ನು ಒಗೆಯುವಾಗ ದೊಣ್ಣೆಯಿಂದ ಬಡಿದು ಹೊಲಸು ಬಿಡಿಸುವರು. ಇಂಥವುಗಳನ್ನು, ಇಬ್ಬರು ಸೇರಿ ಆ ಕಡೆ ಈ ಕಡೆ ಹಿಡಿದು ನೀರಿನಲ್ಲಿ ಅದ್ದಿ, ಎತ್ತಿ ಎತ್ತಿ ಕಲ್ಲಿಗೆ ಬಡಿಯುತ್ತಾರೆ; ಕೈಗಳಲ್ಲೋ, ಕಾಲುಗಳಲ್ಲೋ ಹಿಂಡಿ ಬಿಸಿಲಿಗೆ ಹಾಕುತ್ತಾರೆ. ಅಂಗಿ, ಧೋತರ, ಪಾವಡ, ಟೊಪ್ಪಿಗೆಗಳಂಥ ಬಿಳಿ ಬಟ್ಟೆಗಳನ್ನು, ಒಗೆದು, ಹಿಂಡಿದ ಮೇಲೆ ನೀಲಿ ಹಾಕುವುದುಂಟು. ಗಂಜಿಗೆಂದು ಕೊಟ್ಟ ಬಟ್ಟೆಗಳನ್ನು, ಮೈದಾದಿಂದ ತಯಾರಿಸಲಾದ ಗಂಜಿಯಲ್ಲಿ ಅದ್ದಿ ತೆಗೆದು ಒಣಗಿಸುವರು, ನಂತರ ಇಸ್ತ್ರೀ ಮಾಡವರು. ಇಸ್ತ್ರೀ ಬರುವ ಪೂರ್ವದಲ್ಲಿ ಹಿತ್ತಾಳಿ ಚರಿಗೆ (ತಂಬಿಗೆ)ಯಲ್ಲಿ ಇದ್ದಿಲು ಬೆಂಕಿ ಹಾಕಿ ಇಸ್ತ್ರೀ ಮಾಡಲಾಗುತ್ತಿತ್ತು.

ಅಗಸನ ಪ್ರಮುಖ ಕೆಲಸವೆಂದರೆ-ಕುದಿಯುವ ನೀರಿನ ಬಾನಿಯಲ್ಲಿ ಕೊಳೆಯಾದ ಬಟ್ಟೆಗಳನ್ನು ಅದ್ದಿ ಶುದ್ಧಮಾಡುವುದು, ಅಂದರೆ ಉಬ್ಬೆಗೆ ಹಾಕುವುದು[೬೯] ಇದನ್ನೇ ನಾವು ಗಂಜೀ ಹಾಕುವುದು ಎನ್ನುತ್ತೇವೆ. ಉಬ್ಬೆಯ ಬಾನಿಯಲ್ಲಿ ಬಟ್ಟೆಗಳು ಸುಟ್ಟು ಹಾಳಾಗದಿರಲೆಂದು ಪ್ರಾಣಿಗಳನ್ನು ದೇವರಿಗೆ ಬಲಿಕೊಡುತ್ತಾರೆ. ಭೂಮದೇವ ಎಂಬ ಹೆಸರಿನಲ್ಲಿ ಈ ದೇವರಿಗೆ ದೊಡ್ಡ ಪ್ರಮಾಣದಲ್ಲಿ ಗುಡಿಗಳನ್ನು ನಿರ್ಮಿಸಿ, ಕುಲದ ಪೂಜಾರಿಗಳಿಂದ ಪೂಜಾಕಾರ್ಯಗಳು ನಡೆಸಲ್ಪಡುತ್ತವೆ.[೭೦] ಇದೊಂದು ಸ್ಥಳೀಯ ಆಚರಣೆ ಎಲ್ಲ ಕಡೆಗೂ ಪ್ರಚಲಿತದಲ್ಲಿಲ್ಲ.

ತುಂಬ ಹೊಲಸಾದ ಬಟ್ಟೆಗಳನ್ನು ಅಗಸರು ಭಟ್ಟಿ ಹಾಕುವುದೂ ಉಂಟು. ಈ ವಿಧಾನದಲ್ಲಿ ಮೊದಲು ಬಟ್ಟೆಗಳನ್ನು ನೀರಿನಲ್ಲಿ ಅದ್ದಿ, ಹಿಂಡಿ ಗಾಳಿಗೆ ಒಣ ಹಾಕುವರು. ಒಂದು ಅಗಲಬಾಯಿಯ ಹಂಡೆಯಲ್ಲಿ ಬೇಕಾದಷ್ಟು ನೀರು ಹಾಕಿ (ಅರಿವೆಗಳ ಮೇಲೆ ಲೆಕ್ಕ ಹಾಕಿ) ಅದರಲ್ಲಿ ಸುಣ್ಣ-ಸೋಡಾ-ಸಾಬೂನು ಕಲಿಸಿ ಇಡುವರು. ಆಮೇಲೆ ಒಂದು ಬಕೆಟ್ಟಿನಲ್ಲಿ ಕಲಿಸಿಟ್ಟ ನೀರಿನಿಂದ ಒಂದೆರಡು ತಂಬಿಗೆ ತೆಗೆದುಕೊಂಡು, ಒಂದೊಂದೆ ಬಟ್ಟೆ ಅದರಲ್ಲಿ ಹಾಕಿ ಹಿಂಡಿ ತೆಗೆಯುವರು. ಬಟ್ಟೆಗಳೆಲ್ಲ ಮುಗಿದ ಮೇಲೆ, ಹಂಡೆಯಲ್ಲಿ ಸ್ವಲ್ಪ ನೀರು ಹಾಕಿಕೊಂಡು, ಅದನ್ನು ಉರಿಯುವ ಒಲೆಯ ಮೇಲೆ ಇಡುವರು. ಹಿಂಡಿದ ಅರಿವೆಳನ್ನು ಹಂಡೆದ ಒಳಗೆ ಒಂದರ ಮೇಲೊಂದರಂತೆ ಅಡಕಲೇರಿಸುವರು. ಹಂಡೆದ ಮಧ್ಯಭಾಗ ತೆರವಾಗಿರುವಂತೆ ಎಚ್ಚರಿಕೆವಹಿಸುತ್ತಾರೆ. ಹಂಡೆದ ಮೇಲ್ಭಾಗವನ್ನು ಬಟ್ಟೆಯೊಂದರಿಂದ ಮುಚ್ಚುವರು. ಉಗಿಯ ಒತ್ತಡ ಹಂಡೇದ ಮೇಲ್ಭಾಗದಲ್ಲಿ ಗೋಚರಿಸಿದಾಗ, ಉರಿಯನ್ನು ನಿಲ್ಲಿಸುವರು. ಎರಡು ಮೂರು ಗಂಟೆಗಳ ತರುವಾಯ ಬಟ್ಟೆಗಳನ್ನು ಹಂಡೇದದಿಂದ ಹೊರತೆಗೆಯುವರು. ಈ ಬಟ್ಟೆಗಳನ್ನು ಚೆನ್ನಾಗಿ ಒಗೆದಾಗ, ಕೊಳೆಯೆಲ್ಲ ಬಿಟ್ಟುಹೋಗಿ, ಕಣ್ಣಿಗೆ ಕುಕ್ಕುವ ಹಾಗೆ ಶುಭ್ರಗೊಳ್ಳುತ್ತವೆ.

ಹೀಗೆ, ವಂಶಪಾರಂಪರ್ಯವಾಗಿ ಬಟ್ಟೆ ಸ್ವಚ್ಛಗೊಳಸಿಸುವ ತನ್ನ ಕುಲಕಸಬಿಗೆ ಅಗಸ ಪ್ರತಿಫಲವಾಗಿ ರೈತ ಕುಟುಂಬಗಳಿಂದ ಆಯ ಪಡೆಯುತ್ತಾನೆ. (ಆಯ=ಧಾನ್ಯರೂಪದ ಸಂಭಾವನೆ). ಈತನ ಆಯಾ ಅವನು ಬಟ್ಟೆ ಒಗೆಯುವ ಕುಟುಂಬದ ಸದಸ್ಯರ ಸಂಖ್ಯೆಯ ಮೇಲೆ ನಿರ್ಧರಿಸಲ್ಪಟ್ಟಿರುತ್ತದೆ. ಗಂಡ-ಹೆಂಡತಿ ಇಬ್ಬರೇ ಇದ್ದಲ್ಲಿ ಎಂಟು ಸೇರು ಭತ್ತ ಮತ್ತು ರೈತ ಬೆಳೆಯಲಾದ ಎಲ್ಲ ರೀತಿಯ ಕಣಗಾಳುಗಳನ್ನು ಅವನು ಕೊಟ್ಟಷ್ಟು ಪಡೆಯುತ್ತಾನೆ. ಅಲ್ಲದೆ ಲಗ್ನ ರಜೋದರ್ಶನ, ಮರಣ ಮುಂತಾದ ಕಾರ್ಯಗಳಲ್ಲಿ ಅಗಸರ ಸಹಾಯ ಬೇಕಾಗುವುದರಿಂದ ಅವರಿಗೆ ಈ ಕಾರ್ಯಗಳಲ್ಲಿ ಕೇಲವು ಹಕ್ಕುಗಳಿರುತ್ತವೆ. ಹಳ್ಳಿಗಳ ಬಲೂತಿದಾರರಲ್ಲಿ (=ಆಯಗಾರರು) ಅಗಸರ ಬಾಬ್ತು (=ಕಾಣಿಕೆ)ಗಳು ಪೂರ್ವದಲ್ಲಿದ್ದುವು.[೭೧] ದೀಪಾವಳಿ, ಮಹಾನವಮಿ ಮೊದಲಾದ ಹಬ್ಬಗಳಲ್ಲಿ ಇವರಿಗೆ ಖುಶಿ (=ಹಣದ ಕಾಣಿಕೆ) ಕೊಡುವ ಪದ್ಧತಿಯೂ ಇದೆ.

ಅಂಬಿಗರು/ಬೆಸ್ತ

ಭೋರ್ಗರೆವ ಕಡಲು. ಸರ್ಪದ ಹೆಡೆಯಂತೆ ದಡಕ್ಕೆ ಅಪ್ಪಳಿಸುತ್ತಿರುವ ತೆರೆಗಳು. ಆಳ ಅಗಲ ಅರಿಯದ ನೇರ ಪ್ರವಾಹ. ಅನಿರೀಕ್ಷಿತ ಬಿರುಗಾಳಿಯ ಭಯ. ಇಂಥ ಕಡಲನ್ನು ದುಡಿಮೆಯ ಅಂಗಳವಾಗಿ ಮಾಡಿಕೊಂಡ ಬೆಸ್ತರ ಬದುಕು ನಿಜಕ್ಕೂ ಸಾಹಸಮಯ. ಪ್ರಪಂಚದುದ್ದಕ್ಕೂ ಬೆಸ್ತರ

ಬದುಕಿನ ಪರಂಪರೆಯಿದೆ. ಮಾನವನ ವೃತ್ತಿ ಜೀವನಕ್ಕೆ ಮಣ್ಣಿನಂತೆ ಕಡಲೂ ಒಂದು ಆಸರೆ. ಕಡಲಿನ ಅಪಾರ ಉತ್ಪನ್ನಗಳು ನಮ್ಮ ದೇಶವನ್ನು ಅತ್ಯಂತ ಸಮೃದ್ಧವನ್ನಾಗಿ ಮಾಡಿವೆ. ದೇಶದ ಜನಸಂಖ್ಯೆಯಲ್ಲಿ ೨/೫ರಷ್ಟು ಜನರು ಮಿನುಗಾರಿಕೆಯನ್ನೇ ಅವಲಂಬಿಸಿ ಜೀವನ ಮಾಡುತ್ತಿದ್ದಾರೆ. ಮೀನುಗಾರಿಕೆ ನಮ್ಮ ರಾಷ್ಟದ ಅತಿ ದೊಡ್ಡ ಉದ್ಯಮವೆನ್ನಬಹದು. ಮೂರು ಭಾಗವೂ ಸಮುದ್ರದಿಂದ ಆವೃತವಾಗಿದ್ದು, ಒಂದು ಪರ್ಯಾಯ ದ್ವೀಪವೆನಿಸಿದ ಭಾರತದಲ್ಲಿ ಮೀನುಗಾರಿಕೆಗೆ ಸಾಕಷ್ಟು ಅವಕಾಶಗಳಿವೆ.

ಕರ್ನಾಟಕದ ಕರಾವಳಿಯು ಸುಮಾರು ೩೨೦ ಕಿ.ಮಿ. ಉದ್ದವಿದ್ದು, ಇದು ಭಾರತದ ಕಡಲತೀರದ ಸುಮಾರು ೧ ೧/೫ ರಷ್ಟಿದೆಯೆನ್ನಬಹುದು. ಕರ್ನಾಟಕದಲ್ಲಿ ಮೀನುಗಾರಿಕೆಯು ಬೇಸಾಯದಂತೆ ಅತ್ಯಂತ ಪ್ರಮುಖ ಉದ್ಯೋಗವಾಗಿದೆ. ಉತ್ತರದ ಕಾರವಾರದಿಂದ ದಕ್ಷಿಣದ ಉಳ್ಳಾಲದವರೆಗಿನ ಕರಾವಳಿಯ ಭೂಭಾಗವು ಮೀನುಗಾರಿಕೆಗೆ ಅತ್ಯಂತ ಪ್ರಶಸ್ತವಾದ ನೆಲವೆಂದು ಖ್ಯಾತಿಯಿದೆ. ಕರ್ನಾಟಕದ ಬೆಸ್ತರನ್ನು ಮೊಗವೀರ, ಮರಕಾಲ ಮೊಗೇರ, ಪಟ್ಟಣದವ, ಬೋವಿ, ನಾಯಕ (ನಾವಿಕ), ಗಂಗಾಮತಸ್ಥ, ಅಂಬಿಗ ಖಾರ್ವಿ, ಮುಂತಾದ ನಾನಾ ಹೆಸರುಗಳಿಂದ ಗುರುತಿಸಲಾಗುತ್ತದೆ. ಕರಾವಳಿಯ ಕರ್ನಾಟಕದ (ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಬೆಸ್ತರು, ಹಿಂದೆ 'ಮೊಗೇರ' ಎಂಬ ಪದದಿಂದ ಗುರುತಿಸಲ್ಪಡುತ್ತಿದ್ದರೆಂದು ಸ್ಟರಕ್, ಬುಚನನ್, ಥರ್ಸ್ಟನ್ ಮುಂತಾದವರ ಲೇಖನಗಳಿಂದ ತಿಳಿದುಬರುತ್ತದೆ. ಮರಕಾಲ ಎನ್ನುವುದು ಇನ್ನೊಂದು ಹೆಸರು. ಮೊಗೇರ, ಮರಕಾಲ ಎಂಬ ಹೆಸರುಗಳ ಬಳಕೆ ವಿರಳವಾಗುತ್ತಾ ಬಂದು, ಈಗ ಮೊಗವೀರ ಎಂಬ ಹೆಸರೇ ಸಾರ್ವತ್ರಿಕವಾಗಿ ರೂಢಿಯಲ್ಲಿದೆ.[೬೪] ಹೀಗೆ ಮೊಗವೀರರು ಮೊಗೇರರು ನಮ್ಮ ನಾಡಿನ ಅತಿಪ್ರಾಚೀನ ವಾದ ಜನಾಂಗವಾಗಿದ್ದು, ಈ ನಾಡಿನ ಆಹಾರ ಸಮೃದ್ಧಿಯಲ್ಲಿ ಆರ್ಥಿಕ ಔನ್ನತ್ಯದಲ್ಲಿ ಹಾಗೂ ಸಂಸ್ಕೃತಿಯ ವಾಹಕತ್ವದಲ್ಲಿ ಅತಿ ಮಹತ್ವದ ಪಾತ್ರವನ್ನು ವಹಿಸಿದ್ದಾರೆಂಬುದರಲ್ಲಿ ಸಂದೇಹವಿಲ್ಲ.

ಪೌರಾಣಿಕ ಐತಿಹಾಸಿಕ ಹಿನ್ನೆಲೆ

ನಮ್ಮ ಪುರಾಣೇತಿಹಾಸಗಳಲ್ಲಿ ಬೆಸ್ತರ ಬಗೆಗಿನ ಉಲ್ಲೇಖಗಳು ಸಿಗುತ್ತವೆ. ಪುರುವಂಶದ ಉಪರಿಚರ ರಾಜನ ವೀರ್ಯವನ್ನು ನುಂಗಿದ ಮೀನೊಂದು ಗರ್ಭವತಿಯಾಗುತ್ತದೆ. ಬೆಸ್ತರ ರಾಜನಾದ ದಾಶರಾಜನಿಗೆ ಆ ಮಿನು ಸಿಗುತ್ತದೆ. ಆ ಮೀನಿನ ಹೊಟ್ಟೆಯಲ್ಲಿ ಜನಿಸಿದ ಮಗುವೇ ಮತ್ಸ್ಯಗಂಧಿ ಅಥವಾ ಸತ್ಯವತಿ. ಆಕೆ ಯುವತಿಯಾದಾಗ ಪರಾಶರಮುನಿಯು ಆಕೆಯನ್ನು ಮೋಹಿಸುತ್ತಾನೆ. ಅವರಿಗೆ ಹುಟ್ಟಿದ ಮಗುವೇ ವೇದವ್ಯಾಸ.

ಶ್ರೀ ಕೃಷ್ಣರುಕ್ಮಿಣಿಯರ ಮಗ ಪ್ರದ್ಯುಮ್ನ, ಪ್ರದ್ಯುಮ್ನ ಹುಟ್ಟಿದ ಕೂಡಲೇ ಶಂಬರಾಸುರನು ಮಾಯಾರೂಪದಿಂದ ಬಂದು, ಆ ಮಗುವನ್ನುಕೊಂಡು ಹೋಗಿ ಸಮುದ್ರದಲ್ಲಿ ಎಸೆಯುತ್ತಾನೆ. ಅದನ್ನು ಒಂದು ಮೀನು ನುಂಗುತ್ತದೆ. ಆ ಮೀನು ಬೆಸ್ತರಿಗೆ ಸಿಗುತ್ತದೆ. ಅವರು ಮೀನನ್ನು ಕೊಂಡು ಹೋಗಿ ಶಂಬರಾಸುರನ ಅಡುಗೆಯವರ ಕೈಯಲ್ಲಿಕೊಡುತ್ತಾರೆ. ಅಡುಗೆಯವರು ಅದನ್ನು ಕೊಯ್ಯಲು ಯತ್ನಿಸಿದಾಗ ಅದರ ಹೊಟ್ಟೆಯಲ್ಲಿ ಮಗು ಇರುವುದು ಗೊತ್ತಾಗುತ್ತದೆ. ಮಗುವನ್ನು ಜಾಗ್ರತೆಯಾಗಿ ಹೊರ ತೆಗೆದು, ರಾಣಿ ಮಾಯಾವತಿಗೆ ಕೊಡುತ್ತಾರೆ. ಆ ಮಗುವೇ ಮುಂದೆ

ಶಂಬರಾಸುರನನ್ನು ಕೊಲ್ಲುತ್ತದೆ. ಈ ಕಥೆ ಭಾಗವತದಲ್ಲಿಯೂ ಇದೆ ಭಾರತದಲ್ಲಿಯೂ ಇದೆ. ಬೆಸ್ತರ ಪರಾಕ್ರಮದ ಕಥೆಯ ಕುರಿತು, ಚರಿತ್ರೆಗಳಲ್ಲಿಯೂ ಉಲ್ಲೇಖಗಳು ದೊರೆಯುತ್ತವೆ.

ಉಳ್ಳಾಲದ ರಾಣಿಅಬ್ಬಕ್ಕ ದೇವಿಯು ತುಳುನಾಡಿನ ವೀರ ಮಹಿಳೆ, ಆಕೆಯ ಬಳಿಯಲ್ಲಿ ಬಲಿಷ್ಠವಾದ ನೌಕಾಪಡೆಯಿತ್ತು. ಈ ನೌಕಾಪಡೆಯ ವೀರರೆಲ್ಲರೂ ಬೆಸ್ತರಾಗಿದ್ದರು. ಇವರ ಸಹಾಯದಿಂದ ಆಕೆ ಪೋರ್ಚುಗೀಸರನ್ನು ಎದುರಿಸಿದಳಂತೆ. ನಮ್ಮ ಕರಾವಳಿಯ ಮೀನುಗಾರರು ಯುದ್ಧ ಸಾಹಸಿಗಳೂ ಆಗಿದ್ದರೆಂದು ಇದರಿಂದು ತಿಳಿದುಬರುತ್ತದೆ.

ಟೊಮ್ ಪೀರೆಸ್ ಎಂಬ ಪ್ರವಾಸಿಯು ಬಂಗರ ರಾಜ ಕನರೀಸ್ ರಾಜನ ಸೆರೆಯಲ್ಲಿದ್ದಾನೆ. ಬಂಗರ ರಾಜ್ಯದಲ್ಲಿ ಅಕ್ಕಿ ಮತ್ತಿ ಮೀನು ಹೇರಳವಾಗಿವೆ. ಜನಸಂಖ್ಯೆ ಕಡಿಮೆಯಿದ್ದರೂ ಜನರು ತುಂಬಾ ಯುದ್ಧಾಸಕ್ತರು,[೬೫] ಎಂದು ತಿಳಿಸಿದ್ದಾನೆ

ಬೊಬ್ಬರ್ಯ ಪಾಡ್ದನದಲ್ಲಿ ಮೊಗವೀರರ ಪ್ರಸ್ತಾಪ ಬರುತ್ತದೆ. ಬಸಪ್ಪನ (ಬೊಬ್ಬರ್ಯ) ಹಡಗನ್ನು ಸಮುದ್ರಕ್ಕೆ ಇಳಿಸುವಾಗ, ಅಲ್ಲಿ ಮರಕಲ–ತುಲ್ಲಿ ಮರಕಲ–ದೇವು ಮರಕಲ ಮುಂತಾದವರ ಸಹಾಯ ಪಡೆಯುತ್ತಾನೆ. ಅಲ್ಲದೆ ಹಡಗಿನ ಮುಖಂಡನಾಗಲಿಕ್ಕೆ ಸಾವಿರ ಒಕ್ಕಲಿನಿಂದ ಒಬ್ಬ ಂಡೆಲನ್ನೂ ಕರೆಸಿಕೊಳ್ಳುತ್ತಾನೆ.[೬೬] ಸಾಹಸದ ಕೆಲಸಗಳೆಲ್ಲ ಬೆಸ್ತರಿಗೇ ಮೀಸಲು, ಊರ ದೇವಾಲಯದ ಧ್ವಜಸ್ತಂಭ ಏರಿಸಲು ಮೊಗವೀರರೇ ಬರಬೇಕು. ಉತ್ತರದ ರಥದ ಮೇಲೆ ಹತ್ತಿ ಅದನ್ನು ಅಲಂಕಾರ ಮಾಡು ರಥಶಿಲ್ಪಿಗಳೂ ಅವರೆ. ಕಡಲ್ಗಳ್ಳರ ಅಪಾಯದಿಂದ ನಾಡನ್ನು ರಕ್ಷಿಸಲೂ ಅವರೇ ಮುಂದಾಗಬೇಕು. ಅರಸರ ನಾವಿಕಪಡೆಗೆ ಅವರಿಗಿಂತ ಸಮರ್ಥರಾದ ಸೈನಿಕರು ಇನ್ನೆಲ್ಲಿ ಸಿಗಲು ಸಾಧ್ಯ?[೬೭] ಬೆಸ್ತರು ಇದೆ ಎಂದಾದರೆ ಆ ಕಸುಬುನ್ನು ಹೊಂದಿರುವ ಕುಲಗಳಿರುತ್ತವೆ. ಇಂದು ಕರ್ನಾಟಕದಲ್ಲಿ ಬೆಸ್ತ, ಅಂಬಿಗರಲ್ಲದೆ, ಇತರ ಅನೇಕ ಸಮುದಾಯದವರು ಬೆಸ್ತರು ಜೀವಿಸುತ್ತಿದ್ದಾರೆ. ಬೆಸ್ತರು ಇಂದು ಕುಲ ಕಸುಬು ಆಗಿಲ್ಲ. ವಾಣಿಜ್ಯ ಕಸುಬಾಗಿ ಮಾರ್ಪಾಟಾಗಿದೆ.

ಪ್ರಾಚೀನ ಕಾಲದಿಂದಲೂ ಗಂಗ ಮತಸ್ಥರು, ಕಬ್ಬಲಿಗ, ಕಬ್ಬೇರ, ಬಾರಿಕ, ಬೆಸ್ತರು, ಗಂಗಪುತ್ರ, ಮೊಗವೀರ, ಮುಂಡಾರು ಮತ್ತು ಅಂಬಿಗ ಮತ್ತಿತರರು ಮೀನು ಹಿಡಿಯುವ ವೃತ್ತಿಯಲ್ಲಿದ್ದವರು. ಸ್ಥಿತ್ಯಂತರಗೊಂಡು ಸಾಂಸ್ಕೃತಿಕ ಪಲ್ಲಟಗಳಾಗಿರುವುದು ಸತ್ಯ. ಹರಿಗೋಲು ನಡೆಸುವ ಅಂಬಿಗ ಮೀನು ಹಿಡಿಯುವ ಬೆಸ್ತರು ಇಂದು ಮೂಲ ಕಸುಬುಗಳಲ್ಲಿಲ್ಲ. ವರ್ಣಸಂಕರವಾದಂತೆ ವೃತ್ತಿಸಂಕರವಾದಂತಾಗಿದೆ. ಇವರು ಬೇಸಾಯವಲ್ಲದೆ, ಸುಣ್ಣದ ಭಟ್ಟಿಯ ಕೆಲಸ ಮಾಡುತ್ತಿದ್ದರು. ಕೆರೆಯಿಂದ ಭೂಮಿಗೆ ನೀರು ಬಿಡುವ ನೀರಗಂಟಿಯ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು.

ಬೆಸ್ತರಂತೆ ಕಿಳ್ಳೆಕ್ಯಾತರು ಸಹಾ ಹುಟ್ಟು ಮೀನುಗಾರರು. ಜೊತೆಗೆ ತೊಗಲು ಬೊಂಬೆಯಾಡುವವರು ಇವರು ಮಹಾರಾಷ್ಟ್ರದ ಮೂಲದರಾಗಿದ್ದು, ಬಾಂಬೆಯಿಂದ ಬಂದಿರುವ ಮರಾಠಿ ಮೂಲದವೆಂದು ಹೆಸರಾಗಿದ್ದಾರೆ. ಬೇಟೆ, ಆಹಾರ ಸಂಗ್ರಹಣೆ, ವಿನೋದ, ಕ್ರೀಡೆ, ಕೃಷಿಗಳಲ್ಲಿ ಜೀವಮಾನವನ್ನು ಸವೆಸಿದವರು. ಉತ್ತರ ಕರ್ನಾಟಕದ, ಮೈಸೂರು ಮತ್ತು ಶಿವಮೊಗ್ಗ ಭಾಗಗಳಲ್ಲಿ ಬೆಸ್ತರು ವ್ಯಾಪಕವಾಗಿದ್ದಾರೆ. ಇವರು ಬಲೆಗಳ ಸಹಾಯದಿಂದ ಮೀನುಗಾರಿಕೆ ಮಾಡುತ್ತಿದ್ದರು. ಕರ್ನಾಟಕದ ಪೂರ್ವ ಜಿಲ್ಲೆಗಳಲ್ಲಿ ಬೆಸ್ತರೆಂದು ದಕ್ಷಿಣ ಭಾಗದಲ್ಲಿ ತೊರೆಯ, ಅಂಬಿಗ ಮತ್ತು ಪರಿವಾರ ಎಂದು,

ಪಶ್ಚಿಮ ಭಾಗದಲ್ಲಿ ಕಬ್ಬೇರ ಮತ್ತು ಗಂಗ ಮಕ್ಕಳೆಂದು ಉಲ್ಲೇಖಿಸಲಾಗಿದೆ. ಬೆಸ್ತರು ಕೆಲವು ಭಾಗಗಳಲ್ಲಿ ತೆಲುಗು ಮಾತನ್ನಾಡುತ್ತಾರೆ.

ಬೆಸ್ತರ ಮೂಲದ ಬಗ್ಗೆ ಅನೇಕ ಕತೆಗಳಿವೆ. ವರುಣ ಮತ್ತು ಸಪ್ತಋಷಿ ಸನ್ಯಾಸ ಸಮಾರಂಭದಲ್ಲಿ ಭಾಗವಹಿಸಿದ್ದರೆಂಬ ದಂತ ಕತೆಗಳಿವೆ. ಇವರು ಈಶ್ವರ, ಭೂಮಿ, ಪ್ರಾಣಿ, ಗಂಗೆಯನ್ನು ಪೂಜಿಸುತ್ತಿದ್ದು ಸುಪರ್ಣರಾಜ, ಗುಹರಾಜ ಮತ್ತು ಸುತ ಎಂಬ ೩೨ ಆಯುಧಗಳಿದ್ದವು. ಇವರಿಗೆ ಸೂತ ಕುಲದವರೆಂದು ಹೆಸರಿದೆ. ಸೂತಕುಲದವರು ತಿಳಿಸುವಂತೆ ದೋಣಿಯಲ್ಲಿ ವರುಣ ಮತ್ತು ಗಂಗಾ ಬಂದರಂತೆ. ಮತ್ತೊಂದು ಕತೆ ಸತ್ಯವತಿಗೆ ಸಂಬಂಧಿಸಿದ್ದು. ತಳವರ್ಗದ ಅಂಬಿಗನ ಮಗಳು ಈ ಸತ್ಯವತಿ. ಇವಳು ಭೀಷ್ಮನ ಚಿಕ್ಕಮ್ಮ, ಗಂಗೇಯನ ಹೆಂಡತಿ. ಇವರಲ್ಲಿ ದುಷ್ಯಂತನು ನಿಷಾದ, ಪಾರಸವ ದೇಶ ಅಥವಾ ಮಾರ್ಗಶೈಲಿ ಇತ್ತು. ಮನು ತಿಳಿಸುವಂತೆ: ದುಷ್ಯಂತನು ಕ್ಷತ್ರಿಯನ ಮಗ, ತಾಯಿ ಬ್ರಾಹ್ಮಣ ವಂಶದವಳು, ನಿಷಾದ ಮೀನುಗಾರಿಕೆ, ಪ್ರಾಣಿಗಳ ವಧೆ ಮಾಡಿ ಜೀವಿಸುತ್ತಿದ್ದನು. ಬ್ರಾಹ್ಮಣರಂತೆ ಶೂದ್ರ ತಾಯಿಯವರು ಇದ್ದರು. ದೇಶ ಅಥವಾ ಮಾರ್ಗದ ಎಲ್ಲ ಲಕ್ಷಣಗಳು ಇವರಲ್ಲಿದ್ದವು. ಅಂಬಿಗನು ನಿಷಾದನ ಮಕ್ಕಳೆಂದು, ಶ್ರೇಷ್ಠಕುಲವೆಂದು ಖ್ಯಾತವಾಗಿರುವುದು ಸ್ಪಷ್ಟ. ಪ್ರಾಚೀನ ಕಾಲದಿಂದಲೂ ಗಂಗಾ ದೇವಿಯನ್ನು ಆರಾಧಿಸುತ್ತಾರೆ. ಕುಮಾರರಾಮನನ್ನು ಅಂಬಿಗ (ಬೇಡ)ರು ಮನೆದೇವರಾಗಿ ಪೂಜಿಸುವರು.

ಬೆಸ್ತರಲ್ಲಿ ಎರಡು ಪಂಗಡಗಳಿವೆ: ತೆಲಗು ಬೆಸ್ತರು ಮತ್ತು ಕನ್ನಡ ಬೆಸ್ತರು. ಹಿಂದೂಧರ್ಮದ ವ್ಯಾಪ್ತಿಯಲ್ಲಿ ಬರುವ ಬೆಸ್ತರು ರಾಜಕೀಯ ಸಾಂಸ್ಕೃತಿಕ ಚರಿತ್ರೆಯಲ್ಲಿ ಸ್ಪಷ್ಟವಾಗಿ ದಾಖಲಾಗಿಲ್ಲ. ಜಾನಪದೀಯವಾಗಿಯಾದರೂ ದಾಖಲಿಸುವ ಔಚಿತ್ಯವಿದೆ. ಇವರ ರೂಢಿ ಮತ್ತು ಸಂಪ್ರದಾಯಗಳು ತುಂಬಾ ಮಹತ್ವವಾದವುಗಳು. ಇವರಲ್ಲಿ

ತೊರೆಬೆಸ್ತರು–ಸುಣ್ಣದ ಭಟ್ಟಿ

ತೆಲಗು ಬೆಸ್ತರು–ರಾಜರಿಗೆ ಕೊಡೆ, ಛಾಮರ

ಸರಾಯಿ ಬೆಸ್ತರು–ಅರಿಶಿನ ಬೆಸ್ತರು ಬೀಸುತ್ತಿದ್ದರು

ಎಂಬ ಬೆಡಗು ಮತ್ತು ಕುಲಾಚಾರಗಳಿದ್ದವು.[೬೮]

ಕೌಂಡಿನ್ಯ ಮತ್ತು ಕಷ್ಯಾಪ ಗೋತ್ರದವರಿದ್ದರು. ಇವರಲ್ಲಿ ಬಾಲ್ಯವಿವಾಹ, ವಿಧವಾ ವಿವಾಹ, ದೇವದಾಸಿ ಪದ್ಧತಿಗಳಿದ್ದವು. ಬೆಸ್ತರು ತಮ್ಮ ಕುಲದ ಮುಖ್ಯಸ್ತರಿಗೆ ೧೮ ಪಣ ಕೊಡಬೇಕಿತ್ತು. ಬೆಸ್ತರದೇವರೂ ಆದ ಪ್ರತ್ಯೇಕ ವ್ಯಾಪಾರ ಶ್ರೇಣಿ ಇತ್ತು. ಇವರ ಸಂಪ್ರದಾಯಗಳು ವಿಚಿತ್ರವಾಗಿದ್ದವು.

ಮಹಾನವಮಿ ದಿನ ಮೀನುಗಾರರು ಬಲೆ, ಕೃಷಿ ಉಪಕರಣಗಳಿಗೆ ಪೂಜೆ ಸಲ್ಲಿಸುತ್ತಾರೆ. ಫಾಲ್ಗುಣ ಮತ್ತು ಚೈತ್ರಮಾಸಗಳಲ್ಲಿ ಮೀನುಗಳು ಮೊಟ್ಟೆ ಹಿಡುವುದರಿಂದ(ಗರ್ಭದಾರಣೆ) ಮೀನನ್ನು ಬೇಟೆಯಾಡುವುದು ನಿಷೇಧವಿರುತ್ತದೆ. ಬೆಸ್ತರು ಮೂಲತಃ ಮೀನುಗಾರರು. ಇವರು ಬೀಸುವ ಬಲೆ, ಮೂಲ ಬಲೆ, ಬಿಡುವ ಬಲೆ, ಸೀಗಡೆ ಬಲೆ, ಇರ ಬಲೆಗಳನ್ನು ನೀರಿನಮಟ್ಟ, ಕಾಲಕ್ಕೆ ತಕ್ಕಂತೆ ತಾವು ರೂಢಿಸಿಕೊಂಡು ಬಂದಿರುವ ಧಾರ್ಮಿಕ ಪದ್ಧತಿ ಮತ್ತು ರೂಢಿ ಸಂಪ್ರದಾಯಗಳ ಹಿನ್ನೆಲೆಯಲ್ಲಿ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡಿಕೊಳ್ಳುತ್ತಾರೆಂಬುದು ಗಮನಾರ್ಹ ಸಂಗತಿ.

ತಮ್ಮ ಪೂರ್ವಜರ ಆರಾಧನೆ (ಕಸುಬು) ಮೂಲಕ ಇವರು ನದಿ, ಬೆಟ್ಟ, ಮರಗಳಿಗೆ ಮತ್ತು ಸಾಂಕೇತಿಕವಾಗಿ ಹರಗೋಲು, ಮೀನುಗಳಿಗೆ ಪೂಜಿಸುವ ಸಂಪ್ರದಾಯದಲ್ಲಿ ವಿನೂತನ ಮಾರ್ಪಾಟುಗಳಾಗಿವೆ.

ಬೆಸ್ತರು ಎಂದು ಕರೆದುಕೊಂಡಿರುವ ಅಂಬಿಗನ ಕಸುಬು ಇಂದಿನದಲ್ಲ ಪ್ರಾಚೀನ ಕಾಲದಿಂದಲೂ ಇತ್ತು ಇವರ ಉಗಮದ ಕುರಿತು ಒಂದು ಕತೆಯಿದೆ. ಯಮುನಾ ನದಿಯ ಅಂಬಿಗರ ಮುಖಂಡ ಉಚ್ಚೈಶ್ರವಸ್ (ದಶರಾಜ) ಎಂಬಾತ ಮನೆಯಲ್ಲಿ ಯಾರೊಂದಿಗೊ ಮಾತನಾಡುತ್ತಿದ್ದ ಬಲಿಷ್ಠವಾದ ಮೀನೊಂದನ್ನು ತಂದ ಅಂಬಿಗರು ಅಡಿಗೆಗೆ ಅದನ್ನು ಸೀಳಿದಾಗ ಆ ಮೀನಿನ ಗರ್ಭದಲ್ಲಿ ಒಂದು ಹೆಣ್ಣು ಮಗು ಒಂದು ಗಂಡು ಮಗು ಅವು ಆಳಲಾರಂಭಿಸಿದಾಗ ಹೊರಗಿದ್ದ ದಶರಾಜ ಆಶ್ಚರ್ಯ ಅಡಿಗೆ ಮನೆಯಿಂದ ಮಕ್ಕಳ ಆಳು ಕೇಳಿಬಂದರೆ ಅಪುತ್ರಕನಾದವನಿಗೆ ನೋಡಿ ಅಂಬಿಗರಿಗೆ ಮಾಹದಾನಂದವಾಯಿತು. ತಮ್ಮ ಒಡೆಯನಿಗೆ ಎರಡು ಮಕ್ಕಳು ಸಿಕ್ಕಂತಾಯಿತು ಎಂಬ ಧನ್ಯತಾಭಾವದ ಉದ್ಗಾರವನ್ನು ತೆಗೆದರು. ಮಕ್ಕಳನ್ನು ಎತ್ತಿಕೊಂಡು ಹಿಗ್ಗಿದ ದಶರಾಜ ಇಂಥ ಆಶ್ಚರ್ಯಗಳು ಅವನಿಗೆ ಹೊಸದೇನಲ್ಲ. ಮಕ್ಕಳಿಬ್ಬರನ್ನು ಪತ್ನಿಯ ಕೈಗೆ ಕೊಟ್ಟು ರಾಜಪುರೋಹಿತರಿಗೆ ಹೇಳಿಕಳಿಸಿದ ರಾಜಪುರೋಹಿತರಿಗೆ ಮಕ್ಕಳನ್ನು ನೋಡಿದ ಕೂಡಲೆ ಮುಖ ಅರಳಿತು. ಹಿಂದು ಮುಂದುಗಳನ್ನು ಸರಳವಾಗಿ ನಿರೂಪಿಸಬಲ್ಲ ಪುರೋಹಿತರು ಹೇಳಿದರು. ದಾಶರಾಜ ನೀನು ಪುಣ್ಯವಂತ, ಈ ಮಕ್ಕಳು ಉಪರಿಚರ ವಸ್ತುವಿನ ಸತ್ವ ಸಂಜಾತರು ಆದ್ರಿಕೆ ಎಂಬ ಆಪ್ಸರೆ ಬ್ರಹ್ಮನ ಶಾಪದಿಂದ ಮೀನಾಗಿ ಹುಟ್ಟಿದಾಳು ಗಗನ ಸಂಚಾರಿಯಾಗಿದ್ದ ಉಪರಿಚರ ವಸ್ತುವಿನ ವೀರ್ಯವು ಈಕೆಯ ಗರ್ಭದಲ್ಲಿ ಸೇರಿ ಹೀಗೆ ಎರಡು ಮಕ್ಕಳಾಗಿ ಬೆಳೆದಿವೆ.[೧೯]

ಭದ್ರೇ ರಾಜಪುರೋಹಿತರ ಮಾತನ್ನು ಕೇಳುತ್ತಾ ರಾಜಪುರೋಹಿತರು ನೀನು ಎರಡು ಮಕ್ಕಳನ್ನು ಬಯಸುವುದು ಸರಿಯಲ್ಲ ನಿನ್ನಂತೆ ಮಕ್ಕಳಿಗಾಗಿ ಹಂಬಲಿಸುತ್ತಿರುವ ನತದೃಷ್ಟನೊಬ್ಬನಿಗೆ ಒಂದು ಮಗುವನ್ನು ಪ್ರಧಾನ ಮಾಡು ಉಭಯರಿಗೂ ಹಿತವಾಗುತ್ತದೆ. ಇಬ್ಬರೂ ಮಕ್ಕಳು ಚಂದ್ರವಂಶವನ್ನು ಬೆಳಗಿಸುತ್ತಾರೆ. ತಮ್ಮ ಮಾತೆಂದರೆ ವೇದವಾಕ್ಯ ಹಾಗಿದ್ದಲ್ಲಿ ನಾನು ಈ ಹೆಣ್ಣು ಮಗುವನ್ನು ಇರಿಸಿಕೊಳ್ಳುತ್ತೇನೆ. ನನ್ನ ಕುಲಕಸುಬನ್ನೆಲ್ಲ ಹೇಳಿಕೊಟ್ಟು ಗಂಡು ಮಗುವಿನಂತೆಯೇ ಶ್ರದ್ಧೆಯಿಂದ ಬೆಳೆಸುತ್ತೇನೆ. ಈ ಗಂಡು ಮಗುವನ್ನು ತಾವೇ ಯಾರಾದರೂ ಯೋಗ್ಯರೊಬ್ಬರಿಗೆ ಕೊಡುವುದು ಲೇಸು, ಮತ್ಸ್ಯ ದೇಶದ ರಾಜರೂ ಸಂತಾನವಿಲ್ಲದೆ. ಸಂಕಟಪಡುತ್ತಿದ್ದಾರೆ. ಅಲ್ಲಿ ಮಗು ಬೆಳೆಯಲಿ ದಶರಾಜನ ಮಗಳು ಸತ್ಯವತಿ ಹೆತ್ತ ತಾಯಿಯ ಸಂಸರ್ಗದಿಂದ ಮತ್ಸ್ಯಗಂಧಿ ಎನ್ನಿಸಿಕೊಂಡಳು ದೋಣಿ ನಡೆಸುವುದು ಮೀನು ಹಿಡಿಯುವುದು ಅವಳಿಗೆ ತುಂಬ ಪ್ರಿಯವಾದ ಕಸುಬುಗಳಾಗಿದ್ದವು. ಉಡಿಯಲ್ಲಿ ಮೀನು ತುಂಬಿಕೊಂಡಿರುತ್ತಿದ್ದುದರಿಂದ ಗೆಳತಿಯರೆಲ್ಲ ಅವಳನ್ನು ಮತ್ಸ್ಯಗಂಧಿ ಎಂದೇ ಕರೆಯತೊಡಗಿದರು.[೨೦] ದೋಣಿಗಳಲ್ಲಿ ಕುಳಿತ ೮೦೦ ಮಂದಿ ಅಂಬಿಗರು ಎರಡು ನಿಲುಗಂಬಗಳನ್ನು[೨೧] ಹೊತ್ತ ಹರಿಗೋಲನ್ನು ಸಾಗಿಸುತ್ತಿರುವುದನ್ನು ಒಂದು ಉಬ್ಬು ಚಿತ್ರ ತೋರಿಸುತ್ತದೆ. ೧೦೦ ಅಡಿ ಉದ್ದ ಮತ್ತು ೫೦ ಅಡಿ ಅಗಲದ ಹಡಗುಗಳು ನೈಲ್ ಮತ್ತು ಕೆಂಪು ಸಮುದ್ರದ ಮೇಲೆ ಸಂಚರಿಸುತ್ತ ಕಡೆಗೆ ಮೆಡಿಟರೇನಿಯನ್[೨೨] ಸಮುದ್ರಯಾನ ಮಾಡಿದುವು.

ಕೃಷ್ಣದೇವರಾಯನ ಕಾಲದಲ್ಲಿ ಮಂಡಲಾಧಿಪತಿ ಕೆಂಪು ಸಮುದ್ರದಲ್ಲಿದ್ದಾಗ ೧೨,೦೦೦ ಅಂಬಿಗರೊಂದಿಗೆ ಬಯಲುಗಳನ್ನು ಮತ್ತು ಗುಡ್ಡಗಳನ್ನು ಆವರಿಸಿದನು ಮತ್ತು ನದಿಗಳ ಪ್ರವಾಹವನ್ನು ತಡೆಹಿಡಿದ.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗಿದ್ದು ನದಿ ಪಾತ್ರದಲ್ಲಿ. ಅಂದರೆ ಅಲ್ಲಿ ನದಿಯನ್ನು ದಾಟಿಸಲು ಅಂಬಿಗ ಇರಲೇಬೇಕು. ಅಂದು ಅಂಬಿಗರು ತುಂಬಾ ಪ್ರಾಮುಖ್ಯತೆಯನ್ನು ಪಡೆದಿದ್ದರು. ಇಂದಿಗೂ ಸಹ ಆನೆಗೊಂದಿಯ ಬಾಗಿಲಲ್ಲಿ ಅಂಬಿಗನು ಹರಿಗೋಲನ್ನು ಹಿಡಿದಿರುವ ಶಿಲ್ಪವಿದೆ. ಅಂದರೆ ಎಲ್ಲರಿಗೂ ಅಂಬಿಗತನ ಮಾಡುವ ಕೌಶಲ್ಯ ಬರುವುದಿಲ್ಲ. ಅದಕ್ಕೆ ಅದರದೆ ಆ ಜ್ಞಾನ ಇರುತ್ತದೆ. ತೆಪ್ಪವನ್ನು ಕಟ್ಟುವುದು, ಹರಿಗೋಲನ್ನು ಹಾಕುವುದು ಅವರದೇ ಆದ ತಂತ್ರಜ್ಞಾನಗಳ ಮೂಲಕ ತೆಪ್ಪವನ್ನು ನಡೆಸುತ್ತಾನೆ.

ಅಂಬಿಗನ ಗುರಿ ನದಿ ದಾಟುವುದಾದರೂ ದೋಣಿ ನಡೆಸಿ ನಡೆಸಿ ಬೇಸರ ಬಂದಾಗ ಬಿನಪಕ್ಕೋಸಕ್ಕರ ಕಾಪಾಡಿಕೊಳ್ಳುವಂತೆ ರತ್ನಾಕರನೂ ಧಾನ್ಯ ಕಟರೆಯಾದಾಗ ಕನ್ನಡ ಕಾವ್ಯಂಗನೆಯೊಡನೆ ಚಕ್ಕಂದವಾಡಿರುವನು.[೨೩] ವಿಜಯನಗರ ಕಾಲದಲ್ಲಿ ಅಂಬಿಗನ ಕಸುಬು ಹೇಗಿತ್ತು ಅವರು ಹೇಗೆ ಬಂದರು ಅವರ ತಂತ್ರಜ್ಞಾನ ಮೀನುಗಳು ಹೇಗೆ ಹಿಡಿಯುತ್ತಿದ್ದರು ಎಂಬುದನ್ನು ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ. ಸುಲ್ತಾನರು ಈ ಕ್ರಮವನ್ನು ಅನುಮೋದಿಸಲಾಗಿ ಚರ್ಮದಿಂದ ಆವೃತ್ತವಾದ ನೂರಾರು ಅಡ್ಡಪಟ್ಟಿಗಳು ಅವು ಬುಟ್ಟಿ ಹರಗೋಲುಗಳು ಅವು ಇವತ್ತಿಗೂ ಬಳಕೆಯಲ್ಲಿರುವಂತೆ ೧೬ನೆಯ ಶತಮಾನದ ಈ ನದಿಗಳ ಮೇಲೆ ಬಳಸಲ್ಪಡುತ್ತಿದ್ದವೆಂದು ಪ್ಯಾಸ್‌ನ ಗ್ರಂಥ ಪಾಠಗಳಲ್ಲಿ ವರ್ಣಿಸಲಾಗಿದೆ. ಅವು ಆಕಾರದಲ್ಲಿ ದುಂಡಾಗಿರುತ್ತವೆ. ಮತ್ತು ಬಿದಿರು ಸೀಳಿ ಒಂದರೊಳಗೊಂದು ಹೆಣೆದು ಅದರ ಹೊರಮೈ ಪೂರ್ತಿ ಚರ್ಮದಿಂದ ಆವೃತ್ತವಾಗಿರುತ್ತದೆ. ಈ ಹರಗೋಲುಗಳ ಬಗೆಗೆ ಬರೆಯುತ್ತ ಕರ್ನಲ್‌ಬ್ರಿಗ್ಸ್[೨೪] ಒಂದು ಬ್ರಿಟಿಷ್ ಸೈನ್ಯದ ಪಡೆ ೧೮೧೨ರಲ್ಲಿ ಈ ಹರಗೋಲುಗಳಲ್ಲಿ ತನ್ನ ಪಿರಂಗಿಗಳನ್ನು ವಾಹನಗಳಿಂದ ಇಳಿಸದೆ ತುಂಗಭದ್ರಾ ದಾಟಿಸಿತು.[೨೫] ಹೀಗೆ ಬೇಸ್ತರು ಸೈನ್ಯಗಳಿಗೆ ನೆರವಾಗುತ್ತಿದ್ದರು.

ಬೆಸ್ತ ಮೀನನ್ನು ಹಿಡಿಯಲು ತನ್ನ ಏನೆಲ್ಲಾ ಬುದ್ಧಿ ಶಕ್ತಿಯನ್ನು ಪ್ರಯೋಗಿಸಿ ಸಫಲತೆ ಕಂಡುಕೊಳ್ಳುತ್ತಾನೆ. ಅವು ನೀರಿನಲ್ಲಿ ಮೀನಿನ ಸಂಚಲನ, ವಾಸದ ನೆಲೆ, ಆಯಾಕಟ್ಟಿನ ಜಾಗಗಳನ್ನು ಪತ್ತೆ ಹಚ್ಚುವುದು ಕಠಿಣದ ಕೆಲಸ. ಕಣ್ಣಿಗೆ ಕಂಡರೂ ನೀರಿನಲ್ಲಿ ಮೀನನ್ನು ಹಿಡಿಯುವುದು ದುಸ್ತರವಾದ ಕೆಲಸ. ಬೇಟೆಗಾರನಿಗೆ ನೀರಿನಲ್ಲಿ ಮೀನು ಹಿಡಿಯುವಾಗ ಪರಿಕರಗಳು ಅಗತ್ಯ. ಮೊದಲು ಈಜು ಬರಬೇಕು. ಗಾಳ, ಕೊಳೆ, ಬಲೆಗಳ ಮೂಲಕ ಮೀನನ್ನು ಹಿಡಿಯುವ ಜನಾಂಗವಿದೆ ಇದರಲ್ಲಿ ಅವರು ಪರಿಣತರೆಂಬುದು ಸ್ಪಷ್ಟ.

ಇವರಿಗೆ ಬೇಟೆಯಾಡುವಾಗ ಇನ್ನಿತರ ಪರಿಕರಗಳು ಅಗತ್ಯ. ಅವುಗಳ ಸಹಾಯದಿಂದಲೇ ಪ್ರಾಣಿಗಳನ್ನು ಪಳಗಿಸುತ್ತಿದ್ದರು. ತೆಳುವಾದ ಬೊಂಬು, ನುಗ್ಗೆಯ ಕೋಲುಗಳ ಮೂಲಕ ತೆಪ್ಪ ಕಟ್ಟಿ ದಡ ಸೇರುತ್ತಿದ್ದರು. ಹೆಚ್ಚಾಗಿ ಹರಗೋಲುಗಳನ್ನೇ ಮೀನುಗಾರಿಕೆಗೆ ಬಳಸಿಕೊಂಡಿದ್ದರು. ವಿಜಯನಗರ ಕಾಲದಲ್ಲಿ ಮೀನುಗಾರಿಕೆಗೆ ಬಲೆ, ಗಾಳ, ಕೂಳೆ ಮೊದಲಾದ ಪರಿಕರಗಳನ್ನು ಪ್ರಯೋಗಿಸುತ್ತಿದ್ದರು.

ಬಲೆ ಜಲಚರಗಳನ್ನು ಬಲೆಗಳಿಂದಲೂ ಬೇಟೆಯಾಡುತ್ತಾರೆ. ಬಲೆ ಅರ್ಧಚಂದ್ರಾಕಾರವಾಗಿರುತ್ತದೆ. ಈ ಬಲೆಗಳು ಮೊಲ, ಮೀನು ಮೊದಲಾದವುಗಳಿಗೆ ಮೃತ್ಯುಪಾಷವೆನಿಸಿವೆ. ಮೀನಿನ ಬಲೆಗಳು ವಿಶೇಷವಾಗಿ ೨-೩ ರೀತಿಗಳಲ್ಲಿವೆ. ದೊಡ್ಡ ಬಲೆಗೆ ಎರಡು ಗಳಗಳನ್ನು ಕಟ್ಟಿ ಇಬ್ಬರು ವ್ಯಕ್ತಿಗಳು ನೀರಿನಲ್ಲಿ ಎಳೆಯುವಾಗ, ಕೆಲವು ಬೇಟೆಗಾರರು ನೀರಿನಲ್ಲಿ ಸೋಸುತ್ತಾ ಬಂದು ಬಲೆಯನ್ನು ಎತ್ತಿ ದಡಕ್ಕೆ ತಂದು ಮೀನುಗಳನ್ನು ಹೊರತೆಗೆದು ರಾಶಿಹಾಕುತ್ತಾರೆ. ಮತ್ತೊಂದು ಸಣ್ಣ ಅಥವಾ ಕೊಂಡ್ಲಬಲೆ. ಚಿಕ್ಕ-ದೊಡ್ಡ ಮೀನುಗಳನ್ನು ಸುಲಭವಾಗಿ ಹಿಡಿಯುವ ಬಲೆ ಇದು ೩ ಅಡಿ ಅಗಲವಿದ್ದು ಸುಮಾರು ಮೀಟರುಗಳವರೆಗೆ ಉದ್ದವಿರುತ್ತದೆ.

ಗಾಳ ಸಮುದ್ರ ಕಾಲುವೆ, ನದಿ, ಬಾವಿ, ಕೆರೆ, ಕಟ್ಟೆಗಳಲ್ಲಿ ಉಪಾಯದಿಂದ ಗಾಳವನ್ನು ಹಾಕಿ ಮೀನಿಡಿಯುತ್ತಾರೆ. ಹರಿಶ್ಚಂದ್ರ ಕಾವ್ಯದಲ್ಲಿ ರಾಘವಾಂಕ ತಿಳಿಸಿದ ಗಾಳಗಳ ಉಲ್ಲೇಖವಿದೆ. ಉದ್ದವಾದ ಕೋಲಿಗೆ ದಾರಕಟ್ಟಿ ಆ ದಾರದ ತುದಿಗೆ ಚೂಪಾದ ತಂತಿ ರೂಪದ ಗಾಳವನ್ನು ಕಟ್ಟಿ ಅದಕ್ಕೆ ಎರೆಹುಳುವನ್ನು ಏರಿಸಿ ನೀರಿನಲ್ಲಿ ಬಿಡುತ್ತಾರೆ. ಮೀನು ಆ ಹುಳುವನ್ನು ನುಂಗಿದಾಗ ಸಿಕಿಕೊಳ್ಳುತ್ತದೆ. ಆಗ ಮೇಲಕ್ಕೆತ್ತಿ ಮೀನನ್ನು ಪಡೆಯುತ್ತಾರೆ. ಇದು ಅನಾಯಸವಾದ ಬೇಟೆ ವಿಧಾನವಾಗಿದೆ.

ಕೂಳೆ ತೆಂಗಿನಗರಿಯ ಕಡ್ಡಿ ಅಥವಾ ತೆಳುವಾದ ಕೋಲಿನ ಕಡ್ಡಿಗಳಿಂದ ಈ ಕೂಳೆಯನ್ನು ತಯಾರಿಸುತ್ತಾರೆ. ಇದನ್ನು ಹರಿಯುವ ನೀರಿಗೆ ಅಡ್ಡಲಾಗಿಟ್ಟು ಅದರ ಮೇಲೆ ಭಾರವಾದ ವಸ್ತುವನ್ನಿಟ್ಟಿರುತ್ತಾರೆ. ಕೂಳೆಯಲ್ಲಿ ನೀರು ಸರಾಗವಾಗಿ ಹೊರಗಡೆ ಹೋಗುವಾಗ ಜೊತೆಗೆ ಬಂದ ಮೀನು ಅದರಲ್ಲಿ ಸಿಕ್ಕಿಹಾಕಿಕೊಳ್ಳುತ್ತದೆ. ಹೊರಗಡೆ ಹೋಗಲು ಅವಕಾಶವಿರುವುದಿಲ್ಲ. ಹೆಚ್ಚಾಗಿ ಕಾಲುವೆ, ಕೆರೆ, ತೂಬುಗಳಿಗೆ ಇದನ್ನು ಹಾಕುತ್ತಾರೆ.

ರಾಘವಂಕನು ಹರಿಶ್ಚಂದ್ರ ಕಾವ್ಯದಲ್ಲಿ ಇಂಗೂಳಿ, ಹೆಗ್ಗೂಳಿ, ಕಿರುಗೂಳಿ ಎಂಬುಗಳನ್ನು ತಿಳಿಸಿರುವನು. ಜಾಲಗಳಿಂದ ಉದ್ದದಾರ ಬಿಗಿದ ಸಿಲುಕಂಬಿನಿಂದ ಸೊಗಡು ಗೂಳುಗಳಿಂದ (ಮೀನು ಹಿಡಿಯುವ ವಾಸನೆಯುಳ್ಳ ಬುಟ್ಟಿ), ಮದ್ದುಗಳನ್ನು ಮಸಕದಿಂದ (ಆಹಾರದಲ್ಲಿ ವಿಷಬೆರಸುವುದು) ನದಿ, ಕಾಲುವೆ, ಬಾವಿಗಳಲ್ಲಿ ಮೀನನ್ನು ಸುಲಭವಾಗಿ ಹಿಡಿಯಬಹುದಾಗಿದೆ. ರಸಾಯನಿಕ ವಸ್ತು. ವಿಷಪೂರಿತ ದ್ರವ, ಅನಿಲಾಂಶಗಳನ್ನು ನೀರಿನಲ್ಲಿ ಕಲಿಸಿದರೆ ಮೀನುಗಳು ತಲ್ಲಣಗೊಂಡು ಗಲಿಬಿಲಿ ಎದ್ದು ಸಾಯುತ್ತವೆ ಇಲ್ಲವೆ ಬೇಟೆಗಾರನ ಬಲೆಗೆ ವಶವಾಗುತ್ತವೆ. ಮೀನಿನ ವಿಧಗಳನ್ನು ಸಾಹಿತ್ಯ ಕೃತಿಗಳಲ್ಲಿ ತಿಳಿಸಿರುವಂತೆ, ವಿಜಯನಗರ ಕಾಲದಲ್ಲಿ ಬಾಳ, ಚಿತ್ತರೆ, ಮೊಟ್ಟು, ಉಸಗತಕ್ಕಡಿ, ನೆತ್ತಿ ಮೇಲೆ ಕಣ್ಣಿರುವ ಮೀನು ಬುರ್ದೆಮೊಟ್ಟು, ಗೊದ್ಲೆ, ಬಿಳಸೆ, ಹೊಟ್ಟುಟ್ಟೆ ಬುಡ್ಡಗ, ಹಾವು ಮೀನು, ಉಲುಸೆ[೬೬] ಇತರ ತಳಿಗಳ ಮೀನುಗಳಿದ್ದವು.

ಕ್ಷೌರಿಕ

ಸಾಮಾನ್ಯವಾಗಿ ತಲೆಗೂದಲನ್ನು ಬೋಳಿಸುವುದಕ್ಕೆ ಕ್ಷೌರ ಅಥವಾ ಮುಂಡನೆ ಎನ್ನುವರು. ಕ್ಷೌರ ಮಾಡಿಸಿಕೊಂಡವರು ಕ್ಷೌರದ ತರುವಾಯ ಮೈಲಿಗೆಯಾಗುತ್ತದೆ ಎಂಬ ನಂಬಿಕೆಯಿದೆ. ಅದನ್ನು ತೊಡೆದು ಹಾಕುವದಕ್ಕಾಗಿ ಮನೆಯ ಹೊರಗೆ ನಿಂತು, ನೀರು ಸಿಂಪಡಿಸಿಕೊಂಡು ನಂತರ ಸ್ನಾನ ಮಾಡುವರು.

ಶ್ರೀ ಎನ್.ಕೆ. ಕುಲಕರ್ಣಿ ಅವರ ಸಾಂಪ್ರದಾಯಿಕ ಕ್ಷೌರವನ್ನು ಕುರಿತು ಒಂದು ಲೇಖನದಲ್ಲಿ ಈ ರೀತಿ ವರ್ಣಿಸುತ್ತಾರೆ. ನಮ್ಮ ಹಿರಿಯರ ಕಾಲಕ್ಕೆನೂ ಮನೆಗೆ ಬರಬೇಕಾಗಿದ್ದರೆ ವಾರ, ತಿಥಿ ಎಲ್ಲಾ ವಿಚಾರಿಸಿ ಬರಬೇಕು. ಅಂಗಳದಲ್ಲಿಯೇ ದನದ ಕಟ್ಟ ಬಳಿ ಒಂದು ಮಣಿ, ಬಿಸಿನೀರಿನ ತಂಬಿಗೆ, ಕೇದೂ ನಮ್ಮ ಹಿರಿಯರ ಶಿರಕ್ಷೌರ ಮುಗಿಸಿ ಗೋಮಯದಿಂದ ಒಂದು ಕೂದಲೆಳೆಯನ್ನೂ ಬಿಡದಂತೆ ಸ್ವಚ್ಛಮಾಡಿಕೊಂಡು ಹೋದ ಮೆಲೆ ಹಿರಿಯರು ಮತ್ತೊಮ್ಮೆ ತುಂಬ ಸಾರಿಸಿ ದೊಡ್ಡ ಚಂದಪ್ಪನಂದ ಗೋಮ ಹಚ್ಚಿ ಲಂಡ ಪಂಜೆಯ ಮೇಲೆ ಹೊರಗೆ ನೀರು ಹಾಕಿಕೊಂಡು ಒಳಗೆ ಹೋಗಿ ಬಚ್ಚಲು ಮನೆಯಲ್ಲಿ ಮತ್ತೊಮ್ಮೆ ಸ್ನಾನ ಮಾಡಿ ಮಡಿಯಾಗುವರು೬೭ ಕ್ಷೌರಿಕನೂ ತನ್ನ ಕ್ಷೌರಕಾರ್ಯವೆಲ್ಲ ಮುಗಿದ ಬಳಿಕ ಸ್ನಾನ ಮಾಡುತ್ತಾನೆ. ಆ ಮೇಲೆಯೇ ತನ್ನ ಮನೆಯೊಳಕ್ಕೆ ಬರುತ್ತಾನೆ. ಸ್ನಾನದ ಮುನ್ನ ಆ ಮೇಲೆಯೇ ತನ್ನ ಮನೆಯೊಳಕ್ಕೆ ಬರುತ್ತಾನೆ. ಸ್ನಾನದ ಮುನ್ನ ಮೈಲಿಗಯಾದುದರಿಂದ ಈತನು ಯಾವ ಕಾರ್ಯವನ್ನು ಮಾಡಲಾರ ಮಹಾನವಮಿ ಹಬ್ಬಕ್ಕೆ ಮಾತ್ರ ತನ್ನ ಸಲಕರಣೆಗಳನ್ನು (ಖಂಡೇ ಎಂದು ಭಕ್ತಿಯಿಂದ ಪೂಜಿಸುತ್ತಾರೆ). ತಲೆಬೋಳಿಸುವ ಪದ್ಧತಿ ಇತ್ತಿತ್ತಲಾಗಿ ಇಲ್ಲದಾಗುತ್ತಿದ್ದರೂ ಸನಾತನವಾದಿಗಳಾದ ಬ್ರಾಹ್ಮಣ, ವಿಧವೆಯರು, ವೀರಶೈವಸ್ವಾಮಿಗಳು, ಬೌದ್ಧಭಿಕ್ಷುಗಳು, ಅಯ್ಯತನ ಮಾಡಿಸಿಕೊಳ್ಳುವವರು ತಿರುಪತಿ-ತಿಮ್ಮಪ್ಪ, ಧರ್ಮಸ್ಥಳದ ಮಂಜುನಾಥ, ಮೊದಲಾದ ದೇವರುಗಳಿಗೆ ಹರಕೆ ಹೊತ್ತವರು ತಲೆ ಬೋಳಿಸುವ ಪದ್ಧತಿಯನ್ನಿಟ್ಟುಕೊಂಡಿದ್ದಾರೆ. ಮಗುವಿನ ಜಡೆ ಅಥವಾ ಜವಳ ತೆಗೆಯುವರೂ ಕ್ಷೌರಿಕ ಈ ಸಂದರ್ಭದಲ್ಲಿ ಆತನಿಗೆ ಉಲಿಪ (ಅಕ್ಕಿ, ಬೆಲ್ಲ, ಬೆಳೆ, ಗೋದಿಹಿಟ್ಟು, ತಾಂಬೂಲ, ಒದನೆಕಾಯಿ ಇತ್ಯಾದಿ) ಕೊಡುವುದುಂಟು ಕಾಲಲ್ಲಿ ಗಂಡಗಾರಿಮುಳ್ಳು ನೆಟ್ಟಾಗಲು ಇವನೇ ಬೇಕಾಗುತ್ತದೆ. ಕಾರಣ ಅವನಲ್ಲಿ ಲಕ್ಷಣ ಮುಳ್ಳಿ ತೆಗೆಯಲು ಬಳ್ಳಿಯ ಸಾಧನವಾಗಿದೆ. ಕೊಬ್ಬರಿ ಎಣ್ಣೆಯಿಂದ ತಲೆತಿಕ್ಕಿ ಕತ್ತಿನ ನರಗಳನ್ನು ಸಡಿಲಗೊಳಿಸುವ ಹದ ಈತನಿಗೆ ಚೆನ್ನಾಗಿ ಗೊತ್ತಾಗುತ್ತೆ.

ಕ್ಷೌರಿಕರು ತಮ್ಮದೆ ಆದ ಜ್ಞಾನದಿಂದ ತಮ್ಮ ಕಸುಬನ್ನು ಮುಂದುವರೆಸಿರುವರು ಈ ಕಸುಬಿನಿಂದಲೇ ತಮ್ಮ ಜೀವನ ನಡೆಸುತ್ತಾರೆ. ಇವರ ಕೆಲಸ ಬೆಳಗಿನಿಂದ ಆರಂಭವಾಗಿ ಹೊತ್ತು ಮುಳುಗುವವರೆಗೂ ನಡೆದಿರುತ್ತದೆ. ಅವನು ಕ್ಷೌರ ಮಾಡುವ ಸ್ಥಳಕ್ಕೆ ಆಯುಷ್ಕರ್ಮಶಾಲೆ ಎನ್ನುವುದುಂಟು೭೮ ತನ್ನ ಮನೆಯ ಹಿತ್ತಲಲ್ಲಿಯೇ ಅಥವಾ ಮನೆಯ ಮುಂಬಾಗದ ಕಟ್ಟೆಯ ಮೇಲೂ, ಕೋಣೆಯಲ್ಲಿಯೂ ತನ್ನ ಕಾರ್ಯ ಆರಂಭಿಸುತ್ತಾನೆ. ಕ್ಷೌರವನ್ನು ಮಣಿಯ ಮೆಲೆ, ತುದಿಗುಂಡಿಯ ಮೇಲೆ ಕುಳಿತುಕೊಂಡೆ ಮಾಡುತ್ತಾನೆ. ಅನಿವಾರ್ಯ ಪ್ರಸಂಗಗಳಲ್ಲಿ ಬೆನ್ನುಬಾಗಿಯೂ, ಬಾಗಿಸಿಯೂ ಮಾಡುತ್ತಾನೆ. ಕ್ಷೌರ ಮಾಡಿಸಿಕೊಳ್ಳುವವನು ಮಣಿಯ ಮೇಲೆ ತುದಿಗುಂಡಿಯ ಮೇಲೆ ಕುಳಿತು ಒಂದು ಕೈಯಲ್ಲಿ ಕನ್ನಡಿ ಹಿಡಿದು ತನಗೆ ಕ್ಷೌರವಾಗುತ್ತಿರುವುದನ್ನು ಆಗಾಗ್ಗೆ ನೋಡುತ್ತಿರುತ್ತಾನೆ.

ಗಂಡಸ್ಥಲಪನ್ನೆ ಕೊನರುವ ಕರ್ಮಿಸೆ
ತೊಂಡೆವಣ್ಣುಡಿ ದೋರೆವಲ್ಲು
ಮಂಡಳಿಸುವ ಕಂಠಸರದ ನುಣ್ಗೆರಲನ
ಕಂಡಾಕ್ಷಣ ಸೋತರೊಲಿದು (ಮೋ.ತ. ಸಂ-೧೭೮, ಪ-೬೩, ಪು-೨೬೫)

ಕೆನ್ನೆಯ ಮೇಲಿನ ಕ್ಷೌರದ ಕಟ್ಟು, ಕಪ್ಪಾದ ಚಿಗುರು ಮೀಸೆ, ತೊಂಡೆ ಹಣ್ಣಿನ ತುಟಿ, ದೋರೆಯ ಹಲ್ಲು, ದುಂಡು ಸರವನ್ನು ಧರಿಸಿದ ನುಣುಪಾದ ಕೊರಳು ಇಂಥ ಚಲುವನನ್ನು ಕಂಡು ಕೂಡಲೇ ಮನಸೋತರು.

ಇವನ ಸಲಕರಣಿಗಳು ಕೂದಲು ಕತ್ತರಿಸಲು ಒಂದು ಕತ್ತರಿ, ಬೊಳಿಸಲು ಒಂದು ಕತ್ತಿ, ಕತ್ತಿ ಮಸೆಯುವ ಕಲ್ಲು, ಉಗುರು ತೆಗೆಯಲು ಒಂದು ಚಣ ಕತ್ತಿಯನ್ನು ಉಜ್ಜುವ ಚರ್ಮದ ಪಟ್ಟಿ, ಮೂಗಿನೊಳಗಿನ ಕೂದಲು ತೆಗಯುವ ಚಿಮ್ಮಟ, ಕೂದಲು ಬಾಚಲು ಬಾಚಣಿಗೆ ದಾಡಿಗೆ ಹಚ್ಚುವ ಸಾಬೂನು ಮುಖಕನ್ನಡಿ, ಕೊಬ್ಬರಿ ಎಣ್ಣಿಯ ಬಟ್ಟಲು, ನೀರಿನ ಬಟ್ಲ ಇವೆಲ್ಲ ಹಾಕಿಕೊಳ್ಳಲು ಒಂದು ಹಡಪ ಇವುಗಳನ್ನು ಬಳಸಿ ತನ್ನ ಕಸುಬನ್ನು ಮಾಡುವನ್ನು ಆದರೆ ಇಂದು ಈ ಸಾಧನ ಸಲಕರಣಿಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿರುವುದನ್ನು ಕಾಣುತ್ತೇವೆ.

ಕುಂಬಾರಿಕೆ

ಕುಂಬಾರಿಕೆಯ ಉಗಮದ ಬಗ್ಗೆ ಐತಿಹ್ಯವೊಂದು ಈ ರೀತಿ ಇದೆ. ಸಮುದ್ರ ಉದಿಸಿದಾಗ ದೇವತೆಗಳು ಅದರಿಂದ ಉದಿಸಿ ಬಂದು ಅಮೃತವನ್ನು ತೆಗೆದುಕೊಂಡರಾದರೂ ಅದನ್ನು ಸಂಗ್ರಹಿಸಿಡಲು ಪಾತ್ರೆಯೊಂದು ಬೇಕಾಯಿತು. ಆಗ ದೇವಶಿಲ್ಪಿ ವಿಶ್ವಕರ್ಮನು ಮಣ್ಣಿನ ಬಿಂದಿಗೆಯೊಂದನ್ನು ತಯಾರಿಸಿ ಕೊಟ್ಟನು ಅಂದಿನಿಂದ ನೀರಿನಿಂದ ತುಂಬಿದ ಕೊಡವನ್ನು (ಬಿಂದಿಗೆ) 'ಮಂಗಳ ಘಟ್ಟ'ವೆಂದು ಪರಿಭಾವಿಸಲಾಯಿತಲ್ಲದೆ. ಅದು ಯಾವುದೇ ಧಾರ್ಮಿಕ ಅಚರಣೆಯ ಅವಿಭಾಜ್ಯ ಅಂಗವೆಂದು ಪರಿಗಣೆಸಲಾಯಿತು. ಅಲ್ಲದೆ ಅ ಸಮಯದಲ್ಲಿ ಪೂಜಿಸಬೇಕದ ದೇವರ ವಿಗ್ರಹವು ದೊರೆಯದಿದ್ದಲ್ಲಿ ಈ ಕಲಶವನ್ನೇ (ನೀರು ತುಂಬಿದ ಬಿಂದಿಗೆ) ಆ ದೇವರೆಂದು ಪೂಜಿಸುವ ರೂಢಿ ಆರಂಭವಾಯಿತು. ಅದರಂತೆ ದೀಪವುರಿಸಲು ಬೇಕಾಗುವ ಮಣ್ಣಿನ ಪ್ರಣತಿಯು ಕೂಡಾ ಧಾರ್ಮಿಕ ಆಚರಣೆಗಳ ಅವಿಭಾಜ್ಯ ಅಂಗವಾಯಿತು.

ಸಾಹಿತ್ಯ ಉಲ್ಲೇಖಗಳು ಕೂಡಾ ಗಮನಿಸಬಹುದು. ಕಾಳಿದಾಸನು ರಾಜಕುಮಾರನೊಬ್ಬನು ಮಣ್ಣಿನ ಗೊಂಬೆಯೊಡನೆ ಆಡವಾಡುತ್ತಿದ್ದ ಬಗ್ಗೆ ಹೇಳಿದ್ದಾನೆ. ಬಾಣನು ಹಷವರ್ಧನನು ಸುಡಾವೆ ಮಣ್ಣಿನ ಮೂರ್ತಿಗಳನ್ನು ತಯಾರಿಸಲೆಂದೇ ಕುಶಲಕಲೆಗಾರರನ್ನು ನೇಮಕಮಾಡಿ ಕೊಂಡಿದ್ದನು ಎಂದು ಹೇಳಿದ್ದಾನೆ.[೬] ಮಧ್ಯಕಾಲಿನ ಭಾರತದಲ್ಲಿ ಜಹಾಂಗೀರ ಒಮ್ಮೆನದಿಯ ದಡದಲ್ಲಿ ಕುಳಿತಿರುವಾಗ ನೀರಿನಲ್ಲಿ ಒಂದು ಮಡಿಕೆ ತೇಲಿಹೋಗುತ್ತಿದ್ದುದನ್ನು ಕಂಡ ಅದರಲ್ಲಿ ಶಾರೀರವನ್ನು ತುಂಡು ತುಂಡು ಮಾಡಿ ತುಂಬಿದ್ದರು. ಅಪರಾಧಿಗಳನ್ನು ಹುಡುಕಿ ತರಬೇಕು ಎಂದು ಆಜ್ಞೆ ಮಾಡಿದ ಅಧಿಕಾರಿಗಳು ಒಂದು ಉಪಾಯ ಹುಡುಕಿ ಊರಿನ ಪ್ರತಿಯೊಬ್ಬ ಕುಂಬಾರನು ಒಂದೊಂದು ಮಡಿಕೆ ತುಂದು ಕೊಡಬೇಕೆಂದು ತಿಳಿಸಿದರು ಮಡಿಕೆಗಳು ಬಂದವು ಮೊಗಲ್ ರಾಜ್ಯದಲ್ಲಿ ಪ್ರತಿಯೊಬ್ಬ ಕುಂಬಾರನೂ ತಾನು ಮಾಡಿದ ಮಡಿಕೆಗಳ ಮೇಲೆ ತನ್ನದೇ ಆದ ಗುರ್ತುಮಾಡಬೇಕೆಂಬ ಪದ್ಧತಿ ಇತ್ತು.[೭] ಕುಂಬಾರನು ತಂದ ಮಡಿಕೆಗಳನ್ನು ಹೆಣ ತುಂಬಿದ ಮಡಿಕೆಗೆ ಹೋಲಿಸಿ ಅಪರಾಧಿಗಳನ್ನು ಪತ್ತೆಹಚ್ಚಿದರು.

ಹದಿಮೂರನೆಯ ಶತಮಾನದ ಒಂದು ಶಾಸನದಲ್ಲಿ ಕುಂಬಾರರ ಕುರಿತಿದೆ. ಕನ್ನಡ ಭಾಷೆ ಮತ್ತು ಲಿಪಿಯಲ್ಲಿರುವ ಈ ಶಾಸನದಲ್ಲಿ ಕನ್ನಡ ಭಾಷೆ ಮತ್ತು ಲಿಪಿಯಲ್ಲಿರುವ ಈ ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ. ಲಿಪಿಯ ಆಧಾರದ ಮೇಲೆ ಇದನ್ನು ಕ್ರಿ.ಶ. ೧೩ನೆಯ ಶತಮಾನಕ್ಕೆ ಹಾಕಬಹುದಾಗಿದೆ. ಇದು ಐತಿಹಾಸಿಕ ದಾಖಲೆ ಆಗಿರದೆ, ಕುಂಬಾರರ ಹೆಗ್ಗಳಿಕೆಯನ್ನು ಮಾತ್ರ ಹೇಳುವ ಶಾಸನವಾಗಿರುತ್ತದೆ. ಈ ಶಾಸನದಲ್ಲಿ ಗಿರಿಜೆಯ ವಿವಾಹದ ಕಥೆಯಲ್ಲದೆ, ಅಮೃತಮಥನದ ಕಥೆಯೂ ಇದೆ. ಶಾಸನದ ಆರಂಭದಲ್ಲಿ ಅಯ್ಯಾಮಂತರ ಪ್ರಶಸ್ತಿಯಲ್ಲದೆ ಕುಂಬಾರಕುಲ ಹುಟ್ಟಲು ಕಾರಣವಾದ ಕಥೆಯೊಂದಿಗೆ ಶಿವಪಾರ್ವತಿಯರ ವಿವಾಹದ ಕತೆ ಆರಂಭವಾಗುತ್ತದೆ.

ಕೃತಯುಗದಲ್ಲಿ ದೇವ–ಮಾನವರಿಗೆ ವ್ಯತ್ಯಾಸವಿರಲಿಲ್ಲ. ಷಡ್ದರ್ಶನ ಸಮಯವಾಗಲೀ ನೋಂಪಿಬ್ರತಗಳಾಗಲೀ, ಶಿಕ್ಷೆ–ದೀಕ್ಷೆಯಾಗಲೇ ಇರಲಿಲ್ಲ. ಬಾಸಿಂಗ, ಹೂಜೆ, ಸೊಂನಲಗೆಯಾಗಲೀ ಇರಲಿಲ್ಲ. ಕಲ್ಲದೇವರಿಗೆ ಪ್ರಖ್ಯಾತಿ ಬರಬೇಕೆಂದು ಗಿರಿರಾಜನ ಮಗಳು ಪರ್ವತದ ಒಳಿಗೆ ತಪಸ್ಸು ಮಾಡಬೇಕೆಂದು ಬರುತ್ತಾಳೆ. ಆ ಪರ್ವತದಲ್ಲಿ ಪ್ರಾಣಿಗಳು ಜಾತಿವೈರವನ್ನು ಬಿಟ್ಟು ಒಟ್ಟಿಗೆ ಸಂತೋಷದಿಂದಿದ್ದವು. ಪಾರ್ವತಿಯೂ ಇಂತಹ ಪರಿಸರದಲ್ಲಿ ತಪಸ್ಸನ್ನಾಚರಿಸುತ್ತಾಳೆ. ಇತ್ತ ಮಹಾದೇವನು ಬೇಟೆಯಾಡಬೇಕೆಂಬ ಆಸೆಯಿಂದ ಬೇಡನಾಗಿ ದೇವತೆಗಳೊಡನೆ ಕಾಮದೇವನ ಸಂಗಡ ಗಿರಿರಾಜನ ಮಗಳು ತಪಸ್ಸು ಮಾಡುತ್ತಿದ್ದ ಪ್ರದೇಶಕ್ಕೆ ಬರುತ್ತಾನೆ. ಆ ವನದ ಸೊಗಸನ್ನು ನೋಡುತ್ತ ಬಂದಾಗ ಕೊಳದ ಬಳಿ ಒಂಟಿಕಾಲಲ್ಲಿ ನಿಂತು ಪಂಚಾಗ್ನಿ ಮಧ್ಯೆ ಮೌನವ್ರತದಿಂದಿದ್ದ ಕನ್ನೆಯನ್ನು ಕಾಣುತ್ತಾನೆ. ಆಕೆಯು ಗಿರಿರಾಜನ ಮಗಳೆಂದು ತಿಳಿದು ಮದುವೆಯಾಗಬೇಕೆಂದು ಬಯಸಿ ಗಿರಿರಾಜನ ಬಳಿಗೆ ರಾಯಭಾರವನ್ನು ಒಯ್ಯಬೇಕೆಂದು ತಿಳಿಸುತ್ತಾನೆ. ಆಗ ಕಾಮದೇವನು ಯಾರನ್ನು ಕಳುಹಿಸುವುದೆಂದು ಯೋಚಿಸಿ ಹಿರಿಯನಾದ ನಾರಾಯಣ ಪುರಾಣ ಪುರುಷನಾದ ಬ್ರಹ್ಮ, ಬುದ್ಧಿವಂತನಾದ ಬೃಹಸ್ಪತಿ, ದೇವೇಂದ್ರ ಈ ನಾಲ್ವರನ್ನು ಕರೆದು ಗಿರಿರಾಜನ ಬಳಿಗೆ ಕಳುಹಿಸುತ್ತಾನೆ. ಇವರು ಗಿರಿರಾಜನ ಆಸ್ಥಾನಕ್ಕೆ ಹೋಗಿ ಗಿರಿರಾಜನನ್ನು ಕಂಡು ಮಹಾದೇವನ ಆಸೆಯನ್ನು ತಿಳಿಸುತ್ತಾರೆ. ಗಿರಿರಾಜನು ಕೂಸನ್ನು ಮಹಾದೇವನಿಗೆ ಕೊಡುವುದಾಗಿ ಒಪ್ಪುತ್ತಾನೆ.

ಇತ್ತ ಸುದ್ದಿ ತಿಳಿದ ಕೂಡಲೇ ದೇವತೆಗಳು ಶಿವನನ್ನು ಶೃಂಗಾರ ಮಾಡಿಕೊಂಡು ಪುರದಲ್ಲಿ ಮೆರವಣಿಗೆ ಮಾಡಿ ವಿವಾಹ ಮಂಟಪದಕ್ಕೆ ಕರೆತರುತ್ತಾರೆ. ವಿವಾಹ ಮಂಟಪದಲ್ಲಿ ಎಲ್ಲವೂ ಇದೆ. ಆದರೆ ಧಾರೆಯನೆರೆಯಲು ಕಳಸ, ಜಗಲಿಗೆ, ಹೂಜೆಗಳಿರಲಿಲ್ಲ, ಇವೆಲ್ಲಿ ಎಂದು ಗಿರರಾಜ ಶಿವನನ್ನು ಕೇಳಿದಾಗ, ನಾರಾಯಣನ ಕೈಯಲ್ಲಿನ ಚಕ್ರವೇ ತಿಗುರಿ ಮಾಡಿ ಬ್ರಹ್ಮನ ವೇದಪೂಸ್ತಕದ ಕಂಬಿಯಂ ಬಾಂಬಕಂಬಿ ಮಾಡಿ, ಮಹಾದೇವನ ಕೈಯಲ್ಲಿನ ಲಾಕುಳವೇ ಬಾಂಬ ಕೋಲನ್ನಾಗಿಸಿ, ದೇವರ ಕಚ್ಚುಟವನ್ನು ಬನ್ನಸಿಲೆಯನ್ನಾಗಿಸಿ, ಬ್ರಹ್ಮನ ಕೃಷ್ಣಾಜಿನವನ್ನು ಮರ್ಮ್ಮಾಮಾಡಿ, ಯಜ್ಞೋಪವೀತವನ್ನು ಕೊರೆದಾರ ಮಾಡಿ, ತ್ರಿಪುರವನ್ನು ಸುಟ್ಟುಕೊಂಡ ಪೆಸರಕರೋಟಿಯನ್ನು ಕರೋಟಿ ಮಾಡಿ, ತ್ರಿಪುರ ರಾಕ್ಷಸರ ಕನ್ನಡಿಯೆಲಬನ್ನು ಸಣಹು ಮಾಡಿ, ಗುಂಡಿಗಳನ್ನು ಗುಂಡಮಾಡಿ, ಸೂರ್ಯನಿಂದ ಪಡೆದ ಗಾಲಿಯಿಂದ ಹೊಳೆಯನ್ನು ಸೃಷ್ಟಿಸಿ, ಯಮನ ಕೋಣನಿಂದ ಮಣ್ಣನ್ನು ಮಿದಿಸಿ, ಹೂಜೆ, ಸೊನ್ನಲಿಗೆ, ಕುಂಭವೇ ಮೊದಲಾದ ವಸ್ತುಗಳನ್ನು ಮಾಡಿ ಸುಟ್ಟು, ಬಣ್ಣವಿಟ್ಟು, ಮದುವೆ ಮನೆಗೆ ತರುತ್ತಾರೆ. ಮುಂದೆ ಧಾರೆಯನ್ನಿರೆಯುತ್ತಾರೆ. ದೇವರ ಬಲದ ದೆಸೆಯಲ್ಲಿ ದೇವಿಯು ಕುಳಿತಿರಲು

ಇವರ ಮುಂದೆ ವಿಶ್ವಾಮಿತ್ರ, ವಸಿಷ್ಠರು ಸ್ವಾಹಾಮಂತ್ರಗಳಿಂದ ಹೋಮವನ್ನು ಮಾಡಿ ಬಲದೆಸೆಯಲ್ಲಿದ್ದ ದೇವಿಯನ್ನು ಎಡೆದೆಸೆಗೆ ತಂದು ಮದುವೆ ಮುಗಿಸುತ್ತಾರೆ. ಮುಂದೆ ಮಹಾದೇವನು ಗಿರಿಜಾ ಸಮೇತ ನಂದಿಯನ್ನೇರಿ ಕೈಲಾಸಕ್ಕೆ ಹೊರಡಲು ಸಿದ್ಧನಾಗುತ್ತನೆ. ಆಗ ತನ್ನ ಮದುವೆ ಧಾರೆಗೆಎ ಸಹಾಯ ಮಾಡಿದವನನ್ನು 'ಸಾಲೆಸಾಸಿರ್ವ್ವರು' ಎಂಬ ಹೆಸರಿನಿಂದ ಪ್ರಸಿದ್ಧರಾಗಿರೆಂದು ಹೇಳಿ ಅಯ್ಯಾವಮಂತನೆಂಬ ಹೆಸರನ್ನು ಕೊಡುತ್ತಾನೆ. ಹೀಗೆ ಕುಂಭಕಾರರ ಸಮಯವುಟ್ಟಿತು ಎಂದು ಶಾಸನ ತಿಳಿಸುತ್ತದೆ.

ಶಾಸನ ಮುಂದುವರಿದು ಹದಿನೆಂಟು ಕೇಣಿಗೆಳ (ಸಮಯ) ವಿವರವನ್ನು ನೀಡುತ್ತದೆ. ೧. ಕಲ್ಯಾಣ ೨. ಬೋದನ ೩. ಹೊಟ್ಟಳಗೆರೆ ೪. ಕಂದಾರ, ೫. ಕರಹಡ, ೬. ಕೊಲ್ಲಾಪುರ ೭. ಕೊಂಕಣ ೮. ಪಾನುಂಗಲ್ಲು ೯. ದೋರಸಮುದ್ರ ೧೦. ಬೇತೂರು ೧೧. ತುಂಬುಳ ೧೨. ಗಂಗಾಪುರ ೧೩. ಪುಜ್ಜೆನಿ ೧೪. ಅಲ್ಲಿಯೂರು ೧೫. ನಿಡಗುಂದೆ ೧೬. ಬಮ್ಮಕೂರು ೧೭. ವಲುರ ೧೮. ಮಲಿಯಾರ, ಇವೇ ಆ ಹದಿನೆಂಟು ಸಮಯ ಅಥವಾ ಕೇಣಿಗಳು ಈ ಕೇಣಿಗಳಿಗೆಲ್ಲೆಲ್ಲಾ ಮೇಲಾದದ್ದು ಮೂವತ್ತಿರ್ಚಾಸಿರದ ಕೇಣಿ ಇವರು ಗಿರಿರಾಜನ ಕುಲದವರು, ಮಹಾದೇವನ ಮಯ್ದುನರು, ಗೊರವನ ಮಾವಂದಿರು, ಇಂತಹ ಹೆಚ್ಚಿನ ಸಂಬಂಧವನ್ನು ಉಳ್ಳವರು. ಈ ಕುಂಬಕಾರರು ಕಾರ್ಯದಲ್ಲಿ ಬ್ರಹ್ಮನಂತೆ, ಉಪಾಯದಲ್ಲಿ ನಾರಾಯಣನಂತೆ, ಸತ್ಯದಲ್ಲಿ ಧರ್ಮರಾಜನಂತೆ ಸಾಹಸದಲ್ಲಿ ಭೀಮನಂತೆ, ಶೌರ್ಯದಲ್ಲಿ ಅರ್ಜುನನಂತೆ, ದಿವ್ಯಜ್ಞಾನದಲ್ಲಿ ಸಹದೇವನಂತೆ, ಭೀಷ್ಮನಂತೆ, ತ್ಯಾಗದಲ್ಲಿ ಕರ್ಣನಂತೆ, ಪರೋಪಕಾರಲದಲಿ ಜೀಮೂತವಾಹನನಂತೆ, ದೈರ್ಯದಲ್ಲಿ ಭೂಮಿಯಂತೆ, ಸ್ಥಿರತೆಯಲ್ಲಿ ಮೇರುವಿನಂತೆ, ಛಲದಲ್ಲಿ ದುರ್ಯೋಧನನಂತೆ, ಪ್ರತಾಪದಲ್ಲಿ ರಾವಣನಂತೆ, ಕುಂಭೇಶ್ವರದೇವರ ಪಾದಪಂಕಜರಾಗಿ ವಿರಾಜಿಸುತ್ತಿದ್ದರು. ಇದಲ್ಲದೆ ತಮ್ಮ ಇತರ ಅನೇಕ ಗುಣಗಳಿಂದ ನಡತೆಯಿಂದ ಈ ಅಯ್ಯಾವಮಂತರು ಬೆಳಗುತ್ತಿದ್ದರು. ಈ ಶಾಸನವನ್ನು ಗಿರಿಜಾ ಸಮೇತನಾಗಿ ಶಂಕರನು ಗಿರಿರಾಜನಿಗೆ ಹೇಳಿ ಇತ್ತನೆಂದು ಹೇಳಿದೆ. ಮುಂದೆ ಅಮೃತಪಥನದ ಕಥೆ ಪ್ರಾರಂಭವಾಗುತ್ತದೆ. ಸುರಾಸುರರು ಬ್ರಹಸ್ಪತಿ ಮತ್ತು ಶುಕ್ರನನ್ನು ಕರೆದು ಅಮೃತವನ್ನು ಮಥಿಸಲು ಆಲೋಚಿಸುತ್ತಾರೆ. ಆಗ ಇಬ್ಬರೂ ಶಿವನನ್ನು ಬಿಟ್ಟು ಈ ಕಾರ್ಯಮಾಡಲು ಸಾಧ್ಯವಿಲ್ಲವೆಂದು ತಿಳಿಸುತ್ತಾರೆ. ಆಗ ಸುರಾಸುರರು ಕೈಲಾಸಕ್ಕೆ ಹೋಗಿ ಈಶ್ವರನನ್ನು ಪ್ರಾರ್ಥಿಸುತ್ತಾರೆ. ಆಗ ಗಿರಿರಾಜನಿಗೆ ಅಮೃತವನ್ನು ಕೊಂಡೊಯ್ಯುವಂತಹ ಕುಂಭವನ್ನು ತಾ ಎನ್ನಲು ಆತ ತಂದುಕೊಡುತ್ತಾನೆ. ಮುಂದೆ ಸುರಾಸುರರು ಮಥನದಲ್ಲಿ ತೊಡಗುತ್ತಾರೆ. ವಾಸುಕಿಯ ಬಾಲವನ್ನು ಆ ಸುರರು ಮತ್ತು ನರರಿಗೆ ಹಂಚಿ ಕೈಲಾಸಕ್ಕೆ ಹೋಗುತ್ತಾನೆ. ಈ ಶಾಸನವನ್ನು ಗಿರಿಜೇಶನು ಹೇಳಲು ವಿಶ್ವಾಮಿತ್ರ ಬರೆದ. ಈ ವಿದ್ಯಮಾನವರು (ಕುಂಬಾರರು) ಕೈಲಿ ಹಡೆಯ, ಗಳೆ, ಕಂಚುಳಿಕೆ ಹಿಡಿಯಬಹುದೆಂದಿದೆ.

ಈ ಶಾಸನದಲ್ಲಿ ಪಾರಂಪರಿಕವಾಗಿ ಮನ್ಮಥವನನ್ನು ಸಂಖ್ಯೆ ಘಟನೆಯಿರವೆ ಈ ಮನ್ಮಥನೇ ಶಿವನ ಮದುವೆಗೆ ವಿಷ್ಣು, ಬ್ರಹ್ಮ, ಮೊದಲಾದವರನ್ನು ರಾಯಭಾರಿಗಳಾಗಿ ಕಳುಹಿಸುತ್ತಾರೆ. ಹಾಗೆಯೇ ಸಮುದ್ರಮಥನದಲ್ಲಿ ಶಿವನ ಹಾಲಾಹಲವನ್ನು ಕುಡಿಯುವ ಸಂಗತಿ ಬಂದಿರುವುದಿಲ್ಲ.[೯] ಕುಂಬಕಾರರ ಕಥೆಗೆ ಅನುಗುಣವಾಗಿ ಈ ಶಾಸನದಲ್ಲಿ ಕತೆಯನ್ನು ಹೆಣೆಯಲಾಗಿದೆ.

ಈ ಮೇಲಿನ ಉಲ್ಲೇಖಗಳು ಗಮನಿಸಿದಾಗ ವಿಜಯನಗರದಲ್ಲಿ ಪ್ರತ್ಯೇಕ ಕುಂಬಾರರ ಓಣಿ, ಮತ್ತು ಶಾಸನಗಳಲ್ಲಿ, ಕುಂಬಾರ ಕಟ್ಟೆ, ಕುಂಬಾರ ಕೇರಿ ಎಂದು ಪ್ರತ್ಯೇಕ ಇವರು ಇರುವುದು ಮತ್ತು ಇವರು ತಮ್ಮ ಕಸುಬಿನಲ್ಲಿ ಪಾರಂಪಾರಿಕವಾಗಿ ಮಣ್ಣನ್ನು ಹದಗೊಳಿಸುವುದು ಹಾಗೂ ತಿರುಗಣಿ ಚಕ್ರದ ಸಹಾಯದಿಂದ ಅಡಿಗಲ್ಲನ್ನು ಇಟ್ಟು ಬಡಿದು ಮಡಿಕೆಯನ್ನು ಹದಗೊಳಿಸಿ ಸುಡುತ್ತಿರುವುದು ಅವುಗಳನ್ನು ಹಳ್ಳಿಗಳಿಗೆ ಹೊತ್ತು ಮಾರುವುದು ಒಂದು ಜ್ಞಾನ. ಈ ಜ್ಞಾನದಿಂದ ಅವರ ಶ್ರಮ ತುಂಬ ಮತ್ತು ಕುಂಬಾರರು ಸಾಮಾಜಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ ಗಮನಿಸಿದರೆ ಒಂದು ಕಡೆ ಸಮಾಜದಲ್ಲಿ ಉತ್ತಮ ಜೀವನವನ್ನು ನಡೆಸುತ್ತೀರುವುದು ಕಾಣುತ್ತೇವೆ.

ಕುಂಬಾರನ ತಿರುಗಣಿಯ ಆವಿಷ್ಕಾರವೇ ನಾಗರೀಕತೆಯ ಮೊಟ್ಟಮೊದಲ ತೊಟ್ಟಿಲೆಂದು ಭಾವಿಸಲಾಗಿದೆ. ಅವುಗಳ ಆಕೃತಿಗಳ ವೈವಿಧ್ಯ ಮತ್ತು ಕೈಚಳಕ ಮನಮೋಹಕ ನೀರು ತುಂಬಿದ ಮಣ್ಣಿನ ಗಡಿಗೆ ಪ್ರಾಚೀನ ಕಾಲದಿಂದಲೂ ಶುಭಶಕುನವೆಂದು ಪರಿಗಣಿಸಲ್ಪಟ್ಟಿದೆ. ಕುಂಬಾರಿಕೆಗೆ ಬಳಸುವ ಉಪಕರಣಗಳು ಅತ್ಯಂತ ಸರಳ ಅವುಗಳಲ್ಲಿ ಪ್ರಮುಖವಾದುದು ಕುಂಬಾರನ ತಿರುಗಣಿ ಕುಂಬಾರನು ಗರಗರ ತಿರುಗುವ ತಿರುಗಣಿಯ ಮೇಲೆ ಮಣ್ಣಿನ ಮುದ್ದೆಯನ್ನಿಟ್ಟು ತನ್ನ ಕೈಚಳಕದಿಂದ ಅದಕ್ಕೆ ತನಗೆ ಬೇಕಾದ ಆಕಾರ, ರೂಪಗಳನ್ನು ಕೊಡುತ್ತನೆ. ಅನಂತರ ಅದನ್ನು ತೆಗೆದು ನೆರಳಿನಲ್ಲಿ ಒಣಗಿಸಿ ಆವುಗೆಯಲ್ಲಿಟ್ಟು ಸುಡಲಾಗುತ್ತದೆ. ಈ ರೀತಿ ಓಲೆ, ಮಡಿಕೆ, ಕುಡಿಕೆ, ಗಡಿಗೆ, ಪ್ರಣತಿ, ಹೂಜಿ, ತಣಿಗೆ, ಮುಚ್ಚಳ ಹಾಗೂ ನಾಡಹೆಂಚುಗಳನ್ನು ತಯಾರಿಸಲಾಗುತ್ತದೆ. ಇವುಗಳನ್ನು ವಿಜಯನಗರ ಸಾಮ್ರಾಜ್ಯದಲ್ಲಿ ನಾಡಹೆಂಚುಗಳನ್ನು ತಯಾರಿಸುವವರು ಕುಂಬಾರರೆ[೬೨] ಎಂದು ವಿದೇಶಿ ಪ್ರವಾಸಿಗರ ವರ್ಣನೆಯಿಂದ ತಿಳಿದುಬರುತ್ತದೆ.

ಭಾರತದಾದ್ಯಂತ ಹರಡಿರುವ ಕುಂಬಾರರು ವಿವಿಧ ರೀತಿಯ ಮಣ್ಣಿನ ಪರಿಕರಗಳನ್ನು ನಿರ್ಮಿಸುತ್ತಿದ್ದು ಅವುಗಳ ವಿವರಣೆ ನೀಡುವುದು ತುಂಬಾ ಕಷ್ಟದ ಸಂಗತಿ ದೆಹಲಿಯಲ್ಲಿ ನೀಲಿ ಬಣ್ಣದ ಪರಿಕರಗಳನ್ನು ತಯಾರಿಸಲಾಗುತ್ತದೆ. ಇದರ ಮೇಲೆ ಪರ್ಶಿಯಾದ ಪ್ರಭಾವವಿದೆ. ಜಯಪುರದ ನೀಲಿ ವಸ್ತುಗಳೂ ಕೂಡ ಅಷ್ಟೇ ಪ್ರಸಿದ್ಧ ರಾಜಸ್ತಾನದ ನೀರಿನ ಕೊಡಗಳ ಬಾಯಿಗಳನ್ನು ತುಂಬಾ ಸಣ್ಣದಾಗಿ ಮಾಡಿರುತ್ತಾರೆ. ಅವುಗಳನ್ನು 'ಕಾಗ್ಜಿ' ಎಂದೇ ಕರೆಯುತ್ತಾರೆ ಏಕೆಂದರೆ ಅವುಗಳು ಕಾಗದದಷ್ಟೇ ತೆಳುವಾಗಿರುತ್ತದೆ. ಉತ್ತರಪ್ರದೇಶದಲ್ಲಿ ಖುರ್ಜಾ ಎಂಬ ನೀರಿನ ಹೂಜಿ ತತ್ರಾಣಿಗಳನ್ನು ತಯಾರಿಸಲಾಗುತ್ತದೆ.

ಕರ್ನಾಟಕದ ಬೆಳವಾವಿ ಜಿಲ್ಲೆಯ ಖಾನಾಪುರದಲ್ಲಿ ದೊರೆಯುವ ಉತ್ಕೃಷ್ಟ ಜೇಡಿಮಣ್ಣಿನಿಂದ ದೊಡ್ಡ ಪ್ರಮಾಣದ ವಾಡೇವು, ಪಡುಗ, ಮಡಿಕೆ, ಕುಡಿಕೆ, ಹೂಜಿಗಳನ್ನೆ ತಯಾರಿಸುತ್ತಾರೆ. ಹಾಸನ ಜಿಲ್ಲೆಯ ಕೊಣನೂರು, ಗದಗ ಜಿಲ್ಲೆಯ ಲಕ್ಷ್ಮೇಶ್ವರ ಮತ್ತು ಬೆಳಗಾವಿ ಜಿಲ್ಲೆಯ ಇಟಗಿಗಳಲ್ಲಿ ಬಲೆ, ಕುಂಡ, ನೀರುಕೊಳವೆ, ನಾಡಹೆಂಚುಗಳನ್ನು ತಯಾರಿಸುತ್ತಾರೆ.[೬೩] ಸಮಾಜಶಾಸ್ತ್ರಜ್ಞರಾದ ಸರ್ ಹರಬರ್ಟ್ ರೀಚ್‌ರವರು ಪರಿಪೂರ್ಣವಾದ ಕಲೆ ಎಂದು ಹೇಳುತ್ತಾರೆ.[೬೪] ಭಾರತವು ಕುಂಬಾರಿಕೆಗೆ ಆದಿಕಾಲದಿಂದಲೂ ಪ್ರಸಿದ್ಧಿ ಪಡೆದಿದೆ. ಮುಸ್ಲಿಮ್ ಮತ್ತು ಹಿಂದೂ ರಾಜಮಹಾರಾಜರು ಅರಮನೆಗಳು ಹೊಳಪಿನ ಬಿಲ್ಲೆಗಳಿಂದ ಆವೃತವಾಗಿವೆ.[೬೫]

ಮುಸ್ಲಿಂ ಮತ್ತು ಹಿಂದೂ ಕುಂಬಾರರು ತಮ್ಮ ತಮ್ಮ ಕಲೆಗಳಲ್ಲಿ ಚಾತುರ್ಯವನ್ನು ಮರೆದಿದ್ದಾರೆ. ಇಲ್ಲಿ ನೋಡುವುದಾದರೆ ಕಸುನ್ನು ಬೇರೆ ಕುಲದವರು ಅಂದರೆ ಹಿಂದೂ ಮುಸ್ಲಿಂ ಸಹ ಕುಂಬಾರಿಕೆ ಕಸುಬಿನಲ್ಲಿ ತಮ್ಮ ಪಾರಂಪರಿಕ ಜ್ಞಾನವನ್ನು ಹೊರ ಹಾಕುತ್ತಿದ್ದರು. ಜಾನಪದರು ಅಭಿಪ್ರಾಯ ಪಡುವ ಜ್ಞಾನವೆಂದರೆ 'ಹಿಟ್ಟಿನಂತೆ ರೊಟ್ಟಿ', ಮಣ್ಣಿನಂತೆ ಮಡಿಕೆ ಎನ್ನುವ ನಾಣ್ನುಡಿಯು ಇದೆ. ಅಂದರೆ ಕುಂಬಾರನಿಗೆ ಮಣ್ಣು ಒಂದು ರೀತಿಯ ಸಾಧನ ಹಾಗೂ ಜ್ಞಾನವು ಕೂಡ ಪರಂಪಾರಗತವಾಗಿ ಬಂದಿರುವುದು.

ಶಾಸನಗಳನ್ನು ಗಮನಿಸಿದರೆ ದೇವಾಲಯ ನಿರ್ಮಾಣವನ್ನು ಕುಂಬಾರ ಕುಲದವನ್ನು ಬಮ್ಮಣ ಎಂಬಾತನು ತಲೆಯನ್ನು ತೊಳೆಯದ ಅನ್ನವುಣ್ಣದ ವೀರವ್ರತವನ್ನು ಕೈಗೊಂಡು ಕುಂಬೇಶ್ವರ ದೇವರನ್ನು[೮೬] ಪ್ರತಿಷ್ಟಾನ ಮಾಡಿಸಿದ ವಿಷಯವನ್ನು ಶಾಸನವೊಂದು ತಿಳಿಸುತ್ತದೆ.

ಲಿಂಗಶಿವಜೀಯ ಎಂಬುವರು ಭಿಕ್ಷಾವೃತ್ತಿಯಿಂದ ಹಣವನ್ನು ಸಂಪಾದಿಸಿ ಜಟಂಗರಾಮೇಶ್ವರದಲ್ಲಿದ್ದ ಇಟ್ಟಿಗೆಯ ರಾಮೇಶ್ವರ ದೇವಸ್ಥಾನವನ್ನು ಕೆಡವಿಸಿ, ಅದನ್ನು ಶಿಲೆಯಲ್ಲಿ ಕಟ್ಟಿಸಿ ಕಳಶವನ್ನು ಇಡಿಸುವುದಲ್ಲದೆ ಇನ್ನು ಅನೇಕ ದೇವಸ್ಥಾನಗಳನ್ನೂ ಕೊಂಡಗಳನ್ನು ಕಟ್ಟಿಸಿದ ವಿಷಯವನ್ನು ಶಾಸನವೊಂದು ಹೇಳುತ್ತದೆ.[೮೭] ಮಾತೃದೇವತೆಯರನ್ನು ಮಡಕೆಯ ತಯಾರಿಕೆಯಲ್ಲಿ ಚಕ್ರದ ಬಳಕೆ ಪ್ರಾರಂಭವಾಗುವ ಮುನ್ನ ಮತ್ತು ಮಡಕೆಗಳ ತಯಾರಿಕೆ ಬೃಹತ್ ಪ್ರಮಾಣದ ಉದ್ಯಮವಾಗುವುದಕ್ಕಿಂತ ಮುಂಚೆ, ಇತಿಹಾಸ ಪೂರ್ವ ಕಾಲದಲ್ಲಿ ಹೆಂಗಸರರು ಕೈಯಲ್ಲೇ ಮಡಿಕೆಗಳನ್ನು ತಯಾರಿಸುತ್ತಿದ್ದರು ಇಂದಿಗೂ ಕೂಡ ಭಾರತದಲ್ಲಿ ಕೈಮಡಕೆಗಳನ್ನು ಅಥವಾ ಮರದ ತಟ್ಟೆಗಳನ್ನು ಬಳಸಿ ಮಡಕೆಗಳನ್ನು ಮಾಡುವವರು ಹೆಂಗಸರೇ. ಪುರುಷರು ಕೇವಲ ಅದನ್ನು ತಟ್ಟೆಯಿಂದ ತಟ್ಟೆ ಬಡಿಗಲ್ಲುಗಳಾದ ನುಣುಪುಗೊಳಿಸುತ್ತಿದ್ದರು. ಅಷ್ಟೇ ಆದರೆ ನನಗೆ ತಿಳಿದಮಟ್ಟಿಗೆ ಭಾರತದಲ್ಲಿ ವೇಗವಾಗಿ ತಿರುಗುವ ಕುಂಬಾರನ ತಿರುಗಣಿಯಲ್ಲಿ ಮಡಕೆಗಳನ್ನು ಮಾಡಲು ಯಾವುದೇ ಹೆಂಗಸಿಗೂ ಅವಕಾಶ ನೀಡುವುದಿಲ್ಲ ಜೊತೆಗೆ ಸಾಮಾನ್ಯವಾಗಿ ಮಡಕೆಗಳು ಮಾತೃದೇವತೆಗಳ ಸಂಕೇತ.[೮೮]

ಮಡಿಕೆ ತಯಾರಿಕೆ, ಎಷ್ಟು ಅವಶ್ಯಕ ಹಾಗೂ ಅದರಲ್ಲಿ ತಂತ್ರಜ್ಞಾನ ಪರಿಣಿತಿ ತಿಳಿಯಲು ಅವರ ಕಸುಬಿನ ಬಗ್ಗೆ ಸಹಾಯಕಾರಿಯಾಗಿದೆ. ಬ್ರಹ್ಮಣೇ ಪುರುಷಲಿಂಗವೆಂದು ಕೆಲವರು ಹೇಳುತ್ತಾರೆ. ಒಬ್ಬಿಬ್ಬರು ಅವನು ಕುಂಬಾರ ಎಂದೂ ಹೇಳುತ್ತಾರೆ.[೮೯] ಕುಂಬಾರ ಎಂದರೆ ಈ ದೇಶದಲ್ಲಿ ಬಹಳ ಕನಿಷ್ಠನಾದವನು ಎಂಬ ಭಾವನೆ ಇದೆ.

ಈ ರೀತಿ ಕುಂಬಾರ ಕಸುಬು ತುಂಬ ಪಾರಂಪರಿಕ ಜ್ಞಾನ ಉಳ್ಳದ್ದು ಹಾಗೂ ಅದಕ್ಕೆ ತುಂಬ ಪ್ರಾಚೀನ ಇತಿಹಾಸವಿದೆ. ರಾಮಯಣ, ಮಹಾಭಾರತದಲ್ಲೂ ಭೀಮ ಹೇಳುತ್ತಾನೆ. ನಾವು ಹೇಳಿ ಕೇಳಿ ಭಿಕ್ಷಾ ಚರಿತರು ಅರಸುಗಳಲ್ಲಿ ಕುಂಬಾರರ ಓಣಿಗೆ ಹೋಗೋಣ ಅಲ್ಲಿ ಮಡಿಕೆಗಳನ್ನು ಸಂಗ್ರಹಿಸಿ ಭಿಕ್ಷೆ ಬೇಡೋಣ ಎನ್ನುವುದನ್ನು ಒಂದು ಮಡಿಯಷ್ಟು ಉಪಯೋಗ ಅದಕ್ಕೆ ಕುಂಬಾರಿಕೆ ಕಸುಬು ತುಂಬ ಮಹತ್ವದ್ದು.

ಕೊಡ, ಬಿಂದಿಗಿ, ಗಡಗಿ, ಕುಡಿಕಿ, ಪಡಗ, ಹರವಿ, ರಂಜಣಗಿ, ಮುಚ್ಚಳ, ಹೂಜಿ, ತತ್ರಾಣಿ, ಮಗಿ, ಪರ್ರ್ಯಾಣ, ಚಟಗಿ, ಹಾಲಿನಸ್ವಾರಿ (ಥಾಲಿ) ಪಣತಿ, ವಲಿ, ಹೆಂಚು ಮೊದಲಾದ

ಗೃಹೋಪಯೋಗಿ ಪಾತ್ರೆಗಳನ್ನು ಕುಂಬಾರ ಒಕ್ಕಲು ಕುಟುಂಬಗಳಿಗೆ ಪೂರೈಸುತ್ತಾನೆ. ಅದಕ್ಕೆ ಪ್ರತಿಯಾಗಿ ಕುಂಬಾರನಿಗೆ, ರೈತ ನಿಗದಿಪಡಿಸಿದ 'ಆಯಾ' ಮತ್ತು ತನ್ನ ಒಕ್ಕಲುತನದ ಆದಾಯದ ಪ್ರಮಾಣಕ್ಕೆ ಅನುಗುಣವಾಗಿ ಸುಗ್ಗಿಯಲ್ಲಿ 'ಕಣಗಾಳು' ಕೊಡುವನು. ಆದರೆ ಕುಂಬಾರರು ಇತರ ಕಸಬುದಾರರಂತೆ ಕಣಕ್ಕೆ ಹೋಗಿ 'ಆಯಾ' ತರುವುದಿಲ್ಲ ರೈತನ ಮನೆಯಿಂದಲೇ ಆಯ ಎತ್ತುತ್ತಾರೆ. ಕುಂಬಾರ, ಕುಂಬಾರಗಿತ್ತಿ ಮತ್ತು ಅವರ ಮಕ್ಕಳು, ತಲೆಮೆಲೆ, ಹೆಗಲಮೇಲೆ ಹಾಗೂ ಬಂಡಿಗಳ ಮೇಲೆ ಮಣ್ಣಿನ ಪಾತ್ರೆಗಳನ್ನು ಹೇರಿಕೊಂಡು, ಊರೂರು, ಕೇರಿ ಕೇರಿ ಅಡ್ಡಾಡಿ ಮಾರುವುದೇ ಹೆಚ್ಚು. ಕುಂಬಾರಗಿತ್ತಿ ಹರವಾದ ಬುಟ್ಟಿಯಲ್ಲಿ, ಕುಂಬಾರ ಒಂದು ಬಿದಿರಿನ (ಗಳ) ಎರಡೂ ತುದಿಗೆ ಇಳಿಬಿಟ್ಟ ಜಾಳಿಗೆಗಳಲ್ಲಿ ಪಾತ್ರೆಗಳನ್ನು ಅಡಕಲಾಗಿ ಇಟ್ಟುಕೊಂಡು ಮನೆಮನೆಗೆ ಹೋಗಿ, ಕಾಳುಕಡಿ-ಹಣಪಡೆದು ಮಾರುತ್ತಾರೆ. ಒಂದು ಗಡಿಗೆಗೆ ಇಂತಿಷ್ಟು ಚಟಿಕೆಕಾಳು ಎಂದು, ಚಟಿಕೆಯ ಮಾಪಿನ ಮೂಲಕ ವ್ಯವಹಾರ ಮಾಡುವುದುಂಟು. ಈ ಪದ್ಧತಿ ಬಹಳ ವರುಷಗಳಿಂದಲೇ ರೂಢಿಯಲ್ಲಿದೆ.

ವಿವಾಹ ಸಂದರ್ಭದಲ್ಲಿ 'ಐರಾಣಿ' (ಐದು ಮಗಿ ಒಂದು ಗಡಿಗಿ) ಮಣ್ಣೆತ್ತಿನ ಅಮಾವಾಸ್ಯೆಗೆ 'ಮಣ್ಣಿನ ಎತ್ತು', ಸೀಗೆ ಹುಣ್ಣಿವೆಗೆ 'ಸೀಗವ್ವ', ಗೌರಿಹಬ್ಬಕ್ಕೆ ಗೌರವ್ವ, ಶ್ರಾವಣದಲ್ಲಿ ಗುಳ್ಳವ್ವ, ನಾಗಪಂಚಮಿಗೆ ಹುತ್ತಪ್ಪ, ಮಹಾನವಮಿಗೆ ಪಣತಿ, ಅಷ್ಟಮಿ ಗಡಿಗಿ, ಸಸಿಹಾಕಲು ಪರ್ರ್ಯಾಣ ಮೊದಲಾದವುಗಳನ್ನು ಕೊಟ್ಟು 'ಉಲಿಪಿ' ಪಡೆಯುವವರು. ಕುಂಬಾರನಿಂದ 'ಐರಾಣಿ' ಪಡೆದ ಮದುಮಗಳ ಕಡೆಯವರು ಕುಂಬಾರ ಗಿತ್ತಿಗೆ ಸೀರೆ ಉಡಿಸುವುದೂ ಉಂಟು.

ಕುಂಬಾರ ಮತ್ತು ಆತನ ವರತ್ತಿಯನ್ನು ಸಮಾಜದ ಇತರರು, ಅದರಲ್ಲೂ ಮೇಲ್ವರ್ಗದವರು ಅಗೌರವದಿಂದ ಕಾಣುತ್ತಿದ್ದುದು ಕಂಡುಬರುತ್ತದೆ. ಜಾನಪದದ ಹಾಡು-ಗಾದೆಗಳಲ್ಲಿ ಅದು ವ್ಯಕ್ತವೂ ಆಗಿದೆ.

ಕುಂಬಾರ ನಿನಗ್ಯಾಕೊ, ಗೊಂಬಿ ಮಾಟದ ಹೆಣ್ಣು
ತುಂಬೆಂದ ಮಣ್ಣ ತುಳಿಯೆಂದ ಮನಿಮನಿಗೆ
ಹೊತ್ತು ಮಾರಂದ ಮಡಕೀಯಾ

ಹಾಗೆಯೇ 'ಕುಂಬಾರ ಕೂಟಲ್ಲ, ಕೂದಲ ಗೂಟಲ್ಲ' ಎನ್ನುವ ಗಾದೆ, ಕುಂಬಾರನನ್ನು ಸಾಮಾಜಿಕರು ಎಷ್ಟೊಂದು ನಿರ್ಲಕ್ಷಿಸಿದ್ದರು ಎಂಬುದನ್ನು ಅರುಹುತ್ತದೆ. ಆದಾಗ್ಯೂ ಬಸವಣ್ಣನವರು, 'ಶಿವಪಥವನ್ನು ಅರಿಯಲು ಗುಪಥವೇ ಮೊದಲು' ಎನ್ನುವ ತಮ್ಮ ಅನುಭಾವವನ್ನು ಸಮರ್ಥಿಸಿಕೊಳ್ಳುವಾಗ 'ಮಡಕೆಯ ಮಾಡುವರೆ ಮಣ್ಣೇ ಮೊದಲು' ಎಂಬ ಸಾದೃಶ್ಯವನು ಬಳಸಿರುವುದನ್ನು ನೋಡಿದರೆ, ಮಣ್ಣು ಅದರಿಂದ ಮಾಡುವ ಮಡಕೆ ಮತ್ತು ಅದರ ಹಿಂದಿರುವ ಕುಂಬಾರನ ಹಿರಿಮೆ ಇಲ್ಲಿ ವ್ಯಕ್ತವಾಗಿದೆ. ಕುಂಬಾರನ ವೃತ್ತಿಗೆ ಸಂಬಂಧಿಸಿದ 'ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ'ದಂತಹ ಹಲವಾರು ಗಾದೆಮಾತುಗಳೂ ಜನಪದದಲ್ಲಿ ಪ್ರಚಲಿತದಲ್ಲಿವೆ. ಉತ್ತರ ಕರ್ನಾಟಕದಲ್ಲಿರುವ ಲಿಂಗಾಯತ ಕುಂಬಾರರೆಲ್ಲರೂ 'ಕುಂಬಾರಗುಂಡಯ್ಯ'ನನ್ನು ಆರಾಧ್ಯದೈವವೆಂದು ಹೊಂದಿರುವರು. 'ಕುಂಬಾರಗುಂಡಯ್ಯ' ಅನಾದಿ ಕಾಲದ ಕುಂಭಕಾರ.

ಕುಂಬಾರರು ತಮ್ಮದೆ ಆದ ಪಾರಂಪರಿಕ ಜ್ಞಾನದಿಂದ ಮಡಿಕೆ ಕುಡಿಕೆಗಳನ್ನು ತಯಾರಿಸುತ್ತಿದ್ದರು. ಮಡಕೆ ಮಾಡಲು ಮಣ್ಣು ಬೇಕಾಗುತ್ತದೆ. ಈ ಮಣ್ಣನ್ನು ಅಗಿದು ದೊಡ್ಡ ದೊಡ್ಡ ಕುಳಿಗಳಾಗಿರುತ್ತಿದ್ದವು. ಅಂಥ ಕುಳಿಯೊಂದರಲ್ಲಿ ಕುಳಿತ ಬೋಳ ಮಂಡೆಯ ಕುಂಬಾರನ ಸಂಗತಿಯೊಂದನ್ನು ಧರ್ಮಾಮೃತದಲ್ಲಿ ವ್ಯಕ್ತವಾಗಿದೆ. ಕುಳಿಯಿಂದ ತಂದ ಮಣ್ಣನ್ನು ಹದಗೊಳಿಸಿ ಮಡಕೆ ಮಾಡುವರು.[೬೦] ಮಡಕೆಗಳನ್ನು ತಿರಗಣಿ ಮೂಲಕ ತಯಾರಿಸುತ್ತಿದ್ದರು.

ಶೂಲಪಾಣಿಯ ನಿಟ್ಟಿಸಿ ಕೃಷ್ಣ ರಿಪುಪ್ರತಿ
ಕೂಲಪಾರುಂಬಳೆವಿಡಿಯ
ಮೂಲೋಕ ಧಿರ್ರನೆ ತಿರುಗುತಿರ್ದುದು ಕು
ಲಾಲ ಚಕ್ರಾಕೃತಿಯಂತೆ (ಮೋ.ತ. ಸಂ-೩೯, ಪ-೩೯, ಪು-೫೩೩-೫೩೪)

ಕೃಷ್ಣನು ತ್ರಿಶೂಲಧಾರಿಯಾದ ಪರಶಿವನನ್ನು ನೋಡಿ ವೈರಿ ಭಯಂಕರವಾದ ಚಕ್ರವನ್ನು ಹಿಡಿಯಲು ಮೂಲೋಕವು ಕುಂಬಾರನ ಚಕ್ರದಂತೆ ತಿರ್ರನೆ ತಿರುಗಲಾರಂಭಿಸಿತು.

ತಯಾರಿಸಿದ ಮಡಕೆಗಳನ್ನು ನೂಲೆಗಳೆಯ ಮೂಲಕ ತಿರಗಣಿಯ ನಾಭಿಯಿಂದ ಬೇರೆ ಮಾಡಿ ಬಿಸಿಲಿನಲ್ಲಿ ಒಣಗಿಸುವರು ನಂತರ ಅದನ್ನು ಅವಿಗೆಯೊಳಗಿಟ್ಟು ಸುಡುತ್ತಿದ್ದರು.[೬೧] ಗಟ್ಟಿಗೊಳಿಸಿದ ಮಡಕೆಗಳು ತನ್ನ ಪೂರ್ವದ ಸ್ಥಿತಿ ಕಳೆದುಕೊಂಡು ಬಳಕೆಗೆ ಬರುತ್ತಿದ್ದವು. ಹೀಗೆ ಹರವಿ, ಮಡಕೆ, ಗಡಿಗೆಗಳನ್ನು ಕತ್ತೆಯ ಮೇಲೆ ಹೇರಿಕೊಂಡು ಹಳ್ಳಿ ಹಳ್ಳಿಗೆ ಹೋಗಿ ಮಾರಾಟ ಮಾಡುತ್ತಿದ್ದರೆಂದು ಅಂಬಿಗರ ಚೌಡಯ್ಯ ಹೇಳುತ್ತಾನೆ.[೬೨] ಕುಂಬಾರರು ತಯಾರಿಸುವ ಬಿಂದಿಗೆ, ಕುಳಿ, ಸುಟ್ಟ ಒಲೆ, ಮುಚ್ಚಳ, ಗವಾಕ್ಷಿ, ಹಣತೆ, ಅಡಕಿಲ ಗಡಗಿ, ಮಗಿ, ರಂಜಣಗಿ, ನಾಡಹೆಂಚು, ಹರವಿ, ಮಂತಣಿ (ಮುಸರಬಾನಿ) ಮುಂತಾದವು ಕೃಷಿ ವಸ್ತುಗಳಾದರೆ ಹೂವಿನ ಕುಂಡ, ಹುಕ್ಕ ಪೀಕದಾನಿಗಳನ್ನು ಹೋರಾಂಗಣ ಸಾಮಾಗ್ರಿಗಳೆಂದು ವಿಭಜಸಿಕೊಳ್ಳಬಹುದು. ಈ ಮೇಲಿನ ಎಲ್ಲಾ ಮಣ್ಣಿನ ವಸ್ತುಗಳನ್ನು ತಮ್ಮದೆ ಆದ ಪಾರಂಪರಿಕ ಜ್ಞಾನದಿಂದ ತಯಾರಿಸುತ್ತಿದ್ದರು.

ಮಣ್ಣಿನಿಂದ ಮಡಿಕೆ, ಕುಡಿಕೆ, ಪಾತ್ರೆ ಪಡಗಗಳನ್ನು ತಯಾರಿಸುವ ಕಸುಬು ಕುಂಬಾರನದು ಇವನ ಕಾರ್ಯ ಬೆಳಗಿನ ಕಾಲದಲ್ಲಿಯೇ ಆರಂಭಗೊಳ್ಳುತ್ತದೆ. ತನ್ನ ಕಾರ್ಯದ ಮೊದಲಿಗೆ, ಕೆರೆ ಅಥವಾ ಹೊಳೆ ದಂಡೆಯ ಜೇಡಿಮಣ್ಣನ್ನು ತಂದು, ಬೇಕಾದಷ್ಟು ನೀರು ಹಾಕಿಕೊಂಡು, ಕಾಲುಗಳಿಂದ ತುಳಿತುಳಿದು ಕಲಸುತ್ತಾನೆ. ಕಡ್ಡಿ-ಕಸರು ಅದರಲ್ಲಿದ್ದರೆ ತೆಗೆದುಹಾಕಿ ಕೈಯಿಂದ ಹದಗೊಳಿಸುತ್ತಾನೆ. ಹದಗೊಂಡ ಮಣ್ಣನ್ನು ಒಂದೆಡೆ ಗುಡ್ಡೆಹಾಕಿಡುತ್ತಾನೆ. ಒಂದೆರಡು ದಿನ ಹಾಗೆಯೇ ಬಿಟ್ಟು, ಗುಡ್ಡೆಯೊಳಗಿನ ನೆನೆದ ಅರ್ಲನ್ನು ಸ್ವಲ್ಪಸ್ವಲ್ಪ ಮಿದ್ದಿ, ನಾದಿ ಜಿಗುಟು ಬಂದಿದೆಯೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳುತ್ತಾನೆ. ಮುಂದೆ ತಿರಗಣಿ ಮತ್ತು ಆವಿಗೆಯ ಸಹಾಯದಿಂದ ಜನರಿಗೆ ಬೇಕಾದ ಮಣ್ಣಿನ ಪಾತ್ರೆಗಳನ್ನು ತಯಾರಿಸುತ್ತಾನೆ.

ತಿರಗಣಿ ಮತ್ತು ಆವಿಗೆಗಳು ಕುಂಭೋದ್ಯಮದ ಅತ್ಯಂತ ಪ್ರಮುಖ ಅಂಶಗಳು. ತಿಗರಿ ಬಂಡಿಯಗಾಲಿಯಂತೆ ಚಕ್ರಾಕರದಿದ್ದು, ಒಂದು ಗಟ್ಟಿಯಾದ ನೆಲದ ಗೂಟದ ತುದಿಗೆ ಸಿಕ್ಕಿಸಿರುತ್ತಾರೆ. ಅದರ ಮೇಲ್ಭಾಗದಲ್ಲೊಂದು ಚಿಕ್ಕರಂಧ್ರವಿದ್ದು, ಅದರಲ್ಲಿ ನಯವಾದ ಕೋಲು (ಕುಂಬರಗೋಲು) ಇರಿಸಿ, ಅದರ ಸಹಾಯದಿಂದ ತಿರಗಣಿಯನ್ನು ತಿರುಗಿಸುತ್ತಾರೆ. ತಿರಗಣಿ ವೇಗವಾಗಿ ತಿರುಗಲು

ತೊಡಗಿದಾಗ, ಕೋಲನ್ನು ಕಟ್ಟಿಕೊಂಡು ಬದಿಗಿರಿಸಿ, ಹದಗೊಳಿಸಿದ ಅಲ್ಲಿನ ಮುದ್ದೆಯನ್ನು ತಿಗುರಿಯ ಮಧ್ಯಯದಲ್ಲಿಟ್ಟು, ಅದನ್ನು ಕೈಚಳಕದಿಂದ ತನಗೆ ಬೇಕಾದ ಆಕಾರಕ್ಕೆ ಕುಂಬಾರ ತಿರುಗಿಸುತ್ತಾನೆ. ಈಗ ತಿರಗಣಿಯ ವೇಗ ಕಡಿಮೆಯಾದರೆ ಆಗಾಗ ಕೋಲಿನಿಂದ ತಿರುಗಿಸುತ್ತಲೇ ಇರುತ್ತಾನೆ. ಅವನು ಅಗಾಗ್ಗೆ ಅರ್ಲು ಮುಟ್ಟುವುದರಿಂದ ಅದು ಕೈಗೆ ಅಂಟಿಕೊಳ್ಳುತ್ತಿರುತ್ತದೆ. ಅದರ ನಿವಾರಣೆಗಾಗಿ, ದೋಣಿಯಲ್ಲಿಯ ನೀರಲ್ಲಿ ಕೈ ಅದ್ದುವುದುಂಟು. ಇದರಿಂದ ಕೋಲಿನಿಂದ ತಿರಗಣಿ ತಿರುಗಿಸಲು ಅವನಿಗೆ ತೊಂದರೆಯಾಗದು. ತನಗೆ ಬೇಕಾದ ಆಕಾರ ಬಂದಾಗ ಎಡಗೈಯಿಂದ ಪಾತ್ರೆಯ ಮೇಲ್ಭಾಗ ಹಿಡಿದು, ಬಲಗೈಯಿಂದ ಅದನ್ನು ಅರ್ಲಿನ ಮುದ್ದೆಯಿಂದ ಬೇರ್ಪಡಿಸಿ, ಬೂದಿಯ ನೆಲದ ಮೇಲೆ ಎಲ್ಲಾ ಒಣಗಿದ ಎಲೆಯ ಮೇಲೆ ಇರಿಸುತ್ತಾನೆ. ತಿರಗಣಿಯ ಮಧ್ಯಭಾಗಕ್ಕೆ ಮತ್ತೆ ಸ್ವಲ್ಪ ನೀರು ಸಿಂಪಡಿಸಿ, ಮೊದಲಿನಂತೆ ಕೋಲಿನಿಂದ ಅದನ್ನು ತಿರುಗಿಸಿ, ಅರ್ಲಿನ ಮುದ್ದೆಯನ್ನು ಅದರ ಮೇಲೆ ಹಾಕಿ, ಅದೇ ಆಕಾರದ, ಬೇರೆ ಬೇರೆ ಆಕಾರದ ಪಾತ್ರೆಗಳನ್ನು ತಯಾರಿಸುತ್ತಾ ಹೋಗುತ್ತಾನೆ.

ಹೀಗೆ ತಿರುಗಣಿಯಿಂದ ಸಿದ್ಧವಾದ ಪಾತ್ರೆಗಳನ್ನು, ಒಣಗಿದ ಎಲೆಗಳ ಹಾಸಿಗೆಯ ಮೇಲಿಟ್ಟು, ಬಿಸಿಲಿಗೆ ಸ್ವಲ್ಪ ಒಣಗಿಸಿ, ಬಳಿಕ ಆವಿಗೆಯೊಳಗೆ ಬಣಗಿದ ಹುಲ್ಲು, ರವದಿ, ಕಟ್ಟಿಗೆಯ ಚೆಕ್ಕೆ, ತುಂಡು ಮೊದಲಾದವುಗಳನ್ನು ಪಾತ್ರೆಗಳಿಗೆ ತಾಗದಂತೆ ಹಾಕಿ, ಪಾತ್ರೆಗಳ ಗೂಡುಗಳನ್ನು ಸಾಲಾಗಿ ಜೋಡಿಸಿರುತ್ತಾರೆ. ಗೂಡುಗಳಲ್ಲಿ ತಳದಿಂದ ಮೇಲ್ಭಾಗದವರೆಗೂ ಕಿಂಡಿ ಬಿಟ್ಟಿರುತ್ತಾರೆ. ತಳಭಾಗಕ್ಕೆ ಉರಿಕೊಟ್ಟಾಗ ಪಾತ್ರೆಗಳು ಸುಟ್ಟು ಗಟ್ಟಿಯಾಗಿ ನಿಶ್ಚಿತ ಅಕಾರಗಳನ್ನು ಪಡೆಯುತ್ತವೆ. ಸರಿಯಾಗಿ ಸುಟ್ಟ ಪಾತ್ರೆಗಳು ತಾಳಿಕೆ ಬರುತ್ತವೆ. ಸರಿಯಾಗಿ ಸುಡಲಾರದೆ ಇದ್ದವುಗಳು ಬಹು ಬೇಗ ಅಳ್ಳುತ್ತವೆ. ಕೆಂಪು ಮಣ್ಣಿನಿಂದ ತಯಾರಿಸಿದ ಪಾತ್ರೆಗಳೂ ಆವಿಗೆಯ ಮೂಲಕ ಸುಟ್ಟಾಗ ಕೆಂಪುಬಣ್ಣವನ್ನು ಹೊಂದಿರುತ್ತವೆ. ಅದರಂತೆ ಕಪುಮಣ್ಣಿನ ಅಥವಾ ಜೇಡಿಮಣ್ಣಿನ ಪಾತ್ರೆಗಳನ್ನು ಸುಟ್ಟಾಗ, ಅದೇ ಬಣ್ಣದ ಗುಣವನ್ನು ಹೊಂದಿರುತ್ತವೆ. ಇವುಗಳಲ್ಲಿ ಕೆಂಪುಮಣ್ಣಿನ ಪಾತ್ರೆಗಳೇ ಹೆಚ್ಚು ಬಾಳಿಕೆ ಬರುತ್ತವೆ. ಯಾವುದೇ ಬಣ್ಣದ ಮಣ್ಣಿನ ಪಾತ್ರೆಗಳಿದ್ದರೂ, ಮೊದಲು ಉಪಯೋಗಿಸುವಾಗ, ಅದರ ಒಳಗೆ ಮತ್ತು ಕೆಳಗೆ ಕುಳಿನ ಬೆಂಕಿ ಇಟ್ಟು ಕಾಯಿಸುತ್ತಾರೆ. ಕೆಂಪುಮಣ್ಣಿನ ಪಾತ್ರೆಗಳಿಗೆ ಬೆಳಗಾವಿ ಜಿಲ್ಲೆಯ ಖಾನಾಪೂರ, ದೇವಗಾವಿ, ಗಡಾ, ತೂಪಿನಕಟ್ಟಿ, ಗುಂಜಿಗಿ, ಎಮ್ಮಿನಕಟ್ಟಿ ಇತ್ಯಾದಿ ಗ್ರಾಮಗಳು ಇಂದಿಗೂ ಪ್ರಸಿದ್ಧ.

ಕಮ್ಮಾರ

ಕಮ್ಮಾರ ಕಸುಬಿನಲ್ಲಿ ಬರುವ ಉಪಕರಣ ಮತ್ತು ಸಲಕರಣೆಗಳ ಬಗೆಗೆ ಕುರಿತು ಹಲವಾರು ಕಥೆ, ಐತಿಹ್ಯ, ನಂಬಿಕೆ, ಆಚರಣೆಗಳಿವೆ. ತಾವು ಶಿವನ ವಂಶಸ್ಥರಾಗಿದ್ದು ಮೂಲತಃ ಶಿವನೇ ಕಮ್ಮಾರನಾಗಿದ್ದನು. ಅವನು ತನ್ನ ಬಲತೊಡೆಯನ್ನು ಅಡಿಗಲ್ಲನ್ನಾಗಿ ಮಾಡಿಕೊಂಡಿದ್ದ. ಹಾಗೆಯೇ ಎಡಗೈಯನ್ನು ಇಕ್ಕಳವಾಗಿಸಿಕೊಂಡು ಹೆಣೆದು ಇತರ ಪಾಂಚಾಳರಿಗೆ ಬೇಕಾದ ಉಪಕರಣಗಳನ್ನು ತಯಾರಿಸಿಕೊಡುತ್ತಿದ್ದ ಭೂಮಿ ಊಳಲು ಬೇಕಾದ ಮಡಿಕೆ, ಕುಂಟೆಗಳನ್ನು ರೈತನಿಗೆ ಒದಗಿಸುತ್ತಿದ್ದ ಎನ್ನುವ ಪೌರಾಣಿಕ ಹಿನ್ನೆಲೆಯ ಐತಿಹ್ಯ ಮತ್ತು ಶಿವನ ತ್ರಿಶೂಲವೇ ಇಕ್ಕಳ ಡಮರುಗುವೇ ಸುತ್ತಿಗೆ ಹೊಟ್ಟೆಯೇ ತಿದಿ.

ಕಮ್ಮಾರರು ಸ್ತ್ರೀದೈವ ಕಾಳಿಯನ್ನು ತಮ್ಮ ಕಸುಬಿನ ಮೂಲ ಆರಾಧ್ಯ ದೈವವೆಂದು ವರ್ಷವಿಡಿ ಪೂಜ್ಯನಿಯ ದೃಷ್ಟಿಯಿಂದ ಆಚರಿಸುವುದನ್ನು ನೋಡಬಹುದು.

ದೈವಗಳು:

೧. ಕಾಳಮ್ಮ: ಪಾಂಚಾಳರ ಕಸುಬಿನ ದೇವತೆ ಬನ್ನಿಮರ, ಕಳಶ, ಉಪಕರಣ ಇವುಗಳಿಗೆ ಕಾಳಮ್ಮ ಎಂದು ಕರೆಯುತ್ತಾರೆ. ಕುಲುಮೆಗೂ ಕೂಡ ಕಾಳಮ್ಮ ಎಂತಲೇ ಕರೆಯುತ್ತಾರೆ, ಕಾಳಮ್ಮ ಎಂದರೆ ಬೆಂಕಿಯೆಂದೇ ಹೇಳಬಹುದು. ಕಮ್ಮಾರರು ಕುಲುಮೆಯನ್ನು ಪ್ರತಿಷ್ಠಾಪಿಸುವಾಗ ಮಂಗಳವಾರ ಹಾಗೂ ಶುಕ್ರವಾರದಂದು ಮಾತ್ರ ಪ್ರತಿಷ್ಠಾಪಿಸುತ್ತಾರೆ. ಈ ವಾರಗಳು ಕಾಳಮ್ಮನ ಪೂಜೆಸಲಿಕ್ಕೆ ಶುಭದಿನಗಳು ಎಂಬ ನಂಬಿಕೆ ಕುಲುಮೆಗೆ ಸಂಬಂಧಿಸಿದಂತೆ ವಾಸ್ತುವನ್ನು ನೋಡಿ ಆ ವಾಸ್ತುವಿಗೆ ಅನುಗುಣವಾಗಿ ಗೋಡೆ (ಗೋಡೆ ಅಂದರೆ ಕುಲುಮೆ ಗೆಡ್ಡೆ)ಯನ್ನು ಉತ್ತರಾಭಿಮುಖವಾಗಿ ಕಟ್ಟುತ್ತಾರೆ. ಇದನ್ನು ಗೋಪುರದ ಆ ಕೃತಿಯಲ್ಲಿ ನಿರ್ಮಾಣ ಮಾಡುತ್ತಾರೆ. ಇದರ ಮುಂದೆ ತಗ್ಗು (ಗುಂಡಿ)ಯನು ತೋಡಿ ಅದರಲ್ಲಿ ಪಂಚಲೋಹ ಹಾಗೂ ಹಾಲು ತುಪ್ಪವನ್ನು ಹಾಕಿ ಕುಲುಮೆಯ ಗಡ್ಡೆಗೆ ಮುತ್ತೈದೆಯರೆಲ್ಲರೂ ಸೇರಿ ಹೊಸ ಸೀರೆ ಉಡಿಸಿ, ಉಡಕ್ಕಿಹಾಕಿ ತಾವು ಉಡಕ್ಕಿಯನ್ನು ತುಂಬಿಕೊಂಡು ಕಂಕಣಕಟ್ಟಿ, ಅರಿಶಿಣ, ಕುಂಕುಮ ಹಚ್ಚಿಪೂಜೆ ಮಾಡಿ ಕಳಶ ಬೆಳಗಿ ಅಕ್ಷತೆ ಕಾಳನ್ನು ಗೋಪುರಕ್ಕೆ ಹಾಕುತ್ತಾರೆ. ನಂತರ ಕುಲುಮೆಯಲ್ಲಿ ಕೆಲಸ ಮಾಡಲು ಪ್ರಾರಂಭಿಸುವರು. ಅಂದಿನಿಂದಲೇ ಕಾಳಮ್ಮ ಎಂದು ಕುಲುಮೆ ಗೆಡ್ಡೆಯನ್ನು ಆರಾಧಿಸುತ್ತಾರೆ. ಈ ಕುಲುಮೆಗೆ ಕೆಲವು ವಿಧಿನಿಷೇಧಗಳನ್ನು ಸಹ ನಾವು ಕಾಣುತ್ತೇವೆ. ಅಂದರೆ ಇಲ್ಲಿ ಚಪ್ಪಲಿಯನ್ನು ಹಾಕಿಕೊಂಡು ಬರುವಂತಿಲ್ಲ, ಮುಟ್ಟದ ಹೆಣ್ಣು ಮಕ್ಕಳು ಕುಲುಮೆಯ ಸ್ಥಳಕ್ಕೆ ಬರುವುದು ನಿಷೆಧಿಸಿತ್ತು. ಸಮುದಾಯ ಸಂಬಂಧಿಕರು ತಿರೀಕೊಂಡ ಸಂದರ್ಭದಲ್ಲಿ ಕುಲುಮೆಯ ಕೆಲಸವನ್ನು ಪ್ರಾರಂಭಿಸುವುದಿಲ್ಲ. ಕೆಲಸ ಮಾಡುವ ಅಡಿಗಲ್ಲು ಮೇಲೆ ಯಾರು ಕೂಡುವಂತಿಲ್ಲ ಅದರ ಮೇಲೆ ಯಾರಾದರೂ ಕೂತರೆ ವೃತ್ತಿ ದೇವತೆಗೆ ಅವಮಾನ ಮಾಡಿದಂತೆ. ಅದಕ್ಕಾಗಿ ಅದರ ಮೇಲೆ ಯಾರನ್ನು ಕುರುವುದಕ್ಕೆ ಬಿಡುವುದಿಲ್ಲ. ಯಾರಾದರೂ ಕೂತರೆ ಅದರ ಮೇಲೆ ತಯಾರಾಗುವ ಸಾಮಾನುಗಳು ಸರಿಯಾಗುವುದಿಲ್ಲ ಹಾಗೂ ಕುಳಿತ ವ್ಯಕ್ತಿಗೆ ಅಶುಭವಾಗುತ್ತದೆ. ಎಂಬ ನಂಬಿಕೆಯನ್ನಿಟ್ಟುಕೊಂಡು ಬಂದಿದ್ದಾರೆ. ಪಾಂಚಾಳರು ಕೆಲಸದಲ್ಲಿ ಯಾವುದೇ ಉಪಕರಣ ತಮ್ಮ ಕಾಲುಗಳಿಗೆ ಬಡಿದಾಗ ಅವುಗಳಿಗೆ ನಮಸ್ಕರಿಸಿಯೇ ಮುಂದಿನ ಕೆಲಸ ಮಾಡುತ್ತಾರೆ.

ವಿಶ್ವಕರ್ಮ

ಪಾಂಚಾಳರ ಮೂಲ ಪುರುಷ, ಈತನ ಹೆಸರೇ ಜನಾಂಗಕ್ಕೂ ಬಂದಿದೆ. ಈತನು ಭುವನ ಮಗ ಅಥವಾ ಭೂಮಿಯ ಮಗ ಎಂಬ ನಂಬಿಕೆಯಿದೆ. ವಿಶ್ವದ ಶಿಲ್ಪ, ಸರ್ವ ಶಕ್ತ ಪರಮಾತ್ಮನೆಂದು ಸ್ಥಾನಕೊಡಲಾಗಿದೆ. ಈತನಿಗೆ ಐದು ತಲೆಗಳಿವೆ. ಅವುಗಳೆಂದರೆ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ ಮತ್ತು ಈಶಾನ ಒಂದೊಂದರಿಂದಲೂ ಒಬ್ಬೊಬ್ಬ ಪುತ್ರನು ಹುಟ್ಟಿದ. ಅವರೇ ಕ್ರಮವಾಗಿ ಮಯ, ಮನು, ತ್ವಷ್ಟ, ಶಿಲ್ಪ ಮತ್ತು ವಿಶ್ವಜ್ಞ ಅವರನ್ನೇ ಸಾನಗ–ಕಮ್ಮಾರ, ಸನಾತನ–ಬಡಿಗ ಪ್ರತ್ನಸ–ಅಕ್ಕಸಾಲಿಗ, ಅಭೌನಸ–ಶಿಲ್ಪಿ ಮತ್ತು ಸಂಪರ್ಣಸ– ಕಂಚುಗಾರ ಎಂದು ಕರೆಯುತ್ತಾರೆ. ಆತನನ್ನು ಸರ್ವಶಕ್ತ ಸರ್ವದರ್ಶಕ ಸೃಷ್ಠಿಕರ್ತನೆಂದು ವರ್ಣಿಸಲಾಗಿದೆ.

ವಿಶ್ವಕರ್ಮನಿಗೆ ಎಲ್ಲ ಕಡೆಗೂ ಕಣ್ಣು, ಮುಖ, ಕೈ, ಕಾಲುಗಳನ್ನು ಹೊಂದಿರುವನೆಂದೂ, ಅವನು ಸರ್ವಜ್ಞನೂ, ಸರ್ವಶಕ್ತನೂ, ಆಕಾಶ-ಭೂಮಿಗಳನ್ನು ಸೃಷ್ಟಿಸಿದವನೆಂದು ನಂಬಿಕೆಯನ್ನಿಟ್ಟುಕೊಂಡಿದ್ದಾರೆ. ವಿಶ್ವಕರ್ಮ ಜನಾಂಗದ ಮೂಲ ಪುರುಷನಾದ ವಿಶ್ವಕರ್ಮನಿಗೆ ಸೃಷ್ಟಿಕರ್ತ ಎಂದು ಕೂಡ ಕರೆಯುತ್ತಾರೆ. ಈ ಉದ್ದೇಶದಿಂದ ಪಾಂಚಾಳರು ತಮ್ಮ ಮೂಲ ಪುರುಷನನ್ನು ಆರಾಧಿಸುತ್ತಾರೆ.

ಮೌನೇಶ್ವರ

ತಮ್ಮ ಕುಲದಲ್ಲೇ ಜನಿಸಿ ಪವಾಡ ಪುರುಷನಾಗಿ ಮೆರೆದ ಮೌನೇಶ್ವರ ಸಾನಗ ಗೋತ್ರದ ಕಮ್ಮಾರ ಮನೆತನದ ಗೋನಾಳ ಎಂಬ ಗ್ರಾಮದಲ್ಲಿ ಜನಿಸಿದರು. ಈತನು ಚಿಕ್ಕ ವಯಸ್ಸಿನಲ್ಲಿಯೇ ತಂದೆ ತಾಯಿಯನ್ನು ತೊರೆದು ದೇಶ ಸಂಚಾರವನ್ನು ಕೈಗೊಂಡು ಪಾಠ ಪ್ರವಚನದ ಮೂಲಕ ಜನತೆಗೆ ಆಧ್ಯಾತ್ಮ ಬೋಧನೆಯನ್ನು ಮಾಡಿದ ಮಹಾಪುರುಷ ೧೨ನೆಯ ಶತಮಾನದಲ್ಲಿ ವಚನ ಚಳುವಳಿ ಆರಂಭವಾಗಲಿಕ್ಕೆ ಪ್ರಮುಖ ಚಾರಿತ್ರಿಕ ಅಂಶಗಳನ್ನು ತನ್ನ ವೃತ್ತಿಯ ಉಪಕರಣಗಳ ಮೂಲಕ ಹೋಲಿಕೆಯನ್ನು ಕೊಡುತ್ತ ಅನೇಕ ಮೌಢ್ಯತೆಯನ್ನು ಜನರಿಂದ ದೂರ ತೊಲಗಿಸಿದ ಹಾಗೂ ಅನೇಕ ಪವಾಡಗಳನ್ನು ಮಾಡಿ ದೈವಿ ಪುರುಷನಾದುದರ ಬಗ್ಗೆ ಅನೇಕ ಮೌಖಿಕ ಕಥೆಗಳು ಮೋನಪ್ಪಯ್ಯನ ಬಗ್ಗೆ ಜನಪದರ ಬಾಯಿಯಲ್ಲಿರುವುದನ್ನು ಕಾಣಬಹುದು. ಈತ ಸರ್ವಧರ್ಮಸಮನ್ವಯವನ್ನು ಸಾರಿದ ವಿರಾಟ್ ಪುರುಷ ಇತ್ತಿಚಿಗೂ ಕೂಡ ಕೇವಲ ಪಾಂಚಾಳರು ಆರಾಧ್ಯ ದೈವನಾಗಿ ಪೂಜಿಸುವುದನ್ನು ಕಾಣಬಹುದಾಗಿದೆ. ವಿಶ್ವಕರ್ಮ ಕುಲದಲ್ಲಿ ಜನಿಸಿ ತಮ್ಮ ಸಮಾಜಕ್ಕೂ, ವಿಶಾಲ ಸಮಾಜಕ್ಕೂ ಆಧ್ಯಾತ್ಮಿಕ ವಿದ್ಯೆಯನ್ನು ನೀಡಿ, ತತ್ತ್ವ ಸಂದೇಶದಿಂದ ಜನಜೀವನವನ್ನು ನಡೆಸುವ ಮಹಾಪುರುಷ.

ಕಮ್ಮಾರರಲ್ಲಿ ಬಯಲುಗಮ್ಮಾರ ಸಮುದಾಯವು ಅಲೆಮಾರಿ ಸಮುದಾಯಗಳಲ್ಲಿ ಒಂದಾಗಿದ್ದು ವಿಶ್ವಕರ್ಮಸಮುದಾಯಗಳಲ್ಲಿ ಒಂದಾಗಿದೆ. ಇವರ ಆಚರಣೆಗಳು ಮುದ್ದೆಕಂಬಾರರ ಆಚರಣೆಗೆ ಹತ್ತಿರವಾಗಿದೆ. ಈ ಸಮುದಾಯದವರು ಕೆಲವು ಕಡೆ ನೆಲೆನಿಂತು ವೃತ್ತಿಯನ್ನು ಮುಂದುವರೆಸುತ್ತಿದ್ದಾರೆ. ತಮ್ಮ ಕುಲುಮೆಯಲ್ಲಿ ಕುಲುಮೆ ಒಲೆ, ಗೋಡೆ, ಅಡಿಗಲ್ಲು, ಚಮ್ಮಟಿಗೆ ಮತ್ತು ಇಕ್ಕಳ ಮತ್ತಿತರ ಸಾಮಾಗ್ರಿಗಳನ್ನು ಹೊಂದಿರುತ್ತಾರೆ. ಇವರುಗಳು ಕುಲುಮೆಯನ್ನು ಕಾಳಿ ಎಂದು ತಿಳಿದು ಪ್ರತಿದಿನ ಪೂಜೆ ಮಾಡದೇ ಕಾಯಕ ಪ್ರಾರಂಭಿಸುವುದಿಲ್ಲ. ಅಡಿಗಲ್ಲನ್ನು ಕಮಟೇಶ್ವರ ಎಂದು ತಿಳಿಯುತ್ತಾರೆ. ಕುಲುಮೆಯ ಸಾಮಾಗ್ರಿಗಳನ್ನು ಕಾಲಿನಿಂದ ದಾಟುವುದಿಲ್ಲ. ದಾಟಿದರೆ ಕಾಳಿಗೆ ಅಪಚಾರ ಎಸಗಿದಂತೆ ಎಂದು ಭಾವಿಸುತ್ತಾರೆ. ಕಾಳಮ್ಮದೇವಿಯ ಅಕ್ಕತಂಗಿಯರು ಎಂದು ತಿಳಿದಿರುವ ಯಲ್ಲಮ್ಮ, ಭಾಗಮ್ಮ, ದುರುಗಮ್ಮ, ದ್ಯಾಮವ್ವ, ಹುಲಿಗೆಮ್ಮ ಮುಂತಾದ ಸ್ತ್ರೀ ದೇವತೆಯರನ್ನು ಪೂಜಿಸುತ್ತಾರೆ. ಹಾಗೆಯೇ ಪುರುಷ ದೈವವಾಗಿ ಜೆಜೋರಿ ಖಂಡೋಬಾನನ್ನು ನೆನೆದು ಆಚರಿಸುತ್ತಾರೆ. ಮುಸ್ಲಿಂ ಸಮುದಾಯದವರು ಈ ಕಸುಬನ್ನು ಮಾಡುವರು. ಈ ಸಮುದಾಯದ ಕಮ್ಮಾರರನ್ನು ಲೋಹಾರ ಎಂದು ಕರೆಯುತ್ತಾರೆ. ಈ ವೃತ್ತಿಯ ಕುರಿತು ಹೇಳುವ ಒಂದು ಕಥೆಯು ಇವರ ಬಳಕೆಯಲ್ಲಿದೆ ಸುಮಾರು ೧೦೦೦ ವರ್ಷಗಳ ಹಿಂದೆ ಈ ಸಮುದಾಯದ ಲೋಹಾರ ವೃತ್ತಿ ಗುರುಗಳಾದ ಪ್ರವಾದಿ ದಾವೊದಲೆ ಸಲಾಂ ಅವರು ಕೈಯಿಂದಲೇ ಹಸಿ ಕಬ್ಬಿಣವನ್ನು ಎಳೆದು ಬೇಕಾದ ಆಕಾರಕ್ಕೆ ತರುತ್ತಿದ್ದರು.

ಎಂದು ಪೌರಾಣಿಕ ಹಿನ್ನೆಲೆ ಇದೆ. ಲೋಹಾರ ಸಮುದಾಯದಲ್ಲಿ ಈ ಕಸುಬಿನ ಕುರಿತು ಒಂದು ಗಾದೆ ಮಾತು ಬಳಕೆಯಲ್ಲಿದೆ. ಸೌ ಸುನಾರ್ ಏಕ್ ಲೋಹಾರ್ ಎಂದು ಕುಲುಮೆ ಮತ್ತು ಕುಲುಮೆಯಲ್ಲಿನ ವಸ್ತುಗಳನ್ನು ಉತ್ಪಾದಿಸಲು ಅವಶ್ಯಕವಾದ ಸಲಕರಣೆಗಳ ಕುರಿತು ಇವರಲ್ಲಿ ಹಲವು ಆಚರಣೆಗಳಿವೆ. ತಮ್ಮ ಬದುಕಿನಲ್ಲಿ ಅಡಚಣೆ ಇದ್ದಾಗಲೂ ಸಹ ತಮ್ಮ ಕಸುಬಿನ ಆಚರಣೆಯನ್ನು ಆಚರಿಸುತ್ತಲೇ ಬಂದಿದ್ದಾರೆ.

ಪಾಂಚಾಳ

ವಿಶ್ವಕರ್ಮ ಸಮುದಾಯದ ಶಿವಸ್ವರೂಪಿಯಾದ ವಿಶ್ವಕರ್ಮನು ಭೂಮಿಯ ಮೇಲೆ ಮೊದಲು ಹುಟ್ಟಿ ಇಡೀ ಜಗತ್ತನ್ನು ಸೃಷ್ಟಿಸಿ ನಂತರ ಮನುಷ್ಯನನ್ನು ಸೃಷ್ಟಿಸಿ ಅವರ ವಾಸಕ್ಕೆ ಅವಶ್ಯವಾದ ಮನೆ, ಕೃಷಿಗೆ ಬೇಕಾದ ಉಪಕರಣ ಮುಂತಾದವುಗಳನ್ನು ಸೃಷ್ಟಿಸಿ ಕೊಡುತ್ತಾನೆ. ವಿಶ್ವಕರ್ಮನು ಐದು ಮುಖವುಳ್ಳವನಾಗಿದ್ದು, ಐದು ಮುಖಗಳು ಪಾಂಚಾಳ ಸಮುದಾಯಗಳ ಪ್ರತೀಕವಾಗಿವೆ. ಮನು, ಮಯ, ತ್ವಷ್ಟ, ದೈವಜ್ಞರ ಮುಖಗಳನ್ನು ಹೊತ್ತು ಜನಿಸಿದ ವಿಶ್ವಕರ್ಮನು ಒಂದೊಂದು ಮುಖಕ್ಕೂ ಒಂದೊಂದು ಕಸುಬನ್ನು ವಹಿಸುತ್ತಾನೆ. ಮನು ಲೋಹದ ಕೆಲಸ, ಮಯ ಬಡಿಗೆ ಕೆಲಸ, ತ್ವಷ್ಟಿ ಕಂಚಿನ ಕೆಲಸ ಶಿಲ್ಪ ಕಲ್ಲಿನ ಕೆಲಸವನ್ನು ನಿರ್ವಹಿಸುವಂತೆ ನಿರ್ದೇಶಿಸುತ್ತಾನಂತೆ ಕಂಡುಬರುತ್ತದೆ.[೧]

ವಿಶ್ವಕರ್ಮ ಕುಲುಮೆಗಳಲ್ಲಿ ಕುಲುಮೆಯ ಮುಖ ಯಾವಾಗಲೂ ಉತ್ತರ ದಿಕ್ಕಿಗೆ ಇರಬೇಕು ಕುಲುಮೆ ಊರ ಹೊರಭಾಗದ ಬಯಲಿನಲ್ಲಿರಬೆಕು. ಅವರ ಕಾಳಿ ದೇವಾಲಯಗಳ ಸಹ ಉತ್ತರ ದಿಕ್ಕಿನ ಕಡೆ ಮುಖ ಮಾಡಿರುತ್ತವೆ. ಕುಲುಮೆ ಮತ್ತು ಕಬ್ಬಿಣವನ್ನು ಕಾಳಮ್ಮ ದೈವ ಎಂದು ಭಾವಿಸುತ್ತಾರೆ. ಇವರು ಕುಲುಮೆಯ ಎಡಭಾಗದಲ್ಲಿ ಇಕ್ಕಳ ಮತ್ತು ಬಕ್ಕಸಗೋಲುಗಳನ್ನು ಇರಿಸಿಕೊಂಡಿರುತ್ತಾರೆ. ದಕ್ಷಿಣ ದಿಕ್ಕಿಗೆ ಬಾಗಿಲು ಮಾಡಿ ಮನೆ ಕಟ್ಟುವುದಿಲ್ಲ ಕಾರಣ ಕಾಳಿ ಉತ್ತರ ದಿಕ್ಕಿನಲ್ಲಿದ್ದು ಎದುರುಗಡೆ ಇರುವ ಯಾರನ್ನು ಉಳಿಸುವುದಿಲ್ಲ ಎಂದು ನಂಬಿಕೆ, ಕಮ್ಮಾರರು ಲೋಹವನ್ನು ಎಂದಿಗೂ ಭಿಕ್ಷೆ ಕೊಡಲಾರರು. ಭಿಕ್ಷೆ ಕೊಟ್ಟರೆ ತಮ್ಮ ಮನೆಯ ಲಕ್ಷ್ಮಿ ಹೊರಟು ಹೋಗುತ್ತಾಳೆ ಎಂಬ ನಂಬಿಕೆಯಿದೆ.

ಕುಲುಮೆಯ ತಿದಿ ಒತ್ತುವವನು ಮೈಲಿಗೆಯಾಗಿ ತಿದಿಯಾಗುತ್ತಿದ್ದರೆ ತಿದಿಯ ಹೊಟ್ಟೆ ಹೊಡೆಯುತ್ತದೆ. ಅಂದರೆ ತಿದಿಯ ಚರ್ಮ ಹರಿಯುತ್ತದೆ. ಎಂಬ ನಂಬಿಕೆಯಿದೆ. ಹಾಗೆಯೇ ಅಡಿಗಲ್ಲಿನ ಮೇಲೆ ಯಾರು ಕೂರಬಾರದು. ಕುಳಿತರೆ ಕಮ್ಮಟೇಶ್ವರನನ್ನ ಅಪಚಾರ ಮಾಡಿದಂತೆ, ಕುಲುಮೆಯವರ ಮನೆ ಉದ್ಧಾರವಾಗುವುದಿಲ್ಲ. ತಯಾರಿಸಬೇಕಾದ ವಸ್ತುಗಳನ್ನು ಅಡಿಗಲ್ಲಿನ ಮೇಲಿಟ್ಟ ಹೊಡೆದಾಗ ಮಾಯಾವಾಗುತ್ತವೆ. ಅಡಿಗಲ್ಲು ಭೂಮಿಯೊಳಗೆ ಹೋಗುತ್ತದೆ ಮತ್ತು ಕುಲುಮೆ ನಡೆಸುವವನಿಗೆ ಅಪಘಾತ ಸಂಭವಿಸುತ್ತದೆ. ಎನ್ನುವ ನಂಬಿಕೆಯಿದೆ ಕಮ್ಮಾರರ ಸಲಕರಣೆಗಳಾದ ಚಮ್ಮಟಿಗೆ, ಸುತ್ತಿಗೆ, ಇಕ್ಕಳ, ಒಕ್ಕಸಲೋಲು, ಜಾನ, ಗುದ್ದಿ, ಪಾಗ, ಹಾರಿ ಇತ್ಯಾದಿಗಳಿಗೂ ಸಹ ಅಪಚಾರ ಎಸಗಬಾರದು ಕಮ್ಮಾರರ ಕಸುಬಿಗೆ ಸಂಬಂಧಿಸಿದ ಯಾವುದೇ ಉಪಕರಣಗಳನ್ನು ಹುಣ್ಣಿಮೆ ಮತ್ತು ಅಮವಾಸ್ಯೆ ದಿನದಂದು ತಯಾರಿಸುವುದಿಲ್ಲ. ಕೆಲ ಮಾಟ ಮಂತ್ರಗಳಿಗೆ ಬಳಸುವ ಆಯುಧಗಳನ್ನು ಮಾತ್ರ

ಇಂತಹ ದಿನಗಳಲ್ಲಿ ತಯಾರಿಸುವರು ಒಂದು ವೇಳೆ ಕಸುಬಿಗೆ ಸಂಬಂಧಿಸಿದ ಉಪಕರಣಗಳಣ್ನು ತಯಾರಿಸಿದರೆ ಬಳಸುವಂತಹ ವ್ಯಕ್ತಿಗೆ ಆ ಉಪಕರಣಗಳು ಕೇಡುನ್ನಂಟು ಮಾಡುತ್ತದೆ. ಎಂಬ ವೃತ್ತಿ ಸಂಬಂಧಿ ಉಪಕರಣಗಳನ್ನು ತಯಾರಿಕೆಗೆ ನಿಷೇದವಿದೆ.

ಕಮ್ಮಾರ ಕುಟುಂಬದಲ್ಲಿ ಹೊಸದಾಗಿ ಮದುವೆಯಾದ ಮಧು ಮಕ್ಕಳು ತಿಂಗಳವರೆಗೂ ಉಪಕರಣಗಳನ್ನು ಮುಟ್ಟಕೂಡದು ಹಾಗೆಯೇ ಮಕ್ಕಳಾಗದೆ ಸ್ತ್ರೀಯರು ಕುಲುಮೆಯಲ್ಲಿನ ಉಪಕರಣಗಳನ್ನು ಮೂರು ಸುತ್ತ ತಿರುಗಿ ನಂತರ ಆ ಕಡೆ ನೋಡದೆ ಹೋದರೆ ಅವರಿಗೆ ಮಕ್ಕಳು ಆಗುತ್ತವೆ. ಎನ್ನುವ ಬಲವಾದ ನಂಬಿಕೆಯಿದೆ. ಮಗುವು ಎಚ್ಚರ ತಪ್ಪಿದಾಗ ಕಬ್ಬಿಣದ ಸಣ್ಣ ಮೊಳೆಯಿಂದ ಚಿಟಕಿ ಹಾಕುವುದು. ಮಕ್ಕಳು ಬಿದ್ದಲ್ಲಿ ಕಬ್ಬಿಣದ ವಸ್ತುಗಳಿಂದ ಬಿದ್ದ ಜಾಗದಲ್ಲಿ ಮೂರು ಸಲ ನಿವಾಳಿಸಲಾಗುತ್ತದೆ. ಪ್ರತಿಯೊಬ್ಬ ಸ್ತ್ರೀಯು ವಿಧವ, ಗಂಡಸು ಮತ್ತು ಮಕ್ಕಳು ಕಬ್ಬಿಣದ ಬಳೆಯನ್ನು ಕೈಯಲ್ಲಿ ಹಾಕಿಕೊಳ್ಳಬೇಕು. ಕಾರಣ ಕಬ್ಬಿಣದ ಬಳೆಯು ರಕ್ಷಣೆ ಮಾಡುತ್ತದೆ ಎನ್ನುವ ನಂಬಿಕೆಯಿದೆ.

ಕಬ್ಬಿಣದಿಂದ ಮಾಡಿದ ಲಾಳ ಮತ್ತು ಮೊಳೆಗಳನ್ನೆ ಮದುವೆ ಸಂದರ್ಭದಲ್ಲಿ ಹೊಸ್ತಿಲಿಗೆ ಹೊಡೆದರೆ ಒಳ್ಳೆಯದಾಗುತ್ತದೆ ಮತ್ತು ಕಬ್ಬಿಣವನ್ನು ಹೊಂದಿದ ಬಾಗಿಲನ್ನು ತುಳಿಯಬಾರದು ತುಳಿದರೆ ಅದು ಕಾಳಿಯನ್ನು ತುಳಿದಂತೆ ಎನ್ನುವ ನಂಬಿಕೆಯಿದೆ.

ಕಮ್ಮಾರ ಪರಿವಾರದ ಬಾಣಂತಿಯರ ತಲೆ ಭಾಗಕ್ಕೆ ಕಬ್ಬಿಣದ ಕುಡಗೋಲು ಇಡುತ್ತಾರೆ. ಕಬ್ಬಿಣದ ವಸ್ತು ಇದ್ದರೆ ಅದು ಕಾಳಿ ಸ್ವರೂಪವಾಗಿದ್ದು ಯಾವುದೇ ಭೂತ–ಪ್ರೇತಗಳು ಹತ್ತಿರ ಬರಲಾರವು ಎಂದು ನಂಬುತ್ತಾರೆ. ಬಾಣಂತಿಯರು ಗಂಗೆ ಪೂಜೆ ಮಾಡಲು ಹೋಗುವ ಮುಂಚೆಯೇ ಕಬ್ಬಿಣದ ಚಾಕೊವನ್ನು ಇಟ್ಟು ಬಾಣಂತಿಗೆ ನೀರು ಹಾಕಿ ಸ್ನಾನ ಮಾಡಿಸುವ ನಂಬಿಕೆಯಿದೆ. ಋತುಮತಿಯಾದ ಹೆಣ್ಣಿನ ಪಕ್ಕದಲ್ಲಿ ಕಬ್ಬಿಣದ ಕುಡುಗೊಲು ಇಟ್ಟರೆ ಕಾಳಿ ಅವಳನ್ನು ರಕ್ಷಿಸುತ್ತಾಳೆ ಎಂಬ ನಂಬಿಕೆಯಿದೆ. ಹೀಗೆ ಕಮ್ಮಾರ ಬಗೆಗೆ ಹಲವಾರು ಐತಿಹ್ಯ, ನಂಬಿಕೆ, ಆಚರಣೆಗಳನ್ನು ಇಂದಿಗೂ ನೋಡಬಹುದು.

ಅಂಗಡಿಯೊಳು ಗೋದಿ ಕಡಲೆ ನಾನಾ ಧಾ
ನ್ಯಂಗಳ ರಾಸಿ ರಂಜಿಸಿತು
ಮುಂಗಡೆಯೊಳು ಚಿತ್ರಗೆಲಸಿ ಚಿಪಿಗರಾಯು
ಧಂಗಳ ಕೇರಿಯೊಪ್ಪಿದುವು (ಮೋ.ತ. ಸಂ–೩, ಪ–೨೧, ಪು–೪೮)

ಅಂಗಡಿಗಳಲ್ಲಿ ಗೋದಿ, ಕಡಲೆ, ಮೊದಲಾದ ಧಾನ್ಯಗಳ ರಾಸಿಗಳು ಕಂಗೊಳಿಸದವು: ಮುಂಗಡೆಯಲ್ಲಿ ಚಿತ್ರಶಿಲ್ಪಗಳ ಆಯುಧಗಳ ಬೀದಿಗಳು ಶೋಭಿಸಿದವು.

ಒಕ್ಕಲುತನಕ್ಕೆ ಬೇಕಾಗುವ ಕಬ್ಬಿಣದ ಉಪಕರಣಗಳನ್ನು ರೈತರಿಗೆ ಒದಗಿಸುವ ದೃಷ್ಟಿಯಿಂದ ಕಮ್ಮಾರ ಕಸುಬು ತುಂಬ ಅಗತ್ಯವಾದುದು ಹಾಗಾಗಿ ಇಂದಿಗೂ ಪ್ರತಿ ಹಳ್ಳಿಯಲ್ಲಿ ಒಬ್ಬ ಅಥವಾ ಇಬ್ಬರೂ ಕಮ್ಮಾರರಿರುವುದನ್ನು ಕಾಣುತ್ತೇವೆ. 'ಕಾಸಿಕಮ್ಮಾರನಾದ'[೯೪] 'ಕಬ್ಬುನವ ಮಾಡುವವ ಕಮ್ಮಾರ'[೯೫] 'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ'[೯೬] ಕಮ್ಮಾರನಂತೆ ಕಾಸಿ ಬಡಿವರ್[೯೭] ಇವೇ ಮುಂತಾದ ಉಲ್ಲೇಖಗಳು ಕಮ್ಮಾರನ ಕಾರ್ಯವನ್ನು ಸಂಕ್ಷಿಪ್ತವಾಗಿ ಪರಿಚಯಿಸುತ್ತವೆ.

ಮದಗಜವೆರಡರ ಬಾಲದ ಮೊದಲಂ ಪಿಡಿದೆತ್ತಿಯೊತ್ತಿನುರ್ಗುತ್ತಿರೆಯಾ ಸ್ಯದಿನೊಗುವ ರಕ್ತಮುರಿಯೆನೆ ತಿದಿಯೊತ್ತುವ ಕಮ್ಮಾರಂಬೊಲಿರ್ದಂ ಭೀಮಂ ಅಂದರೆ ಭೀಮನು ಮದಗಜಗಳ ಬಾಲವನ್ನು ಹಿಡಿದೆತ್ತಿ ಒತ್ತುವಾಗ ಅವುಗಳ ಮುಖದಿಂದ ಸುರಿಯುವ ರಕ್ತವು ಕಮ್ಮಾರನು ತಿದಿಯೊತ್ತಿದಾಗ, ಉರಿಯಂಥ ಬೆಂಕಿಯಹಾಗೆ ಕಾಣಿಸುತ್ತಿತ್ತೆಂದು ಶಬ್ದಮಣಿದರ್ಪಣಂ ಪ್ರಯೋಗ ಪದ್ಯವು ವರ್ಣಿಸುತ್ತಿದೆ.[೯೮] ಪಂಪ ಕೂಡ ಭೀಮ ಆನೆಯನ್ನು ಒಂದು ಕೈಯಲ್ಲಿ ಎತ್ತಿಹಿಡಿದು ಒತ್ತಿದಾಗ ಅದರ ಬಾಯಿಂದ ಬಂದ ರಕ್ತ ಕೆಂಪಗಿ ಉರಿಯಂತೆ ಇದ್ದಿತು. ತಿದಿಯನೊತ್ತುತ್ತಿರುವ ಕಮ್ಮಾರನಂತೆ ಭೀಮ ಇದ್ದ ಎಂದು ವರ್ಣಿಸುತ್ತಾನೆ.[೯೯] ಊದುವ ತಿದಿಯಂತೆ ಪೊಗಿರ್ದ ಪುಣ್ಗಳುಂ.[೧೦೦] ಎಂಬ ನಯಸೇನನ ಮಾತು ಕೂಡ ಕಮ್ಮಾರರು ಉಪಯೋಗಿಸುತ್ತಿದ್ದ ತಿದಿಯ ಬಗೆಗೆ ತಿಳಿಸುತ್ತದೆ. ಲಿಂಗ ಬಿದ್ದಿತು ಲಿಂಗ ಬಿದ್ದಿತೆಂಬರಯ್ಯ, ಲಿಂಗ ಬೀಳಲು ಬಲ್ಲುದೆ? ಭೂಮಿ ತಾಳಲು ಬಲ್ಲುದೇ? ಕಮ್ಮಾರ ಕಡೆದು ಮಾರೆದು, ಬೋಗಾರ ತಂದು ಮಾರೆದ, ಗುರು ಕೊಂಡು ಮಾರೆದ ಈ ಲಿಂಗ ಬಿದ್ದಡೆ ಸಮಾಧಿಯುಂಟೆ? ಎಂಬ ಚನ್ನಬಸವಣ್ಣನ ವಚನವು[೧೦೧] ಕಮ್ಮಾರ ಕಬ್ಬಿಣವನ್ನು ಕೆಂಪಾಗಿ ಕಾಯಿಸಿ, ತುಂಡು ಮಾಡಿ, ಬಡಿದು ಬೇರೆ ಬೇರೆ ಆಕಾರದ ಸಾಮಾನುಗಳನ್ನು ತಯಾರಿಸಿ, ಮಾರಿ ಬಂದ ಹಣದಿಂದ ಜೀವಿಸುತ್ತಿದ್ದುದನು. ಎಂಬುದನ್ನು ವಚನವು ತಿಳಿಸುತ್ತದೆ.

ಅಗ್ನಿಯಾಧಾರದಲ್ಲಿ ಕಬ್ಬುನ ನೀರುಂಬುದಯ್ಯಾ ಭೂಮಿಯಾಧಾರದಲ್ಲಿ ವೃಕ್ಷ ನೀರುಂಬುದಯ್ಯ, ಎಂಬ ಬಸವಣ್ಣನವರ ವಚನವು[೧೦೨] ಅಯ್ಯಾ ಕಬ್ಬುನ ನೀರಿನೊಳಕೊಂಬಂತೆ ಹಾಗೂ ಕಾಯ್ದ ಕರ್ಬುನ ನೀರನೊಳಕೊಂಬಂತೆ ಎಂಬ ಸಿದ್ಧರಾಮೇಶ್ವರರ ವಚನಗಳು[೧೦೩] ಕಾಸಿದ ಕಬ್ಬಿಣ ಆರಲು, ಅದರ ಮೇಲೆ ನೀರು ಹಾಕಿದಾಗ, ನೀರು ಇಂಗಿ ಹೋಗುವ ರೀತಿಯನ್ನು ಇಲ್ಲಿ ಉಪಮೆಯಾಗಿ ಬಳಸಲಾಗಿದೆ. ತಾನು ನಿರಪರಾಧಿ ಎಂಬುದನ್ನು ತೋರಿಸಲು ಬಸವನೊಂದು ಕಮ್ಮಾರಸಾಲೆಗೆ ಹೋಗಿ, ಕುಲುಮೆಯಲ್ಲಿ ಕೆಂಪಗೆ ಕಾಯ್ದ ಕಬ್ಬಿಣದ ಸಲಾಕೆಯೊಂದನ್ನು ಹಿಡಿದು ತೋರಿದ ಸನ್ನಿವೇಶ ಧರ್ಮಾಮೃತದಲ್ಲಿದೆ.[೧೦೪] ಕಮ್ಮಾರನ ಕೆಲಸದ ಇಕ್ಕಳ[೧೦೫] ಸಲಕರಣೆಯೊಂದು ವಚನದಲ್ಲಿ ಉಕ್ತವಾಗಿದೆ ಓಲೆಯಲ್ಲಿ ಕರ್ಬೊನ್ನನ್ನು ಕಾಸಿ ಇರ್ಕುಳಿನಿಂದ ಹಿಡಿದು ಸುತ್ತಿಗೆಯಿಂದಕಮ್ಮಾರರು ಬಡಿಯುತ್ತಿದ್ದರು ಎಂದ ನಯಸೇನ ಉಲ್ಲೇಖಿಸುತ್ತಾನೆ.[೧೦೬] ಮತ್ತೊಂದು ಕಡೆ ಕುಡುಗಾಯ್ದ ಪಾರೆಯೆಂತುಂ ಸುಡುಲರೆಯದು ಸತ್ಯಮುಳ್ಳನಂ ಎಂಬ ಮಾತು ಬರುತ್ತದೆ. ಇಲ್ಲಿ ಚೆನ್ನಾಗಿ ಕಾದ ಹಾರೆಯ ಉಲ್ಲೇಖವಿದೆ.[೧೦೭] ಮತಿಗೆಟ್ಟ ಕುಂಬರ ಮಣ್ಣ ಸೂಜಿಯ ಮಾಡಿ ಕಂಬಾರಗೇರಿಗೆ ಮಾರಿ ಹೋದತೆ ಅವರುಕ್ಕಿನ ಸೂಜಿಯ ಮಾರುವರಾಗಿ ಎಂಬ ವಚನೋಲ್ಲೇಖ ಕಮ್ಮಾರರು ಉಕ್ಕಿನ ಸೂಜಿಯನ್ನು ತಯಾರಿಸಿ ಮಾರುತ್ತಿದ್ದಂತೆ ತೋರುತ್ತದೆ.[೧೦೮] ರೈತಾಪಿ ವರ್ಗದ ಜನ ತಮ್ಮ ವ್ಯವಸಾಯದ ಉಪಕರಣಗಳ ರಿಪೇರಿಗೆ ಬೆಳಿಗ್ಗೆಯೇ ಕಮ್ಮಾರನ ಮನೆಗೆ ಹೋಗಬೇಕಾಗುತ್ತಿತ್ತು. ಗ್ರಾಮದಲ್ಲಿ ಒಬ್ಬನೇ ಕಮ್ಮಾರ ಇರುವುದರಿಂದ ಎಲ್ಲರ ಪರಿಕರಗಳನ್ನು ಸರಿಪಡಿಸಿಕೊಡುವಲ್ಲಿ ವಿಳಂಬವಾಗಿ, ರೈತರಿಗೆ ಬೇಸರವುಂಟಾಗುತ್ತಿತ್ತೆಂದು ತೋರುತ್ತದೆ.[೧೦೯] ಈ ವಿಷಯವು ವಚನಗಳಲ್ಲಿ ಸೂಚಿತವಾಗಿದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ಕಮ್ಮಾರರು ಯಾವುದೇ ವಸ್ತುವನ್ನು ಸಿದ್ಧಗೊಳಿಸುವ ಮುನ್ನ ಕಬ್ಬಿಣವನ್ನು ಚೆನ್ನಾಗಿ ಕಾಯಿಸಬೇಕಾಗುತ್ತದೆ. ಹದವರಿತು ಕಾಯಿಸಬೇಕು. ಕಬ್ಬಿಣದಿಂದ

ದೊಡ್ಡ ದೊಡ್ಡ ವಸ್ತುಗಳನ್ನು ತಯಾರು ಮಾಡಬೇಕಾಗಿದ್ದಲ್ಲಿ ಮೇಲೆ ಬಲವಾದ ಪೆಟ್ಟುಗಳು ಬೀಳಬೇಕಾಗುತ್ತದೆ. ಆದ್ದರಿಂದ ಒಬ್ಬ ವ್ಯಕ್ತಿಯನ್ನು ಅಡಿಗಲ್ಲಿನ ಮೇಲಿರಿಸಿಕೊಂಡಿರುತ್ತಾನೆ. ಮತ್ತೊಬ್ಬ ವ್ಯಕ್ತಿ ದೊಡ್ಡ ಸುತ್ತಿಗೆಯಿಂದ ಬಲವಾದ ಪೆಟ್ಟುಗಳನ್ನು ಅದರ ಮೇಲೆ ಹಾಕುತ್ತಿರುತ್ತಾನೆ. ಆ ಸಂದರ್ಭದಲ್ಲಿ ಅದನ್ನು ಹಿಡಿದಿರುವ ವ್ಯಕ್ತಿ ಪೆಟ್ಟು ಬೀಳಬೇಕಾದ ಭಾಗವನ್ನು ನಿರ್ದೇಶಿಸುತ್ತಿರುತ್ತಾನೆ. ಆದರೆ ಸಣ್ಣಪುಟ್ಟ ವಸ್ತುಗಳನ್ನು ತಯಾರಿಸುವಾಗ ಒಬ್ಬನೇ ವ್ಯಕ್ತಿ ಕಾದ ಕಬ್ಬಿಣವನ್ನು ಇಕ್ಕಳದಿಂದ ಹಿಡಿದುಕೊಂಡು ಬೇಕಾದ ಆಕಾರಕ್ಕೆ ತಕ್ಕಂತೆ ಹೊರಳಿಸುತ್ತ, ಸಣ್ಣ ಸುತ್ತಿಗೆಯಿಂದ ಬಡಿಯುತ್ತ ಆಕಾರ ಕೊಡುತ್ತಾನೆ ಇದೆ ಮಾದರಿಯನ್ನು ಇಂದಿನ ಕಮ್ಮಾರ ಕೂಡ ಅನುಸರಿಸುತ್ತಿರುವುದನ್ನು ಕಾಣಬಹುದು.

ಕಮ್ಮಾರರು ಬಳಸುವ ಉಪಕರಣಗಲ್ಲಿ ತಿದಿ ಮುಖ್ಯವಾದುದು ಅದನ್ನು ಇವರೆ ತಯಾರಿಸಿಕೊಳ್ಳುತ್ತಾರೆ. ಹಸುವಿನ ಕರು, ಎಮ್ಮೆಯಕರು ಅಥವಾ ಕುರಿ, ಮೇಕೆ ಚರ್ಮ ಇವುಗಳನ್ನು ಬಳಸಿಕೊಂಡು ಸಿದ್ಧಪಡಿಸುತ್ತಾರೆ. ಪ್ರಾಣಿಗಳ ಚರ್ಮಗಳು ತೆಳುವಾಗಿದ್ದು ನಿರಿಗೆ ಮಾಡಲು ಸುಲಭವಾಗಿರುತ್ತದೆ. ಬಲಿತ ಪ್ರಾಣಿಗಳಾದ ಎಮ್ಮೆ ಮೊದಲಾದವುಗಳ ಚರ್ಮ ತುಸು ದಪ್ಪವಾಗಿ, ಒರಟಾಗಿರುವುದರಿಂದ ನಿರಿಗೆ ಮೂಡಸಲು ಕಷ್ಟವಾಗುತ್ತದಲ್ಲದೆ ನಿರಿಗೆಯ ಭಾಗದಲ್ಲಿ ಬೇಗ ಹರಿದು ಹೋಗುವ ಸಾಧ್ಯತೆಗಳು ಹೆಚ್ಚು ಕರುಗಳ ಚರ್ಮವನ್ನು ನಿರಿಗೆ ನಿರಿಗೆಯಾಗಿ ಮಡಚಿ ಅದರ ಮೇಲೆ ಹಲಗೆಯನ್ನಿಟ್ಟು ಮತ್ತೆ ಅದರ ಮೇಲೆ ಭಾರವಾದ ಕಲ್ಲು ಗುಂಡನ್ನು ಹೇರಿ ನಾಲ್ಕಾರು ದಿನಗಳವರೆಗೆ ಇಡುತ್ತಾರೆ ಇದು ಚೆನ್ನಾಗಿ ನಿರಿಗೆ ಮೂಡಿದ ನಂತರ ಅದರ ಕೆಳಭಾಗವನ್ನು ಒಂದು ಮರದ ಹಲಗೆಗೂ ಮತ್ತು ಮೇಲು ಭಾಗವನ್ನು ಇನ್ನೊಂದು ಹಲಗೆಗೂ ಜೋಡಿಸುತ್ತಾರೆ. ಮೇಲು ಭಾಗದ ಹಲಗೆಯಲ್ಲಿ ಸಣ್ಣ ರಂಧ್ರವಿದ್ದು ಚರ್ಮಕೋಶದಲ್ಲಿ ಗಾಳಿ ಸೇರಲು ಅವಕಾಶವಿರುತ್ತದೆ. ಗಾದಿಯ ಮುಂಭಾಗದಲ್ಲಿ ಸಣ್ಣ ರಂಧ್ರವಿದ್ದು, ಆ ಭಾಗದಲ್ಲಿ ತಗಡಿನ ಕೊಳವೆಯನ್ನು ಜೋಡಿಸುತ್ತಾರೆ. ಆ ಕೊಳವೆಯ ಮತ್ತೊಂದು ತುದಿಯನ್ನು ಓಲೆ ಭಾಗದಲ್ಲಿ ಜೋಡಿಸುತ್ತಾರೆ. ಹೀಗೆ ತಯಾರಿಸಿದ ತಿದಿಯ ಹಿಂಭಾಗದ ಹಲಗೆಯ ತಳಭಾಗದಲ್ಲಿ ಭಾರ ಉಂಟುಮಾಡುವ ಸಲುವಾಗಿ ಕಬ್ಬಿಣದ ಗುಂಡನ್ನು ಜೋಡಿಸಿ, ಅದಕ್ಕೆ ಕಬ್ಬಿಣದ ಸರಪಳಿಯನ್ನು ಕಟ್ಟಿ ತಿದಿಯ ಮೇಲು ಭಾಗದಲ್ಲಿ ಉದ್ದವಾಗಿ ಜೋಡಿಸಿರುವ ಬಿದಿರಿನ ಗಳಕ್ಕೆ ಬಂಧಿಸುತ್ತಾರೆ. ಅ ಗಳಕ್ಕೆ ಸನ್ನೆಯನ್ನು ಬಳಸಿರುತ್ತಾರೆ. ಆ ಗಳವನ್ನು ಕುಲುಮೆಯ ಮುಂಭಾಗಕ್ಕೆ ಬರುವಂತೆ ಜೋಡಿಸಿರುತ್ತಾರೆ. ಅದರ ಮುಂದಿನ ತುದಿಗೆ ಬಲವಾದ ಹಗ್ಗವನ್ನು ಅಥವಾ ಕಬ್ಬಿಣದ ಸರಕಳಿಯನ್ನು ಜೋಡಿಸಿ ಸರಾಗವಾಗಿ ಎಳೆಯಲು ಅನುವು ಮಾಡಿಕೊಂಡಿರುತ್ತಾರೆ. ಆಗಳವನ್ನು ಕೆಳಗೆ ಎಳೆದಾಗ ಚರ್ಮದ ಕೋಶವು ಸಂಕುಚಿತಗೊಂಡು ಹಲಗೆಯ ರಂಧ್ರವು ಮುಚ್ಚಿಕೊಳ್ಳುತ್ತದೆ. ಅಲ್ಲಿಗಾಗಲೆ ಆ ಕೋಶದಲ್ಲಿರುವ ಒಲೆ ಭಾಗದಲ್ಲಿ ಜೋಡಿಸಿರುವ ಕೊಳವೆಯ ಮೂಲಕ ಕುಲುಮೆಗೆ ಹೋಗುತ್ತದೆ ಮತ್ತೆ ಗಳವನ್ನು ಬಿಟ್ಟಾಗ ಚರ್ಮದ ಕೋಶವು ವಿಕಾಸನಗೊಂಡು ಮೇಲಿನ ಹಲಗೆಯ ರಂಧ್ರದ ಮೂಲಕ ಗಾಳಿಯು ಕೋಶದೊಳಗಡೆ ಸೇರಿಕೊಳ್ಳುತ್ತದೆ ಹೀಗೆ ಗಳವನ್ನು ಸಾವಕಾಶವಾಗಿ ಮೇಲಕ್ಕೆ ಕೆಳಕೆ ಆಡಿಸುವುದರ ಮೂಲಕ ಕುಲುಮೆಗೆ ಗಾಳಿ ಸರಬರಾಜಾಗುವುದರಿಂದ ಬೆಂಕಿ ಅಥವಾ ಉರಿ ಮೂಡುತ್ತದೆ ಶಾಖ ಹೊಮ್ಮುತ್ತಿರುತ್ತದೆ.

ಬೆಂಕಿ ಮಾಡಲು ಇದ್ದಿಲು, ಇದ್ದಿಲು ಉರಿಹತ್ತಿ ಬೇಗ ಸುಟ್ಟು ಹೋಗಬಾರದು ಮತ್ತು ಕಬ್ಬಿಣ ಬಹುಬೇಗ ಕಾವುಗೊಳ್ಳುವುದರ ಸಲುವಾಗಿ ಇದ್ದಿಲು ಮೇಲೆ ಹಾಕುವ ಗೊಳಲಿ ಇವು ಕಂಬಾರ ಕಸುಬಿನಲ್ಲಿ ಅಗತ್ಯವಿರುವ ಇತರ ವಸ್ತುಗಳು. ಕಮ್ಮಾರ, ವ್ಯವಸಾಯ ಯುದ್ಧದ ಗೃಹಪೊಯೋಗಿ ಉಪಕರಣಗಳನ್ನು ಮಾಡುತ್ತಾನೆ. ಈ ವೈವಿದ್ಯ ಪೂರ್ಣ ಉಪಕರಣಗಳನ್ನು ತಯಾರಿಸಲು ಕಮ್ಮಾರನು ತಿದಿ ಮತ್ತು ಇದ್ದಿಲುಗಳ ಸಹಾಯದಿಂದ ಕುಲುಮೆಯಲ್ಲಿ ಕಬ್ಬಿಣವನ್ನ ಕೆಂಪುಬಣ್ಣಕ್ಕೆ ಬರುವವರೆಗೂ ಕಾಯಿಸುತ್ತಾನೆ. ಆಮೇಲೆ ಎಡಗೈ ಇಕ್ಕುಳದಿಂದ ಹಿಡಿದೆತ್ತಿ ಅಡಿಗಲ್ಲಿನ ಮೆಲಿಟ್ಟು ಬಲಗೈ ಸುತ್ತಿಗೆಯಿಂದ ಅದರ ಮೇಲೆ ಕುಟ್ಟುತ್ತಾನೆ. ಕುಟ್ಟುವಾಗ ತಾನು ನಿರೀಕ್ಷಿಸಿದ ಆಕಾರ ಪಡೆಯಲು ಅದನ್ನು ಅತ್ತ ಇತ್ತು ಹೊರಳಾಡಿಸಿ ನೋಡುತ್ತಾನೆ ಮಾಡಬೇಕಾದ ಸಾಮಾಗ್ರ ದೊಡ್ಡದಿದ್ದರೆ ಒಬ್ಬ ಅಥವಾ ಇಬ್ಬರು ಸುತ್ತಿಗೆಯಿಂದ ಇಬ್ಬರು ಏಕಕಾಲಕ್ಕೆ ಪೆಟ್ಟಿನ ಮೇಲೆ ಪೆಟ್ಟು ಹಾಕಿ ಅದನ್ನು ಮಣಿಸುವರು.

ಕಬ್ಬಿಣ ಕಾಯಿಸುವ, ಅದರ ಮೇಲೆ ಪೆಟ್ಟುಹಾಕುವ ಅರಣ್ಯದಿಂದ ತಿಕ್ಕಿ ಕುಡುಗೊಲು ಕೊಡಲಿಗಳಂಥ ಸಲಕರಣೆಗಳನ್ನು ಹರಿತಗೊಳಿಸುವ ಕಾದ ಉಪಕರಣಗಳಿಗೆ ನೀರು ಕುಡಿಸುವ ಹದ ಕಮ್ಮಾರನಿಗೆ ಚೆನ್ನಾಗಿ ಗೊತ್ತಿರಬೇಕಾಗುತ್ತದೆ. ಇಲ್ಲವಾದರೆ ತಯಾರಿಸಿದ ಕಬ್ಬಿಣದ ಉಪಕರಣವಾಗಲಿ ಅಥವಾ ಹಳೆಯ ಉಪಕರಣಕ್ಕಾಗಲಿ ಕಾಯಿಸಿದ ಮೇಲೆ ಹೆಚ್ಚು ನೀರುಣಿಸಿದರೆ ಬಿರುಸಿಗೊಂಡು, ಬಳಸುವಾಗ ಬಹುಬೇಗ ಮುರಿಯುತ್ತದೆ. ನೀರುಣಿಸುವುದು ಕಡಿಮೆಯಾದರೆ ಮೃದುಗೊಂಡು ಮಣಿಯುತ್ತದೆ. ಆದುದರಿಂದ ಕಾಯ್ದ ಆಯುಧ ನೀಲವರ್ಣಕ್ಕೆ ತಿರುಗುವಂತೆ ಮಾತ್ರ ಕಾಯಿಸಬೇಕೆಂಬುದು ಕಮ್ಮಾರನ ಅನುಭದ ಮಾತು.

ಕುಡುಗೋಲಿನಂತ ಉಪಕರಣಗಳಣ್ನು ಅರದಿಂದ ಬರಿ ಬಾಯಿ ಬಾಯಿ ತಿಕ್ಕಿ ಹೆಚ್ಚು ಹರಿತಗೊಳಿಸಿದರೆ ಬಳಸುವಾಗ ಬಹುಬೇಗ ಮೊಂಡಾಗುತ್ತದೆ. ಹಾಗೆಯೇ ಕಬ್ಬಿಣವನ್ನು ಅತಿಯಾಗಿ ಕಾಯಿಸಿದರೆ ಅದು ತನ್ನ ಮೂಲಸತ್ವವನ್ನು ಕಳೆದುಕೊಳ್ಳುವ ಸಂಭವವಿರುತ್ತದೆ. ಚಕ್ಕಡಿಯಗಾಲಿಗೆ ಹಳಿಕಟ್ಟುವ ಕಮ್ಮಾರನಂತೂ ತುಂಬಾ ನುರಿತವನಿರಬೇಕಾಗುತ್ತದೆ. ಈ ಎಲ್ಲಾ ಜ್ಞಾನವನ್ನು ಅವನು ಪರಂಪರಗತವಾಗಿ ಕಲಿತು ಕೊಂಡು ಬಂದಿರುತ್ತಾನೆ.

ಬಡಗಿ

ಕಸುಬುದಾರರು ಹೇಗೆ ತಮ್ಮ ಕಸುಬುಗಳನ್ನು ಆಯ್ದುಕೊಂಡು ಅವುಗಳಲ್ಲಿ ಪರಿಣಿತರಾದರು ಎಂಬುದನ್ನು ತಿಳಿಯಬೇಕಾದರೆ ಆಯಾ ಜನಾಂಗಕ್ಕೆ ಸೇರಿದ ಪುರಾಣ, ಐತಿಹ್ಯ, ಹಾಡು, ಜನಪದ ಕಥೆಗಳಲ್ಲಿ ಕಂಡುಬರುತ್ತದೆ. ಅದರಂತೆ ಬಡಗಿ ಕಸುಬಿಗೆ ಸಂಬಂಧಿಸಿದ ಐತಿಹ್ಯವನ್ನು ನೋಡುವುದಾದರೆ.

ವಿಶ್ವಕರ್ಮ ಜಗತ್ತಿನ ಒಡೆಯ ಅವರು ಎಲ್ಲಾ ಜಾತಿ ಕುಲಮತ ಎನ್ನದೇ ಸಮನಾಗಿ ನೋಡುವ ಜಾಯಮಾನ ಅವರವರಿಗೆ ತಕ್ಕಂತೆ ಆಚಾರ, ವಿಚಾರ ನಂಬಿಕೆಗಳ ಜೊತೆಗೆ ಕಸುಬುಗಳನ್ನು ನೀಡುತ್ತಿದ್ದ ಸಂದರ್ಭ. ಒಂದು ದಿನ ವಿಶ್ವಕರ್ಮ ಎಲ್ಲರನ್ನು ಸಭೆಗೆ ಬರಲು ಹೇಳಿದ ಮೊದಲು ಬಂದವರಿಗೆ ಒಳ್ಳೆಯ ಕೆಲಸ ದೊರಕುತ್ತದೆ. ಎಂಬ ಹೇಳಿಕೆಯನ್ನು ಕೊಟ್ಟು ಹೀಗಿರುವಾಗ ಮೊದಲು ಅಕ್ಕಸಾಲಿಗ ಬಂದನು. ಅವನಿಗೆ ಬಂಗಾರದ ಕಸುಬನ್ನು (ಸುವರ್ಣಕಾರ) ವರ ನೀಡಿದನು. ನಂತರ ಬಂದವನು ಎರಕ ಹೊಯ್ಯುವ ಕೆಲಸ ಕೊಟ್ಟು ಅವನು ಕಂಚುಗಾರ ಎಂಬ ಹೆಸರು

ಪಡೆದ ಮೂರನೆಯವನಾಗಿ ಬಂದವನಿಗೆ ಶಿಲ್ಪಕಲೆಯ ಕಸುಬು ಪ್ರಾಪ್ತವಾಯಿತು. ಅವರಿಗೆ ಶಿಲ್ಪಗಳು ಎಂಬ ಹೆಸರು ಪ್ರಚಲಿತಕ್ಕೆ ಬಂದಿತು. ನಾಲ್ಕನೆಯವನು ಬಂದಾಗ ಅವನಿಗೆ ಕಬ್ಬಿಣ ಕಾಸಿ ಬಡಿಯುವ ಕಸುಬು ವರ ನೀಡಿದ ಅವನೇ ಕಮ್ಮಾರ. ಇವರೆಲ್ಲರೂ ಒಂದು ತಮಗೆ ದೊರೆತ ಕಸುಬು ಮತ್ತು ಉಪಕರಣಗಳನ್ನು ತೆಗೆದುಕೊಂಡು ಹೋದರು. ಇನ್ನೊಬ್ಬ ಉಳಿದಿದ್ದ ಅವನಿಗೆ ವಿಶ್ವಕರ್ಮ ಹೇಳಿ ಕಳಿಸಿದ ಅವನು ಬರಲೇ ಇಲ್ಲ. ಆ ಮೇಲೆ ಬರುತ್ತೇನೆಂದು ಹೇಳಿ ಕಳಿಸಿದ ವಿಶ್ವಕರ್ಮ ಅವನಿದ್ದಲ್ಲಿಗೆ ಹೋಗಿ ಬರುತ್ತೇನೆಂದು ಹೊರಡುವಾಗ ಇವನು ಬಂದನು. ಆಗ ವಿಶ್ವಕರ್ಮ ಅವನ ಮೇಲೆಕೋಪಗೊಂಡು ಟಿಕ್ ಅಂದ್ರೆ ಅಕ್ಕಿ ಬಾನು, ನೀನು ನಿನ್ನ ಹೊಟ್ಟೆ ತುಂಬಿಸಿಕೊಳ್ಳಲು ಈ ಬಡಗಿ ಕಸುಬನ್ನೇ ಮುಂದುವರಸಿಕೊಂಡು ಹೋಗುವ ಎಂದು ಹೇಳಿದ ಅವನು ಬಡಗಿ ಎಂಬ ಹೆಸರಿನಿಂದ ಪರಿಚಯವಾದ ಇವನಿಗೆ ಮುಂಜಾವಿನಿಂದ ರಾತ್ರಿವರೆಗೂ ಬೆವರಿಸಿ ದುಡಿದರೆ ಮಾತ್ರ ನಿನ್ನ ಹೆಂಡತಿ, ಮಕ್ಕಳಿಗೆ ಗಂಜಿ, ಇಲ್ಲದಿದ್ದರೆ ಇಲ್ಲ ಎಂದು ಶಾಪರೂಪದ ವರ ನೀಡಿದ ನೀನು ಬಹಳ ಬುದ್ಧಿವಂತ, ನಿನ್ನಗ್ರಚಾರ ಬಂದಿದ್ದನ್ನು ಅನುಭವಿಸುವ ಎಂದು ಹೇಳಿ ಹೋರಟು ಹೋದನು. ಪ್ರಸ್ತುತ ಸಂದರ್ಭದಲ್ಲಿಯ ಸಹ ಬಡಗಿಯ ಕಸುಬು ಕಷ್ಟಕರವಾಗಿರುವುದನ್ನು ನೋಡಬಹುದು.

ಬಡಗಿಯನ್ನು ಕುರಿತು ಜಾನಪದ ಹಾಡು ಬಡಗಿ ಕಸುಬಿನ ಚಿತ್ರಣವನ್ನು ತಿಳಿಸುತ್ತದೆ.[೧೧೦]
ಬಾಗೂರ ಬಡಗಿಯ ಬರಹೇಳಿ

ಭಾರೀ (ಗುಳವಾಟ) ಉಳಿಬಾಚಿ ಸಹವಾಗಿ ರಂಗಯ್ಯ
ಭಾರೀಯ ತೆರು ಕಡೆದಾರು!!
ತಿಟ್ಟೂರ ಬಡಗಿಯ ಥಟ್ಟನೇ ಬರಹೇಳಿ
ಕಟ್ಟಿ ಉಳಿ ಬಾಚಿ ಸಹವಾಗಿ! ರಂಗಯ್ಯ
ಭಾರೀಯ ತೇರು ಕಡದಾರು!!
ಬಡಿಗೇರ ಬಂದಾಗವ್ವ ಬಡಿವಾರ ನೋಡಿರೆ
ಬಡಬಾಯಿ ತುಂಬಿ ಎಲಿ-ಅಡಿಕೆ/ಹೆಣೆಮ್ಯಾಲೆ
ಬಂಡಿಗಾಲೆಂಥ ಕುಂಕುಮಾ
ಕಂದವ್ವ ನೆತ್ತಿಕೊಂಡ ಕಂಡೆ ಬಡಿಗೇರ ಮನೆಯ
ಸದ್ಯಕ್ಕೆ ಬೇಕಣ್ಣ ಕಡಗೋಲು ನಮ್ಮನಿಯ
ಕಾಳಮ್ಮ ಹಾಲು ಕಡೋದ್ಯೆತಿ।
ಬಡಿಗೇರ ಓಣ್ಯಾಗ ಸೆಡಗಿನ್ನೇನ್ಹೇಳಲಿ
ಬಿಳಿಯಂಗಿ ಬೆಳ್ಳಿ ಉಡುದಾರ। ಹಾಕ್ಕೊಂಡು
ಬಡಿಗೆಣ್ಣ ಸೆಡ್ಡೆ ಬಿಗುದಾನೋ।।
ಉಕ್ಕಿನ ಉಳಿಬಾಚಿ ಹತ್ತೆಳೆಯ ಜನಿವಾರ
ಮುತ್ತು ಸುರಿದ್ಹಾಂಗ ಬೇವತಾನ। ಮಾನಪ್ಪ
ಅಚ್ಚು ಬಡಿಗ್ಯಾರ ಮಗನವ್ವ

ಐತಿಹ್ಯ

ಒಮ್ಮೆ ಶಿವ ಮತ್ತು ಪಾರ್ವತಿಯರ ನಡುವೆ ಚರ್ಚೆ ಆರಂಭವಾಗುತ್ತದೆ. ತಮ್ಮಿಬ್ಬರಲ್ಲಿ ಯಾರು ಅಂದಾವಾಗಿದ್ದಾರೆಂಬುದು ಅವರ ಸಮಸ್ಯೆ. ಅಲ್ಲಿಗೆ ದೇವಾನುದೇವತೆಗಳನ್ನು ಸೇರಿಸಿ ತಮ್ಮಿಬ್ಬರಲ್ಲಿ ಯಾರು ಚೆನ್ನಾಗಿರುವವರು ಎಂದು ಪ್ರಶ್ನಿಸಿದರು. ಆಗ ದೇವತೆಗಳಲ್ಲಾ ಚಿಂತಿಸಿ ತಮ್ಮ ಉತ್ತರದಿಂದ

ಶಿವ ಎಲ್ಲಿ ಕೋಪಗೊಳ್ಳುವನೋ ಎಂದು ಹೆದರಿ ನಿಮ್ಮ ಪ್ರಶ್ನೆಗೆ ನಾರದ ಮಹಾತ್ಮರು ಉತ್ತರಿಸಬಲ್ಲರು ಎನ್ನುತ್ತಾರೆ. ನಾರದನನ್ನು ಪ್ರಶ್ನಿಸಿದಾಗ ಆತನೂ ಉತ್ತರಿಸದೆ ವಿಶ್ವಕರ್ಮನನ್ನ ಪ್ರಶ್ನಿಸಿದರೆ ಉತ್ತರಿಸ ಬಲ್ಲ ಎಂದು ಸಲಹೆ ಕೊಡುತ್ತಾನೆ. ವಿಶ್ವಕರ್ಮನನ್ನು ಕರೆಸಿ ಪ್ರಶ್ನಸಿದಾಗ ಆತನೂ ಸಹ ಉತ್ತರಿಸಿದೆ ಚೆನ್ನಾಗಿ ಹೊಳೆಯುವ ದರ್ಪಣವನ್ನು ತಯಾರಿಸಿ ತಂದು ನಿಮ್ಮ ನಿಮ್ಮ ಮುಖವನ್ನೇ ನೀವೇ ನೋಡಿಕೊಳ್ಳಿ ಎಂದು ಹೇಳುತ್ತಾನೆ.

ಆದರೆ ಅದರ ಸಹಾಯದಿಂದ ತಮ್ಮ ಸೌಂದರ್ಯವನ್ನು ನೋಡಿ ಸಂತೋಷಪಟ್ಟು ಶಿವ ನಿನಗೇನು ವರ ಬೇಕು ಕೇಳು ಎನ್ನುತ್ತಾನೆ. ಅದಕ್ಕೆ ವಿಶ್ವಕರ್ಮ ನನಗೆ ಸಕಲವು ಇರುವುದರಿಂದ ಯಾವ ವರವು ಬೇಡವನ್ನುತ್ತಾನೆ ಕುಪಿತನಾದ ಶಿವ ಹಾಗಾದರೆ ನಿನಗೆ ದರಿದ್ರವುಂಟಾಗಲಿ ಎಂದು ಶಪಿಸುತ್ತಾನೆ. ಪ್ರತಿಯಾಗಿ ಪ್ರತಿಯಾಗಿ ವಿಶ್ವಕರ್ಮನೂ ಆತನಿಗೆ ನೀನು ಗುಂಡುಕೆಲ್ಲಾಗು ಎಂದು ಶಾಪ ನೀಡಿದನು. ಶಿವ ಗುಂಡುಕಲ್ಲಾದಾಗ ಪಾರ್ತಿತಿಯು ನನ್ನ ಪತಿ ನನಗೆ ಬೇಕೆಂದು ಕೇಳಿಕೊಳ್ಳುವುದರೊಂದಿಗೆ ನಿನಗೆ ಪೂರ್ಣ ದರಿದ್ರ ಉಂಟಾಗದಿರಲಿ ಎಂದು ವರ ನೀಡಿದಳಂತೆ ಅಂದಿನಿಂದ ಇಂದಿನವರೆಗೂ ತಾವೇಷ್ಟೇ ಸಂಪಾಧಿಸಿದರೂ ಅವರ ಕೈಯಲ್ಲಿ ಏನೂ ಉಳಿಯದೆ ಅತಿ ಬಡವರು ಅಲ್ಲದೆ ಅತಿ ಶ್ರೀಮಂತರೂ ಅಲ್ಲದ ಮಧ್ಯಮ ಸ್ಥಿತಿಯಲ್ಲಿ ಜೀವನ ಮಾಡುತ್ತಿದ್ದಾರಂತೆ ಪಾರ್ವತಿಯು ವರ ನೀಡಿದ ಪರಿಣಾಮವಾಗಿ ಈ ಕಸುಬಿನವರು ಇಂದಿಗೂ ಹಿಂದುಳಿದ ವರ್ಗಕ್ಕೆ ಸೇರಿಕೊಂಡು ಬಂದಿದ್ದಾರೆ.

ಆಯಾಗಾರರಲ್ಲಿ ಈ ಕಸುಬು ಪ್ರಮುಖವಾಗಿ ಕಂಡುಬರುತ್ತದೆ. ಬಡಗಿ–ಬಡಿಗಿ–ಬಡಿಗಾರ, ಬಡಿಗೇರ ಎಂಬ ಅಚ್ಚಕನ್ನಡ ಪದಗಳ ಸಂಸ್ಕೃತದ ವಚನ (=ಕತ್ತರಿಸು–ಕಡಿ) ವರ್ಧಕಿ–ವದ್ದಕಿ, ಬಡ್ಡಕಿ–(ಗಿ) ಇತ್ಯಾದಿಯಾಗಿ ಬೆಳೆದು ಬಂದಿರಬಹುದೆಂಬುದನ್ನು ಭಾಷಾಶಾಸ್ತ್ರದ (ಬಡ+ಕಿ(ಗಿ) ಅಚ್ಚಕನ್ನಡವೆಂದು ತೊರುತ್ತದೆ. ಅದು ಸಂಸ್ಕೃತಕ್ಕೆ ಭಾಷಾಂತರವಾಗುವಾಗ ವರ್ಧಕಿ ಆಗಿರಬಹುದು. ಅಥವಾ ಈ ಎರಡೂ ಸ್ವತಂತ್ರವಾಗಿಯೂ ರೂಪಿತವಾಗಿರುವ ಸಾಧ್ಯತೆಗಳಿವೆ.

ಪ್ರಾಚೀನ ಕಾಲದಿಂದಲೂ ಈ ಕಸುಬು ಇದ್ದುದಾಗಿ ಮನುಸ್ಮೃತಿ, ವಿಷ್ಣುಪುರಾಣ ಹಾಗೂ ಕೌಟಿಲ್ಯನ ಅರ್ಥಶಾಸ್ತ್ರಗಳಿಂದ ತಿಳಿದುಬರುತ್ತದೆ.[೧೧೧] ಪ್ರಾಚೀನ ಕಾಲದ ಬಡಗಿಗಳನ್ನು ಅರೆಕುಶಲ ಬಡಗಿ ಮತ್ತು ಕುಶಲಬಡಗಿ ಎಂದು ಎಸ್. ಗುರುರಾಜಾಚಾರ್ ಎರಡು ಭಾಗ ಮಾಡುತ್ತಾರೆ.[೧೧೨] ದಿನನಿತ್ಯದ ಸಾಮಾನ್ಯ ಜನರು ಉಪಯೋಗಿಸುವ ಪೀಠೋಪಕರಣಗಳು, ನೇಗಿಲು, ಎತ್ತಿನಗಾಡಿ ಮನೆಮುಟ್ಟು ಇತ್ಯಾದಿ ಉಪಕರಣಗಳನ್ನು ಮಾಡುವವರು ಮೊದಲನೆ ಗುಂಪಿಗೆ ಸೆರಿದರೆ. ಅರಸ, ಅಧಿಕಾರಿವರ್ಗದವರ ಅಭಿರುಚಿಗೆ ಅನುಗುಣವಾಗಿ ಸೂಕ್ಷ್ಮ ಕೆತ್ತನೆ ಕೆಲಸ ಹಾಗೂ ಪರಿಕರದ ವಿಶೇಷವಾದ ಮರದ ದೇವಸ್ಥಾನ ಹಾಗೂ ರಥಗಳನ್ನು ಮಾಡುವವರನ್ನು ಎರಡನೆಯ ಗುಂಪಿಗೆ ಸೇರಿಸಬಹುದು.

ಬಡಗಿಯು ಮರ ಕಡಿದು, ಕೆತ್ತಿ ಗೃಹ ನಿರ್ಮಾಣ, ಗೃಹೋಪಯೋಗಿ, ರೈತೊಪಯೋಗಿ ಉಪಕರಣಗಳು ಮುಂತಾದವುಗಳನ್ನು ಪಾರಂಪರಿಕವಾಗಿ ಮಾಡುತ್ತ ಬಂದಿರುವ ಕಸುಬಿಗೆ ಬಡಗಿತನ ಎನ್ನುವರು. ಇವರು ತಮ್ಮದೇ ಆದ ಉಪಕರಣಗಳ ಮೂಲಕ ಕಸುಬನ್ನು ಮಾಡುತ್ತಿದ್ದರು.

'ಬಡಗಿಯಂತೆ ಉಳಿ ಎನ್ನುತ್ತುಂ' ಎಂಬ ನಯಸೇನನ ಮಾತು ಬಡಗಿಯು ಉಪಯೋಗಿಸುತ್ತಿದ್ದ ಉಳಿಯನ್ನು ಸೂಚಿಸುತ್ತದೆ.[೧೧೩] ಮತ್ತೊಂದು ಕಡೆ ಅವನು ಬಡಗಿಯಂತೆ ಕೆತ್ತುವರ್ ಎಂದು ಹೇಳಿದ್ದಾನೆ.[೧೧೪]

ಬಡಗಿತನಕ್ಕೆ ಚಾಚಿಕಾಯಕವೆಂತಲೂ ಕರೆಯುತ್ತಿದ್ದರು. ಬಡಗಿಯ ಕೆಲಸದಲ್ಲಿ ಬಾಚಿಗಿರುವ ಪ್ರಾಮುಖ್ಯತೆಯೆ ಪ್ರಾಯಶಃ ಈ ಕಸುಬಿಗೆ, ಬಾಚಿ ಕಾಯಕವೆಂದು ಕರೆಯುತ್ತಿರಬಹುದು. ಬಾಚಿ ಕಾಯಕ ಬಸವಣ್ಣನೆಂಬ ವಚನಕಾರ, ಶರಣ ಕಾಲದ ಬಡಗಿ, ಈತನ ವಚನವೊಂದು ಹೀಗಿದೆ.[೧೧೫]

ಮೂರಂಗುಲದಲ್ಲಿ ಅಳೆದು, ಐದಂಗುಲದಲ್ಲಿ ಪ್ರಯಾಣಿಸಿ
ಆರಂಗುಲದಲ್ಲಿ ವಟ್ಟಕ್ಕೆ ಶುದ್ಧವಾಯಿತ್ತು
ಎಂಟರಳತೆ ಹದಿನಾರರ ಚದುರಸ
ಮೂವತ್ತೆರಡರ ಮಧ್ಯದಲ್ಲಿ ಹಸ್ತಕಂಬಿಯನಿಕ್ಕಿ
ಮೂರರಲ್ಲಿ ಭಾಗಿಸಲಾಗಿ, ಎರಡರ ಒಳಗೆ ನಿಂದಿತ್ತು.
ಒಂದು ಹೊರಗಾದ ಕೈಸಾಲೆಯಾಯಿತ್ತು.
ಈ ಕೆಲಸವ ಹೊರಗೆ ಬಾಚಿಯಲ್ಲಿ ಸವೆದೆ,
ಒಳಗೆ ಉಳಿಯಲ್ಲಿ ಸವೆದೆ, ಇಂತೀ ತೆರನ ತಿಳಿದಡೆ
ಬಸವಣ್ಣಪ್ರಿಯ ವಿಶ್ವಕರ್ಮವಕ್ಕೆ
ಕಾಳಿಕಾವಿಮಲ ರಾಜೇಶ್ವರಲಿಂಗವಲ್ಲದಿಲ್ಲಾ ಎಂದೆ

ಬಡಗಿತನದಲ್ಲಿ ಕಟ್ಟಿಗೆಯ ವಸ್ತುಗಳನ್ನು ಮಾಡುವಾಗ ಅನೇಕ ಕೈ ಕೆಲಸದ ಉಪಕರಣವನ್ನು ಬಳಸುವುದುಂಟು ಉಪಕರಣಗಳ ವಿನ್ಯಾಸ, ಗಾತ್ರ ಆಯಾ ಪ್ರದೇಶದಲ್ಲಿ ಕೆಲಸ ಮಾಡುವ ಪದ್ಧತಿಯನ್ನವಲಂಬಿಸಿರುತ್ತದೆ. ಬಡಗಿಗಳು ಮರಕೆಲಸದ ಜೊತೆ ಕೆಲವು ಸಂದರ್ಭಗಳಲ್ಲಿ ಶಿಲಾಕರ್ಮದಲ್ಲೂ ತೊಡಗಿಕೊಂಡಿರುವುದನ್ನು ಶಾಸನಗಳ ಮೂಲಕ ತಿಳಿಯಬಹುದು. ಮಾನವನು ಕಲ್ಲು ಅಥವಾ ಶಿಲೆಯನ್ನು ವಾಸ್ತುರಚನೆಯಲ್ಲಿ ಬಳಸಿಕೊಳ್ಳುವ ಮೊದಲು ಮರವನ್ನು ಮಾಧ್ಯಮವಾನ್ನಾಗಿ ಉಪಯೋಗಿಸಿಕೊಂಡಿರಬಹುದೆಂದು ನಂಬಲಾಗಿದೆ. ಶಿಲ್ಪ ಮತ್ತು ವಾಸ್ತುಶಿಲ್ಪಗಳಲ್ಲಿನ ಪ್ರಾರಂಭದ ಶಿಲಾರಚನೆಗಳು ಕಾಷ್ಠಶಿಲ್ಪಗಳ ಅನುಕರಣೆಗಳೆ ಎನ್ನಬಹುದು. ಇವರು ಗೃಹೋಪಯೋಗಿ ವಸ್ತುಗಳು, ಕೃಷಿ ಉಪಕರಣಗಳು ಹಾಗೂ ದೇವಸ್ಥಾನಕ್ಕೆ ಸಂಬಂಧಿಸಿದ ಮರಗೆಲಸಗಳನ್ನು ಮಾಡುತ್ತಿದುದಲ್ಲದೆ ರಥಗಳನ್ನು ತಯಾರಿಸುತ್ತಿದ್ದರು. ಶಿಲಾಶಾಸನಗಳ ಕಂಡರಣೆಯಂತಹ ಕಾರ್ಯದಲ್ಲಿ ತೊಡಗಿದುದು ಶಾಸನಗಳ ಮೂಲಕ ಗೊತ್ತಾಗುತ್ತದೆ. ಈ ಸಂಬಂಧಿಸಿ ಕೆಲವು ಶಾಸನೋಲ್ಲೆಖಗಳಿವೆ.

ಕ್ರಿ.ಶ. ೧೧೧೭೨ರ ಕೃಷ್ಣರಾಜಪೇಟೆಯ ಶಾಸನವು ವಿಶ್ವಕರ್ಮ ತೋಟಾಕಾಚಾರ್ಯರಪ್ಪ ಹಸ್ತಕುಸಲತೆಯೊಳು ಹೇಮಕರ್ಮ್ಮ, ಲೋಹಕರ್ಮ್ಮ, ಶಿಲಾಕರ್ಮ್ಮ, ರತ್ನಕರ್ಮ್ಮ, ಕಾಷ್ಟಕರ್ಮ್ಮ, ಚಿತ್ರಕರ್ಮ್ಮ, ಪತ್ರಕರ್ಮ ಪ್ರತಿಮಾ ಲಕ್ಷಣ ಸಮಸ್ತ ಹಸ್ತಕುಶಲತೆಯುಳ್ಳ ವಿಶ್ವಕರ್ಮ ನಿಮಿತಮಪ ಗವರಾಚಾರ್ಯನಾತನ ಪುತ್ರ ಕುಲೋದ್ಭವನಪ್ಪ ಹೊಯ್ಸಳಾಚಾರ್ಯನಾತನ ಪುತ್ರಂ ಎಂದು ಉಲ್ಲೇಖಿಸುತ್ತದೆ.[೧೧೬] ಇಲ್ಲಿ ಒಂದು ಮನೆಯಲ್ಲಿ ವಿವಿಧ ಕಸುಬುಗಳನ್ನು ಅಂದರೆ ಹೇಮಕರ್ಮ, ಲೋಹಕರ್ಮ, ಶಿಲಾಕರ್ಮ, ರತ್ನಕರ್ಮ, ಕಾಷ್ಠಕರ್ಮ, ಚಿತ್ರಕರ್ಮ, ಪತ್ರಕರ್ಮ, ಪ್ರತಿಮಾಕರ್ಮ ಇತ್ಯಾದಿ ಕಸುಬುಗಳನ್ನು ಮಾಡುತ್ತಿದ್ದು ಇದರಲ್ಲೇ ನಿಷ್ಣಾತರಾದ ಉಲ್ಲೇಖಗಳು ಈ ಶಾಸನದಿಂದ ತಿಳಿಯುವುದು ಇದರಿಂದ ಒಂದೆ ಮನೆಯಲ್ಲಿ ಈ ಎಲ್ಲಾ ರೀತಿಯ ವೃತ್ತಿಯ ಶಿಕ್ಷಣ ಅವರ

ಮಕ್ಕಳು, ಮೊಮ್ಮಕ್ಕಳಿಗೆ ದೊರೆಯುತ್ತಿದ್ದು ಅವರು ತಮ್ಮ ಆಸಕ್ತಿ ವೃತ್ತಿಯನ್ನು ಆಯ್ಕೆ ಮಾಡಿಕೊಂಡು ಮುಂದುವರೆಯಬಹುದಿತ್ತು.

ವಡ್ಡಾರಾಧನೆಯ ಗುರುದತ್ತಭಟ್ಟಾರಕರ ಕಥೆಯಲ್ಲಿ ಪರಿಣಿತ ಕಸುಬುಗಳ ಉಲ್ಲೇಖ ಬಂದಿದೆ. ಧಾತ್ರಿವಾಹನನೆಂಬ ಅರಸು ವಿಶ್ವಕರ್ಮ, ವಿಶ್ವಮತಿ, ಎಂಬ ಇಬ್ಬರು ಬಡಗಿಗಳನ್ನು ಕರೆಸಿ ಆರುತಿಂಗಳೊಳಗೆ ನೀವಿರ್ವರು ವೊರೋರ್ವರಯಲ್ಕಾರು ರಥಂಗಳಂ ಬೇಗಂ ಮಾಡಿಯೆನಗೊಪ್ಪಿಸವೇರ್ಕುಮೆಂದು ಹೇಳಿದನು. ಅರಸನ ಆಜ್ಞೆಯಂತೆ ಆರು ತಿಂಗಳುಗಳಲ್ಲಿ ವಿಶ್ವಮತಿಯು ಐನೂರು ರಥಗಳನ್ನು ಪೂರ್ತಿಯಾಗಿ ಮಾಡಿ ತಂದು ರಾಜನಿಗೆ ತೋರಿಸಿದನು. ಆಗ ರಾಜನು ಕಂಡು ಅವನ ಮೇಲೆ ಬಹಳ ಪ್ರೀತಿಯಿಟ್ಟು ಅವನಿಗೆ ತೃಪ್ತಿಯಾಗುವ ದಾನವನ್ನಿತ್ತನು. ಇದರಿಂದ ಬಡಗಿಗಳು ತಮ್ಮ ಕೆಲಸದಲ್ಲಿ ಎಷ್ಟೊಂದು ಪರಿಣತಿ ಹೊಂದಿದ್ದರೆಂದು ತಿಳಿದುಬರುತ್ತದೆ. ಇನ್ನೂ ವಿಶ್ವಕರ್ಮನು ನಿರ್ಮಿಸಿದ ಗಾಲಿಯುಂ ಪದಿನಯ್ದುದಿವಸಂಬರೆಗಂ ತನಗೆ ತಾನೆಯಂತಂಕ್ಷದೊಳ್ ನೆಲನಂ ಮುಟ್ಟದೆ ತಃಕನೆ ತಿರಿಯುತ್ತಿರ್ದುದಂ ಎಂಬುದನ್ನು ನೋಡಿದಾಗ ಅವರು ಅಪ್ರತಿಮ ಕೌಶಲ್ಯವುಳ್ಳವರಾಗಿದ್ದರೆಂದು ಗೊತ್ತಾಗುತ್ತದೆ.

ಬಡಗಿಯು ರೈತನ ವ್ಯವಸಾಯಕ್ಕೆ ಬೇಕಾದ ವಸ್ತುಗಳ ಗೃಹೋಪಕರಣ, ಮಕ್ಕಳ ಆಟಿಕೆಯ ಸಾಮಾನುಗಳು ಗ್ರಾಮದ ದೇವದೇವತೆಯರ ವಿಗ್ರಹ ಇತ್ಯಾದಿಗಳನ್ನು ನಾನಾ ಬಗೆಯ ಮರಗಳಿಂದ ತನ್ನದೆ ಆದ ತಂತ್ರಜ್ಞಾನ ಬಳಸಿ ಮಾಡುತ್ತಾನೆ. ನಾನಾ ಬಗೆಯ ಮರಗಳಿಂದ ಉಪಕರಣಗಳನ್ನು ತಯಾರಿಸಲು ಬಡಗಿಯು ಕಬ್ಬಿಣ ಮತ್ತು ಕಟ್ಟಿಗೆಯ ಹಲವಾರು ಆಯುಧಗಳನ್ನು ಬಳಸುತ್ತಾನೆ. ಮರ ಕಡಿಯುವ ದೊಡ್ಡ ಕೊಡಲಿ, ಕೆತ್ತುವ ಬಾಚಿ ಕೈಬಾಚಿ, ಮರಕೊಯ್ಯುವ ಕರಗಸ, ಕೈಕರಗಸ, ಉಳಿ, ಕಿರುಳಿ, ಮಟ್ಟಲಿನ ಗಿರಿಮೀಟು, ಕಟ್ಟಿಗೆಯ ಸಣ್ಣ ಮತ್ತು ದೊಡ್ಡ ಕೊಡಲಿಗಳು ಮುಂತಾದವು ಆತನ ಉದ್ಯೋಗದ ಪ್ರಮುಖ ಆಯುಧಗಳಾದರೆ, ಮೇಣ, ಪಾಲಿಶ್ ಆಯುಧ, ಮಸೆಯುವ ಕಲ್ಲು, ನೂಲುದಾರ, ಅದನ್ನು ತಿದ್ದಲು ಬೇಕಾಗುವ ಕ್ಯಾವಿ, ನೀರು ಇವಿಷ್ಟು ಇತರೆ ವಸ್ತುಗಳು.

ಇವನು ತನ್ನ ಮನೆಯ ಹೊರಭಾಗದಲ್ಲಿ ಕೆಲಸ ಆರಂಭಿಸುತ್ತಾನೆ. ಈ ಕಸುಬನ್ನು ಮಾಡುವ ಸ್ಥಳಕ್ಕೆ ಬಡಿಗಸಾಲೆ, ಬಡಿಸಾಲೆ[೧೧೭] ಎಂದು ಕರೆಯುವುದುಂಟು.

ಬಡಗಿಯು ತನ್ನ ಈ ಕಸುಬಿಗೆ ಬಂಡವಾಳ ತೊಡಗಿಸುವ ಅಗತ್ಯವಿಲ್ಲ ರೈತರು ತಮ್ಮಲ್ಲಿರುವ ಕಟ್ಟಿಗೆಯಿಂದಲೇ ತಮಗೆ ಬೇಕಾದ ಸಾಮಾನು ಮಾಡಿಸಿಕೊಳ್ಳುವರು ಇವನ ಕಾರ್ಯಕ್ಕೆ ರೈತನೇ ನೇರವಾಗುವರು, ಬಡಗಿಯು ಈ ರೀತಿ ವರ್ಷವಿಡಿ ಸೇವೆ ಮಾಡಿದ್ದಕ್ಕೆ ಕುಂಬಾರರಿಗೆ ಕೊಡುವಂತೆ ಆಯಾವನ್ನು ಈತನಿಗೂ ಕೊಡುವರು. ಮಕ್ಕಳ ಆಟದ ಸಾಮಾನು ಬಾಗಿಲು, ಹೊಸ್ತಿಲು, ತಯಾರಿಸಿದಾಗ ಕೂಲಿ ಪಡೆಯುವನು. ಹೊಸಬಂಡಿಯನ್ನು ತಯಾರಿಸಿದಾಗ ಗ್ರಾಮದ ದೇವತಾ ವಿಗ್ರಹ, ತೇರು ಇತ್ಯಾದಿಗಳನ್ನು ಮಾಡಿದಾಗಲೂ ಕೂಲಿ ಪಡೆಯುವನು. ಹೀಗೆ ಬಡಗಿಯು ತನ್ನದೆ ಆದ ಪಾರಂಪರಿಕ ಜ್ಞಾನದ ಮೂಲಕ ಕಸುಬನ್ನು ಮುಂದುವರೆಸಿರುವನು.

ಗಾಣಿಗರು

ಗಾಣಿಗ ಸಮುದಾಯದ ಮೂಲವನ್ನು ಕುರಿತು ಕುತೂಹಲಕಾರಿಯಾದ ಕತೆ ಇದೆ. ಪಾರ್ವತಿಯು

ತನ್ನ ಅರಮನೆಯಲ್ಲಿ ಶಿವನಿಲ್ಲದಾಗ ಅರಮನೆಯನ್ನು ಯಾರೂ ಕಾಯಲು ಇಲ್ಲದ್ದಕ್ಕಾಗಿ ಭಯವಾಯಿತು. ತನ್ನ ಬೆವರಿನಿಂದ ಗಣೇಶನನ್ನು ಸೃಷ್ಟಿಸಿ ಅರಮನೆಯನ್ನು ಕಾಯಲು ನೆಮಿಸಿದಳೂ. ಶಿವ ಮರಳಿ ಬಂದು ಒಳಗೆ ಹೋಗಬಯಸಿದಾಗ ಅವನ್ನನ್ನರಿಯದ ಬಾಲಕ ಅವನನ್ನು ಒಳಹೋಗದಂತೆ ತಡೆಗಟ್ಟಿದ ಶಿವ ಕೋಪದಿಂದ ಅವನ ಶಿರ ಕತ್ತರಿಸಿ ಒಳಗೆ ಹೋದ ಇದನ್ನರಿತ ಪಾರ್ವತಿಯು ಈಶ್ವರನನ್ನು ತನ್ನ ಮಗನನ್ನು ಬದುಕಿಸೆಂದು ಬೇಡಿಕೊಳ್ಳಲು ಶನಿಕಾಟದಿಂದ ಮಗುವಿನ ಶಿರವು ಮಾಯವಾಗಿತ್ತು. ದಕ್ಷಿಣ ದಿಕ್ಕಿಗೆ ಮುಖ ಮಾಡಿದ ಯಾವುದೇ ಜೀವಂತ ಪ್ರಾಣಿಯ ಶಿರ ದೊರೆತರೆ ಮಾತ್ರ ಅದನ್ನು ತಂದು ಜೋಡಿಸಿ ಸತ್ತವನನ್ನು ಜೀವಂತಗೊಳಿಸಬಹುದೆಂದು ಹೇಳಿದನು. ಅದೇ ಸಮಯಕ್ಕೆ ಅರಮನೆಯ ದಕ್ಷಿಣ ದಿಕ್ಕಿನ ಹೊರವಲಯದ ಒಬ್ಬ ವ್ಯಾಪಾರಿ ತನ್ನ ಆನೆಯೊಂದಿಗೆ ವಿರಮಿಸಿದ್ದ ಆ ಆನೆ ದಕ್ಷಿಣದತ್ತ ಮುಖಮಾಡಿ ಮಲಗಿತ್ತು. ಶಿವ ಆ ಕೂಡಲೇ ಅದರ ತಲೆ ಕತ್ತರಿಸಿ ತಂದು ಸತ್ತುಬಿದ್ದ ಶರೀರಕ್ಕೆ ಜೋಡಿಸಿ ಗಣೇಶನನ್ನು ಸಜೀವಗೊಳಿಸಿದ ತನ್ನ ಆನೆಯನ್ನು ಕಳೆದುಕೊಂಡ ವ್ಯಾಪಾರಿ ತನಗಾದ ಹಾನಿಗಾಗಿ ಇನ್ನೇನು ಗತಿ ಎಂದು ದುಃಖಿಸತೊಡಗಿದ ಅವನನ್ನು ಸಂತಯಿಸಿ ಬಯಸಿದ ಶಿವ ಅದವರೆಗೂ ಯಾರಿಗೂ ಗೊತ್ತಿಲ್ಲದ ಒನಕೆ, ಒರಳು ಸಲಕರಣೆಗಳನ್ನು ಸೃಷ್ಟಿಸಿ ಅದರಲ್ಲಿ ಎಣ್ಣೆಕಾಳು ಹಾಕಿ ರುಬ್ಬ ತೆಗೆಯುವ ವಿಧಾನ ತಿಳಿಸಿದ ಮುಂದೆ ಜೀವಿಸುವ ಬಗೆಯನ್ನು ತೋರಿಸಿದ ಅಂದಿನಿಂದ ಕಸುಬು ಮತ್ತು ವ್ಯಾಪಾರಿ ವಂಶಜರು ಎಣ್ಣೆತೆಗೆದು ಮಾರುವ ಕಸುಬು ಕೈಗೊಂಡರು ಅವನೇ ಪ್ರಪಂಚದ ಮೊದಲನೆ ಗಾಣಿಗ[೧೧೮] ಮತ್ತೊಂದು ಐತಿಹ್ಯ ರಾತ್ರಿ ಪ್ರಪಂಚದ ಕತ್ತಲನ್ನು ಪರಿಹರಿಸುವುದು ಈಶ್ವರನಿಗೆ ಅವಶ್ಯವಾಗಿತ್ತು ಶಿವ ತನ್ನ ಬೆವರಿನಿಂದ ಒಬ್ಬ ಮಾನವನನ್ನು ಸೃಷ್ಟಿ ಎಣ್ಣೆ ತೆಗೆದು ದೀಪ ಬೆಳಗಿಸುವ ಕಸುಬಿನಲ್ಲಿ ತೊಡಗಿಸಿದ ಇವನೇ ಪ್ರಪಂಚದ ಮೊದಲ ಗಾಣಿಗ[೧೧೯]

ಮತೊಂದು ಐತಿಹ್ಯ ಭಾರತದಲ್ಲಿ ಮೊದಲಿನಿಂದಲೂ ಇತ್ತು. ಎಂಬುದಕ್ಕೆ ಅನೇಕ ಪುರಾವೆಗಳಿವೆ, ಮೃಗರಾಜ ವಿಕ್ರಮಾದಿತ್ಯನಿಗೆ ಶನಿಕಾಟ ಪ್ರಾರಂಭವಾಗಿತ್ತು. ದನ ಕನಕ ಅರಸೊತ್ತಿಗೆ ಕಳೆದುಕೊಂಡು ಕೊನೆಗೆ ಕೈಕಾಲು ಕತ್ತರಿಸಲ್ಪಟ್ಟು ಅನಾಥವಾಗಿ ನರಳುತ್ತಾ ಮಾರ್ಗದ ಬದಿಯಲ್ಲಿ ಬಿದ್ದು ಕೊಂಡಿದ್ದು ಆ ಸಮಯದಲ್ಲಿ ಗಾಣಿಗರ ಪರಿವಾರವೊಂದು ಎತ್ತಿನ ಬಂಡಿಯಲ್ಲಿ ಹೊರಟಿತ್ತು ಬಂಡಿಯಲ್ಲಿದ್ದ ಗಾಣಿಗನ ಸೊಸೆ ಅಂಗವಿಕಲ ಅರಸನನ್ನು ಗುರುತಿಸಿದಳು ಕರುಣಿಗೊಂಡು ಮಾವನಿಗೆ ವಿಷಯ ತಿಳಿಸಿ ಅವನನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಆಶ್ರಯ ನೀಡಿದಳೂ. ಅಂತೂ ರಾಜ ಬದುಕುಳಿದ ಮುಂದೆ ಶಾಪವಿಮೋಚನೆಯಾಯಿತು. ವಿಕ್ರಮಾದಿತ್ಯನಿಗೆ ಸಕಲ ಸಂಪತ್ತು ದೊರೆಯಿತು. ಶನಿದೇವ ಪ್ರತ್ಯಕ್ಷನಾಗಿ ವರಬೇಡಿಕೋ ಎಂದಾಗ ರಾಜ ಕೇಳಿಕೊಂಡದಿಷ್ಟು ದೇವಗಾಣಿಗರು ಸಂಕಷ್ಟ ಸಮಯದಲ್ಲಿ ನನಗೆ ಆಶ್ರಯ ನೀಡಿದವರು ಕಾರಣ ನೀನು ಅವರಿಗೆ ಕಾಡಬೇಡ ಬದಲಾಗಿ ಅವರಲ್ಲಿ ಕೃಪಾದೃಷ್ಟಿಯಿರಲಿ ಇಂದಿಗೂ ಸಂಪ್ರದಾಯವಾದಿ ಬ್ರಾಹ್ಮಣರು ಶನಿವಾರದ ದಿವಸ ಎಣ್ಣೆ ಖರೀದಿಸಲು ಗಾಣಿಗರ ಮನೆಗೆ ಹೋಗುವುದಿಲ್ಲ ಶನಿದರ್ಶನವಾದೀತೆಂಬ ನಂಬಿಕೆ ಅವರಿಗಿದೆ.[೧೨೦]

ಇವರನ್ನು ಕುರಿತ ಶಾಸನಗಳನ್ನು ಗಮನಿಸಿದರೆ, ಕರ್ನಾಟಕದಲ್ಲಿ ಎಣ್ಣೆಯ ಉತ್ಪಾದನೆ ಅತ್ಯಂತ ವ್ಯಾಪಕವಾಗಿ ನಡೆಯುತ್ತಿದ್ದುದು ಮನದಟ್ಟಾಗುತ್ತದೆ. ಇವರು ಎಣ್ಣೆ ಉತ್ಪಾದನೆ ಮತ್ತು ವಿತರಣೆಯನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದರು ತೆಲ್ಲಿಗೆ ಕೊತ್ತಳಿ[೧೨೧] ಎಂದು ಕರೆಯಲಾಗಿದೆ. ಇವರು ಗಾಣಗಳಲ್ಲಿ

ಎಣ್ಣೆಯನ್ನು ತೆಗೆದು ಅದನ್ನು ಮಾರಾಟ ಮಾಡುವ ಕಸುಬನ್ನು ರೂಢಿಸಿಕೊಂಡು ಅನೇಕ ದೇವಾಲಯಗಳಿಗೆ ದಾನ ನೀಡುವಾಗ ಗಾಣಗಳನ್ನು ದಾನ ನೀಡುತ್ತಿದ್ದು ಅದರಿಂದ ತೆಗೆದ ಎಣ್ಣೆಯನ್ನು ನಂದಾದೀವಿಗೆ ಉಪಯೋಗಿಸಬೇಕೆಂಬುದು ಉದ್ದೇಶವಾಗಿರುತ್ತದೆ. ಆ ಕಾಲದಲ್ಲಿ ದೇವಾಲಯದ ಆವರಣದಲ್ಲಿ ಗಾಣವನ್ನು ಹಾಕಿಸುವುದು ಪುಣ್ಯಕಾರ್ಯವೆಂದು ನಂಬಲಾಗಿತ್ತು.[೧೨೨] ಈ ರೀತಿ ತೆರಿಗೆ, ವಿನಾಯಿತಿ ಸುಂಕವನ್ನು ಸಹ ಕಟ್ಟುವುದು ಕಾಣುತ್ತೇವೆ. ಕ್ರಿ.ಶ. ೧೨೮೦ರ ನರಸೀಪುರ ಶಾಸನವೊಂದು ತೆಂಗಿನೆಂಣೆ... ಬಾಳೆಯಹಣ್ಣು ೧೦೦೦ ಕಬ್ಬು ೩೦೦ ಎಂದು ಎಲ್ಲೇಖಿಸುವುದರಿಂದ ಅಂದು ತೆಂಗಿನ ಕಾಯಿಯಿಂದ ಎಣ್ಣೆ ತಯಾರು ಮಾಡುತ್ತಿದ್ದರೆಂದು ತಿಳಿಯಬಹುದು. ಹರಳೆ ಅಥವಾ ಔಡಲ ಬೀಜದಿಂದ ಹರಳೆಣ್ಣೆ ತಯಾರು ಮಾಡುತ್ತಿದ್ದ ಬಗ್ಗೆ ಬೇಲೂರಿನ ಶಾಸನ ತಿಳಿಸುತ್ತದೆ. ಅಲ್ಲದೆ ಮೈಸೂರಿನ ಶಾಸನವೊಂದು ಕೂಡ ಹರಳೆಯ ಎಣ್ಣೆಯನ್ನು ಉಲ್ಲೇಖಿಸುತ್ತದೆ. ಔಡಲು ಅಥವಾ ಹೇರಂಡದಿಂದ ಮಾತ್ರ ಎಣ್ಣೆಯನ್ನು ಸ್ವಲ್ಪ ಭಿನ್ನ ರೀತಿಯಲ್ಲಿ ತಯಾರಿಸುತ್ತಿದ್ದರು. ಹರಳಿನ ಬೀಜಗಳನ್ನು ಪುಡಿ ಮಾಡಿ ಅದನ್ನು ನೀರಿನಲ್ಲಿ ಕಲೆಸಿ ಬೇಯಿಸುತ್ತಿದ್ದರು. ನೀರೆಲ್ಲ ಆವಿಯಾಗಿ ಕೊನೆಗೆ ಹರಳೆಣ್ಣೆಯು ಮಾತ್ರ ಉಳಿಯುತ್ತಿತ್ತು. ಮಾಳಿಗೆ ಮಾರಯ್ಯನ ವಚನವೊಂದರಲ್ಲಿ ಉಲ್ಲೇಖಗೊಂಡ ಬಗೆ ಕೆಲವು ಶಾಸನಗಳು ಹಾಗೂ ವಚನಗಳು ಎಳ್ಳನ್ನು ಉಲ್ಲೇಖಿಸುವುದರಿಂದ ಎಳ್ಳೆಣ್ಣೆಯನ್ನು ಕೂಡ ಉತ್ಪಾದಿಸುತ್ತಿದ್ದುದು ಗೊತ್ತಾಗುತ್ತದೆ. ಪಂಪ ತನ್ನ ಆದಿಪುರಾಣದಲ್ಲಿ ಒಂದೆಡೆ ತಿಳಾತಸೀಕು ಸುಂಭಾದಿ ದೀ ಪ್ರೌಷಧಿಗಳೂಂ ಅಂದರೆ ಎಳ್ಳು, ಅಗಸೆ, ಕುಸುಬೆ, ಮುಂತಾದ ಎಣ್ಣೆ ಬೀಜಗಳೂ ಎಂದು ಉಲ್ಲೇಖಿಸುವುದರಿಂದ ಎಳು, ಅಗಸೆ, ಕುಸುಬೆ ಬೀಜಗಳಿಂದಲೂ ಎಣ್ಣೆ ಉತ್ಪಾದಿಸುತ್ತಿದ್ದಿರಬೇಕು.

ಗಾಣಿಗರ ಪ್ರಾಚೀನತೆಯನ್ನು ಕ್ರಿ.ಶ. ೩ನೆಯ ಶತಮಾನದಲ್ಲಿಯೇ ಎಣ್ಣೆಯವರ ಸಂಘ ಅಸ್ತಿತ್ವದಲ್ಲಿದ್ದುದು ನಾಸಿಕದ ಶಾಸನದಿಂದ ತಿಳಿದುಬರುತ್ತದೆ. ಅದೇ ಶಾಸನ ದಾನಿಗಳು ಆ ಸಂಘಕ್ಕೆ ಹಣವನ್ನು ನೀಡಿ ಅದನ್ನು ರೋಗಿಗಳಿಗೆ, ಸನ್ಯಾಸಿಗಳಿಗೆ ಉಳಿದುಕೊಳ್ಳುವ ವ್ಯವಸ್ಥೆ ಸಾಮಾಜಿಕ ಕಾರ್ಯಗಳಿಗೆ ವ್ಯಯಮಾಡಬೇಕೆಂದು ತಿಳಿಸುತ್ತದೆ.[೧೨೩] ಅಷ್ಟು ಪೂರ್ವ ಕಾಲದಿಂದಲೇ ಆ ಸಂಘವು ಧಾರ್ಮಿಕ, ಸಾಮಾಜಿಕ ಕಾರ್ಯವನ್ನು ನಿರ್ವಹಿಸುತ್ತಿದ್ದುದು ಕಂಡುಬರುತ್ತದೆ. ತೆಲ್ಲಿಗರಲ್ಲಿ ಎರಡು ಭಾಗಗಳಿದ್ದು ಅವರ ವ್ಯವಹಾರ, ಸ್ಥಿತಿಗತಿಗಳ ಆಧಾರದ ಮೇಲೆ ಹಿರಿಯ ತೆಲ್ಲಿಗಗೇರಿ ಮತ್ತು ಕಿರಿಯ ತೆಲ್ಲಿಗ ಕೇರಿಯಲ್ಲಿ ವಾಸಿಸುತ್ತಿದ್ದರೆಂದು ಭಾವಿಸಬಹುದು.[೧೨೪] ತೆಲ್ಲಿಗರು ಎಲ್ಲ ಧರ್ಮದ ದೇವಾಲಯಗಳ ನಂದಾದೀಪಕ್ಕೆ ಎಣ್ಣೆಯನ್ನು ನೀಡುತ್ತಿದ್ದುದರಿಂದ ಅವರನ್ನು ಕುರಿತು ಬೆಣಚಮಟ್ಟಿಯ ಶಾಸನ ಹೀಗೆ ಹೇಳಿದೆ.

ಎಲ್ಲಾ ಧರ್ಮಗಳುಮಂ
ತೆಲ್ಲಿಗರಾಯರಯ್ಯರವರವೊಲು ಮತ್ತೋರ್ವರು
ಬಲ್ಲರೆ ಪುಣ್ಯಮನಾರ್ಜಿಪ
ಲೆಲ್ಲಾ ನೊಡಳಗೆ ಅವರ ಧರ್ಮಮೆ ಧರ್ಮಂ.[೧೨೫]

ಇವರು ರಚಿಸಿಕೊಂಡಿದ್ದ ಸಂಘವನ್ನು ತೆಲ್ಲಿಗರ ಕೊತ್ತಳಿ,[೧೨೬] ಗಾಣಿಗರೊಕ್ಕಲು,[೧೨೭]
ತೆಲ್ಲಿಗ ಕೊತ್ತಳಿ,[೧೨೮]
ತೆಲ್ಲಿಗರ ಅಯ್ಯತ್ತೊಕ್ಕಲು,[೧೨೯]

ಎಂದು ಕರೆಯಲಾಗಿದೆ. ಇವರು ಗಾಣಗಳಲ್ಲಿ ಎಣ್ಣೆಯನ್ನು ತೆಗೆದು ಅದನ್ನು ಮಾರಾಟ ಮಾಡುತ್ತಿದ್ದರು. ಅನೇಕ ದೇವಾಲಯಗಳಿಗೆ ದಾನ ನೀಡುವಾಗ ಗಾಣಗಳನ್ನು ದಾನ ನೀಡುತ್ತಿದ್ದು, ಅದರಿಂದ ತೆಗೆದ ಎಣ್ಣೆಯನ್ನು ನಂದಾದೀವಿಗೆಗೆ ಉಪಯೋಗಿಸಬೇಕೆಂಬುದು ಉದ್ದೇಶವಾಗಿರುತ್ತದೆ.

ತೆಲ್ಲಿಗರು ಎಣ್ಣೆಯ ಬೀಜಗಳನ್ನು ಗಾಣಕ್ಕೆ ಹಾಕಿ ಎಣ್ಣೆಯನ್ನು ತೆಗೆಯುತ್ತಿದ್ದರು. ಮೂರು ರೀತಿಯ ಗಾಣಗಳು ಶಾಸನಗಳಲ್ಲಿ ಉಲ್ಲೇಖಿತವಾಗಿದೆ. ಎತ್ತುಗಾಣ,[೧೩೦] ಕೈಗಾಣ,[೧೩೧] ಮೆಟ್ಟುಗಾಣ,[೧೩೨] ಗಾಣಗಳನ್ನು ಕೆಲವನ್ನು ಕಲ್ಲಿನಿಂದಲೂ, ಕೆಲವನ್ನು ಮರದಿಂದಲೂ ನಿರ್ಮಿಸುತ್ತಿದ್ದರು. ಕಲ್ಲುಗಾಣಗಳ ಉಲ್ಲೇಖ ಶಾಸನಗಳಲ್ಲಿ ಬಂದಿವೆ.[೧೩೩] ತೆಲ್ಲಿಗರನ್ನು ಗಾಣಿಗರೆಂದೂ ಕರೆಯುತ್ತಿದ್ದರೂ ಅವರ ಶ್ರೇಣಿಗಳನ್ನು ಗಾಣಿಗರೊಕ್ಕಲು[೧೩೪] ಎಂದು ಗುರುತಿಸಿರುವುದುಂಟು. ಈ ರೀತಿ ಗಾಣಿಗರು ತಮ್ಮ ಕುಲದವರ ಜೊತೆಗೆ ವಂಶಪಾರಂಪರ್ಯವಾಗಿ ತನ್ನ ಕಸುಬನು ಮುಂದುವರೆಸಿರುವುದು ಹಾಗೂ ತಮ್ಮದೇ ಆದ ಪಾರಂಪರಿಕ ಜ್ಞಾನದ ಮೂಲಕ ಮುಂದುವರೆಸಿರುವುದು ಕಾಣಬಹುದು.

ರಾಯಭುಜಬಲ ಭೀಮ ರಾಯಮರ್ದನ ರಾಯ
ಜೀಯ ಸ್ಥಿರಂಜೀವಯೆಂದು ಕೀರ್ತಿಸಿ ಗಾಣ
ನಾಯಕಿಯರೊಲಿದು ದಂಡಿಗೆ ವಿಡಿದು ಪೊಡಮಟ್ಟು ಹಾಡಲುದ್ಯೋಗಿಸಿದರು.[೧೩೫]
ಮಿಕ್ಕು ಮರೆವಂತಡಸಿ ಕವಿವ ಗತಿಗಳ ಸೊಗಸೆ
ನಕ್ಕಿಸಿದೆ ಸಮಯೋಚಿತದ ಪಸಾಯಕ್ಕೆ ಮನ
ವುಕ್ಕಿ ಸರ್ವಾಭರಣಂ ಗಾಣರಾಣಿಯರಿಗಿತ್ತನು ಹರಿಚ್ಚಂದ್ರನು[೧೩೬]

ಹರಿಶ್ಚಂದ್ರ ಕಾವ್ಯದಲ್ಲಿ ಗಾಣಿಗರು ಮಹಿಳೆಯರು ಎಣ್ಣೆಯನ್ನು ತೆಗೆಯುವುದರಲ್ಲಿ ಹಾಗೂ ಭೀಮರಾಯನು ತನ್ನ ದೇಹಕ್ಕೆಲ ಎಣ್ಣೆಯನ್ನು ಹಚ್ಚಿಕೊಂಡು ನಾಯಕಿಯರನ್ನು ಗಾಣಕ್ಕೆ ಹೋಲಿಸಿ ಅವರು ಎಣ್ಣೆತೆಗೆಯುವುದರಲ್ಲಿ ಹಾಡುತ್ತ ತಮ್ಮ ವೃತ್ತಿ ಮುಂದುರೆಸಿರುವುದು ಕಾಣುತ್ತೇವೆ.

ಹಾಗೆ ಹರಿಶ್ಚಂದ್ರನು ರಾಣಿಯರಿಗೆ ಗಾಣವನ್ನು ಕೊಟ್ಟಿರುವುದು ಇಲ್ಲಿ ತಿಳಿದುಬರುತ್ತದೆ.[೧೩೭] ಗಾಣದಿಂದ ಎಣ್ಣೆಯನ್ನು ತೆಗೆಯುತ್ತಿದ್ದವರು ತೆಲಿಗರು ಅಥವಾ ತೆಲ್ಲಿಗರು ಇವರು ರೈತರ ಎಣ್ಣೆಯ ಬೀಜಗಳನ್ನು ಗಾಣಕ್ಕೆ ಹಾಕಿ ಎಣ್ಣೆಯನ್ನು ಹಿಂಡಿಕೊಟ್ಟು ಮಡಕೆ ಅಥವಾ ಡಬ್ಬಗಳಲ್ಲಿ ತೆಗೆದುಕೊಂಡು ಹೋಗಿ ಮಾರಾಟ ಮಾಡಿ ಜೀವಿಸುತ್ತಿದ್ದರು.[೧೩೮] ಇವರೂ ಸೆಟ್ಟಿ ಎಂಬ ಸೂಚಕ ಹೆಸರನ್ನು ಹೊಂದಿರುತ್ತಿದ್ದರು. ಜೊತೆಗೆ ಕೃಷಿಕಾರ್ಯವೂ ಅವರ ಜೀವನದ ಮುಖ್ಯ ಉದ್ಯೋಗವಾಗಿರುತ್ತಿತ್ತೆಂದು ತೋರುತ್ತದೆ. ಸಂದರ್ಭ ಬಂದರೆ ತಮ್ಮ ಊರಿಗೆ ವೈರಿಗಳು ಬಂದು ತಮ್ಮ ಪಶುಗಳನ್ನು ಅಪಹರಿಸಿದಾಗ ತಾವೂ ಅವರೊಂದಿಗೆ ವೀರಾವೇಶದಿಂದ ಹೋರಾಡಿ ಮಡಿದಿರುವುದಕ್ಕೆ ಉದಾಹರಣೆಯಿದೆ ಕ್ರಿ.ಶ. ೯೬೬ರ ಕೋಲಾರ (ತಾ) ಹರಳಕುಂಟೆ ಗ್ರಾಮದ ವೀರಗಲ್ಲೊಂದರಲ್ಲಿ ಗಾಣಿಗರ ಪೆರುನ್ನಾಳಿ ಸೆಟ್ಟಿಯರ ಮಗಂ ಗಂಗೆಸೆಟ್ಟಿ ಎಂಬುವವನು ತುರುಗಗಳಿಗೆ ಪುಯ್ಯಲಲ್ಲಿ ಹೋರಾಟ ಮಾಡಿದ ವಿವರವಿದೆ.[೧೩೯] ದೇವಾಲಯಗಳಲ್ಲಿ ನಂದಾದೀಪಗಳನ್ನು ಬೆಳಗಿಸುವುದಕ್ಕಾಗಿ ದತ್ತಿ ಬಿಡುವುದು ಆ ಕಾಲದಲ್ಲಿ ಹೆಚ್ಚು ಪ್ರಚಲಿತವಿದ್ದ ಸಂಪ್ರದಾಯವಾಗಿತ್ತು. ಅಂತೆಯೇ ಆ ದೀಪಗಳ ಎಣ್ಣೆಗಾಗಿ ಗಾಣಗಳ ಅಗತ್ಯವಿರುತ್ತಿತ್ತು. ಕರ್ಶನಪಲ್ಲಿಯ ಆರ್ಕೇಶ್ವರ ದೇವಾಲಯಕ್ಕೆ ದಾನಿಗಳು ಮೂರು ಕಲ್ಲುಗಾಣಗಳನ್ನು ಅರ್ಪಿಸಿದ್ದಾರೆ.[೧೪೦] ಈ ರೀತಿ ನೊಡಿದರೆ ಹಂಪಿಯ ವಿರೂಪಾಕ್ಷ ದೇವಾಲಯದಲ್ಲಿ ಪ್ರತಿ ಸಂಜೆಯ ದೀಪವನ್ನು ಹಚ್ಚಿ ಅಲ್ಲಿ ಪ್ರತಿದಿನ ಎಣ್ಣೆಯನ್ನು ಹಾಕುವುದು ಕಾಣಬರುತ್ತದೆ. ಗಾಣಿಗರ ಕಸುಬು

ಎಷ್ಟು ಮುಖ್ಯ ಹಾಗೂ ಅವರು ಉತ್ಪತ್ತಿಯು ಆರ್ಥಿಕತೆಯ ಮೇಲೆ ಪ್ರಭಾವ ಬೀರಿತ್ತು. ಈ ಕುಲಕಸುಬುಗಳನ್ನು ಬಳ್ಳಾರಿ, ಚಿತ್ರದುರ್ಗ, ಮೈಸೂರು ಭಾಗಗಳಲ್ಲಿ ಹಾಗೂ ಕರ್ನಾಟಕದಾದ್ಯಂತ ಕಾಣಬಹುದು.

ಅಮರರ ಗಾಣರ ಮುಖರಿಗೆ
ಳಮರ್ದಂ ಕೆದರೆದವೊಳಸೆ ಗಾಣತಿಗೆಯ್ದು
ತ್ತಮ ಮಧ್ಯಮನೀಚಲಯ
ಕ್ರಮತಾಳದಿನೆಸೆಯ ಪಾಡಿದರ್ ಮಂಗಳಮಂ.[೧೪೧]

ದೇವಲೋಕದ ಗಾಯಕ ಪ್ರಮುಖರು ಅಮೃತವನ್ನೇ ಸುರಿಸಿದ ಹಾಗೆ, ಗಾಯನಮಾಡುತ್ತ ಮಂತ್ರ ಮಧ್ಯಮತಾರ ಲಯಗಳಲ್ಲಿ ತಾಳಬದ್ಧವಾಗಿ ಮಂಗಳವನ್ನು ಹಾಡಿದರು.[೧೪೨] ದೇವಾಲಯದಲ್ಲಿ ದೇವರಿಗೆ ದೀಪವನ್ನು ಹಚ್ಚುವ ಸಂದರ್ಭದಲ್ಲಿ ಅದಕ್ಕೆ ಎಣ್ಣೆಯನ್ನು ಹಾಕಿ ದೀಪವನ್ನು ಹಚ್ಚುವ ಮೂಲಕ ದೇವರಿಗೆ ಮಂಗಳಾರಾತಿಯನ್ನು ಬೆಳಗಿಸುವರು.

ತೊಡರ್ದಿ ಗಾಣದ ಗೂಳಿಯಂತೆ ತಿರಿಯುತ್ತಿಂತಿರ್ಪರೇ
ಮೆಟ್ಟದೊಂಡೆಡಯಂ ಮೆಟ್ಟಿ ತರಸ್ವಿಗಳ್ ಬಡಗಣ್ಣಿ ತೆಂಕಣ್ಣಿ ಮೇಣ್ತೆಂಕಣೆಂ
ಬಡಗಣ್ಣಯೆರಡಿಕೆ ಮೇಣ್ಪಡುವಣಿಂ ಮೂಡಣ್ಗಿ ತಾಂ ಪಾರಿಲಾ
ಪೊರ್ಡೆ ಬಂದೆನ್ನೊಡವಾರುಗೆಂದು ನುಡಿವಳ್ಮತ್ತಾಕೆ ಮಾರ್ತಂಡನಂ[೧೪೩]

ಗಾಣಕ್ಕೆ ಎತ್ತು ಕೊಣ, ಹೆಮ್ಮೆ ಗೂಳಿಗಳನ್ನು ಕಟ್ಟಿ ಗಾಣವನ್ನು ತಿರುಗಿಸಿ ಎಣ್ಣಿಯನ್ನು ತೆಗೆಯುತ್ತಿದ್ದರು. ಅದರಿಂದ ಎಳ್ಳು, ಕುಸುಬೆ, ಎಣ್ಣೆ ಬೀಜಗಳನ್ನು ರುಬ್ಬಿ ಗಾಣದಿಂದ ಎಣ್ಣೆಯನ್ನು ತೆಗೆಯುವುದು ಕರ್ನಾಟಕ ಆಂಧ್ರ, ಮಹಾರಾಷ್ಟ್ರ ತಮಿಳುನಾಡುಗಳಲ್ಲಿ ಕಾಣಬಹುದು.

ಮತ್ತಂ ಮಂತ್ರವಾದಿಯಂ ಕಂಡ ಗ್ರಹದಂತೆ
ತೆಲ್ಲಿಗರ್ ತಲ್ಲಣಿಸಿ ತೆಲ್ಲಿಗಗೇರಿಯಂ ಪೊಕ್ಕು.
ಕೊಡದೆಣ್ಣೆಯೆಲ್ಲಮಂ ಕೂ
ಗಿಡೆದೂರ್ತಿಂ ಸೂರೆಗೊಂಡು ಬಂದು ನಿತಾಂತಂ
ಸೊಡರಂ ಯಕ್ಷಿಯ ಮನೆಯೊಳ್

ತದೆಯದೆ ಪೊತ್ತಿಸುವನೆಯ್ದೆ ಬೆಳಗಪ್ಪಿನೆಗಂ.[೧೪೪] ಮತ್ತೆ ಮಂತ್ರವಾದಿಯನ್ನು ಕಂಡ ಗ್ರಹದ ಹಾಗೆ ಗಾಣಿಗರು ತಲ್ಲಣಿಸುವಂತೆ ಗಾಣಿಗರ ಬೀದಿಯನ್ನು ಹೊಕ್ಕರು ತಮ್ಮ ಹೆಸರಿನಲ್ಲಿ ಅವರ ಕಸುಬನ್ನು ಗುರುತಿಸಿಕೊಂಡಿರುವುದು ಇಲ್ಲಿ ಕಾಣಬಹುದು. ಗಾಣಿಗರ ಅಂದು ಪ್ರತ್ಯೇಕ ಬೀದಿಗಳಲ್ಲಿ ವಾಸವಾಗಿರುವುದು ಕಾಣುತ್ತೇವೆ.[೧೪೫] ಕೊಡದಲ್ಲಿನ ಎಣ್ಣೆಯೆಲ್ಲವನ್ನು ಅವರು ಗೋಳಿಸುತ್ತಿದ್ದರ ಧೂರ್ತತನದಿಂದ ಸೂರೆಮಾಡಿ ತಂದು ಯಕ್ಷಿಯ ದೇವಾಲಯದಲ್ಲಿ ದೀಪಗಳನ್ನು ಹೊತ್ತಿಸಿ ಬೆಳಗಾಗುವ ತನಕ ಉರಿಸುತ್ತಿದ್ದರು. ಇಡೀ ದಿನವೆಲ್ಲ ದೇವಾಲಯಗಳಲ್ಲಿ ದೀಪಕ್ಕೆ ಎಣ್ಣೆ ಬೇಕು ಎಂದು ದೊಡ್ಡ-ದೊಡ್ಡ ಮಡಕೆಗಳಲ್ಲಿ ಎಣ್ಣೆಗಳನ್ನು ಶೇಖರಿಸಿಡುತ್ತಿದ್ದರು.

ವಿಶ್ವನಾಥಪುರ ಅಗ್ರಹಾರದ ನಾನಾಗೋತ್ರ ಸೂತ್ರದವಿಗೆ ಬಿಟ್ಟದಾನದ ವಿವರವಿದೆ. ನಂದಾದೀಪ ಮುಂತಾದ ವೆಚ್ಚಗಳಿಗೆ ಶಿವರಾತ್ರಿ ಪುಣ್ಯಕಾಲದಲ್ಲಿ ವರದಾನದಿ ತೀರದಲ್ಲೂ ಈಶ್ವರ ಪೂಜೆಯ ಮಾಡುವಾಗ ಹಿರಣ್ಯೋದರ ಕದಾನ ಯಜುಃ ಶಾಖೆಯ ಗಾಣಿಗನೂರು ಮಾಯಿಭಟ್ಟರ ಮಕ್ಕಳು ಉದ್ಯಾಮಲ್ಲ ಭಟ್ಟರಿಗೆ ಗ ೧೨ ಕೌಂಡಿನ್ಯ ಗೋತ್ರದ ಆಪ್ತಸ್ತಂಭಮಾತ್ರದ ಯಜುಃಶ್ಯಾಖೆಯ

ಗಂಡಸಮುದ್ರದ.[೧೯೬] ಗಾಣವಾಡಿಸಿ ಎಣ್ಣೆಗಳನ್ನು ಉತ್ಪಾದಿಸುವವರೇ 'ಗಾಣಿಗರು' ಗಾಣದ ಕಂಬವನ್ನು 'ಸ್ಥಾಣು' ಎನ್ನುತ್ತಿದ್ದರು.[೧೯೭] ಇದಕ್ಕೆ ಕನ್ನಡದಲ್ಲಿ 'ಅರಳೆ' ಎಂಬ ಹೆಸರಿತು.[೧೯೮] ಎಣ್ಣೆಯ ಬೀಜಗಳನ್ನು ಅರೆಯುವುದಕ್ಕಾಗಿ ಹಾಕುವ ಭಾಗವೇ ಗಾಣದ ಬಾಯಿ ಅದನ್ನರೆಯುವ ಸಾಧನವೇ 'ಕೊಂತ' ಇದನ್ನು ಎತ್ತಿನಣಿಗೆ ಕಟ್ಟಿದಾಗ ಅದು ಗಾಣದ ಸುತ್ತಲೂ ಸುತ್ತುವಾಗ ಇದೂ ಸುತ್ತಿ ಬೀಜಗಳನ್ನು ಅರೆಯುತ್ತಿತ್ತು.[೧೯೯] ತಮಿಳು ಪ್ರದೇಶದಲ್ಲಿ ವಾಣಿಯನ್ನರೆಂದು ಹಾಗೂ ಕನ್ನಡ ಮಾತನಾಡುವ ಪ್ರದೇಶದಲ್ಲಿ ಗಾಣಿಗರೆಂದು, ಕರ್ಣಂರೆಂದು ಪರಿಚಿತರಾದ ಎಣ್ಣೆ ವ್ಯಾಪಾರಿಗಳು ವೃತ್ತಿಪರ ಕುಲಗಳಲ್ಲಿ ಸೇರಿದ್ದರು. ಕರ್ಣಂ ಮತ್ತು ಮೊದಲಿಯಾರರೂ ಗ್ರಾಮದಲ್ಲಿನ ಪ್ರಧಾನ ಸಮುದಾಯವಾಗಿದ್ದರೂ ಕರ್ಣಂಗಳು ಸಾಂಪ್ರದಾಯಿಕ ಗ್ರಾಮಲೆಕ್ಕಿಗರಾಗಿದ್ದು ಕರ್ನಾಟಕದಲ್ಲಿ ಶಾನುಭೋಗರು ಅವರ ಪಡಿರೂಪವಾಗಿದ್ದರು.[೨೦೦]

ಎಳ್ಳು ಗಾಣಿಗ ಬಲ್ಲ!
ಎಲೆಯ ತೋಟಿಗ ಬಲ್ಲ
ಕಳ್ಳನು ಊರಿನರಿವಂತೆ ಸೂಳೆಹಣ
ಮಳ್ಳಿವರಿನರಿಗು[೨೦೧]

ಸರ್ವಜ್ಞ ವಚನಗಳಲ್ಲಿ ಗಾಣಿಗರು ಉಪಯೋಗಿಸುವ ಎಳ್ಳು, ಬೆಲ್ಲದಿಂದಲೂ ಎಣ್ಣೆಯನ್ನು ತೆಗೆಯುವುದು. ಊರಿಗೆ ಒಬ್ಬ ಕಸುಬುದಾರರು ಇರುವುದು ಕಾಣಬಹುದು. ಎತ್ತುಗಾಣವ ನುಂಗಿ ಕತ್ತರಿಯ ಕಣೆನುಂಗಿ ಸುತ್ತಿ ಹೋದವನ ನೊಗ ನುಂಗಿ–ತೀ ಮಾತು ಸತ್ಯವೇ ಪೇಳಿ ಸರ್ವಜ್ಞ[೨೦೨]

ಗಾಣಿಗರಿಗೆ ಎತ್ತು ಬೇಕು ತಮ್ಮ ಕಸುಬಿನಲ್ಲಿ ಎತ್ತುಗಳನ್ನು ಉಡಿ ಗಾಣದ ಸುತ್ತ ತಿರುಗಿಸಿ ಎಣ್ಣೆಯನ್ನು ತೆಗೆಯುತ್ತಿದ್ದರು ಎಂದು ಸರ್ವಜ್ಞ ತನ್ನ ವಚನದಲ್ಲಿ ಸತ್ಯವನ್ನು ತಿಳಿಸದ್ದಾರೆ.

ಗಾನಿಗ ಈಶ್ವರನ ಕಾಣನೆಂಬುದು ಸಹಜ
ಏಣಾಂಕಧರನು ಬರಲವನ–ಕೈಯಿಂದ
ಗಾಣವಾಡಿಸುವ ಸರ್ವಜ್ಞ[೨೦೩]

ದೇವಸ್ಥಾನದಲ್ಲಿ ದೇವರಿಗೆ ಎಣ್ಣೆಯು ಹಾಕಿ ದೀಪಹಚ್ಚಿ ದೇವರನ್ನು ಕಾಣುವಂತೆ ಎಣ್ಣೆಯನ್ನು ಕೈಯಿಂದ ಹಿಂಡಿ ಗಾಣವಾಡಿಸುವನು ಗಾಣಿಗನು ಎಂದು ಅವರ ಕಸುಬು ಗುರುತಿಸಲು ಸಹಯಕಾರಿಯಾಗಿದೆ.[೨೦೪] ಗಾಣಿಗರ ಅನೇಕ ದಾನದತ್ತಿಗಳನ್ನು ನೀಡಿದ ದಾಖಲೆಗಳಿವೆ. ಗೊರವರನ್ನು ಒಕ್ಕಲೆಬ್ಬಿಸಿ ಆ ಭೂಮಿಯೆಲ್ಲವನ್ನು ಬಿಡಿಸಿ ದೇವರಿಗೆ ನೀಡಿದರು. ಇದಲ್ಲದೆ ತಮ್ಮ ಧರ್ಮದ ದೇವರಿಗೆ ಸರ್ವಮಾನ್ಯವಾಗಿ ನೀಡಿದರು. ದೇವರ ನಂದಾದೀಪಕ್ಕೆ ಒಂದು ಗಾಣವನ್ನು, ರಂಗಭೋಗಕ್ಕೆ ಅಲ್ಲಿ ಮಾರಾಟವಾಗುವ ವಸ್ತುಗಳ ಮೇಲೆ ಸುಂಕ ಹೇರಿ ಅದನ್ನು ನೀಡಿದರು. ಸೋಮಣ್ಣ ದಂಡನಾಯಕರು ಅಗ್ನಿಷ್ಠಿಯ ಮಠದಲ್ಲಿ ಪುರಾಣ ಹೇಳುವ ಭಟ್ಟರು ಮುಂತಾದವರಿಗೆ ದತ್ತಿ ಬಿಟ್ಟಂತೆ ಉಲ್ಲೇಖವಿದೆ.[೨೦೫]

ಗ್ರಾಮವನ್ನು ಅಗ್ರಹಾರ, ತಪೋಧನ, ಉಪಾಧ್ಯಾಯ, ವಿದ್ಯಾರ್ಥಿಗಳ ಊಟ–ಬಟ್ಟೆಗೆ ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಸತ್ರಕ್ಕೆ, ಘಳಿಗೆಗೆ, ಅಗ್ನಿಷ್ಠಿಕೆಗೆಂದು ತ್ರಿಭೋಗಾಭ್ಯಂತರವಾಗಿ ನೀಡುತ್ತಾನೆ. ಇದಲ್ಲದೆ ಗೋರಂಟೆಯ ಕೆಲವರು ನಂದಾದೀಪಕ್ಕೆ ಗಾಣದ ಉತ್ಪತ್ತಿಯಲ್ಲಿ ಸೊಲ್ಲಗೆ ಎಣ್ಣೆಯನ್ನು ತೋಟವನ್ನು

ನೀಡುತ್ತಾರೆ. ಮಲ್ಲೋಜನಿಗೆ ಒಂದು ತೋಟವನ್ನು ನೀಡುತ್ತಾರೆ. ದೇವರ ಕೆಲಸ ಮಾಡಿ ಒಡ್ಡ ಕೇತ ಬೋವನಿಗೆ ಒಂದು ನಿವೇಶನವನ್ನು ಕಮ್ಮಾರ, ಆಚಾರಿಗೆ ಒಂದು ನಿವೇಶನವನ್ನು ನೀಡಿದಂತೆಯೂ ತಿಳಿಸಿದೆ.[೧೫೬]

ಹೊಯ್ಸಳ ಕಾಲದಲ್ಲಿ ವೀರಬಲ್ಲಾಳನ ಆಳ್ವಿಕೆಯಲ್ಲಿ ಗಾಣಿಗರಿಗೆ ಉದಯಾಕರದೇವ ಬ್ರಹ್ಮಚಾರಿಯರಸನು ಕೊಟ್ಟಿ ತೆಗೆಯ ಸ್ಥಾನದ ಐದು ವಗ, ಪಂಚಮಠದ ತಪೋಧನರು ಹಾಗೂ ಅಸಂಖ್ಯಾತ ಗಣಂಗಳು ಸೇರಿದಾಗ, ಗಾಣದ ಅರವತ್ತು ಒಕ್ಕಲು ಸೇರಿ ಶ್ರೀ ತೆಲ್ಲಿಗೇಶ್ವರ ದೇವರನ್ನು ಪ್ರತಿಷ್ಠಾಪಿಸಿ ದೇವರ ಅಂಗಭೋಗ, ನಂದಾದೇವಿಗೆಗೆ ಆದಾಯದಲ್ಲಿ ಬಂದ ಹಣದಲ್ಲಿ ಒಂದು ಭಾಗವನ್ನು ಎಣ್ಣೆಗಾಗಿ ಬಿಟ್ಟ ಈ ದಾನವನ್ನು ಕಲ್ಯಾಣ ಶಕ್ತಿಯ ಕಾಲನ್ನು ತೊಳೆದುಕೊಡಲಾಗಿದೆ.[೧೫೭] ಈ ರೀತಿ ಗಾಣಗಳಿಗೆ ದಾನದತ್ತಿ ನೀಡಿರುವ ಅನೇಕ ಉಲ್ಲೇಖಗಳು ಸಿಗುತ್ತವೆ.

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಚಾಳುಕ್ಯ ಜಗದೇಕ ಮಲ್ಲನ್ನು ಸಿಂಗಗಾವುಂಡನಿಗು ತಾಯಿ ಶಾಸ್ತಿಕಂವೆಗಾಮುಂಡಿಗು ಶ್ರೇಯಸ್ಸಾಗಲಿಯೆಂದು ಭೂದಾನ ನೀಡುತ್ತಾನೆ. ಅಲ್ಲಿಯ ತೆಲ್ಲಿಗರು (ಗಾಣಿಗರು) ದೇವರ ನಂದಾದೀವಿಗೆಗೆ ಎಣ್ಣೆಯನ್ನು ನೀಡಿದರು ಈ ದಾನವನ್ನು ಲಾಳದೇವನ ಕಾಲನ್ನು ತೊಳೆದು ಬಿಟ್ಟರು.[೧೫೮] ಈ ರೀತಿ ಗಾಣಿಗರಿಗೆ ಸಮಾಜದಲ್ಲಿ ಉನ್ನತ ಸ್ಥಾನಮಾನವನ್ನು ಸಾಮ್ರಾಜ್ಯದಾದ್ಯಂತ ಹಾಗೂ ಆರ್ಥಿಕವಾಗಿ ಉತ್ತಮ ರೀತಿ ಜೀವನ ನಡೆಸುತ್ತಿದ್ದರು ಎಂದು ತಿಳಿಯಲು ಸಹಾಯಕವಾಗಿದೆ.

ವಿಜಯನಗರ ಕಾಲದಲ್ಲಿ ಗಾಣಿಗರಿಗಾಗಿ ರಾಮರಾಜು, ಕ್ರಿ.ಶ. ೧೫೫೪ರಲ್ಲಿ ರಘುನಾಥರಾಜನು ಕತಾಲಪಾಲ್ಯಂದಲ್ಲಿ ಆಲಮೇಲ ಮಂಗಮ್ಮನ ದೇವಾಲಯವನ್ನು ಕಟ್ಟಿಸಿ ಆ ದೇವಾಲಯದ ದೀಪಾರಾಧನೆಗಾಗಿ ಅಂಗಡಿಗಳನ್ನು ದಾನಬಿಟ್ಟಂತೆ ಈ ಶಾಸನದಿಂದ ತಿಳಿದುಬರುತ್ತದೆ.[೧೫೯] ಈ ಸಾಮ್ರಾಜ್ಯದಲ್ಲಿ ಕಸುಬುದಾರರಿಗೆ ಹಾಗೂ ಅವರ ವೃತ್ತಿಗೆ ತುಂಬ ಗೌರವ ಸ್ಥಾನಮಾನ ಸಾಮಾಜಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ, ಸುಧಾರಿಸಿರುವುದು ಕಾಣಬಹುದು.

ಮೇದಾರರು

ಬಿದಿರಿನ ಕೆಲಸ ಮಾಡುವವರನ್ನು ಮೇದಾರರು ಎಂದು ಕರೆಯಬಹುದು. ಇವರು ಬಿದಿರಿನಿಂದ ಅನೇಕ ವಿದಧ ಸಾಮಗ್ರಿಗಳನ್ನು ತಮ್ಮದೆ ತಂತ್ರಜ್ಞಾನವನ್ನು ಬಳಸಿ ಉತ್ಪಾದಿಸುತ್ತಿದ್ದರು. ಹಸಿಬಿದಿರು ಕೆಲಸಕ್ಕೆ ಸೂಕ್ತವಾದುದು ಅದನ್ನು ಸುಲಭವಾಗಿ ಸೀಳಬಹುದು. ಅದೇ ಬಿದಿರು ಒಣಗಿದರೆ ಸೀಳುವಾಗ ಮಧ್ಯೆ ಮಧ್ಯೆ ತುಂಡಾಗುತ್ತದೆ. ಆದ್ದರಿಂದ ಒಣಗಿದ ಬಿದಿರು ದೊರೆತಾಗ ಅದನ್ನು ನೀರಿನಲ್ಲಿ ನೆನಸಿ ಸೀಳಿಕೊಳ್ಳುತ್ತಾರೆ.

ಗಂಗೋದಕ ಹೂಜೆ ಘನರತ್ನಕೀಲಿತ
ಪಿಂಗಾಣಿಗಂಧಲರ್ದಟ್ಟೆ
ಹೊಂಗಾಳಂಜಿಯ ಹೊಳೆವ ಬಿಜ್ಜಣಿಗೆಯ
ಹೆಂಗಳು ತೀದಿರಿಸಿದರು. ಮೋ.ತ. ಸಂ-೧೬, ಪ-೨೮,

ಆ ಹೆಂಗಳೆಯರು ಗಂಗಾಜಲದ ಹೂಜೆ, ರತ್ನಮಯವಾದ ಗಂಧದ ಕಾಜಿನ ಪಾತ್ರೆ, ಹೂವಿನ ತಟ್ಟೆ, ಬಂಗಾರದ ಪೀಕದಾನ ಮತ್ತು ಹೊಳೆಯುವ ಬೀಸಣಿಕೆಯನ್ನು ತಂದಿಟ್ಟರು.

ಹೊಂಗಳದ ಸತ್ತಿ ಡಾಳಿಪ ಚಮ
ರಂಗಳ ಸಂಚಿ ಸಗ್ಗಳೆಯ
ಮಂಗಳ ಕುಂಚ ಕಾಳಾಂಜಿ ಬೀಸಣಿಗೆಯ
ಪೆಂಗಳೇರೆದರಿಕ್ಕೆಲದಿ. ಮೋ.ತ. ಸಂ-೩೬, ಪ-೩೯,

ಎರಡೂ ಬಿದಿಗೆ, ಹೊಂಗಳಸದ ಛತ್ತರಿ, ಹೊಳೆಯುವ ಚಾಮರ, ಚಂಚಿ, ಸಗ್ಗಳೆ, ಕುಂಚ, ಕಾಳಂಜಿ ಹಾಗೂ ಬೀಸಣಿಕೆಯನ್ನು ಹಿಡಿದ ಹೆಂಗಳೆಯರು ಏರಿದರು.

ಭೃಂಗೋಪಮಾನ ಕುಂತಲೆ ಕೇಳು ಕಸ್ತೂರಿ
ಹಿಂಗದ ಚಮರ ಗಾರ್ತಿಯರು
ಹೊಂಗದಳಿಗಳ ಕೋಮಲ ಪತ್ರವೀಜನ
ದಂಗನೆ ಮರೆದಳೊತ್ತಿನಲಿ. ಮೋ.ತ. ಸಂ-೫, ಪ-೩೯,
ಅಳಿಯರ್ ಬೀಸುವ ಚಮರಾಲವಟ್ಟ
ಣ್ಗಾಳಿಯಿಂದವಳೊಡಲ್ಗಿಚ್ಚು
ತಾಳಿಯ ಹಾಕಿ ಪೆರ್ಮೊರಗೊಂಡ ತೆರಿದಿ ಛ
ಡಾಳಿಸಿತುಪ್ಪ ಸಂಘಟಿಸಿ. ಮೋ.ತ. ಸಂ-೨೭, ಪ-೬೨,

ದಾಸಿಯರು ಬೀಸುವ ಚಾಮರ-ಬೀಸಣಿಕೆಗಳ ತಣ್ಗಾಳಿಂದ ಅವಳ ಮೈ ಬೆಂಕಿಗೆ ಕುಳ್ಳನ್ನು ಹಾಕಿದಂತಾಗಿ ಬಲಿತು ಭೀಕರವಾಯಿತು. ಭ್ರಮರದಂಥ ಕೂದಲುಳ್ಳ ಸೊಬಗಿಯೆ ಕೇಳು, ಅಲ್ಲಿ ಚಾಮರವನ್ನು ಹಿಡಿದ ಕಸ್ತೂರಿ ಲೇಪಿತ ಸುಂದರಿಯರಿದ್ದರು, ಅಲ್ಲದೆ ಕೋಮಲವಾದ ಹೊಂಬಾಳೆಯ ಎಲೆಯ ಬೀಸಣಿಕೆ ಹಿಡಿದ ಚೆಲುವೆಯೊಬ್ಬಳು ಕಾಮನ ಪಕ್ಕದಲ್ಲಿ ಶೋಭಿಸಿದಳು.

ಏಣಿ ತಯಾರಿಸುವಾಗ ಒಂದು ಕಾಲಿನಿಂದ ಇನ್ನೊಂದು ಕಾಲಿಗೆ ಸಾಮಾನ್ಯವಾಗಿ ೧೪ ಇಂಚು ಅಂತರವಿರುತ್ತದೆ. ಕಾಲುಗಳಿಗೆ ಗಟ್ಟಿಯಾದ ಬಿದಿರನ್ನು ಬಳಸುತ್ತಾರೆ. ಬಿದಿರನ್ನು ಸೀಳುವಾಗ ಅತ್ಯಂತ ಕುಶಲತೆ/ಜ್ಞಾನ ಬೇಕಾಗುತ್ತದೆ. ಅದನ್ನು ೧೨-೧೩ ಸಲ ತೆಳುವಾಗಿ ಪದರ ಪದರವಾಗಿ ದೆಬ್ಬೆಗಳನ್ನು ಸೀಳಬಹುದು ಹಾಗೆ ಸೀಳಿದ ದೆಬ್ಬೆಗಳನ್ನು ನಯಸ್ಸು ಮಾಡಿಕೊಳ್ಳಬೇಕಾಗುತ್ತದೆ. ಇಲ್ಲವಾದರೆ, ತಯಾರು ಮಾಡಿದ ವಸ್ತುಗಳು ಹೊರಮೈಯಲ್ಲಿ ತರಕಲು ತರಕಲಾಗಿ ಕಾಣುತ್ತವೆ. ಬಳಸುವಾಗ ಸೀಬಿರು ಕೈಗೆ ಏರಿಕೊಳ್ಳುವ ಸಾಧ್ಯತೆಗಳಿರುತ್ತವೆ.

ಮೊರದಲ್ಲಿ ಗಂಡು, ಹೆಣ್ಣು ಎಂಬ ಎರಡು ಬಗೆಗಳಿರುತ್ತವೆ. ಬಿದಿರಿನ ಮೇಲುಪದರ (ಹಸಿರುದಬ್ಬೆ) ಬಳಸಿಕೊಂಡು ಹೆಣೆದಿರುವ ಮೊರವೆ ಹೆಣ್ಣು ಮೊರ, ಬಿದಿರಿನ ಒಳಭಾಗ ಅಂದರೆ ತಿರುಳಿನ ಭಾಗದಿಂದ ಹೆಣೆದಿರುವ ಮೊರವೆ ಗಂಡು ಮೊರ. ಗೌರಿ ಬಾಗಿನಕ್ಕೆ ಹೊಸ ಬಿದಿರಿನ ಮೊರಗಳೇ ಬೇಕು. (ವೈಶ್ಯರು, ಬ್ರಾಹ್ಮಣರು ಕೆಲವು ಆಚರಣೆಗಳ ಸಂದರ್ಭದಲ್ಲಿ ಬಿದಿರಿನ ಬೀಸಣಿಕೆಗಳನ್ನು ದಾನ ಕೊಡಲೇಬೇಕು) ಜರಡಿಯ ಕಂಠ ಭಾಗಕ್ಕೂ ಗಟ್ಟಿಯಾದ ಬಿದಿರಿನ ದೆಬ್ಬೆಯನ್ನು ಬಳಸುವರು ಸುತ್ತು ಕಟ್ಟಲು ಮಾತ್ರ ತೆಳುವಾದ ಬಿದಿರಿನ ಪಟ್ಟಿಗಳನ್ನು ಬಳಸಿಕೊಳ್ಳುತ್ತಾರೆ. ಕಂಠ ಕಟ್ಟುವುದು, ಪಟ್ಟಿ ಕಟ್ಟುವುದು ಅತ್ಯಂತ ಜ್ಞಾನವನ್ನು ಅನುಭವಸ್ಥರಿಂದ ಮಾತ್ರ ಸಾಧ್ಯ. ಕೂತೂಹಲದಿಂದ ಕಣ್ಣುಗಳಿಂದ ಹೆಣಿಗೆಯನ್ನು ಗಮನಿಸುತ್ತಾ ಕೈಚಳಕವನ್ನು ಸೂಕ್ಷ್ಮವಾಗಿ ಗ್ರಹಿಸುತ್ತಾರೆ. ಅನಂತರ ಸಣ್ಣ ಪುಟ್ಟ ಮೊರ, ಜರಡಿ, ಬೀಸಣಿಗೆಗಳನ್ನು ಹೆಣೆಯಲು ಪ್ರಾರಂಭಿಸುತ್ತಾರೆ. ಈ ವೃತ್ತಿಗೆ ನೇರವಾದ ತರಬೇತಿ ಕೊಡಲು ಸಾಧ್ಯವಾಗದು ಕಣ್ಣಿನಿಂದ ನೋಡುತ್ತ ಮಾನಸಿಕವಾಗಿ ಅದಕ್ಕೆ ಪೂರ್ವ ತಯಾರಿ ನಡೆಸಿ ಕೈಯಿಂದ ಮಾಡುತ್ತ ಕುಲಕಸುಬನ್ನು ಕಲಿಯುವರು.

ಟಿಪ್ಪಣಿಗಳು

೧. ಡಿ.ವಿ.ಜಿ., ದಾಸೇಗೌಡ, ನಮ್ಮ ಜನಪದ ನಂಬಿಕೆಗಳು, ಪು–೬.

೨. ಮಂಜುನಾಥ ಬೇವಿನಕಟ್ಟೆ, ಕನ್ನಡ ಜನಪದ ನಂಬಿಕೆಗಳು, ಪು–೧೭.

೩. ಎಸ್.ಐ.ಐ., ೨೦, ನಂ.೧೭೫, ಹಿ.ಬೆ. ಇಂಡಿ, (ತಾ), ಕ್ರಿ.ಶ. ೧೧೯೦, ಪು೨೨೦.

೪ ಇ.ಸಿ. ೧೧, (ಓಲ್ಡ್) ದಾ.ಗೆ. ೧೦೫, ಕ್ರಿ.ಶ. ೧೨೧೮ ಪು–೧೭೬.

೫. ಇ.ಸಿ. ೧೧, (ಓಲ್ಡ್), ದಾ.ಗೆ., ೧೦೫, ಕ್ರಿ.ಶ. ೧೨೧೮, ಪು–೧೭೬.

೬ ಬಿ.ಆರ್., ಹಿರೇಮಠ, ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಪು–೧೧೩

೭ ಎಸ್.ಐ.ಐ., ೨೦, ನಂ.೨೨೫, ಬಾಡೋ್ಲ್, ಇಂಡಿ (ತಾ), ಕ್ರಿ.ಶ. ೧೩೦೪, ಪು೨೭೪

೮. ವಿಠ್ಠಪ್ಪ ಗೋರಂಟ್ಲಿ: ಅಪ್ರಕಟಿತ ಕೃತಿ

೯. Breasted, Ancient times, masperm struggle, p–೭೩೯.

೧೦. ಕರಿಗೌಡ ಬೀಚನಹಳ್ಳಿ, ಕರಕುಶಲ ಕಲೆಗಳು, ಪು–೨.

೧೧. ಶಿವಶರಣೆಯರ ವಚನ ಸಂಪುಟ, ಕದಿರ ರಮ್ಮವ್ವೆಯ ವಚನ, ೭೪೭, ಕ.ಪು.ಪ್ರಾ, ಬೆಂಗಳೂರು, ೨೦೦೧, ಪು–೨೩೧.

೧೨. ವೆಂಕಟರಮಣ ಕೆ., (ಗದ್ಯಾನುವಾದ), ನಯಸೇನ ವಿರಚಿತ ಧರ್ಮಾಮೃತಂ ಕ.ಸಾ.ಪ. ೧೯೭೭, ಬೆಂಗಳೂರು, ಪು–೪೧೧.

೧೩. ಶಿ.ಶ.ವ.ಸ. ಪೂರ್ವೋಕ್ತ, ವಚನ–೭೪೩, ಪು–೨೩೨.

೧೪. ಬಸವಣ್ಣನವರ ವಚನ ಸಂಪುಟ, ವಚನ ೫೯೦, ಕ.ಪು.ಪ್ರಾ, ಬೆಂಗಳೂರು, ೨೦೦೧, ಪು–೧೪೮.

೧೫. ಸಂಕೀರ್ಣವಚನ, ಸಂಪುಟ–೨, ಜೇಡರ ದಾಸಿಮಯ್ಯ, ವಚನ–೨೯, ೨೦೦೧, ಕ.ಪು.ಪ್ರಾ, ಬೆಂಗಳೂರು.

೧೬. ಸಂಕೀರ್ಣ ವಚನ, ಸಂಪುಟ–೨, ಗುಪ್ತ ಮಂಚಣ್ಣನವರು ವಚನ ೧೦೦೦, ಪೂರ್ವೋಕ್ತ, ಪು–೧೩೦.

೧೭. ಸಂಕೀರ್ಣ ವಚನ, ಸಂಪುಟ, ೨, ಜೇಡ. ವ.೨೯.

೧೮. ಸಿದ್ದಲಿಂಗಮ್ಮ, ಬಿ.ಜಿ. ಮಧ್ಯಕಾಲಿನ ಕರ್ನಾಟಕದಲ್ಲಿ ಕುಶಲಕರ್ಮಿಗಳು ಒಂದು ಸಾಮಾಜಿಕ ಮತ್ತು ಚಾರಿತ್ರಿಕ ಅಧ್ಯಯನ, ೨೦೦೭, ಪು–೬೯.

೧೯. ನಯಸೇನ ವಿರಚಿತ ಧರ್ಮಾಮೃತ, ಪೂರ್ವೋಕ್ತ, ಪು–೭೯೭.

೨೦. ಸಂಕೀರ್ಣ ವಚನ ಸಂಪುಟ, ೩, ಮಾ.ಮಾ.ವು. ೭೫೭, ಪು.೬೯೯.

೨೧. ಸಂ.ವ.ಸ.೨. ಜೆ.ದಾ.ವ.೨೯.

೨೨. ಅದೇ, ವಚನ.೨೯.

೨೩. ಸಂಕೀರ್ಣ ವಚನ, ಸಂಪುಟ. ೩, ಮಾಳಿಗೆ ಮಾರಯ್ಯನ ವಚನ.೬೧೫, ಪೊರ್ವೋಕ್ತ, ಪು–೬೫೭.

೨೪. ಸಂಕೀರ್ಣ ವಚನ, ಸಂಪುಟ, ೨, ಜೆ.ದಾ.ವ.೨೯.

೨೫. ಶಿ.ಶ.ವ.ಸಂ., ಅಕ್ಕಮಹಾದೇವಿ ವಚನ.೨೫೩, ಪು-೭೪.

೨೬. ಕೃಷ್ಣಪ್ಪ, ಎಮ್.ವಿ., ಸೋಶಿಯಲ್ ಅಂಡ್ ಎಕಾನಮಿಕ್ ಕಂಡಿಷನ್ ಆಫ್ ಕರ್ನಾಟಕ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೯೪, ಪು-೧೪೭.

೨೭. ಶ್ರೀ ಗೌರಿಶಂಕರ, ಶರಣ ಚರಿತೆ ಮಾನಸಂ, (ಸಂ), ದೇವಿರಪ್ಪ. ಹೆಚ್., ಅಮರ ನೀತಿಗಳು, ೧೯೦೮, ಪು - ೮೨.

೨೮. ಬಸವರಾಜು, ಎಲ್., (ಸಂ), ಅಲ್ಲಮ್ಮನ ವಚನ ಚಂದಿಕೆ, ವಚನ.೧೬, ಪು೫.

೨೯. ನಯಸೇನ ವಿರಚಿತ ಧರ್ಮಾಮೃತಂ, ಪೂರ್ವೋಕ್ತ, ಪು-೬೬೨.

೩೦. ಎಲ್. ಬಸವರಾಜು, (ಸಂ), ಅಲ್ಲಮ್ಮನ ವಚನ ಚಂದ್ರಿಕೆ, ಪೂರ್ವೋಕ್ತ, ಪು೧೯೪.

೩೧. ಸಿದ್ಧಲಿಂಗಮ್ಮ, ಬಿ.ಜಿ., ಪೂರ್ವೋಕ್ತ, ಪು-೭೦.

೩೨. ನರಸಿಂಹಚಾರ್, ಡಿ.ಎಲ್., (ಸಂ) ಪಂಪ ಭಾರತ ದೀಪಿಕೆ, ಕ.ಅ.ಸ. ಮೈಸೂರು, ೧೯೭೧, ಪು-೩೪೦.

೩೩. ಎಲ್. ಬಸವರಾಜು, ಪೂರ್ವೋಕ್ತ, ಪು-೬೦.

೩೪. ಹಿರೇಮಠ, ಆರ್.ಸಿ., ಚನ್ನಬಸವಣ್ಣನವರ ವಚನಗಳು, ವಚನ-೨೦೦, ಕರ್ನಾಟಕ ವಿ.ವಿ. ಧಾರವಾಡ, ೧೯೭೧, ಪು-೯೧.

೩೫. ಬಸವಣ್ಣನವರ ವಚನ, ಸಂಪುಟ, ವಚನ೧೪೨, ಪೂರ್ವೋಕ್ತ, ಪು೯.

೩೬. ಸಿದ್ಧಲಿಂಗಮ್ಮ, ಬಿ.ಜಿ., ಪೂರ್ವೋಕ್ತ, ಪು-೭೧.

೩೭. ಗುರುರಾಜಾಚಾರ್, ಎಸ್., ಕರ್ನಾಟಕದ ಕೆಲವು ಕೈಗಾರಿಕೆಗಳು ಮಾನವಿಕ ಕರ್ನಾಟಕ ಸಂಪುಟ.೪ಸಂಚಿಕೆ.೨, ೧೯೭೪, ಪು-೪೨.

೩೮. ಕೇಶವಭಟ್ಟ, ಬಿ.ಕೆ., ಶಿವಕೋಟ್ಯಾಚಾರ್ಯನ ವಡ್ಡಾರಾಧನೆ (ಗದ್ಯಾನುವಾದ) ಕ.ಸಾ.ಪ. ೨೦೦೩, ಬೆಂಗಳೂರು, ಪು-೪೯.

೩೯. ಸಂಕೀರ್ಣ ವಚನ ಸಂಪುಟ, ಜೇಡರ ದಾಸಿಮಯ್ಯನ ವಚನ.೭೩೮, ೨೦೦೧, ಪು-೨೩೬.

೪೦. ಕೋಟಗಾನಹಳ್ಳಿ ರಾಮಯ್ಯ, ಸಿಂದ್ ಮಾದಿಗರ ಸಂಸ್ಕೃತಿ, ೨೦೧೧, ಪು-೧೮,

೪೧. ಕೋಟಗಾನಹಳ್ಳಿ ರಾಮಯ್ಯ, ಸಿಂದ್ ಮಾದಿಗರ ಸಂಸ್ಕೃತಿ, ೨೦೧೧, ಪು-೧೯.

೪೨. ಆರ್., ಶೇಷಶಾಸ್ತ್ರಿ, ಕರ್ನಾಟಕ ವೀರಗಲ್ಲುಗಳು, ಪು-೫೦-೫೧.

೪೩. ಆರ್., ಶೇಷಶಾಸ್ತ್ರಿ, ಕರ್ನಾಟಕ ವೀರಗಲ್ಲುಗಳು, ಪು-೫೦-೫೧

೪೪. ಕನ್ನಡ ವಿಶ್ವಕೋಶ, ಸಂ.-೧, ಪು೧೯.

೪೫. ಕ.ವಿ.ವಿ.ಶಾ., ಸಂ-೩, ಸಂ-೨೮೮, ಕ್ರಿಶ. ೧೫೫೪, ಪು-೨೧೨., ವಿಪಿ.ಆರ್., ನಂ.೬೪, ೧೯೮೩-೮೪, ವಿ.ಶಾ.೩೨೬

೪೬. ಎಸ್.ಎಸ್., ಹಿರೇಮಠ, ಜನಪದ ಸಮಾಜ ಸಂಸ್ಕೃತಿ, ಪು-೧೩೯

೪೭. ಅದೇ, ಪು-೧೪೦

೪೮. ಸಂಕೀರ್ಣ ವಚನ ಸಂಪುಟ-೩, ಬಾಚಿಕಾಯಕದ ಬಸವಣ್ಣನವರ ವಚನ, ೨೦೧,ಪು೮೦

೪೯. ಶಿವಶರಣೆಯರ ವಚನ ಸಂಪುಟ, ಚಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆಯವಚನ-೧೦೯೦, ಪು-೩೨೩

೫೦. ಬಸವಣ್ಣನವರ ವ.ಸಂ., ವಚನ-೪೫೧, ಪು-೧೦೯

೫೧. Kelleson collier, The Hoysala Artistists: Their Identity and styles p-೬೨-೬೩

೫೨. ಎಸ್.ಐ.ಐ. xv.no.೧೫೬, ಕಂದಗಲ್, ಹುನುಗುಂದ (ತಾ), ಕ್ರಿ.ಶ. ೧೨೦೭, ಪು೨೦೧

೫೩. ಇ.ಸಿ. ಅ.ಕೆ. ೧೪೯, ಕ್ರಿ.ಶ. ೧೧೪೨, ಪ-೧೯೩

೫೪. ಐ.ಎ. ೧೩, ಬೆಳಗಾವಿ, (ತಾ), ಕ್ರಿ.ಶ. ೧೨೦೪

೫೫. Kundangar, K.G., Inscriptions in Northern Karnataka and the Kolhapur state, No.೩೭, ೪-೧೧೫-೧೧೯

೫೬. ಎಸ್.ಐ.ಐ. ೧೧, ನಂ. ೧೮೬, ಮೊರಬ, ನವಲಗುಂದ (ತಾ) ಕ್ರಿ.ಶ.೧೧೦೩ ಪು-೨೪೫

೫೭. ಇ.ಸಿ. ೭, (ಹಳೆ), ಶಿಮು, ೨೯೩, ಕ್ರಿ.ಶ. ೧೦೮೦, ಪು-೩೪೨

೫೮. ಎಡ್.ಐ.ಐ. ೧೫, ನಂ.೩೧, ಅಮ್ಮಿನಭಾವಿ, ಶಾಸನವು ಧಾರವಾಡ (ತಾ), ಕ್ರಿ.ಶ.೧೧೪೬, ಪು- ೩೬

೫೯. Kelleson collier, op. cit. p-೬೧-೬೨

೬೦. ಅಣ್ಣಿಗೇರಿ, ಎಂ.ಎಂ., ಶೇಷಶಾಸ್ತ್ರ, ಆರ್., (ಸಂ), ಶಾಸನ ಸಂಗ್ರಹ, ಕ.ಸಾ.ಪ., ೧೯೯೯. ಪು-೨೫

೬೧. ಕನ್ನಡ ಜಾನಪದ ವಿಶ್ವಕೋಶ, ಸಂ.೧, ಪು-೨೩.

೬೨. ಅದೇ, ಪು-೨೨

೬೩. ಗ್ಯಾಝೆಟೀಯರು ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು: ಪು-೧೮೯, ೧೯೮೪

೬೪. ವೆಂಕಟರಾಜ ಪುಣಿಂಚತ್ತಾಯ, ಮೊಗವೀರರ ಸಂಸ್ಕೃತಿ, ಪು-೧-೨.

೬೫. ನಾಗೇಗೌಡ, ಎಚ್.ಎಲ್., ಪ್ರವಾಸಿಕಂಡ ಇಂಡಿಯಾ, ಸಂಪುಟ-೪, ಪು-೪೮.

೬೬. ಸುಶೀಲಾ ಉಪಾಧ್ಯಾಯ, ತುಳುವ, ಸಂಪುಟ-೩, ಸಂಚಿಕೆ-೧-೨, ೧೯೮೨, ಪು- ೨೨.

೬೭. ವೆಂಕಟರಾಜ ಪುಣಿಂಚತ್ತಾಯ, ಮೊಗವೀರರ ಸಂಸ್ಕೃತಿ, ಪು-೯

೬೮. ಎಲ್.ಕೆ., ಐಯ್ಯಂಗಾರ್, ದಿ ಮೈಸೂರ್ ಸ್ಟೇಟ್ ಟ್ರೈಬ್ಸ್ ಅಂಡ್ ಕ್ಯಾಸ್ಟ್ಸ್ ಸಂ.೭, ಪು-೨೫೭.

೬೯. ಅ.ರಾ. ಮಿತ್ರ, ಕುಮಾರವ್ಯಾಸನ ಕಥಾಮಿತ್ರ, ಪು-೬-೭

೭೦. ಅ.ರಾ. ಮಿತ್ರ, ಕುಮಾರವ್ಯಾಸ, ಭಾರತ ಕಥಾಮಿತ್ರ, ಪು-೭-೮-೨೭

೭೧. Capart, Thebes, p-೩೨

೭೨. ವಿಲ್‌ಡ್ಯೂರ್ಯಾಂಟ್, ನಾಗರಿಕತೆಯ:ಕಥೆ ನಮ್ಮ ಪ್ರಾಚ್ಯಪರಂಪರೆ, ಪು-೧೫೪

೭೩. ರತ್ನಾಕರನ, ಭರತೇಶವೈಭವ, ಪು-೯೪

೭೪. ಪೆರಿಸ್ತಾ:೧೧,೩೭೧

೭೫. ಸದಾನಂದ ಕನವಳ್ಳಿ, ಪೂರ್ವೋಕ್ತ, ಪು-೫೪.

೭೬. ವಿರೂಪಾಕ್ಷಿ ಪೂಜಾರಹಳ್ಳಿ, ವಿಜಯನಗರ ಕಾಲದ ಮೀನುಗಾರಿಕೆ ಮತ್ತು ಅಂಬಿಗತನ, ವಿಜಯನಗರ ಅಧ್ಯಯನ ಸಂಪುಟ-೬, ಪು-೭೭.

೭೭. ಉದ್ಧೃತ-ಜಾನಪದ ಸಾಹಿತ್ಯ ದರ್ಶನ, ಭಾಗ-೨, ಪು-೨೩೬.

೭೮. ಕೆ.ಸಿ. ನಾವಲಗಿ, ಜಾನಪದ ಸ್ಪಂದನ ಪು-೬೮, ೧೯೬೮.

೭೯. ಆರ್.ಎಸ್., ಶರ್ಮ., ಪ್ರಾಚೀನ ಭಾರತ ಪು-೧೮೦.

೮೦. ಕನ್ನಡ ಜಾನಪದ ವಿಶ್ವಕೋಶ, ಸಂ.೧, ಪು-೧೯.

೮೧. (ಕೆ.ಜಿ. ಭಟ್‌ಸೂರಿ, ಕಲವೀರಮನ್ವಾಚಾರ್, ಡಿ.ವಿ. ಪರಮಶಿವಮೂರ್ತಿ, (ಪ್ರಸಂ), ದೇವರ ಕೊಂಡಾರೆಡ್ಡಿ, (ಸಂ), ಕನ್ನಡಶಾಸನ ಸಂಪುಟ೨, ಸಂಖ್ಯೆ-೧೮, ಆನೆಗೊಂದಿ, ಕೊಪ್ಪಳ (ಅ), ಪು-೩೨೫-೩೨೬)

೮೨. ನಾಗೇಗೌಡ, ಹೆಚ್.ಎಲ್., ಪ್ರವಾಸಿ ಕಂಡ ಇಂಡಿಯಾ, ಸಂ-೬, ಪು-೮೩-೮೪.

೮೩. ಚಂದ್ರಶೇಖರಯ್ಯ, ಬಿ.ಎಂ., ಭಾರತೀಯ ಸಂಸ್ಕೃತಿ ಸಮೀಕ್ಷೆ, ಪು-೧೭೯.

೮೪. ಚಂದ್ರಶೇಖರಯ್ಯ, ಬಿ.ಎಂ. ಪೋರ್ವಕ್ತ, ಪು-೧೮೧.

೮೫. ಶ್ರೀಕಂಠಯ್ಯ, ಕೆ., ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಪು-೩೫೬.

೮೬. ದೇವೇಂದ್ರಕುಮಾರ ಹಕಾರಿ, ಸಂಧ್ಯಾರೆಡ್ಡಿ, (ಸಂ), ಗ್ರಾಮೀಣ ವೃತ್ತಿಗಳು, ಪು೧೫.

೮೭. ಇ.ಸಿ. ೧೧, ಹೆಚ್.ಕೆ., ೬೮, ಕ್ರಿ.ಶ. ೧೧೨೬.

೮೮. ಇ.ಸಿ. ೧೧, ಎಮ್.ಕೆ. ೨೭, ಕ್ರಿಪೂ ೯೬೨.

೮೯. ಕೋಸಾಂಬಿ., ಡಿ.ಡಿ., ಅನು ಟಿ.ಎಸ್. ವೇಣುಗೋಪಾಲ್, ಶೈಲಜಾ, ಪುರಾಣ ಮತ್ತು ವಾಸ್ತವ, ಪು-೧೨೩.

೯೦. ಶಿವಶರಣೆಯರ ವಚನ ಸಂಪುಟ, ವ.೬೮೯, ಪು೨೨೫.

೯೧. ಬಸವಣ್ಣನವರ ವಚನ, ಸಂಪುಟ, ವ.೧೨೫೮, ಪು-೩೮೪, ವ.೧೬, ಪು-೦೮.

೯೨ ರಘಶಂಖ ಭಾತಂಬ್ರಾ, ವಚನಕಾರರ ವೃತ್ತಿ ಮೌಲ್ಯಗಳು, ೨೦೧೧. ಪು-೮೦.

೯೩. ನಾಗೇಗೌಡ., ಹೆಚ್.ಎಲ್., ಪ್ರವಾಸಿ ಕಂಡ ಇಂಡಿಯಾ, ಸಂ-೬, ಪು-೨೧೮.

೯೪. ಬಸವಣ್ಣನವರ ವಚನ ಸಂಪುಟ, ವಚನ-೫೯೦, ಪು-೧೪೮.

೯೫. ಚನ್ನಬಸವಣ್ಣನವರ ವಚನ ಸಂಪುಟ, ವಚನ೧೯೨, ಪು-೫೭.

೯೬. ಬಸವಣ್ಣನ ವಚನ ಸಂಪುಟ, ವಚನ-೧೫೫, ಪು-೪೫.

೯೭. ನಯಸೇನ ವಿರಚಿತ ಧರ್ಮಾಮೃತಂ, ಪು-೧೨೦.

೯೮. ಪದ್ಮ ನಾಭಶರ್ಮ, ಕೇಶಿರಾಜಕೃತ, ಶಬ್ದಮಣಿದರ್ಪಣಂ, (ವ್ಯಾಖ್ಯಾನ) ೧೯೭೬,ಪು೨೨೪.

೯೯. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ೧೯೭೯, ಪು೪೩೬.

೧೦೦. ನಯಸೇನ ಧರ್ಮಾಮೃತಂ, ಪು-೨೫೩.

೧೦೧. ಹಿರೇಮಠ, ಆರ್.ಸಿ. (ಸಂ), ಚನ್ನಬಸವಣ್ಣನ ವಚನಗಳು ವಚನ-೮೮೯, ಪು೪೨೨.

೧೦೨. ಹಿರೇಮಠ, ಆರ್.ಸಿ., (ಸಂ), ಬಸವಣ್ಣನವರ ವಚನಗಳು, ವಚನ-೧೯೭, ಪು-

೧೦೩. ಸಿದ್ಧರಾಮೇಶ್ವರ ವಚನ ಸಂಪುಟ, ವಚನ-೧೩೯೦, ಹಾಗೂ ವಚನ ೧೯೨೮, ಪು-೪೦೧.೮೪.

೧೦೪. ನಯಸೇನ, ವಿರಚಿತ ಧರ್ಮಾಮೃತಂ, ಪು-೮೪.

೧೦೫. ಹಿರೇಮಠ ಆರ್.ಸಿ., (ಸಂ), ಬಸವಣ್ಣನ ವಚನಗಳು ವಚನ, ೧೨೫, ಪು೫೮.

೧೦೬. ನಯಸೇನ, ವಿರಚಿತ, ಧರ್ಮಾಮೃತಂ, ಪು-೧೯೧೯.

೧೦೭. ನಯಸೇನ, ಅದೇ, ಪು-೪೦೩.

೧೦೮. ಹಿರೇಮಠ, ಆರ್.ಸಿ., (ಸಂ), ಚನ್ನಬಸವಣ್ಣನವರ ವಚನಗಳು, ವಚನ-೫೦೨, ಪು-೨೨೮

೧೦೯. ಸುಂಕಾಪುರ, ಎಮ್.ಎಸ್., (ಸಂ), ಸಕಲ ಪುರಾತನ ವಚನಗಳು, ಸಂಪುಟ-೨, ವಚನ-೧೨೫೦, ಪು-೪೫೦.

೧೧೦. ಶೇಖರಚಾರಿ, ಪಾಂಚಾಳರ ಬದುಕು ಮತ್ತು ಭಾಷೆ, ಪು.

೧೧೧. Altekar, A.S., A history of Villags Communitiy on Western India, Madory, 1927, p-೯೩-೯೪.

೧೧೨. GuruRajacharra, s., Some Aspects of Economic and Social life in Karnataka, Mysore university, 1974, p-76.

೧೧೩. ನಯಸೇನ ವಿರಚಿತ ಧರ್ಮಾಮೃತಂ, ಪು-೧೨೩.

೧೧೪. ನಯಸೇನ, ಅದೇ, ಪು-೧೯೦.

೧೧೫. ಸಂಕೀರ್ಣ ವಚನ ಸಂಪುಟ, ಸಂಪುಟ-೩, ಬಾಚಿಕಾಯಕದ ಬಸವಣ್ಣನ ವಚನ- ೨೨೪, ಪು-೯

೧೧೬. ಇ.ಸಿ. ೬, ಕೃ.ಪೇ. ಸಂ-೬೬, ಕ್ರಿ.ಶ.೧೧೧೭, ಪು-೪೯

೧೧೭ ನಾವಲಗಿ, ಕೆ.ಸಿ. ಜಾನಪದ ಸ್ಪಂದನ, ೧೯೮೯, ಪು-೮೯

೧೧೮. ಸಂಗ್ರಹ ಜಾನಪದ ಸಾಹಿತ್ಯದರ್ಶನ೭, ವೃ .ಸ್ವಾಮಿ.

೧೧೯. ರಾಜಶೇಖರಪ್ಪ, ಎಂ., ಚಿತ್ರದುರ್ಗ ಜಿಲ್ಲೆಯ ಗಾಣಿಗ ಸಮುದಾಯದ ಸಮಾಜಶಾಸ್ತ್ರೀಯ ಅಧ್ಯಯನ, ೨೦೦೯, ಪು-೧

೧೨೦. ಅದೇ, ಪು-೧೮

೧೨೧. ಎ.ಕ., (ಮೈ), ೬, ಪಾಂಡವಪುರ, ೩೫, ಕ್ರಿ.ಶ. ೧೧೯೩.

೧೨೨. ಎ.ಕ. (ಮೈ), ೫, ತಿ.ನರಸೀಪುರ, ೩೨೨, ಕ್ರಿ.ಶ. ೧೧೭೯.

೧೨೩. Jpiprakash: The Guilds of Dil Millers in Ancient India, Svastisri, p 307.

೧೨೪. ಎ.ಕ. (ರೈ), ೫, ಬೇಲೂರು, ೧೮೮, ಕ್ರಿ.ಶ. ೧೧೯೧.

೧೨೫. ಎ.ಇ.೨೦, ಬಾಗಲಕೋಟೆ, ೧೧೨, ಕ್ರಿಸ.೧೧೬೭.

೧೨೬. ಎಸ್.ಐ.ಐ. ೧೫, ಬಾಗೇವಾಡಿ, ೧೨೯, ಕ್ರಿ.ಶ. ೧೧೭೬.

೧೨೭ ಎಸ್.ಐ.ಐ. ೧೫, ರೋಣ, ೧೩೯, ಕ್ರಿ.ಶ. ೧೧೮೩.

೧೨೮. ಎ.ಕ. (ಮೈ), ೬, ಪಾಂಡವಪುರ, ೩೫, ಕ್ರಿ.ಶ. ೧೧೯೩.

೧೨೯. ಎ.ಕ. (ರೈ), ೭, ಶಿಕಾರಿಪುರ, ೨೩೬, ಕ್ರಿ.ಶ. ೧೧೭೪.

೧೩೦. ಎ.ಕ. (ರೈ) ೬, ಕಡೂರು, ೩೬, ಕ್ರಿ.ಶ. ೧೨೦೩.

೧೩೧. ಎ.ಕ. (ರೈ) ೧೨, ತಿಪಟೂರು, ೬೬, ಕ್ರಿ.ಶ. ೧೧೬೩, (ರೈ), ಎ.ಕ. ೫, ಅರಸೀಕೆರೆ, ೮೮, ಕ್ರಿ.ಶ. ೧೧೮೪.

೧೩೨. ಎ.ಇ. ೨೦, ರೋಣ, ೧೨, ಎ.ಕ್ರಿ.ಶ. ೧೧೬೭.

೧೩೩. ಎ.ಕ. (ಮೈ) ೪, ಚಾಮರಾಜನಗರ, ೧೦೫, ಕ್ರಿ.ಶ. ೧೨ನೆಯ ಶತಮಾನ.

೧೩೪. ಎಸ್.ಐ.ಐ. ೧೫, ರೋಣ, ೧೩೯, ಕ್ರಿ.ಶ. ೧೧೮೩.

೧೩೫. ಸಂ-೪,ಪ-೨೮ಪು-೨೮.

೧೩೬ ಸಂ-೪, ಪ-೨೮, ಪು-೩೮.

೧೩೭. ಬಿ.ಎಂ. ಶ್ರೀಕಂಠಯ್ಯ, ಪ್ರಸಂ., ಡಿಎಸ್. ವೆಂಕಣ್ಣಯ್ಯ, ಎ.ಆರ್‌ಕೃಷ್ಣಶಾಸ್ತ್ರಿ, (ಸಂ), ೧೯೪೪, ಹರಿಶ್ಚಂದ್ರ ಕಾವ್ಯ ಸಂಗ್ರಹ, ಪು- ೩೮.

೧೩೮. ಪಿ.ವಿ. ಕೃಷ್ಣಮೂರ್ತಿ, ಬಾಣರಾಸನ ಶಾಸನಗಳು ಒಂದು ಅಧ್ಯಯನ, ಪು-೧೨೩.

೧೩೯. ಇ.ಸಿ. ೧೦, ಕೋಲಾರ, ೨೪೫.

೧೪೦. ARIE, 1912/B 326.

೧೪೧. ಸ-೧೦, ಪ-೩೬,ಪು-೩೯.

೧೪೨. ಹಂಪನಾಗಾರಾಜಯ್ಯ, (ಸಂ), (ಗ.ಅ) ಶಾಂತಿಪುರಾಣಂ, ಪು-೩೯, ೧೯೮೨.

೧೪೩. ಆರ್.ಸಿ. ಹಿರೇಮಠ, (ಪ್ರಾ.ಸಂ.) ಬಿ.ಎಸ್. ಕುಲಕರ್ಣಿ,(ಸಂ) ನೇಮಿನಾಥಪುರಾಣ, ೧೯೬೮, ಪು-೪೭.

೧೪೪. ಸ-೨,ಗ-೨೧.

೧೪೫. ವೆಂಕಟರಾಮಪ್ಪ, ಕೆ., (ಗ.ಅ) ಧರ್ಮಾಮೃತಂ,೧೯೭೭, ಪು-೧೧೨.

೧೪೬. ಮೈ, ಪು.ದ. ೧೯೨೩, ಸ.೧೧೦ ಪು-೧೧೭.

೧೪೭. ಕೆಳದಿ ವೆಂಕಟೇಶ ಜೋಯಿಸರು, ಕೆಳದಿ ಅರಸರ ಶಾಸನ ಸಂಪುಟ-೧೯೯೧ ಶಿವಮೊಗ್ಗ, ವೀರಭದ್ರನಾಯಕರು ಕ್ರಿ.ಶ. ೧೬೩೨.

೧೪೮. ಶಿವಶರಣರ ವಚನಗಳು, ಪು-೩೦೪, ಮೋಳಿಗೆ ಮಹಾದೇವಿ, ೨೩.

೧೪೯. ಪಿ.ವಿ. ನಾರಾಯಣ, ವಚನಸಾಹಿತ್ಯ:ಒಂದು ಸಾಂಸ್ಕೃತಿಕ ಅಧ್ಯಯನ, ಬೆಡಗಿನ ವ.ಪು- ೨೦೨೦, ನಗೆಯ ಮಾರಿತಂದೆ,೫. ಪು-೧೮೩

೧೫೦. ಎಚ್.ಎಂ., ನಾಗರಾಜು., ವಿಜಯನಗರ ಇಮ್ಮಡಿದೇವರಾಯ, ಪು-೧೯೫.

೧೫೧. ಸರ್ವಜ್ಞ , ಪ-೬೮೬, ಪು-೯೫.

೧೫೨. ಪ-೪೮೬, ಪು-೭೨.

೧೫೩. ಪ-೧೨೬೯, ಪು-೧೬೩.

೧೫೪. ಬಸವರಾಜು, ಎಲ್., (ಸಂ), ಸರ್ವಜ್ಞನ ವಚನಗಳು, ಪು-೯೫-೭೨-೧೬೩

೧೫೫. ಕ.ವಿ.ವಿ.ಶಾ., ಸಂಪುಟ-೮, ಸಂಖ್ಯೆ, ೫೮, ಮುಚಳಂಬ, (ಬೀದರ್), ಕ್ರಿ.ಶ. ೧೧೨೫, (ತ್ರಿಭುವನಮಲ್ಲ) ಪು-೭೪-೭೫,). (ಎ.ಆರ್. ನಂ.ಬಿ.೧೬೦, ೧೯೭೧-೭೨.

೧೫೬. ಎ.ಆರ್.ನಂ.ಬಿ.೭೬೬, ೧೯೬೨-೬೩, ಹೆಚ್‌ಸಿಎಸ್‌ಎಬಿ ನಂ.೧೮). (ಕ.ವಿ.ವಿ.ಶಾ.ಸಂ.- ಸಂ-೫೦, (ಬೀದರ್ ಜಿಲ್ಲೆ), ಬಸವಕಲ್ಯಾಣ್ಯ, ಗೋರ್ಭೌ, ಕ್ರಿ.ಶ. ೧೦೮೨,

೧೫೭. ಎ.ಆರ್. ನಂ.೫೨, ೧೯೦೪, ಎಸ್.ಐ.ಐ. ೯, ನಂ.೩೩೬., ಕ.ವಿ.ವಿ.ಶಾ.ಸಂ.೧, ಸಂ.೩೫, ಬಲ್ಲಕುಂದೆ,ಕ್ರಿ.ಶ.೧೨೧೮, (ಬಳ್ಳಾರಿಜಿಲ್ಲೆ), ವೀರಬಲ್ಲಾಳ, ಪು-೪೦-೪೭.

೧೫೮. ಕ.ವಿ.ವಿ.ಶಾ.ಸಂ.೧, ಸಂ-೨೨, ಹಗರಿಬೊಮ್ಮನಹಳ್ಳಿ, ಕ್ರಿ.ಶ.೧೧೪೬, ಪು-೨೬೯೨೮೦. ತ್ರಿಭುವನ ಮಲ್ಲ, ಪು-೬೫-೬೬.

೧೫೯. ಕ.ವಿ.ವಿ.ಶಾ., ಸಂ-೩, ಸಂ-೨೮೮, ಕ್ರಿ.ಶ. ೧೫೫೪, ಪು-೨೧೨., ಎಪಿ.ಆರ್., ನಂ.೬೪, ೧೯೮೩-೮೪,ವಿ.ಶಾ.೩೨೬

ಅಧ್ಯಾಯ–೫

ಕಸುಬುಗಳ ಸ್ಥಿತ್ಯಂತರ

ಮಾನವರ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ರಾಜಕೀಯದ ಜೀವನವನ್ನು ನಿರ್ಧರಿಸುವಲ್ಲಿ ಆ ಸಮುದಾಯ ಅಥವಾ ಆ ಕುಟುಂಬ ಅನುಸರಿಸುತ್ತಿರುವ ಕಸುಬುಗಳು ಬಹುಮುಖ್ಯ ಪಾತ್ರವಹಿಸುತ್ತವೆ. ಆದಿಮಾನವ ಆಹಾರದ ಕೊರತೆಯನ್ನು ನೀಗಿಸಿಕೊಳ್ಳಲು ಬೇಟೆಯಿಂದ ಪಶುಪಾಲನೆ, ಪಶುಪಾಲನೆಯಿಂದ ಕೃಷಿ ಹೀಗೆ ಮೂಲ ಉದ್ಯೋಗಗಳನ್ನು ಬದಲಾಯಿಸಿಕೊಂಡು ಬೇರೆ ಬೇರೆ ಕಸುಬುಗಳನ್ನು ಅಂದಿನಿಂದ ಇಂದಿನವರೆಗೆ ಅನುಸರಿಸಿಕೊಳ್ಳುತ್ತಾ, ತನ್ನ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಗೊಳಿಸಿಕೊಳ್ಳುತ್ತಾ ಬಂದಿರುವುದನ್ನು ಕಾಣಬಹುದು.

ಭಾರತ ಕೃಷಿ ಪ್ರಧಾನವಾದ ಅದೂ ಹಳ್ಳಿಗಳಿಂದ ಕೂಡಿದ ದೇಶವಾಗಿದೆ. ಈ ಹಳ್ಳಿಗಳಲ್ಲಿರುವ ಜನಸಂಖ್ಯೆಯ ಪೈಕಿ ಸುಮಾರು ಶೇ.೭೦–೭೫ರಷ್ಟು ಜನರು ಬೇಸಾಯ ಮಾಡಿಕೊಂಡಿರುವವರು. ಅದರಲ್ಲಿ ಇತರೆ ಕಸುಬುಗಳನ್ನು ೧೦–೧೫ರಷ್ಟು ಅವಲಂಬಿಸಿಕೊಂಡಿದ್ದಾರೆ. ಕೃಷಿ ಪ್ರಧಾನ ದೇಶವಾದ್ದರಿಂದ ಭೂಮಿಗೆ ಹೆಚ್ಚು ಮಹತ್ವ, ಈ ಭೂಮಿಯ ಒಡೆಯನಾದ ರೈತನನ್ನು ಕೇಂದ್ರವಾಗಿಟ್ಟುಕೊಂಡು ಉಳಿದ ಕಸುಬುಗಳು ರೂಪುಗೊಂಡಿವೆ. ರೈತ ಕುಟುಂಬದ ಎಲ್ಲರಿಗೂ ಬೇಕಾದ ಆಹಾರವನ್ನು ಉತ್ಪಾದಿಸಿದರೆ ಈ ರೈತ ಕುಟುಂಬಕ್ಕೆ ಬೇಕಾದ ಸರಕು ಸೇವೆಗಳನ್ನು ಉಳಿದ ಕುಲಕಸುಬುದಾರರು ಸಲ್ಲಿಸುತ್ತಾರೆ. ಆದರೆ ಇಂದಿನ ಜಾಗತೀಕರಣ ಮತ್ತು ಕೈಗಾರೀಕರಣದ ಪ್ರಭಾವದಿಂದಾಗಿ ಕುಲಕಸುಬಗಳು ಮೂಲೆಗುಂಪಾಗಿವೆ. ಕಾರ್ಖಾನೆಯಿಂದ ತಯಾರಾದ ವಸ್ತುಗಳು ಪಾರಂಪರಿಕವಾಗಿ ಕುಲಕಸುಬುದಾರರಿಂದ ತಯಾರಾಗಿರುವ ವಸ್ತುಗಳು ಮುಖಾಮುಖಿಯಾಗಿ ಕೊಳ್ಳುವ ಗ್ರಾಹಕ ಅಂತಿಮವಾಗಿ ನಯವಾದ ಕಡಿಮೆ ಬೆಲೆ, ಹೆಚ್ಚು ಬಾಳಿಕೆ ಬರುವ ಕೈಗಾರಿಕ ಪದಾರ್ಥಗಳಿಗೆ ಮನಸೋತಿರುವುದು ಕಾಣಬಹುದು ಕುಲಕಸುಬುದಾರರು ತಯಾರಿಸುತ್ತಿರುವ ವಸ್ತುಗಳನ್ನು ಉಪೇಕ್ಷೀಸುತ್ತಿರುವುದನ್ನು ನೋಡಬಹುದು. ವಸ್ತುವಿನಿಮಯ ಪದ್ಧತಿ ತನ್ನ ಪ್ರಭಾವವನ್ನು ಆಧುನಿಕ ಆರ್ಥಿಕ ವ್ಯವಸ್ಥೆಯಲ್ಲಿ ಕಳೆದುಕೊಂಡಂತೆ; ಆಧುನಿಕ ಮಾರುಕಟ್ಟೆ ವ್ಯವಸ್ಥೆ ಕಾರ್ಯರೂಪಕ್ಕೆ ಬಂದಿದೆ. ಕಸುಬುದಾರರು ತಮ್ಮ ವರ್ತಮಾನ ಮಾರುಕಟ್ಟೆಯ ಬಗ್ಗೆ ವಿಶ್ಲೇಷಣೆ ಮಾಡುವುದಕ್ಕಿಂತ ಮುಂಚಿತವಾಗಿ ಮಾರುಕಟ್ಟೆ ಎಂದರೇನು? ಎಂಬುದನ್ನು ವಿವರಿಸುವುದು ಅಗತ್ಯ.

ಮಾರಾಟ ಪ್ರಕ್ರಿಯೆಯಲ್ಲಿ ಮಾರುಕಟ್ಟೆ ಎನ್ನುವ ಪದದ ಮೂಲ ಅರ್ಥ ವಿವರಣೆ ತಿಳಿಯುವುದು ಇಲ್ಲಿ ಅವಶ್ಯ ಮಾರ್ಕೆಟ್ ಎನ್ನುವ ಆಂಗ್ಲ ಪದ 'ಮಾರ್ಕೆಟಿಸ್' ಎನ್ನುವ ಲ್ಯಾಟಿನ್ ಪದದಿಂದ ಉದ್ಭವವಾಗಿದೆ. ಈ ಲ್ಯಾಟಿನ ಪದ ವ್ಯಾಪಾರ ಮಾಡು, ವ್ಯಾಪಾರ ಸ್ಥಳ, ವ್ಯಾಪಾರ ವಸ್ತು, ಎಂದೆಲ್ಲ ಅರ್ಥ ಕೊಡುತ್ತದೆ. ಆಯಾ ಸಂದರ್ಭಕ್ಕೆ ಅನುಗುಣವಾಗಿ ಈ ಪದವನ್ನು ಉಪಯೋಗಿಸಲಾಗಿದೆ. ಇದರಿಂದ ನಮಗೆ ತಿಳಿಯುವ ಅಂಶ ಮಾರುಕಟ್ಟೆ ಎಂದರೆ ವಸ್ತು ವಿನಿಮಯ ಕೇಂದ್ರ ಅಥವಾ ಕೊಳ್ಳುವವರು ಮತ್ತು ಮಾರಾಟಗಾರರು ಭೇಟಿಯಗುವ ಸ್ಥಳ ಅಥವಾ ವಹಿವಾಟು ನಡೆಯುವ ವ್ಯಾಪ್ತಿ ಅಥವಾ ಕೊಳ್ಳುವ ಮಾರುವ ಕ್ರಿಯೆ ಅಥವಾ ವಾಣಿಜ್ಯ ಚಟುವಟಿಕೆ ಪ್ರಕ್ರಿಯೆ ಎಂದು ಹೇಳಬಹುದು.

ವಿಲಿಸ್ ಕೋಟ್ಲರ್ ಪ್ರಕಾರ ಶಕ್ತಿ ವಿನಿಮಯ ಕಾರ್ಯ ನಡೆಯುವ ಸ್ಥಳ ಎಂದು ಹೇಳಿದ್ದಾರೆ.[7] ದೇಶ, ರಾಜ್ಯ, ಸಮುದಾಯದ ಆರ್ಥಿಕ ವ್ಯವಸ್ಥೆಯಲ್ಲಿ ವಸ್ತುಗಳ ಉತ್ಪಾದನೆ ಎಷ್ಟು ಮುಖ್ಯವೋ ಅವುಗಳ ಮಾರಾಟ ಅಷ್ಟೇ ಮುಖ್ಯ ಕುಲಕಸುಬುದಾರರು ತಯಾರಿಸಿದ ಆ ವಸ್ತುಗಳಿಗೆ ಇಂತಹ ಮಾರುಕಟ್ಟೆಗಳು ಸ್ಥಳಗಳು ದೂರವಾಗಿವೆ. ಕಸುಬುದಾರರು ತಯಾರಿಸಿದ ವಸ್ತುಗಳಲ್ಲಿ ಕುಶಲತೆಯಿಲ್ಲದಿರಬಹುದು. ಮಾರುಕಟ್ಟೆಯ ನಿಯಮಗಳು ತೆರಿಗೆಗಳು ಇವರಿಗೆ ಒಗ್ಗದ ವಿಷಯವಾಗಿರಬಹುದು. ಇತ್ಯಾದಿ ಕಾರಣಗಳಿಂದ ಕಸುಬುದಾರರು ಮಾರುಕಟ್ಟೆಯಿಂದ ದೂರ ಉಳಿದಿದ್ದಾರೆ.

ಕಸುಬುಗಳು ಮತ್ತು ಜಾಗತೀಕರಣ

ಜಾಗತೀಕರಣ ಎಂಬ ವಿಷಯ ಇಂದು ಮಹತ್ವದ ಚರ್ಚೆ, ವಾಗ್ವದ, ಸಂಘರ್ಷಗಳಿಗೆ ಎಡೆಮಾಡಿಕೊಟ್ಟಿದೆ. ಜಗತ್ತಿನ ಬಹುತೇಕ ಹಿಂದುಳಿದ ರಾಷ್ಟ್ರಗಳಲ್ಲಿಯಂತೂ ಈ ವಿಷಯ ಇನಿಲ್ಲದಂತೆ ಚರ್ಚೆಯಾಗುತ್ತಿದೆ. ಮುಂದುವರೆದ ರಾಷ್ಟ್ರಗಳಿಗೆ ವರದಾನವೆಂಬಂತೆ ಭಾವಿಸಿ ಆತಂಕದ ಛಾಯೆಯಲ್ಲಿರುವ ಕೆಲವು ರಾಷ್ಟ್ರಗಳು, ಜಾಗತೀಕರಣ ಮತ್ತು ಖಾಸಗೀಕರಣಗಳು ತಮ್ಮ ಅಭಿವೃದ್ಧಿಯ ತಳಹದಿಗೆ ತಂದುಕೊಳ್ಳಲು ಹಪಹಪಿಸುತ್ತವೆ. ಮುಖ್ಯವಾಗಿ ಇಂದು ನಡೆಯುತ್ತಿರುವ ವ್ಯವಹಾರಿಕ ಜಗತ್ತಿನಲ್ಲಿ ಆಧುನಿಕತೆಯ ಪರಿಣಾಮವಾಗಿ ಉಂಟಾಗುತ್ತಿರುವ ಈ ಬಗೆಯ ತಲ್ಲಣಗಳಿಗೆ ಯಾವ ರಾಷ್ಟ್ರಗಳಿಗೂ ಯಾವ ಚಿಂತಕರಿಗೂ ಏಕತಾನತೆ ಇದ್ದಂತೆ ತೋರುವುದಿಲ್ಲ, ಅಂದರೆ ಜಾಗತೀಕರಣದ ಸ್ವರೂಪ ಮತ್ತು ಮಾದರಿಯ ನಿರ್ದಿಷ್ಟ ಪರಿಕಲ್ಪನೆಯನ್ನು ಏಕಮುಖಗೊಳಿಸಲು ಆಗುತ್ತಿಲ್ಲ. ಜಾಗತೀಕರಣ ಎಂದರೇನು? ಇದರ ಸ್ವರೂಪ ಹೇಗಿದೆ ಇದು ಒಡ್ಡುತ್ತಿರುವ ಸವಾಲು-ಆಂತಕಗಳೇನು,? ಹಿಂದುಳಿದ ರಾಷ್ಟ್ರಗಳ ಪ್ರತಿಕ್ರಿಯೆ ಎಂಥದ್ದು ಎಂದೆಲ್ಲಾ ವಿಷಯಗಳನ್ನು ಪ್ರಶ್ನಾರ್ಥಕವಾಗಿ ನೋಡುತ್ತಿರುವುದು ಒಂದೆಡೆಯಾದರೆ ಈ ಎಲ್ಲಾ ಅಂಶಗಳನ್ನು ಕೇವಲ ರಾಜಕೀಯ ಒಳಗೋಲಿನಲ್ಲಿ ಅಳೆಯುವ ಮತ್ತೊಂದು ಪರಿಕ್ರಮ ಇದೆ. ಆಂತರಿಕ ಮತ್ತು ಅಂತರಾಷ್ಟ್ರೀಯ ನೆಲೆಯಲ್ಲಿ ರಾಜಕಾರಣವೆಂಬುದು ಇಂತಹ ಜಾಗತೀಕರಣ ಮತ್ತು ಖಾಸಗೀಕರಣಗಳ ನೆಲೆಯನ್ನು ಆಹ್ವಾನಿಸುತ್ತಲೇ; ಆತಂಕ ತಲ್ಲಣಗಳನ್ನು ಗೊತ್ತಿದ್ದೂ ಕರೆದಂತಾಗುತ್ತದೆ ಎಂಬ ಗುಮಾನಿ ಬೌದ್ಧಿಕ ವಲಯದಲ್ಲಿದೆ.

ಜಾಗತೀಕರಣದ ಚರ್ಚೆಯ ಬಹು ವ್ಯಾಪಕವಾದುದು ಕಾರಣವಾಗಿ ಇದನ್ನು ಕುಲಕಸುಬುಗಳಿಗೆ ಅನ್ವಯಿಸಿ ಹೇಳುವುದು ಕಷ್ಟದ ಸಂಗತಿ.

ಆಧುನಿಕತೆಯ ತುತ್ತತುದಿಯನ್ನು ಮುಟ್ಟುವ ಹಂಬಲದಲ್ಲಿರುವ ಪ್ರಸ್ತುತ ಸಾಮಾಜಿಕ ಜೀವನದ ಜೊತೆಗೆ ಕರಾಳತೆಯ ಮುಖ ಇರುವುದನ್ನು ನಗಣ್ಯ ಮಾಡಲಾಗಿದೆ. ನಿಜ ಜಗತ್ತಿನಲ್ಲಿ ಯಾವುದೂ ಅನಿವಾರ್ಯವಲ್ಲ ಎಂಬಂತೆ ನಟಿಸಿ ಆಧುನಿಕತೆಯ ಸೋಗನ್ನು ಹಾಕುವ ಮೂಲಕ ದೇಶಿ ರಚನೆಗಳ, ಸಾಂಸ್ಕೃತಿಕ ಆಕೃತಿ ಆಯಾಮಗಳನ್ನು ಮರೆಯಲಾಗುತ್ತಿದೆ. ದೇಸಿ ಚಿಂತನೆಯ ಮೂಲಕ ಹೊರಹೊಮ್ಮಿ ಒಂದು ಮತ್ತು ಮಾನವ ಭಾವನಾತ್ಮಕ ಸಂಬಂಧವನ್ನು ಬೆಸೆಯುವ ಕಲೆ, ಸಾಹಿತ್ಯ, ಸಾಂಸ್ಕೃತಿಯ ಪರದೆಯ ಹಿಂದಕ್ಕೆ ಸರಿಯುತ್ತದೆ. ಬಡಿಗಿಯ ರಚನೆಯದ ಕುಂಟೆ, ರಂಟೆ, ಕುಳ, ಕೂರಿಗೆ, ಕುರ್ಜಿಗೆ ಮಡಕೆಗಳು ಕಣ್ಮರೆಯಾಗಿ ಆಧುನಿಕ ಉಪಕರಣಗಳಾದ ಟಿಲ್ಲರ್, ಕಂಲ್ಟಿವೇಟರ್, ಫ್ಲೊ ಇತ್ಯಾದಿಗಳಿಂದ ಟ್ರ್ಯಾಕ್ಟರ್‌ನಲ್ಲಿ ವ್ಯವಸಾಯ ಮಾಡುವ ಪದ್ಧತಿ ಬಂದಿವೆ.

ಕುಂಬಾರನ ರಚನೆಯಾದ ಮಡಕೆ, ಕುಡಿಕೆಗಳು ಹೋಗಿ ಪ್ಲಾಸ್ಟಿಕ್ ಹಾವಳಿಯಾಗಿದೆ. ಕೈಯಿಂದ ನೇಯುವ ಕಂಬಳಿ, ಚಾಪೆ, ಸೀರೆಗಳು, ಹೀಗೆ ಪ್ರತಿಯೊಂದು ಕಸುಬಿಗೂ ಅಸ್ತಿತ್ವವಿಲ್ಲದಾಗಿದೆ. ಮುಂತಾದ ದೇಸಿ ಕಲೆಗಳ ಅಸ್ತಿತ್ವವಂತೂ ವೈಜ್ಞಾನಿಕತೆಯ ಆಧುನಿಕತೆಯ ನೆಪದಲ್ಲಿ ತಮ್ಮ ನೆಲೆಯಿಂದ ಸ್ಥಿತ್ಯಂತರಗೊಳ್ಳುತ್ತಿದೆ.

ವಿಜಯನಗರ ಕಾಲದಲ್ಲಿ ಜೀವಂತವಾಗಿದ್ದ ಕುಲಕಸುಬುಗಳ ಜ್ಞಾನವನ್ನು ನಾವು ಈ ಹಿಂದೆ ಚರ್ಚೆ ಮಾಡಿದ್ದೇವೆ. ಆಧುನಿಕತೆಯ ಅವಾಂತರದಲ್ಲಿ ಎಲ್ಲೂ ಕೆಲವು ಕಡೆ ಇದ್ದರೂ ಅವುಗಳ ನೈಜತೆಯ ಉಳಿವಿನ ಬಗ್ಗೆಯಂತೂ ಆತಂಕಪಡಲೇಬೇಕಿದೆ. ಹೀಗೆ ಇಂದಿನ ಪೀಳಿಗೆ ವಿದೇಶಿ ಸಂಸ್ಕೃತಿಗೆ ಮಾರು ಹೊಗುವುದು ಪ್ಯಾಶನ್ ಆಗಿ ಮಾರ್ಪಡಾಗುತ್ತಿರುವುದು ಆತಂಕದ ಸಂಗತಿಯಾಗಿದೆ. ಆಧುನಿಕ ಮನಸ್ಸಿನ ಪ್ರಗತಿಯೆಂದು ಭಾವಿಸಿರುವ ಈ ಮುಗ್ಧ ಕಸುಬುದಾರರನ್ನು ಜಾಗತೀಕರಣವು ತನ್ನ ಪ್ರಬಲ ಬಾಹುಗಳಿಂದ ನಿರ್ಗತಿಕರನ್ನಾಗಿಸಿದೆ.

ವಿಜಯನಗರ ಕಾಲದಿಂದ ಹಲವು ಕಸುಬುದಾರರು ಇಂದಿಗೂ ಅದೇ ಕಸುಬನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಆದರೆ ಇಂದಿನ ಆಧುನಿಕತೆಯ ಪರಿಣಾಮವಾಗಿ ಇವುಗಳಿಗೆ ಹೊಡೆತ ಬಿದ್ದು ಸಾಂಸ್ಕೃತಿಕ ಪಲ್ಲಟಗಳಿಗೆ ಕಾರಣವಾಗಿದೆ. ವಿಜಯನಗರ ಸಾಮ್ರಾಜ್ಯದಲ್ಲಿ ನೇಕಾರಿಕೆ ಬಹುರೂಪದ ಕಸುಬಾಗಿತ್ತು. ತನ್ನ ವೃತ್ತಿ ಕೌಶಲ್ಯದಿಂದಲೇ ವಿಶ್ವದ ಗಮನ ಸೆಳೆದಿದ್ದ ಹಲವು ನೇಕಾರ ಸಂಘಗಳಿದ್ದವು. ಹಲವು ದೇಶಗಳಿಗೆ ಬಟ್ಟೆಗಳನ್ನು ರಫ್ತು ಮಾಡುತ್ತಿದ್ದರು ಹದಿನಾರು ಮೊಳದ ಸೀರೆಯನ್ನು ಬೆಂಕಿ ಪೊಟ್ಟಣದಲ್ಲಿ ಮಡಚಿ ಇಡುವಷ್ಟು ನಯವಾಗಿ ನೇಯುವ ಕಲೆಗಾರಿಕೆ ಸಿದ್ಧಿಸಿತ್ತು. ನೇಕಾರನಿಗೆ ಸಿಗುತ್ತಿದ್ದ ಮಾನ್ಯತೆ, ಗೌರವ ಅವನನ್ನು ಮಾನಸಿಕವಾಗಿ ಸಂತೃಪ್ತಿಗೊಳಿಸಿತ್ತು. ಇಂತಹ ಸಂತೃಪ್ತಿ ಜೀವನವೇ ಅವನಿಗೆ ಇನ್ನಿತರ ರಂಗಗಳತ್ತ ಒಲವು ಹರಿಯುವಂತೆ ಮಾಡಿತ್ತು. ಭಕ್ತಿಪಂಥ ವಚನಕಾರರ ಚಳವಳಿಗಳತ್ತ ನೇಕಾರರ ಪಾಲ್ಗೊಳ್ಳುವಿಕೆ ಸಾಧ್ಯವಾಯಿತು. ವಚನಕಾರರ ಕಾಲದಲ್ಲಿ ಸಹ ಇದೇ ಕಸುಬುದಾರರು

ಮುಖ್ಯವಾಗಿ ನೇಕಾರರು ಇದರ ಮುಖ್ಯ ಪಾತ್ರವಹಿಸಿಕೊಂಡರು ಅವರಿಗೆ ಸಿಕ್ಕಿದ್ದ ಮಾರುಕಟ್ಟೆ ಮೇಲಿನ ಹಿಡಿತೆ ಅದರಿಂದ ದೊರೆತ ಆರ್ಥಿಕ ಸ್ವಾತಂತ್ರ್ಯ ನೇಕಾರರನ್ನು ಚಳವಳಿಗೆ ಮುಂಚೂಣಿಗೆ ತಂದು ನಿಲ್ಲಿಸಿತ್ತು. ಜೇಡರ ದಾಸಿಮಯ್ಯ ವಚನಕಾರರ ಚಳವಳಿಯಲ್ಲಿ ಪ್ರಮುಖ ವಚನಕಾರನಾಗಿ ತಮ್ಮ ಅನುಭವವನ್ನು ಜಗತ್ತಿಗೆ ಪರಿಚಯಿಸುವಂತಾಯಿತು. ಕೈಮಗ್ಗಗಳು ಯಾಂತ್ರೀಕೃತ ಮಗ್ಗಗಳ ಪ್ರವೇಶದಿಂದ ನೇಕಾರ ಬೀದಿಗೆ ಬಿದ್ದಂತಾಗಿ ಹೊಸ ತಂತ್ರಜ್ಞಾನದ ಆರ್ಥಿಕ ಚೈತನ್ಯವಿಲ್ಲದ ಕಾರಣ ಅಳವಡಿಸಿಕೊಳ್ಳಲು ವಿಫಲನಾದ ನೇಕಾರ ಭಾಗಶಃ ನಿರುದ್ಯೋಗಿಯಾಗಿದ್ದಾ.

ಆಧುನಿಕ ಜವಳಿ ಕ್ಷೇತ್ರ ಪ್ರವೇಶಿಸಲು ಸಂಪೂರ್ಣ ವಿಫಲವಾದ ನೇಕಾರ ವರ್ಗ ಇಂದು ಆಯ್ಕೆ ಮಾಡಿಕೊಂಡಿರುವ ಗುಡಿಕೈಗಾರಿಕೆ ಎಂಬ ಕೈಮಗ್ಗದ ಉದ್ಯಮ ಕುಸುರಿ ಕೆಲಸದಲ್ಲಿ ಪಳಗಿದ ನೈಪುಣ್ಯತೆ, ಕ್ರಿಯಾಶೀಲತೆಯಲ್ಲೇ ಸಮಾಧಾನ ಪಡೆಯುತ್ತಿರುವ ನೇಕಾರ ಆರ್ಥಿಕವಾಗಿ ಲಾಭ ಪಡೆಯದಿದ್ದರು ಇದೇ ಉದ್ಯಮದಲ್ಲಿ ತೊಳಲಾಡುತ್ತಿದ್ದಾನೆ. ಹಿಂದೆ ಬಂಗಾರದ ಒಡವೆಗಳಿಗೆ ನೀಡಿದಷ್ಟು ಪ್ರಾಮುಖ್ಯತೆಯನ್ನು ಮಹಿಳೆಯರು ರೇಷ್ಮೆ ಸೀರೆಗಳಿಗೂ ನೀಡುತ್ತಿದ್ದರು. ಹೆಚ್ಚು ರೇಷ್ಮೆ ಸೀರೆಗಳನ್ನು ಹೊಂದುವುದು ಮಹಿಳೆಯರು ಪ್ರತಿಷ್ಠೆಯನ್ನು ಸೂಚಿಸುತ್ತಿತ್ತು. ದುಬಾರಿ ಬೆಲೆಯ ವಸ್ತುಗಳನ್ನು ಕೊಳ್ಳುವ ಖಾಯಲಿಯಿರುವ ಮಹಿಳೆಯರು ರೇಷ್ಮೆ ಸೀರೆಗಳಲ್ಲಿ ಬಳಕೆಯಾಗುತ್ತಿದ್ದ ಚಿನ್ನದ, ಬೆಳ್ಳಿಯ ಜರಿಯ ಬಳಕೆಯೂ ಇದಕ್ಕೆ ಕಾರಣವಾಗಿತ್ತು. ಇಂದು ರೇಷ್ಮೆ ಸೀರೆಗಳಲ್ಲಿ ಟಿಸ್ಟೆಡ್ ಜರಿಯ ಬಳಕೆಯಾಗುತ್ತಿದೆ. ಇದರಿಂದಾಗಿ ಸಾಮಾನ್ಯ ಬೆಲೆಗೂ ರೇಷ್ಮೆ ಸೀರೆಗಳು ಲಭ್ಯವಾಗುತ್ತಿವೆ.

ಹೀಗೆ ನೇಕಾರರು ಕಸುಬು ಇಂದಿನ ಆಧುನಿಕ ಯುಗದಲ್ಲಿ ಸಂಪೂರ್ಣ ನಶಿಸುವತ್ತ ವಾಲಿದೆ. ಸರ್ಕಾರ ವಿವಿಧ ಯೋಜನೆಗಳನ್ನು ರೂಪಿಸಿದರೂ ಕೈಮಗ್ಗದ ನೇಕಾರನಿಗೆ ಅದರ ಪ್ರತಿಫಲ ಲಭ್ಯವಾಗುತ್ತಿಲ್ಲ ಮತ್ತು ಕೈಮಗ್ಗದ ನೇಕಾರನಿಗೆ ಪ್ರಯೋಜನಕ್ಕೆ ಬರುವ ಅಂಶಗಳು ಈ ಯೋಜನೆಯಲ್ಲಿ ಗೋಚರವಾಗುವುದಿಲ್ಲ ಜವಳಿ ಉದ್ಯಮ ಮತ್ತು ವಿದ್ಯುತ್‌ಚಾಲಿತ ಮಗ್ಗಗಳ ದೃಷ್ಟಿಯಿಲ್ಲಿರಿಸಿಕೊಂಡು ರೂಪಿತವಾದ್ದರಿಂದ ಈ ಪ್ರಕಾರ ಸೌಲಭ್ಯಗಳು ಹೆಚ್ಚುಕಡಿಮೆ ಉಳ್ಳವರ ಪಾಲಾಗುತ್ತಿವೆ.

ನೇಕಾರನ ಹೆಂಡತಿ ಬೆತ್ತಲೆ ಗಾದೆಯು ನೇಕಾರನ ಆರ್ಥಿಕ ಸ್ಥಿತಿಯನ್ನು ಅನಾವರಣಗೊಳಿಸುತ್ತದೆ.

ಉಂಕಿಯ ನಿಗುಚಿ, ಸರಿಗೆಯ ಸಮಗೊಳಿಸಿ
ಸಮಗಾಲನಿಕ್ಕಿ ಅಣೆಯೊಳೆರಡರ ಮೆಟ್ಟಿದೆ
ಹಿಡಿದ ಲಾಳಿಯ ಮುಳ್ಳು ಕಂಡಿಕೆಯ ನುಂಗಿತ್ತು
ಈ ಸೀರೆಯ ನೇಯ್ದುವ ನಾನೋ ನೀನೋ ರಾಮನಾಥ!

ಜೇಡರ ದಾಸಿಮಯ್ಯ

ಈ ವಚನದಲ್ಲಿ ನೇಯ್ಗೆ ವೃತ್ತಿಯನ್ನು ಹಾಗೂ ನೇಯ್ಗೆಗೆ ಅಗತ್ಯವಿರುವ ಉಪಕರಣಗಳ ಕ್ರಿಯೆಯನ್ನು ವರ್ಣಿಸುವುದರ ಮೂಲಕ ಏಕಾಗ್ರತೆಯಿಂದ ನೇಯ್ಗೆ ಕಾಯಕದಲ್ಲೂ ಬ್ರಹ್ಮ ಜ್ಞಾನವನ್ನು ಹೋಲಿಸಿ ಮಾಡಿದ ಆದ್ಯ ವಚನಕಾರ ಜೇಡರ ದಾಸಿಮಯ್ಯ ಕಸುಬುದಾರರ

ಅತ್ಯಂತ ಪ್ರಮುಖ ಸಮಸ್ಯೆಯೆಂದರೆ ಮಾರುಕಟ್ಟೆಯ ಸಮಸ್ಯೆ. ಈ ಕುಲಕಸುಬುದಾರರು ಯಾವುದೇ ರೀತಿಯ ಸಂಘಟನೆ ಮಾರುಕಟ್ಟೆ ವ್ಯವಸ್ಥೆಯನ್ನು ಹೊಂದಿರುವುದಿಲ್ಲ ಹಾಗೂ ಮಾರುಕಟ್ಟೆಯ ಬಗ್ಗೆ ಪೂರ್ಣ ಮಾಹಿತಿ ಇರುವುದಿಲ್ಲ. ಉತ್ಪನ್ನಗಳ ಗುಣಮಟ್ಟ ಕಡಿಮೆ ಇದೆ. ಹಾಗೂ ಉತ್ಪನ್ನಗಳ ಬೆಲೆ ನಿಷ್ಕರ್ಷ ವಿಂಗಡಣೆ, ಪ್ರಚಾರ ಸಾರಿಗೆ ವ್ಯವಸ್ಥೆ ಇತ್ಯಾದಿ ಸೌಲಭ್ಯಗಳು ದೊರೆಯದೆ ಕಸುಬುದಾರರು ತಮ್ಮ ಸರಕುಗಳನ್ನು ಮಾರಾಟ ಮಡಲು ಸಾಧ್ಯವಾಗುತ್ತಿಲ್ಲ. ಕೆಲವರು ತಮ್ಮ ಉತ್ಪನ್ನಗಳನ್ನು ಹತ್ತಿರದ ಪಟ್ಟಣದಿಂದ ಪಟ್ಟಣಕ್ಕೆ ಅಲೆದು ಮನೆಮನೆಗೆ ಹೋಗಿ ಮಾರಾಟ ಮಡುತ್ತಾರೆ. ಇವರಿಗೆ ವಾರದ ಸಂತೆ, ಜಾತ್ರೆ, ಹಬ್ಬ, ಇತ್ಯಾದಿಗಳೆ ಮಾರಾಟದ ಕೇಂದ್ರ್ರಗಳು. ನಗರದಲ್ಲಿ ಜನಸಾಂದ್ರತೆ ಇರುವ ಸಾರ್ವಜನಿಕ ಸ್ಥಳ, ರಸ್ತೆ, ಬೀದಿಗಳಲ್ಲಿ ಉತ್ಪನ್ನಗಳನ್ನು ಇಟ್ಟು ಮಾರಾಟ ಮಾಡುತ್ತಾರೆ. ಇವುಗಳಿಗೆ ನಿರ್ದಿಷ್ಟ ಬೆಲೆ ಎಂಬುದೇ ಇಲ್ಲ ಜೊತೆಗೆ ದೊಡ್ಡ ಉದ್ದಿಮೆದಾರರ ಪೈಪೋಟಿ ಹಾಗೂ ಜಾಹಿರಾತು ಭರಾಟೆಯಲ್ಲಿ ಇವರ ವಸ್ತುಗಳನ್ನು ಕೊಳ್ಳುವವರಿಲ್ಲವಾಗಿದೆ.

ಬೃಹತ್ ಕೈಗಾರಿಕೆಗಳಿಗೆ ಬೇಕಾಗುವಂತೆ ಕಸುಬುದಾರರಿಗೆ ಭಾರಿ ಯಂತ್ರೋಪಕರಣಗಳು ಬೇಕಾಗುವುದಿಲ್ಲ. ಅವರಿಗೆ ಬೇಕಾಗಿರುವುದು ಸಣ್ಣ ಮತ್ತು ಸೂಕ್ತ ಯೋಗ್ಯ ಉಪಕರಣಗಳು ಮಾತ್ರ ಅವು ಸಹ ತುಂಬಾ ಕೊರತೆಯಲ್ಲಿವೆ. ಕೆಲವು ಕಸುಬುಗಳಿಗೆ ಯಂತ್ರೋಪಕರಣಗಳೆ ಇಲ್ಲ ಅವರು ತಮ್ಮ ಕೈಗಳಿಂದಲೇ ಸರಕುಗಳನ್ನು ತಯಾರಿಸುತ್ತಾರೆ. ಆಧುನಿಕ ಯಂತ್ರೋಪಕರಣಗಳು ತುಂಬಾ ದುಬಾರಿಯಾಗಿದ್ದು ಅವುಗಳನ್ನು ಪಡೆಯುವುದು ಕಸುಬುದಾರರಿಗೆ ಸಾಧ್ಯವಾಗುತ್ತಿಲ್ಲ. ಆದುದರಿಂದ ಅವರು ಹಳೆಯ ಉಪಕರಣಗಳನ್ನೆ ಉಪಯೋಗಿಸುತ್ತಾರೆ. ಹಾಗೂ ಹಳೆಯ ಉತ್ಪಾದನಾ ವಿಧಾನಗಳನ್ನು ಅನುಸರಿಸುತ್ತಿದ್ದಾರೆ. ಅವರು ಉತ್ಪಾದಿಸುವ ವಸ್ತುಗಳು ಹಳೆಯ ಮಾದರಿಗಳಾಗಿವೆ. ಕಸುಬುದಾರರು ಹೆಚ್ಚಾಗಿ ನಿರೀಕ್ಷಿಗಳೂ ಅಜ್ಞಾನಿಗಳು ಮತ್ತು ಸಂಪ್ರದಾಯ ಶರಣರೂ ಆಗಿರುವುದರಿಂದ ತಮ್ಮ ಕಸುಬುಗಳನ್ನು ಉಳಿಸಿ ಬೆಳೆಸುವುದು ಕಠಿಣವಾಗಿದೆ.

ಕಸುಬುದಾರರಿಗೆ ತರಬೇತಿಯಾಗಲಿ ಅವುಗಳಿಗೆ ಸಂಬಂಧಿಸಿದಂತೆ ಸಂಶೋಧನಾ ಕಾರ್ಯಚಟುವಟಿಕೆಗಳ ಕೊರತೆ ಇದೆ. ಕಸುಬುಗಳು ವಂಶಪಾರಂಪರ್ಯವಾಗಿ ಬೆಳೆದು ಬಂದವುಗಳು ಮನೆಯ ಹಿರಿಯರು ನೀಡಿದ ತರಬೇತಿ ಹಾಗೂ ಮಾಹಿತಿಗಳೆ ಆಧಾರ. ಕಸುಬನ್ನು ನೋಡಿ–ತಿಳಿದು ಕಲಿತುಕೊಳ್ಳಬೇಕಾಗಿದೆ. ಅವುಗಳಿಗೆ ಸಂಬಂಧಿಸಿದಂತೆ ಶಾಲಾ–ಕಾಲೇಜು ಹಾಗೂ ಸಂಸ್ಥೆಗಳಲ್ಲಿ ಮಾಹಿತಿ ಮತ್ತು ತರಗತಿ ವ್ಯವಸ್ಥೆ ಇರುವುದಿಲ್ಲ. ಇದರಿಂದಾಗಿ ಕಸುಬುದಾರರ ಆಧುನೀಕರಣ ಸಾಧ್ಯವಾಗುತ್ತಿಲ್ಲ. ಕಾರಣ ಅವರ ಉತ್ಪಾದನಾ ವೆಚ್ಚ ಹೆಚ್ಚು ಹಾಗೂ ಸರಕುಗಳ ಗುಣಮಟ್ಟ ಕಡಿಮೆ ಇದೆ. ಕಸುಬುದಾರರ ಸ್ಥಿತ್ಯಂತರ ನಿಧಾನಗತಿಯಲ್ಲಿ ನಡೆಯುತ್ತಿದೆ.

ಕಸುಬುದಾರರು ತಯಾರಿಸುವ ಅನೇಕ ವಸ್ತುಗಳನ್ನು ಬೃಹತ್ ಕೈಗಾರಿಕೆಗಳು ಉತ್ಪಾದಿಸುತ್ತಿವೆ. ಉದಾಹರಣೆಗೆ ಚಮ್ಮಾರನ ಚಪ್ಪಲಿ, ಕುಂಬಾರನ ಮಡಿಕೆಗಳು, ಕಬ್ಬಿಣ ಕೆಲಸಗಾರನ ವಸ್ತುಗಳು,

ಅಕ್ಕಸಾಲಿಗನ ಆಭರಣಗಳು, ನೇಕಾರನ, ಬಟ್ಟೆಗಳು ಹೀಗೆ ಅವರ ಪಟ್ಟಿ ಬೆಳೆಯುತ್ತದೆ. ಇಂತಹ ವಸ್ತುಗಳನ್ನು ದೊಡ್ಡ ಕೈಗಾರಿಕೆಗಳು ಉತ್ಪಾದಿಸುತ್ತವೆ. ಇವು ಅತ್ಯಾಧುನಿಕ ತಂತ್ರಜ್ಞಾನ ಮತ್ತು ಯಂತ್ರೋಪಕರಣಗಳನ್ನು ಬಳಸಿ ಉತ್ತಮ ಗುಣಮಟ್ಟದ ವಸ್ತುಗಳನ್ನು ಉತ್ಪಾದಿಸುತ್ತಾರೆ. ಅವುಗಳ ಉತ್ಪಾದನಾ ವೆಚ್ಚವು ಕಡಿಮೆ ಬೆಲೆಯ ಕಡಿಮೆ ಹಾಗೂ ಹೆಚ್ಚು ಕಾಲ ಬಾಳಿಕೆ ಬರುತ್ತದೆ. ಆದರೆ ಕಸುಬುದಾರರ ವಸ್ತುಗಳ ಉತ್ಪಾದನಾ ವೆಚ್ಚ ಹೆಚ್ಚು ಗುಣಮಟ್ಟ ಕಡಿಮೆ ಹಾಗೂ ಬಾಳಿಕೆ ಕಡಿಮೆ ಇರುವುದರಿಂದ ಬೇಡಿಕೆ ಕಡಿಮೆ ಈ ಬೃಹತ್ ಕೈಗಾರಿಕೆಗಳ ಪೈಪೋಟಿಯನ್ನು ಎದುರಿಸುವ ಶಕ್ತಿ ಕಸುಬುದಾರರು ಹೊಂದಿಲ್ಲ.

ಇಂದಿನ ಮಾರುಕಟ್ಟೆಯಲ್ಲಿ ಆಧುನಿಕ ಕೈಗಾರಿಕೆಗಳ ಪೈಪೋಟಿಯಿಂದಾಗಿ ನೇಕಾರ ಉತ್ಪಾದಿಸುವ ಉಡುಪುಗಳಿಗೆ ಬೇಡಿಕೆ ಕಡಿಮೆ. ಹೊಸ ಮಾದರಿಯ ಆಭರಣಗಳು ಮಾರುಕಟ್ಟೆ ಪ್ರವೇಶಿಸಿರುವುದರಿಂದ ಅಕ್ಕಸಾಲಿಗನ ಕಸುಬಿಗೆ ದಕ್ಕೆಯಾಗಿದೆ. ಹೀಗೆ ಆಧುನಿಕ ಮಾರುಕಟ್ಟೆಯಲ್ಲಿ ಕೈಗಾರೀಕರಣದ ಪ್ರಭಾವದಿಂದ ಕಸುಬುದಾರರು ತೀವ್ರ ಪೈಪೋಟಿಯನ್ನು ಎದುರಿಸುತ್ತಾ ಕಸುಬುಗಳು ಸ್ಥಿತ್ಯಂತರಗೋಳ್ಳುತ್ತಿವೆ.

ಕಸುಬುದಾರರಿಗೆ ತಂತ್ರಜ್ಞಾನ, ಕೊರತೆ, ಕೊಂಡುಕೊಳ್ಳುವ ಕೊರತೆ, ಸಾಲಸೌಲಭ್ಯಗಳ ಸಮಸ್ಯೆ, ನಿರ್ವಹಣೆ, ಮೂಲಸೌಲಭ್ಯದ ಕೊರತೆ ಶಕ್ತಿ ಸಂಪನ್ಮೂಲ, ಸಾರಿಗೆ ಸಂಪರ್ಕದ ಕೊರತೆ ಕಾರ್ಯನಿರ್ವಹಣೆಗೆ ಸ್ಥಳದ ಸಮಸ್ಯೆ, ಸಾಮಾಜಿಕ ಭದ್ರತಾ ಸೌಲಭ್ಯಗಳ ಕೊರತೆ ಹೀಗೆ ಹತ್ತು ಹಲವು ಸಮಸ್ಯೆಗಳಿಂದ ಕಸುಬನ್ನು ತೊರೆಯುವ ಹಂತಕ್ಕೆ ಬಂದಿದ್ದಾರೆ.

ವಿಜಯನಗರ ಕಾಲದಲ್ಲಿ ಶಿಲ್ಪಗಳ ಬೆಳವಣಿಗೆ ಉನ್ನತ ಸ್ಥಿತಿ ತಲುಪಿತ್ತು. ಅವರ ಕಲಾ ಕೌಶಲ್ಯ, ಸೂಕ್ಷ್ಮವಾದ ಕೈಚಳಕ ದೂರದೃಷ್ಠಿ ಮೊದಲಾದವುಗಳು ಪಾಶ್ಚಿಮಾತ್ಯ ಪ್ರಶಂಸೆಗೆ ಪಾತ್ರವಾಗಿವೆ. ಶಿಲ್ಪಶಾಸ್ತ್ರವು ಭಾರತದಲ್ಲಿ ಪುರಾತನ ಕಾಲದಿಂದಲೂ ನಡೆದು ಬಂದಿದೆ. ಮಾನವನಿಗೂ ಶಿಲ್ಪಕ್ಕೂ ನಿಕಟವಾದ ಸಂಬಂಧವಿದೆ. ಮಾನವನ ಹುಟ್ಟಿನಿಂದಲೇ ಶಿಲ್ಪವು ಹುಟ್ಟಿತೆಂದು ಹೇಳಬಹುದು. ವಾಸ್ತುಶಿಲ್ಪ ಮಾನವನ ನಾಗರಿಕತೆಯ ಮಾನದಂಡವಾಗಿದೆ. ಜೀವನದ ಪ್ರಗತಿಯನ್ನು ಪ್ರತಿಬಿಂಬಿಸುವ ಪಡಿಯಚ್ಚಾಗಿದೆ.

ಜಗತ್ತನ್ನು ನಿರ್ಮಿಸಲು ಬ್ರಹ್ಮನು ತನ್ನ ಸಹಾಯಕ್ಕಾಗಿ ಪಾಂಚಾಳರನ್ನು ಸೃಷ್ಠಿಸಿದನೆಂದು ಪ್ರತೀತಿ. ಅವರಲ್ಲಿ ಬಡಿಗ, ಕಮ್ಮಾರ, ಕುಂಬಾರ, ಅಕ್ಕಸಾಲಿಗ ಹಾಗೂ ಕಲುಕುಟಿಗರು ಪ್ರಮುಖರಾಗಿದ್ದಾರೆ. ವಿಶ್ವಕರ್ಮ ಪುರಾಣ, ಮೂಲಸ್ತಂಭ ಪುರಾಣ, ಶ್ರೀ ರುದ್ರಭಾರತ ಬ್ರಹ್ಮಾಂಡ ಪುರಾಣ ಹಾಗೂ ಐತಿಹಾಸಿಕ ದಾಖಲೆಗಳು ಉಲ್ಲೇಖಿಸಿರುವಂತೆ ಸಮುದಾಯದ ಅರಸರು, ಮಾಂಡಲಿಕರು ಹಾಗೂ ಆಧ್ಯಾತ್ಮಿಕ ಪುರುಷರು ಕರಕುಶಲ ವಾಸ್ತುಶಿಲ್ಪಿಗಳಾಗಿದ್ದಾರೆ. ಅತಿ ಪುರಾತನ ಕಾಲದಿಂದಲೂ ಕಲ್ಲುಕುಟಿಗರು ತಮ್ಮ ಕಸುಬುದಾರ ಕಲ್ಲನ್ನು ಕಡಿಯುವ ಕೆಲಸದಲ್ಲಿ ಪರಿಣಿತರಾಗಿದ್ದರು ಅವರಲ್ಲಿ ಕೆಲವರು ವಾಸ್ತುಶಿಲ್ಪ ಹಾಗೂ ಕಲೆಗಳಲ್ಲಿ ಪರಿಣಿತರಾಗಿದ್ದರು ದವಸ ಧಾನ್ಯಗಳನ್ನು ಹದಮಾಡಿ ಕೊಡುವ, ಬೀಸುವಕಲ್ಲು ಒಳಕಲ್ಲು ಹಾಗೂ ಹಿಂಡಿ ಕಲ್ಲುಗಳನ್ನು ತಯಾರಿಸುತ್ತಾರೆ. ಸಾಮ್ರಾಜ್ಯದಾದ್ಯಂತ ಗುಡ್ಡ, ಬೆಟ್ಟ ಹಾಗೂ ಕಾಡುಮೇಡುಗಳಲ್ಲಿ ನಿರ್ಮಿಸಿದ ಗುಡಿಗೋಪುರ, ಮಠ-ಮಂದಿರಗಳು ಇವರ ಕಾರ್ಯಕ್ಕೆ ಜೀವಂತ ಸಾಕ್ಷಿಯಾಗಿವೆ.

ಪ್ರಾಚೀನ ಕಾಲದಿಂದ ಹಿಡಿದು ಇಂದಿನವರೆಗೆ ಜನರಿಂದ ಪೂಜಿಸಲ್ಪಡುವ ವಿವಿಧ ಮೂರ್ತಿಗಳು ಮೂಲತಃ ಕಲ್ಲು ಬಂಡೆಗಳಾಗಿದ್ದು ಅವುಗಳಿಗೆ ಶಿಲೆಯ ಮೂರ್ತಿಗಳನ್ನು ಕೆತ್ತನೆ ಮಾಡಿ ರೂಪಕ್ಕೆ ತಕ್ಕಂತೆ ಆಕಾರ ಕೊಟ್ಟು ನಿರ್ಮಿಸಲಾಗಿದೆ. ಕಾಶಿಯ ವಿಶ್ವನಾಥ, ಕೇದಾರದ ಕೇದಾರನಾಥ ಶ್ರವಣಬೆಳಗೊಳದ ಗೋಮ್ಮಟೇಶ್ವರ, ಕೊಲ್ಲೂರಿನ ಮೂಕಾಂಬಿಕೆ ಇತ್ಯಾದಿಗಳ ಕಲ್ಲಿನ ವಿಗ್ರಹಗಳಾಗಿದ್ದು ಇವುಗಳ ನಿರ್ಮಾಣ ಕಾರ್ಯದಲ್ಲಿ ಶಿಲ್ಪಿ ಹಾಗೂ ಕಲ್ಲುಕುಟಿಗರ ಪಾತ್ರ ಮರೆಯುವಂತಿಲ್ಲ. ಬೃಹದಾಕಾರದ ಕಲ್ಲಿನಿಂದ ದೇವಾಲಯಗಳನ್ನು ನಿರ್ಮಿಸಿ ಗರ್ಭಗುಡಿಯಲ್ಲಿನ ಮೂರ್ತಿಗಳನ್ನು ಕೆತ್ತುವಲ್ಲಿ ಕಲ್ಲುಕುಟಿಗ ಮತ್ತು ಶಿಲ್ಪಿಗಳು ತಮ್ಮ ಕಲಾಕೌಶಲ್ಯವನ್ನು ಮೆರೆದಿದ್ದಾರೆ.

ನಾಡಿನ ಸಂಸ್ಕೃತಿಯ ವಿಕಾಸಕ್ಕೆ ಕಾರಣವಾಗಿ ನಿರ್ಮಾಣಗೊಂಡ ಕೋಟೆ ಕೊತ್ತಲಗಳು, ದೇವಸ್ಥಾನ, ಗೋಪುರ, ಬಾವಿ, ಅರಮನೆ, ಮೂರ್ತಿಗಳು, ಪ್ರಸಿದ್ಧವಾಗಿವೆ. ವಾಸ್ತುಶಿಲ್ಪಕಲೆಗೆ ತಮ್ಮ ಶ್ರಮ ವ್ಯಕ್ತಪಡಿಸಿ ರಚಿಸಿದ ಅಮೋಘವಾದ ಕೊಡುಗೆಗಳು ಇನ್ನೂ ಜೀವಂತವಾಗಿವೆ. ಕಲ್ಲುಕುಟಿಗ ಮತ್ತು ಶಿಲ್ಪಗಳು ಶಿಲ್ಪಕಲೆ ಮತ್ತು ವಾಸ್ತು ಶಿಲ್ಪಕ್ಷೇತ್ರಕ್ಕೆ ವಿಶೇಷ ಮಹತ್ವವನ್ನು ನೀಡಿದ್ದಾರೆ. ವಾಸ್ತುಶಿಲ್ಪವು ನಾಗರೀಕತೆಯನ್ನು ರೂಪಿಸುತ್ತದೆ. ಹಾಗೂ ಜಾಗತಿಕ ಜೀವನದ ಕನ್ನಡಿಯಿದ್ದಂತೆ ಎಂದು ತಿಪ್ಪೇರುದ್ರಸ್ವಾಮಿ, ಅವರು ಕರ್ನಾಟಕ ಸಂಸ್ಕೃತಿ ಸಮೀಕ್ಷೆಯಲ್ಲಿ ತಿಳಿಸಿದ್ದಾರೆ. ಕರ್ನಾಟಕದಲ್ಲಿ ಅನೇಕ ಶಿಲಾ ಶಾಸನಗಳೂ ಲಭ್ಯವಾಗಿವೆ. ವಿಜಯನಗರದ ಅನೇಕ ಶಾಸನಗಳಲ್ಲಿ ಕಲ್ಲುಕುಟಿಗ, ಬೇರೂಜ, ಸಿಂಗೋಜ, ದಾಮೋಜ, ಕಂಡರಣಿ ಮೊದಲಾದವರ ಹೆಸರುಗಳು ಉಲ್ಲೇಖವಾಗಿವೆ.

ವಿಜಯನಗರದ ಅರಸರ ಕಾಲದಲ್ಲಿ ಈ ಕಸುಬುದಾರರು ಸೂಕ್ಷ್ಮ ಕೆತ್ತನೆಯ ಮೂಲಕ ಬೃಹತ್ ಗಾತ್ರದ ಕಲ್ಲಿನ ಶಿಲ್ಪಗಳನ್ನು ನಿರ್ಮಿಸಿದ್ದಾರೆ. ಉಗ್ರನರಸಿಂಹ, ಸಾಸಿವೆ, ಕಡಲೆಕಾಳು ಗಣಪತಿಗಳು, ನಂದಿ ವಿಗ್ರಹ, ಕಲ್ಲಿನ ರಥ ಉದ್ದಾನ ವೀರಭದ್ರೇಶ್ವರ ವಿರೂಪಾಕ್ಷ, ವಿಜಯವಿಠಲ ದೇವಾಲಯಗಳಲ್ಲದೆ, ತಮಿಳುನಾಡು ಹಾಗೂ ಆಂಧ್ರಗಳಲ್ಲಿ ಅನೇಕ ದೇವಾಲಯಗಳನ್ನು ನಿರ್ಮಿಸುವಲ್ಲಿ ಇವರ ನಿಸ್ವಾರ್ಥ ಸೇವೆಯನ್ನು ಗಮನಿಸಬಹುದು. ಇಂತಹ ಕೊಡುಗೆ ನೀಡಿದ ಕಸುಬು ಇಂದು ನಶಿಸುವತ್ತ ಸಾಗಿದೆ. ಶಿಲ್ಪಗಳನ್ನು ರಚನೆ ಮಾಡಲು ಆಧುನಿಕ ರೀತಿಯ ಯಂತ್ರಗಳು ಬಂದಿವೆ. ದೈವ ಭಕ್ತಿ ಕಡಿಮೆಯಾಗಿ ದೇವಸ್ಥಾನಗಳ ರಚನೆ ನಿಂತಿದೆ. ಇಂದಿನ ಕಂಪ್ಯೂಟರ್ ಯುಗದಲ್ಲಿ ದೇವಸ್ಥಾನಕ್ಕೆ ಹೋಗುವವರ ಸಂಖ್ಯೆ ಕಡಿಮೆಯಾಗಿದೆ. ಇಂದಿನ ಯಾಂತ್ರಿಕೃತ ಬದುಕಿನಲ್ಲಿ ಈ ಶಿಲ್ಪಗಳಿಗೆ ಮಾನ್ಯತೆ ಇಲ್ಲದಾಗಿದೆ. ಹೀಗೆ ಕಲ್ಲುಕುಟಿಗ ಮತ್ತು ಶಿಲ್ಪಗಳ ಕಸುಬು ಸಂಪೂರ್ಣವಾಗಿ ನಶಿಸುವತ್ತ ಸಾಗಿದೆ. ಈ ಕಸುಬಿನ ಐತಿಹಾಸಿಕ ಹಿನ್ನೆಲೆಯನ್ನು ಗಮನಿಸಿದಾಗ ರಾಜ ಮಹಾರಾಜರ ಆಳ್ವಿಕೆಯಲ್ಲಿ ತನ್ನದೆ ಆದ ಸ್ಥಾನಮಾನಗಳೊಂದಿಗೆ ಗುರುತಿಸಿಕೊಂಡಿರುತ್ತದೆ. ಅರಸೊತ್ತಿಗೆಯ ಆಳ್ವಿಕೆಯಲ್ಲಿ ಇವರ ಕಸುಬು ಶ್ಲಾಘನೀಯವಾದದ್ದು. ಕೋಟೆ ಕೊತ್ತಲುಗಳ, ದೇವಸ್ಥಾನಗಳ ನಿರ್ಮಾಣ, ಅರಮನೆ ನಿರ್ಮಾಣ, ಶಿಲ್ಪಗಳ ಕೆತ್ತನೆ ಇತ್ಯಾದಿ ಶ್ರಮದ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಇಂದು ಗುಡ್ಡ ಪ್ರದೇಶಗಳಲ್ಲಿ ಬಂಡೆಕಲ್ಲುಗಳ ಸ್ಫೋಟಿಸಿ ಎಬ್ಬಿಸುವುದು, ಸಾಗಿಸುವುದು ದಿನನಿತ್ಯದ ವಸ್ತುಗಳಾದ ಬೀಸುವ ಕಲ್ಲು ಒಳಕಲ್ಲು

ತಯಾರಿಸಿ ಮಾರಾಟ ಮೊದಲಾದ ಕೆಲಸಗಳಲ್ಲಿ ನಿರತರಾಗಿದ್ದಾರೆ. ವಿಜ್ಞಾನ ತಂತ್ರಜ್ಞಾನದ ಪ್ರಭಾವದಿಂದ ಹಿಟಾಚಿ, ಕ್ರಶರ್, ಮಿಕ್ಸರ್ ಹಾಗೂ ಗ್ರ್ಯಾಂಡರ್‌ಗಳ ಆವಿಷ್ಕಾರದಿಂದಾಗಿ ಇವರ ಮೂಲ ಕಸುಬಿಗೆ ಕೊಡಲಿ ಪೆಟ್ಟುಬಿದ್ದಿದೆ.

ಪ್ರಪಂಚದ ಪ್ರತಿಯೊಂದು ಕಸುಬಿನವರಿಗೂ ತನ್ನದೇ ಆದ ವಿಶಿಷ್ಟ ಸಂಸ್ಕೃತಿ ಇರುತ್ತದೆ. ಪರಾಂಪರಾಗತವಾಗಿ ಬಂದ ಉಡುಗೆ ತೊಡುಗೆ, ಆಚಾರ-ವಿಚಾರ, ನಡೆ-ನುಡಿ ಇತ್ಯಾದಿಗಳು ಆದರೆ ದೇಶ ಮತ್ತು ಪರಿಸರಕ್ಕನುಗುಣವಾಗಿ ಯಾವುದೇ ಸಂಸ್ಕೃತಿಯ ಬದಲಾವಣೆ ಅಥವಾ ಪರಿವರ್ತನೆ ಸಹಜ ಮತ್ತು ಅನಿವಾರ್ಯ ಕೂಡ ಹೌದು. ಸಂಸ್ಕೃತಿಯಲ್ಲಿನ ಮೌಖಿಕ ಅಂಶಗಳನ್ನು ಉಳಿಸಿಕೊಳ್ಳುವುದು ಮತ್ತು ಮೌಢ್ಯ ಹಾಗೂ ಕಂದಾಚಾರಗಳನ್ನು ತೊಡೆದು ಹಾಕುವುದರಿಂದ ಮಾತ್ರ ಸಂಸ್ಕೃತಿಯ ಸಮಗ್ರ ಬದಲಾವಣೆ ಸಾಧ್ಯ. ಮನುಷ್ಯ ಬದುಕಿಗೆ ಸಂಬಂದಪಟ್ಟ ಸಮಸ್ತ ವ್ಯವಹಾರಗಳ ಬದಲಾವಣೆಯೇ ಇದೀಗ ಜಾಗತೀಕರಣವನ್ನು ಪ್ರವೇಶಿಸಿರುವುದರಿಂದ ಒಂದು ಬಗೆಯ ಹೊಸ ಜಗತ್ತನ್ನೇ ತೆರೆದುಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಅದರ ಪ್ರಭಾವದಿಂದ ಮುಕ್ತರಾಗಲು ಯಾರಿಂದಲೂ ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಕೆಲವು ಕುಲಕಸುಬುಗಳ ಸಂಸ್ಕೃತಿಗಳು ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದರೂ ಇದರಿಂದ ಸಂಪೂರ್ಣವಾಗಿ ವಿಮೋಚನೆ ಪಡೆಯುವುದು ಕಷ್ಟಸಾಧ್ಯವಾಗಿದೆ.

ಜಾಗತೀಕರಣ ಎಂಬುದು ಒಂದು ವಿದ್ಯಮಾನವಾಗಿದ್ದುದಲ್ಲದೆ. ಬಂಡವಾಳಶಾಹಿ ಆಧುನಿಕತೆಯ ಇನ್ನೊಂದು ಹಂತವಾಗಿದ್ದು ವಿಶ್ವ ಸಮಾಜಗಳನ್ನು ಅತ್ಯಂತ ಹತ್ತಿರದಿಂದ ಕೊಡಿಸುವ ಸಂಕೀರ್ಣವಾದ ಪೂರ್ವ ವ್ಯವಸ್ಥಿತ ಸಿದ್ಧರೂಪ. ಇಂತಹ ಸ್ಥಿತಿಯನ್ನು ಕುರಿತು ಜಗತ್ತಿನೆಲ್ಲೆಡೆ ಚರ್ಚೆಗಳು ನಡೆಯುತ್ತಿವೆ. ಇಡೀ ಜಗತ್ತು ಜಾಗತೀಕರಣದ ಕುರಿತು ಯೋಚಿಸುತ್ತಿರುವುದು ತೀವ್ರತೆಯಿಂದಲೇ ಅದರ ಅನಿವಾರ್ಯತೆ ಮತ್ತು ಅಪಾಯಗಳೆರಡನ್ನು ಕಂಡುಕೊಳ್ಳಬಹುದು. ಜಾಗತೀಕರಣದ ಚರ್ಚೆ ಹೆಚ್ಚು ತೀವ್ರವಾಗಿರುವುದು ಭಾರತದಂತಹ ಅನೇಕ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಒಂದೆಡೆ ಇಂತಹ ದೇಶಗಳು ವಸಹಾತುಶಾಹಿಯಿಂದ ಜಾಗತೀಕರಣದ ಹೆಸರಲ್ಲಿ ನಡೆಸಲಿರುವ ಮರುಆಕ್ರಮಣದ ಕುರಿತು ಆತಂಕಗೊಂಡಿದ್ದರೆ. ಜಾಗತೀಕರಣದ ಫಲವಾಗಿ ಹುಟ್ಟಿರುವ ಉದಾರೀಕರಣ ಮತ್ತು ಖಾಸಗೀಕರಣಗಳಿಂದಾಗಿ ಜಾಗತಿಕ ಮಟ್ಟದ ತಂತ್ರಜ್ಞಾನ ಆದ ಪ್ರವಾಹದಲ್ಲಿ ಒಂದಾಗಿ ಅಭಿವೃದ್ಧಿ ಸಾಧಿಸುವ ತವಕವೂ ಹೆಚ್ಚುತ್ತಿದೆ. ಒಂದು ಅರ್ಥದಲ್ಲಿ ಜಾಗತೀಕರಣ ಅಪಾಯ ಮತ್ತು ಅವಕಾಶಗಳೆರಡನ್ನು ಇಂದು ಜಗತ್ತಿನ ಮುಂದಿಟ್ಟಿದೆ.೩

ಇಂತಹ ಸಾಂಸ್ಕೃತಿಕ ರೂಪಾಂತರವು ಜಾಗತೀಕರಣ ಪ್ರಭಾವದಿಂದ ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಈ ರಾಷ್ಟ್ರಗಳ ಅನೇಕ ಕುಲಕಸುಬುದಾರರು ಇಂತಹ ಸಾಂಸ್ಕೃತಿಕ ಸ್ಥಿತ್ಯಂತರಕ್ಕೆ ಒಮ್ಮಿಂದ ಒಮ್ಮೆಲೆ ಒಳಗಾಗುವುದಿಲ್ಲ ಕಾಲದ ಏರಿಳಿತಗಳಿಗೆ ಹೊಂದಾಣಿಕೆಯಾಗುವುದಕ್ಕಾಗಿ ಅಥವಾ ಕಾಲದ ಒತ್ತಡದಿಂದ ಸ್ಥಿತ್ಯಂತರಕ್ಕೆ ಒಳಗಾಗುತ್ತವೆ. ಹೀಗೆ ವಿಕಾಸಮುಖಿ ಸಾಂಸ್ಕೃತಿಕ ಬದಲಾವಣೆಯ ಎಲ್ಲಾ ಬಗೆಯ ಏರಿಳಿತಗಳನ್ನು ಕೈಚೆಲ್ಲಿ ಅಥವಾ ಅಸಾಯಕ ದೈನ್ಯ ಸ್ಥಿತಿಯಿಂದಲೇ ಸ್ವೀಕರಿಸುತ್ತವೆ ಎಂದು ಹೇಳಿದರೆ ತಪ್ಪಾಗುತ್ತದೆ.

ಸ್ವೀಕರಣ ಮತ್ತು ಪ್ರತಿರೋಧಿಗಳು ಏಕಕಾಲದಲ್ಲಿ ಆ ಕೋಶದ ಒಳಗೆ ಸನ್ನದ್ಧವಾಗಿರುತ್ತವೆ. ಹೀಗೆ ಸ್ಥಿತ್ಯಂತರಕ್ಕೆ ಕುಲಕಸುಬುಗಳು ಮಿಶ್ರ ಪ್ರತಿಕ್ರಿಯೆಯ ಮೂಲಕ ಸಂವೇದಿಸಿದ್ದು ಗಮನಾರ್ಹ ಸಂಗತಿ. ಈ ಸ್ವೀಕರಣ ಮತ್ತು ಪ್ರತಿರೋಧಗಳು ಸಮುದಾಯಗಳನ್ನು ಬದಲಾವಣೆಗೆ ಅರ್ಥಪೂರ್ಣವಾಗಿ ಅನ್ವಯಿಸುವ ಬೆಸೆಯುವ ಪ್ರಕ್ರಿಯೆಯಲ್ಲಿ ತೊಡಗಿರುತ್ತವೆ.೪ ಜಾಗತೀಕರಣವೆಂಬ ಮಹಾಪ್ರವಾಹಕ್ಕೆ ಎಲ್ಲಲ್ಲಿ ಕೊಚ್ಚಿಕೊಂಡು ಹೋಗುವ ಸಾಧ್ಯತೆಗಳೇ ಹೆಚ್ಚು ಕಸುಬುದಾರರು ತಮ್ಮದೇ ಆದ ವಿಶಿಷ್ಟ ಆಚರಣೆ ಪದ್ಧತಿ ಸಂಪ್ರದಾಯ ಆಚಾರ, ವಿಚಾರ ಇತ್ಯಾದಿ ವಿಶಿಷ್ಟತೆಗಳನ್ನು ಹೊಂದಿವೆ ಇಂತಹ ವಿಶಿಷ್ಟತೆಯನ್ನು ಕಾಪಾಡಲು ಕಸುಬುದಾರರು ಜಾಗತೀಕರಣದ ಪ್ರವಾಹವನ್ನು ತಡೆಯಲು ಶತಪ್ರಯತ್ನ ಮಾಡುತ್ತಿವೆ.

ಪ್ರಸ್ತುತ ಜಾಗತೀಕರಣದ ಸಂದರ್ಭದಲ್ಲಿ ಕಸುಬುದಾರರು ಬದಲಾವಣೆಯ ಪ್ರಕ್ರಿಯೆಗೆ ಒಳಗಾಗಿದ್ದಾರೆ. ಈ ಬದಲಾವಣೆಯು ಯಾವುದೇ ಪ್ರತಿಭಟನೆ ಇಲ್ಲದೆ ಸರಳವಾಗಿ ಒಪ್ಪಿಕೊಳ್ಳುತ್ತಿಲ್ಲ ಕಾರಣ ಒಂದು ವ್ಯವಸ್ಥೆಯ ಒಂದು ಭಾಗದಲ್ಲಿ ಏರಿಳಿತಗಳು ಉಂಟಾದರೆ ಇಡೀ ವ್ಯವಸ್ಥೆಯ ಮೇಲೆ ಅದರ ಪರಿಣಾಮ ಉಂಟಾಗುತ್ತದೆ. ಸಾಮ್ರಾಜ್ಯಶಾಹಿಯು ಜಾಗತೀಕರಣದ ಮೂಲಕ ಆಧುನಿಕ ಬಂಡವಾಳಶಾಹಿಯ ಹಿತಾಸಕ್ತಿಯನ್ನು ಕಾಪಾಡುವುದಾಗಿದೆ. ಇದರ ಪರಿಣಾಮವಾಗಿ ತೃತೀಯ ಜಗತ್ತಿನ ರಾಷ್ಟ್ರಗಳನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಕೊಳ್ಳೆ ಹೊಡೆಯುವುದೇ ಆಗಿದೆ. ಸಾಮ್ರಾಜ್ಯಶಾಹಿ ಸ್ಪಷ್ಟವಾದ ಜಾಗತೀಕರಣದ ಜಾಲದಿಂದ ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿನ ಕುಲಕಸುಬುದಾರರು ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ಜಾಗತೀಕರಣವು ಖಾಸಗೀಕರಣದ ಮೂಲಕ ತೃತೀಯ ಜಗತ್ತಿನ ರಾಷ್ಟ್ರಗಳ ಸರ್ಕಾರಗಳನ್ನು ಬಿಟ್ಟು ಆಡಳಿತ ವ್ಯವಸ್ಥೆಯಿಂದ ದೂರ ಮಾಡಿ, ಆಡಳಿತ ಕ್ಷೇತ್ರದ ಮಹತ್ವ ಭಾಗಗಳನ್ನು ಖಾಸಗೀಕರಣಗೊಳಿಸುವ ಮೂಲಕ ತನ್ನ ವಶಕ್ಕೆ ತೆಗೆದುಕೊಳ್ಳುವುದು ಅಂದರೆ ದೇಶದ ಒಟ್ಟು ಆರ್ಥಿಕ ಸಂಪನ್ಮೂಲದ ಕ್ರೂಢೀಕರಣದಲ್ಲಿ ಮಹತ್ವ ಪಾತ್ರವಹಿಸುವ ವಿವಿಧ ಕಸುಬುದಾರರ ಸರಕುಗಳನ್ನು ಖಾಸಗೀಕರಣದ ಹೆಸರಲ್ಲಿ ತನ್ನ ಹಿಡಿತಕ್ಕೆ ತಂದುಕೊಂಡು ಅದೀನ ರಾಷ್ಟ್ರಗಳ ಮೇಲೆ ಏಕಸ್ವಾಮ್ಯವನ್ನು ಸಾಧಿಸುವುದು ಆಗ ಈ ರಾಷ್ಟ್ರಗಳ ಸರಕಾರಗಳು ಸಹಜವಾಗಿ ಮಹತ್ವದ ಆರ್ಥಿಕ ಕ್ಷೇತ್ರಗಳ ಮೇಲೆ ಹಿಡಿತ ಕಳೆದುಕೊಳ್ಳುವುದಷ್ಟೇ ಅಲ್ಲದೆ ದೇಶದ ಒಟ್ಟು ಆರ್ಥಿಕ ವ್ಯವಸ್ಥೆಯ ಚಲನಗಳನ್ನು ಹೊರಗಿನ ರಾಷ್ಟ್ರವೊಂದಕ್ಕೆ ನಿರ್ದೇಶಿಸಲು ಒಟ್ಟುಗೂಡುವುವು. ಇದು ಖಾಸಗೀಕರಣದ ನೇರ ಪರಿಣಾಮವಾಗಿದೆ.[೫] ಬದುಕಿನ ಸ್ಥಿತ್ಯಂತರಗಳು ಹೊರಗಿನ ರಾಷ್ಟ್ರಗಳಿಂದ ನಿರ್ದೇಶಿಸಲ್ಪಡುವ ಆರ್ಥಿಕ ವ್ಯವಸ್ಥೆಯು ಆಧುನಿಕ ಬಂಡವಾಳಶಾಹಿ ಹಿತಾಸಕ್ತಿಯನ್ನು ಹೊಂದಿರುತ್ತದೆ. ಬಂಡವಾಳಶಾಹಿಗಳು ತಮಗೆ ಅನುಕೂಲವಾಗುವ ರೀತಿಯಲ್ಲಿ ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಆರ್ಥಿಕ ನೀತಿಯನ್ನು ಆರ್ಥಿಕ ಯೋಜನೆಗಳನ್ನು ರೂಪಿಸುತ್ತಿವೆ. ಕಾರಣ ಈ ಯೊಜನೆಗಳು, ತೃತೀಯ ಜಗತ್ತಿನ ಸಾಮಾಜಿಕ ವ್ಯವಸ್ಥೆಯನ್ನು ಅರಿಯದೆ ರೂಪಿಸಿದವುಗಳಾಗಿವೆ. ಹೀಗಾಗಿ ನಮ್ಮ ಕುಲಕಸುಬುಗಳು ಸಾಮಾಜಿಕ ವ್ಯವಸ್ಥೆಯ ಭಾಗವಾಗಿರುವ ಇವರ ಸರಕುಗಳ ಮೇಲೂ ಇವರ ರೀತಿ ನೀತಿಗಳ ಪರಿಣಾಮ ಬೀರಿವೆ.

ಹೀಗೆ ಸಾಮ್ರಾಜ್ಯಶಾಹಿ ರೂಪಿತ ಮಾರುಕಟ್ಟೆ ನೀತಿಗಳಿಂದ ಮತ್ತು ಮಾರುಕಟ್ಟೆ ನಿಯಂತ್ರಣದಿಂದ ಈ ಮಾರುಕಟ್ಟೆಯ ವಸ್ತುಗಳ ಬೇಡಿಕೆ ಮತ್ತು ಪೂರೈಕೆ, ವಸ್ತುಗಳ ಗುಣಮಟ್ಟ ವಸ್ತುಗಳ ಬೆಲೆ ಇತ್ಯಾದಿಗಳು ಆಯಾ ದೇಶದ ಕುಲಕಸುಬುದಾರರ ವ್ಯವಸ್ಥೆಯ ಮೇಲೆ ಪ್ರಭಾವ ಬೀರುತ್ತವೆ. ಇದರಿಂದಾಗಿಯೇ ಕಸುಬುದಾರರು ಉತ್ಪಾದಿಸಿದ ವಸ್ತುಗಳು ಆಧುನಿಕ ಕಾರ್ಖಾನೆಯಿಂದ ಉತ್ಪಾದಿಸಿದ ವಸ್ತುಗಳ ಜೊತೆಗೆ ಮಾರುಕಟ್ಟೆಯಲ್ಲಿ ಸ್ಪರ್ಧಿಸಲು ಸಾಧ್ಯವಾಗುತ್ತಿಲ್ಲ. ಕಾರಣ ಕುಲಕಸುಬುಗಳು ಅವನತಿಯ ಹಾದಿ ಹಿಡಿದಿವೆ. ಇದರಿಂದ ಈ ಸಮುದಾಯಗಳಿಗೆ ಹೊಸ ದುಡಿಮೆಗಳಲ್ಲಿ ತೊಡಗಬೇಕಾದ ಅನಿರ್ವಾಯತೆ ಉಂಟಾಗಿದೆ. ಪರಿಣಾಮವಾಗಿ ಆರ್ಥಿಕ ವ್ಯವಸ್ಥೆ ಏರುಪೇರಾಗಿರುವುದಿಲ್ಲದೆ; ಸಾಮಾಜಿಕ ಬದುಕು ಸಹ ಏರುಪೇರಾಗಿದೆ.

ವಿಶ್ವಬ್ಯಾಂಕ್, ಡಬ್ಲ್ಯುಟಿ.ಓ ಐಎಮ್.ಎಫ್. ಮುಂತಾದ ಜಾಗತೀಕ ಸಂಸ್ಥೆಗಳು ಈ ತೃತೀಯ ಜಗತ್ತಿನ ರಾಷ್ಟ್ರಗಳಿಗೆ ಕೇಳಿದಾಗೆಲ್ಲ ಸಾಲ ಕೊಡುತ್ತಿವೆ. ಅವು ಈ ದೇಶದ ಅಭಿವೃದ್ದಿಯ ನೆಪಗಳುನ್ನು ಮುಂದೂಡುತ್ತಿವೆ. ಈ ಸಂಸ್ಥೆಗಳು ತಾವು ಹೂಡುವ ಬಂಡವಾಳವನ್ನು ಯಾವ ಕ್ಷೇತ್ರದ ಮೇಲೆ ಹೂಡಬೇಕೆಂದು ತೃತೀಯ ಜಗತ್ತಿನ ದೇಶಗಳಿಗೆ ನಿರ್ದೇಶನ ಕೊಡುತ್ತಾ ಇರುತ್ತವೆ. ಇದರಿಂದ ತೃತೀಯ ಜಗತ್ತಿನ ದೇಶಗಳು ತನ್ನ ಹಂಗಿನ ಚೌಕಟ್ಟಿನೊಳಗೆ ಸಿಕ್ಕಿಕೊಳ್ಳುತ್ತವೆ. ಆ ದೇಶಗಳ ಆರ್ಥಿಕ ಸಂಪನ್ಮೂಲಗಳನ್ನು ವಶಪಡಿಸಿಕೊಳ್ಳುವುದು ಸಾಮ್ರಾಜ್ಯಶಾಹಿಯ ಉದ್ದೇಶವಾಗಿದೆ. ಮುಖ್ಯವಾಗಿ ಜಾಗತೀಕರಣದ ಕಪಿಮುಷ್ಠಿಯಿಂದ ಇಡಿ ವಿಶ್ವವೆ ಏಕಾಧಿಪತ್ಯದ ಕೆಳಗೆ ತರುವುದು ಸಾಮ್ರಾಜ್ಯಶಾಹಿಗಳ ಉದ್ದೇಶವಾಗಿದೆ. ಈ ಉದ್ದೇಶಕ್ಕೋಸ್ಕರ ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಯೋಜನೆಗಳು ಕಾರ್ಯಕ್ರಮಗಳು ಕಾನೂನುಗಳು ಶಾಸನವನ್ನು ಜಾರಿಗೆ ಬರುತ್ತವೆ. ಇವುಗಳು ಆ ದೇಶದಲ್ಲಿರುವ ಸ್ಥಿತಿಯನ್ನು ಅನುಸರಿಸಿ ಬಂದವುಗಳಲ್ಲಿ ಈ ರಾಷ್ಟ್ರಗಳು ಸಾಮ್ರಾಜ್ಯಶಾಹಿಯ ಕೈಗೊಂಬೆಗಳಾಗಿರುವುದರಿಂದ ದೇಶದ ಜನರ ಹಿತಾಸಕ್ತಿಗಳಿಗಿಂತ ಸಾಮ್ರಾಜ್ಯಶಾಹಿಯ ಹಿತಾಸಕ್ತಿಯೇ ಮುಖ್ಯವಾಗಿರುತ್ತವೆ. ಆದ್ದರಿಂದ ಈ ರಾಷ್ಟ್ರಗಳ ಯೋಜನೆಗಳು ತಮ್ಮ ರಾಷ್ಟ್ರದ ಕುಲಕಸುಬುದಾರರಿಗೆ ಅವರು ತಯಾರಿಸುವ ವಸ್ತುಗಳಿಗೆ ಸಮಸ್ಯೆ ಮತ್ತು ಸವಾಲುಗಳನ್ನು ದೇಶದ ಅಭಿವೃದ್ಧಿಯ ನೆಪದಲ್ಲಿ ತಂದೊಡ್ಡುತ್ತಿವೆ.

ಜಾಗತೀಕರಣದ ಪರಿಣಾಮವಾಗಿ ಅನೇಕ ಬಹುರಾಷ್ಟ್ರೀಯ ಕಂಪನಿಗಳು ಭಾರತದಲ್ಲಿ ತಲೆಯೆತ್ತುತ್ತಿರುವುದರಿಂದ ಕುಲಕಸುಬುದಾರರು ತಮ್ಮ ಹೊಟ್ಟೆಪಾಡಿಗಾಗಿ ತಮ್ಮ ಮೂಲ ಕಸುಬನ್ನು ತೊರೆದು ಇಂತಹ ಕಂಪನಿಗಳನ್ನು ಅಶ್ರಯಿಸುತ್ತಿದ್ದಾರೆ. ಈ ಕಂಪನಿಗಳಲ್ಲಿ ಈ ಸಮುದಾಯಗಳಿಗೆ ಉನ್ನತ ಮತ್ತು ಆದಾಯ ಬರುವ ಹುದ್ದೆಗಳನ್ನು ಪಡೆಯಲು ಸಾಧ್ಯವಾಗುವುದಿಲ್ಲ ಕೆಳವರ್ಗದ ನೌಕರಿಗಳನ್ನು ಪಡೆಯುವರು. ಕಂಪನಿಗಳ ಪರಿಣಾಮದಿಂದಾಗಿಯೇ ಕುಲಕಸುಬುಗಳು ಮಾಯವಾಗಿವೆ. ಕಾರಣ ಕಸುಬುದಾರರು ಈ ಕಂಪನಿಗಳಲ್ಲಿ ದುಡಿಯುವ ಅನಿವಾರ್ಯತೆ ಉಂಟಾಗುವುದು.

ವಿಜ್ಞಾನ ಮತ್ತು ತಂತ್ರಜ್ಞಾನ ಇವು ಇಂದು ಜಗತ್ತನ್ನು ಆಳುವ ಎರಡು ಬಹುದೊಡ್ಡ ಪರಿಕಲ್ಪನೆಗಳು, ವೈಜ್ಞಾನಿಕ ಮನೋಧರ್ಮ ಆಧುನಿಕರಣ ಪ್ರಗತಿಪರನಿಗೆ ಅತ್ಯವಶ್ಯಕ. ಆದರೆ ಇಂದು ವಿಜ್ಞಾನವು ವಿರಾಟರೂಪ ಪಡೆದುಕೊಂಡಿದೆ ಮತ್ತು ಮಾನವನ ಚರಿತ್ರೆಯನ್ನು

ರೂಪಿಸುವಲ್ಲಿ ಮಹತ್ತರ ಪಾತ್ರವಹಿಸಿದೆ. ಅಷ್ಟೇ ಅಲ್ಲದೇ ಈ ಜಗತ್ತನ್ನು ಒಂದು ಅರ್ಥದಲ್ಲಿ ತೀವ್ರವಾಗಿ ಪ್ರೀತಿಸುವಂತೆ ಮತ್ತು ಬಯಸಿದ ಸುಖವನ್ನು ಥಟಕ್ಕನೇ ಸಿಗುವಂತೆ ಮಾಡಿದ್ದು ವಿಜ್ಞಾನ. ಇದರ ಪ್ರತಿಪ್ರತಿರೂಪವಾದ ತಂತ್ರಜ್ಞಾನವು ಯಂತ್ರ ಮತ್ತು ತಾಂತ್ರಿಕ ವಿಧಾನಗಳು ಸುವ್ಯವಸ್ಥಿತವಾದ ಜ್ಞಾನದ ಮೂಲಕ ಪ್ರಕೃತಿಯಲ್ಲಿ ಅಡಗಿರುವ ರಹಸ್ಯಗಳನ್ನು ಸಂಶೋಧಿಸುತ್ತಿವೆ.

ವಿಜ್ಞಾನ ತಂತ್ರಜ್ಞಾನದ ಅಭಿವೃದ್ಧಿಯ ಪ್ರತಿಫಲವಾಗಿ ಕೈಗಾರಿಕೀಕರಣವು ತೀವ್ರ ಸ್ವರೂಪ ಪಡೆದುಕೊಂಡಿದೆ. ಆಧುನಿಕ ಬಂಡವಾಳಶಾಹಿಂದ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆ. ಇವು ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ತಮ್ಮ ಸ್ಥಾನವನ್ನು ಆಕ್ರಮಿಸಿಕೊಂಡಿವೆ. ಈ ದೇಶದ ಸಂಪನ್ಮೂಲಗಳನ್ನು ಬಳಸಿಕೊಂಡು ಅಧಿಕ ಆರ್ಥಿಕ ಉತ್ಪಾದನೆ ಮಾಡಿದರೂ ಸಹ ಈ ದೇಶಗಳಿಗೆ ಇವುಗಳಿಂದ ಯಾವುದೇ ಲಾಭವಿಲ್ಲ. ಇವುಗಳ ಲಾಭ ಬಂಡವಾಳಶಾಹಿಗಳೇ ಪಡೆದುಕೊಳ್ಳುತ್ತಿರುವರು. ಇಂತಹ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರನ್ನು ಮಾನವೀಯತೆಯಿಂದ ನೋಡುವುದು ಹೆಚ್ಚು ತಳಸಮುದಾಯದ ಬುಡಕಟ್ಟಿನವರೇ ಆಗಿರುವರು. ತೀವ್ರ ಕೈಗಾರೀಕರಣದ ಪರಿಣಾಮವಾಗಿ ವಸ್ತುಗಳ ಉತ್ಪಾದನೆಯ ವಿಧಾನದಲ್ಲಿ ಉತ್ಪಾದನೆಯ ವೇಗದಲ್ಲಿ ವಸ್ತುಗಳ ಗುಣಮಟ್ಟಗಳಲ್ಲಿ ಬದಲಾವಣೆಯಾಗಿದೆ. ಅಲ್ಲದೇ ಹೊಸ ಹೊಸ ಉದ್ಯೋಗಾವಕಾಶಗಳ ಒದಗುತ್ತಿರುವುದರಿಂದ ಜನರ ದುಡಿಮೆಯ ರೂಪ ಸ್ವರೂಪಗಳ ಬದಲಾವಣೆಯಾದವು ಇವುಗಳಲ್ಲಿ ಕೆಲಸ ಮಾಡಲು ಅಧಿಕ ಶ್ರಮಿಕರು ಅಗತ್ಯವಿರುವುದರಿಂದ ಹಳ್ಳಿಗಳಲ್ಲಿರುವ ಕುಲಕಸುಬುದಾರರನ್ನು ಒಕ್ಕಲೆಬ್ಬಿಸಿ ಇಂತಹ ದುಡಿಮೆಗಳಲ್ಲಿ ತೊಡಗುವಂತೆ ಮಾಡುವರು. ಇವರು ಇಂತಹ ಕಾರ್ಖಾನೆಗಳ ಹತ್ತಿರದಲ್ಲಿಯೇ ನೆಲೆಸಬಾಕಾದ ಅನಿವಾರ್ಯತೆ ಉಂಟಾಗುತ್ತದೆ. ಇದರಿಂದಾಗಿ ಹಲವು ಧರ್ಮಗಳ ಸಮುದಾಯಗಳ ಸಂಸ್ಕೃತಿಗಳ ಜನಗಳ ಒಂದು ಕಡೆ ನೆಲೆಸುವುದರಿಂದ ಇಲ್ಲಿ ವಿವಿದ ಸಂಸ್ಕೃತಿಗಳ ಧರ್ಮಗಳ ಸಂಗಮವಾಗುವುದು. ಕಾರಣ ತಮ್ಮ ಮೂಲ ಸಂಸ್ಕೃತಿ, ಧರ್ಮಗಳ ಸಂಗಮವಾಗುವುದು ಕಾರಣ ತಮ್ಮ ಮೂಲ ಸಂಸ್ಕೃತಿ, ಧರ್ಮಗಳನ್ನು ಆಚರಿಸಿದರೂ ಇತರ ಸಂಸ್ಕೃತಿ ಧರ್ಮಗಳ ಆಚರಣೆಗಳಲ್ಲಿ ಪಾಲ್ಗೊಳ್ಳುವರು. ಇದರಿಂದ ಧಾರ್ಮಿಕ ಸಾಮಾನ್ಯ ಜಾತಿಯ ಸಿಡಿಲಿಕೆ ಇತ್ಯಾದಿಗಳಿಂದ ಕುಲಕಸುಬುಗಳ ಸಮುದಾಯಗಳಲ್ಲಿ ಸಾಂಸ್ಕೃತಿಕ ಸ್ಥಿತ್ಯಂತರ ಉಂಟಾಗತೊಡಗಿದೆ.

ಕೈಗಾರಿಕೆಗಳಿಂದ ಕೈಗಾರಿಕಾ ನಗರಗಳು ಹುಟ್ಟಿಕೊಂಡಿವೆ. ನಗರೀಕರಣ ಪ್ರಕ್ರಿಯೆ ತೀವ್ರ ಸ್ವರೂಪ ಪಡೆದುಕೊಂಡಿದೆ. ಇದರಿಂದ ತಳಸಮುದಾಯಗಳನ್ನು ನಗರಗಳು ಆಕರ್ಶಿಸುತ್ತಿವೆ. ಇದರಿಂದ ಈ ಸಮುದಾಯಗಳಲ್ಲಿ ವಲಸೆ ಕಂಡುಬರುತ್ತದೆ. ಈ ಕೈಗಾರಿಕೀಕರಣ ಮತ್ತು ನಗರೀಕರಣದ ಪರಿಣಾಮವಾಗಿ ಕುಲಕಸುಬು ಸಮುದಾಯಗಳ ಜೀವನ ಶೈಲಿ, ಸಾಮಾಜಿಕ ಸಂಬಂಧಗಳು, ಸಾಮಾಜಿಕ ವರ್ತನೆಗಳ ಸಾಮಾಜಿಕ ನಿಯಂತ್ರಣದಲ್ಲಿ ಸಾಮಾಜಿಕ ಸಂಚಲನೆಯಲ್ಲಿ ಬದಲಾವಣೆಯಾಗುತ್ತಿದೆ. ಶಿಕ್ಷಣವು ಬದಲಾವಣೆಯನ್ನು ತರುವ ಬಹು ಪರಿಣಾಮಕಾರಿ ಸಾಧನವಾಗಿದೆ. ಪ್ರಸ್ತುತ ಜಾಗತೀಕರಣ ಸಂದರ್ಭದಲ್ಲಿ ಕೈಗಾರಿಕೀಕರಣ, ನಗರೀಕರಣ, ವಿಜ್ಞಾನ ಮತ್ತು ತಂತ್ರಜ್ಞಾನದ ಪರಿಣಾಮದಿಂದ ಶೈಕ್ಷಣಿಕ ಸ್ವರೂಪದಲ್ಲಿ ಶೈಕ್ಷಣಿಕ ವಿಧಾನಗಳಲ್ಲಿ ಬದಲಾವಣೆಯಾಗಿರುವುದು ಇದು ಜನರ ಮನೋಭಾವ ಮತ್ತು ದೃಷ್ಠಿಕೋನಗಳನ್ನು ಬದಲಿಸುವುದು

ಶಿಕ್ಷಣವು ಆಧುನಿಕ ಉದ್ಯೋಗಗಳನ್ನು ಗಳಿಸಲು ಸಾಮಾಜಿಕ, ಆರ್ಥಿಕ ಪ್ರತಿಫಲಗಳನ್ನು ಗಳಿಸಲು ಸಹಾಯಕವಾಗಿದೆ. ಈ ಶಿಕ್ಷಣವು, ತಳಸಮುದಾಯ ಬುಡಕಟ್ಟು ಸಮುದಾಯಗಳು ಮುಖ್ಯವಾಗಿ ಸಮಾಜದ ಸಂಪರ್ಕಕ್ಕಾಗಿ ಕೈಗಾರಿಕೆಗಳಲ್ಲಿ ಉದ್ಯೋಗ ಪಡೆಯುವಲ್ಲಿ, ನಗರ ಜೀವನ ನಡೆಸುವ ಅನಿವಾರ್ಯತೆ ಉಂಟಾಗಿದೆ. ಆದರೆ ಇಂದು ತೃತೀಯ ಜಗತ್ತಿನ ದೇಶಗಳಲ್ಲಿ ಶಿಕ್ಷಣವು ಖಾಸಗೀಕರಣವಾಗಿದೆ. ಪರಿಣಾಮವಾಗಿ ತಳಸಮುದಾಯಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಮಾತ್ರ ಪಡೆಯುವರು, ವೈದ್ಯಕೀಯ, ತಾಂತ್ರಿಕ ಶಿಕ್ಷಣ, ಉನ್ನತ ಶಿಕ್ಷಣಗಳ ಕೇಲವೆ ಉನ್ನತ ವರ್ಗದವರ ಮೇಲ್ಜಾತಿಯವರ ವಶವಾಗಿದೆ. ಅಲ್ಲದೆ ವಿಶ್ವವಿದ್ಯಾಲಯಗಳು ಪಠ್ಯಕ್ರಮ ಸಂಶೋಧನಾ ವಿಧಾನಗಳು ರಚಿತವಾಗುವುದು ಅಂತರಾಷ್ಟ್ರೀಯ ಮಟ್ಟದಲ್ಲಿ ಅಂದರೆ ಸಾಮ್ರಾಜ್ಯಶಾಹಿ ಹಿತಾಸಕ್ತಿಯ ಅವಲಂಬಿಸಿ ರಚಿತವಾಗಿರುತ್ತದೆ. ಆದರೆ ಕುಲಕಸುಬುಗಳ ಜ್ಞಾನಧಾರಿತ ಪಠ್ಯಕ್ರಮ ಶಿಕ್ಷಣ ಇಂದು ಇಲ್ಲವಾಗಿದೆ. ಕಾರಣ ಕುಲಕಸುಬುಗಳು ಸ್ಥಿತ್ಯಂತರಕೊಳ್ಳಪಟ್ಟಿವೆ. ಗ್ರಾಮೀಣ ಭಾಗದ ಜ್ಞಾನ ಇಂದು ಕಣ್ಮರೆಯಾಗಿ ಕೇವಲ ಎಲ್ಲೂ ಒಂದು ಎರಡು ಕಡೆ ಸಿಗುವಂತಹ ಪರಿಸ್ಥಿತಿ ಇದು ಮುಂದುವರೆದು ಒಂದು ದಿನ ಆ ಕುಲಕಸುಬುಗಳ ಜ್ಞಾನ ಸಂಪೂರ್ಣ ಕಣ್ಮರೆಯಾಗುವುದಲ್ಲಿ ಸಂಶಯವಿಲ್ಲ.

ಒಟ್ಟಾರೆಯಾಗಿ ಪ್ರಸ್ತುತ ಜಾಗತೀಕರಣದಿಂದ ಕುಲಕಸುಬುಗಳ ಸ್ಥಿತ್ಯಂತರಗೊಂಡಿವೆ. ಇದರ ಪರಿಣಾಮವಾಗಿ ಜಾಗತೀಕರಣವು ಕುಲಕಸಬನ್ನೇ ಆಧರಿಸಿ ಜೀವನ ಸಾಗಿಸಬೇಕಾದ ಅನಿವಾರ್ಯತೆಯಿಂದ ದೂರ ಮಾಡಿ ಹಲವಾರು ಕ್ಷೇತ್ರಗಳಲ್ಲಿ ಕೆಲಸ ಮಾಡುವಂತೆ ಅವಕಾಶಗಳನ್ನು ಒದಗಿಸಿದೆ. ಇದು ಕಡಿಮೆ ವೇತನಕ್ಕೆ ಹೆಚ್ಚು ದುಡಿಯಬೇಕಾದ ಅನಿವಾರ್ಯತೆಯನ್ನುಂಟುಮಾಡಿದೆ. ಶೈಕ್ಷಣಿಕ ಅರ್ಹತೆ, ಶೈಕ್ಷಣಿಕ ಗುಣಮಟ್ಟ, ಸಾಮರ್ಥ್ಯಗಳ ಹೆಸರಲ್ಲಿ ಮತ್ತು ತಂತ್ರಜ್ಞಾನಗಳ ಬಳಕೆಯಿಂದ ನಿರುದ್ಯೋಗವನ್ನು ಸೃಷ್ಟಿಸಿದೆ. ಇದು ಕೈಗಾರಿಕೀಕರಣ ಮತ್ತು ನಗರೀಕರಣದಿಂದ ಈ ಕಸುಬುದಾರ ಒಕ್ಕಲೆಬ್ಬಿಸಿ ತೀರಾ ಕೋಳಗೇರಿ ಪ್ರದೇಶದಲ್ಲಿ ನೆಲೆಸುವಂತೆ ಮಾಡಿದೆ. ಜಾಗತೀಕರಣದಿಂದ ಕಸುಬುದಾರರು ತಮ್ಮ ಮೂಲ ಸಂಪ್ರದಾಯ, ಆಚರಣೆ, ಆಚಾರ, ವಿಚಾರಗಳ, ನಂಬಿಕೆ, ಕರಕುಶಲಕಲೆ ಮುಂತಾದವುಗಳು ಆಧುನಿಕ ಮೌಲ್ಯಗಳ ಹೇರಿಕೆಯ ಅನಿವಾರ್ಯತೆಯಿಂದ ಇವುಗಳು ವಿನಾಶದ ಹಂಚಿನಲ್ಲಿವೆ. ಕಸುಬುದಾರರು ಬೆಳೆಸಿಕೊಳ್ಳುವ ಆಧುನಿಕ ಮೌಲ್ಯಗಳು ಆಧುನಿಕ ಸಮಾಜದ ಜನರ ಆಧುನಿಕ ಮೌಲ್ಯಗಳಷ್ಟು ಪರಿಪಕ್ವಾಗಿಲ್ಲ. ಇವರಲ್ಲಿ ಕೆಳಮಟ್ಟದ ಮನೋಭಾವನೆಯನ್ನು ಬೆಳೆಸುತ್ತಿವೆ ಕಸುಬುದಾರರು ತಮ್ಮ ಮೌಲ್ಯಗಳನ್ನು ಉಳಿಸಿಕೊಳ್ಳುವಲ್ಲಿ ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸುತ್ತಿದ್ದಾರೆ. ಕೊನೆಯಲ್ಲಿ ಅವರೂ ಕೂಡ ಜಾಗತೀಕರಣದ ಆಧುನಿಕತೆಯಲ್ಲಿ ಅಂತರ್ಗವಾಗಿ ಬೀಡುತ್ತಾರೆ.

ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ಥಿತ್ಯಂತರ

ವಿಶಿಷ್ಟ ಸಂಸ್ಕೃತಿ ಪರಂಪರೆಯುಳ್ಳ ಕಸುಬುದಾರರ ಸಮುದಾಯಗಳಲ್ಲಿ ಈಚೆಗೆ ಗಮನಾರ್ಹವಾದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದಲಾವಣೆಗಳಾಗಿರುವುದನ್ನು ಕಾಣುತ್ತೇವೆ. ಸಾಕ್ಷರತೆಯ ಪರಿಣಾಮ ಹಾಗೂ ಆಧುನಿಕತೆಯ ಪ್ರಭವದಿಂದ ಅವರು ತಮ್ಮ ಸಾಮಾಜಿಕ ರೀತಿ

ರಿವಾಜುಗಳಿಂದ ದೂರವಾಗುತ್ತಿದ್ದಾರೆ. ಅರ್ಥ ಹೀನವಾಗಿರುವ ಕಂದಾಚಾರ, ಮೂಢನಂಬಿಕೆ ಹಾಗೂ ಅನಿಷ್ಟ ಪದ್ಧತಿಗಳನ್ನು ಬಿಟ್ಟು ಹೊರಬರುತ್ತಿದ್ದಾರೆ.

ಕಸುಬುದಾರರೂ ಶೈಕ್ಷಣಿಕ ಪ್ರಸಾರ ಹೆಚ್ಚು ಗಮನಾರ್ಹವಾಗಿರದಿದ್ದರೂ ಅಲ್ಲಲ್ಲಿ ಕ್ರಮೇಣ ಇವರು ಶಿಕ್ಷಣಕ್ಕಾಗಿ ಆಕರ್ಶಿತರಾಗಿರುವುದು ಕಂಡು ಬರುತ್ತದೆ. ತಮ್ಮ ಮಕ್ಕಳ ಶಾಲೆ ಕಾಲೇಜುಗಳಿಗೆ ಕಳುಹಿಸಿ ವಿದ್ಯಾವಂತರನ್ನಾಗಿ ಮಾಡುತ್ತಿದ್ದಾರೆ. ಸಾಕ್ಷರತೆಯಿಂದ ಮಾತ್ರ ತಮ್ಮ ಜೀವನ ಶೈಲಿ ಬದಲಾಯಿಸಿಕೊಳ್ಳು ಸಾಧ್ಯವೆಂಬುದು ಇವು ಮನಗೊಂಡಿರುವವದು.

ಕಮ್ಮಾರರ ಸಮಸ್ಯೆಗಳು

ಕೃಷಿ ಕಾರ್ಯ ನಿರ್ವಹಿಸಲು ಬೇಕಾದ ವಸ್ತುಗಳನ್ನು ದುಷ್ಟ ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಆಯುಧಗಳನ್ನು ಯುದ್ಧಕ್ಕೆ ಬೇಕಾಗುವ ಶಸ್ತ್ರಾಸ್ತ್ರಗಳನ್ನು ಅನೇಕ ಗೃಹೋಪಯೋಗಿ ವಸ್ತುಗಳನ್ನೆ ಸೃಷ್ಟಿಸಿ ಸಿದ್ದಪಡಿಸಿಕೊಡುವ ಕಾರ್ಯದಲ್ಲಿ ನಿರತರಾಗಿದ್ದ ಕಮ್ಮಾರರು ಒಂದು ಕಾಲಘಟ್ಟದಲ್ಲಿ ಜಗತ್ತಿನಲ್ಲಿ ಕಬ್ಬಿಣದ ಮೂಲಕ ಕ್ರಾಂತಿಯನ್ನೆ ಮಾಡಿದವರು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಸಾಮಾನ್ಯ ಜನತೆಯಿಂದ ಹಿಡಿದು ರಾಜ-ಮಹಾರಾಜರವರೆಗೆ ಅವರ ಪ್ರೀತಿಗೆ ಪಾತ್ರವಾಗಿದ್ದ ಕಮ್ಮಾರರು ಬ್ರಿಟೀಷರು ಭಾರತಕ್ಕೆ ಆಗಮಿಸುವುದಕ್ಕಿಂತ ಪೂರ್ವದಲ್ಲಿ ಭಾರತೀಯರಿಗೆ ಅವಶ್ಯಕವಾಗಿ ಬೇಕಾದ ಕಬ್ಬಿಣದ ವಸ್ತುಗಳನ್ನು ಇವರೇ ಪೂರೈಸುತ್ತಿದ್ದರು. ಕಮ್ಮಾರರು ಸ್ವತಃ ತಾವೇ ತಮ್ಮದೇ ಆದ ದೇಶಿ ತಂತ್ರಜ್ಞಾನವನ್ನು ಬಳಸಿಕೊಂಡು ಕಬ್ಬಿಣವನ್ನು ತಯಾರಿಸಿಕೊಳ್ಳುತ್ತಿದ್ದರು. ಬ್ರಿಟೀಷರು ಭಾರತವನ್ನು ಪ್ರವೇಶಿಸಿ ಸ್ಥಳಿಯ ಕಮ್ಮಾರರು ಕಬ್ಬಿಣ ಸಂಸ್ಕರಿಸಲು ಬಳಸುತ್ತಿದ್ದ ವಿಧಾನವನ್ನೇ ಬಳಸಿಕೊಂಡು ಕಾರ್ಖಾನೆಗಳಲ್ಲಿ ಕಬ್ಬಿಣವನ್ನು ತಯಾರಿಸಿಕೊಂಡು ಅದರ ಮೂಲಕ ಕೃಷಿಗೆ ಬೇಕಾದ ಉಪಕರಣಗನ್ನು ಆಯುಧಗಳನ್ನು, ಗೃಹೋಪಯೋಗಿ ವಸ್ತುಗಳನ್ನು ಬೃಹತ್ ಪ್ರಮಾಣದಲ್ಲಿ ಸಿದ್ಧಪಡಿಸಿ ಮಾರಾಟಕ್ಕೆ ಬಿಡಲಾರಂಬಿಸಿದರು. ಅಲ್ಲಿಂದಲೇ ಕಮ್ಮಾರರ ಕಸುಬಿಗೆ ಸಂಬಧಿಸಿದ ಸಮಸ್ಯೆಗಳು ಪ್ರಾರಂಭವಾದವು. ಭಾರತೀಯರ ಗುಡಿ ಕೈಗಾರಿಕೆಗಳು ಉತ್ತೇಜನಗೊಳಿಸಲು, ರಾಷ್ಟ್ರ ನಿರ್ಮಾಣದಲ್ಲಿ ಅವರನ್ನು ಬಳಸಿ ರಾಮರಾಜ್ಯ ಕಟ್ಟುವ ಕನಸು ಕಾಣುತ್ತಿದ್ದ. ಗಾಂಧೀಜಿಯ ಕನಸು ಆಧುನಿಕ ಕೈಗಾರಿಕೆಗಳ ಸ್ಥಾಪನೆಯಿಂದ ಪರಂಪರಾನುಗತವಾಗಿ ಮುಂದುವರೆಸಿಕೊಂಡು ಬರುತ್ತಿರುವ. ಕುಲಕಸುಬುಗಳ ಹಂತಹಂತವಾಗಿ ಕ್ಷೀಣಿಸಲಾರಂಭಿಸಿದವು.

ಕಮ್ಮಾರರು ಬ್ರಿಟೀಷರ ಆಗಮನದ ನಂತರ ಕಬ್ಬಿಣದ ಅದಿರನ್ನು ಸಂಸ್ಕರಿಸಿ ಕಬ್ಬಿಣ ತಯಾರಿಸುವುದನ್ನು ಕೈಬಿಟ್ಟರು ಮತ್ತು ಆಧುನಿಕ ಕೈಗಾರಿಕೆಗಳಲ್ಲಿ ತಯಾರಾದ ಕಬ್ಬಿಣವನ್ನು ಕೊಳ್ಳಲಾರದಷ್ಟು ದುರ್ಬಲ, ಆರ್ಥಿಕ, ಮಾನಸಿಕ ಸ್ಥಿತಿಯನ್ನು ಒಳಗೊಂಡಿದ್ದರು ಮತ್ತು ಆಧುನಿಕ ಕೈಗಾರಿಕೆಯಲ್ಲಿ ತಯಾರಾದ ಕಬ್ಬಿಣ ಕಮ್ಮಾರರು ತಯಾರಿಸುತ್ತಿದ್ದ ಕಬ್ಬಿಣಕ್ಕಿಂತ ಹೆಚ್ಚು ಸುಲಭ ಬೆಲೆಯಲ್ಲಿ ದೊರೆಯುತ್ತಿದ್ದುದರಿಂದ ಬಹುತೇಕ ಭಾರತೀಯರು ಕಮ್ಮಾರರು ತಯಾರಿಸುತ್ತಿದ್ದ ಕಬ್ಬಿಣವನ್ನು ನಿರಾಕರಿಸತೊಡಗಿದರು ಈ ಕಾರಣಗಳಿಂದ ಕಮ್ಮಾರರು ಕಬ್ಬಿಣವನ್ನು ತಯಾರಿಸುವ ವೃತ್ತಿಯನ್ನು ಕೈಬಿಟ್ಟರು. ಆದರೆ ಕಬ್ಬಿಣದಿಂದ ಅನೇಕ ವಸ್ತುಗಳನ್ನು ಸಿದ್ಧಪಡಿಸುವ ವೃತ್ತಿಯನ್ನು ಮಾತ್ರ ಕೈಬಿಡಲಿಲ್ಲ. ಇದರಿಂದ ಕಮ್ಮರರು ಆರ್ಥಿಕ ಸ್ಥಿತಿಗತಿಗಳು ಹಾಗೂ ಅವರ ಬದುಕು ಚಿಂತಾಜನಕವಾಗುತ್ತಾ ಸಾಗಿದೆ.

ಹಂತಹಂತವಾಗಿ ಆಧುನಿಕ ಕೈಗಾರಿಕೆಗಳು ಬೆಳೆದಂತೆಲ್ಲಾ ಕಮ್ಮಾರರ ವೃತ್ತಿಗಳು ಹಾಗೂ ಜೀವನ ಹಂತಹಂತವಾಗಿ ಕೆಳಗಿಳಿಯತೊಡಗಿತು. ಕಮ್ಮಾರರು ಹೆಚ್ಚಾಗಿ ಅನಕ್ಷರಸ್ಥರು. ತಮ್ಮ ಪಾರಂಪರಿಕ ಅನುಭವ ಹಾಗೂ ಜ್ಞಾನದ ಮೇಲೆಯೇ ವೃತ್ತಿಯನ್ನು ಕೈಗೊಳ್ಳುತ್ತಾ ಬಂದವರು ಇವರ ಕುಲುಮೆಯಲ್ಲಿ ತಯಾರಾಗುತ್ತಿದ್ದ ಎಲ್ಲಾ ವಸ್ತುಗಳು ಕಾರ್ಖಾನೆಗಳಲ್ಲಿ ಸಿದ್ಧವಾಗಿ ಮಾರುಕಟ್ಟೆಗಳಲ್ಲಿ ಬರತೊಡಗಿದ ಮೇಲೆ ಕಮ್ಮಾರರಿಗೆ ಪ್ರಮುಖ ಕೆಲಸಗಳೆ ಇಲ್ಲದಂತಾಯಿತು. ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಅನಕ್ಷರಸ್ತ ಕಮ್ಮಾರರು ತಮ್ಮ ವೃತ್ತಿಯಲ್ಲಿ ಆಧುನಿಕ ಯಂತ್ರೋಪಕರಣಗಳನ್ನು ಬಳಸಿಕೊಂಡು ವೃತ್ತಿಯನ್ನು ಮುಂದುವರೆಸಿಕೊಂಡು ಹೋಗುತ್ತಿರುವುದನ್ನು ಕಾಣುತ್ತೇವೆ ಗ್ರಾಮೀಣ ಪ್ರದೇಶ ಕಮ್ಮಾರರ ಸ್ಥಿತಿಗತಿಗಳು ತುಂಬಾ ಶೋಚನೀಯ ಸ್ಥಿತಿಯಲ್ಲಿವೆ. ಬೆಳಿಗ್ಗೆ ಆರುಗಂಟೆಯಿಂದ ಸಾಯಂಕಾಲದವರೆಗೆ ಬೆಂಕಿಯ ಮುಂದೆ ಕುಳಿತು ಕಾರ್ಯನಿರ್ವಹಿಸುತ್ತಿದ್ದರು. ಇಂದು ಕೆಲಸಗಳಿಲ್ಲದೇ ಅಲೆಯುತ್ತಿದ್ದಾರೆ. ವಯಸ್ಸಾದವರಿಗೆ ಅನೇಕ ರೋಗಗಳು ಅಂಟಿಕೊಂಡಿವೆ. ದಿನಕ್ಕೆ ೮–೧೦ ಗಂಟೆಯವರೆಗೆ ಬೆಂಕಿಯ ಮುಂದೆ ಕುಳಿತು ಕಾರ್ಯನಿರ್ವಹಿಸುವುದು ಸುಲಭವಾದ ಕೆಲಸವಲ್ಲ. ಒಂದು ಕಾಲದಲ್ಲಿ ಈ ರೀತಿ ಕಾರ್ಯನಿರ್ವಹಿಸಿದ ಇವರು ಇಂದು ತುತ್ತು ಅನ್ನಕ್ಕೂ ಗತಿಯಲ್ಲದವರಾಗಿದ್ದಾರೆ.

ಬದಲಾದ ಆರ್ಥಿಕ ಸ್ಥಿತಿಯಲ್ಲಿ ಇಂದು ಕಮ್ಮಾರರ ಮಕ್ಕಳು ಕಮ್ಮಾರಿಕೆಯನ್ನು ಅನುಸರಿಸುತ್ತಿಲ್ಲ. ಬಾರ್ ಬೆಂಡಿಂಗ್, ಮರದ ಕೆಲಸ, ಡ್ರೈವರ್, ಕೂಲಿ, ಮೋಟಾರ್ ಮೆಕ್ಯಾನಿಕ್, ಮುಂತಾದ ವೃತ್ತಿಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಕೆಲ ಕಮ್ಮಾರರಿಗೆ ಕಮ್ಮಾರಿಕೆ ವೃತ್ತಿಯನ್ನು ಬಿಟ್ಟರೆ ಬೇರೆ ಯಾವ ವೃತ್ತಿಯೂ ಗೊತ್ತಿಲ್ಲ. ವಯಸ್ಸಾದ ಇವರಲ್ಲಿ ಅನೇಕರು ನಿರ್ಗತಿಕರಂತೆ ಬಾಳುತ್ತಿರುವುದು ಅಲಲ್ಲಿ ಕಂಡುಬರುತ್ತದೆ. ಅನೇಕ ಪ್ರದೇಶಗಳಲ್ಲಿ ವಯಸ್ಸಾದ ಕಮ್ಮಾರರನ್ನು ಅವರ ಮಕ್ಕಳು ನೋಡುಕೊಳ್ಳುತ್ತಿಲ್ಲ. ಇದಕ್ಕೆ ಕಾರಣ ಅವರ ಮಕ್ಕಳ ಹತ್ತಿರ ಕೇಳಿದರೆ ನಮ್ಮ ತಂದೆ ನಮಗೆ ಶಾಲೆಯನ್ನು ಕಲಿಸಲಿಲ್ಲ. ಈ ವೃತ್ತಿಯನ್ನು ಬಿಟ್ಟು ಬೇರೆ ವೃತ್ತಿ ಮಾಡು ಎಂಬ ತಿಳುವಳಿಕೆಯನ್ನೂ ಹೇಳಲಿಲ್ಲ. ಕೊನೆಗೆ ನಮ್ಮನ್ನೂ ಹಾಳು ಮಾಡಿ ತಾನು ಹಾಳಾದ ಅದಕ್ಕಾಗಿ ನಾವು ಅವರಿಂದ ದೂರ ಉಳಿದಿದ್ದೇವೆ ಎಂಬ ಮಾತುಗಳನ್ನು ಹೇಳುತ್ತಾರೆ.

ಕಬ್ಬಿಣದಿಂದ ವ್ಯವಸಾಯ, ಗೃಹ ನಿರ್ಮಾಣ, ಗೃಹಬಳಕೆ, ಯುದ್ಧಕ್ಕೆ, ಬೇಟೆಗೆ ನಿತ್ಯಜೀವನಕ್ಕೆ ಅನಿವಾರ್ಯವಾದ ವಸ್ತುಗಳನ್ನು ತಯಾರುಮಾಡುವ ಕಸುಬಿನವರೆ ಕಮ್ಮಾರರು, ನಂತರದಲ್ಲಿ ಕಸುಬು ಜಾತಿಯಾಗಿ ರೂಪುಗೊಂಡಿತು. ಇವರ ಕಸುಬು ಕಮ್ಮಾರಿಕೆ ಇವರು ವಸ್ತುಗಳನ್ನು ಸಿದ್ಧಪಡಿಸುವ ಜಾಗ ಕುಲುಮೆ ಮನೆ ಕಮ್ಮಾರರು ಹಳ್ಳಿಯ ಹನ್ನೆರಡು ಆಯಗಾರರಲ್ಲಿ ಒಬ್ಬರು ಮಾನವನ ಮೂಲಭೂತ ಅವಶ್ಯಕತೆಗಳನ್ನು ಈಡೇರಿಸಬಲ್ಲ ವ್ಯವಸಾಯದ ದೃಷ್ಟಿಯಿಂದ ಈ ಕಮ್ಮಾರ ವೃತ್ತಿ ಮಿಕ್ಕ ವೃತ್ತಿಗಳಲ್ಲೆಲ್ಲಾ ಅತ್ಯಂತ ಉಪಯುಕ್ತವಾದುದು. ಆದ್ದರಿಂದ ಆಯಾ ಕೊಡುವ ಒಕ್ಕಲಿಗನ ದೃಷ್ಟಿಯಲ್ಲಿ ಕಮ್ಮಾರ ಜರೂರು ಆಯಾಗಾರ ಕರ್ಮ ಎಂಬ ಶಬ್ದದಿಂದಲೇ ಕಮ್ಮಾರ ಎಂಬ ಶಬ್ದದ ಉತ್ಪತ್ತಿಯಾದಂತಿದೆ. ಕಮ್ಮಾರ ಎಂಬುದು ಕರ್ಮಕಾರ ಎಂಬ ಶಬ್ದದ ತದ್ಭವ. ಕರ್ಮ+ಕಾರ=ಕಮ್ಮಾರ ಎಂದು ಈ ಶಬ್ದದ ನಿಷ್ಪತ್ತಿ. ಇಂದು ಕಮ್ಮಾರ ಹಾಗೂ ಕಂಬಾರ ಎಂಬ ಎರಡು ಶಬ್ದಗಳು ಬಳಕೆಯಲ್ಲಿವೆ. ಕಮ್ಮಾರರಿಗೆ ಕೆಲವು ಕಡೆ

ಲೋಹಾರ, ಕರ್ಮಹರ, ಕಂಮಾರ, ಕಂಬಾರ ಎಂಬ ಹೆಸರುಗಳು ಪ್ರಾಚೀನ ಕನ್ನಡ ಶಾಸನ, ಕಾವ್ಯ, ವ್ಯಾಕರಣಗಳಲ್ಲಿ ಕಾಣಿಸಿಕೊಂಡಿವೆ.

ಹಿಂದಿನ ಕಾಲದಲ್ಲಿ ಕಮ್ಮಾರರು ಗ್ರಾಮಗಳಲ್ಲಿ ತಮ್ಮ ವೃತ್ತಿಯನ್ನು ನಿರ್ವಹಿಸುತ್ತಿದ್ದರು. ಆಗ ಒಕ್ಕಲುತನದ ಆಯಾದ ಮೇಲೆ ಜೀವನ ಸಾಗಿಸುತ್ತಿದ್ದರು. ಕಾಲ ಬದಲಾದಂತೆ, ಜೀವನಾವಶ್ಯಕತೆಗಳು, ಹೆಚ್ಚಾದಂತೆ ಹಣ ಪಡೆದುಕೊಂಡು ಕೆಲಸ ಮಾಡತೊಡಗಿದ್ದಾರೆ. ಹಣಕಾಸಿನ ಕೊರತೆಯಿಂದಾಗಿ ಜೀವನವನ್ನು ನಿರ್ವಹಿಸುವುದು ಕಷ್ಟವೆನಿಸಿದಾಗ ಕೆಲವರು ಹಳ್ಳಿಗಳನ್ನು ತೊರೆದು ಪಟ್ಟಣಗಳಲ್ಲಿ ಕಸುಬನ್ನು ಮುಂದುವರಿಸಿದ್ದಾರೆ.

ಕಮ್ಮಾರರು ಮೂಲತಃ ವಿಶ್ವಕರ್ಮಿಗಳೆಂದು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಕಮ್ಮಾರರು ಅಗ್ನಿ, ಸೂರ್ಯರ ಪ್ರತೀಕವೆಂದು ಹೇಳುವ ಕಾರ್ತಿಕೇಯನ ಆರಾಧಕರು. ಇವರು ಪಾಂಚಾಲರ ಒಂದು ಗುಂಪಿಗೆ ಸೇರಿದವರು. ೧೨ನೆಯ ಶತಮಾನದಲ್ಲಿ ವಚನಕಾರರು ಕಮ್ಮಾರಿಕೆಯ ಬಗ್ಗೆ ಅನೇಕ ಕಡೆ ಪ್ರಸ್ತಾಪ ಮಾಡಿದ್ದಾರೆ. ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ ಎಂಬ ಉಲ್ಲೇಖವಿದೆ. ಸರ್ವಜ್ಞ, ದಾಸರು ಮುಂತಾದ ಅನೇಕ ಕವಿಗಳ ಸಾಹಿತ್ಯ ಕೃತಿಗಳಲ್ಲಿ ಕಮ್ಮಾರಿಕೆ ವೃತ್ತಿಯ ಬಗ್ಗೆ ಹೇರಳ ಮಾಹಿತಿ ಸಿಗುತ್ತವೆ. ಕಮ್ಮಾರ ವೃತ್ತಿ, ಕಬ್ಬಿಣಯುಗವಷ್ಟು ಪ್ರಾಚೀನವಾದದ್ದು. ವಿಜಯನಗರಕ್ಕೆ ಸಂಬಂಧಿಸಿದ ಪರಿಸರದಲ್ಲಿ ಸಂಡೂರು, ಕೊಮಾರನಹಳ್ಳಿ, ಚಿಲಕನಹಟ್ಟಿ, ವ್ಯಾಸನಕೆರೆ, ಕನುಮೆಳ್ಳಿ, ಕಮಲಾಪುರ, ಹ್ಯಾರಡ, ರಾಮಸಾಗರ ಮೊದಲಾದೆಡೆಗಳಲ್ಲಿ ಕಮ್ಮಾರರ ನೆಲೆಗಳಿವೆ. ಈ ನೆಲೆಗಳನ್ನು ಮುದ್ದೆ ಕಮ್ಮಾರರ ನೆಲೆಗಳೆಂದು ಪರಿಗಣಿಸಲಾಗಿದೆ.

ವಿಜಯನಗರದಲ್ಲಿ ಸೈನ್ಯ ಮತ್ತು ಯುದ್ಧದ ಶಸ್ತ್ರಾಸ್ತ್ರಗಳಿಂದ ಸುಸಜಿತವಾಗಿತ್ತು. ಸೈನಿಕರು, ಕುದುರೆ ಹಾಗೂ ಆನೆಗಳನ್ನು ದುಬಾರಿ ಬೆಲೆಯ ಆಭರಣಗಳಿಂದ ಅಲಂಕರಿಸಲಾಗಿತ್ತು. ಖಡ್ಗಗಳು, ಬಿಲ್ಲು ಬಾಣಗಳು, ಕಠಾರಿಗಳು, ದಂಡಸಹಿತವಾದ ಗಂಡುಕೊಡಲಿಗಳು ಮತ್ತು ಭಲ್ಲೆಗಳನ್ನು ತಯಾರಿಸಲಾಗುತ್ತಿತ್ತು. ಬಿಲ್ಲುಗಳು ಕಬ್ಬಿಣ, ತಗಡು, ಚಿನ್ನ ಮತ್ತು ಬೆಳ್ಳಿ ಹೊಂದಿಕೆಯಿಂದ ಹಾಗೂ ಬಾಣಗಳು ಗರಿಗಳಿಂದ ಕೂಡಿದ್ದವು ಅರಸ ಮತ್ತು ಆತನ ಅಧಿಕಾರಿಗಳ ಖಡ್ಗಗಳ ಹಿಡಿಕೆಯಲ್ಲಿ ಲೋಹ ಹಾಗೂ ಚರ್ಮದ ಗುರಾಣಿಗಳು ಬಳಕೆಯಲ್ಲಿದ್ದು ಕಮ್ಮಾರ ಪಾತ್ರ ವೃತ್ತಿ ನೈಪುಣ್ಯತೆಯನ್ನು ಗುರುತಿಸಬಹುದು.

ಆಧುನಿಕತೆ ಕಮ್ಮಾರಿಕೆಯ ಮೇಲೆ ತನ್ನದೆಯಾದ ಪ್ರಭಾವ ಬೀರಿದೆ. ಕಮ್ಮಾರರು ಇಂದು ಕಬ್ಬಿಣ ತಯಾರಿಸುತ್ತಿಲ್ಲ. ಆ ಕಬ್ಬಿಣವನ್ನು ಉದ್ಯಮಗಳು ತಯಾರಿಸುತ್ತಿವೆ. ಇಂದು ಕಮ್ಮಾರರು ಕೇವಲ ಮಾರುಕಟ್ಟೆಯಲ್ಲಿ ಲಭ್ಯವಾಗುವ ಸಿದ್ಧ ಕಬ್ಬಿಣವನ್ನು ತಂದು ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಸರಕುಗಳನ್ನು ತಯಾರಿಸಿಕೊಡುವುದಾಗಿದೆ. ಈ ಕೆಲಸದಲ್ಲಿ ಕಮ್ಮಾರರು ಪ್ರಾವೀಣ್ಯತೆ ಹೊಂದಿದ್ದಾರೆ. ಆದರೆ ಇಂದು ಕಬ್ಬಿಣದ ಉದ್ಯಮಗಳು, ಇಂಜಿನಿಯರಿಂಗ್ ಘಟಕಗಳು ಉತ್ತಮ ಗುಣಮಟ್ಟದ ಕಬ್ಬಿಣ ಮತ್ತು ಉಕ್ಕಿನ ಸರಕುಗಳನ್ನು ತಯಾರಿಸಿ ಮಾರುಕಟ್ಟೆಗೆ ಪೂರೈಸುತ್ತಿವೆ. ಇದು ಅವುಗಳಿಗೆ ತುಂಬಾ ಲಾಭದಾಯಕ ಮಾರುಕಟ್ಟೆಯಲ್ಲಿ ಕಬ್ಬಿಣದ ವಿವಿಧ ವಸ್ತುಗಳು ಆಕರ್ಷಕವಾದ ಬೆಲೆಗೆ ಲಭ್ಯವಾಗುತ್ತಿರುವುದರಿಂದ ಸಾಂಪ್ರದಾಯಿಕ

ಕಮ್ಮಾರರಿಂದ ಕಬ್ಬಿಣದ ಸರಕುಗಳನ್ನು ತಯಾರಿಸಲು ಮುಂದೆ ಬರುತ್ತಿಲ್ಲ. ಹಾಗೂ ಅವರು ತಯಾರಿಸಿದ ಸರಕುಗಳನ್ನು ಕೊಂಡುಕೊಳ್ಳುವುದು ತುಂಬಾ ಕಡಿಮೆ ಇದು ಆಧುನಿಕತೆಯ ಪರಿಣಾಮ. ಇದರಿಂದ ಸಾಂಪ್ರಾದಾಯಿಕ ಕಮ್ಮಾರರು ಕೇವಲ ಕಬ್ಬಿಣದ ಸಾಮಾನುಗಳ ರಿಪೇರಿ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ ಆದರೆ ಇದು ವರ್ಷದ ಎಲ್ಲಾ ಕಾಲದಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಕಮ್ಮಾರರು ಕಮ್ಮಾರಿಕೆ ಜೊತೆಗೆ ವಿವಿಧ ವೃತ್ತಿಗಳಲ್ಲಿ ಕಾರ್ಯ ನಿರ್ವಹಿಸುವುದರ ಮೂಲಕ ಜೀವನ ಸಾಗಿಸುತ್ತಿದ್ದಾರೆ. ಕೆಲವು ಕಮ್ಮಾರರು ನಗರಗಳಿಗೆ ವಲಸೆ ಹೋಗಿ ಇಂಜಿನಿಯರಿಂಗ್ ವರ್ಕ್‌ಶಾಪ್‌ಗಳಲ್ಲಿ ಕೂಲಿಕೆಲಸಗಾರರಾಗಿ ದುಡಿಯುತ್ತಿದ್ದಾರೆ.

ಕುಲಕಸುಬುದಾರರಲ್ಲಿ ಇಂದು ಅತಿ ಹೆಚ್ಚಿನ ಬೇಡಿಕೆ ಇರುವವರು ಬಡಗಿಗಳು, ಬಡಗಿ ವೃತ್ತಿಯ ಮೇಲೆ ಆಧುನಿಕತೆಯ ಪ್ರಭಾವ ಹೆಚ್ಚಾಗಿದೆ. ಎಂದೇ ಹೇಳಬಹುದು. ಬಡಗಿತನಕ್ಕೆ ಬೇಕಾದ ಆಧುನೀಕ ಯಂತ್ರೋಪಕರಣಗಳು ಬಡಗಿಗಳ ದೈಹಿಕ ಶ್ರಮವನ್ನು ಕಡಿಮೆ ಮಾಡಿವೆ. ಯಂತ್ರೋಪಕರಣಗಳು ಮರವನ್ನು ಕತ್ತರಿಸುವುದರಿಂದ ಹಿಡಿದು ಅಲಂಕಾರದ ಸರಕುಗಳನ್ನು ತಯಾರು ಮಾಡುವವರೆಗೆ ನೆರವಾಗುತ್ತಿವೆ. ಬಡಗಿತನವು ಇಂದು ಸಾರ್ವತ್ರಿಕ ಕಸುಬಾಗಿದೆ. ಸಮಾಜದಲ್ಲಿ ಎಲ್ಲಾ ಜಾತಿ ಜನಾಂಗಗಳ ಬಡಗಿ ವೃತ್ತಿಯಲ್ಲಿ ಪರಿಣತಿ ಪಡೆದುಕೊಳ್ಳುತ್ತಿವೆ. ಸಾಂಪ್ರದಾಯಿಕ ಬಡಗಿಗಳಿಗೆ ಇದರಿಂದ ಸ್ವಲ್ಪ ತೊಂದರೆಯಾಗಿರಬಹುದು. ಇಂದು ಬಡಗಿಗಳು ಸಾಂಪ್ರದಾಯಿಕ ವೃತ್ತಿದಾರರಾಗಿ ಉಳಿದಿಲ್ಲ ಅವರು ಗೃಹೋಪಯೋಗಿ, ವ್ಯವಸಾಯೋಪಯೋಗಿ, ಮರದ ಸರಕುಗಳನ್ನು ವೈವಿಧ್ಯಮಯವಾಗಿ ತಯಾರಿಸುತ್ತಿದ್ದಾರೆ. ನಗರ ಪ್ರದೇಶದ ಮಾರುಕಟ್ಟೆಗಳ ಪೋರಂಗಳಲ್ಲಿರುವ ಮರದ ಸಾಧನ–ಸಲಕರಣೆಗಳನ್ನು ನೋಡಿದರೆ ಬಡಗಿಗಳ ಕಲಾಕೌಶಲ್ಯತೆ ಕಂಡುಬರುತ್ತದೆ. ಮನೆಗಳಲ್ಲಿ ಗೃಹ ಅಲಂಕಾರಿಕ ಕಿಟಕಿ, ಸೋಪಾಸೆಟ್, ಟಿಪಾಲು ಅಲಂಕಾರಿಕ ವೈವಿಧ್ಯಮಯ ವಸ್ತುಗಳನ್ನು ತಯಾರಿಸುವಲ್ಲಿ ಬಡಗಿಗಳು ಪರಿಣಿತರಾಗಿದ್ದಾರೆ. ಕೆಲವು ಬಡಗಿಗಳು ಮೂರ್ತಿಗಳನ್ನು ರಥಗಳನ್ನು ತಯಾರಿಸುತ್ತಿದ್ದಾರೆ. ಇದು ಇಂದು ಲಾಭದಾಯಕ ಕಸುಬಾಗಿದೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿರುವ ಸಾಂಪ್ರಾದಾಯಿಕ ಬಡಗಿಗಳು ಕೇವಲ ಕೃಷಿ ಸಾಧನ ಸಲಕರಣೆಗಳನ್ನು ಯಾರು ಮಾಡುವ ವೃತ್ತಿಯಲ್ಲಿ ಮುಂದುವರಿದಿದ್ದಾರೆ. ಆಧುನಿಕತೆಯಲ್ಲಿ ಅವರ ಜೀವನ ತುಂಬಾ ಕಷ್ಟಕರವಾಗಿರುವುದು ಕಂಡುಬರುತ್ತದೆ.

ಸಾಮಾನ್ಯವಾಗಿ ಪ್ರತಿಗ್ರಾಮದಲ್ಲೂ ನಾಟಿ ವೈದ್ಯರು ಕಾಣಸಿಗುತ್ತಾರೆ. ಗ್ರಾಮೀಣ ಜನರಿಗೆ ಮತ್ತು ದನಕರುಗಳಿಗೆ ರೋಗ–ರುಜಿನಗಳು ಬಂದಾಗ ಹಳ್ಳಿಯ ಅನುಭವಸ್ಥ ಗಿಡಮೂಲಿಕೆಗಳಿಂದ ಚಿಕಿತ್ಸೆ, ನೀಡುವ ವಿಧಾನವೇ ವೈದ್ಯಗಾರಿಕೆ ಇದನ್ನು ಹಳ್ಳಿ, ಔಷಧಿ ಎಂತಲೂ ಕರೆಯುತ್ತಾರೆ. ಈ ಔಷಧಿ ಕೊಡುವವನು ಗ್ರಾಮೀಣ ಪಂಡಿತ, ನಾಟಿವೈದ್ಯ ಎಂದ ಕರೆಯುತ್ತಾರೆ. ಈತ ರೋಗಿಯ ರೋಗವನ್ನು ಕಂಡುಹಿಡಿದು ಅನೇಕ ವಿಧದಲ್ಲಿ ಔಷಧಿ ಕೊಡುವನು ನಾಟಿ ವೈದ್ಯ, ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುವ ಸಾಮಾನ್ಯ ರೋಗರುಜಿನಗಳಾದ ಜ್ವರ, ಕೆಮ್ಮು, ಆಮಶಂಕೆ, ಗಾಯ, ಚರ್ಮದ ರೋಗ, ಕಜ್ಜಿ ಹಾವು ಚೇಳು ಕಡಿತಕ್ಕೆ ಹಾಗೂ ಮುಂತಾದವುಗಳಿಗೆ ಗಿಡ ಮೂಲಿಕೆಗಳಿಂದ ಬರುವ ಸಾಮಾನ್ಯ ರೋಗಿಗಳಿಗೆ ಔಷಧಿ ನೀಡುವರು ಇವುಗಳಿಂದ ಇವರಿಗೆ ಬರುವ ಆದಾಯ ಕಡಿಮೆ. ನಾಟಿ ವೈದ್ಯರು ಸಾಮಾನ್ಯವಾಗಿ ತಮ್ಮ

ಮುಖ್ಯ ವೃತ್ತಿಯ ಜೊತೆಗೆ ವೈದ್ಯ ವೃತ್ತಿಯನ್ನು ಉಪವೃತ್ತಿಯಾನ್ನಾಗಿ ಇಟ್ಟುಕೊಂಡಿರುತ್ತಾರೆ. ಬಳ್ಳಾರಿ ಜಿಲ್ಲೆಯಲ್ಲಿ ಗುಡ್ಡ ಬೆಟ್ಟಗಳು ಹೆಚ್ಚಾಗಿವೆ. ಸಂಡೂರು ಬಳ್ಳಾರಿ ಜಿಲ್ಲೆಯ ಮಲೆನಾಡು. ಸಂಡೂರು ಬೆಟ್ಟಗಳಲ್ಲಿ ವೈವಿಧ್ಯಮಯವಾದ ಔಷಧಿ ಗಿಡಮೂಲಿಕೆಗಳು ಕಂಡುಬರುತ್ತವೆ. ಸಂಡೂರಿನ ಸುತ್ತಮುತ್ತಲಿನ ಹಳ್ಳಿಗಳಲ್ಲಿ ನಾಟಿವೈದ್ಯರು ಹೆಚ್ಚಾಗಿದ್ದಾರೆ. ಅವರು ವಿವಿಧ ಕಸುಬುಗಳ ಜೊತೆಗೆ ವೈದ್ಯ ವೃತ್ತಿಯನ್ನು ಉಪವೃತ್ತಿಯನ್ನಾಗಿ ರೂಢಿಸಿಕೊಂಡಿದ್ದಾರೆ. ಆದರೆ ಇಂದು ಆಧುನಿಕ ರೀತಿಯ ವೈದ್ಯ ಸೌಲಭ್ಯಗಳು ಲಭ್ಯವಾಗುತ್ತಿವೆ. ಇದರಿಂದ ನಾಟಿ ಔಷಧಿಗಳನ್ನು ಪಡೆದುಕೊಳ್ಳುವವರು ಕಡಿಮೆ ಈ ವೃತ್ತಿಯನ್ನು ಅವಲಂಬಿಸಿ ಜೀವನ ಮಾಡುವುದು ಕಷ್ಟವಾಗಿದೆ. ಆದರೂ ಹಲವಾರು ಹಳ್ಳಿಗಳಲ್ಲಿ ನಾಟಿ ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ.

ಬಂಗಾರ ಮತ್ತು ಬೆಳ್ಳಿಯ ಆಭರಣಗಳನ್ನು ತಯಾರಿಸುವವರು ಪತ್ತಾರರು ಅಥವಾ ಅಕ್ಕಸಾಲಿಗರು ಈ ಕಸುಬನ್ನು ಪರಂಪರಾಗತವಾಗಿ ವಂಶಪಾರಂಪರ್ಯವಾಗಿ ಪತ್ತಾರ ಜನಾಂಗ ಮಾಡಿಕೊಂಡು ಬರುತ್ತಿದೆ. ಅಕ್ಕಸಾಲಿಗರು ಒಂದು ಕಾಲದಲ್ಲಿ ಎಷ್ಟು ಘನತೆ ಹೊಂದಿದ್ದರೆಂದರೆ ಅವರು ಬ್ಯಾಂಕಿಂಗ್ ಉದ್ಯಮದ ಮೂಲ ಪುರುಷರಾಗಿದ್ದರು. ಇಂಗ್ಲೆಂಡಿನ ಬ್ಯಾಂಕಿಂಗ್ ಉದ್ಯಮದ ಮೂಲ ಪುರುಷರ ಮೂರರಲ್ಲಿ ಅಕ್ಕಸಾಲಿಯೂ ಒಬ್ಬ. ಇಂದು ಪ್ರಚಲಿತವಿರುವ ಬ್ಯಾಂಕಿಂಗ್ ಚೆಕ್ ಪದ್ಧತಿಗೆ ಅಕ್ಕಸಾಲಿಗನೆ ಮೂಲ ಕಾರಣ ಆದನಂತೆ, ಆಧುನಿಕ ಸಮಾಜದಲ್ಲಿ ಒಡವೆ, ವಸ್ತುಗಳಿಗೆ ಎಲ್ಲಿಲ್ಲದ ಬೇಡಿಕೆ ಇಂದು ಒಡವೆ ವಸ್ತುಗಳು ಅಪಾರ ಪ್ರಮಾಣದಲ್ಲಿ ವಿದೇಶಗಳಿಗೆ ರಪ್ತಾಗುತ್ತವೆ. ಸಾಂಪ್ರಾದಾಯಿಕ ಅಕ್ಕಸಾಲಿಗರು ಇಂದು ಹಳ್ಳಿಗಳಲ್ಲಿ ಕೆಲಸವಿಲ್ಲದೆ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಕೆಲವು ಅಕ್ಕಸಾಲಿಗರು ಸ್ವಂತ ಅಂಗಡಿ ಮುಂಗಟ್ಟುಗಳನ್ನು ಇಟ್ಟುಕೊಂಡು ಚಿನ್ನ ಬೆಳ್ಳಿಯ ವ್ಯಾಪಾರ ಮಾಡುವುದರ ಮೂಲಕ ಆದಾಯಗಳಿಸುತ್ತಿದ್ದಾರೆ. ಆದರೆ ಸಣ್ಣ ಪುಟ್ಟ ಅಕ್ಕಸಾಲಿಗರು ಇಂದು ಸಾರಫ್ ಹಾಗೂ ಸೆಟ್ಟಿ ಅಂಗಡಿಗಳಲ್ಲಿ ಚಿನ್ನ ಬೆಳ್ಳಿಯ ಸಾಧನ ಸರಕುಗಳನ್ನು ತಯಾರಿಸುವ ಕೂಲಿಗಳಾಗಿ ವಸ್ತುಗಳ ಜೊತೆಗೆ ಕೆಲಸ ಮಾಡುತ್ತಿರುವುದರಿಂದ ಬಹಳಷ್ಟು ಪತ್ತಾರರು ಅನಾರೋಗ್ಯ ಪೀಡಿತರಾಗಿದ್ದಾರೆ. ಅವರಿಗೆ ಯಾವುದೇ ಸಾಮಾಜಿಕ ಭದ್ರತೆ ಸೌಲಭ್ಯಗಳಿಲ್ಲ. ಬಹಳಷ್ಟು ಪತ್ತಾರರು ನಗರ ಪ್ರದೇಶಗಳಿಗೆ ವಲಸೆಹೋಗಿ ಅಲ್ಲಯೇ ವಾಸವಾಗಿದ್ದಾರೆ. ಇಂದು ಆಧುನಿಕ ಯಂತ್ರೋಪಕರಣಗಳನ್ನು ಬಳಸಿಕೊಳ್ಳುವುದರ ಮೂಲಕ ವೈವಿಧ್ಯಮಯವಾದ ಹಾಗೂ ಆಕರ್ಷಕ ಒಡವೆ-ವಸ್ತುಗಳನ್ನು ತಯಾರಿಸುತ್ತಿದ್ದಾರೆ. ಜನರು ನಿರೀಕ್ಷಿಸುವ ಅಭಿರುಚಿಗೆ ತಕ್ಕ ಹಾಗೆ ತಮ್ಮ ಕೌಶಲ್ಯತೆಯನ್ನು ಉತ್ಪನ್ನಗಳಲ್ಲಿ ತೋರಿಸುತ್ತಿದ್ದಾರೆ. ನಗರ ಪ್ರದೇಶಗಳಲ್ಲಿ ವಾಸಮಾಡುತ್ತಿರುವ ಈ ಜನಾಂಗಕ್ಕೆ ವಾಸದ ಮನೆಗಳಿಲ್ಲದೆ ಸ್ಲಂ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ಸರಕಾರದ ಸೌಲಭ್ಯಗಳು ಇವರಿಗೆ ಲಭ್ಯವಾಗಿಲ್ಲ.

ಶಿಲ್ಪಗಾರಿಕೆಯ ಮೇಲು ಆಧುನಿಕತೆಯ ಪ್ರಭಾವವನ್ನು ಬೀರಿದೆ. ಶಿಲ್ಪಗಾರಿಕೆ ವೃತ್ತಿಯನ್ನು ಕೇವಲ ವಿಶ್ವಕರ್ಮ ಜನಾಂಗ ಅಳವಡಿಸಿಕೊಂಡಿರುವುದು ಕಂಡುಬರುತ್ತದೆ. ಹಿಂದೆ ಶಿಲ್ಪಿಗಳು, ಮೂರ್ತಿಗಳನ್ನು ತಯಾರಿಸುವಲ್ಲಿ ಗುಡಿಗೋಪುರಗಳನ್ನು ನಿರ್ಮಿಸುವಲ್ಲಿ ವಿಶಿಷ್ಟ ಪ್ರಾವಿಣ್ಯತೆಯನ್ನು ತೋರಿಸುತ್ತಿದ್ದರು. ರಾಜ ಮಹಾರಾಜರು ಶಿಲ್ಪಗಾರಿಕೆಗೆ ರಾಜಾಶ್ರಯ ನೀಡಿದ್ದರು. ಆದರೆ

ಇಂದು ಶಿಲ್ಪಗಾರಿಕೆಗೆ ಯಾರ ಆಶ್ರಯವು ಇಲ್ಲ ಸ್ವತಂತ್ರ್ಯವಾಗಿ ವೃತ್ತಿಯನ್ನು ನಡೆಸುತ್ತಿದ್ದಾರೆ. ಶಿಲ್ಪಿಗಳು ಶಿಲೆ ಮತ್ತು ಲೋಹದಿಂದ ವಿವಿಧ ರೀತಿಯ ಯಂತ್ರಗಳನ್ನು ಬಳಸಿ ಶಿಲೆ ಹಾಗೂ ಲೋಹಗಳಿಂದ ವೈವಿಧ್ಯಮಯವಾದ ಮೂರ್ತಿಗಳನ್ನು ಗ್ರಾಹಕರ ಬೇಡಿಕೆಗನುಗುಣವಾಗಿ ತಯಾರಿಸಿ ಕೊಡುತ್ತಾರೆ. ಆದರೆ ಅವುಗಳ ಬೇಡಿಕೆ ವಿರಳವಾಗಿರುವುದರಿಂದ ಶಿಲ್ಪಗಾರಿಕೆಯಲ್ಲಿ ತೊಡಗಿಸಿಕೊಳ್ಳುವವರ ಸಂಖ್ಯೆ ಕಡಿಮೆಯಾಗುತ್ತದೆ. ಸರಕಾರ ಹಾಗೂ ಸಂಘಸಂಸ್ಥೆಗಳು ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಿ ಶಿಲ್ಪಶಾಸ್ತ್ರವನ್ನು ಶಾಸ್ತ್ರೋಕ್ತವಾಗಿ ಕಲಿಸುವ ಕಾರ್ಯ ಮಾಡಬೇಕಾಗಿದೆ.

ಆಭರಣ ತಯಾರಿಕೆಯಲ್ಲಿ ಅಕ್ಕಸಾಲಿಗ ಅಥವಾ ಪತ್ತಾರರು ಪ್ರಸಿದ್ಧಿ ಪಡೆದಿದ್ದಾರೆ ಪತ್ತಾರಿಕೆ ವಂಶಪಾರಂಪರಿಕವಾಗಿ ಬೆಳೆದುಬಂದಿರುವ ವೃತ್ತಿ. ಈ ವೃತ್ತಿಯನ್ನು ವಿಶ್ವಕರ್ಮ ಜನಾಂಗ ಹಿಂದಿನಿಂದಲೂ ನಡೆಸಿಕೊಂಡು ಬರುತ್ತಿದೆ. ಭಾರತದಲ್ಲಿ ಆಭರಣಗಳ ಬೇಡಿಕೆ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತದೆ. ವಿದೇಶಗಳಲ್ಲೂ ಭಾರತದ ಆಭರಣಗಳಿಗೆ ಬಾರಿ ಬೇಡಿಕೆ ಇರುವುದು ಕಂಡುಬರುತ್ತದೆ. ಹಿಂದೆ ಆಭರಣಗಳ ತಯಾರಿಕೆಯ ಎಲ್ಲಾ ಹಂತಗಳನ್ನು ಒಬ್ಬರೇ ಮಾಡುತ್ತಿದ್ದರು. ಆದರೆ ಇಂದೂ ಒಂದೊಂದು ಹಂತಕ್ಕೂ ಈ ಆಭರಣ ಹಲವರ ಕೈ ತಲುಪುವ ಹಂತವಿರುತ್ತದೆ. ಅಂದರೆ ಬಂಗಾರವನ್ನು ಕರಗಿಸಿ ಅಚ್ಚಿಗೆ ಹಾಕುವವನೇ ಒಬ್ಬ, ಅಚ್ಚಿನಿಂದ ಗಟ್ಟಿಗೆ ಬೇಕಾದ ಚಿತ್ರ ಬರೆಯುವವನು ಒಬ್ಬ, ಆಕಾರಕ್ಕೆ ಕೊರೆಯುವವ ಇನ್ನೊಬ್ಬ, ಅದಕ್ಕೆ ಹರಳು ಕೂರಿಸುವವನು ಮತ್ತೊಬ್ಬ. ಕೂರಿಸಿದ ನಂತರ ಅದನ್ನು ಪಾಲಿಷ್ ಮಾಡುವವ ಬೇರೊಬ್ಬ ಕೊನೆಯಲ್ಲಿ ನಯವಾಗಿ ಮಾಡುವವನೇ ಒಬ್ಬ. ಹೀಗೆ ಹಲವು ಮಂದಿಯ ಕೈಗಳಿಂದ ಆಭರಣ ಅಣಿಯಾಗುತ್ತದೆ. ಇದು ಆಭರಣ ತಯಾರಿಕೆಯ ಪ್ರಮಾಣ ಹೆಚ್ಚಿಸುವುದಕ್ಕೆ ಅನುಕೂಲ. ಇಂದು ಆಭರಣ ತಯಾರಿಕೆ ಒಂದು ಉದ್ಯಮವಾಗಿ ಬೆಳೆದಿದೆ. ಉದ್ಯಮ ನಡೆಸುವವರು ಶ್ರೀಮಂತ ಶೆಟ್ಟಿಗಳು ಆದರೆ ಆಭರಣ ತಯಾರಿಸುವವರು ಅಕ್ಕಸಾಲಿಗರು, ಇಂದು ಅಕ್ಕಸಾಲಿಗರು ಆಭರಣ ಉದ್ಯಮಗಳಲ್ಲಿ ಕೂಲಿಕಾರರಾಗಿ ದುಡಿಯುತ್ತಿದ್ದಾರೆ. ಅವರ ಕೆಲಸಕ್ಕೆ ತೊಂದರೆ ಇಲ್ಲ. ಆದರೆ ದುಡಿಯುವ ಫಲ ಹೆಚ್ಚಾಗಿ ಮಧ್ಯವರ್ತಿಗಳ ಕೈ ಸೇರುತ್ತಿದೆ. ಇಂದು ಆಧುನಿಕ ಯಂತ್ರಗಳ ಹಾವಳಿಯಿಂದ ಈ ರೀತಿ ಕೈಗಳಿಂದ ತಯಾರಿಸುವ ಒಡವೆಗಳಿಗೆ ಯಾವುದೇ ರೀತಿ ಆಕರ್ಷಣೆ ಇರುವುದಿಲ್ಲ. ಆದ್ದರಿಂದ ಇವರೂ ತಮ್ಮ ಮೂಲ ಕಸುಬನ್ನು ತೊರೆಯುವ ಹಂತಕ್ಕೆ ಬಂದಿದ್ದಾರೆ.

ಕಂಚುಗಾರರು

ವಿಜಯನಗರ ಅವಧಿಯಲ್ಲಿ ಕಂಚಿನ ವಿಗ್ರಹಗಳಿಗೆ ಎಲ್ಲಿಲ್ಲದ ಬೇಡಿಕೆ ಇಂದಿಗೂ ಸಹ ಅವುಗಳನ್ನು ಕಮಲಾಪುರ ಮ್ಯೂಸಿಯಂ, ವಿರೂಪಾಕ್ಷ ದೇವಾಲಯ, ತಿರುಪತಿ, ಇತರೆಡೆಗಳಲ್ಲಿ ಕಾಣುತ್ತೇವೆ. ಆದರೆ ಇಂದು ಕಂಚುಗಾರಿಕೆ ಕಸುಬಿನಲ್ಲಿ ನಿರತರಾದವರ ಸಂಖ್ಯೆ ಬಹಳ ಕಡಿಮೆ. ಪಾಂಚಾಳರಲ್ಲಿ ಒಂದು ಬಣಕ್ಕೆ ಸೇರಿದ ಉಪಜಾತಿಯವರು ಈ ವೃತ್ತಿಯನ್ನು ಕೈಗೊಂಡಿದ್ದಾರೆ. ಇವರು ತಾಮ್ರ, ಹಿತ್ತಾಳೆ, ಸೀಸ ಈ ಮೂರರ ಮಿಶ್ರಣದಿಂದ ಕಂಚನ್ನು ತಯಾರಿಸುತ್ತಾರೆ. ಇವರು ಹಿಂದೆ ದೀಪ, ಜಗ್ಗು, ಹೂಜಿ, ತಟ್ಟೆ ಇತ್ಯಾದಿ ಉಪಕರಣ

ತಯಾರಿಸುತ್ತಿದ್ದರೆ. ಅ ಜನಾಂಗ ಬಳ್ಳಾರಿ ಹಾಗೂ ಹೊಸಪೇಟೆ ನಗರಗಳಲ್ಲಿದ್ದಾರೆ. ಆದರೆ ಅವರು ಈ ವೃತ್ತಿಯನ್ನು ಮಾಡುತ್ತಿಲ್ಲ ಅದರ ಬದಲಿಗೆ ಕಂಚಿನ ಹಾಗೂ ಹಿತ್ತಾಳೆ ಸಾಮಾಗ್ರಿಗಳನ್ನು ತಮಿಳುನಾಡಿನಿಂದ ಕೊಂಡು ತಂದು ಇಲ್ಲಿ ಮಾರಾಟ ಮಾಡುತ್ತಿದ್ದಾರೆ. ಆ ವಸ್ತುಗಳ ಮಾರಾಟದ ಪ್ರದರ್ಶನ ತುಂಬಾ ಕಡಿಮೆ ಇರುವುದರಿಂದ ಕಂಚುಗಾರರು ಬೇರೆ ವೃತ್ತಿಗಳನ್ನು ಅವಲಂಬಿಸಿದ್ದಾರೆ. ಕೆಲವರು ತಾಮ್ರ ಹಿತ್ತಾಳೆಯ ಪಾತ್ರೆಗಳನ್ನು ರಿಪೇರಿ ಮಾಡಿಕೊಡುತ್ತಾರೆ.

ನೇಕಾರರು

ಒಕ್ಕಲುತನದ ನಂತರದ ಪ್ರಮುಖ ಕಸುಬು ನೇಕಾರಿಕೆ. ನೇಕಾರರ ಪ್ರಮುಖ ವೃತ್ತಿ ನೇಯ್ಗೆ, ಈ ವೃತ್ತಿಯನ್ನು ಮಾಡುವವರು ದೇವಾಂಗ ಅಥವಾ ಜಾಡ ಸಮುದಾಯದವರು. ಇವರು ನೂಲುನೇಯುವುದು ಹಾಗೂ ಬಣ್ಣ ಹಾಕುವುದು ಮುಂತಾದ ಕೆಲಸ ಮಾಡುತ್ತಾರೆ. ಇವರ ನೇಯ್ಗೆಯ ಪ್ರಮುಖ ಸಾಧನ ಕೈಮಗ್ಗ, ಸರಿ, ಗಂಜಿ, ಕುಂಚಿಗೆ, ಎಳೆ, ಎಳೆಕಟ್ಟು, ಮಗ್ಗಕುಳಿ, ಚೌಸೆರಗು, ಉಂಕಿ, ಅಣಿಮೆಟ್ಟುವುದು, ಸಮಗಾಲು, ಆಣಿ, ಲಾಳಿ, ಮುಳ್ಳು ಕಂಡಿಕೆ ಮುಂತಾದ ಸಾಧನ ಸಲಕರಣೆಗಳ ಸಹಾಯದಿಂದ ಸೀರೆ, ಕುಪ್ಪಸ, ದೋತರ, ಗುಡಾರ, ಚವಾಳಿ, ಇತ್ಯಾದಿಗಳನ್ನು ನೇಯುತ್ತಾರೆ. ಕೆಲವರು ರೇಷ್ಮೆ ಸೀರೆಗಳನ್ನು ನೇಯುತ್ತಾರೆ. ಇವರು ಆಯಾಗಾರರ ಗುಂಪಿಗೆ ಸೇರಿಲ್ಲ. ತಾವು ಮಾಡಿದ ಶ್ರಮಕ್ಕೆ ಹಾಕಿದ ಬಂಡಾವಳಕ್ಕೆ ಲಾಭವಾಗುವ ರೀತಿಯಲ್ಲಿ ಬಟ್ಟೆಗಳಿಗೆ ಬೆಲೆಗಳನ್ನು ನಿಗದಿಪಡಿಸಿ, ಮಾಡಿ ಬಂದ ಹಣದಿಂದ ಜೀವನ ನಡೆಸುವರು. ಆದರೆ ಯಾಂತ್ರಿಕ ಜೀವನದಲ್ಲಿಂದು ಸಾಂಪ್ರದಾಯಿಕ ನೇಯ್ಗೆ ಮಾಯವಾಗುತ್ತಿದೆ. ಕೈಮಗ್ಗದ ಬದಲು ಯಾಂತ್ರಿಕ ಮಗ್ಗಗಳು ನೇಯ್ಗೆಯಲ್ಲಿ ಬಳಕೆಯಾಗುತ್ತಿವೆ. ತಾವೆ ನೂಲು ತಯಾರಿಸುವುದನ್ನು ಬಿಟ್ಟು ಮಾರುಕಟ್ಟೆಯಲ್ಲಿ ಸಿಗುವ ನೂಲನ್ನು ಹಾಗೂ ಬಣ್ಣಗಳನ್ನು ಉಪಯೋಗಿಸಿ ಬಟ್ಟೆಗಳನ್ನು ತಯಾರಿಸುತ್ತಾರೆ. ಆದರೆ ಸಾಂಪ್ರದಾಯಿಕ ನೇಯ್ಗೆಯ ಬಟ್ಟೆಗಳ ಬೇಡಿಕೆ ಕಡಿಮೆ ಇರುವುದರಿಂದ, ನೇಕಾರರು ತಮ್ಮ ಉತ್ಪಾದನೆ ಕ್ರಿಯೆಗಳಲ್ಲಿ ಬದಲಾವಣೆ ತಂದುಕೊಂಡಿದ್ದಾರೆ. ಸ್ವಂತ ಮಗ್ಗ ಇಲ್ಲದವರೂ ಕೂಲಿಕಾರ ನೇಕಾರರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಬಟ್ಟೆ ತಯಾರಿಕೆ ಕೈಗಾರಿಕೆಗಳ ಪ್ರವೇಶದಿಂದ ನೇಕಾರರ ಬದುಕನ್ನು ದಾರುಣಸ್ಥಿತಿಗೆ ತಂದು ನಿಲ್ಲಿಸಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಇವರ ವೃತ್ತಿಯ ಸ್ಥಿತ್ಯಂತರಕ್ಕೆ ಪ್ರೋತ್ಸಾಹ ನೀಡುತ್ತಿದೆ. ಹಣಕಾಸಿನ ಸಂಸ್ಥೆಗಳ ಮೂಲಕ ಕಡಿಮೆ ಬಡ್ಡಿ ದರಕ್ಕೆ ಸಾಲಸೌಲಭ್ಯ ಒದಗಿಸುತ್ತಿದೆ. ಹಲವಾರು ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಿ ತರಬೇತಿ ನೀಡುತ್ತಿವೆ. ಹೊಸ ಡಿಜೈನ್ ಕೇಂದ್ರಗಳನ್ನು ಸ್ಥಾಪಿಸಿ ಯಂತ್ರೋಪಕರಣಗಳನ್ನು ಪೂರೈಸಿದೆ. ಆದರೂ ನೇಕಾರರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಯಲ್ಲಿ ಬದಲಾವಣೆ ಆಗಿಲ್ಲ. ವೈವಿಧ್ಯಮಯ ಹಾಗೂ ಆಕರ್ಷಕ ಬಟ್ಟೆ ತಯಾರಿಸಿ ಕಡಿಮೆ ಬೆಲೆಗೆ ಮಾರುವ ಬಟ್ಟೆ ಕೈಗಾರಿಕೆಗಳ ಭರಾಟೆಯಲ್ಲಿ ನೇಕಾರರ ಜೀವನ ಚಿಂತಾಜನಕವಾಗಿರುವುದು ಕೊಪ್ಪಳ ಜಿಲ್ಲೆಯಲ್ಲಿರುವ ನೇಕಾರರನ್ನು ಭೇಟಿ ಮಾಡಿ ಚರ್ಚಿಸಿದಾಗ ಅವರು ಸಮಸ್ಯೆಗಳ ಸರಮಾಲೆಯನ್ನು ತಮ್ಮೊಂದಿಗೆ ಹಂಚಿಕೊಂಡಿರುವುದನ್ನು ಗುರುತಿಸಿದೆ. ಇಂದು ಕೈಮಗ್ಗ, ಕೇಂದ್ರಗಳು ರೇಷ್ಮೆ

ತಯಾರಿಕಾ ಕೇಂದ್ರಗಳು, ಮೊಳಕಲ್ಮೂರು, ಬಳ್ಳಾರಿ, ಕೊಪ್ಪಳ, ಹೊಸಪೇಟೆ, ಕಂಪ್ಲಿ, ರಾಮಪುರ, ಕೊಂಡ್ಲಹಳ್ಳಿ, ಮುಂತಾದ ಕಡೆಗಳಲ್ಲಿ ಹತ್ತಿಬಟ್ಟೆ ನೇಯುವ ಮತ್ತು ಖಾದಿ ಬಟ್ಟೆ ನೇಯುವ ಕೇಂದ್ರಗಳಿವೆ. ನೇಕಾರರು ಇಂದು ಮಹಾನಗರಗಳ ಬೇರೆ, ಬೇರೆ ಕಡೆಗೆ ಹೋಗಿ ಬೇರೆ ವೃತ್ತಿಯಲ್ಲಿ ತೊಡಗಿರುವುದು ಕಂಡುಬರುತ್ತದೆ.

ಮೇದಾರರು

ಬಿದಿರು, ಬೆತ್ತಗಳನ್ನು ಸೀಳಿ ಗೃಹೋಪಯೋಗಿ ಹಾಗೂ ವ್ಯವಸಾಯೋಪಯೋಗಿ ಉತ್ಪನ್ನಗೊಸಿ ತಯಾರಿಸುವವರು ಮೇದಾರ ಜನಾಂಗ, ಮೇದಾರರು ಅರಣ್ಯಗಳಲ್ಲಿರುವ ಬಿದಿರು, ಬೆತ್ತಗಳನ್ನು ಕಡಿದು ತಂದು ಸೀಳಿ, ಸಿಬಿರುಗಳನ್ನು ತಯಾರು ಮಾಡಿಕೊಂಡು, ನೀರಿನಲ್ಲಿ ಸ್ವಲ್ಪಕಾಲ ನೆನೆಸಿ, ಮಿದುಗೊಳಿಸಿ ವಿವಿಧ ರೀತಿ ಆಕಾರ ಹಾಗೂ ಗಾತ್ರದ ಬಿದಿರು ಬೆತ್ತದ ಸಾಮಾನುಗಳನ್ನು ತಯಾರಿಸುತ್ತಾರೆ. ತಯಾರಿಸಿದ ಪದಾರ್ಥಗಳನ್ನು ಊರೂರು ಅಲೆದು, ಮನೆಮನೆಗೆ ಹೋಗಿ ಮಾರಿ ಕಾಳು–ಕಡಿ ಅಥವಾ ಹಣವನ್ನು ಪಡೆಯುತ್ತಾರೆ. ಮೇದಾರರು ಆಯಾಗಾರರಾಗಿ ಹಳ್ಳಿಗಳಲ್ಲಿ ಪ್ರಾಮುಖ್ಯತೆ ಇಲ್ಲದಿರುವುದರಿಂದ ನಗರ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ನಗರಗಳಲ್ಲಿ ಒಂದು ನಿರ್ದಿಷ್ಟಪಡಿಸಿದ ಪ್ರದೇಶದಲ್ಲಿ ಸಮುದಾಯದವರೆಲ್ಲರೂ ವಾಸಮಾಡುತ್ತ ಅಲ್ಲಿಯ ವಸ್ತುಗಳನ್ನು ತಯಾರಿಸಿ ಮಾರಾಟ ಮಾಡುವ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಅನುಭೋಗಿಗಳು ಅವರು ಇರುವ ಪ್ರದೇಶಗಳಿಗೆ ಬಂದು ವಸ್ತುಗಳನ್ನು ಕೊಂಡುಹೋಗುತ್ತಾರೆ. ಆಧುನಿಕ ಕೈಗಾರಿಕೆಗಳ ಭರಾಟೆ ಮೇದಾರಿಕೆ ವೃತ್ತಿಯ ಮೇಲೂ ಬೀರಿವೆ. ಪ್ಲಾಸ್ಟಿಕ್ ಹಾಗೂ ಪೇಪರ್‌ನಿಂದ ತಯಾರಿಸಿದ ವಸ್ತುಗಳು ಮಾರುಕಟ್ಟೆಯಲ್ಲಿ ಸುಲಭ ಬೆಲೆಗೆ ದೊರೆಯುತ್ತಿವೆ. ಕಾರಣ ಮೇದಾರರ ವಸ್ತುಗಳ ಬೇಡಿಕೆ ಕಡಿಮೆಯಾಗಿದೆ. ಆದರೂ ಮೇದಾರರ ಜನಾಂಗ ತಮ್ಮ ವೃತ್ತಿಯನ್ನು ಸ್ವಲ್ಪ ಮಾರ್ಪಡಿಸಿಕೊಂಡಿದ್ದಾರೆ. ಬಿದಿರು ಬೆತ್ತದ ವಸ್ತುಗಳನ್ನು ತಯಾರಿಸುವುದರ ಜೊತೆಗೆ ಬೊಂಬುಗಳ, ಏಣಿ, ಬಿದಿರುಚಾಪೆ, ಬುಟ್ಟಿ, ಹೆಂಚು, ಕಡಪ ಕಲ್ಲಿನ ಬಂಡೆಗಳನ್ನು ವಿವಿಧ ಮರದ ಪೋಲುಗಳನ್ನು ಮಾರುವ ವೃತ್ತಿಯನ್ನು ಮಾಡುತ್ತಿದ್ದಾರೆ. ಅರಣ್ಯ ಕಾನೂನುಗಳನ್ನು ಕಠಿಣವಾಗಿರುವುದರಿಂದ ಇವರಿಗೆ ಬಿದಿರು ಬೆತ್ತಗಳು ಸರಳವಾಗಿ ದೊರಯುವುದಿಲ್ಲ. ಮಧ್ಯವರ್ತಿಗಳ ಸಹಾಯದಿಂದ ಇವುಗಳನ್ನು ಪಡೆದು ವ್ಯವಹಾರ ಮಾಡುತ್ತಿದ್ದಾರೆ. ಇತ್ತೀಚೆಗೆ ಮೇದಾರರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವಲ್ಲಿ ಹೊಂದಿರುವವರು. ಅವರು ತಮ್ಮ ಮಕ್ಕಳನ್ನು ತಮ್ಮ ವೃತ್ತಿಯಲ್ಲಿ ಮುಂದುವರೆಸಲು ಇಷ್ಟಪಡುವುದಿಲ್ಲ ಕಾರಣ ಆರ್ಥಿಕ ಸ್ಥಿತ್ಯಂತರಗಳಿಂದ ಮೂಲ ವೃತ್ತಿಯಲ್ಲಿ ಜೀವನ ಸಾಗಿಸುವುದು ಸುಸ್ತರವಾಗಿದೆಯೆಂಬ ಅರಿವು ಮೂಡಿರುವುದು.

ಎಣ್ಣೆ ಬೀಜಗಳಾದ ಶೇಂಗಾ, ಎಳ್ಳು, ಕುಸುಬೆ, ಸೂರ್ಯಕಾಂತಿ ಬೀಜಗಳಿಂದ ಎಣ್ಣೆ ತೆಗೆಯುವ ಕಸುಬು ಗಾಣಿಗಾರಿಕೆ. ಈ ಕಸುಬು ಮಾಡುವವರನ್ನು ಗಾಣಿಗರು ಎಂದು ಕರೆಯುತ್ತಿದ್ದಾರೆ. ಕರಿಗಾಣಿಗರು, ಬಿಳಿಗಾಣಿಗರು, ಎಂಬ ಎರಡು ಪಂಗಡಗಳಿವೆ. ಇವರು ರೈತರು ಕೊಟ್ಟ ಎಣ್ಣೆ ಬೀಜಗಳಿಂದ ಎಣ್ಣೆ ತೆಗೆದು ಕೊಟ್ಟು ಹಣಪಡೆಯುತ್ತಾರೆ. ಗಾಣಿಗರು ಎಣ್ಣೆ ತೆಗೆಯುವುದರಲ್ಲಿ ನಿಪುಣರು, ಆದುದರಿಂದಲೇ ಎಳ್ಳುಗಾಣಿಗರ ಬಲ್ಲ ಎಂದು ಸರ್ವಜ್ಞ

ಅವರ ವೃತ್ತಿ ನಿಪುಣತೆಯನ್ನು ಕುರಿತು ಹೇಳಿದ್ದಾನೆ. ಎತ್ತಿನ ಗಾಣದಿಂದ ಎಣ್ಣೆಯನ್ನು ತೆಗೆಯುವ ವಿಧಾನ ಸಾಂಪ್ರದಾಯಿಕವಾದುದು. ಆದರೆ ಇಂದು ಆ ಸ್ಥಳದಲ್ಲಿ ಯಂತ್ರಗಳು ಬಂದಿವೆ. ಯಂತ್ರಗಳ ಸಹಾಯದಿಂದ ಇಂದು ಎಣ್ಣೆ ತೆಗೆಯುತ್ತಿದ್ದಾರೆ. ಇಂದು ಗಾಣಗಾರಿಕೆ, ಮಾಯವಾಗುತ್ತಿದೆ. ಆಧುನಿಕ ಎಣ್ಣೆ ಉದ್ಯಮಗಳು ವಿವಿಧ ರೀತಿಯ ಎಣ್ಣೆ ತಯಾರಿಸಿ ಪ್ರತಿಯೊಂದು ಹಳ್ಳಿಗಳಲ್ಲಿಯೂ ಎಣ್ಣೆ ದೊರೆಯುವ ಹಾಗೆ ಮಾಡಿದ್ದಾರೆ ಅದ್ದರಿಂದ ಗಾಣಿಗರು ಎಣ್ಣೆ ತೆಗೆಯುವ ವೃತ್ತಿಯನ್ನು ಬಿಟ್ಟುಕೊಟ್ಟು ಕೃಷಿಕರಾಗಿ ಕೂಲಿಗಳಾಗಿ, ಸರಕಾರಿ ಉದ್ಯೋಗಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಪ್ರತಿಯೊಂದು ಗ್ರಾಮಗಳಲ್ಲಿ ಕಾಣಬಹುದಾದ ಸಾಮಾನ್ಯ ಕಸುಬು ಚಮ್ಮಾರಿಕೆ. ಚಮ್ಮಾರರು ಕೃಷಿಗೆ ಬೇಕಾದ ವಿವಿದ ಉತ್ಪನ್ನಗಳನ್ನು ತಯಾರಿಸಿಕೊಳ್ಳುತ್ತಾರೆ. ಚಮ್ಮಾರರು ಕೃಷಿಗೆ ಆಯಾಗಾರರಾಗಿದ್ದಾರೆ. ಚಮ್ಮಾರರು ಸಮಾಜದ ಕೆಳಸ್ತರದಲ್ಲಿರುವವರು. ಚಮ್ಮಾರರು ಪ್ರತಿ ಹಳ್ಳಿಗಳಿದ್ದರೂ ಅವರು ಭೂ ಒಡೆತನ ಹೊಂದಿರುವರು ಬಹಳ ಕಡಿಮೆ ಈ ಜನಾಂಗ ಚಮ್ಮಾರಿಕೆ ಜೊತೆಗೆ ಕೂಲಿ ಕೆಲಸಗಾರರಾಗಿ ಕೆಲಸ ಮಾಡುತ್ತಿದ್ದಾರೆ. ಇವರ ಆರ್ಥಿಕ ಸ್ಥಿತಿ ದಾರುಣವಾಗಿದೆ. ಸಾಂಪ್ರದಾಯಿಕ ಕುಲಕಸುಬನ್ನು ಮುಂದುವರೆಸಿರುವವರು ನಗರ ಪ್ರದೇಶಗಳಲ್ಲಿ ಚಪ್ಪಲಿ ತಯಾರಿಸುವ ಅಥವಾ ರಿಪೇರಿ ಮಾಡುವ ವೃತ್ತಿ ಮುಂದುವರೆಸಿದ್ದಾರೆ. ಹಳ್ಳಿಗಳಲ್ಲಿ ಪ್ರಾಣಿಗಳ ಚರ್ಮವನ್ನು ಸುಲಿದು ಚರ್ಮದ ವಸ್ತುಗಳನ್ನು ತಯಾರಿಸುತ್ತಿದ್ದಾರೆ. ಆದರೆ ಈ ಸರಕುಗಳ ಬೇಡಿಕೆ ಕಡಿಮೆಯಾಗುವುದರಿಂದ ಇದೇ ವೃತ್ತಿಯ ಮೇಲೆ ಅವಲಂಬನೆಯಾಗಿ ಜೀವಿಸುವುದು ಕಷ್ಟಕರ ಎಂದು ಚಮ್ಮಾರರು ತಿಳಿಸಿದ್ದಾರೆ. ಕೃಷಿಕರು ಕೃಷಿಗೆ ಬೇಕಾದ ಚರ್ಮದ ಸಿದ್ಧ ಸಾಮಾನುಗಳನ್ನು ಪೇಟೆಯಿಂದ ಕೊಂಡು ತರತೊಡಗಿದ್ದಾನೆ. ಹೀಗಾಗಿ ಚರ್ಮಕಾರರಿಗೆ ಕೆಲಸವಿಲ್ಲದಂತಾಗಿ, ಅವರು ಅನಿವಾರ್ಯವಾಗಿ ಬೇರೆ ಮಾರ್ಗ ಹಿಡಿದಿದ್ದಾರೆ. ಹಮಾಲಿರೂ, ಕೂಲಿಗಳೂ, ಜಾಡಹಮಾಲಿಗಳು, ಕಾರ್ಮಿಕರೂ, ಆಫೀಸಿನ ನೌಕರರೂ ಆಗಿ ಹೊಟ್ಟೆ ಹೊರೆಯುತ್ತಿದ್ದಾರೆ. ಚಮ್ಮಾರಿಕೆ ಸಂಪ್ರದಾಯ ವಿಧಾನ ಬಿಟ್ಟುಕೊಟ್ಟ ಆಧುನಿಕತೆಗೆ ಸ್ಥಿತ್ಯಂತರಗೊಂಡಿದೆ.

ಬಟ್ಟೆಗಳನ್ನು ಶುಚಿಗೊಳಿಸುವ ವೃತ್ತಿ ಅಗಸನ ಕುಲಕಸುಬು ಮಡಿವಾಳ ಜನಾಂಗ ಪುರಾತನ ಕಾಲದಿಂದಲೂ ಈ ವೃತ್ತಿ ಮಾಡಿಕೊಂಡು ಬರುತ್ತಿದ್ದಾರೆ. ಮಡಿವಾಳರು ಮೇಲ್ವರ್ಗದವರ ಬಟ್ಟೆಗಳನ್ನು ಮಡಿ ಮಾಡಿಕೊಡುತ್ತಾರೆ. ಬಟ್ಟೆ ಮಾಡಿ ಮಾಡಲು ಚವಳು ಮಣ್ಣು, ಜಾಹಿಕಾಯಿಗಳನ್ನು ಮೊದಲು ಉಪಯೋಗಿಸುತ್ತಿದ್ದರು. ಇಂದು ಬಟ್ಟೆಹೊಗೆಯುವ ಸೋಪು, ನೀಲಿ ಮತ್ತು ವಿವಿಧ ರೀತಿಯ ರಸಾಯನಿಕ ವಸ್ತುಗಳನ್ನು ಉಪಯೋಗಿಸಿ ಬಟ್ಟೆ ಶುಭ್ರಗೊಳಿಸುತ್ತಾರೆ. ಇದರ ಜೊತೆಗೆ ನೀಟಾಗಿ ಇಸ್ತ್ರೀ ಮಾಡಿಕೊಡುತ್ತಾರೆ. ಅಂದು ಹಳ್ಳಿಗಳಲ್ಲಿ ಮಡಿವಾಳರು ಪ್ರಮುಖ ಆಯಾಗಾರರಾಗಿದ್ದರು. ಆಯಾದ ಮೂಲಕ ಜೀವನ ನಡೆಸುತ್ತಿದ್ದರು ಅಂದು ಹಳ್ಳಿಗಳಲ್ಲಿ ಹಳ್ಳಕೊಳ್ಳ ಕೆರೆಗಳು ಇದ್ದವು ಅಲ್ಲಿ ಬಟ್ಟೆಗಳನ್ನು ಒಗೆದು ಮಾಡಿ ಮಡಿ ಆಯಾ ಪಡೆದುಕೊಳ್ಳುತ್ತಿದ್ದರು. ಬಹಳಷ್ಟು ಜನ ನಗರ ಪ್ರದೇಶಗಳಲ್ಲಿ ವಾಸವಾಗಿ ಲ್ಯಾಂಡ್ರಿ ಅಂಗಡಿ ಇಟ್ಟುಕೊಂಡು ಜೀವಿಸುತ್ತಿದ್ದಾರೆ. ಇಂದು ಹಳ್ಳಿಗಳಲ್ಲಿ ಕೆರೆ ಕಟ್ಟೆಗಳು ಬತ್ತಿವೆ. ತೆರೆದ

ಬಾವಿಗಳ ಸ್ಥಳದಲ್ಲಿ ಕೊಳವೆ ಬಾವಿಗಳು ಸ್ಥಾನಪಡೆದಿವೆ. ಹಾಗಾಗಿ ರೈತ ಸಹ ಅಲ್ಲಿ ಬಟ್ಟೆ ಸ್ವಚ್ಛಮಾಡಲು ಅವಕಾಶ ಮಾಡಿಕೊಡುತ್ತಿಲ್ಲ. ಹೀಗಾಗಿ ಹಳ್ಳಿಗಳಲ್ಲಿ ಮಡಿವಾಳ ಜನಾಂಗ ಕುಲಕಸುಬುಗಳನ್ನು ಬಿಟ್ಟು ಕೃಷಿ ಕೆಲಸದ ಕೂಲಿಗಳಾಗಿ, ಗಣಿಗಾರಿಕೆಯಲ್ಲಿ ಕೆಲಸಗಾರರಾಗಿ, ಕಾರ್ಮಿಕರಾಗಿ, ಕೆಲಸ ಮಾಡುತ್ತಿದ್ದಾರೆ. ಇವರ ಜೀವನ ತುಂಬಾ ದಾರುಣ ಸ್ಥಿತಿಯಲ್ಲಿದೆ ಈ ಕಸುಬಿನ ಬಗೆಗೆ ಗೌರವ ಭಾವನೆ ಸಮಾಜದಲ್ಲ ಉಳಿದಿಲ್ಲ. ಮಡಿವಾಳರಲ್ಲಿಯೂ ಉಳಿದಿಲ್ಲ. ಏನೋ ಪೂರ್ವಜರಿಂದ ಬಂದ ಉದ್ಯೋಗ ಬಿಡಬಾರದೆಂದು ಕೆಲವರು ಅಲ್ಲಿ ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಬಟ್ಟೆ ಸ್ವಚ್ಛ ಮಾಡುವ ಆಧುನಿಕ ಸೌಕರ್ಯ ಈಗ ಲಭ್ಯವಿರುವುದರಿಂದ ಈ ವೃತ್ತಿಯ ಕಾರ್ಯ ಹಿಂದಾಗುತ್ತಿದೆ. ನಗರ ಪ್ರದೇಶಗಳಲ್ಲಿ ಕೆಲವು ಮಡಿವಾಳರು ಡ್ರೈಕ್ಲೀನಿನಂತಹ ಅಂಗಡಿಗಳನ್ನು ತೆರೆದು ಜೀವನ ಸಾಗಿಸುತ್ತಿದ್ದಾರೆ. ಮಡಿವಾಳರು ಸಾಂಪ್ರದಾಯಿಕ ಬಟ್ಟೆ ಹೊಗೆಯುವ ವಿಧಾನ ಬಿಟ್ಟುಕೊಟ್ಟು ಹೊಸ ವಿಧಾನಗಳನ್ನು ಬಳಸುತ್ತಿದ್ದಾರೆ. ಮಾರುಕಟ್ಟೆಯಲ್ಲಿ ಲಭ್ಯವಿರುವ ಸೋಪು ಇತ್ಯಾದಿ ರಸಾಯನಿಕ ವಸ್ತುಗಳನ್ನು ಬಳಸುತ್ತಿದ್ದಾರೆ.

ಗ್ರಾಮೀಣ ವೃತ್ತಿಗಳಲ್ಲಿ ಕ್ಷೌರಿಕ ವೃತ್ತಿಯು ಪ್ರಮುಖವಾದುದು. ತಲೆ ಕೂದಲನ್ನು ತೆಗೆಯುವ ಮುಖ ಕ್ಷೌರ ಮಾಡುವ ಕ್ಷೌರಿಕರು ಎಲ್ಲಾ ಹಳ್ಳಿಗಳಲ್ಲೂ ಇದ್ದಾರೆ. ಕ್ಷೌರಿಕ ವೃತ್ತಿಯಿಂದಲೇ ಇವರು ಉಪಜೀವನ ನಡೆಸುತ್ತಾರೆ. ಹಿಂದಿನ ಕಾಲದಲ್ಲಿ ಇವರು ಹಳ್ಳಿಯ ಆಯಾಗಾರರು. ಆದರೆ ಕ್ಷೌರಿಕರು ಇಂದು ಆಯಾದ ಕೆಲಸ ಮಾಡುತ್ತಿಲ್ಲ. ತಾವು ಹಳ್ಳಿಯ ಹೊರಭಾಗದಲ್ಲಿ ಒಂಡು ಶೇಡ್ ಹಾಕಿಕೊಂಡು ವೃತ್ತಿಯನ್ನು ಮುಂದುವರೆಸುತ್ತಿದ್ದಾರೆ. ಹಿಂದಿನ ದಿನಗಳಲ್ಲಿ ಮನೆ ಮನೆಗಳಿಗೆ ಹೋಗಿ ವೃತ್ತಿ ಮಾಡುತ್ತಿದ್ದರು. ಬೆಳಗಿನಿಂದ ಸಂಜೆಯವರೆಗೂ ಕಾರ್ಯ ನಿರ್ವಹಿಸುವ ಕ್ಷೌರಿಕರು ಆಧುನಿಕ ಕ್ಷೌರಿಕ ಸಾಧನಗಳನ್ನು ಇಂದು ಬಳಸುತ್ತಿದ್ದಾರೆ.ಜೊತೆಗೆ ಎಣ್ಣೆ ಹಚ್ಚಿ ಮಸಾಜು ಮಾಡುತ್ತಾರೆ. ಕ್ಷೌರಿಕರು ಆಧುನಿಕ ರೀತಿಯ ಸುಸಜ್ಜಿತವಾದ ಸಲೂನ್ ತೆರೆದು ಆಧುನಿಕ ಯಂತ್ರೋಪಕರಣಗಳನ್ನು ಬಳಸುತ್ತಿದ್ದಾರೆ. ಇಂದು ಅವುಗಳು ಬ್ಯೂಟಿ ಪಾರ್ಲರ್‌ಗಳಾಗಿ ಕಾರ್ಯನಿರ್ವಹಿಸುತ್ತಿವೆ. ಕ್ಷೌರಿಕರು ತಮ್ಮ ವೃತ್ತಿಯ ಜೊತೆ ಬ್ಯಾಂಡ್‌ವಾದ್ಯ ಬಾರಿಸುವ ವೃತ್ತಿಯನ್ನು ಕೈಗೊಂಡಿದ್ದಾರೆ. ಹಬ್ಬ ಹರಿದಿನ, ಜಾತ್ರೆ, ಉಚ್ಚಾಯ, ಮದುವೆ ಮುಂಜಿ, ಇತ್ಯಾದಿ ಸಂದರ್ಭದಗಳಲ್ಲಿ ಬ್ಯಾಂಡ್‌ವಾದ್ಯ ಬಾರಿಸುವ ಕಾಯಕ ಮಾಡುತ್ತಿದ್ದಾರೆ. ಈ ವೃತ್ತಿದಾರರಲ್ಲಿ ಅನಕ್ಷರಸ್ಥರು ಹೆಚ್ಚಾಗಿರುವುದು ಕ್ಷೌರಿಕರು ಹಳ್ಳಿಗಳನ್ನು ಬಿಟ್ಟು ನಗರಗಳಿಗೆ ವಲಸೆ ಹೋಗಿದ್ದಾರೆ. ಸರಕಾರ ನೀಡಿರುವ ನಿವೇಶನಗಳಲ್ಲಿ ಸಣ್ಣ ಪುಟ್ಟ ಮನೆಗಳನ್ನು ಕಟ್ಟಿಕೊಂಡು ಜೀವಿಸುತ್ತಿದ್ದಾರೆ. ಕೆಲವರು ಆಧುನಿಕ ಕ್ಷೌರದ ಸಲೂನುಗಳಲ್ಲಿ ದಿನಗೂಲಿಗಳಾಗಿ ಅಥವಾ ನಿರ್ದಿಷ್ಟಪಡಿಸಿದ ವೇತನಕ್ಕಾಗಿ ಕೆಲಸ ಮಡುತ್ತಿದ್ದಾರೆ. ಹಳ್ಳಿಗಳಲ್ಲಿರುವ ಕ್ಷೌರಿಕರು ತಮ್ಮ ವೃತ್ತಿಯ ಜೊತೆಗೆ ಕೃಷಿ ಕೆಲಸಗಾರರಾಗಿ, ಬ್ಯಾಂಡ ವಾದ್ಯ ನುಡಿಸುವವರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ವಿದ್ಯಾವಂತ ಕ್ಷೌರಿಕರು ಸರಕಾರಿ ಹಾಗೂ ಖಾಸಗಿ ವೃತ್ತಿಗಳಲ್ಲಿ ನೌಕರರಾಗಿದ್ದಾರೆ. ಅವರಿಗೆ ತಮ್ಮ ಕುಲಕಸುಬಿನ ಬಗ್ಗೆ ಗೌರವ ಉಳಿದಿಲ್ಲ.

ಹೂಗಾರರು

ರೈತರ ಮನೆಗಳಿಗೆ ಹೂ –ಪತ್ರೆಗಳನ್ನು ಕೊಡುವ ದೇವಸ್ಥಾನಗಳಲ್ಲಿ ಪೂಜಾಧಿಗಳಿಗಾಗಿ

ಹೂ ಪತ್ರೆಗಳನ್ನು ತಂದುಕೊಡುವ ಒಂದು ಸಮುದಾಯ ಕರ್ನಾಟಕದಲ್ಲಿದೆ. ಈ ಜನಾಂಗ ಹೆಚ್ಚಾಗಿ ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿದ್ದಾರೆ. ಇವರು ವೀರಶೈವ ಜನಾಂಗದ ಒಂದು ಉಪಪಂಗಡದವರು. ಇವರು ವಂಶಪಾರಂಪರ್ಯವಾಗಿ ಹೂಗಾರಿಕೆ ವೃತ್ತಿಯನ್ನು ಮಾಡಿ ಜೀವನ ನಡೆಸುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಇವರು ಆಯಾಗಾರರಾಗಿದ್ದರು. ರೈತರು ಕೊಡುವ ಕಾಳು–ಕಡಿಯಿಂದಲೇ ಜೀವನ ಸಾಗಿಸುತ್ತಿದ್ದರು. ಇವರನ್ನು ಜೀರರೆಂತಲೂ, ಹೂಗಾರರೆಂತಲೂ ಮಾಲೆಗಾರರೆಂತಲೂ ಕರೆಯುತ್ತಾರೆ. ಹಳ್ಳಿಗಳಲ್ಲಿ ವಾಸವಾಗಿರುವ ಹೂಗಾರರು ಇಂದು ಈ ವೃತ್ತಿಯನ್ನು ಮಾಡುತ್ತಿಲ್ಲ. ಅವರೆಲ್ಲರೂ ಕೃಷಿಕರಾಗಿ, ನೌಕರರಾಗಿ ವಿವಿಧೆಡೆ ವಿವಿಧ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ನಗರ ಪ್ರದೇಶದಲ್ಲಿರುವ ಹೂಗಾರರು ನಗರದ ಮಾರುಕಟ್ಟೆಗಳಲ್ಲಿ ಹೂಮಾಲೆ ಮಾಡಿ, ಹೂ ಹಾರಗಳನ್ನು ಜನರ ಅಭಿರುಚಿಗೆ ತಕ್ಕಂತೆ ತಯಾರಿಸಿಕೊಡುತ್ತಿದ್ದಾರೆ.

ಹೊಸಪೇಟೆ, ಬಳ್ಳಾರಿ, ಚಿತ್ರದುರ್ಗ, ಹೂವಿನಹಡಗಲಿ, ಕೂಡ್ಲಿಗಿ, ನಗರಗಳಲ್ಲಿ ವೃತ್ತಿ ಮಾಡುವವರನ್ನು ಹೆಚ್ಚಾಗಿ ಕಾಣಬಹುದು. ಹೊಸಪೇಟೆ ಹೂಗಾರರು ಚಿತ್ರದುರ್ಗ ಹಾಗೂ ಬೆಂಗಳೂರಿನಿಂದ ಗುಲಾಬಿ, ಸೇವಂತಿಗೆ ದುಂಡುಮಲ್ಲಿಗೆ, ಅರಳು ಮಲ್ಲಿಗೆಗಳನ್ನು ದಿನ ನಿತ್ಯವೂ ಬಸ್ಸುಗಳ ಮೂಲಕ ತರಿಸುತ್ತಾರೆ. ಕೆಲವು ಹೂಗಾರರು ದೊಡ್ಡಪ್ರಮಾಣದಲ್ಲಿ ವಿವಿಧ ರೀತಿಯ ಹೂಗಳನ್ನು ತರಿಸಿ, ಮಾಲೆ ತಯಾರಿಸಿ ಮಾರುವವರಿಗೆ ಪೂರ್ಣ ಬೆಲೆ ದರದಲ್ಲಿ ಮಾರುತ್ತಾರೆ. ಹೂಗಾರರ ಮಹಿಳೆಯರು ಮನೆಗಳಲ್ಲಿ ಹೂಮಾಲೆ, ಹೂವಿನ ಗುಚ್ಚಗಳನ್ನು ತಯಾರಿಸುತ್ತಾರೆ. ಹೂವಿಗೆ ಹಬ್ಬ ಹರಿದಿನ, ಜಾತ್ರೆ ರಾಜಕೀಯ ಸಮಾರಂಭಗಳು ಜರುಗುವ ಸಂದರ್ಭಗಳಲ್ಲಿ ಹೆಚ್ಚಿನ ಬೇಡಿಕೆ ಇರುತ್ತದೆ. ಹೂಗಾರರ ಯುವ ಜನಾಂಗ ಈ ವೃತ್ತಿಯನ್ನು ಮಾಡಲು ಇಚ್ಚಿಸುವುದಿಲ್ಲವೆಂದು ಹಿರಿಯರು ತಮ್ಮ ಅಳಲನ್ನು ವ್ಯಕ್ತಪಡಿಸುತ್ತಾರೆ. ಈ ಜನಾಂಗ ವಿದ್ಯಾಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದಾರೆ. ಈ ಜನಾಂಗದವರು ಸರಕಾರದ ಉತ್ತಮ ಸ್ಥಾನಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿರುವ ಹೂಗಾರರು ಈ ಕುಲಕಸುಬಿನ ಜೊತೆಗೆ ಸಮಾಳ ಬಾರಿಸುವುದು ಮತ್ತೊಂದು ವೈಶಿಷ್ಟ್ಯವಾಗಿದೆ. ಸಮಾಳ ಹೂಗಾರರ ಮೂಲ. ಚರ್ಮ ವಾದ್ಯ, ಪೂಜಾಕಾಲದಲ್ಲಿ ಹಬ್ಬ ಹರಿದಿನಗಳಲ್ಲಿ ಜಾತ್ರೆ ವಿವಿಧ ಸಭೆ ಸಮಾರಂಭ ಹಾಗೂ ಮೆರವಣಿಗೆಗಳಲ್ಲಿ ಸಮಾಳ ಬಾರಿಸುತ್ತಾರೆ. ಸಮಾಳ ಬಾರಿಸುವ ಕಲೆ ಈ ಜನಾಂಗಕ್ಕೆ ಕರಗತವಾಗಿದೆ ಎಂದು ಹೂಗಾರರು ವ್ಯಕ್ತಪಡಿಸಿದ್ದಾರೆ. ಬದಲಾಗುತ್ತಿರುವ ಇಂದಿನ ಸಮಾಜದಲ್ಲಿ ಹೂಗಾರಿಕೆ ವೃತ್ತಿಯಿಂದ ಜೀವನ ನಡೆಸುವುದು ಕಷ್ಟ ಹಾಗೂ ಹೂ ಬೆಳೆಯುವ ರೈತರು ಸಂಖ್ಯೆ ಕಡಿಮೆ ಇದರಿಂದ ಬೇಡಿಕೆಗೆ ತಕ್ಕಂತೆ ಹೂ ಪೂರೈಕೆಯಾಗುತ್ತಿಲ್ಲ. ಇದು ಕೆಲವೇ ತಿಂಗಳುಗಳಲ್ಲಿ ನಡೆಸಬಹುದಾದ ವೃತ್ತಿ ಇದರ ಮೂಲಕ ಜೀವನ ಸಾಗಿಸುವುದು ಕಷ್ಟ ಸಾಧ್ಯವೆಂದು ಹೂಗಾರರು ಮುಕ್ತವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಬಟ್ಟೆಯನ್ನು ಹೊಲೆಯುವ ವೃತ್ತಿಯನ್ನು ಸಾಂಪ್ರದಾಯಿಕವಾಗಿ ಮಾಡುತ್ತ ಬಂದವರಿಗೆ ಸಿಂಪಿಗರು, ಸಿಂಪಿಗ್ಯಾರು ಎಂದು ಕರೆಯುವುದು ರೂಢಿ. ಹಿಂದಿನ ಕಾಲದಲ್ಲಿ ಶಿವಸಿಂಪಿಗರು,

ಜನಿವಾರ ಸಿಂಪಿಗರು, ನಾಮದೇವ ಸಿಂಪಿಗರು ಈ ಸಿಂಪಿಗ ವೃತ್ತಿಯನ್ನು ಮಾಡಿಕೊಂಡು ಬರುತ್ತಿದ್ದರು. ಆದರೆ ಇಂದು ಎಲ್ಲಾ ಜನಾಂಗದವರೂ ಸಹ ಸಿಂಪಿಗ ವೃತ್ತಿಯನ್ನು ಅಳವಡಿಸಿಕೊಂಡಿದ್ದಾರೆ. ಇದು ಜೀವನದ ಒಂದು ಉತ್ತಮ ಮಾರ್ಗವೆಂದು ಎಲ್ಲಾ ಸಮುದಾಯದವರ ಭಾವನೆ ತಮ್ಮ ಜನಾಂಗದ ಕುಲಕಸುಬಿನ ಕುರಿತು ತಮ್ಮ ವಂಶಜರ ಐತಿಹ್ಯಗಳ ಕುರಿತು ಮತ್ತು ಇಂದು ಅವರು ಎದುರಿಸುವ ಸಮಸ್ಯೆಗಳನ್ನು ಕುರಿತು ಚರ್ಚಿಸಿದ್ದಾರೆ. ಸಿಂಪಿಗರ ಹಳೆವ ವಮಾನದವರು ಹಾಗೂ ಮಹಿಳೆಯರು ಇಂದೂ ಕೂಡ ಈ ವೃತ್ತಿಯನ್ನು ಮುಂದುವರೆಸಿದ್ದಾರೆ. ಆದರೆ ಯುವಜನಾಂಗದ ಈ ವೃತ್ತಿಯನ್ನು ಮುಂದುವರೆಸಲು ಇಚ್ಚಿಸುತ್ತಿಲ್ಲ ಅವರು ಉತ್ತಮ ಶಿಕ್ಷಣ ಪಡೆದು ಸರಕಾರಿ ಉದ್ಯೋಗಗಳಿಗೆ ಸೇರಲು ಇಚ್ಚೆ ವ್ಯಕ್ತಪಡಿಸುತ್ತಾರೆ. ಹಳೆಯ ಕಾಲದ ಸಿಂಪಿಗರು ಕೂಡ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ ಒಳ್ಳೆಯ ಕೆಲಸಕ್ಕೆ ಸೇರಲು ಪ್ರೋತ್ಸಾಹಿಸುತ್ತಿದ್ದಾರೆ. ಆದರೆ ಸಿಂಪಿಗ ಜನಾಂಗದ ಮಹಿಳೆಯರು ಕುಟುಂಬ ನಿರ್ವಹಣೆಗೆ ಸಿಂಪಿಗ ವೃತ್ತಿಯನ್ನು ಮುಂದುವರೆಸಿದ್ದಾರೆ. ಇಂದು ಎಲ್ಲ ಜಾತಿಗಳ ಜನ ಈ ವೃತ್ತಿ ಮಾಡುತ್ತಿದ್ದಾರೆ. ವೃತ್ತಿಯಲ್ಲಿ ಸಾಕಷ್ಟು ಪೈಪೋಟಿ ಇದೆ. ಕಸುಬಿನಲ್ಲಿ ಸಾಕಷ್ಟು ಸ್ಥಿತ್ಯಂತರವಾಗಿದೆ. ಹೊಸ ರೀತಿಯ ಹೋಲಿಗೆ ಯಂತ್ರಗಳು ಸರಳ ಸಾಧನ ಸಲಕರಣೆಗಳು ಮಾರುಕಟ್ಟೆಯಲ್ಲಿ ದೊರೆಯುತ್ತವೆ. ಹೊಸ ಹೊಸ ಡಿಜೈನ್, ಪ್ಯಾಷನ್ ಬಟ್ಟೆಗಳನ್ನು ಹೊಲೆದು ಕೊಡುವವರಿಗೆ ಬೇಡಿಕೆ ಹೆಚ್ಚಾಗಿದೆ. ಸಾಂಪ್ರದಾಯಿಕವಾಗಿ ವೃತ್ತಿ ನಡೆಸಿಕೊಂಡು ಬಂದವರು, ಕೇವಲ ಹಳೆಯ ಬಟ್ಟೆಗಳ ರಿಪೇರಿ ಕೆಲಸಗಳಿಗೆ ಸೀಮಿತವಾಗಿದೆಯೆಂದು ಹೇಳಬಹುದು.

ಇಂದು ನಗರಗಳಲ್ಲಿ ಸಿದ್ಧುಉಡುಪುಗಳನ್ನು ತಯಾರು ಮಾಡುವ ದೊಡ್ಡ ಉದ್ಯಮಗಳ ಪ್ರಾರಂಭವಾಗಿವೆ. ಇಂದು ಜೀನ್ಸ್ ಉದ್ಯಮ ಹೆಸರುವಾಸಿಯಾಗಿದೆ. ಸಿದ್ಧ ಉಡುಪುಗಳ ತಯಾರಿಕೆ ಸಾವಿರಾರು ಜನರಿಗೆ ಬದುಕನ್ನು ಜೀವನವನ್ನು ಒದಗಿಸಿಕೊಟ್ಟಿದೆ. ಟೈಲರಿಂಗ್ ತರಬೇತಿ ಸಂಸ್ಥೆ ಮಹಿಳೆಯರಿಗೆ ಹಾಗೂ ಪುರುಷರಿಗೆ ತರಬೇತಿ ನೀಡುತ್ತದೆ. ಇದರಲ್ಲಿ ಎಲ್ಲಾ ಜಾತಿ ಜನಾಂಗಗಳು ತರಬೇತಿ ಪಡೆದು ಈ ವೃತ್ತಿಯನ್ನು ಅನುಸರಿಸುತ್ತಿವೆ. ಇದು ಉತ್ತಮ ಆದಾಯದ ಗಳಿಕೆಗೆ ಮಾರ್ಗವಾಗಿದೆ ಎಂದು ವಕ್ತೃಗಳು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹೀಗಾಗಿ ಸಾಂಪ್ರದಾಯಿಕವಾಗಿ ವೃತ್ತಿಯನ್ನು ಅನುಸರಿಸಿಕೊಂಡು ಬಂದವರು ಪೈಪೋಟಿಯಿಂದಾಗಿ ವೃತ್ತಿ ಮುಂದುವರಿಸಲು ಸಾಧ್ಯವಾಗದೆ ಬೇರೆ ವೃತ್ತಿಗಳನ್ನು ಅನುಸರಿಸುತ್ತಿದ್ದಾರೆ. ಇಂದು ಮರಾಠಿಗರು, ಮುಸಲ್ಮಾನರು ಹೆಚ್ಚಾಗಿ ಈ ವೃತ್ತಿಯನ್ನು ಅನುಸರಿಸುತ್ತಿದ್ದಾರೆ. ಜನರ ಅಭಿರುಚಿ ಹಾಗೂ ಪ್ಯಾಷನ್‌ಗಳ ಪ್ರಭಾವ ಗ್ರಾಮೀಣ ಪ್ರದೇಶದ ಸಿಂಪಿಗರಿಗೆ ಸವಾಲಾಗಿ ಪರಿಗಣಿಸಿದೆ. ಹಳ್ಳಿಗರು ಇಂದು ಸಿದ್ಧ ಉಡುಪುಗಳ ಮೊರೆ ಹೋಗುತ್ತಿದ್ದಾರೆ. ಹೀಗಾಗಿ ಗ್ರಾಮೀಣ ಪ್ರದೇಶದಲ್ಲಿರುವ ಸಿಂಪಿಗರು ಅನಿವಾರ್ಯವಾಗಿ ವೃತ್ತಿ ಬದಲಾವಣೆ ಅಥವಾ ನಗರಗಳಿಗೆ ವಲಸೆ ಹೋಗಿ ಅಲ್ಲಿ ಸಿದ್ಧ ಉಡುಪು ತಯಾರಿಕಾ ಉದ್ಯಮಗಳಲ್ಲಿ ಕೂಲಿಕಾರರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮನೆಯಲ್ಲಿ ವಾಸವಾಗಿರುವ ಕುಟುಂಬದವರಿಗೆ, ಉದ್ಯಮದವರು ಬಟ್ಟೆಯನ್ನು ಪೂರೈಸಿ ಸಿದ್ಧ ಉಡುಪು ತಯಾರಿಸಲು ಹೇಳುತ್ತಾರೆ. ಸಿದ್ಧಪಡಿಸಿದ ಉಡುಪಿಗೆ ಇಂತಿಷ್ಟು ಹಣ ಎಂದು ನಿರ್ಧರಿಸುತ್ತಾರೆ. ಆದರೆ ಇದು ಬಹಳ ಕಡಿಮೆ. ಯಾವುದೇ ಸಾಮಾಜಿಕ

ಭದ್ರತಾ ಸೌಕರ್ಯಗಳನ್ನು ಸರಕಾರದ ನಿಯಮದಂತೆ ನೀಡದೆ ಸಿಂಪಿಗರನ್ನು ಶೋಷಣೆ ಮಾಡುತ್ತಿದ್ದಾರೆಂದು ವಕ್ತೃಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸಿದ್ಧ ಉಡುಪಿನ ಹೆಚ್ಚಿನ ಲಾಭ ಉದ್ಯಮಕ್ಕೆ ಸೇರುತ್ತದೆಯೇ ವಿನಃ ಸಿಂಪಿಗರಿಗಲ್ಲ, ಹೀಗಾಗಿ ನಗರದಲ್ಲಿ ವಾಸವಾಗಿರುವ ಸಿಂಪಿಗರ ಸ್ಥಿತಿ ದಾರುಣವಾಗಿದೆ.

ಬಳೆಗಾರರು ಗಾಜುಕರಗಿಸಿ ವಿವಿಧ ಗಾತ್ರದ, ವಿವಿಧ ಬಣ್ಣ ಗಳ ಬಳೆಗಳನ್ನು ತಯಾರಿಸುತ್ತಿದ್ದರು. ಈ ವೃತ್ತಿಯನ್ನು ವೀರಶೈವ ಜನಾಂಗದ ಬಳೆಗಾರರು ತಯಾರಿಸುತ್ತಿದ್ದರು. ತಯಾರಿಸಿದ ಬಳೆಗಳನ್ನು ಮಹಿಳೆಯರು ಹಾಗೂ ಪುರುಷರು ಹಳ್ಳಿ ಹಳ್ಳಿಗಳಿಗೆ ಮನೆ ಮನೆಗಳಿಗೆ ತಿರುಗಿ ಬಳೆಮಾರಿ ಜೀವನ ಸಾಗಿಸುತ್ತಿದ್ದರು. ಹಬ್ಬ ಹಾಗೂ ಜಾತ್ರೆಗಳ ಸಂದರ್ಭದಲ್ಲಿ ಬಳೆಗಾರರಿಗೆ ಬಳೆಯ ಉದ್ಯೋಗ ಬೇರೆಯ ದಿನಗಳಲ್ಲಿ ಬಳೆಮಾರುವ ಪ್ರಮಾಣ ಕಡಿಮೆ ಈ ಜನಾಂಗ ಬೆಳಗಾವಿಯ ಕಿತ್ತೂರು, ಮುರುಗೊಡು ಹಾಗೂ ಬೆಂಗಳೂರಿನಿಂದ ಬಳೆ ತರಿಸಿ ಮಾರಾಟ ಮಾಡುತ್ತಿದ್ದಾರೆ. ಹಳ್ಳಿಗಳನ್ನು ಸುತ್ತಿ ಬಳೆಮಾರುವ ಪ್ರಮಾಣ ಇಂದು ಕಡಿಮೆಯಾಗಿದೆ. ದೊಡ್ಡ ಊರುಗಳಲ್ಲಿ ನಗರಗಳಲ್ಲಿ ಬಳೆ ಅಂಗಡಿಗಳನ್ನು ತೆರೆದು ತಮ್ಮ ಕುಲಕಸುಬನ್ನು ಮುಂದುವರಿಸುತ್ತಿದ್ದಾರೆ. ಬಳೆಗಾರ ಕುಟುಂಬದ ನೆಲೆಗಳು ಮುಖ್ಯವಾಗಿ ಹಡಗಲಿ, ಕೂಡ್ಲಗಿ, ಚಿತ್ರದುರ್ಗ, ಖಾನಹೊಸಹಳ್ಳಿ, ಸಂಡೂರು, ಹೊಸಪೇಟೆ, ಕಮಲಾಪುರ, ಕಂಪ್ಲಿ, ಕುಡುತಿನಿ, ಕುರಗೊಡು, ಶಿರಗುಪ್ಪ ಹಾಗೂ ಬಳ್ಳಾರಿ ನಗರದಲ್ಲಿ ಕಾಣಬಹುದು.ಈ ಕಸುಬು ಇಂದು ನಗರ ಕೇಂದ್ರಿತವಾಗಿದೆ. ಈ ಜನಾಂಗ ಬಳೆ ಅಂಗಡಿಯ ಜೊತೆಗೆ, ಸ್ತ್ರೀಯರಿಗೆ ಬೇಕಾದ ವಿವಿಧ ಆಕರ್ಷಕ, ಪ್ಯಾಷನ್ ಭರಿತ ವಸ್ತುಗಳನ್ನು ಮಾರಾಟ ಮಾಡುತ್ತಿದ್ದಾರೆ. ಹಳ್ಳಿಗಳಲ್ಲಿರುವ ಈ ಜನಾಂಗದವರು ವ್ಯವಸಾಯ ಹಾಗೂ ಇತರೆ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಸುಣ್ಣ ತಯಾರಿಸಿ ಮಾರುವವರು ಸುಣ್ಣಗಾರರು ಸುಣ್ಣ ತಯಾರಿಸುವುದು ಈ ಜನಾಂಗದ ಪ್ರಮುಖ ಕಸುಬು ಹಳ್ಳಿಯ ಜನ ಹಬ್ಬ ಹರಿದಿನ, ಜಾತ್ರೆ, ಉಚ್ಚಾಯಗಳಲ್ಲಿ ತಮ್ಮ ಮನೆಗಳನ್ನು ಸ್ವಚ್ಚಗೊಳಿಸಿ ಸುಣ್ಣ ಬಳಸುತ್ತಾರೆ. ಹಳ್ಳಿಗರಿಗೆ ಸುಣ್ಣಗಾರರು ಕಾಳು ಕಡಿ ಅಥವಾ ಹಣಕ್ಕೆ ಸುಣ್ಣ ಮಾರಾಟ ಮಾಡುತ್ತಾರೆ. ಕತ್ತೆಗಳ ಮೇಲೆ ಸುಣ್ಣದ ಚೀಲಗಳನ್ನು ಊರಿಂದ ಊರಿಗೆ ಸಾಗಿಸುತ್ತಾರೆ. ಕೆಲವು ಸುಣ್ಣಗಾರ ಕುಟುಂಬಗಳು ಮನೆ ಮಠ ದೇವಸ್ಥಾನಗಳಿಗೆ ಸುಣ್ಣ ಬಳಿಯುವ ಕಾಯಕ ಮಾಡುತ್ತಾರೆ. ಇವರ ಜೀವನ ಅತ್ಯಂತ ದುಸ್ತರವಾಗಿದೆ. ಸುಣ್ಣ ಸುಡಲು ಕಚ್ಚಾ ವಸ್ತು ಹಾಗೂ ಕಟ್ಟಿಗೆ ಸಾಕಷ್ಟು ಪ್ರಮಾಣದಲ್ಲಿ ದೊರೆಯುವುದಿಲ್ಲ. ಮಳೆಗಾಲದಲ್ಲಿ ಈ ವೃತ್ತಿದಾರರಿಗೆ ಕೆಲಸ ಇರುವುದಿಲ್ಲ. ಆಧುನಿಕ ಬಣ್ಣ ತಯಾರಿಕಾ ಸಂಸ್ಥೆಗಳು ವಿವಿಧ ನಮೂನೆಯ, ಬಣ್ಣದ ಸುಣ್ಣವನ್ನು ತಯಾರಿಸಿ ಮಾರುಕಟ್ಟೆಗೆ ಪೂರೈಸುತ್ತಿವೆ. ಇದರಿಂದಾಗಿ ಸುಣ್ಣಗಾರರ ಸುಣ್ಣಕ್ಕೆ ಬೇಡಿಕೆ ಇಲ್ಲ ಸುಣ್ಣ ಸುಡುವ ಗುಮ್ಮಿಗಳನ್ನು ನೋಡಿಕೊಳ್ಳುವುದು ಸಹ ಕಷ್ಟ ಸಾಧ್ಯವಾಗಿವೆ. ಎಂಬುದು ಸುಣ್ಣಗಾರರ ಅಭಿಮತ.

ಇತರೆ ಕಸುಬುದಾರರು ಕಸುಬುಗಳು

ಗ್ರಾಮೀಣ ಪ್ರದೇಶಗಳಲ್ಲಿ ಹಲವಾರು ರೀತಿಯ ಕುಲಕಸುಬುದಾರರನ್ನು ಕಾಣಬಹುದು.

ಗೌಳಿಗ ವೃತ್ತಿ, ಕೋಲಕಾರಿಕೆ, ದೋಶಿಗಾರಿಕೆ, ಪಿಂಜಾರಿಕೆ, ಉಪ್ಪಾರಿಕೆ, ಕುರುಬಗಾರಿಕೆ, ಪೂಜಾರಿಕೆ ಜೋತಿಷ್ಯ, ಪೌರೋಹಿತ್ಯ, ವಾಲಿಕಾರಿಕೆ, ಲಾಳಗಾರಿಕೆ, ತಳವಾರಿಕೆ ಮುಂತಾದ ಕುಲಕಸುಬುಗಳನ್ನು ನಿರ್ವಹಿಸಿಕೊಂಡು ಜೀವಿಸುತ್ತಿರುವ ಸಮುದಾಯಗಳು ಕಡಿಮೆ ಸಂಖ್ಯೆಯಲ್ಲಿವೆ. ಈ ಕಸುಬುಗಳೆಲ್ಲವೂ ಸ್ಥತ್ಯಂತರಗೊಂಡಿವೆ. ಈ ಕಸುಬುದಾರರು ತಮ್ಮ ಮೂಲ ವೃತ್ತಿಗಳ ಜೊತೆಗೆ ಇತರೆ ವೃತ್ತಿಗಳಲ್ಲಿಯೂ ಕೆಲಸ ಮಾಡುತ್ತಿದ್ದಾರೆ. ಕೆಳವರ್ಗದ ಈ ಜನಾಂಗ ಹೆಚ್ಚಾಗಿ ಕೂಲಿ ಕೆಲಸಗಳಿಗೆ ಹೋಗುತ್ತಿದ್ದಾರೆ. ಹಂಪಿ ಪರಿಸರದಲ್ಲಿ ಗಣಿಗಾರಿಕೆ ಹೆಚ್ಚಾಗಿರುವುದರಿಂದ ಕಬ್ಬಿಣ ಮ್ಯಾಂಗನೀಸ್ ಅದಿರು ಗಣಿಗಳಲ್ಲಿ ಹಾಗೂ ಕೃಷಿ ಚಟುವಟಿಕೆಗಳಲ್ಲಿ ಕೂಲಿ ಕಾರ್ಮಿಕರಾಗಿದ್ದಾರೆ. ಗ್ರಾಮೀಣ ಜೀವನದಲ್ಲಿ ಕುಲಕಸುಬುಗಳು ಗ್ರಾಮೀಣರು ಒಂದುಗೂಡಿ ಬಾಳುವುದಕ್ಕೆ ತುಂಬಾ ನೆರವಾಗಿದೆ. ಆದುದರಿಂದ ಇವು ಸಾಮಾಜಿಕ ವ್ಯವಸ್ಥೆಯಲ್ಲಿ ಮಾನ್ಯತೆ ಪಡೆದಿದೆ. ಆದರೆ ಇಂದಿನ ಬದುಕಿನ ಸ್ಥಿತ್ಯಂತರದಲ್ಲಿ ನಶಿಸಿ ಹೋಗುವ ಎಷ್ಟೋ ಸಂಗತಿಗಳಲ್ಲಿ ಕುಲಕಸುಬುಗಳೂ ಸೇರಿವೆ. ಕೈಗಾರೀಕರಣ, ಯಂತ್ರಗಳ ಆಗಮನ ಜನರ ರುಚಿ ಅಭಿರುಚಿಗಳಲ್ಲಿ ಪ್ಯಾಷನ್‌ಗಳಲ್ಲಿ ಬದಲಾವಣೆ ಕುಲಕಸುಬುಗಳ ವಿನಾಶಕ್ಕೆ ಕಾರಣವಾಗಿವೆ. ಲಕ್ಷಾಂತರ ಕುಟುಂಬದ ಉಪಜೀವನ ವೃತ್ತಿಗಳಾದ ಕುಲಕಸುಬುಗಳು ಕಚ್ಚಾವಸ್ತುಗಳ ಕೊರತೆ, ಹಣಕಾಸಿನ ಕೊರತೆ, ಸೂಕ್ತ ಯಂತ್ರಗಳ ಕೊರತೆ, ಮಾರುಕಟ್ಟೆಯ ಕೊರತೆಯಿಂದಾಗಿ ವಿನಾಶದ ಅಂಚಿನಲ್ಲಿವೆ. ಸರಕಾರದ ಹಲವಾರು ಸುಧಾರಣಾ ಕ್ರಮಗಳು ಜಾರಿಗೆ ಬಂದರೂ ಇವರ ಬದುಕು ಹಸನಾಗಿಲ್ಲ.

ಭಾರತದಲ್ಲಿ ಕುಲಕಸುಬುಗಳಾದ ಕಮ್ಮಾರಿಕೆ, ಕುಂಬಾರಿಕೆ, ಪತ್ತಾರಿಕೆ, ಬಡಗಿತನ, ಶಿಲ್ಪಗಾರಿಕೆ, ನೇಕಾರಿಕೆ, ಮೇದಾರಿಕೆ, ಕಲ್ಲುಕುಟಿಗ ವೃತ್ತಿ, ಬಳೆಗಾರಿಕೆ, ಗಾಣಗಾರಿಕೆ, ಸುಣ್ಣಗಾರಿಕೆ, ಚಮ್ಮಾರಿಕೆ, ಹೂಗಾರಿಕೆ, ವೈದ್ಯಾಗಾರಿಕೆ, ಮಡಿವಾಳ ವೃತ್ತಿ, ಕ್ಷೌರಿಕ ವೃತ್ತಿ ಮುಂತಾದುವುಗಳ ಮೇಲೆ ಬೇರೆ ಬೇರೆ ರೀತಿಯ ಪರಿಣಾಮಗಳನ್ನು ಬೀರಿದೆ. ಕೈಗಾರೀಕರಣ ಪ್ರಕೃತಿ ಸಂಪತ್ತಿನ ಉತ್ತಮ ಬಳಕೆಯಿಂದ ಜನರ ವಿವಿಧ ಅವಶ್ಯಕತೆಗಳನ್ನು ವೇಗವಾಗಿ ಉತ್ಪಾದಿಸಿ, ಪೂರೈಸುವ ಕೆಲಸ ಮಾಡುತ್ತಿವೆ. ವಿಜಯನಗರ ಕಾಲದಿಂದ ನಂತರದಲ್ಲೂ ಈ ಕಸುಬುಗಳು ಸ್ಥಿತ್ಯಂತರ ಹೊಂದಿರುವುದು ಕೈಗಾರೀಕರಣ, ಜಾಗತೀಕರಣ, ದೇಶದ ಅಭಿವೃದ್ಧಿಗೆ ಕಾರಣವಾಗುತ್ತಿದೆ. ಈ ತ್ವರಿತ ಅಭಿವೃದ್ಧಿ ದೇಶದ ಆದಾಯ, ಉದ್ಯೋಗ, ಉತ್ಪನ್ನಗಳನ್ನು ಹೆಚ್ಚಿಸುವುದಕ್ಕೆ ನೆರವಾಗಿರುವುದು ನಿಜ. ಗ್ರಾಹಕರ ಜೀವನಕ್ಕೆ ಬೇಕಾದ ವೈವಿಧ್ಯಮಯವಾದ ಸುಖದಾಯಕ ಮತ್ತು ಐಷಾರಾಮಿ ಸರಕುಗಳ ಪೂರೈಕೆ ಹೆಚ್ಚಾಗಿ ಅವುಗಳು ಕಡಿಮೆ ಬೆಲೆಗೆ ಲಭ್ಯವಾಗುತ್ತಿರುವುದು ಸಂತೋಷದ ಸಂಗತಿ ಈಗ ಕುಲಕಸುಬುದಾರರ ವೃತ್ತಿಗಳ ಬದಲಾವಣೆಗೂ ಕಾರಣವಾಗಿದೆ. ನೇಕಾರರು ಕೈಮಗ್ಗಗಳಲ್ಲಿ ಬಟ್ಟೆಗಳನ್ನು ನೇಯ್ಗೆ ಮಾಡುವುದನ್ನು ಬಿಟ್ಟುಕೊಟ್ಟು ಯಾಂತ್ರಿಕ ಮಗ್ಗಗಳಲ್ಲಿ ವಿವಿಧ ಬಣ್ಣದ, ವಿವಿಧ ಗುಣಮಟ್ಟದ ಹಾಗೂ ಬಾಳಿಕೆ ಬರುವಂತೆ ಗ್ರಾಹಕರ ಬೇಡಿಕೆಗೆ ತಕ್ಕಂತೆ ನೇಯ್ದು ಕೊಡುವಷ್ಟು ಬದಲಾವಣೆ ಹೊಂದುತ್ತಿದ್ದಾರೆ. ಸಾಂಪ್ರಾದಾಯಿಕ ರೇಷ್ಮೆ ಸೀರೆಗಳ ಮತ್ತು ವಸ್ತ್ರಗಳ ನೇಯ್ಗೆ ವಿಧಾನಗಳಲ್ಲಿ ಬದಲಾವಣೆ ಮಾಡಿಕೊಂಡಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಬಟ್ಟೆ ಉದ್ಯಮಗಳು ನೇರವಾಗಿ ಸಿದ್ಧಉಡುಪುಗಳನ್ನು ತಯಾರಿಸಿ ಷೋರೂಂಗಳಲ್ಲಿ

ಆಕರ್ಷಕವಾದ ಬೆಲೆಗಳಲ್ಲಿ ಮಾರಾಟ ಮಾಡುತ್ತಿರುವುದು ನೇಯ್ಗೆದಾರರ ಬಟ್ಟೆಗಳ ಬೇಡಿಕೆ ಕಡಿಮೆಯಾಗುತ್ತಿರುವುದಕ್ಕೆ ಕಾರಣ. ಸರಕಾರ ನೇಕಾರಿಕೆಗೆ ಧನಸಹಾಯ ಮತ್ತು ಮಾರುಕಟ್ಟೆ ಸೌಲಭ್ಯಗಳನ್ನು ನೀಡುತ್ತಿದ್ದರೂ ಅವರ ಆರ್ಥಿಕ ಬದುಕಲ್ಲಿ ಉತ್ತಮವಾಗಿಲ್ಲದಿರುವುದು ಕಂಡುಬರುತ್ತದೆ.

ಕುಂಬಾರಿಕೆ ಸಾಂಪ್ರದಾಯಿಕ ಕಸುಬು ಕಸುಬುದಾರರು ತಯಾರಿಸುವ ಮಣ್ಣಿನ ಮಡಿಕೆ ಮತ್ತು ಕುಡಿಕೆಗಳ ಬಳಕೆ ಇಂದು ಕಡಿಮೆಯಾಗುತ್ತಿದೆ. ಈ ಕಸುಬಿಗೆ ಸ್ಟೀಲ್, ತಾಮ್ರ, ಹಿತ್ತಾಳೆ, ಅಲ್ಯೂಮಿನಿಯಂ ಹಾಗೂ ಪ್ಲಾಸ್ಟಿಕ್ ಸರಕುಗಳು ಬಾರಿ ಪೈಪೋಟಿ ನೀಡಿ ಕುಂಬಾರಿಕೆ ಕಸುಬು ಮೂಲೆ ಗುಂಪಾಗಲು ಕಾರಣವಾಗಿದೆ. ಕುಂಬಾರಿಕೆಯಲ್ಲಿ ಆಧುನಿಕತೆ ಕಾಲಿರಿಸಿದೆ. ಸಾಂಪ್ರಾದಾಯಿಕ ಚಕ್ರ ಹಾಗೂ ಆವಿಗೆಗಳಿಗೆ ಬದಲಾಗಿ ಯಾಂತ್ರಿಕೃತ ಚಕ್ರ ಆಧುನಿಕ ಆವಿಗೆ ತಂತ್ರಜ್ಞಾನ ಮಾರುಕಟ್ಟೆಯಲ್ಲಿ ಮಣ್ಣಿನ ಪದಾರ್ಥಗಳ ತಯಾರಿಕೆಯಲ್ಲಿ ನೆರವಾಗುತ್ತದೆ. ಈ ಆಧುನಿಕತೆ ಇಂದು ಕುಂಬಾರಿಕೆಯಲ್ಲಿ ಕಾಲಿಟ್ಟು ಕೆಲವು ತರಬೇತಿ ಹೊಂದಿದ ಕುಂಬಾರಿಕೆ ಮಾತ್ರ ತುಂಬಾ ಅನುಕೂಲವಾಗಿದೆ. ಅವರು ತಯಾರಿಸುವ ವೈವಿಧ್ಯಮಯವಾದ ಸರಕುಗಳಿಗೆ ನಗರ ಪ್ರದೇಶಗಳಲ್ಲಿ ತುಂಬಾ ಬೇಡಿಕೆ ಇರುವುದು ಕಂಡುಬರುತ್ತದೆ. ಆಧುನಿಕತೆ ಇಂತಹವರ ಜೀವನ ಉತ್ತಮವಾಗಲು ನೆರವಾಗಿದೆ. ಆದರೆ ಸಾಂಪ್ರದಾಯಿಕ ಕುಂಬಾರರ ಸ್ಥಿತಿ ತುಂಬಾ ಶೋಚನೀಯ; ಕಾರಣ ಅವರಿಗೆ ಯಂತ್ರಚಾಲಿತ ಚಕ್ರ ಹಾಗೂ ವಿದ್ಯುತ್ ಆವಿಗೆಗಳನ್ನು ಉಪಯೋಗಿಸಿ ಸರಕುಗಳನ್ನು ತಯಾರಿಸುವ ವಿಧಾನ ತಿಳಿದಿಲ್ಲ. ಅವರ ಹೇಳಿಕೆ ಪ್ರಕಾರ ಯಂತ್ರಗಳು ಅವರ ಕಸುಬಿಗೆ ಹೊಂದಾಣಿಕೆಯಾಗುತ್ತಿಲ್ಲ. ಇವರ ನಿಧಾನಗತಿಯ ತಯಾರಿಕೆ, ಯಂತ್ರಗಳ ಜೊತೆ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಹಾಗೂ ಆಧುನಿಕ ಯಂತ್ರ ಸಾಧನಗಳನ್ನು ಕೊಳ್ಳುವ ಆರ್ಥಿಕ ಶಕ್ತಿ ಅವರಿಗಿಲ್ಲ. ಅವರ ಸಾಂಪ್ರಾದಾಯಿಕ ತಯಾರಿಕೆ, ಮಾರಾಟದ ವಿಧಾನಗಳು ಕುಂಬಾರರ ಜೀವನ ಉತ್ತಮವಾಗಲು ಸಹಕಾರಿಯಾಗದಿರುವುದು ಕಂಡುಬರುತ್ತದೆ. ಹೀಗೆ ಪ್ರತಿಯೊಂದು ಪ್ರಾಚೀನ ಕಸುಬುಗಳು ಅಳಿವಿನ ಅಂಚಿನಲ್ಲಿವೆ. ಅವುಗಳಲ್ಲಿಯ ತಂತ್ರಜ್ಞಾನದ ಕುರಿತು ಇಂದು ವಿಶ್ವವಿದ್ಯಾಲಯಗಳಲ್ಲಿ ಮಾಡುವ ಸಂಶೋಧನಾ ಕೃತಿಗಳಲ್ಲಿ ಮಾತ್ರ ಕಾಣಬಹುದು. ಆದರೆ ಆ ಕಸುಬುದಾರರು ಇಂದು ಸಂಪೂರ್ಣವಾಗಿ ಕಣ್ಮರೆಯಾಗಿದ್ದಾರೆ.

ಟಿಪ್ಪಣಿಗಳು

೧. ರೆಡ್ಡಿ ಪಿ.ಎನ್., ಹೆಚ್.ಆರ್., ಅಪ್ಪಣ, ಮಾರುಕಟ್ಟೆ ಕಾರ್ಯವಿಧಾನ, ೧೯೮೭, ಪು-೩.

೨. ನಾಗಪ್ಪ ಬಸಲಿಂಗ ಸಂಗಳ, ಪಿಹೆಚ್.ಡಿ ಪ್ರಬಂಧ ಭೋವಿ ಸಮುದಾಯದ ಸಾಮಾಜಿಕ ಅಧ್ಯಯನ, ೨೦೧೧, ಪು-೧೬೭

೩. ಮೊಗಳ್ಳಿ ಗಣೇಶ್, ೧೯೯೯, ದಲಿತರು ಮತ್ತು ಜಾಗತೀಕರಣ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು-೧೨.

೪. ಅದೇ, ಪು-೧೪.

೫. ಪ್ರಭಾಕರ್, ಎ.ಎಸ್., ೨೦೦೦, ಬುಡಕಟ್ಟು , ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೩೬.

೬. ಆರ್.ಬಿ., ಕುಮಾರ್, ೨೦೦೪, ಪು-೧೬೭.

೭ ಜಾನಪದ ಸಾಹಿತ್ಯ ದರ್ಶನ, ಭಾಗ-೭, ಪು-೧೭೮.

೮. ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ, ವಿಶ್ವಕೋಶ-೨, ಪು-೩೫೬.

೯. ಜಾನಪದ ಸಾಹಿತ್ಯ ದರ್ಶನ, ಭಾಗ-೭, ಪು೧೭೮.

೧೦. ರಾಬಟ್ ಸಿವೆಲ್, ಫರಗಟನ್ ಎಂಪಾಯಿರ್, ಪು-೨೬೬-೬೭ ಮತ್ತು ೩೧೩.

ಅಧ್ಯಾಯ–೬

ಸಮಾರೋಪ

ವಿಜಯನಗರ ಕಾಲದ ಕುಲಕಸುಬುಗಳು ಎಂಬ ಮಹಾಪ್ರಬಂಧವು ವಿಜಯನಗರ ಕಾಲಘಟ್ಟದ ಸಮಾಜದಲ್ಲಿ ಯಾವ ರೀತಿಯ ಕಸುಬುಗಳನ್ನು ಅಳವಡಿಸಿಕೊಂಡಿದ್ದರು, ಆ ಕಸುಬುಗಳು ಅಂದಿನ ಜನಸಾಮಾನ್ಯರಾದಿಯಾಗಿ ಅರಸ, ಮಾಂಡಲಿಕ, ಅಧಿಕಾರಿ ವರ್ಗಗಳಿಗೆ ಹಾಗೂ ಸಮಾಜದ ಶ್ರೇಯೋಭಿವೃದ್ಧಿಗೆ ಹೇಗೆ ಕಾರ್ಯ ನಿರ್ವಹಿಸಿವೆ ಎನ್ನುವುದರ ಜೊತೆಗೆ ಅವುಗಳ ನಂಬಿಕೆ, ಅನುಚೌನವಾಗಿ ಅನುಸರಿಸಿಕೊಂಡು ಬಂದ ಅವುಗಳ ಆಚರಣೆ, ಸಂಪ್ರದಾಯ ಪಾರಂಪರಿಕ ಜ್ಞಾನ, ಹಾಗೆಯೇ ಅವುಗಳ ಸ್ಥಿತ್ಯಂತರಗಳಿಂದ ಸಮಾಜದ ಮೇಲಾದ ಪ್ರಭಾವ ಮತ್ತು ಪರಿಣಾಮಗಳು ಗಮನಾರ್ಹ ಸಂಗತಿಗಳಾಗಿವೆ.

ಕುಲಕಸುಬು ಎಂದರೆ ಮನೆತನದ ಉದ್ಯೋಗ, ಪರಂಪರಾಗತ ವೃತ್ತಿ, ಜಾತಿ ವೃತ್ತಿ ಎಂದೆಲ್ಲಾ ಅರ್ಥೈಸಲಾಗಿದೆ. ಕೈ+ಕಸುಬು, ಕಲೆಗಾರಿಕೆ, ವೃತ್ತಿಕಲೆಗಾರಿಕೆ, ಗುಡಿಕೈಗಾರಿಕೆ ಎಂಬ ಇತರ ಪ್ರಯೋಗಗಳು ಈ ಕಸುಬುಗಳ ವಿವಿಧಾರ್ಥಗಳನ್ನು ಬಿಂಬಿಸುತ್ತವೆ. ವಿಜಯನಗರ ಪೂರ್ವ, ವಿಜಯನಗರ ಮತ್ತು ವಿಜಯನಗರೊತ್ತರ ಅವಧಿಯಿಂದಲೂ ಗ್ರಾಮೀಣ ಮತ್ತು ನಗರ ಪ್ರದೇಶದ ಜನರು ತಮ್ಮ ಹೊಟ್ಟೆಹೊರೆಯುವುದಕ್ಕಾಗಿ ತಲೆತಲಾಂತರದಿಂದ ಕೈಗೊಂಡು ಬಂದ ಅನುವಂಶಿಕ ವೃತ್ತಿಗಳೇ ಕುಲಕಸುಬುಗಳಾಗಿವೆ.

ಕುಲಕಸುಬುಗಳಿಗೆ ತನ್ನದೇ ಆದ ಪರಂಪರೆಯಿದೆ, ಇವುಗಳಿಗೆ ಯಾವುದೇ ನಿರ್ದಿಷ್ಟ ತರಬೇತಿಯಿರುವುದಿಲ್ಲ; ಹೆಚ್ಚಾಗಿ ಕೃಷಿಯಾಶ್ರಿತವಾಗಿವೆ. ವಿಜಯನಗರ ಕಾಲದಲ್ಲಿ ಇವು ಕೃಷಿಯ ಜೊತೆಗೆ ಅರಸರಿಂದ ಪೋಷಣೆಗೆ ಒಳಪಟ್ಟಿದ್ದವು. ಅವರ ಆಶ್ರಯ ತಪ್ಪಿದಾಗ ನೆಲಕಚ್ಚಿದವು. ಕಸುಬುಗಳು ಪ್ರಮುಖವಾಗಿ ಮೂಲಭೂತ ಜೀವನಾಶ್ಯಕತೆಗಳನ್ನು ಪೂರೈಸುವುದಕ್ಕೋಸ್ಕರವಾಗಿಯೇ ಉದಯವಾಗಿರುವುದು ಗಮನಾರ್ಹ.

ವಿಜಯನಗರ ಕಾಲದ ಅನೇಕ ಶಾಸನ, ಶಿಲ್ಪ, ಸಾಹಿತ್ಯ, ಉತ್ಖನನ ವರದಿಗಳಲ್ಲಿ ಅಂದಿನ ಕುಲಕಸುಬುದಾರರ ಮಾಹಿತಿ ಜೊತೆಗೆ ಅವರು ಕೊಟ್ಟ ದಾನದಲ್ಲಿನ ಅಂಶಗಳಲ್ಲಿ ಕಸುಬುದಾರರನ್ನು ಗುರುತಿಸಬಹುದು, ಅಂದು ದೇವರು ದೇವಾಲಯಕ್ಕೆ ದವಸ ಧಾನ್ಯ, ಪೂಜೆಗೆಂದು ವಸ್ತ್ರ, ವಿವಿಧ ಲೋಹದ ವಸ್ತುಗಳನ್ನು ದಾನ ಮಾಡುತ್ತಿದ್ದರು. ಇವು ಅಂದಿನ ಕಸುಬು ಮತ್ತು ಕಸುಬುದಾರರನ್ನು ಗುರುತಿಸುವಲ್ಲಿ ಪ್ರಮುಖ ಆಕರಗಳಾಗಿವೆ.

ಫಲಿತಗಳು

ವಿಜಯನಗರ ಸಾಮ್ರಾಜ್ಯವು ಅನೇಕ ಜ್ಞಾನಶಿಸ್ತುಗಳ ನೆಲೆವೀಡೆಂದು ಪ್ರಖ್ಯಾತವಾಗಿದ್ದಿತು. ಅಲ್ಲಿ ಕಮ್ಮಾರ, ಚಮ್ಮಾರ, ಕುಂಬಾರ, ಅಕ್ಕಸಾಲಿಗ, ನೇಕಾರ, ಬಡಗಿ, ಬಳೆಗಾರ, ಕಲ್ಲುಕುಟಿಗ ಮುಂತಾದ ಕಸುಬುದಾರರು ತಮ್ಮದೇ ಆದ ದೇಶೀಯ ತಂತ್ರಜ್ಞಾನಗಳನ್ನು ಬಳಸಿ ವಸ್ತುಗಳನ್ನು ತಯಾರಿಸಿ ಸಾಮ್ರಾಜ್ಯದ ಕೀರ್ತಿಯನ್ನು ದೇಶ ವಿದೇಶಗಳಲ್ಲಿ ಹರಡುವಂತೆ ಮಾಡಿದರು.

ಶಿಲ್ಪಿಗಳು ಕುಶಲಮತಿಗಳಾಗಿದ್ದು, ಅವರ ಕೈಚಳಕದಿಂದ ಅಂದಿನ ದೇವಸ್ಥಾನ ಅದರ ಮೇಲಿನ ಶಿಲ್ಪ, ಕಂಬಗಳ ಮೇಲಿನ ಶಿಲ್ಪ, ಉಗ್ರನರಸಿಂಹ, ಕಡಲೇಕಾಳು ಗಣಪ, ಸಾಸಿವೆಕಾಳು ಗಣಪ, ಎದುರುಬಸವನ ಶಿಲ್ಪ, ವಿಜಯವಿಠಲ ದೇವಾಲಯದ ಸಂಗೀತ ಕಂಬಗಳು, ಕಲ್ಲಿನರಥ, ಕೋಟೆ–ಕೊತ್ತಲ, ಅರವಟ್ಟಿಗೆ, ಕೆರೆ–ಹೀಗೆ ದಕ್ಷಿಣ ಭಾರತದಾದ್ಯಂತ ಅವರ ಕಲೆ ಮತ್ತು ವಾಸ್ತುಶಿಲ್ಪ ಮೈದಳೆಯಲು ಸಾಧ್ಯವಾಯಿತು.

ಅಂದು ಪ್ರತಿಯೊಂದು ಕಸುಬುದಾರರು ತಮ್ಮದೇ ಆದ ತಂತ್ರಜ್ಞಾನದ ಮೂಲಕ ವಸ್ತುಗಳನ್ನು ಉತ್ಪಾದಿಸುತ್ತಿದ್ದರು. ಕುಂಬಾರನ ಮಡಕೆ, ಕಂಚುಗಾರನ ನೈಪುಣ್ಯತೆ, ಕಬ್ಬಿಣ ವಸ್ತುಗಳ ಗಟ್ಟಿತನ, ಅಕ್ಕಸಾಲಿಗನ ಸೂಕ್ಷ್ಮತೆ, ಬಡಗಿಯ ಅಗತ್ಯವಾದ ಮರದ ವಸ್ತುಗಳು, ಚಮ್ಮಾರನ ಚರ್ಮದ ವಸ್ತುಗಳು ಆಯಾ ಕಾಲ, ಪರಿಸರ, ಅಭಿರುಚಿ ಮತ್ತು ಅಗತ್ಯಕ್ಕೆ ಅನುಗುಣವಾಗಿ ನಿರ್ಮಾಣವಾಗಿದ್ದುದು ಗಮನೀಯ ಸಂಗತಿ.

ಕಸುಬು ಮಂಡಳಿಗಳನ್ನು ಕುರಿತು ಆಮುಕ್ತಮಾಲ್ಯದವು ರೇಷ್ಮೆ, ಹತ್ತಿ, ಅಕ್ಕಸಾಲಿಗ, ಚೀಲ ತಯಾರಿಸುವ, ಬುಟ್ಟಿ ಹೆಣೆಯುವ ಸಂಘಗಳನ್ನು ಉಲ್ಲೇಖಿಸುತ್ತದೆ. ಅನೇಕ ಶಾಸನಗಳು ಪಾಂಚಾಲ ಎಂಬ ಸಂಘಗಳನ್ನು ಹೇಳುತ್ತದೆ. ಅಂದು ಕಸುಬುದಾರರು ತಮ್ಮ ಕಸುಬಿಗೆ ಅನುಗುಣವಾಗಿ ತೆರಿಗೆ ಸಲ್ಲಿಸುತ್ತಿದ್ದರು. ನೇಕಾರನ ತೆರಿಗೆಯನ್ನು ಮಗ್ಗರಿ ಎಂದು, ಗಾಣಿಗನ ತೆರಿಗೆಯನ್ನು ಗಾಣುಗರಿ ಎಂದು ಹೀಗೆ ಚೀನಿವಾರ, ಕುಂಬಾರ, ಕಮ್ಮಾರ ಇವರೆಲ್ಲರೂ ಸರಕಾರಕ್ಕೆ ತೆರಿಗೆ ಕೊಡುತ್ತಿದ್ದರು. ಇದರಿಂದ ವಿಜಯನಗರ ಸಾಮ್ರಾಜ್ಯ ಆರ್ಥಿಕವಾಗಿ, ಸಾಮಾಜಿಕವಾಗಿ ವಿಶ್ವಮಾನ್ಯತೆ ಪಡೆದಿತ್ತು.

ವಿಜಯನಗರ ಸಾಮ್ರಾಜ್ಯದ ಆಡಳಿತದ ಮೂಲಘಟಕ ಗ್ರಾಮ. ಪ್ರತಿಯೊಂದು ಗ್ರಾಮಕ್ಕೆ ಗೌಡ, ಶಾನುಭೋಗ, ಬಡಗಿ, ಕಮ್ಮಾರ, ತಳವಾರ, ಬೇಗಾರ, ಜೋಯಿಸ, ಕುಂಬಾರ, ಅಗಸ, ನಾವಿಂದ, ನಿರಗಂಟಿ, ಅಕ್ಕಸಾಲಿಗಳನ್ನು ನೇಮಿಸುತ್ತಿದ್ದರು. ಇದನ್ನು ಅಂದು ಆಯಗಾರ ಪದ್ಧತಿ ಎಂದು ಕರೆಯಲಾಗುತ್ತಿತ್ತು. ಈ ಎಲ್ಲಾ ಕಸುಬುದಾರರು ತಮ್ಮ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಿ ಅಂದಿನ ಸಾಮಾಜಿಕ ಮತ್ತು ಆರ್ಥಿಕತೆಯನ್ನು ಸುಭದ್ರಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದುದು ನೈಜಸಂಗತಿ.

ಅಂದು ನಗರ ಕೇಂದ್ರ ಮತ್ತು ನಗರ ಜೀವನದ ಪರಿಸ್ಥಿತಿಯು ಕಸುಬುದಾರರ ಮೇಲೆ ಬಹುವಾಗಿ ಅವಲಂಬಿಸಿತ್ತು. ಗದ್ದೆ, ಹೊಲ, ತೋಟ, ಒಣಹುಲ್ಲು, ನೇಗಿಲು, ಕೃಷಿಉಪಕರಣ, ಮಗ್ಗ, ಮೀನುಗಾರಿಕೆ, ಉಪ್ಪಿನಗುಡ್ಡೆ, ದನಕರುಗಳ ಮಾರಾಟ, ಗ್ರಾಮದ ಒಟ್ಟು ವರಮಾನದ

ತೆರಿಗೆ, ವೃತ್ತಿ ತೆರಿಗೆ, ಬಟ್ಟೆ ಒಗೆಯುವುದು, ಇತ್ಯಾದಿ ತೆರಿಗೆಗಳು ಸಾಮ್ರಾಜ್ಯದ ಆದಾಯವನ್ನು ಹೆಚ್ಚಿಸಿದ್ದವು

ವಿಜಯನಗರದ ಅರಸರು ತಮ್ಮ ಸಂಪ್ರದಾಯ ಧರ್ಮ-ಆಚರಣೆಗಳ ಜೊತೆಗೆ ಇತರೆ ಮತ ಧರ್ಮಗಳಿಗೂ ಮನ್ನಣೆ ನೀಡುವ ಧೋರಣೆಯನ್ನು ಅನುಸರಿಸಿದ್ದರು. ಪ್ರತಿಯೊಂದು ಮತ ಪಂಥದವರು ಹಬ್ಬ-ಆಚರಣೆಗಳನ್ನು ಆಚರಿಸಿದ್ದರು. ಅದರಲ್ಲಿ ಪ್ರತಿಯೊಬ್ಬ ಕಸುಬುದಾರರು ತಮ್ಮ ಮತ-ಪಂಥಗಳ ಅನುಯಾಯಿಗಳಾಗಿ ಭಾಗವಹಿಸುತ್ತಿದ್ದರು. ಹಂಪಿ, ಚಿದಂಬರಂ, ಕಾಳಹಸ್ತಿ, ತಿರುಮಲ, ಕಂಚಿ, ಶ್ರೀಶೈಲ, ತಿರುವಣ್ಣಾಮಲೈ, ಹರಿಹರ, ಸಂಗಮ, ಅಹೋಬಲ, ಶ್ರೀರಂಗಂ, ಕುಂಭಕೋಣ, ಮಹಾನದಿ, ಗೋಕರ್ಣ, ರಾಮೇಶ್ವರ, ಮೊದಲಾದ ಧಾರ್ಮಿಕ ಕ್ಷೇತ್ರಗಳಿಗೆ ದಾನ-ದತ್ತಿ ನೀಡಿ, ಧಾರ್ಮಿಕ ಪರಿಸರ ಪ್ರೋತ್ಸಾಹಿಸುವುದರ ಜೊತೆಗೆ ವಿವಿಧ ಮತ-ಧರ್ಮ, ಪಂಥ-ಉಪಪಂಥ, ಕಸುಬು-ಉಪಕಸುಬುದಾರರು ಒಟ್ಟೊಟ್ಟಿಗೆ ಸಹಬಾಳ್ವೆ ನಡೆಸುವ ಸೌಹಾರ್ದ ವಾತಾವರಣವನ್ನು ಅರಸರು ಒದಗಿಸಿಕೊಟ್ಟಿದ್ದರು.

ವಿಜಯನಗರ ಕಾಲದ ಕಸುಬುದಾರರರು ಒಂದು ಗ್ರಾಮದಲ್ಲಿ ಸಾಮುದಾಯಿಕ ಜೀವನವನ್ನು ಸರಾಗವಾಗಿ ನಡೆಸುತ್ತಿದ್ದರು. ಗ್ರಾಮದ, ಸಾಮ್ರಾಜ್ಯದ ಒಳಿತಿಗಾಗಿ ಧಾರ್ಮಿಕ ಹಾಗೂ ಲೌಕಿಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಒಟ್ಟಾಗಿ ನಿರ್ವಹಿಸುತ್ತಿದ್ದರು. ಗ್ರಾಮ ದೇವತೆಯ ಉತ್ಸವಗಳು, ಕೃಷಿ ಸಂಬಂಧವಾದ ಹಬ್ಬಗಳು, ಗ್ರಾಮ ಜೀವನಕ್ಕೆ ಅನನ್ಯವಾದ ಇತರ ಮನರಂಜನೆಗಳಲ್ಲಿ ಬಹುತೇಕ ಕಸುಬುದಾರರು ಸಾಮೂಹಿಕತೆಯಿಂದ ಭಾಗವಹಿಸುತ್ತಿದ್ದರು. ಇದಕ್ಕೆ ಅಂದಿನ ಶಾಸನ, ಸಾಹಿತ್ಯಗಳು ಮನದಣಿಯೆ ಬಣ್ಣಿಸಿರುವುದನ್ನು ಕಾಣಬಹುದು.

ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ಕಬ್ಬಿಣದ ಅದಿರು ಹೇರಳವಾಗಿ ದೊರೆಯುತ್ತಿದ್ದುದರಿಂದ ಅದರ ಉಪಯೋಗವನ್ನು ಕಂಡುಕೊಂಡಿದ್ದ ರಾಜರು ತಮ್ಮ ಆಡಳಿತದ ಅವಧಿಯಲ್ಲಿ ಇಲ್ಲಿಯ ಕಬ್ಬಿಣದ ಮೂಲಕ ಶಸ್ತ್ರಾಸ್ತ್ರಗಳನ್ನು ಕಮ್ಮಾರರ ಮೂಲಕ ಸಿದ್ಧಪಡಿಸಿ ಅರಬ್ ಮುಂತಾದ ದೇಶಗಳಿಗೆ ರಫ್ತು ಮಾಡುತ್ತಿದ್ದರು. ಅಲ್ಲಿಂದ ಕುದುರೆ ಮತ್ತಿತರ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು. ಪ್ರಾಚೀನ ಕಾಲದಿಂದಲೂ ಕಬ್ಬಿಣದಿಂದ ಶಸ್ತ್ರಾಸ್ತ್ರ ತಯಾರಿಸುವ ಕಾರ್ಯಗಾರಗಳು ಇದ್ದವು. ಆದರೆ ನಂತರದ ಕಾಲದಲ್ಲಿ ಐರೋಪ್ಯರು ಪರಿಚಯಿಸಿದ ಬೃಹತ್ ಕೈಗಾರಿಕೆಗಳ ಪ್ರವೇಶದಿಂದಾಗಿ ಇಲ್ಲಿ ಗುಡಿ ಕೈಗಾರಿಕೆಗಳನ್ನು ನಂಬಿ ಬದುಕುತ್ತಿದ್ದ ಕಸುಬುದಾರರಿಗೆ ಜೀವನ ನಿರ್ವಹಣೆಗಾಗಿ ಮತ್ತೊಂದು ಕಸುಬಿಗೆ ಅಂಟಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಯಿತು. ಕಬ್ಬಿಣದಿಂದ ಅನೇಕ ವಸ್ತುಗಳನ್ನು ತಯಾರಿಸುವ ಕೈಗಳು ಬೃಹತ್ ಕೈಗಾರಿಕೆಗಳ ಕಾರ್ಯವೈಖರಿ ಕಂಡು ಆತಂಕಕ್ಕೊಳಗಾದವು. ಯುರೋಪಿಯನ್ನರು ಪರಿಚಯಿಸಿದ ಕಬ್ಬಿಣ ಭಾರತೀಯರು ಸಾಂಪ್ರದಾಯಿಕವಾಗಿ ತಯಾರಿಸುತ್ತಿದ್ದ ಕಬ್ಬಿಣಕ್ಕಿಂತ ಅತೀ ಕಡಿಮೆ ವೆಚ್ಚದಲ್ಲಿ ದೊರೆಯುತ್ತಿತ್ತು. ಸಾಂಪ್ರದಾಯಿಕ ಕಬ್ಬಿಣ ತಯಾರಿಕೆಯಿಂದಲೆ ಪಡೆದ ಕಬ್ಬಿಣ ತಯಾರಿಕೆ ತಂತ್ರಗಾರಿಕೆಯನ್ನು ಕಾರ್ಖಾನೆಗಳಿಗೆ ಅಳವಡಿಸಿ ಹೆಚ್ಚಿನ ಪ್ರಮಾಣದಲ್ಲಿ ಕಬ್ಬಿಣ ತಯಾರಿಸತೊಡಗಿದಂತೆ ತಮ್ಮ ಶ್ರಮ ಶಕ್ತಿಯನ್ನೇ ನಂಬಿ ಜೀವನ ನಡೆಸುತ್ತಿದ್ದ. ಶ್ರಮಿಕ ಕಸುಬುದಾರರಿಗೆ ದಿಕ್ಕು ತೋಚದಂತಾಗಿ ಪರ್ಯಾಯ ಜೀವನ ಮಾರ್ಗಗಳಿಗೆ ವಲಸೆಹೋಗಿದ್ದವು.

ಗ್ರಾಮೀಣ ಪ್ರದೇಶದಲ್ಲಿಯ ಕಮ್ಮಾರರ ಯುವ ಪೀಳಿಗೆ ಇಂದು ಕಮ್ಮಾರಿಕೆ ಕಸುಬಿನ ಮೂಲಕ ಜೀವನ ಸಾಗಿಸಲಿಕ್ಕೆ ಆಗುವುದಿಲ್ಲ ಎಂಬುದನ್ನು ಕಂಡುಕೊಂಡು ಪಾರಂಪರಿಕ ಕಸುಬು ಬಿಟ್ಟು ಇತರೆ ವೃತ್ತಿಗಳನ್ನು ಆರಿಸಿಕೊಂಡು ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿರುವುದು ಕಂಡುಬರುತ್ತದೆ. ಆಧುನಿಕ ಕೃಷಿ ನೀತಿ, ಕಾರ್ಖಾನೆಗಳಲ್ಲಿ ಕೃಷಿ ಉಪಕರಣಗಳ ತಯಾರಿಕೆ ನಗರೀಕರಣ, ವೈಜ್ಞಾನೀಕರಣ ಮುಂತಾದವು ಕಮ್ಮಾರಿಕೆಯಂತಹ ಕಸುಬಿನ ಮೇಲೆ ಪ್ರಭಾವ ಬೀರಿದ ಪರಿಣಾಮವಾಗಿ ಈ ಕಸುಬು ಮೂಲೆ ಗುಂಪಾಗುತ್ತಿದೆ ಎನ್ನಬಹುದು.

ಪ್ರಾಚೀನ ಕಸುಬುಗಳ ಆಧುನಿಕತೆಗೆ ಮುಖಾಮುಖಿಯಾಗುತ್ತಿರುವ ಇಂದಿನ ಸಂದರ್ಭದಲ್ಲಿ ಪಾರಂಪರಿಕ ಕಸುಬು ನಿರತ ಅದರಲ್ಲೂ ಗ್ರಾಮೀಣ ಪರಿಸರದ ಕಸುಬುದಾರರು ತಮ್ಮ ಕಸುಬಿನಲ್ಲಿ ಆಧುನಿಕತೆಯನ್ನು ರೂಢಿಸಿಕೊಳ್ಳಲಿಲ್ಲ. ತಾಲ್ಲೂಕು ಪ್ರದೇಶಗಳಲ್ಲಿ ಸ್ವಲ್ಪ ನಗರ ಛಾಯೆಯಿರುವ ಪ್ರದೇಶಗಳಲ್ಲಿರುವ ಕಸುಬುದಾರರು ಅದರಲ್ಲೂ ಅಕ್ಷರಸ್ಥರ ಆಧುನಿಕತೆಯನ್ನು ರೂಢಿಸಿಕೊಂಡಿದ್ದಾರೆ.

ಆದರೆ ವಿಜಯನಗರ ಕಾಲದಲ್ಲಿ ಕೈಗೊಂಡ ಕ್ರಿಯಾಶೀಲ ಚಟುವಟಿಕೆಗಳಿಂದ ನಾಡಿನ ಜನರಲ್ಲಿ ಸಮುದಾಯ ಪ್ರಜ್ಞೆ ಸಹಕಾರ ತತ್ವ ಸಹಬಾಳ್ವೆಗಳು ನೆಲೆನಿಲ್ಲುವಂತಾಯಿತು. ಹೀಗೆ ವಿಜಯನಗರ ಕಾಲದ ಕುಲಕಸುಬುಗಳು ಸಹಕಾರ ತತ್ವಗಳನ್ನು ಬಿತ್ತುವಲ್ಲಿ ವಹಿಸಿದಪಾತ್ರ ನಿಜಕ್ಕೂ ಶ್ಲಾಘನಾರ್ಹ.

ಕುಲಕಸುಬುದಾರರು ಸತ್ಕಾರ್ಯ ಸದ್ಧರ್ಮಗಳಿಗಾಗಿ ವಿವಿಧ ಸಮುದಾಯಗಳಿಗೆ, ಸಾಮ್ರಾಜ್ಯದ ಎಲ್ಲ ಜನಸಾಮಾನ್ಯರಾದಿಯಾಗಿ ಅರಸ, ಮಾಂಡಲಿಕ, ಮಂತ್ರಿ, ರಾಣಿ ಪ್ರತಿಯೊಬ್ಬರಿಗೂ ಏಕಸ್ಥರಾಗಿ, ಏಕಮತದಿ, ಧರ್ಮಚಿತ್ತದಿ ಎಂಬಂತೆ ತಮ್ಮ ಕಾರ್ಯವನ್ನು ಮಾಡುತ್ತಿದ್ದರು. ಇದು ಇವರ ಸಹಕಾರ ತತ್ವ, ಧಾರ್ಮಿಕ ಮನೋಭಾವನೆ, ಪರಧರ್ಮ ಸಹಿಷ್ಣುತೆಗಳನ್ನು ಎತ್ತಿ ತೋರಿಸುತ್ತದೆ.

ಅಂದು ಕಸುಬುದಾರರು ತಮ್ಮ ಕಸುಬುಗಳ ಬಗ್ಗೆ ದೈವಭಾವನೆಯನ್ನು ಹೊಂದಿದ್ದರು. ಬೆಸ್ತರು ತಮ್ಮ ಉಪಕರಣಗಳಾದ ಬಲೆ, ಹರಿಗೋಲು, ತೆಪ್ಪಗಳನ್ನು, ಕಮ್ಮಾರರು ಕುಲುಮೆಯನ್ನು, ಬಡಗಿ ಉಳಿ, ಬಾಚಿ ಇತರೆ ಉಪಕರಣಗಳನ್ನು–ಹೀಗೆ ಅಕ್ಕಸಾಲಿ, ಚಮ್ಮಾರ, ಕುಂಬಾರ ಪ್ರತಿಯೊಬ್ಬ ಕಸುಬುದಾರರು ತಾವು ಬಳಸುವ ಉಪಕರಣಗಳನ್ನು ಪೂಜಿಸುತ್ತಿದ್ದರು. ಹಾಗೆ ಕೆಲವು ಕಸುಬುದಾರರು ತಾವು ಪ್ರಕೃತಿಯಲ್ಲಿ ಹೇಗೆ ಜನ್ಮತಾದವು ಎಂಬುದಕ್ಕೆ ತಮ್ಮದೇ ಆದ ಐತಿಹ್ಯ, ನಂಬಿಕೆಗಳನ್ನು ಹೊಂದಿದ್ದಾರೆ. ಹಾಗಿದ್ದೂ ಇಂದಿಗೂ ಆಚರಿಸುತ್ತ ಬಂದ ಹಾಗೂ ನಾಡಹಬ್ಬವಾಗಿರುವ ದಸರಾ ಅಥವಾ ಮಹಾನವಮಿ ಹಬ್ಬದ ಆಯುಧ ಪೂಜೆಯು ವಿಜಯನಗರ ಕಾಲದಲ್ಲಿದ್ದ ಕುಲಕಸುಬುಗಳ ಪ್ರಮುಖ ದ್ಯೋತಕವಾಗಿ ಮುಂದುವರಿದಿರುವುದು ಗಮನಾರ್ಹ.

ಸಾಮ್ರಾಜ್ಯದ ಜೀವನ ಸ್ಥಿತಿ ನಾಡಿನ ಆರ್ಥಿಕ ಪರಿಸ್ಥಿತಿಗಳನ್ನು ರೂಪಿಸುವಲ್ಲಿ ಇವರ ಸಹಕಾರ ಹಾಗೂ ಆರ್ಥಿಕ ಅಂಶಗಳು ಪ್ರಮುಖ ನಾಡಿನ ಸಮಾಜ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಈ ಕಸುಬುದಾರರು ಹಗಲಿರುಳು ಪರಿಶ್ರಮಿಸಿದರು. ಕಸುಬುಗಳ ಸಂಹಿತೆಯ ಉಲ್ಲಂಘನೆಯಾಗಲಿ, ಕಸುಬು ಧರ್ಮವನ್ನು ದಿಕ್ಕರಿಸಿಯಾಗಲಿ ಕಸುಬುದಾರರು ಎಂದೂ

ನಡೆದುಕೊಂಡುದು ಕಂಡುಬರುವುದಿಲ್ಲ. ಹೀಗೆ ಇವರ ಕಾರ್ಯ ಚಟುವಟಿಕೆಗಳು ಕೃಷಿ ಹಾಗೂ ಉದ್ದಿಮೆಗಳಿಗೆ ಉತ್ತೇಜನ ಉದ್ದೀಪನಗಳು ದೊರೆತು ನಾಡಿನ ಉದ್ದಗಲಕ್ಕೂ ವೈವಿಧ್ಯ ಪೂರ್ಣ ಕಸುಬುಗಳು ಮತ್ತು ಉದ್ದಿಮೆಗಳು ಬೆಳೆಯಲು ಸಾಧ್ಯವಾಯಿತು. ಜೊತೆಗೆ ನಾಡಿನ ಪ್ರಜೆಗಳ ಕಸುಬುದಾರರ ಜೀವನ ಮಟ್ಟವು ಸುಧಾರಿಸುವಂತಾಯಿತು.

ಕುಲಕಸುಬುದಾರರ ಸರಕುಗಳನ್ನು ಮಾರಾಟ ಮಾಡುವುದು ಇಂದಿನ ಬಹುದೊಡ್ಡ ಸಮಸ್ಯೆ. ಇವರಿಗೆ ಕೈಗಾರಿಕಾ ವಸ್ತುಗಳ ಪೈಪೋಟಿ ಇದೆ. ಈ ಸಮಸ್ಯೆಯನ್ನು ನಿವಾರಿಸಲು ಸರಕಾರ ಅನೇಕ ಕ್ರಮಗಳನ್ನು ಕೈಗೊಂಡಿದೆ. ಪೈಪೋಟಿ ಸಾಮಾರ್ಥ್ಯ ಹೆಚ್ಚಿಸುವ ಸಲುವಾಗಿ ಗುಣಮಟ್ಟ ಮಾರಾಟಕ್ಕಾಗಿ ಸಹಕಾರಿ ಸಂಘಗಳ ಸ್ಥಾಪನೆ, ರಾಷ್ಟ್ರೀಯ ಸಣ್ಣ ಕೈಗಾರಿಕಾ ನಿಗಮ ಮಾರುಕಟ್ಟೆ ಸೌಲಭ್ಯ ಸಣ್ಣ ಗುಡಿ, ಕೈಗಾರಿಕೆಗಳು ಸರಕುಗಳ ಪ್ರಚಾರ ಮತ್ತು ಅವುಗಳ ಪ್ರದರ್ಶನ ಕಾರ್ಯಕ್ರಮಗಳನ್ನು ಸರಕಾರ ತಾಲೂಕು, ಜಿಲ್ಲೆ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಏರ್ಪಡಿಸಲಾಗುತ್ತಿದೆ. ಅಲ್ಲದೆ ಸರಕುಗಳ ಮಾರಾಟಕ್ಕಾಗಿ ಸಗಟು ಮಾರಾಟ ಕೇಂದ್ರಗಳು ಸ್ಥಾಪಿಸಿದ ಜೊತೆಗೆ ಈ ಸರಕುಗಳು ಧನಸಹಾಯದೊಂದಿಗೆ ಮಾರಾಟ ಮಾಡುವ ವ್ಯವಸ್ಥೆ ಮಾಡಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಣ್ಣ ಮತ್ತು ಗುಡಿ ಕೈಗಾರಿಕೆಗಳ ಸ್ಥಾಪನೆ ಮತ್ತು ಅಭಿವೃದ್ಧಿಯನ್ನು ಪ್ರೋತ್ಸಾಹಿಸಲು ಅನೇಕ ಉತ್ತೇಜನಗಳನ್ನು ನೀಡುತ್ತಿವೆ. ಅವುಗಳಲ್ಲಿ ಸಹಾಯಧನ, ತೆರಿಗೆ ವಿನಾಯಿತಿ, ಕುಶಲಕರ್ಮಿಗಳಿಗೆ ತರಬೇತಿ ಗ್ರಾಮೀಣ ಕೈಗಾರಿಕಾ ಯೋಜನೆ, ಹೀಗೆ ಹತ್ತು ಹಲವು ಕಾರ್ಯಕ್ರಮಗಳನ್ನು ರೂಪಿಸಿದೆ. ಕುಲಕಸುಬುದಾರರು ಈ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ತಮ್ಮ ಕಸುಬಿನಲ್ಲಿ ತೊಡಗಿಸಿಕೊಂಡು ಅಭಿವೃದ್ಧಿ ಹೊಂದಬಹುದು. ಕುಲಕಸುಬುಗಳ ಅಭಿವೃದ್ಧಿಗಾಗಿ ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು ಕೈಗೊಂಡಿರುವ ಕಾರ್ಯಕ್ರಮ ಹಾಗೂ ಕಾರ್ಯತಂತ್ರಗಳಿಂದಾಗಿ ಪ್ರತಿಯೊಂದು ಕಸುಬುದಾರರ ಸಮಗ್ರಾಭಿವೃದ್ಧಿ ಆಗುತ್ತದೆಬಂಬ ಭ್ರಮೆ ಹುಟ್ಟಿಸುತ್ತದೆ. ವಾಸ್ತವದಲ್ಲಿ ಯೋಜನೆಗಳಿಗಿಂತ ಯೋಜನೆಗಳು ಉನ್ನತವಾಗಿದೆ ಎಂದು ಕಲ್ಪಿಸಿ, ಯೋಜನೆಗಳ ಸಂಖ್ಯೆ ಮತ್ತು ಇದಕ್ಕೆ ಮಿಸಲೀಡುವ ಹಣ ಮಾತ್ರ ಬೃಹದಾಕಾರವಾಗಿ ಆಗುತ್ತಿವೆಯೆ ಹೊರತು ಕಸುಬುಗಳಿಗೆ, ಅಭಿವೃದ್ಧಿಗೆ ಅನುಗುಣವಾಗಿ ಯೋಜಿತವಾಗುತ್ತಿರುವುದರಿಂದ ಈ ಯೋಜನೆಗಳು ಯೋಜನೆಗಳಾಗಿಯೇ ಇವೆ. ಜೀವನಕ್ಕೆ ಮೂಲಾಧಾರವಾಗಿರುವ ಕಸುಬುಗಳ ತಾಂತ್ರಿಕತೆ ಹಾಗೂ ವೈಜ್ಞಾನಿಕ ಒಳಗಾಗುವಿಕೆಯ ಕುರಿತು ಇದುವರೆಗೂ ಸಮಗ್ರ ಚಿಂತನೆ ಮಾಡದಿರುವುದು ಈ ಕುಲಕಸುಬುಗಳು ಇಂದಿಗೂ ಅನೇಕ ಸಮಸ್ಯೆ ಸವಾಲುಗಳನ್ನು ಎದುರಿಸುವಂತಾಗಿದೆ.

ಕಸುಬುಗಳ ಪಾರಂಪರಿಕ ಜ್ಞಾನ ಒಂದು ಕಾಲಾವಧಿಗೆ ಮಾತ್ರ ಸೀಮಿತವಾಗಿಲ್ಲ, ಅದು ಕಾಲದಿಂದ ಕಾಲಕ್ಕೆ ಬದಲಾಗುತ್ತದೆ. ಪ್ರಾಚೀನ ಕಾಲದಿಂದಲೂ ರೂಢಿಸಿಕೊಂಡು ಬಂದಿರುವ ಜ್ಞಾನವನ್ನು ವಿಜಯನಗರ ಅವಧಿಯಲ್ಲಿ ಪ್ರತಿಯೊಂದು ಪ್ರದೇಶಕ್ಕೂ ವಿಸ್ತರಿಸಿತ್ತು.

ವಿಜಯನಗರದಅರಸರು ತಮ್ಮ ಆಸ್ಥಾನಕ್ಕೆ ಪರಿಣಿತರಾದ ಕಸುಬುದಾರರನ್ನು ನೇಮಿಸಿಕೊಂಡಿದ್ದು, ಅವರ ನೇಮಕದಲ್ಲಿ ವಿಶೇಷ ಕಾಳಜಿ ವಹಿಸುತ್ತಿದ್ದರು, ಅದ್ದರಿಂದಲೇ ಅಂದಿನ ಸ್ಮಾರಕ, ಶಿಲ್ಪ, ಕೋಟೆ-ಕೊತ್ತಲ, ನಾಣ್ಯ, ಮಡಕೆ-ಕುಡಕೆಗಳನ್ನು ಇಂದಿಗೂ ಕಾಣುತ್ತೇವೆ.

ವಿಜಯನಗರದ ಕಸುಬುದಾರರು ತುಂಬಾ ಕುಶಲಮತಿಗಳಾಗಿದ್ದರು. ಅವರು ತಯಾರಿಸುತ್ತಿದ್ದ ವಸ್ತುಗಳಿಂದ ವಿಜಯನಗರ ಸಾಮ್ರಾಜ್ಯದ ಕೀರ್ತಿ ದೇಶ ವಿದೇಶಗಳಿಗೂ ಹರಡಿತ್ತು, ಅಂದಿನ ವಸ್ತ್ರ ಮತ್ತು ಆಭರಣಗಳು ತುಂಬಾ ಪ್ರಖ್ಯಾತಿಯನ್ನು ಪಡೆದಿದುದು. ಅದು ವಿದೇಶಿ ಪ್ರವಾಸಿ ವರದಿಗಳಿಂದ ದೃಢಪಟ್ಟ ಸಂಗತಿ.

ವಿಜಯನಗರದ ಕಸುಬುದಾರರು ಬಗೆಬಗೆಯ ವಸ್ತುಗಳನ್ನು ಉತ್ಪಾದಿಸುತ್ತಿದ್ದರು. ಅರಮನೆಯ ವರ್ಗದವರಿಗೆ ಒಂದು ಬಗೆ, ಸಾಮನ್ಯವ ರ್ಗದವರಿಗೆ ಒಂದು ಬಗೆಯ ವಸ್ತುಗಳನ್ನು ತಯಾರಿಸುತ್ತಿದ್ದರು. ವಸ್ತ್ರ ಮತ್ತು ಆಭರಣಗಳನ್ನು ದೇವ-ದೇವತೆಯರಿಗೆ ವಿಶೇಷವಾಗಿ ಮಾಡುತ್ತಿದ್ದುದು ಆಕರಗಳಿಂದ ಸ್ಪಷ್ಟವಾಗುತ್ತದೆ.

ವಿಜಯನಗರದ ಅರಸರು ವೈಭವ ಜೀವನವನ್ನು ನಡೆಸುತ್ತಿದ್ದರು, ಸಾಮಾನ್ಯವರ್ಗದವರು ಸರಳವಾದ ಜೀವನ ಮಾಡುತ್ತಿದ್ದರೆಂಬುದು ಅಂದು ಬಳಸಿ ಬಿಟ್ಟು ಹೋದ ಪರಿಕರಗಳಿಂದ ದೃಢಪಡುತ್ತದೆ.

ಕಸುಬುಗಳು ಮಾನವನ ಬದುಕಿನುದ್ದಕ್ಕೂ ಬೆಳೆದುಬಂದಿವೆ. ಹಾಗೆಯೇ ಇಂದಿಗೂ ಪ್ರಚಲಿತದಲ್ಲಿವೆ. ಒಟ್ಟಿನಲ್ಲಿ ವಿಜಯನಗರ ಕಾಲದ ಕುಲಕಸುಬುಗಳು ಅಂದಿನ ಸಮಾಜದ ಸಮಗ್ರ ಬೆಳವಣಿಗೆಯ ಭಾಗಗಳಾಗಿದ್ದವು. ಪ್ರತಿಯೊಬ್ಬ ಕಸುಬುದಾರರು ತಮ್ಮ ಕಸುಬುಗಳ ಮೂಲಕ ಜೀವನ ಸಾಗಿಸುತ್ತಿದ್ದರು. ಅವರು ತಯಾರಿಸುತ್ತಿದ್ದ ವಸ್ತುಗಳಿಂದ ಅಂದಿನ ವ್ಯಾಪಾರ ವಹಿವಾಟು ವಿದೇಶಗಳಿಗೆ ಹರಡಿದ್ದು ಗಮನಾರ್ಹ. ಹಾಗೆಯೇ ಸಾಮ್ರಾಜ್ಯದ ಸಾಮ್ಯಾನ್ಯರಾದಿಯಾಗಿ ರಾಜಪರಿವಾರದವರು, ಮಂತ್ರಿ, ಮಾಂಡಲಿಕ, ಸೈನಿಕ ಹೀಗೆ ಪ್ರತಿಯೊಬ್ಬರು ಕಸುಬುದಾರರ ಸೇವೆಯನ್ನು ಬಳಸಿಕೊಂಡಿರುವುದು ಗಮನಾರ್ಹ ಸಂಗತಿ.

ಆಧಾರ ಗ್ರಂಥಗಳು

ಅಬ್ದುಲ್ ಅಜೀಜ್, ಕೆ.ಜಿ., ವಾಸುಕಿ, (ಸಂ), ೧೯೯೭, *ಕರ್ನಾಟಕ ಆರ್ಥಿಕತೆ,* ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅದ್ವಾರಿ ನಾರಾಯಣ, (ಮೂಲ), ಪಸನ್ನಕುಮಾರ, (ಅನು), *ಲೇಪಾಕ್ಷಿ ದೇವಾಲಯದ ಚರಿತ್ರೆ,* ಬುಕ್ಕರಾಯ ಸಮುದ್ರ, ಅನಂತಪುರ

ಅಂಬಳಿಕೆ ಹಿರಿಯಣ್ಣ, ೧೯೯೪, *ಜಾನಪದ ಕೆಲವು ಅಧ್ಯಯನಗಳು,* ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ಅಣ್ಣಿಗೇರೆ, ಎ.ಎಂ., ಶೇಷಶಾಸ್ತ್ರೀ, ಆರ್., ೧೯೯೩, *ಶಾಸನ ಸಂಗ್ರಹ,* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಕುಮಾರಸ್ವಾಮಿ, ಕೆ.ಎಸ್., ೧೯೯೬, *ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರ್ಯರು,* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಒಡೆಯರ್, ಡಿ. ಹೆಗ್ಗಡೆ, ೨೦೦೫, *ವಿಜಯನಗರ ಸಾಮ್ರಾಜ್ಯ ಸಂಸ್ಥಾಪಕ, ಹಕ್ಕ-ಬುಕ್ಕರು,* ಅಖಿಲಾ ಏಜೆನ್ಸೀಸ್, ಅಂಜನಾದ್ರಿ

ಕಲಬುರ್ಗಿ, ಎಂ.ಎಂ., ೧೯೭೪, *ಶಾಸನ ವ್ಯಾಸಂಗ,* ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕಲಬುರ್ಗಿ, ಎಂ.ಎಂ., ೧೯೯೮, (ಪ್ರ.ಸಂ.), *ಮೊನಸೋಲ್ಲಾಸ,* ದ್ವಿತಿಯ ಸಂಪುಟ, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕಲಬುರ್ಗಿ, ಎಂ.ಎಂ., ೨೦೦೦, ವಿರಣ್ಣ ರಾಜೂರ, (ಸಂ), *ಹೊಸ ಕುಮಾರ ರಾಮನ ಸಾಂಗತ್ಯ,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕಲಬುರ್ಗಿ, ಎಂ.ಎಂ., (ಪ್ರಸಂ), ಕೊಟ್ರಶೆಟ್ಟಿ, ಎಂ.ಬಿ., ೧೯೮೫, *ಕರ್ನಾಟಕ ಭಾರತಿ,* (ತ್ರೈಮಾಸಿಕ ಪತ್ರಿಕೆ), ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕಲಬುರ್ಗಿ, ಎಂ.ಎಂ.,೧೯೭೦. *ಶಾಸನಗಳಲ್ಲಿ ಶಿವಶರಣರು,* ಸಿರಿಗನ್ನಡ ಪ್ರಕಾಶನ, ಧಾರವಾಡ

ಕುಮಾರ ಕಕ್ಕಯ್ಯ, ಪೋಳ, ೧೯೯೭, *ಚಾತುರ್ವರ್ಣ ಧರ್ಮದರ್ಶನ,* ಲೋಹಿಯ ಪ್ರಕಾಶನ, ಬಳ್ಳಾರಿ.

ಕೋಡದ, ಎಸ್.ಬಿ., ೧೯೯೯, *ತಾಳಿಕೋಟೆ ಯುದ್ಧ,* ಪ್ರಭಾ ಪಬ್ಲಿಷರ್ಸ್, ಧಾರವಾಡ

ಕೋತಿನ, ಎಸ್.ಎಸ್., ೧೯೭೭, (ಗದ್ಯಾನುವಾದ), *ಮೋಹನ ತರಂಗೀಣಿ,* ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

ಕೊಡದ, ಎಸ್.ಬಿ., ೧೯೯೬, *ವಿಜಯನಗರ ಸಾಮ್ರಾಜ್ಯ ಹಾಗೂ ಹಿಂದೂ-ಮುಸ್ಲಿಂ ಬಾಂಧವ್ಯ,* ಶ್ರೀ ಎಸ್.ಬಿ. ಕೋಡದ, ಕೋಡ

ಕಣ್ಣನ್, ಕೆ.ಎಸ್., *ಅಹೋಬಲನ ವಿರೂಪಾಕ್ಷ ವಸಂತೋತ್ಸವ ಚಂಪೂ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕರೀಗೌಡ ಬೀಚನಹಳ್ಳಿ, ೨೦೦೦, *ಕರಕುಶಲ ಕಲೆಗಳು,* ಕನ್ನಡ ವಿಶ್ವವಿದ್ಯಾಲಯ, ವಿಶ್ವಕೋಶ-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕಲಮದಾನಿ ಗುರುರಾಯರು, ೧೯೭೪, *ವಿಜಯನಗರ ಸಾಮ್ರಾಜ್ಯ,* ಎ.ಎಂ. ಕರಡಿ, ಬುಕ್‌ಸೇಲರ್, ಹುಬ್ಬಳ್ಳಿ.

ಕುಂದೂರಿ ಈಶ್ವರದತ್ತು, (ತೆಲುಗು ಮೂಲ), ಗುರುಮೂರ್ತಿ ಪೆಂಡಕೂರು, (ಕನ್ನಡ ಅನು), ೨೦೧೦, *ಭಗ್ನ ವಿಜಯನಗರ ಚರಿತ್ರೆ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕುಮಾರ ಕಕ್ಕಯ್ಯ, ಪೋಳ, ೧೯೯೭, *ಚಾತುರ್ವರ್ಣ ಧರ್ಮದರ್ಶನ,* ಲೋಹಿಯ ಪ್ರಕಾಶನ, ಬಳ್ಳಾರಿ.

ಕುಮಾರ ಸ್ವಾಮಿಗಳು, (ಅನು), ಮಹಾದೇವಯ್ಯ, ಟಿ.ಆರ್., ೧೯೯೫, *ಬುದ್ಧ ಮತ್ತು ಬಸವ,* ಭಾಗ್ಯ ರವಿ ಪ್ರಕಾಶನ, ಬೆಂಗಳೂರು

ಕುಲಕರ್ಣಿ, ಆರ್.ವಿ., (ಅನು), ೧೯೯೯, *ಅಂಡಯ್ಯನ ಕಬ್ಬಿಗರ ಕಾವಂ,* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಕೃಷ್ಣಮೂರ್ತಿ, ಕೆ.ವಿ. *ದಕ್ಷಿಣ ಭಾರತದ ಕುಶಲಕರ್ಮಿಗಳು,* ಕಂಚ ಐಲಯ್ಯ, (ತೆಲುಗುಮೂಲ), ಜಾಜಿ ದೇವೇಂದ್ರಪ್ಪ, (ಅನು), ೨೦೧೪, *ದೇವರ ರಾಜಕೀಯ ತತ್ವ* (ಬ್ರಾಹ್ಮಣ್ಯಕ್ಕೆ ಬುದ್ಧನ ತಿರುಗುಬಾಣ), ಲಡಾಯಿ ಪ್ರಕಾಶನ, ಗದಗ

ಕೆಂಪಣ್ಣ ನಾಯಕ, ೧೯೬೭, ವಿಶ್ವಧರ್ಮ ಪ್ರಕಾಶನ ಯುಗಾದಿ ಪ್ರತಿ ಪದೆ, ಹಾಲಕೆರೆ *ಕನ್ನಡ ವಿಶ್ವಕೋಶ,* ೧೯೮೬, ಸಂಪುಟ-೧೨, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಖಂಡೋಬ, ಪಿ.ಕೆ., ೧೯೯೧, *ಕರ್ನಾಟಕ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ,* ದಿ. ತೇನಸಿಂಗ್ ರಾಥೊಡ್ ಮೆಮೊರಿಯಲ್ ಟ್ರಸ್ಟ, ಗುಲಬರ್ಗಾ

ಗಣೇಶ್, ಕೆ.ಆರ್., ೨೦೦೬, (ಸಂ), *ಸರ್ವಜ್ಞನ ವಚನಗಳು,* ಸೃಷ್ಟಿ ಪ್ರಕಾಶನ, ಬೆಂಗಳೂರು

ಗುರುಲಿಂಗಾಚಾರ್, ೧೯೭೩, *ವಿಶ್ವಕರ್ಮ ಗುಣಗಾನ,* ವಿಶ್ವಕರ್ಮ ಪ್ರಕಾಶನ, ತುಮಕೂರು

ಗೊರವರ, ಬ.ಸೋ., ೨೦೦೮, *ಕನ್ನಡ ರಚನಾತ್ಮಕ ಮತ್ತು ಸಮಾಜೋಭಾಷಿಕ ಅಧ್ಯಯನ,* ಲಡಾಯಿ ಪ್ರಕಾಶನ, ಗದಗ

ಗೋಪಾಲರಾವ್, ಹೆಚ್.ಎಸ್., ನರಸಿಂಹನ್, ಅ.ಲ., ೨೦೦೮, *ವಿಜಯನಗರ ಶಿಲ್ಪಕಲೆ,* ರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು

ಗಾದೆಪ್ಪ, ೨೦೧೨, *ಪಂಪಾಕ್ಷೇತ್ರ,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಗಾಯತ್ರಿದೇವಿ, ಎ.ಎಚ್., (ಅನು), *ಮಹೀಧರ ನಳಿನಿ, ಮೋಹನ್,* (ಮೂಲ), ೧೯೯೨, ಕ್ಯಾಲೆಂಡರ್ ಕಥೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು

ಚೆಲುವೇಗೌಡ, ತ.ಚಿ., ೧೯೭೮, *ಕೆಲವು ಜನಪದ ಸಂಪ್ರದಾಯಗಳು,* ತಳಗವಾಡಿ ಪ್ರಕಾಶನ, ಮೈಸೂರು

ಚಂದ್ರಪೂಜಾರಿ, ಎಂ., ೨೦೦೨, *ಸಮುದಾಯ ಮತ್ತು ಸಹಾಬಾಗಿತ್ವ* ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚಂದ್ರಶೇಖರಯ್ಯ, ಬಿ.ಎಂ., ೨೦೧೧, *ಭಾರತೀಯ ಸಂಸ್ಕೃತಿ ಸಮೀಕ್ಷೆ,* ವಸಂತ ಪ್ರಕಾಶನ, ಬೆಂಗಳೂರು

ಚಂದ್ರಶೇಖರ ಕಂಬಾರ, ೧೯೮೫, *ಕನ್ನಡ ಜಾನಪದ ವಿಶ್ವಕೋಶ,* ೧-೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಚೆಲುವರಾಜು, ೨೦೦೦, *ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಚೆನ್ನಕ್ಕ ಎಲಿಗಾರ, ೧೯೯೦, *ಶಾಸನಗಳಲ್ಲಿ ಸ್ತ್ರೀಸಮಾಜ,* ಪ್ರಸಾರಾಂಗ ಕರ್ನಾಟಕ, ವಿಶ್ವವಿದ್ಯಾಲಯ, ಧಾರವಾಡ

ಚಿದಾನಂದ ಮೂರ್ತಿ, ಎಂ., ೧೯೮೪, *ವೀರಗಲ್ಲುಗಳು ಮತ್ತು ಮಾಸ್ತಿ ಕಲ್ಲುಗಳು,* ಕನ್ನಡ ಮತ್ತು ಸಂಸ್ಕೃತಿ ನಿರ್ದೇನಾಲಯ, ಬೆಂಗಳೂರು

ಚಿದಾನಂದ ಮೂರ್ತಿ, ಎಂ., ೨೦೧೧, *ಹೊಸಬೆಳಕಿನಲ್ಲಿ ಹಂಪಿ,* ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಚಿದಾನಂದಮೂರ್ತಿ, ಎಂ., ೧೯೯೬, *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,* ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಚಿದಾನಂದಮೂರ್ತಿ, ಎಂ., ೧೯೮೯, *ಲಿಂಗಾಯತ ಅಧ್ಯನಗಳು,* ವಾಗ್ದೇವಿ ಪುಸ್ತಕಗಳು, ಮೈಸೂರು

ಚಿದಾನಂದಮೂರ್ತಿ, ಎಂ., ೨೦೦೨, *ಜನ-ಜನಪದ-ಜಾನಪದ,* (ಸಂ-೩), ಸಪ್ನಬುಕ್ ಹೌಸ್, ಬೆಂಗಳೂರು

ಜಯ ವೀರನಾಥ, ಜಿ.ಎಂ., ೧೯೮೬, *ವಿಜಯನಗರ ಸಾಮ್ರಾಜ್ಯದ ಸಾಂಸ್ಕೃತಿಕ ಕೊಡುಗೆ,* ಪ್ರಸಾರಾಂಗ ವಿಶ್ವವಿದ್ಯಾಲಯ, ಗುಲಬರ್ಗ

ಜವರಯ್ಯ, ಮ.ನ., ೧೯೯೪, *ಪರಂಪರೆ ಮತ್ತು ದಲಿತ ಬಂಡಾಯ,* ಸಾಹಿತ್ಯ ಸಿದ್ಧಾರ್ಥ ಗ್ರಂಥಮಾಲೆ, ಕುವೆಂಪುನಗರ, ಮೈಸೂರು

ಜವರಯ್ಯ, ಮ.ನ., ೧೯೯೭, *ದಲಿತ ವರ್ಗದ ಶರಣರು ಮತ್ತು ಶರಣೆಯರು,* ಸಿದ್ಧಾರ್ಥ ಗ್ರಂಥ ಮಾಲೆ ಕುವೆಂಪು ನಗರ, ಮೈಸೂರು

ಜಯಲಕ್ಷ್ಮೀ ಸೀತಾಪುರ, ೨೦೦೪, *ಜನಪದ ಒಕ್ಕಲು,* ತಳಲಗವಾದಿ ಪ್ರಕಾಶನ, ಮೈಸೂರು

ಜೋತ್ಸ್ನ ಕೆ. ಕಾಮಾತ್., ೧೯೮೧, *ಸೋಷಿಯಲ್ ಲೈಫ್ ಇನ್ ಮಿಡೆವಲ್ ಕರ್ನಾಟಕ,* ಅಭಿನವ ಪಬ್ಲಿಕೇಷನ್ಸ್, ನ್ಯೂ ದೆಹಲಿ

ಜ್ಞಾನಾನಂದ, ಜಿ., ೨೦೦೮, *ಸಂಸ್ಕೃತಾನುಕರಣ ಮತ್ತು ವಿಶ್ವಬ್ರಾಹ್ಮಣರು,* ಸಂಸ್ಕೃತ ಸಾಹಿತ್ಯ ಪ್ರತಿಷ್ಠಾನ, ಬೆಂಗಳೂರು

ಜ್ಞಾನಾನಂದ, ಜಿ., (ಸಂ), ೨೦೦೭, *ನಿರಂಜನ ಕವಿವಿರಚಿತ ಕಂಚಿಪುರಾಣ,* ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು

ತಳವಾರ, ಎನ್.ಎಮ್., ೨೦೦೨, *ನಂಜುಂಡ ಕವಿಯ ರಾಮನಾಥ ಚರಿತೆ ಸಾಂಸ್ಕೃತಿಕ ಅಧ್ಯಯನ,* ಅಭಿರುಚಿ ಪ್ರಕಾಶನ, ಮೈಸೂರು

ದೇವರಕೊಂಡಾರೆಡ್ಡಿ, (ಸಂ), ೨೦೦೬, *ಹಂಪಿ ಸಂಪುಟ ಕಲೆ, ಕ್ರೀಡೆ,ಕೌಶಲ,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ದೇವೀರಪ್ಪ, ಹೆಚ್., ೧೯೬೪, (ಸಂ), *ನಂಜುಂಡಕವಿ ವಿರಚಿತ ರಾಮನಥ ಚರಿತೆ,* ಸಂಪುಟ-೩, ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ದೇವಿರಪ್ಪ, ಹೆಚ್., (ಸಂ), ೧೯೯೬, *ಸಿಂಹಭೂಪಾಲ ವಿರಚಿತಂ, ವ್ಯಾಸರಂಜನಂ,* ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು

ದೇನಾಶ್ರೀ, ೧೯೮೯, *ಪ್ರಾಚೀನ ಮನುಕುಲದ ಕಥೆ,* ಪ್ರಕಾಶ ಸಾಹಿತ್ಯ, ಬೆಂಗಳೂರು

ದೇವರಾಜ್, ಡಿ.ವಿ., ಎಸ್. ಚನ್ನಬಸಪ್ಪ, ಎಸ್., *ವಿಜಯನಗರ ಅಧ್ಯಯನ ಸಂಪುಟ-೧,*ಕರ್ನಾಟಕ ಸರ್ಕಾರ ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ

ದೇಸಾಯಿ, ಪಿ.ಬಿ., ೨೦೦೭-೮, *ವಿಜಯನಗರ ಸಾಮ್ರಾಜ್ಯ,* ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ

ದೀಕ್ಷಿತ್, ಜಿ.ಎಸ್., (ಅನು), ೧೯೮೭, *ಭಾರತದ ಗ್ಯಾಜಿಟಿಯರ್ ಭಾರತ ದೇಶಕೋಶ,* ಸಂಪುಟ-೪, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

ದೀಕ್ಷಿತ್, ಜಿ.ಎಸ್., ರಾಮಸ್ವಾಮಿ, ಬಿ., ೧೯೯೭, ಭಾರ್ಗವಿ ಶಿವಯ್ಯ, *ಶ್ರೀಕೃಷ್ಣದೇವರಾಯನ-ಜೀವನ ಸಾಧನೆಗಳು,* ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ದಿವಾಕರ್, ಆರ್.ಆರ್., ೧೯೯೭, *ವೇದಯುಗ,* ಸಂಪುಟ-೨, ಭಾಗ-೨, ಭಾರತೀಯ ವಿದ್ಯಾಭವನ, ಬೆಂಗಳೂರು

ದಿವಾಕರ, ಆರ್.ಆರ್., ೧೯೯೭, *ವೇದಯುಗ,* ಭಾಗ-೧, ಭಾರತೀಯ ವಿದ್ಯಾಭವನ, ಬೆಂಗಳೂರು

ದೀಕ್ಷಿತ್, ಜಿ.ಎಸ್., ೧೯೯೧, (ಸಂ), *ಸಂಗಮರ ಕಾಲದ ವಿಜಯನಗರ ಅದರ ಇತಿಹಾಸ ಮತ್ತು ಸಂಸ್ಕೃತಿಗಳ ಅಧ್ಯಯನ,* ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು

ದೀಕ್ಷಿತ್, ವಿ.ಜಿ., ೧೯೭೫, *ಕರ್ನಾಟಕದಲ್ಲಿ ವಿಶ್ವಬ್ರಾಹ್ಮಣ ಧರ್ಮ ಮತ್ತು ಸಂಸ್ಕೃತಿ,* ವಿಶ್ವಕರ್ಮ ಗ್ರಾಯಿತ್ರಿ ಪ್ರಕಾಶನ, ಧಾರವಾಡ

ದಿವಾಕರ್, ಆರ್.ಬಿ., ಕುಮಾರ್, ಆರ್.ಬಿ., ೨೦೧೪, *ಕರ್ನಾಟಕದಲ್ಲಿ ಕುಮಾರ ರಾಮನ ಹಬ್ಬ ಮತ್ತು ಜಾತ್ರೆಗಳು,* ಗಂಗೋತ್ರಿ ಪ್ರಕಾಶನ, ರಾಮಸಾಗರ

ನರಸಿಂಹ ಮೂರ್ತಿ, ಎ.ವಿ., ೧೯೭೩, *ಕರ್ನಾಟಕ ಶಾಸನ ಸಂಪತ್ತು,* ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

ನಂಜಮಣ್ಣಿ, ಎಂ., ೧೯೭೪, *ಸಮಾಜಶಾಸ್ತ್ರ ಪರಿಚಯ,* ಭಾಗ-೧, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ನಂಜುಂಡಸ್ವಾಮಿ, ಎ.ಎಸ್., ೧೯೯೯, *ವಿಜಯನಗರದ ಇತಿಹಾಸ,* ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ

ನರಸಿಂಹಮೂರ್ತಿ, ಎ.ವಿ., ಸುರೇಶ್, ಕೆ.ಎಮ್., ವಿಜಯ್ ಪೂಣಚ್ಚ ತಂಬಂಡ, ಬಸವರಾಜ್, ಕೆ.ಆರ್., (ಸಂ). *ಹೇಮಕೂಟ,* ಭಾಗ-೨, ಭಾರತೀಯ ಕಲಾ ಪ್ರಕಾಶನ, ದೆಹಲಿ

ನಾಗರಾಜು, ಹೆಚ್.ಎಮ್., ೧೯೯೯, *ವಿಜಯನಗರದ ಇಮ್ಮಡಿ ದೇವರಾಯ,* ಸಂವಹನ, ಈವನಿಂಗ್ ಬಜಾರ್ ಹಿಂಭಾಗ ಶಿವರಾಂಪೇಟೆ, ಮೈಸೂರು

ನಾರಾಯಣ, ಪಿ.ವಿ., ೨೦೦೮, *ವಚನ ಸಾಹಿತ್ಯ ಒಂದು ಸಾಂಸ್ಕೃತಿಕ ಅಧ್ಯಯನ,* ವಸಂತ ಪ್ರಕಾಶನ, ಬೆಂಗಳೂರು

ನಾರಾಯಣ, ಕೆ.ವಿ., ೨೦೦೦, (ಸಂ), *ವ್ಯಕ್ತಿನಾಮಗಳು ಸ್ವರೂಪ ಮತ್ತು ವಿಶ್ಲೇಷಣೆ,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ನಾರಾಯಣ, ಕೆ.ವಿ., ೨೦೦೭, *ಕನ್ನಡ ಜಗತ್ತು ಅರ್ಧಶತಮಾನ,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ನಾರಾಯಣ, ಕೆ.ವಿ., ಮತ್ತು ಇತರರು ೨೦೦೦, *ಭಾಷೆ,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ನಾಗೇಗೌಡ, ಹೆಚ್.ಎಲ್., ೧೯೬೬, *ಪ್ರವಾಸಿ ಕಂಡ ಇಂಡಿಯಾ,* ಸಂಪುಟ-೨, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ನೇಲಟೂರು ವೆಂಕಟರಮಣಯ್ಯ, (ತೆಲಗು ಮೂಲ), ಗುರುಮೂರ್ತಿ ಪೆಂಡಕೂರು, (ಅನು), ೨೦೦೭, *ಶ್ರೀ ಕೃಷ್ಣದೇವರಾಯ,* ಪ್ರಸಾರಾಂಗ ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ

ನಾಗರಾಜ ರಾವ್, ಎಂ.ಎಸ್., (ಸಂ), ಪ್ರಕಾಶ್, ಎಂ.ಪಿ., ಸೀತಾಲಕ್ಷ್ಮೀ ಶ್ರೀನಿವಾಸ, (ಅನು), ಅಲೆಕ್ಸಾಂಡರ್, ಜೆ.ಗ್ರಿನ್.ಲಾ, (೧೮೫೬), ಜಾನ್ ಗಾಲಿಂಗ್ಸ್, (೧೯೮೩), ೧೯೮೮, *ಪ್ರವಾಸಿ ಕಂಡ ವಿಜಯನಗರ,* ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ

ನಾಗೇಶ್‌ರಾವ್, ಕೆ., ಡಿ.ಆರ್., ಅನಂತರಾಮು., ೧೯೯೯, *ಪ್ರಾಚೀನ ಭಾರತದಲ್ಲಿ ಲೋಹ ತಂತ್ರಜ್ಞಾನ*, ಬಾಲ್ಯದಕೆರೆ ಪ್ರಕಾಶನ, ಮಂಡ್ಯ

ನಿರಂಜನ, (ಪ್ರಸಂ)., ೧೯೭೩, ಜ್ಞಾನಗಂಗೋತ್ರಿ, *ಕಿರಿಯರ ವಿಶ್ವಕೋಶ*, ಕರ್ನಾಟಕ ಪಬ್ಲಿಷಿಂಗ್ ಹೌಸ್, ಲಿಮಿಟೆಡ್, ಬೆಂಗಳೂರು

ಪಂಡಿತ, ಎಸ್. ಬಸಪ್ಪ, ೧೯೬೬, *ಲಕ್ಕಣದಂಡೇಶ್ವರನ ಶಿವತತ್ವ ಚಿಂತಾಮಣಿ*, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಪಂಚಮುಖಿ, ಆರ್.ಎಸ್., ೧೯೫೩, *ಅಹೋಬಲನ ವಿರೂಪಾಕ್ಷ ವಸಂತೋತ್ಸವ*, ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪರಮಶಿವಮೂರ್ತಿ, ಡಿ.ವಿ., ೧೯೯೯, *ಕನ್ನಡ ಶಾಸನ ಶಿಲ್ಪ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪಾಂಡುರಂಗಬಾಬು, ಡಿ., ೨೦೦೦, *ಪಾಂಚಾಳ ವೃತ್ತಿ ಪದಕೋಶ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರಕಾಶ್, ಎಂ.ಪಿ., *ವಿಜಯನಗರ ಸಾಮ್ರಾಜ್ಯ*, ಡೊಮಿಂಗೋಸ್ ಪಿಯಾಸನ ಕಥಾನಕ ಲಹರಿ, ಪ್ರಕಾಶನ ಹೂವಿನ ಹಡಗಲಿ

ಪ್ರಶಾಂತ, ಹೆಚ್.ಡಿ., ೨೦೦೦, (ಸಂ), *ಜನ ಸಮುದಾಯ ಸಂಪುಟ*, ಕರ್ನಾಟಕ ರಾಜ್ಯಕೋಶ–೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರಭಾಕರ, ಎ.ಎಸ್., *ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು*, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪುಲುಮತಿ ಶ್ಯಾಮರಾವ್, ೧೯೫೬, *ವಿಜಯನಗರದ ಕಲೆ ಮತ್ತು ಸಾಹಿತ್ಯ*, ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಮೈಸೂರು ಸರ್ಕಾರ, ಬೆಂಗಳೂರು

ಪುರುಷೋತ್ತಮ ಬಿಳಿಮಲೆ, ೧೯೯೭, *ಕೊರಗರ ಸಂಸ್ಕೃತಿ*, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಬೋರಲಿಂಗಯ್ಯ, ಹಿ.ಚಿ., ೧೯೯೬, *ಕರ್ನಾಟಕ ಜನಪದ ಕಲೆಗಳ ಕೋಶ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಬೋರಲಿಂಗಯ್ಯ, ಹಿ.ಚಿ., ೧೯೯೭, (ಸಂ), *ಮಂಟೇಸ್ವಾಮಿ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಬೆನಕನಹಳ್ಳಿ, ಜಿ. ನಾಯಕ, ೧೯೮೬, *ಕರ್ನಾಟಕದ ಕರಕುಶಲಕಲೆಗಳು*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಭಟ್, ಎಸ್.ಆರ್., ೧೯೮೮, *ಪ್ರಾಚೀನ ಭಾರತದಲ್ಲಿ ಜನಜೀವನ*, ನವಕರ್ನಾಟಕ ಪ್ರಕಾಶನ, ಬೆಂಗಳೂರು

ಬೆಟಗೇರಿ ಕೃಷ್ಣಶರ್ಮ, ೧೯೮೩, *ಕರ್ನಾಟಕ ಜನಜೀವನ*, ಪ್ರಥಮ ವಿಶ್ವಕನ್ನಡ ಸಮ್ಮೇಳನ ಸಾಹಿತ್ಯ ಮಾಲೆ, ಕರ್ನಾಟಕ ಸರ್ಕಾರ, ಬೆಂಗಳೂರು

ಭೂಸನೂರು ಮಠ, ಸಂ.ಶಿ., (ಸಂ). *ವಿಜಯ ಕಲ್ಯಾಣ* (ವಿಜಯನಗರ ಸಂಸ್ಕೃತಿಯ ಸಮಗ್ರ ದರ್ಶನ), ಮಹಾಕವಿ ಹರಿಹರ ಸ್ಮಾರಕ ಸಂಶೋಧನಾ ಕೇಂದ್ರ, ಶ್ರೀ ಜಗದ್ಗುರು ಕೊಟ್ಟುರು ಸ್ವಾಮಿ ಮಠ, ಹಂಪೆ

ಬಾಶಮ್, ಎ.ಎಲ್., (ಇಂಗ್ಲೀಷ್ ಮೂಲ), ಮಿರ್ಜಿ, ಡಿ.ಆರ್., (ಕನ್ನಡಕ್ಕೆ), ೨೦೧೨, *ಪ್ರಾಚೀನ ಭಾರತವೆಂಬ ಅದ್ಭುತ*, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು

ಭಾನುಮತಿ, ವೈ.ಸಿ., ೧೯೯೪, *ಮಲೆನಾಡು ಶೈವ ಒಕ್ಕಲಿಗರು*, ಜಾನಪದೀಯ ಅಧ್ಯಯನ, ಕೇಶವ ಪ್ರಕಾಶನ, ಮೈಸೂರು

ಮಹಾದೇವ ಮಾ ಜಗತಾಪ, ೨೦೦೪, *ಕರ್ನಾಟಕ ಜನಪದ ಚಿತ್ತಾರಗಳು ಹಾಗೂ ಶಿಲ್ಪಗಳು*, ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು

ಮಹಾದೇವಿ, ಎಂ.ಎ., ೧೯೮೮, *ಮೈಸೂರು ರಾಜ್ಯದ ಸಾಮಾಜಿಕ ಜೀವನ*, ಕಮಲ ಪ್ರಕಾಶನ, ಮೈಸೂರು

ಮಲ್ಲಾಪುರ, ಬಿ.ವಿ., ೨೦೦೦, *ಪ್ರೌಢದೇವರಾಯ*, ವಿಜಯ ಕಲ್ಯಾಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಲ್ಲಿಕಾರ್ಜುನ, ಯು., ೨೦೦೮, *ಗರಡಿ ಸಂಪ್ರದಾಯ*, ಅಪರಂಜಿ ಪ್ರಕಾಶನ, ಗುಲಬರ್ಗ

ಮಹಾಲಿಂಗಂ, ಟಿ.ವಿ., ೧೯೭೫, *ಅಡ್ಮಿನಿಸ್ಟ್ರೇಷನ್ ಅಂಡ್ ಸೋಷಿಯಲ್ ಲೈಫ್ ಅಂಡರ್ ವಿಜಯನಗರ, ಪಾರ್ಟ್-೨*, ಯುನಿವರ್ಸಿಟಿ ಆಫ್ ಮದ್ರಾಸ್

ಮಂಜುನಾಥ ಬೇವಿನಕಟ್ಟಿ, ೧೯೯೭, *ವಿಜಯನಗರದ ಸಾಂಸ್ಕೃತಿಕ ಆಯಾಮಗಳು*, ಶ್ರೀ ವಿದ್ಯಾವಿಜಯನಗರ ಹಂಪಿ ಹೆರಿಟೇಜ್, ಟ್ರಸ್ಟ್, ಆನೆಗೊಂದಿ.

ಮಲ್ಲಿಕಾರ್ಜುನ ಜೀವರಗಿ, ೨೦೦೩, *ಆದಿಬಣಜಿಗರು ಒಂದು ಅಧ್ಯಯನ*, ಶ್ರೀ ಶಾರದಾಂಬಿಕಾ ಪ್ರಕಾಶನ, ಶಹಪೂರ, ಗುಲಬರ್ಗಾ

ಮಲ್ಲಿಕಾರ್ಜುನ, ಕೆ., ಮಾಳಿ, ಬಿ.ಎಸ್., ಬಿರಾದಾರ, ಬಿ.ಎಸ್., ಅಶೋಕ ನರೋಡೆ, (ಸಂ), ಹಿರೇಮಠ ಬಿ.ಆರ್., ೨೦೧೨, *ಶಾಸನ ಅಧ್ಯಯನ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಹದೇವ, ಸಿ., ಸುಬ್ಬಣ್ಣ ರೈ, ಮತ್ತು ಮಾಧವ ಪೆರಾಜೆ, ೨೦೦೨, *ಹೊಸಪೇಟೆ ತಾಲೂಕು ದರ್ಶನ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಹದೇವ, ಸಿ., ೨೦೦೯, (ಸಂ), *ನೇಕಾರ ಸಂಸ್ಕೃತಿ ಆರ್ಥಿಕ ಸ್ಥಿತಿಗತಿ*, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಹೇಶ ತಿಪ್ಪಶೆಟ್ಟಿ, ೨೦೦೦, *ಇಳಕಲ್ ಸೀರೆ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

ಮೋಹನ್ ಕೃಷ್ಣ ರೈ, ಕೆ., ೨೦೦೪, *ಪ್ರಭುತ್ವ ಮತ್ತು ಜನತೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮೋಹನ್ ಕೃಷ್ಣ ರೈ, ಕೆ., ೨೦೦೬, *ವಸಾಹತುಪೂರ್ವ ಕರ್ನಾಟಕದ ನಗರ ಚರಿತ್ರೆ,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮೋಹನ್‌ಕೃಷ್ಣ ರೈ, ಕೆ., ೨೦೦೭, ವಸಾತುಶಾಹಿ ಮತ್ತು ನಗರೀಕರಣ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮೇತ್ರಿ, ಕೆ.ಎಂ., ೨೦೦೨, ,*ಬುಡಕಟ್ಟು ಕುಲಕಸುಬುಗಳು,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮರುಳಯ್ಯ, ಸಾ.ಶಿ., ೧೯೯೯, *ಕನ್ನಡ ಭಾಷೆಯ ಚರಿತ್ರೆ,* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ವಾಸುದೇವ ಬಡಿಗೇರ, ೧೯೯೭, *ಸಂಡೂರು ಪರಿಸರದ ಕಾರ್ತಿಕೇಯ ತಪೋವನ,* ಮಯ ಪ್ರಕಾಶನ, ಕಮಲಾಪುರ

ವಾಸುದೇವ ಬಡಿಗೇರ, ೨೦೧೨, *ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ,* ಭಾಗ-೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಾಸುದೇವನ್, ಸಿ.ಎಸ್., ೧೯೯೭, *ವಿಜಯನಗರ ಪಟ್ಟಣ ಮತ್ತು ಅದರ ಉಪನಗರಗಳು,* ವಿಜಯನಗರ ಅಧ್ಯಯನ, ಸಂಪುಟ-೨, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ವಸುಂಧರಾ ಫಿಲಿಯೋಜಾ, ೧೯೮೨, *ಅಳಿದುಳಿದ ಹಂಪೆ,* ಮನೋಲ್ಲಾಸ, ಬೆಂಗಳೂರು

ವಸುಂಧರಾ ಫಿಲಿಯೋಜಾ, ೧೯೮೦, *ವಿಜಯನಗರ ಸಾಮ್ರಾಜ್ಯ ಸ್ಥಾಪನೆ,* ಮನೋಲ್ಲಾಸ, ಪ್ರಕಾಶನ ಬೆಂಗಳೂರು

ವೃಷಬೇಂದ್ರಸ್ವಾಮಿ, ೧೯೮೭, *ಜಾನಪದ ದರ್ಶನ,* ಸಂಪುಟ-೧೦, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ವೆಂಕಟರಾಮಪ್ಪ, ಕೆ., ೧೯೭೪, *ಶ್ರೀಕೃಷ್ಣದೇವರಾಯನ ಕಾಲದ ಕರ್ಣಾಟಾಂಧ್ರ ಸಾಹಿತ್ಯ ಸಮೀಕ್ಷೆ,* ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ವೇಣು ಮಾಧವಶಾಸ್ತ್ರೀ ಜೋಶಿ, ೧೯೯೬, *ಸಂಸ್ಕೃತ ಸಾಹಿತ್ಯದಲ್ಲಿ ಉತ್ಸವಗಳು,* ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ವೆಂಕಟರಮಣಯ್ಯ, ಎನ್., (ಮೂಲ), ಗುರುಮೂರ್ತಿ ಪೆಂಡಕೂರು, (ಅನು), ೨೦೧೧, *ವಿಜಯನಗರ ಚರಿತ್ರೆ,* ಕುವೆಂಪು ಭಾಷಾಭಾರತಿ, ಪ್ರಾಧಿಕಾರ, ಬೆಂಗಳೂರು

ವೆಂಕಟಾಚಲ ಶಾಸ್ತ್ರೀ, ಟಿ.ವಿ., ೨೦೦೦, *ಮಲಕನಾಡು ಬ್ರಾಹ್ಮಣರು,* (ಸಮುದಾಯ, ಸಂಸ್ಕೃತಿ), ಮೂಲಕನಾಡು ಮಹಾಸಂಘ, ಬೆಂಗಳೂರು

ವೆಂಕಟರಮಣಯ್ಯ, ಟಿ.ವಿ., ೧೯೯೯, *ಕನ್ನಡ ಗಾದೆಗಳ ಕೋಶ,* ಸಮಾಜ ಪುಸ್ತಕಾಲಯ, ಧಾರವಾಡ

ವೆಂಕಟಸುಬ್ಬಯ್ಯ, ೧೯೭೭, (ಸಂ), *ಕನ್ನಡ ನಿಘಂಟು,* ೩ನೇ ಸಂಪುಟ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

ವೆಂಕಟರಂಗೋಕಟಿ, ೧೯೮೮೪, (ಅನು), *ಗೆಜೆಟಿಯರ್,* ಮುಂಬಾಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು, ಏಶಿಯನ್ ಎಜುಕೇಶನ್ ಸರ್ವಿಸಸ್, ಹೊಸದೆಹಲಿ

ರಹಮತ್ ತರಿಕೆರೆ, (ಸಂ), ೨೦೦೦, *ಧರ್ಮ,* ಕನ್ನಡ ವಿಶ್ವವಿದ್ಯಾಲಯ, ವಿಶ್ವಕೋಶ–೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ರಮೇಶ್, ಕೆ.ವಿ., ೧೯೬೮, *ತುಳುನಾಡಿನ ಇತಿಹಾಸ,* ಗೀತಾ ಬುಕ್‌ಹೌಸ್, ಬೆಂಗಳೂರು.

ರಮೇಶ್, ಕೆ.ವಿ., ೧೯೯೯, ತುಳುನಾಡಿನ ಇತಿಹಾಸ, ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಸಂಶೋಧನ ಕೇಂದ್ರ, ಗೀತಾ ಬುಕ್ ಹೌಸ್, ಮೈಸೂರು

ರೆಡ್ಡೆಪ್ಪ, ಕೆ., ೨೦೦೧, ಮೆಟಿರಿಯಲ್ ಕಲ್ಚರ್ ಡಿಪೆಕ್ಟಡ್ ಇನ್ ವಿಜಯನಗರ ಟೆಂಪಲ್ಸ್, ಭಾರತೀಯ ಕಲಾ ಪ್ರಕಾಶನ, ದೆಹಲಿ

ರಾಮರಾಜು, ಬಿ., (ಮೂಲ.ಸಂ), ಶ್ರೀರಾಮಭಟ್ಟ, (ಅನು), ಸುಮಿತ್ರಬಾಯಿ, ಬಿ.ಎನ್., (ಪ್ರಾಕೃತದ ಸಂಸ್ಕೃತರೂಪ), ೨೦೦೮, *ಶ್ರೀಕೃಷ್ಣದೇವರಾಯ ವಿರಚಿತ ಜಾಂಬವತಿ ಪರಿಣಯಂ,* ದ್ರಾವಿಡ ವಿಶ್ವವಿದ್ಯಾಲಯ, ಶ್ರೀನಿವಾಸವನಂ, ಕುಪ್ಪಂ

ರಾಜರಾಮ ಹೆಗಡೆ, (ಸಂ), ೨೦೦೪, *ಭಾರತೀಯ ಇತಿಹಾಸ,* ಸಮಾಜ ಮತ್ತು ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ರಾಜಪ್ಪ, ಡಿ.ಸಿ., ೨೦೦೭, *ಮೈಸೂರು ರಾಜ್ಯದಲ್ಲಿ ವಾಣಿಜ್ಯ ಮತ್ತು ಕರಕುಶಲ ಕಲೆಗಳು,* ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ

ರಾಮಚಂದ್ರರಾವ್, ಎಸ್.ಕೆ., ೧೯೮೫, *ಪುರಂದರ ಸಾಹಿತ್ಯ ದರ್ಶನ,* ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

ರಾಗೌ, ೧೯೯೮, (ಸಂ), *ಕಿಟ್ಟೆಲ್ ಕೋಶದ ಗಾದೆಗಳು,* ಡಿ.ವಿ.ಕೆ. ಮೂರ್ತಿ, ಮೈಸೂರು

ರಾಗೌ, ೨೦೦೩, (ಸಂ), *ಸರ್ವಜ್ಞನ ವಚನಗಳು,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ರಾಗೌ, ೨೦೦೧, (ಸಂ), *ನಮ್ಮ ಒಗಟುಗಳು,* ಡಿ.ವಿ.ಕೆ. ಮೂರ್ತಿ, ಮೈಸೂರು

ರಾಮಚಂದ್ರ, ಸಿ.ಎಸ್., ೧೯೯೨, *ಸಂಕೇತಿ: ಜನಾಂಗ ಸಂಸ್ಕೃತಿ ಮತ್ತು ಭಾಷೆ,* ಚೈತ್ರ ಪಲ್ಲವಿ ಪ್ರಕಾಶನ, ಮೈಸೂರು

ರಾಮಚಂದ್ರರಾವ್, ಬಿ., ೧೯೮೩, *ಕನ್ನಡ ಭಾಷೆ ಪ್ರಾದೇಶಿಕ ವೈವಿಧ್ಯ,* ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

ಲಕ್ಕಪ್ಪಗೌಡ, ಹೆಚ್.ಜೆ., (ಪ್ರಸಂ), ೨೦೦೦, *ಕರ್ನಾಟಕ ಬುಡಕಟ್ಟುಗಳು,* ಸಂಪುಟ–೨, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

ಲಕ್ಕಪ್ಪಗೌಡ, ಎಚ್.ಜೆ., ೧೯೯೭, (ಸಂ), *ಜಾನಪದ ಕೈಪಿಡಿ,* ಕರ್ನಾಟಕ ಪುಸ್ತಕ ಪ್ರಾಧಿಕಾರ, ಮೈಸೂರು

ಲಕ್ಷಣ್ ತೆಲಗಾವಿ, ೨೦೦೯, *ವಿಜಯನಗರದ ರಾಮಾನುಜಕೂಟಗಳು,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿಲ್ಯಂ ಮಾಡ್ತ, (ಪ್ರಸಂ), ಇಮ್ರಾಪುರ, ಎಸ್.ಜಿ., (ಸಂ), ೧೯೯೪, *ಜಾನಪದ ಸಾಹಿತ್ಯದರ್ಶನ*, ಭಾಗ–೧೬, ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೮, *ವಿಜಯನಗರ ಕಾಲದ ಸಂಸ್ಕೃತಿ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೬, *ಕರ್ನಾಟಕದಲ್ಲಿ ತಳವಾರಿಕೆ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೭, *ಬೇಟೆ ಮತ್ತು ಬೇಡರು*, ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ

ವೀರೇಶ್ ಬಡಿಗೇರ., ೨೦೦೭, *ಬಾಚಿಕಾಯದ ಬಸವಯ್ಯ:ವೃತ್ತಿ ಹಾಗೂ ತತ್ವ ಮೀಮಾಂಸೆ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ವೀರೇಶ್ ಬಡಿಗೇರ., ೨೦೧೦, *ಶಾಸನಗಳಲ್ಲಿ ಆಯಾಗಾರಿಕೆ ಪದ್ಧತಿ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿರೇಶ್ ಬಡಿಗೇರ., ೧೯೯೮, *ಅಡಿಗಲ್ಲು*, ಮಯ ಪ್ರಕಾಶನ, ಕಮಲಾಪುರ

ವಿಲ್‌ಡ್ಯೂರಾಂಟ್, ೨೦೦೭, *ನಾಗರೀಕತೆಯ ಕಥೆ ನಮ್ಮ ಪ್ರಾಚ್ಯ ಪರಂಪರೆ*, ಸಂಪುಟ–೧, ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, ಬೆಂಗಳೂರು

ವಿಲ್ಯಂಮಾಡ್ತ, (ಪ್ರಸಂ.), *ಸೋಮಶೇಖರ ಇಮ್ರಾಪೂರ*, ೧೯೯೦, ಕರ್ನಾಟಕ ಭಾರತಿ (ತ್ರೈಮಾಸಿಕ ಪತ್ರಿಕೆ), ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ವಿವೇಕ್ ರೈ, ಬಿ.ಎ., ೨೦೦೫, *ಪ್ರವಾಸಿ ಕಂಡ ವಿಜಯನಗರ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶೇಷಾಚಲವರ್ಮ, (ಅನು), ೧೯೯೦, *ಕನ್ನಡ ಮಹಾಭಾರತ*, ಆದಿಪರ್ವ–೨, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಶೈಲಾ, ಟಿ. ವರ್ಮ., ೨೦೦೨, *ತುಳುನಾಡಿನ ಸಾಂಸ್ಕೃತಿಕ ಅಧ್ಯಯನ*, ಜ್ಞಾನೋದಯ ಪ್ರಕಾಶನ, ಬೆಂಗಳೂರು

ಶೇಷಗಿರಿರಾವ್ ಎಲ್.ಎಸ್., ೧೯೯೪, *ಕಿರಿಯರ ಕರ್ನಾಟಕ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶೇಷಗಿರಿರಾವ್, ಎಲ್.ಎಸ್., (ಪ್ರಸಂ.), ೧೯೯೩, *ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ*, ಉದಯಭಾನು ಕಲಾಸಂಘ, ಬೆಂಗಳೂರು

ಶಿವಶಂಕರ, ಎಮ್.ಎಲ್., ಚನ್ನಬಸಪ್ಪ, ಎಸ್. ಪಾಟೀಲ, ೧೯೯೭, *ವಿಜಯನಗರ ಅಧ್ಯಯನ*, ಸಂಪುಟ–೩, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಶಿವರಾಮಯ್ಯ, ೨೦೧೨, *ವೇಶ್ಯೆಯರು ಮತ್ತು ಲೈಂಗಿಕ ಅಲ್ಪಸಂಖ್ಯಾತರು ನಡೆದು ಬಂದ ದಾರಿ,* ಸೃಷ್ಟಿ ಪಬ್ಲಿಕೇಷನ್ಸ್, ಬೆಂಗಳೂರು

ಷೇಕ್ ಆಲಿ, ಬಿ., ೧೯೯೭, *ಕರ್ನಾಟಕ ಚರಿತ್ರೆ,* ಸಂಪುಟ-೩, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶ್ರೀಕಂಠಯ್ಯ, ಕೆ., ೧೯೮೩, *ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ,* ಗೀತಾಬುಕ್ ಹೌಸ್, ಮೈಸೂರು

ಶ್ರೀಕಂಠಶಾಸ್ತ್ರಿ, ಎಸ್., ೨೦೦೬, *ಭಾರತೀಯ ಸಂಸ್ಕೃತಿ,* ಪ್ರಕಾಶಕರು ಸುವರ್ಣ ಕರ್ನಾಟಕ ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

ಶ್ರೀಗೊಂಡೇಕರ್, ಜಿ.ಕೆ., ೧೯೩೯, (ಸಂ), *ಮಾನಸೋಲ್ಲಾಸ ಆಫ್ ಕಿಂಗ್, ಸೋಮೇಶ್ವರ,* ಸಂಪುಟ-೨, ಬರೋಡಾ ಓರಿಯಂಟಲ್ ಇನ್ಸ್‌ಟ್ಯೂಟ

ಶ್ರೀಲಕ್ಷ್ಮಿ ಕಾತರಗದ್ದೆ, ೧೯೯೬, *ವುಮನ್ ಇನ್ ವಿಜಯನಗರ,* ಡೆಲ್ಟಾ ಪಬ್ಲಿಷಿಗ್ ಹೌಸ್, ಬೆಂಗಳೂರು.

ಸಂಪದ್ಗಿರಿರಾವ್, ಕೆ., ೧೯೯೨, *ಕರ್ನಾಟಕ ಪರಂಪರೆ,* ೧-೨, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು.

ಸಜ್ಜನ, ಜಿ.ಟಿ., ೨೦೦೪, (ಸಂ), *ಗಾಣಸಿರಿ,* ಅಖಿಲ ಭಾರತ ಗಾಣಿಗರ ಸಂಘ ರಿ. ಜಿಲ್ಲಾ ಘಟಕ, ಬಿಜಾಪುರ

ಸದಾನಂದ ಕನವಳ್ಳಿ, (ಅನು). ರಾಬರ್ಟ್ ಸೆವೆಲ್, (ಮೂಲ)., ೨೦೦೬, *ಮರೆತುಹೊದ ಮಹಾಸಾಮ್ರಾಜ್ಯ ವಿಜಯನಗರ,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಾಂಬಮೂರ್ತಿ, ೨೦೦೦, *ನೇಕಾರರ ವೃತ್ತಿ ಪದಕೋಶ,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸರಸ್ವತಿ, ಎನ್., ೨೦೦೮, *ವಿಜಯನಗರ ಕಾಲದ ಮಹಿಳೆಯರ ಕೊಡುಗೆಗಳು,* ಸಿಂಚು ಮಲ್ಟಿಗ್ರಾಫ್, ವಿದ್ಯಾರಣ್ಯಪುರ, ಮೈಸೂರು-೮

ಸರಸ್ವತಿದೇವಿ, ಎಸ್. ಭಗವತಿ., ೨೦೦೭-೮, *ಹಂಪೆಯ ಶಾಸನಗಳು ಒಂದು ಅಧ್ಯಯನ,* ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ

ಸುಚೇತಾ ನವರತ್ನ, ೨೦೧೦, (ಅನು), *ಅಚ್ಯುತರಾಯಾಭ್ಯುದಯಂ,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸೂರ್ಯನಾಥ ಕಾಮತ್, ೨೦೦೯, *ವಿಜಯನಗರದ ಕೃಷ್ಣದೇವರಾಯ,* ಐ.ಬಿ.ಹೆಚ್., ಪ್ರಕಾಶನ, ಬೆಂಗಳೂರು

ಸಾಲತೊರೆ, ಬಿ.ಎ., ೧೯೩೪, *ಸೋಷಿಯಲ್ ಅಂಡ್ ಪೊಲಿಟಿಕಲ್ ಲೈಫ್ ಇನ್ ದ ವಿಜಯನಗರ ಎಂಪಾಯರ್,* ಭಾಗ-೨, ಬಿ.ಜಿ.ಪಾಲ್, ಅಂಡ ಕಂಪನಿ, ಮದ್ರಾಸ್

ಸಣ್ಣಯ್ಯ, ಬಿ.ಎಸ್., (ಸಂ), ೧೯೬೩, *ಕನಕದಾಸರ ಮೋಹನ ತರಂಗಿಣಿ ಸಂಗ್ರಹ,* ಗೀತಾಬುಕ್ ಹೌಸ್, ಮೈಸೂರು

ಸೂರ್ಯನಾರಾಯಣ ರಾವ್, (ಮೂಲ), ಬಾಲಸುಬ್ರಹ್ಮಣ್ಯ, (ಕನ್ನಡಕ್ಕೆ). ೨೦೦೦, *ಮರೆಯಲಾಗದ ಮಹಾಸಾಮ್ರಾಜ್ಯ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ವಾಮಿ ಹರ್ಷಾನಂದ, (ಆಂಗ್ಲ), ವಿಶ್ವನಾಥ, ಎಚ್.ವಿ., (ಕನ್ನಡ ಅನು), ೨೦೧೧, *ಪ್ರಾಚೀನ ಮತ್ತು ಮಧ್ಯಯುಗಿನ ಹಿಂದೂ ಸಂಸ್ಕೃತಿ*, ಶ್ರೀನಿತ್ಯಾನಂದ ಪ್ರಕಾಶನ, ಬೆಂಗಳೂರು

ಸೀತಾರಾಮಯ್ಯ ಎಂ.ವಿ., (ಪ್ರಸಂ.). ಆಚಾರ್ಯ, ವಿ.ಎಸ್.ಎಸ್., ೧೯೮೩, *ಶ್ರೀಕೃಷ್ಣದೇವರಾಯನ ದಿನಚರಿ*, ಬಿ.ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು

ಸುನಂದಮ್ಮ, ಆರ್., ೧೯೯೪, *ದಾಸಸಾಹಿತ್ಯದಲ್ಲಿ ಜಾನಪದ ಅಂಶಗಳು ಒಂದು ಅಧ್ಯಯನ*, ಲಾವಣ್ಯ ಮುದ್ರಾಣಾಲಯ, ಬೆಂಗಳೂರು.

ಸೋಮಶೇಖರ್, ಎಸ್.ವೈ., ೧೯೯೭, *ಹಂಪೆಯ ಬಜಾರುಗಳು*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸೋಮಶೇಖರ್, ಎಸ್.ವೈ., ೨೦೦೯, *ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧ ನೀತಿ*, ಸಂಚಿಕೆ ಪ್ರಕಾಶನ, ಚಿತ್ರದುರ್ಗ

ಸೋಮಶೇಖರ್, ಎಸ್.ವೈ., ಕರ್ನಾಟಕದ ಬಿರುದಾವಳಿಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

ಹಳಕಟ್ಟಿ, ಫ.ಗು., ೧೯೬೮, *ಹರಿಹರನ ನಾಲ್ಕು ರಗಳೆಗಳು*, ಸಮಾಜ ಪುಸ್ತಕಾಲಯ, ಧಾರವಾಡ

ಹೂಗಾರ್, ಎಸ್.ಕೆ., ೧೯೭೭, *ಕಲೆ ಮತ್ತು ಹಬ್ಬ*, ಕನ್ನಡ ಅಧ್ಯಯನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಎಂ.ಫಿಲ್, ಪ್ರಬಂಧಗಳು

ಅನುಪಮ, ಬಿ., ೨೦೦೯, *ಹೊಸಪೇಟೆ ನಗರದ ವರ್ತಕ ಸಮುದಾಯಗಳು: ಚಾರಿತ್ರಿಕ ಅಧ್ಯಯನ*, ಎಂ.ಫಿಲ್, ಸಂಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶ್ರೀನಿವಾಸಚಾರಿ, ಬಿ., ೨೦೦೪, *ಬಡಗಿತನದ ದೇಶೀಯ ತಂತ್ರಜ್ಞಾನ*, ಎಂ.ಫಿಲ್., ಸಂಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲಕ್ಷ್ಮಣ್ ಎಲ್.ಡಿ., ೨೦೧೩, *ಹೊಸಪೇಟೆ ಪರಿಸರದ ಕಬ್ಬಿಣದ ಕುಲುಮೆಗಳು*, ಎಂ.ಫಿಲ್, ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪಿಹೆಚ್.ಡಿ ಮಹಾಪ್ರಬಂಧಗಳು

ತಿಮ್ಮಾರೆಡ್ಡಿ, ಎಸ್.ವೈ., ೨೦೧೦, *ಕುಲಕಸುಬುಗಳ ಆಧುನಿಕತೆ*, ಪಿಹೆಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರಜ್ಞಾ, ಕೆ.ವಿ., ೨೦೧೧, *ನೇಕಾರ ಸಮುದಾಯ: ಸಾಮಾಜಿಕ ಮತ್ತು ಆರ್ಥಿಕ ಅಧ್ಯಯನ*, ಪಿಹೆಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶೇಖರಾಚಾರಿ, ಕೆ., ೨೦೧೦, *ಪಾಂಚಾಳರ ಭಾಷೆ ಮತ್ತು ಸಂಸ್ಕೃತಿ*, ಪಿಹೆಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶ್ರೀನಿವಾಸಚಾರಿ, ಬಿ., ೨೦೦೮, *ಪಾಂಚಾಳ ಜಾನಪದ*, ಪಿಹೆಚ್.ಡಿ., ಅಪ್ರಕಟಿತ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಹಂದ್ರಾಳ ಮರ್ಕಂಡೇಯ, ೨೦೦೮, *ಬಳ್ಳಾರಿ ಜಿಲ್ಲೆ ಗಾಣಿಗರು: ಒಂದು ಅಧ್ಯಯನ*, ಪಿಹೆಚ್.ಡಿ., ಮಹಾಪ್ರಭಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪನ್ನಂಗದರ, ೨೦೦೪, *ಮೇದಾರ ಸಂಸ್ಕೃತಿ ಮತ್ತು ವಾಣಿಜ್ಯ ಅಧ್ಯಯನ*, ಪಿಹೆಚ್.ಡಿ., ಮಹಾಪ್ರಬಂಧ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಶಾಸನ ಸಂಪುಟಗಳು

ಹಿರೇಮಠ, ಆರ್.ಸಿ., ಕಲಬುರ್ಗಿ, ಎಂ.ಎಂ., ೧೯೭೪, *ಕನ್ನಡ ಶಾಸನ ಸಂಪದ*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ವಿವಿಧ ಶಾಸನ ತಜ್ಞರು, ೧೯೭೩-೧೯೮೪, *ಎಪಿಗ್ರಾಪಿಯಾ ಕರ್ನಾಟಕ*, ೧-೮, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಲೂಯಿ ರೈಸ್ ಮತ್ತು ಇತರರು, *ಎಫಿಗ್ರಾಪಿ ಕರ್ನಾಟಿಕ*, ೧-೧೬, ಆರ್ಕಿಯಲಾಜಿಕಲ್ ಸರ್ವೆ ಆಫ್ ಮೈಸೂರು, ಬೆಂಗಳೂರು.

ಸೌತ್ ಇಂಡಿಯಾನ್ ಇನ್ಸ್‌ಕ್ರಿಪ್ಸ್‌ಷನ್ಸ್ ೧-೨೦, ೧೮೮೬-೧೯೫೮, ಗವರ್ನ್‌ಮೆಂಟ್ ಆಫ್ ಇಂಡಿಯಾ ಸೆಂಟ್ರಲ್ ಪಬ್ಲಿಕೇಶನ್ ಬ್ರಾಂಚ್, ಕಲ್ಕತ.

ಲೇಖನಗಳು

ಗಂಗಾಧರಾಚಾರ್, ಎಚ್.ಎಚ್., ವಿಶ್ವಕರ್ಮದ ಶಬ್ದಕೋಶ, ಸಾಧನೆ, ಸಂಪುಟ-೧೫, ಸಂಚಿಕೆ-೧, ೧೯೮೬

ದೇವಾನಂದ ಮಾಲಗತ್ತಿ, ಚಮ್ಮಾರರು ಮತ್ತು ಅವರ ಉಪಕರಣಗಳ ವಿಚಕ್ಷಣನೋಟ, ಸಾಧನೆ, ಸಂಪುಟ-೧, ಸಂಚಿಕೆ-೧, ೧೯೯೦

ಮಹೇಶ್ವರಯ್ಯ, ಎಚ್.ಎಂ., ಮಲೆನಾಡಿನ ಕೃಷಿಕರ ವೃತ್ತಿ ಪದಕೋಶ, ಕರ್ನಾಟಕ ಭಾರತಿ, ಸಂಪುಟ-೧೮, ಸಂಚಿಕೆ-೧, ೧೯೯೦

ಶಿವಾನಂದ, ವಿ., ಒಕ್ಕಲುತನ ವೃತ್ತಿಪದಕೋಶ, ಕರ್ನಾಟಕ ಭಾರತಿ, ಸಂಪುಟ-೧೧, ಸಂಚಿಕೆ-೧, ೧೯೮೬

ನ್ಯೂ ಎನ್ ಸೈಕ್ಲೋಪಿಡಿಯಾ, ೧೭೬೮, *ಬ್ರಿಟಾನಿಕಾ*, ಸಂಪುಟ-೪, ಚಿಕಾಗೊ ವಿಶ್ವವಿದ್ಯಾಲಯ, ಚಿಕಾಗೊ.

ದ ಬುಕ್ ಆಫ್ ದುರತ್ತ ಬಾರ್ಬೂಸಾ, ೧೯೧೬, ಸಂಪುಟ-೨, ಟ್ರಾನ್ಸ್‌ಲೇಟೆಡ್ ವಿತ್ ನೋಟ್ಸ್, ಬೈಲಾಂಗ್ಸ್, ವರ್ಕಡ್ಯಾನ್ಸನ್, ಲಂಡನ್.

ಇಲಿಯಟ್, ಹೆಚ್.ಎಮ್., ಅಂಡ್ ಡಾಸನ್ ಜಾನ್, *ದ ಹಿಸ್ಟರಿ ಆಫ್ ಇಂಡಿಯಾ ಆನ್ ಟೋಲ್ಡ್, ಬೈ ಇಟ್ಸ್ ಹಿಸ್ಟಾರಿಯನ್ಸ್*, ಸಂಪುಟ-೮.

ಮರ್ಗಾನ್ ಕಿನಿತ್, ಅಂಡ್ ಮಿಲಿನಿಟ್ ವಿಲಿಯಂ, ೧೯೫೫, ದ ಲಿವಿಂಗ್ ಸ್ಟೇಜ್, ನ್ಯೂಜರ್ಸಿ.

ವಿಜಯನಗರ ಅಧ್ಯಯನಗಳು, ಸಂಪುಟ-೧-೧೮, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶಾನಾಲಯ, ಮೈಸೂರು.

English Books

Anual Reports on Indian Epigraphy

Anual Reports on south Indian Epigraphy

Anual Reports of the Mysore Archaeological Department.

Ayyangar S.K.,(Ed), 1919. Sources of Vijayanagara History, Univer sity Historical Series, Madras.

Anna L. Dallapiccola, (Ed), 1985, Vijayanagara: City and Empire-two Volumes, (Stuttgart) Franz Steiner Verlag Wiesbaden, CMBH

Anna L. Dallapiccola, Anila Verghese., 1998, Manohar American In stitute of Indian Studies, New Delhi.

Altekar A.S., 1927, History of Village Communites in Western India, Bombay.

Bylongs workdanson., (Translate),1916, The book of durrthe barbosa, Vol-2, London

Burton Stein, 1994, The New Cambridge history of India Vijayanagara, New Delhi.

Chakravarthi P.C., 1972, The Art of war in Ancient India, Oriental Publishing House, Delhi.

Epigraphica Indica, 1983, published by Director General, Archaeo logical Survey of India, Janapath, New Delhi.

Elliot H.M., And Dowson John, History Of the India on Told by Histostorians Vol-8

Heras H., 1927, The Aravidu dynasty of Vijayanagara, B.G Paul and Co, Madaras.

Heras H., 1980, South India under the Vijayanagar Empire, Vol-I, Cosmo Publication, New Delhi.

Hayavadana Rao C., 1930, Mysore Gazetter, Vol-II, Part-III, Govern ment of Mysore, Bangalore.

Ismail K.,1984, Karnataka Tempels, Sandeep Prakashna, New Delhi.

Joshi S.K., 1985, Defence Architecture in early Karnataka, Sandeep Prakashan, Delhi.

Jawaharlal hundo., 1978 Current Trends In Floker, Institute of Kannada Studies.

Joystna K Kamath., 1980 Social Life in Medval Karnataka, Abhinava Publication, New Delhi.

Krishna Ayangar A.N.,(Ed), 1941, Achutarayabhudayam of Rajanatha Dindima, Adyar Library.

Konduri Sarojini Devi, 1990, Religion in Vijayanagara Empire, Ster ling publishers private limited.New Delhi.

Krishnamacharulu C.R., (Ed) 1939 South Indian Epigraphy, Anual Report.

Karmakar D.P.,1974, A Cultural History Of Karnataka, Karnataka Vidya Vardhka Sangha, Dharwar.

Longhurst A.H., 1982, Hampi Ruins, Asian Educational Series, Delhi.

Lakshinarayanarao, (Ed) 1975, Bombay Karnataka Inscriptions.Vol-3.

Madho P. Patil., 1999, Court Life under The Vijayanagara Rulers, B.R. Publishing Corporation, Delhi.

Mahalingam T.V., 1969-76, Administration and Social life under Vijayanagar, 2 vols, Madras University.

Mahalingam T.V., 1951, Economic life in the Vijayanagara Empire, Madras.

Mahalingam T.V., 1967, South Indian Polity, University of Madras, Madras.

Majumdhar B.K., 1960,The Military System in Ancient india,F.K.L.M. pvt. Ltd.

Meera Sing, 1978, Medieval History of India, Vikas publishing House, New Delhi.

Muzoomdar R.C.,(Ed), 1960, History and Culture of indian people, Vol- VI, VII, Bharatiya Vidya Bhavan, Delhi.

Narasimha Murthy A V., Suresh K.M., Poonacha K.P., Basavaraj K.R.,(Editres), Hemakuta, Bharatiya Kala Prakashn, Delhi.

Nilakanta Sastri K.A., Venkata Ramanayya N., 1946, *Further Sources of Vijayanagara History,* Madras.

Nilakanta Shastri K.A., 1971, A history of South india, Oxford University Press.

Noboru Karashima, 1992, South Indian Socity under Vijayanagara rule, Oxford University press, New Delhi.

panchamuki R.S.,(Ed), *Karnataka Inscriptions, 5 Vols.*, Dharwad.

Panchamuki, (Ed), 1941, Karnataka Inscriptions, Vols 1.2.Kannada Re search Office, Dharwar.

Rajashekara S., 1985, Master pisess of Vijayanagara Art, Bombay.

Reddeppa K., 2001, Material culture depicted in Vijayanagara tem ples, Bharatiya Kala Prakashan, Dilhi.

Ramasharma M.H., 1980, The History of Vijayanagara Empire, Vol-II, Bombay.

Saletore B.A., 1934, Social And political life in the vijayanagara Empire, Vol,2, B.G. Paul and Co, Publisher, Madras.

Saletore R.N., 1982, Vijayanagara Art, Sandeep Prakashna, Delhi.

Srigondekar G.K., (Ed), 1939, Manasollasa of King Someshwara, Vol-II, Orintial Institute, Boroda.

Srilakshmi Kataragadde. 1996, women in Vijayanagara, Devya Publishing House, Bangalore.

Sewell, Robert, 1962, Forgotton Empire, National Book Trust, Delhi.

Suryanarayan Rao, 1905, A history of Vijayanagara, The Never to be Forgotten Empire, Addison and Co, Madras.

[illegible]
[illegible]

South Indian Inscriptions.

Suryakanth, (Translate),1970, Varadambikaparinaya of Thirumalamba, Chowkhamba Publication, Varanasi.

Thiruvenkatachari S.,(Ed), 1957, Madhurvijayam of Gangadeve, Annamalai University.

Venkataramanayya N., 1946, Further Sources of Vijayanara History, Madaras.

Venkataramanayya N., 1935, Studies in the History of Third Dynasty of Vijanagara, University of Madras.

Venkataratnam A.V.,1972, Local Government in the Vijayanagar Em pire, Mysore University.

Venkataranam A.V., 1972, Local Government in the Vijayanara Empire, Mysore University.

ಪಾರಿಭಾಷಿಕ ಪದಕೋಶ

ಅಂಬರ	:	ಬಟ್ಟೆ
ಅಂಡೆಯ	:	ಪಾತ್ರೆ
ಆಲವಟ್ಟ	:	ಬೀಸಣಿಕೆ/ಬಿಜ್ಜಣಿಗೆ
ಅವಿಪಾಲ	:	ಕುರಿಗಾಹಿ
ಅಯಸ್ಕಾರ	:	ಕಂಚುಗಾರ
ಅಗಸ	:	ಮಡಿವಾಳ
ಅಟ್ಟಕ್ಕೇಣಿ	:	ಕಾಲು ಮುರಿದವರಿಗೆ ಊರುಗೋಲು
ಆಯಾಗಾರ	:	ಹುಟ್ಟೂರಿನ ಸೇವಕ
ಕುಂಭಕಾರ	:	ಕುಲಾಲ–ಕುಂಬಾರ
ಕೈದುಗಾರ	:	ಕರ್ಮಕಾರ–ಕಮ್ಮಾರ,ಕಂಬಾರ
ಕುಂದಣ	:	ಬಂಗಾರ
ಕಟ್ಟೆಗೆಗಾರ	:	ಪ್ರತಿಹಾರ/ದ್ವಾರಪಾಲಕ
ಕಂಚುಕ	:	ನಿಲುವಂಗಿ
ಕಣೆ/ಕಣಗಿ	:	ಗಾಡಿಗೆ ಹಾಕುವ ಬಿದಿರಿನ ಗೂಟ
ಕಾಲು	:	ಚಕ್ರದ ಕಾಲುಗಳು
ಕಿರ್ಗಾಣಿಗರು	:	ಮರದ ಗಾಣದಿಂದ ಎಣ್ಣೆ ತೆಗೆಯುವವರು
ಕೌದಿ	:	ಬಟ್ಟೆಗಳನ್ನು ಹೊಲೆಯುವವ
ಕೈವರ್ತ	:	ಅಂಬಿಗ
ಕುರುಬರು	:	ಹಾಲುಮತದವರು
ಕಲ್ಲುಕುಟಿಕೆ	:	ಶಿಲ್ಪಿ
ಚಿಪ್ಪಿಗ	:	ಸಿಂಪಿಗ
ದಸರಿ	:	ರೇಶಿಮೆಬಟ್ಟೆ
ದೇವಾಂಗ	:	ರೇಶಿಮೆ ಬಟ್ಟೆ
ದೇಶಿಗ	:	ಹಿರಿಯ, ಮಾರ್ಗದರ್ಶಕ
ಪಟ್ಟಾವಳಿ	:	ರೇಶಿಮೆಯ ಚೀಲ
ಪನ್ನೆ	:	ಕೂದಲೂ ಕ್ಷೌರದ ಕಟ್ಟು
ಪಾಠೀನ	:	ಮೀನು
ಮಂಟಿಗೆ	:	ಕಾಲುಂಗರ/ಕಾಲುಪಿಲ್ಲೆ
ಮರಕಾಲರು	:	ಹಡಗಿನ ವ್ಯಾಪಾರಿ
ರವಿಸಿದ್ಧಾಂತ	:	ಜ್ಯೋತಿಷ್ಯ
ವಾಣಿಜ	:	ವ್ಯಾಪಾರಿ/ಬಣಜಿಗ
ತಕ್ಷನ್	:	ಬಡಗಿ
ತಂತುವಾಯ	:	ನೇಕಾರ
ತಳಾರ	:	ತಳವಾರ
ತಡಿ	:	ದೋಣ್ಣಿ, ಹರಿವಾಣ
ಸಗ್ಗಳ	:	ನೀರುತುಂಬುವ ಚರ್ಮದ ಚೀಲ

ಸಡ್ಡೆ	:	ರಂಧ್ರವಿರುವ ಬಿದಿರಿನ ಕೋಲು
ಸಮಾಗಾರ	:	ಚರ್ಮಗಾರ
ಸೊನ್ನಾರ	:	ಅಕ್ಕಸಾಲಿಗ
ಸಿಂಗಾಡಿ	:	ಬಿಲ್ಲು
ಸಿಂಜಿನಿ	:	ಬಿಲ್ಲಿನ ಹೆದೆ
ಬಾರಿಕೋಲು	:	ಎತ್ತುಗಳನ್ನು ಹೊಡೆಯಲು ಬಳಸುವ ಕಟ್ಟಿಗೆ
ಮಿಣಿ	:	ಚರ್ಮದ/ಕತ್ತದ ಹಗ್ಗ
ಪಟ್ಟಗಣ್ಣಿ	:	ನೊಗ ಹಾಗೂ ಎತ್ತಿನ ಕೊರಳಿಗೆ ಕಟ್ಟುವ ಪಟ್ಟಿ
ಪೊಲೆಯರು	:	ಹೊಲೆಯರು
ಬೆಸ್ತ	:	ಮಿನುಗಾರ
ವಾಲೀಕಾರ	:	ಓಲೆಕಾರ
ಜೀರರು	:	ಹೂಗಾರರು
ವಿಪ್ರ/ದ್ವಿಜ	:	ಬ್ರಾಹ್ಮಣ
ಜ್ಯೋತಿಪನರು/ ಜ್ಯೋತಿನಗರರು	:	ದೀಪದ ನಗರದ ಜನ
ಪೇಶಕಾರ/ಪತ್ತಾರ	:	ಅಕ್ಕಸಾಲಿ
ರಜ್ಜುಕಾರ	:	ಹಗ್ಗತಯಾರಕ
ಧೀವರ	:	ಬೆಸ್ತ
ಡೋಹರ	:	ತಳವರ್ಗದ ಜಾತಿ
ಮೇದಾರ/ ವಿದಲಕಾರ	:	ಬುಟ್ಟಿಹೆಣೆಯುವ
ಪುಳಿಂದ/ಶಬರ/ ದಂಗಟು/ಬೇಡ	:	ಬೇಟೆಯಾಡುವವರು/ ಬೇಡರು
ಬಾರಿಕಾರ	:	ಕೋಲಕಾರ–ಅಂಬಿಗ
ನಿವಿ	:	ಮೇಲುಡುಪು ಅಧಿವಾಸ ಎನ್ನುವರು
ಹಮ್ಮುಗೆ	:	ಹಗ್ಗ/ದಾರ
ಹಲ	:	ನೇಗಿಲು
ಹೊಂಜಿಳೆ	:	ಬಂಗಾರದ ಆಭರಣ
ಹೊಂದೂಂಬ	:	ಬಂಗಾರದ ಜೀಕಳಿ
ಹೂಗಾರ	:	ಮಾಲೆಗಾರ
ಹಜಾಮ/ಹಡಪಿ	:	ಕ್ಷೌರಕ
ಹೆಗ್ಗಾಣಿಗರು	:	ಎರಡು ಎತ್ತುಗಳ ಕಲ್ಲಿನ ಗಾಣಹೊಂದಿದವರು
ಹಲಗೆಯವರು	:	ಡೊಳ್ಳು ಬಾರಿಸುವುದರಲ್ಲಿ ಪ್ರಸಿದ್ಧಿ/ದೊಂಬರು



೧.ವಿರೂಪಾಕ್ಷ ಬಜಾರು
೨.ಅಚ್ಯುತ ಬಜಾರು
೩.ಕೃಷ್ಣ ಬಜಾರು
೪.ವಿಠ್ಠಲ ಬಜಾರು
೫.ಪಾನ್ ಸುಪಾರಿ ಬಜಾರು
೬.ಮಾಲ್ಯವಂತ ಬಜಾರು
೭.ವರದರಾಜಮ್ಮನ ಬಜಾರು

ಛಾಯಚಿತ್ರಗಳು



ಹರಿಗೋಲು ವೀರಗಲ್ಲು, ಆನೆಗೊಂದಿ



ಹರಿಗೋಲು ವೀರಗಲ್ಲು, ಆನೆಗೊಂದಿ



ಮಿನುಗಾರ ಬಳಸುವ ತೆಪ್ಪ, ಕಮಲಾಪುರ




ಕಲ್ಲು ಬಾಗಿಲು, ಮಹಾನವಮಿ ದಿಬ್ಬದ ಬಳಿ



ಏಕಶಿಲಾ ನೀರಿನ ತೊಟ್ಟಿ, ಅರಮನೆ ಪ್ರಾಂಗಣ, ಹಂಪಿ



ಹಂಪಿಯ ಬಜಾರಿನ ಚಿತ್ರಣ, ಕೃಪೆ: ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ



ಬಯಲು ಕಮ್ಮಾರ, ಚಿತ್ರದುರ್ಗ



ಕುಂಬಾರ ತಯಾರಿಸಿದ ಮಡಕೆಗಳು, ಕಮಲಾಪುರ





ವಿಜಯನಗರ ಕಾಲದ ಕುಂಬಾರರ ಮಡಿಕೆಗಳು, ವಸ್ತುಸಂಗ್ರಹಾಲಯ, ಕಮಲಾಪುರ



ಚಾಪೆ ನೇಯುತ್ತಿರುವ ಮೇದಾರರು, ಗಂಗಾವತಿ



ಕಂಚುಗಾರರು ತಯಾರಿಸಿದ ಕಂಚಿನ
ಉಪಕರಣಗಳು ಕಮಲಾಪುರ ವಸ್ತುಸಂಗ್ರಹಾಲಯ



ಕಮ್ಮಾರರು ತಯಾರಿಸಿದ ಕತ್ತಿ, ಗುರಾಣಿಗಳು
ಕಮಲಾಪುರ ವಸ್ತುಸಂಗ್ರಹಾಲಯ



ಕಂಚುಗಾರರು ತಯಾರಿಸಿದ ಹರಿವಾಣಗಳು,
ಕಮಲಾಪುರ ವಸ್ತುಸಂಗ್ರಹಾಲಯ



ಬೋವಿ ಸಮುದಾಯದವರು ತಯಾರಿಸಿದ
ಕಸರತ್ತು ಕಲ್ಲುಗಳು ಕಮಲಾಪುರ
ವಸ್ತುಸಂಗ್ರಹಾಲಯ



ಕಮ್ಮಾರರು ತಯಾರಿಸಿದ
ಕಬ್ಬಿಣ ಉಪಕರಣಗಳು,
ಕಮಲಾಪುರ ವಸ್ತುಸಂಗ್ರಹಾಲಯ





ಮೇದಾರರು ಬಿದಿರಿನಿಂದ ಉಪಕರಣಗಳನ್ನು ತಯಾರಿಸುತ್ತಿರುವುದು, ಹೊಸಪೇಟೆ.



ಬೆಸ್ತರು ಮೀನಿನ ಬಲೆ ಸರಿಪಡಿಸುತ್ತಿರುವುದು
ಡ್ಯಾಂ ಹತ್ತಿರ, ಹೊಸಪೇಟೆ.



ಗಾಣಿಗರು ಎಣ್ಣೆ ತೆಗೆಯುತ್ತಿರುವ
ಕಾಲ್ಪನಿಕ ಚಿತ್ರ.




ನೇಕಾರರು ಸೀರೆ ನೇಯುತ್ತಿರುವುದು, ಕೊಪ್ಪಳ.




ನೇಕಾರರ ಮಗ್ಗದ ಉಪಕರಣಗಳು, ಮತ್ತು ನೂಲಿಗೆ ಬಣ್ಣ ಹಾಕುತ್ತಿರುವುದು, ಕೊಪ್ಪಳ



ಕುರುಬರು ಕಂಬಳಿ ನೇಯುತ್ತಿರುವುದು,

ಕಾನಾಮಡುಗು



ಬಡಗಿ ಉಪಕರಣ ತಯಾರಿಸುತ್ತಿರುವುದು

ಜಗಲೂರು





ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ

ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ